ಮೇಲ್ಪಾಕ ಮುರಳಿ

# ಶೃಂಗಾರಪುರ...

...ಒಂದು
ಕಿಯೊ
ಮೀಟರ್




894.814 3
KAT N94
ಗ್ರಂಥ ಸ್ವಾಮ್ಯ ವಿಭಾಗ

ಸ್ನೇಹಸುಮ: ೧

ಮೋರ್ಲಪಾಕ ಮುರಳಿ

# ಶೃಂಗಾರಪುರ ಒಂದು ಕಿಲೋಮೀಟರ

ಅನುವಾದ.
ಆರ್. ವಿ. ಕಟ್ಟೀಮನಿ

ಸ್ನೇಹಸುಮ ಪ್ರಕಾಶನ
ಕವಿತಾಳ: ೫೮೪೧೨೦
ಜಿಲ್ಲೆ. ರಾಯಚೂರು

META ENTERED

**ಸ್ನೇಹಸುಮ ಪ್ರಕಾಶನ**
ಕವಿತಾಳ-೫೮೪೧೨೦
ಜಿಲ್ಲ. ರಾಯಚೂರು

645520R

ಸ್ನೇಹ ಬಳಗ

ಶ್ರೀ ಮರಿಯಣ್ಣ ಕಾಮರೆಡ್ಡಿ
ಎಂ ಎಸ್ ಸಿ (ಅಗ್ರಿ)
” ಚಂದ್ರಶೇಖರರೆಡ್ಡಿ ಭಾವಿಕಟ್ಟಿ
ಎಂ ಎ.
” ಸೂಗರೆಡ್ಡಿ ತೋರಣದಿನ್ನಿ
ಎಂ.ಇ
” ಪ್ರಕಾಶ ಇಲ್ಲೂರು
ಬಿ.ಎಸ್‌ಸಿ.
” ಬಸಪ್ಪ ಕಂದಗಲ್
” ಮೌನೇಶ ಕಂದಗಲ್
ಮತ್ತು
ಶ್ರೀ ಆರ್. ವಿ. ಕಟ್ಟೀಮನಿ

SRINGARAPURA ONDU KILO METERE
Telugu Novel Sri Merlapaka Murali translated by Sri R V. Kattimani Published by SnehaSuma Prakashana Kowthal 5841 20

ಮೊದಲ ಮುದ್ರಣ 1994 ಪುಟಗಳು iv+224 ಬೆಲೆ 40-00

ಮುದ್ರಣ ಶ್ರೀ ವಿರುಪಾಕ್ಷಪ್ಪ ಪರಗಿ, ಸುಭಾಷ ಪ್ರೆಸ್ಸ್ ಬೆಟಗೇರಿ-ಗದಗ

[illegible]

# ಮುನ್ನುಡಿ

ಶೃಂಗಾರಪುರಕ್ಕೆ ಪ್ರವೇಶಿಸುವ ಮುನ್ನ . .

ನಮ್ಮ ದೇಶದಲ್ಲಿನ ರಾಜ್ಯವೊಂದರಲ್ಲಿಯ ಹಳ್ಳಿಯಲ್ಲಿ ವಿಚಿತ್ರ ಆಚಾರವೊಂದು ಇಂದಿಗೂ ಜಾರಿಯಲ್ಲಿದೆಯಂತೆ. ಅದೇನೆಂದರೆ, ಪ್ರತಿ ವರ್ಷ ಒಂದು ನಿರ್ಧಿಷ್ಟ ಸ್ಥಳದಲ್ಲಿ ಸಮಾವೇಶಗೊಳ್ಳುತ್ತಾರೆ. ಅದರಲ್ಲಿ ಕೆಲವು ಜನ ಅನುಭವಸ್ಥರು, ಗ್ರಾಮದ ಹಿರಿಯರು ಸೇರಿ ನ್ಯಾಯನಿರ್ಣಯಕರಾಗಿ, ಆ ಗ್ರಾಮದಲ್ಲಿರುವ ಯುವಕರನ್ನೆಲ್ಲ ಬೇರ್ಪಡಿಸಿ, ಅವರಿಗೆ ಕೆಲವು ರೀತಿಯ ಪರೀಕ್ಷೆಗಳನ್ನು ಒಡ್ಡುತ್ತಾರೆ. ಆ ಪರೀಕ್ಷೆಯಲ್ಲಿ ಗೆದ್ದ ಯುವಕರನ್ನೆಲ್ಲ ಮತ್ತೆ ಆರೋಗ್ಯ ಸೂತ್ರಗಳ ಮೂಲಕ ಪರೀಕ್ಷಿಸಿ, ಅವರಲ್ಲಿ ಬಲ, ತೇಜಸ್ಸು, ವಯಸ್ಸು ಶರೀರ ಸೌಷ್ಟವ ಮುಂತಾದ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಂಡು ಎಲ್ಲ ರೀತಿಯಲ್ಲೂ ಸೂಕ್ತರಾದ ಐವರು ಯುವಕರನ್ನು ಕೊನೆಯದಾಗಿ ಆಯ್ಕೆ ಮಾಡುತ್ತಾರೆ. ಆ ಐದು ಜನ ಯುವಕರು ಆ ಇಡೀ ವರ್ಷ ಆ ಗ್ರಾಮದಲ್ಲಿ ಎದುರೇ ಇಲ್ಲದ ಯುವಕರು ಎನ್ನಬಹುದು.

ಆ ವರ್ಷವೆಲ್ಲ ಯುವಕರು ತಾವು ಬಯಸಿದ ವಿವಾಹಿತ ಸ್ತ್ರೀಯೊಂದಿಗೆ ಕಾಮಕೇಳಿ ನಡೆಸಬಹುದು ಅವರಿಗೆ ಪ್ರತ್ಯೇಕವಾಗಿ ತಯಾರಿಸಲಾದ ಪಾದರಕ್ಷೆಗಳನ್ನು ಕೊಡುತ್ತಾರೆ. ಆ ಯುವಕರು ಆ ಕಾರ್ಯಕ್ರಮಕ್ಕೆ ಹೋದಾಗ ಆ ಪಾದರಕ್ಷೆಗಳನ್ನು ಹಾಕಿಕೊಂಡು ಹೋಗುತ್ತಾರೆ. ಒಳಗೆ ಹೋದಾಗ ಬೀದಿ ಬಾಗಿಲಿನ ಮುಂದೆ ಅವುಗಳನ್ನು ಬಿಡುತ್ತಾರೆ.

ಆ ಸಮಯದಲ್ಲಿ ಆ ಸ್ತ್ರೀಯ ಗಂಡ ಬಂದರೂ ಆ ಪಾದರಕ್ಷೆಗಳನ್ನು ನೋಡಿ, ಆ ಯುವಕ ಹೊರಗೆ ಬರುವವರೆಗೂ ಹೊರಗೇ ಕಾದು ನಿಲ್ಲುತ್ತಾನೆ. ಆರೋಗ್ಯಕರ ಜನನಗಳ ದೃಷ್ಟಿ ಹಿಂದೆಂದೋ ಜಾರಿಗೆ ಬಂದ ಆಚಾರ ಇಂದಿಗೂ ಜಾರಿಯಲ್ಲಿದೆಯಂತೆ . !

ವಿಚಿತ್ರವಲ್ಲವೆ!? ಹೀಗೆ ನಮಗೆ ಗೊತ್ತಿರದ ಆಚಾರ-ವ್ಯವಹಾರಗಳು ವಿಶಾಲ ಭಾರತದ ದೂರದ ಮೂಲೆಗಳಲ್ಲಿ ಎಲ್ಲಲ್ಲಿ, ಎಷ್ಟೆಷ್ಟಿವೆಯೋ ಏನೋ?!

ಈ ಕಾದಂಬರಿಯಲ್ಲೂ ಅಂತಹ ವಿಚಿತ್ರ ಆಚಾರವೊಂದಿದೆ. ಇಂತಹ ಆಚಾರ ಇರಬಹುದು, ಇಲ್ಲದಿರಬಹುದು ಇಲ್ಲಿ ಅದು ಮುಖ್ಯವಲ್ಲ. ಸ್ತ್ರೀ—ಪುರುಷರ ನಡುವೆ ಇರುವ ಮಹಾದ್ಭುತ ಭಾವನೆ ಸೆಕ್ಸ್. ಆಚಾರದ ನೆಪದಲ್ಲಿ ಸ್ತ್ರೀ-ಪುರುಷರ ನಡುವೆ ಇರಬಹುದಾದ ಸಂಬಂಧದ ಸೂಕ್ಷ್ಮಗಳನ್ನು ವಿಶ್ಲೇಷಿಸುವ ಪ್ರಯತ್ನ ಈ ಕಾದಂಬರಿಯಲ್ಲಿದೆ.

ಮಾಮೂಲಿಯಾದ ಕ್ರೈಮ್, ವಯೊಲೆನ್ಸ್ ಕಾದಂಬರಿಗಳಿಗೆ ಭಿನ್ನವಾಗಿ ಲೈಂಗಿಕ ಇತಿವೃತ್ತವನ್ನು ಆಯ್ದುಕೊಂಡು ನವೀರಾದ ಶೈಲಿಯಲ್ಲಿ ಬರೆದ ಶ್ರೀ ಮೇರ್ಲಪಾಕ ಮುರಳಿಯವರಿಗೆ ಅಭಿನಂದನೆಗಳು.

ಈ ಕಾದಂಬರಿಯ ಅನುವಾದಕ್ಕೆ ಒಪ್ಪಿಗೆ ನೀಡಿದ ಶ್ರೀ ಮೇರ್ಲಪಾಕ ಮುರಳಿಯವರಿಗೆ, ಈ ಪುಸ್ತಕ ಪ್ರಕಟಿಸಲು ಮುಂದೆ ಬಂದಿರುವ ಸ್ನೇಹ ಸುಮ ಪ್ರಕಾಶನ ಸಂಸ್ಥೆಗೆ ನನ್ನ ಕೃತಜ್ಞತೆಗಳು.

ಕೊನೆಯದಾಗಿ ಓದುಗರಲ್ಲೊಂದು ವಿನಂತಿ.ಈ ಕಾದಂಬರಿಯನ್ನು ಓದಿ ಅದರ ಕಥಾವಸ್ತುವಿನ ಬಗ್ಗೆ, ಅನುವಾದದ ಬಗ್ಗೆ ಒಂದೆರಡು ಸಾಲುಗಳನ್ನು ಕಾರ್ಡಿನಲ್ಲಿ ಗೀಚಿ ಕಳುಹಿದರೆ, ಅದು ನನ್ನನ್ನು ನಾನು ತಿದ್ದಿಕೊಳ್ಳುವಲ್ಲಿ, ಉತ್ತಮಪಡಿಸಿಕೊಳ್ಳುವಲ್ಲಿ ಸಹಾಯಮಾಡಬಲ್ಲದು, ಬರೆಯುವಿರಿ ತಾನೆ?

ವಂದನೆಗಳೊಂದಿಗೆ,

ಅಂಚೆ ಕವಿತಾಳ-೫೮೪೧೨೦
ಜಿಲ್ಲ ರಾಯಚೂರು

—ಆರ್ .ವಿ. ಕಟ್ಟೀಮನಿ

# ಶೃಂಗಾರಪುರ ಒಂದು ಕಿಲೋಮೀಟರ

ವರ್ಷಾಳಿಗೆ ಎಚ್ಚರವಾಯ್ತು.

ಹಾಸಿಗೆಯ ಮೇಲೆ ಎದ್ದು ಕುಳಿತು ಸುತ್ತಲೂ ನೋಡಿದಳು. ಕೆಂಪನೆಯ ಬೆಡ್‌ಲೈಟ್ ಮಸುಕು ಮಸುಕಾದ ಕೆಂಪು ಬೆಳಕನ್ನು ಬೀರುತ್ತಿತ್ತು.

ವರ್ಷ ಎರಡು ಕೈಗಳನ್ನು ಗಸಗಸನೆ ತಿಕ್ಕಿಕೊಂಡು ಕಣ್ಣೊರೆಸಿಕೊಂಡಳು. ಆ ಸ್ವಲ್ಪ ಬಿಸಿಗೇ ನಿದ್ದೆ ಕರಗಿ ಹೋದಂತಾಯ್ತು. ಪಕ್ಕಕ್ಕೆ ತಿರುಗಿ ಅಲಾರ್ಮ್ ಟೈಂಪೀಸ್ ನೋಡಿದಳು. ಐದು ಗಂಟೆಯ ಸಮಯವನ್ನು ತೋರಿಸುತ್ತಿತ್ತದು. ಕಿಟಕಿಯೊಳಗಿನ ಕಂಡು ಬರುತ್ತಿದ್ದ ಬೋಗನ್‌ವಿಲ್ಲಾ, ಪಚ್ಚೆ ಕಲ್ಲಿಗೆ ಹವಳವನ್ನು ಕೂಡಿಸಿರುವಂತಿತ್ತು. ದೂರದಲ್ಲಿರುವ ತುರಾಯಿ ಗಿಡ ಎಲೆಗಳೆಲ್ಲವನ್ನೂ ಉದುರಿಸಿಕೊಂಡು ಹೂಗಳನ್ನಷ್ಟೇ ಉಳಿಸಿಕೊಂಡಿತ್ತು. ಗಾಳಿ ಆಗತಾನೇ ನದಿಯಲ್ಲಿ ಸ್ನಾನಮಾಡಿ ಬಂದಿದೆಯೇನೋ ಎನ್ನುವಂತೆ ಮೈಯನ್ನು ತಣ್ಣಗೆ ಸವರಿಸುತ್ತಿತ್ತು.

"ಆಹಾ! ವಾತಾವರಣ ಎಷ್ಟು ಚೆನ್ನಾಗಿದೆ!" ಎಂದು ತನ್ನಲ್ಲೇ ಅಂದುಕೊಳ್ಳುತ್ತ ಹಾಸಿಗೆ ಬಿಟ್ಟಿಳಿದಳು ವರ್ಷಾ. ಬಾತ್‌ರೂಮಿನಲ್ಲಿ ಮುಖ ತೊಳೆದುಕೊಂಡು ಕನ್ನಡಿಯಲ್ಲಿ ನೋಡಿಕೊಂಡಳು. ಇಪ್ಪತ್ತೈದು ವರ್ಷಗಳ ಯೌವನ, ಆರೋಗ್ಯ ಎರಡೂ ಮೇಳೈಸಿರುವಂತೆ ಶರೀರ ಕಂಗೊಳಿಸುತ್ತಿತ್ತು.

ಅವಳು ಅಂತಹ ಸುಂದರಿಯೇನೂ ಆಗಿರಲಿಲ್ಲ. ಆದರೆ ಇಂತಹುದೆಂದು ವ್ಯಾಖ್ಯಾನಿಸಲಾಗದ ಆಕರ್ಷಣೆ ಅವಳಲ್ಲಿದ್ದು. ನೋಡುಗರನ್ನು ತನ್ನತ್ತ ಸೆಳೆಯುತ್ತಿತ್ತು. ಅದು ವ್ಯಕ್ತಿತ್ವ ವಿಕಾಸದಿಂದುಂಟಾದ ವಿಶೇಷ ಆಕರ್ಷಣೆಯಾಗಿತ್ತು.

ಸಾಮಾನ್ಯವಾಗಿ ಬಹಳಷ್ಟು ಜನ ಯುವತಿಯರಿಗೆ ತಮ್ಮದೇ ಆದ ಒಂದು ದೃಷ್ಟಿಕೋನವಿರುವುದಿಲ್ಲ. ತಮ್ಮದೇ ಆದ ಪ್ರತ್ಯೇಕ ವ್ಯಕ್ತಿತ್ವವಿರುವುದಿಲ್ಲ. ಅವರು ತಮ್ಮ ತಂದೆ-ತಾಯಂದಿರ ಪಡಿಯಚ್ಚಿನಂತಿರುತ್ತಾರೆ.

ಅವಕ್ಕೇ ಅಚ್ಚು ಹಾಕಿದ ಪ್ರತಿಮೆಗಳಂತೆ ಕಂಡು ಬರುತ್ತಾರೆಯೇ ಹೊರತು ಜೀವವಿರುವ ಮನುಷ್ಯರಂತೆ ಕಂಡುಬರುವದಿಲ್ಲ. ಚಿಕ್ಕ ಸಮಸ್ಯೆಗೂ ತಾಯಿ ಯತ್ತಲೋ, ತಂದೆಯತ್ತಲೋ ನೋಡುತ್ತಾರೆ. ಮದುವೆಯಾದ ಮೇಲೂ ಅಷ್ಟೇ. ಗಂಡನಾದವನು ಪ್ರತಿ ರಾತ್ರಿ ಮಲಗುವ ಕೋಣೆಯಲ್ಲಿ ತನ್ನನ್ನು ಬಿಡದಿದ್ದರೆ, ತವರು ಮನೆಗೋಡಿ ಬಂದು ತನಗ್ಯಾವುದೋ ಮಹತ್ತರ ಕಷ್ಟ ಒದಗಿ ಬಂದಿತೆನ್ನುವಂತೆ ಅಲವತ್ತುಕೊಳ್ಳುತ್ತಾರೆ. 'ಹೊಸದರಲ್ಲಿ ಅಷ್ಟೇ ಎಂದೂ, ಆ ಬಿಸಿ ತಣ್ಣಗಾದ ನಂತರ ನೀನು ಬಾ ಎಂದರೂ ಅವನು ಬರುವು ದಿಲ್ಲ'ವೆನ್ನುವ ಸತ್ಯವನ್ನು ತಾಯಿಯಾದವಳೋ, ಇನ್ನೊಬ್ಬ ಮುದುಕ ನ್ಯಾರೋ ಹೇಳಬೇಕಾಗುತ್ತದೆ

ಆದರೆ ವರ್ಷಾ ಹಾಗಿರಲಿಲ್ಲ, ಅವಳಿಗೆ ಪ್ರತಿಯೊಂದು ಚಿಕ್ಕ ವಿಷಯದ ಬಗ್ಗೆಯೂ ಒಂದಿಷ್ಟು ತಿಳುವಳಿಕೆ ಒಂದು ಅವಗಾಹನೆ ಇತ್ತು. ಪ್ರಪಂಚ ವನ್ನು ಪರಿಶೀಲಿಸುವುದರ ಮೂಲಕ ಅಧ್ಯಯನ ಮಾಡುವ ಮೂಲಕ ವರ್ಷಾ ಭಿನ್ನ ವ್ಯಕ್ತಿತ್ವವನ್ನು ರೂಪುಗೊಳಿಸಿಕೊಂಡಿದ್ದಳು. ಯಾವುದರ ಬಗ್ಗೆಯಾದರೂ ತನಗೇನಾದರೂ ಸಂದೇಹ ಬಂದಿತೆಂದರೆ ಕಷ್ಟಪಟ್ಟಾದರೂ ಅದಕ್ಕೆ ಉತ್ತರ ಪಡೆಯಲು ಪ್ರಯತ್ನಿಸುತ್ತಿದ್ದಳು. ಸಂಕೋಚದಿಂದ ಹಿಂಜರಿಯುವ ಪ್ರವೃತ್ತಿ ಅವಳದಾಗಿರಲಿಲ್ಲ.

ಇಂಟರ್ ಮೊದಲನೆ ವರ್ಷದಲ್ಲಿ ಓದುತ್ತಿರುವಾಗ ಒಂದು ದಿನ ಸಾಯಂಕಾಲ ಬೇಗನೆ ಮನೆಗೆ ಬಂದಿದ್ದಳು. ಅಡಿಗೆ ಮನೆಯಲ್ಲಿ ಅವಳ ತಂದೆ ತಾಯಿಯೊಂದಿಗೆ ಸರಸವಾಡುತ್ತಿದ್ದ. ಈ ವಿಷಯ ಗೊತ್ತಿರದೆ ಅಡಿಗೆ ಮನೆ ಯಲ್ಲಿ ಕಾಲಿಟ್ಟ ಅವಳ ಕಣ್ಣಿಗೆ ಅವರ ರೋಮ್ಯಾನ್ಸ್ ಕಂಡು ಬಂತು. ತಂದೆ ತಪ್ಪು ಮಾಡಿದವನಂತೆ ಗಾಬರಿಗೊಂಡ ತಾಯಿ ದೋಷಿಯಂತೆ ತಲೆತಗ್ಗಿಸಿದಳು. ಆಕೆಗೆ ಅಳು ಬರುವುದೊಂದೇ ಬಾಕಿಯಿತ್ತು.

ಆಗ ವರ್ಷಾ ಏನೂ ಆಗದಿರುವವಳಂತೆ ಸಹಜವಾಗಿ ತಂದೆಯ ಬಳಿಗೆ ಹೋಗಿ "ಯಾಕಪ್ಪಾ, ಆ ರೀತಿ ತಪ್ಪು ಮಾಡಿದವನಂತೆ ನಿಂತ್ಕೊಂಡಿದೀಯ ? ಇದೆಲ್ಲ ತುಂಬಾ ಸಹಜ. ನಿಮ್ಮ ಪ್ರಣಯ ನೋಡಿ ನಾನೇನಾದ್ರೂ ಅಂದ್ಕೊಳ ತೀನೀಂತ ಭಾವನೆ ಮಾಡ್ಕೋಬೇಡ.. ಅಮ್ಮಾ ಯಾಕೆ ಅಳ್ತಿರೋದು? ಈಗೇ ನಾಯ್ತೂಂತ ? ಇಂತಹದನ್ನೆಲ್ಲ ನೋಡಿ ನನ್ನ ಮನಸ್ಸಿನಲ್ಲೇನಾದ್ರೂ ಆಗುತ್ತೇನೋಂತ ನಿನ್ನ ಭಾವನೆ ಇದ್ಯೇನೋ-"ನಾನೇನೂ ಅಷ್ಟು ದುರ್ಬಳಲ್ಲ ಬಿಡು" ಎಂದು ಅಲ್ಲಿಂದ ಬಂದುಬಿಟ್ಟಿದ್ದಳು.

ಅವರಿಬ್ಬರೂ ಮಗಳನ್ನು ಕಣ್ಣರಳಿಸಿ ನೋಡುತ್ತ ನಿಂತುಬಿಟ್ಟಿದ್ದರು. ನಿರ್ದಾಕ್ಷಿಣ್ಯವಾಗಿ ಇದ್ದುದನ್ನು ಇದ್ದಂತೆ ನಿರ್ಭಯವಾಗಿ ಹೇಳಿದ ಅವಳು ತನ್ನ ಮಗಳೇನಾ ಎನ್ನುವ ಸಂದೇಹ ಅವರನ್ನು ಸ್ವಲ್ಪ ಹೊತ್ತಿನವರೆಗೆ ಬೊಂಬೆಗಳಂತೆ ನಿಲ್ಲಿಸಿಬಿಟ್ಟಿತ್ತು. ತಮ್ಮ ಕಣ್ಣೆದುರಿಗೇ ಬೆಳೆದ ಹುಡುಗಿ ನಿಸ್ಸಂಕೋಚವಾಗಿ ಎಂತಹುದೇ ಹಿಂಜರಿಕೆ ಇಲ್ಲದಂತೆ ಮಾತಾಡಿದ್ದು ಆಶ್ಚರ್ಯವನ್ನುಂಟು ಮಾಡಿತ್ತು.

ತನ್ನ ಮಗಳು ವಯಸ್ಸಿನೊಂದಿಗೆ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುತ್ತ ತನಗಿಂತಲೂ ಎತ್ತರಕ್ಕೆ ಬೆಳೆದದ್ದು ಅವಳ ತಂದೆಗೆ ಆಶ್ಚರ್ಯವನ್ನುಂಟುಮಾಡಿತ್ತು. ಎಂದೋ ತನಗೆ ಬುದ್ಧಿ ಬಂದಾಗ ಏರ್ಪಡಿಸಿಕೊಂಡಿದ್ದ ಅಭಿಪ್ರಾಯಗಳನ್ನು ಆತ ಎಂದೂ ಬದಲಾಯಿಸಿಕೊಂಡಿರಲಿಲ್ಲ. ಆದರೆ ತನ್ನ ಮಗಳು ಯಾವಾಗ ಹೊಸ ಹೊಸ ಅಭಿಪ್ರಾಯ, ಹೊಸ ಹೊಸ ದೃಷ್ಟಿಕೋನವನ್ನೇರ್ಪಡಿಸಿಕೊಳ್ಳುವುದು ಆತನಿಗೆ ಪಥ್ಯವಾಗಿರಲಿಲ್ಲ.

ವಯಸ್ಸಾದಂತೆಲ್ಲ ಅವಳ ವ್ಯಕ್ತಿತ್ವಕೂಡ ಪರಿಪೂರ್ಣತೆಯನ್ನು ಪಡೆದುಕೊಂಡಿತ್ತು ಎಂ ಎ ಮುಗಿದ ನಂತರ ಬಿ.ಇಡಿ ಓದಬೇಕೆನ್ನುವ ಕೋರಿಕೆಯನ್ನು ತಂದೆಯೊಂದಿಗೆ ಹೇಳಿದ್ದಳು." ನನಗೋಸ್ಕರ ಫಿಲಾಸಫಿ ಓದಿದ್ದಾಯ್ತು ಅಪ್ಪಾ! ಆ ವಿಷಯದಲ್ಲಿ ಮಾಸ್ಟರ್ ಡಿಗ್ರಿ ಇದ್ದರೂ ನನಗೆ ನೌಕರಿ ಸಿಗೋಲ್ಲ ಈ ದೇಶದಲ್ಲಿ ಓದು, ವಿದ್ಯೆ ಎನ್ನುವುದರ ಪರಮಾರ್ಥ ರಾಜಕಾರಣಿಗಳಿಗೆ ಗೊತ್ತಿಲ್ಲದಿರುವುದರಿಂದ ಆ ವಿಷಯಕ್ಕೆ ಎಂತಹುದೇ ಬೆಲೆ ಇಲ್ಲ, ಇಲ್ಲಾಂದ್ರೆ ಪ್ರತಿಯೊಬ್ಬರೂ ಕಡ್ಡಾಯವಾಗಿ ಓದಬೇಕಾದ ವಿಷಯ ಅದು. ಆದರೆ ಸಧ್ಯಕ್ಕೆ ಯಾವ ವಿಷಯಕ್ಕೂ ಸೀಟು ಸಿಗದವರು ಅದರಲ್ಲಿ ಸೇರುತ್ತಿದ್ದಾರೆ. ಈ ಸಬ್‌ಜೆಕ್ಟ್ ಓದೋದ್ರಿಂದ ಲೆಕ್ಚರರ್ ಪೋಸ್ಟ್ ಒತ್ತಟ್ಟಿಗಿರಲಿ, ಅಟೆಂಡರ್ ನೌಕರಿ ಕೂಡ ಸಿಗೋದಿಲ್ಲ. ಅದಕ್ಕೋಸ್ಕರ ಬಿ.ಇಡಿ. ಓದ್ಬೇಕೊಂತಂದ್ಕೋತಿದೀನಿ."

ಇದನ್ನೆಲ್ಲ ಅಡಿಗೆ ಮನೇಲಿದ್ದು ಕೇಳಿಸಿಕೊಂಡ ತಾಯಿ ಓಡು ನಡಿಗೆಯಲ್ಲಿ ಅಲ್ಲಿಗೆ ಬಂದು, "ನಾವು ಹೇಳಿದರೂ ಕೇಳದೆ ಇಲ್ಲೀತನಕ ಓದಿದ್ದಾಯ್ತು. ಇನ್ನು ಓದಿದ್ದು ಸಾಕು ಮದುವೆ ಮಾಡ್ಕೊಂಡು ಗಂಡನ್ಜೊತೆ ಸಂಸಾರ ಮಾಡು. ಅದು ನಿನಗೂ ಒಳ್ಳೇದು, ನಿನಗೂ ಒಳ್ಳೇದು" ಎಂದಿದ್ದಳು.

"ಇಲ್ನೋಡಮ್ಮ, ನಾನು ನಿಮ್ಮ ಮಾತು ಕೇಳೋದಿಲ್ಲಾಂತ ಗೊತ್ತಿದ್ದೂ ಯಾಕೆ ಪ್ರಯಾಸಪಡ್ತೀಯ? 'ಈ ಲೋಕದಲ್ಲಿ ಪಶುಪಕ್ಷಿಗಳು ಕೂಡ ತಮ್ಮ ಆಹಾರವನ್ನು ತಾವೇ ಸಂಪಾದಿಸಿಕೊಳ್ಳುತ್ತಿವೆ. ಸ್ತ್ರೀಯೊಬ್ಬಳನ್ನು ಬಿಟ್ಟು'

ಅಂತ ಎಲ್ಲೋ ಓದಿದೀನಿ. ಆ ಕ್ಷಣದಲ್ಲೇ ನೌಕರಿ ಮಾಡಬೇಕೂಂತ ನಿರ್ಧರಿಸಿ ಕೊಂಡಿದೀನಿ."

"ಮತ್ತೆ ಮದುವೆ?"

"ಮದುವೆ ಮಾಡ್ಕೊಳ್ಳೋದಿಲ್ಲಾಂತ ಹೇಳ್ತಿಲ್ಲ. ಮಾಡ್ಕೋತೀನಿ, ಆದ್ರೆ ಸಂಪ್ರದಾಯಕ್ಕೋಸ್ಕರ ಮಾಡ್ಕೋಬೇಕಲ್ಲ ಅಂತ, ಕುರಿ ಥರಾ ತಲೆ ತಗ್ಗಿಸಿ ತಾಳಿಕಟ್ಟಿಸಿಕೊಂಡು, ಮೊದಲ ರಾತ್ರಿಗೋಸ್ಕರ ಹಾತೊರೆಯೋದು ನಂಗಿಷ್ಟವಿಲ್ಲ ನನಗೆ ತಕ್ಕ ವ್ಯಕ್ತಿ ಸಿಕ್ಕಿದಾಗ ಮದುವೆಯಾಗ್ತೀನಿ."

"ಇದೆಲ್ಲಿ ಚೋದ್ಯ ಕಣೇ....ನಮ್ಮ ಕಾಲದಲ್ಲಿ ಯಾವ ಹೆಣ್ಣೂ ಈ ರೀತಿ ಮಾನ ಬಿಟ್ಟು ಮದುವೆಯಾಗೋದಿಲ್ಲಾಂತ ಹೇಳ್ತಿರ್ಲಿಲ್ಲ" ಎಂದು ವರ್ಷಾಳ ತಾಯಿ ಗೊಣಗಿದ್ದಳು.

"ನಿಮ್ಮ ಕಾಲದಲ್ಲಿ ಯಾವ ಹೆಣ್ಣೂ ಈ ರೀತಿ ಮಾತಾಡಿರಲಿಕ್ಕಿಲ್ಲ ನಿಜ ನಿಮ್ಮ ಕಾಲದಲ್ಲಿ ಟಿ. ವಿ. ಇತ್ತಾ? ಇದ್ದಿಲ್ಲ ಮತ್ತೆ ಈಗ ಬಂದಿದೆ. ನಿಮ್ಮ ಕಾಲದಲ್ಲಿದ್ದಿಲ್ಲಾಂತ ನೀನು ಟಿ. ವಿ. ತಗೊಳ್ಳೋದನ್ನ ಬಿಟ್ಯಾ? ಇಲ್ಲ ಕಲರ್ ಟಿ. ವಿ. ನೇ ತಗೊಂಡೆ. ಅದೇ ರೀತಿ ಅಭಿಪ್ರಾಯಗಳಲ್ಲೂ ಮಾರ್ಪಾಡು ಗಳುಂಟಾಗ್ತಿವೆ. ನಿಮ್ಮ ತಾಯಿ ಮದುವೆಯಾದ ಆರು ತಿಂಗಳ ನಂತರ ಭಾರ ವಾಗಿ ಕಣ್ಣುಗಳ ಮೇಲೆ ಒರಗಿದ್ದ ನಾಚಿಕೆಯ ತೆರೆಗಳನ್ನು ಎತ್ತಿ ಗಂಡನನ್ನು ಮೊದಲಬಾರಿ ಮಲಗುವ ಕೋಣೆಯಲ್ಲಿ ನೋಡಿದ್ದಳು. ನೀನೋ ತಿಂಗಳಾಗು ವಷ್ಟರಲ್ಲಿ ಗಂಡನ ರೂಪವನ್ನು ಕಣ್ಣಾರೆ ನೋಡಿದ್ದೆ, ಮತ್ತೆ ಬದಲಾವಣೆ ಬಂದಿಲ್ವಾ ? ನಾನೂ ಹಾಗೇನೂ ಇನ್ನು ಇದರ ಬಗ್ಗೆ ವಾದ ಮಾಡೋದು ಅನಾವಶ್ಯಕ" ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಳು.

"ಹಾಗೆಲ್ಲ ಮಾತಾಡ್ಬಾರ್ದುಕಣೇ.. ತಪ್ಪು" ಎಂದು ಅನುನಯಿಸಲು ಪ್ರಯತ್ನಿಸಿದ್ದಳು ಅವಳ ತಾಯಿ.

"ತಪ್ಪು ಒಪ್ಪುಗಳ ಪಟ್ಟಿ ನನ್ನ ಮುಂದೆ ಓದ್ಬೇಡ. ತಪ್ಪು ಒಪ್ಪು ಇವೆ ರಡೂ ಕಾಲದ ಮೇಲೆ ಆಧಾರಪಟ್ಟಿರುತ್ತವೆ. ಒಂದು ಕಾಲದಲ್ಲಿ ತಪ್ಪು ಎನಿಸಿ ಕೊಂಡದ್ದು ಮತ್ತೊಂದು ಕಾಲದಲ್ಲಿ ಸರಿ ಅಂತ ಅನ್ನಿಸಿಕೊಳ್ಳುತ್ತೆ. ರೂಸೋ ಎನ್ನುವ ತತ್ವಜ್ಞಾನಿ ಮನುಷ್ಯನಿಗೆ ಸುಖ ಕೊಡುವದೆಲ್ಲ ಒಪ್ಪು ಎನ್ನುತ್ತಾನೆ. ಶ್ರೀಕೃಷ್ಣ ಭಗವದ್ಗೀತೆಯಲ್ಲಿ; 'ನಿನ್ನ ಕರ್ತವ್ಯ ನೀನು ಮಾಡು, ಫಲಾಪೇಕ್ಷೆ ಮಾಡದಿರು' ಎಂದು ಬೋಧಿಸುತ್ತಾನೆ. ಆದ್ದರಿಂದ ನೈತಿಕ ಮೌಲ್ಯಗಳಾಗಿರಲಿ ಮತ್ತ್ಯಾವುದೇ ಮೌಲ್ಯಗಳಾಗಿರಲಿ ಕಾಲ ಪರಿಸ್ಥಿತಿಗಳ ಮೇಲೆ ಆಧಾರಪಟ್ಟಿರು ತ್ತವೆ. ನನ್ನ ಮಟ್ಟಿಗೆ ಹೇಳುವುದಾದರೆ, ಸಮಾಜ ವಿಕಾಸಕ್ಕೆ ಸಹಾಯ ವಾಗುವುದೆಲ್ಲ ಒಳ್ಳೆಯದೇ".

ಇನ್ನು ಮಗಳೊಂದಿಗೆ ಹೇಗೆ ವಾದಿಸಬೇಕೆಂದು ಗೊತ್ತಾಗದೆ ಅವಳ ತಾಯಿ ಅಡಿಗೆ ಮನೆಯೊಳಗೆ ಹೊರಟು ಹೋಗಿದ್ದಳು.

ಅಷ್ಟೆಲ್ಲ ಕಿರಿಕಿರಿಯ ನಂತರ, ವರ್ಷಾ ಬಿ.ಇಡಿ ಓದಿ ಇತ್ತೀಚೆಗಷ್ಟೇ ಶಾಲಾ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದ್ದಳು. ಅದೃಷ್ಟವೆನ್ನುವಂತೆ ಇದ್ದ ಊರಿನಲ್ಲಿಯೇ ಹುದ್ದೆ ಲಭಿಸಿತ್ತು.. ...

ಬೇಗನೇ ಶಾಲೆಗೆ ಹೋಗಬೇಕೆನ್ನುವ ಆಲೋಚನೆ ಮೂಡುತ್ತಲೇ ಅವಳು ಮುಖಕ್ಕೆ ಇನ್ನಷ್ಟು ನೀರು ಚಿಮುಕಿಸಿಕೊಂಡು ಹಲ್ಲುಜ್ಜಿಕೊಂಡು ಅಡಿಗೆ ಮನೆಯೊಳಗೆ ಬಂದಳು. ಕಾಫಿ ಕುಡಿದಾದ ನಂತರ ಸ್ನಾನ ಮಾಡಿ ತಯಾರಾಗ ತೊಡಗಿದಳು. 'ಯು' ಆಕಾರದಲ್ಲಿ ಕತ್ತರಿಸಿಕೊಂಡಿದ್ದ ಕೂದಲನ್ನು ಬೆನ್ನಿನ ಮೇಲೆ ಹಾಗೆಯೇ ಇಳಿಬಿಟ್ಟು ತುದಿಯಲ್ಲಿ ಕ್ಲಿಪ್ ಇಟ್ಟುಕೊಂಡಳು. ಮುಖಕ್ಕೆ ಸ್ವಲ್ಪ ಆಯಿಲ್ ಆಫ್ ಓಲೇಯನ್ನು ಹಚ್ಚಿಕೊಂಡು ತೆಳುವಾಗಿ ಪೌಡರ್ ಲೇಪಿಸಿಕೊಂಡಳು ಹಣೆಗೆ ದೊಡ್ಡದಾಗಿ ಕುಂಕುಮದ ಬೊಟ್ಟಿಟ್ಟುಕೊಂಡಳು.

ಸೀರೆ ಉಡುವುದೆಂದರೆ ಅವಳಿಗೆ ಅಷ್ಟು ಇಷ್ಟವಾಗುತ್ತಿರಲಿಲ್ಲ. ತುಂಬಾ ಪ್ರಮುಖವಾದ ಸೊಂಟವನ್ನು ಆ ರೀತಿ ಬಹಿರಂಗಗೊಳಿಸುವ ಸೀರೆಗೆ ಅವಳು ವಿರೋಧಿಯಾಗಿದ್ದಳು. ಅದಕ್ಕಾಗೇ ಅವಳಿಗೆ ಆಧುನಿಕ ಉಡುಪುಗಳೇ ಹೆಚ್ಚು ಇಷ್ಟವಾಗುತ್ತಿದ್ದವು.

ಆ ದಿನ ಅವಳು ಬಿಳಿ ಕಾಟನ್ ಚೂಡಿದಾರ್ ಹಾಕಿಕೊಂಡಳು. ಕೊನೆಯ ಬಾರಿ ಕನ್ನಡಿಯಲ್ಲಿ ನೋಡಿಕೊಂಡು ಮನೆಯಿಂದ ಹೊರಬಿದ್ದಳು.

ಶಾಲೆ ತಲುಪುವಷ್ಟರಲ್ಲಿ ಒಂಭತ್ತೂವರೆ ದಾಟಿತ್ತು. ಕಾರಿಡಾರ್‌ನಲ್ಲಿ ನಡೆಯುತ್ತಿರುವಾಗ ವೆಂಕಟಾಚಲನೆನ್ನುವ ಶಿಕ್ಷಕ ಎದುರಾದ. ಅವನಿಗೆ ಬಾಯಿ ತುರಿಕೆ ಜಾಸ್ತಿ. ಸಹೋದ್ಯೋಗಿ ಶಿಕ್ಷಕರೊಂದಿಗೆ ಅಸಹ್ಯವಾಗಿ ಮಾತಾಡುತ್ತಿದ್ದ. ಆದರೆ ವರ್ಷಾಳ ಬಳಿ ಮಾತ್ರ ಬಾಲ ಮುದುಡಿಕೊಂಡಿರುತ್ತಿದ್ದ. ಅದಕ್ಕೆ ಕಾರಣ ಅವಳ ಬಗ್ಗೆ ಕೇಳಿದ್ದ ಒಂದು ಘಟನೆ .......

ಅವಳು ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗ ಒಂದು ದಿನ ಎಂದಿನಂತೆ ತನ್ನ ತರಗತಿಗೆ ಹೋಗುತ್ತಿದ್ದಳು. ಆರ್ಟ್ಸ್‌ಬ್ಲಾಕ್ ಆಡಿಟೋರಿಯಂನ ಬಳಿ ಗುಂಪುಗೂಡಿದ್ದ ವಿದ್ಯಾರ್ಥಿ ವೃಂದಕ್ಕೆ ಅವಳನ್ನು ನೋಡುತ್ತಲೇ ತಿಕ್ಕಲೆದ್ದಿತ್ತು.

ಒಬ್ಬ ವಿದ್ಯಾರ್ಥಿ ಅವಳಿಗೆ ಕೇಳಿಸುವಂತೆ, "ಸೀರೆಯ ನರಿಗೆಗಳನ್ನು ಮುಟ್ಟುತ್ತ ಕೈ ಸರಿವರೆ ಏನು ತಗುಲುತ್ತೆ" ಎಂದು ಪಕ್ಕದಲ್ಲಿದ್ದ ಸ್ನೇಹಿತರನ್ನು ಕೇಳಿದ.

ಈ ಪ್ರಶ್ನೆ ಅವಳನ್ನುದ್ದೇಶಿಸಿಯೇ ಹಾಕಲಾಗಿದ್ದರಿಂದ ಅವಳೇನು ಉತ್ತರ ಹೇಳುತ್ತಾಳೋ ಎಂದು ಎಲ್ಲರೂ ಅತ್ತಕಡೆಗೇ ನೋಡುತ್ತಿದ್ದರು.

ಸಾಮಾನ್ಯವಾಗಿ ಅಂತಹ ಸಂದರ್ಭದಲ್ಲಿ ಯುವತಿಯರು ಮತ್ತಷ್ಟು ತಲೆ ತಗ್ಗಿಸಿಕೊಂಡು ನಡಿಗೆಯ ವೇಗ ಹೆಚ್ಚಿಸುತ್ತಾರೆ. ಆದರೆ ಅವಳು ತಟಕ್ಕನೆ ನಿಂತುಬಿಟ್ಟಳು. ಮೆಲ್ಲಗೆ ಅವರ ಬಳಿಗೆ ಬಂದು, ಆ ಪ್ರಶ್ನೆ ಹಾಕಿದ ವಿದ್ಯಾರ್ಥಿಯನ್ನುದ್ದೇಶಿಸಿ, "ಮನೆಗೆ ಹೋಗಿ ನಿಮ್ಮ ತಂಗಿ ಸೀರೆಯಲ್ಲೋ, ನಿಮ್ಮಕ್ಕನ ಸೀರೆಯಲ್ಲೋ ಕೈ ಇಟ್ಟು ನೋಡು, ಅಲ್ಲಿಗಾದ್ರು ಒಂವೇ ತಾನೆ" ಎಂದಿದ್ದಳು.

ಪಾಪ ಆ ಯುವಕರು ಪೆಚ್ಚಾಗಿಹೋಗಿದ್ದರು. ತಗ್ಗಿಸಿದ ತಲೆ ಎತ್ತಿರಲಿಲ್ಲ, ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ದಿಕ್ಕಿಗೊಬ್ಬರಂತೆ ಕಾಣೆಯಾಗಿದ್ದರು

ಈ ಘಟನೆಯ ಬಗ್ಗೆ ಕೇಳಿದ್ದರಿಂದ ವೆಂಕಟಾಚಲ ಅವಳ ಮುಂದೆ ತನ್ನ ನಾಲಿಗೆಯನ್ನು ಬಿಗಿ ಹಿಡಿದುಕೊಂಡಿರುತ್ತಿದ್ದ .

ಅಂತಹ ವೆಂಕಟಾಚಲ ತನ್ನನ್ನು ನೋಡಿ ಅದೊಂದು ರೀತಿ ನಕ್ಕಿದ್ದು ಅವಳಿಗೆ ಆಶ್ಚರ್ಯವನ್ನುಂಟು ಮಾಡಿತು. ಅವನು ಹತ್ತಿರ ಬರುತ್ತಲೇ, "ಏನ್ವಿಷಯ" ಎಂದು ಕೇಳಿದಳು.

"ನಿಮ್ಮನ್ನ ಹೆಡ್‌ಮಾಸ್ಟರ್ ಕರೀತಿದಾರೆ" ಎಂದು ಹೇಳಿ ಹೊರಟು ಹೋದ.

ಅವಳು ಬೇರೆ ಯಾವ ಯೋಚನೆಯನ್ನೂ ಮಾಡದೆ ಹೆಡ್‌ಮೇಷ್ಟ್ರು ಕೋಣೆಯೊಳಗೆ ಹೋದಳು. ಗಂಭೀರವಾಗಿ ಏನನ್ನೋ ಬರೆಯುತ್ತಿದ್ದ ಹೆಡ್ ಮಾಸ್ಟರ್ ನಾರಾಯಣರಾವ್ ತಲೆ ಎತ್ತಿ ಅವಳನ್ನು ನೋಡಿ, ಮೆಲುನಗೆ ಬೀರಿದ.

ವರ್ಷಾ ಎದುರಿಗಿದ್ದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ "ಗುಡ್‌ಮಾರ್ನಿಂಗ್ ಸರ್" ಎಂದಳು.

"ನಿನಗೆ ಗುಡ್‌ಮಾರ್ನಿಂಗ್ ಆಗಿದ್ರೂ, ನನಗೆ ಮಾತ್ರ ಬ್ಯಾಡ್ ಮಾರ್ನಿಂಗ್ ಕಣಮ್ಮ" ಎಂದು ಕನ್ನಡಕ ತೆಗೆಯುತ್ತ ಆತ ನುಡಿದ.

"ಅದೇನ್ಸಾರ್! ಏನಾಯ್ತು?"

"ನಿನಗೆ ವರ್ಗ ಆಗಿದೆ ಕಣಮ್ಮ. ನಿನ್ನಂತಹ ಬುದ್ಧಿವಂತೆ, ನಿಯತ್ತಿನ ಟೀಚರ್‌ನ ಕಳ್ಕೊಳ್ತಿರೋದಕ್ಕೆ ತುಂಬಾ ಸಂಕಟವಾಗ್ತಿದೆ."

ಅವಳು ಅದನ್ನು ನಿರೀಕ್ಷಿಸಿರಲಿಲ್ಲವಾದುದರಿಂದ ಸ್ವಲ್ಪ 'ಶಾಕ್' ನಂತಹುದು ಉಂಟಾಯ್ತು. "ವರ್ಗಾನಾ?"

"ಹೌದು ಕಣಮ್ಮ"

ಅವಳು ತಕ್ಷಣವೇ ಸುಧಾರಿಸಿಕೊಂಡಳು. 'ನೌಕರಿ ಅಂದ್ಮೇಲೆ ಈ ವರ್ಗ ಅದೂ, ಇದೂ ಅನಿವಾರ್ಯ ನಾನೇ ಸಾರ್! ಯಾವ ಊರಿಗೆ ವರ್ಗ ಮಾಡಿದ್ದಾರೆ?"

"ಶೃಂಗಾರಪುರಕ್ಕೆ ಕಣಮ್ಮ" ಎಂದ ಹೆಡ್‌ಮಾಸ್ಟರ್, ಅಲ್ಲಿಯವರೆಗೂ ನೋವು ತುಂಬಿಕೊಂಡಿದ್ದ ಆತನ ಕಣ್ಣುಗಳಲ್ಲಿ, ಆ ಊರಿನ ಹೆಸರು ಹೇಳುವಾಗ ಅದೊಂದು ರೀತಿಯ ಭಾವನೆ ಸುಳಿದಾಡಿತು.

ಅವಳು ಆಶ್ಚರ್ಯದಿಂದ, "ಅಂತಹ ಹೆಸರಿನ ಊರಿದ್ಯಾ ಸಾರ್" ಎಂದು ಕೇಳಿದಳು

"ಹೌದಮ್ಮ ಇದೆ. ಮಲ್ಲಾಂಗೆ ಹತ್ತಿರಾನೇ, ತುಂಬಾ ಇಂಟೀರಿಯರ್ ನಲ್ಲಿರೋ ಊರು ಆ ಊರಿನ ಬಗ್ಗೆ ಗೊತ್ತಿಲ್ವಾ? ತುಂಬಾ ತಮಾಷೆಯ ಊರು."

"ತಮಾಷೆಯ ಊರೇ?!"

"ಹೌದು, ಸ್ವತಃ ನೀನೇ ಹೋಗ್ತೀಯಾದ್ರಿಂದ ಎಲ್ಲಾ ನಿನಗೇ ಗೊತ್ತಾಗುತ್ತೆ."

ನಂತರ ಅವಳು ಏನೂ ಪ್ರಶ್ನಿಸಲಿಲ್ಲ. ಅನಾವಶ್ಯಕ ವಿಷಯಗಳಲ್ಲಿ ಕುತೂಹಲ ಪ್ರದರ್ಶಿಸದಿರುದು ಅವಳಿಗಿದ್ದ ಒಳ್ಳೆಯ ಲಕ್ಷಣಗಳಲ್ಲೊಂದು

"ಇಷ್ಟಕ್ಕೂ ಆ ಊರಿಗೆ ಹೇಗೆ ಹೋಗ್ಬೇಕು ಸಾರ್?" ಎಂದು ಕೇಳಿದಳು. ಆ ಊರಿಗೆ ಹೋಗಲು ಅವಳು ಮಾನಸಿಕವಾಗಿ ಸಿದ್ಧವಾಗುತ್ತಿದ್ದಳು.

"ಇಲ್ಲಿಗೆ ಅಷ್ಟೇನೂ ದೂರ ಇಲ್ಲ ಕಣಮ್ಮ ನಾಯ್ಡು ಪೇಟೆಗೆ ಹೋಗಿ ಅಲ್ಲಿಂದ ಮಲ್ಲಾಂ ಬಸ್ ಹತ್ತಬೇಕು. ಪಾಟಿಪಿಟ್ಟ ದಾಟಿದ ನಂತರ ಬರೋದೇ ಶೃಂಗಾರಪುರದ ನಿಲ್ದಾಣ ಬಸ್ ಇಳಿಯುತ್ತಲೇ ನಾಮ ಫಲಕ ನೋಡಬಹುದು. ಅದರ ಮೇಲೆ 'ಶೃಂಗಾರಪುರ-ಒಂದು ಕಿಲೋಮೀಟರ್' ಎಂದು ಬರೆದು ಊರಿರೋ ದಿಕ್ಕನ್ನು ತೋರಿಸುತ್ತ, ಬಾಣದ ಗುರುತು ಹಾಕಿರುತ್ತೆ. ಆ ಕಡೆ ನಡೀತಾ ಹೋದ್ರೆ ಊರು ಬರುತ್ತದೆ."

"ಯಾವಾಗ ಡ್ಯೂಟಿಗೆ ಸೇರ್ಕೋಬೇಕು ಸಾರ್?"

"ಒಂದು ವಾರ ಟೈಂ ಕೊಟ್ಟಿದ್ದಾರೆ ಕಣಮ್ಮ"

'ಥ್ಯಾಂಕ್ಯೂ ಸಾರ್" ಎನ್ನುತ್ತ ಅವಳು ಎದ್ದಳು.

"ಬೆಸ್ಟ್ ಆಫ್ ಲಕ್! ಶೃಂಗಾರಪುರ ತುಂಬಾ ಆಸಕ್ತಿಕರಗ್ರಾಮ ಬಸ್ಸಿಲಿದು ನೇರವಾಗಿ ಒಂದು ಕಿಲೋಮೀಟರ್ ನಡೆದು ಊರೊಳಗೆ ಹೋದರೆ ಎಲ್ಲವೂ ವಿಚಿತ್ರಗಳೇ! ವಾಸ್ತವಕ್ಕೆ ಆ ಊರೇ ಒಂದು ವಿಚಿತ್ರ. ಆ ಊರಲ್ಲಿರುವ ಒಂದು ಆಚಾರ ವಿಚಿತ್ರದಲ್ಲಿ ವಿಚಿತ್ರ ಮಹಾವಿಚಿತ್ರ . ."ಎಂದು ಹೇಳುವುದನ್ನು ನಡುವೆಯೇ ನಿಲ್ಲಿಸಿದ ಮುಸಿ ಮುಸಿ ನಗತೊಡಗಿದ ಆ ಹೆಡ್ ಮಾಸ್ಟರ್.

"ಏನಿರಬಹುದಪ್ಪಾ ಆ ವಿಚಿತ್ರ?" ಎಂದುಕೊಳ್ಳುತ್ತ ಅವಳು ಅಲ್ಲಿಂದ ಹೊರಬಿದ್ದಳು.

## ೨

**ಕಾ**ರ್ತಿಕಮಾಸ—

ಆಕಾಶದಲ್ಲಿ ಚಂದಮಾನು ಉರುಳುತ್ತಿರುವ ಮಲ್ಲಿಗೆ ಹೂಚೆಂಡಿನಂತಿದ್ದ. ಸ್ಫುದುನಾದ ಚಳಿ ಮೈಗೆ ಮಂಜಿನ ತೆರೆಯನ್ನು ಹೊದಿಸುತ್ತಿತ್ತು. ಗಾಳಿ ಎಲ್ಲೋ ಮುಸುಗು ಹೊದ್ದು ಮಲಗಿದೆಯೇನೋ ಎನ್ನುವಂತೆ ಎಲೆಗಳು ಕೂಡ ಅಲುಗಾಡುತ್ತಿರಲಿಲ್ಲ.

ಶೃಂಗಾರಪುರ ನಿದ್ದೆಗುಪಕ್ರಮಿಸುತ್ತಿತ್ತು.

ಊರಿಗೆ ಪೂರ್ವಕ್ಕಿದ್ದ ಗುಡ್ಡ, ಬೆಳದಿಂಗಳಿನಲ್ಲಿ ಬೆಳ್ಳಿ ಬೆಟ್ಟದಂತೆ ಹೊಳೆಯುತ್ತಿತ್ತು. ಅದರ ಮೇಲ್ಭಾಗದಲ್ಲಿದ್ದ ದೊಡ್ಡಭವನ ಶಿಥಿಲಗೊಂಡು ಕಾಲದ ಕೊಂಬೆಗೆ ನೇತಾಡುತ್ತಿರುವ ಒಣ ಎಲೆಯಂತ್ತಿತ್ತು. ಅದರ ಪಕ್ಕದಲ್ಲಿಯೇ ಇದ್ದ ಮನ್ಮಥ ದೇವಾಲಯ ತಾಮ್ರದ ಚೊಂಬಿನ ಮೇಲಿರುವ ಬಂಗಾರದ ಕಲಶದಂತಿತ್ತು.

ಶೃಂಗಾರಪುರದಲ್ಲಿ ಒಟ್ಟು ಸಾವಿರಕ್ಕೂ ಮೇಲ್ಪಟ್ಟು ಮನೆಗಳಿದ್ದವು. ಅವುಗಳಲ್ಲಿ ಹೆಚ್ಚಿನವುಗಳು ಹೆಂಚಿನ ಮನೆಗಳೇ, ಅಲ್ಲಲ್ಲಿ ವಾರಿವಾಳಗಳು ಒರಗಿರುವಂತೆ ಮಣ್ಣಿನ ಗುಡಿಸಲುಗಳೂ ಇದ್ದವು.

ಆ ಬೆಳದಿಂಗಳಿನಲ್ಲಿ ಹೆಂಚಿನ ಮನೆಗಳು ದೇವರ ಮೆರವಣಿಗೆಗೋಸ್ಕರ ಹಾಕಿರುವ ಕೆಂಪು ಮಣ್ಣಿನ ಗೆರೆಗಳಂತಿದ್ದವು. ಮನೆಗಳ ನಡುವೆ ಇದ್ದ ಮರಗಳು ರಂಗೋಲಿಗೋಸ್ಕರ ಇಟ್ಟಿರುವ ಚುಕ್ಕೆಗಳಂತಿದ್ದವು.

ರಾತ್ರಿ ಒಂಭತ್ತು ಗಂಟೆಯಾಗಿದ್ದರಿಂದ ಎಲ್ಲರೂ ಮಲಗಲೆಂದು ಹಾಸಿಗೆ ಹಾಸಿಕೊಳ್ಳತೊಡಗಿದ್ದರು. ಸೀಮೆ ಎಣ್ಣೆ ದೀಪಗಳು ಕತ್ತಲನ್ನು ನೆಕ್ಕುತ್ತಿರುವ

ವಿಚಿತ್ರ ಹುಳುಗಳಂತೆ ಕಂಡು ಬರುತ್ತಿದ್ದವು.

ಅಂತಹ ಸಮಯದಲ್ಲಿ ಒಬ್ಬ ವ್ಯಕ್ತಿ ದೊಡ್ಡ ಸ್ಟೀಲಿನ ಕ್ಯಾರಿಯರ್‌ನಲ್ಲಿ ಊಟ ತುಂಬಿಕೊಂಡು ಹೆಜ್ಜೆ ಹಾಕುತ್ತಿದ್ದ. ಆ ವ್ಯಕ್ತಿಯ ಹೆಸರು ನರ ಎಂಬುದಾಗಿತ್ತು. ಕೊಂಚ ವಿಚಿತ್ರವಾದ ಹೆಸರೇ ಅವನಿಗೆ ಇಪ್ಪತ್ತೈದು ವರ್ಷಗಳ ವಯಸ್ಸಿರಬಹುದು ಅವನ ತಂದೆ ತಾಯಿಗಳ್ಯಾರೆಂಬುದು ಯಾರಿಗೂ ಗೊತ್ತಿರಲಿಲ್ಲ ಯಾವತ್ತೋ ಒಂದು ದಿನ ಕತ್ತಲಲ್ಲಿ ತಯಾರಾಗಿ ಒಂದು ರಾತ್ರಿ ಮುಳ್ಳಿನ ಪೊದೆಗಳ ಹಿಂದೆ ಭೂಮಿಯ ಮೇಲೆ ಬಿದ್ದು ಪ್ಲಾಟ್‌ಫಾರ್ಮಿನ ಊಯ್ಯಾಲೆಯಲ್ಲಿ ಮಲಗಿ ಚಹದಂಗಡಿಗಳಲ್ಲಿ ಅನ್ನಪ್ರಾಶನ ಮಾಡಿಸಿಕೊಂಡು ಬೀದಿಗಳಲ್ಲಿ ಬೆಳೆದು ದೊಡ್ಡವನಾಗಿದ್ದ.

ಇತ್ತೀಚೆಗಷ್ಟೇ ಶೃಂಗಾರಪುರಕ್ಕೆ ಬಂದಿದ್ದ. ಪಟ್ಟಣ, ನಗರಗಳ ಮೇಲೆ ಅಸಹ್ಯ ಉಂಟಾಗಿ, ಕೆಲಸದ ಬೇಟೆಯಾಡುತ್ತ ಗ್ರಾಮಗಳತ್ತತಿರುಗಿದ್ದ ಎಲ್ಲೂ ಕೆಲಸ ಸಿಕ್ಕಿರಲಿಲ್ಲ ಕೊನೆಗೆ ಶೃಂಗಾರಪುರ ತಲುಪುವಷ್ಟರಲ್ಲಿ ಇನ್ನು ಮುಂದೆ ಹೋಗುವುದಿಲ್ಲವೆಂದು ಕಾಲುಗಳು ಮುಷ್ಕರ ಹೂಡಿದವು ಅಲ್ಲಿಗೆ ಊಟ ಮಾಡಿ ಮೂರು ದಿನಗಳಾಗಿತ್ತು ಪ್ರತಿಯೊಂದು ಮನೆಯನ್ನೂ ತಿರುಗಾಡಿ ಬೇಡುವ ಶಕ್ತಿ ನಾಲದೆ ದೊಡ್ಡ ಭವನದಂತೆ ಕಂಡುಬರುವ ಬೆಟ್ಟದ ಮೇಲಿನ ಮನೆ ತಲುಪಿದ

"ಅಮ್ಮಾ!" ಎಂದು ಕಿರುಚುತ್ತಾ ಬಾಗಿಲಿನ ಬಳಿ ಕುಸಿದುಬಿದ್ದ, ಒಳಗಿನಿಂದ ಉತ್ತರ ಬರಲಿಲ್ಲ ಮತ್ತೊಂದು ಸಲ ಕೂಗು ಹಾಕಿದ ಒಂದಿಷ್ಟು ಅನ್ನ ಹಾಕಿದವರಿಗೆ ತನ್ನ ಕರುಳು ಕಿತ್ತು ಹಾರನಾಗಿ ಹಾಕುತ್ತಾನೇನೋ ಎನ್ನುವಷ್ಟು ದೀನನಾಗಿ ಕೂಗಿದ.

ಆದರೆ ಯಾರೂ ಬರಲಿಲ್ಲ ಇನ್ನು ಉಪಯೋಗವಿಲ್ಲವೆಂದುಕೊಂಡು ಮೈಯಲ್ಲಿನ ಶಕ್ತಿಯನ್ನೆಲ್ಲ ಕಾಲುಗಳಿಗೆ ತಂದುಕೊಂಡು ಮೇಲೆದ್ದ. ಇನ್ನು ಹೊರಟು ಹೋಗೋಣವೆಂದು ಒಂದು ಹೆಜ್ಜೆ ಇಟ್ಟಿದ್ದನೋ ಇಲ್ಲವೋ "ಯಾರು? ಎಂದು ಒಳಗಿನಿಂದ ಧ್ವನಿ ಕೇಳಿಬಂತು, ಹೋಗುತ್ತಿದ್ದವನು ನಿಂತ. ಕೆಲವು ಕ್ಷಣಗಳ ನಂತರ ಒಳಗಿನಿಂದ ಯುವಕನೊಬ್ಬ ಬಂದ ಅವನಿಗೂ ನರನಷ್ಟು ವಯಸ್ಸಿರಬಹುದು. ಆದರೆ ಪೌಷ್ಟಿಕ ಆಹಾರದಿಂದಾಗಿ ಅವನಿಗಿಂತಲೂ ಎತ್ತರನಾಗಿ ಬಲಿಷ್ಟನಾಗಿದ್ದ.

ಆ ಯುವಕ ನರನನ್ನು ದಿಟ್ಟಿಸಿನೋಡುತ್ತ, "ಏನು ಬೇಕಿತ್ತು" ಎಂದು ಕೇಳಿದ.

"ಅನಾಥ . .ಹಸಿವು " ಇವೆರಡು ಪದಗಳಿಗಿಂತಲೂ ಹೆಚ್ಚು ಮಾತಾ

ಡಲು ನರನಿಂದಾಗಲಿಲ್ಲ. ಆ ಯುವಕ ಮತ್ತೇನೂ ಮಾತಾಡದೆ ಒಳಗೋಡಿದ ತಿನ್ನಲು ಏನಾದರೂ ಇದೆಯೇನೋ ಎಂದು ಕೋಣೆಗಳನ್ನು ಹುಡುಕಾಡಿದ, ಏನೂ ಸಿಗಲಿಲ್ಲ ಬರಿಗೈಯಿಂದ ಅವನ ಬಳಿಗೆ ಹೋಗಲು ಮನಸ್ಸೊಪ್ಪಲಿಲ್ಲ. ಆದರ ಅನಿವಾರ್ಯ

ತನ್ನೆದುರಿಗೆ ನಾಚಿಕೆಯಿಂದ ನಿಂತ ಅವನನ್ನು ನೋಡಿ ಏನಾಯ್ತೆಂಬುದು ನರನಿಗೆ ಅರ್ಥವಾಯ್ತು

ಪ್ರಾಣವನ್ನೆಲ್ಲ ಕಣ್ಣುಗಳಲ್ಲಿ ತುಂಬಿಕೊಂಡು, "ಏನೂ ಇಲ್ವಾ" ಎಂದು ಕೇಳಿದ ಅವನು ಅಡ್ಡವಾಗಿ ತಲೆಯಾಡಿಸಿದ.

"ಇಷ್ಟು ದೊಡ್ಡ ಮನೆಯಲ್ಲಿ " ಎಂದು ಅರ್ಧಕ್ಕೇ ನಿಲ್ಲಿಸಿದ ನರ

"ಇಷ್ಟು ದೊಡ್ಡ ಮನೇಲಿ ಇರೋದು ನಾನೊಬ್ಬನೇ,ನಾನೂ ಅನಾಥನೇ ಆದರೆ ಆ ಯುವಕನಿಗೆ ಹೇಗೆ ಹೇಳಬೇಕೆಂಬುದು ಅರ್ಥವಾಗದೆ ಅಷ್ಟಕ್ಕೆ ನಿಲ್ಲಿಸಿದ. ತನ್ನ ಚರಿತ್ರೆಯನ್ನೆಲ್ಲ ಹೇಳಲು ಅದು ಸಮಯವಲ್ಲವೆಂಬುದೂ ಅವನಿಗೆ ಗೊತ್ತಿತ್ತು.

ಇನ್ನು ಹೋಗುತ್ತೇನೆನ್ನುವಂತೆ ನರ ಕೈಗಳೆರಡನ್ನೂ ಜೋಡಿಸಿದ. ಆಗ ಆ ಯುವಕ ಬಸವರಾಜ ಕಂಡು ಬಂದ. ಅವನು ದೊಡ್ಡದೊಂದು ಕ್ಯಾರಿಯರ್‌ನ್ನು ತೆಗೆದುಕೊಂಡು ಬರುತ್ತಿದ್ದ.

'ಇಲ್ನೋಡಪ್ಪ " ಎಂದು ನರನನ್ನು ಕರೆದ ಆ ಯುವಕ ನರ ನಿಂತುಕೊಂಡ

"ಊಟ ಬರ್ತಿದೆ, ಅಲ್ನೋಡು" ಎಂದ. ನರ ಕೂಡ ಅತ್ತ ನೋಡಿದ ಮುದುಕನೊಬ್ಬ ಅಲ್ಲಿಗೆ ಬಂದು ಕ್ಯಾರಿಯರ್ ಇಟ್ಟು, "ನಾನಿನ್ನು ಹೋಗ್ಲಾ ಧಣಿ?" ಎಂದ. ಸರಿಯೆನ್ನುವಂತೆ ತಲೆಯಾಡಿಸಿದ್ದರಿಂದ ಆ ಮುದುಕ ಹೊರಟು ಹೋದ.

"ಒಳಗ್ಬಾ" ಎನ್ನುತ್ತ ಆ ಯುವಕ ನರನನ್ನು ಕೈ ಹಿಡಿದು ಒಳಗೆ ಕರೆದುಕೊಂಡು ಹೋದ. ಹಾಲ್‌ನ ನಡುವೆ ಕುಳ್ಳಿರಿಸಿ ಎಲೆ ಹಾಕಿದ. ಕ್ಯಾರಿಯರ್ ಬಿಚ್ಚಿ ಅದರೊಳಗಿನ ಪದಾರ್ಥಗಳನ್ನು ಎಲೆಯಲ್ಲಿ ಬಡಿಸಿದ.

ಎಲೆಯಲ್ಲಿ ಬೀಳುತ್ತಿರುವ ಒಂದೊಂದೇ ಪದಾರ್ಥಗಳನ್ನು ನೋಡುತ್ತಿದ್ದಂತೆ ನರನಿಗೆ ಬಾಯಲ್ಲಿ ನೀರೂರಿ, ತೊಟ್ಟಿಕ್ಕಿತು. ಮೊಸರುಗಾಯಿ ಚಟ್ನಿ, ಹುರಿದ ಕೋಳಿ, ಸೌತೇಕಾಯಿ ಸಾಂಬಾರ್, ಆಲೂ ಪಲ್ಯ ಇತ್ಯಾದಿಗಳ ವಾಸನೆಯಿಂದ ಮೂಗು ಇಡುಗಿ ಹೋಯ್ತು ಒಂದು ಕ್ಷಣದ ಹಿಂದೆ ತಿನ್ನಲು ಏನೂ ಇಲ್ಲವೆಂದ ಮನೆಯಲ್ಲಿ ಈಗ ಅಷ್ಟೆಲ್ಲ ಆಹಾರ ಪದಾರ್ಥಗಳು ಎಲೆಯಲ್ಲಿರುವುದನ್ನು ನೋಡಿ ಅವನಿಗೆ ತಟಕ್ಕನೆ ಮಾಯಾಬಜಾರ್ ಸಿನಿಮಾ ನೆನಪಾಯ್ತು

ಮತ್ತೇನೂ ಆಲೋಚನೆಗೆಡೆಕೊಡದೆ ಅವುಗಳ ಮೇಲೆ ದಾಳಿ ಪ್ರಾರಂಭಿಸಿದ.

ಕ್ಷುದ್ಬಾಧೆ ಶಮನಗೊಂಡ ನಂತರ ತಲೆ ಮೇಲೆತ್ತಿ ಅವನತ್ತ ಕೃತಜ್ಞತೆಯಿಂದ ನೋಡಿದ. "ಮತ್ತೆ ನಿಮ್ಮೂಟ ?"

''ನಾನು ನಂತರ ಮಾಡ್ತೀನಿ ನಿಂದಾಗ್ಲಿ"

ನರ ಊಟ ಮುಗಿಸಿದ ಕೈ ತೊಳೆದುಕೊಂಡು ಬಂದ ನಂತರ ಆ ಯುವಕನ ಮುಂದೆ ಕುಳಿತುಕೊಂಡು," ಹೊರಗಿನಿಂದ ನೋಡೋಕೆ ಈ ಭವನ ರಾಜರ ಕೋಟೆಯಂತಿದೆ ಒಳಗೆ ನೋಡಿದ್ರೆ ಧೂಳು ಜೇಡರಬಲೆ ತುಂಬ್ಕೊಂಡು ಗಬ್ಬೆದ್ದು ಹೋಗಿದೆ. ಯಾರೂ ಇಲ್ವಾ" ಎಂದು ಕೇಳಿದ.

"ಯಾರೂ ಇಲ್ಲ ಇಷ್ಟು ದೊಡ್ಡ ಮನೆಗೆ ನಾನೊಬ್ನೇ ವಾರಸುದಾರ."

"ಹಾಗಾದ್ರೆ ನಿಂಗೆ ಜೊತೆಯಾಗಿ ಇಲ್ಲೇ ಇದ್ಬಿಡ್ತೀನಿ" ಎಂದ ನರ ಕ್ಷಣ ಮಾತ್ರದಲ್ಲಿ ಸ್ನೇಹ ಬೆಳೆಸುವುದು ಇತರರನ್ನು ಪ್ರೇಮಿಸುವುದು ಅವನ ಸಹಜ ಲಕ್ಷಣವಾಗಿತ್ತು. ಅದಕ್ಕೇ ಅಲ್ಪ ಪರಿಚಯಕ್ಕೇ ಆ ರೀತಿ ಕೇಳಿದ್ದ.

"ಆಗ್ಲಿ" ಎಂದ ಆ ಯುವಕ ನರ ಖುಷಿಯಾದ.

'ಆದರೆ ನಿನ್ನ ಪರಿಚಯ ಹೇಳ್ಲಿಲ್ಲವಲ್ಲ "

ನರ ಸಂಕ್ಷಿಪ್ತವಾಗಿ ತನ್ನ ಪ್ರವರ ಹೇಳಿಕೊಂಡು, "ಪಟ್ಟಣದಲ್ಲಿ ಬೇಸರವಾಯ್ತು ಗುರುವೆ. ಆ ನಮ್ಮ ಸ್ನೇಹ ಶುರುವಾಗಿದೆಯಾದ್ರಿಂದ ನಾನು ನಿನ್ನನ್ನು 'ಗುರುವೆ' ಅಂತ ಕರೀತೀನಿ ಸರಿ ತಾನೆ? ಆ ಏನು ಹೇಳ್ತಿದ್ದೆ, ಪಟ್ಟಣಬೇಸರವಾಯ್ತು ಅಂತ ತಾನೆ,ಅಲ್ಲಲ್ಲ ಬರೀ ಮೋಸ. ಮುದ್ಕೇ ದೊಡ್ಡಪ್ಪ ಅವಕ್ಕೇ ಬೇಸರನಾಗಿ ಈ ರೀತಿ ಹಳ್ಳೀಕಡೆ ಬಂದೆ. ನನ್ನ ಅದೃಷ್ಟದಿಂದಾಗಿ ನಿನ್ನಂತಹ ಒಳ್ಳೇ ಮಿತ್ರ ಸಿಕ್ಕಿದ. ನಾನು ಇಲ್ಲೇ ಇದ್ದು ನಿನ್ನ ಕೆಲಸ ಬೊಗಸೆಗಳಲ್ಲಿ ಸಹಾಯ ಮಾಡ್ತೀನಿ. ಒಕ್ಕಲು ತನದ ಕೆಲಸ ಗೊತ್ತಿಲ್ಲಾಂತಿಟ್ಕೋ ಆದ್ರೆ ಕಲ್ಕೋತೀನಿ" ಎಂದ.

'ಆದರೆ ನನಗೆ ಒಕ್ಕಲುತನ ಇಲ್ವಲ್ಲ "

"ಮತ್ತೆ ನಿನ್ನ ಭುಕ್ತಿ?"

"ಈಗ್ತಾನೇ ನೋಡಿದ್ಯಲ್ಲ, ಅದೇ ರೀತಿ ದಿನಾಲೂ ಕ್ಯಾರಿಯರ್ ಬರುತ್ತೆ"

"ದಿನಾಲೂ ಕ್ಯಾರಿಯರ್ ಯಾರು ಕಳಿಸ್ತಾರೆ?"

"ಹಳ್ಳೀ ಜನ"

"ಹಳ್ಳೀ ಜನಾನಾ? ಯಾಕೆ"

"ಅದೊಂದು ದೊಡ್ಡ ಕಥೆ. "

ಹೇಳು ಗುರುವೆ, ಇಲ್ಲೇ ಇರ್ತೀನಿ ಅಂದಿದೀನಲ್ಲ, ಮತ್ತೆ ನಿನ್ನ ಬಗ್ಗೆ

ನನಗೆ ಗೊತ್ತಾಗ್ಬೇಕಲ್ಲ ಒಕ್ಕಲುತನ ಇಲ್ದಿದ್ರೆ ಇನ್ನೇನಾದ್ರೂ ಆದಾಯ ಇದ್ಯಾ?"

"ಇಲ್ಲ ಒಂದು ಮಾತಿನಲ್ಲಿ ಹೇಳಬೇಕೆಂದರೆ ನಾನೂ ನಿನ್ನಂತೆ ಅನಾಥನೇ ನರ. ಆದ್ರೆ ಈ ಊರಲ್ಲಿರೋ ಒಂದು ಆಚಾರದಿಂದಾಗಿ ರಾಜಭೋಗ ಅನು ಭವಿಸ್ತಿದೀನಿ. ನಮ್ಮಿಬ್ಬರಿಗೂ ಅಷ್ಟೇ ವ್ಯತ್ಯಾಸ."

"ಆ ಆಚಾರ ಏನು?"

"ಹೇಳ್ತೀನಿ, ಎಲ್ಲಾನೂ ಹೇಳ್ತೀನಿ ನಮ್ಮದು ಮದನ ಕಾಮರಾಜರ ವಂಶ ಈ ಊರಿಗೆ ನಾವು ಜಮೀನ್ದಾರರು ಬಂಪೊಮ್ಮೆ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಹೊಲಗಳೆಲ್ಲವೂ ನಮ್ಮವೇ ಆಗಿದ್ದವು ಅಂದರೆ ಈ ಊರಿಗೆ ನಾವು ರಾಜರಿದ್ದಂತೆ. ಇಲ್ಲಿ ನಮ್ಮ ಮಾತೇ ವೇದ ಆದರೆ ನಮ್ಮ ತಂದೆ ಸತ್ತು ಹೋದ ನಂತರ ಭೂಮಿಗಳೆಲ್ಲವೂ ಬೇರೆಯವರ ಪಾಲಾದವು "

"ನಿಮ್ಮ ತಂದೆಯವರಿಲ್ವಾ?" ಎಂದು ಲೊಚಗುಟ್ಟಿದ ನರ

"ಆ ನಾನು ನಗರದಲ್ಲಿನ ಆಸ್ಪತ್ರೆಯೊಂದರಲ್ಲಿ ಹುಟ್ಟಿದೆ. ಹೆರಿಗೆಯಾದ ನಂತರ ಅಪ್ಪಾಜಿ ಅಮ್ಮನನ್ನೂ, ನನ್ನನ್ನೂ ಕಾರಿನಲ್ಲಿ ಮನೆಗೆ ಕರೆದುಕೊಂಡು ಬರುತ್ತಿದ್ದರು. ಆಗ ಎದುರಿಗೆ ಬರುತ್ತಿದ್ದ ಲಾರಿಯೊಂದು ನಮ್ಮ ಕಾರಿಗೆ ಗುದ್ದಿ ಬಿಟ್ಟಿತು. ಆ ಅಪಘಾತದಲ್ಲಿ ಅಪ್ಪ ಅಮ್ಮ ಸತ್ತುಹೋದ್ರು ನಾನು ಕೆಲವೇ ದಿನಗಳ ಹಸುಗೂಸಾಗಿದ್ದ ನನಗೆ ಎಂತಹುದೇ ಪೆಟ್ಟು ತಗುಲಿರಲ್ಲ. ಹಿಂದೆಯೇ ನಮ್ಮ ದಿವಾನ ಇನ್ನು ಕೆಲವು ಜನ ಕೆಲಸದವರು ಮತ್ತೊಂದು ಕಾರಿ ನಲ್ಲಿ ಬರುತ್ತಿದ್ದರು. ಅಪಘಾತದಲ್ಲಿ ಬದುಕಿ ಉಳಿದಿದ್ದ ನನನ್ನು ಎತ್ತಿಕೊಂಡರು ಆ ರೀತಿ ನಾನು ಅನಾಥನಾದೆ."

"ನಂತರ?"

"ಹೇಳಿದ್ನಲ್ಲ ಈ ಊರಿನಲ್ಲಿ ಒಂದು ಆಚಾರ ಇದೇಂತ ಅದೇನೆಂದರೆ ನಮ್ಮ ವಂಶಕ್ಕೆ ಸೇರಿದ ಪುರುಷನೊಂದಿಗೆ ಯಾವ ಸ್ತ್ರೀಯಾದರೂ ಒಂದು ರಾತ್ರಿ ಕಳೆದರೆ, ಅವಳಿಗೂ ಅವಳ ಕುಟುಂಬಕ್ಕೂ ಆಯುರಾರೋಗ್ಯ, ಅಷ್ಟೈಶ್ವರ್ಯ ಒದಗುತ್ತವೆಂಬುದು ಈ ಗ್ರಾಮದ ಜನರ ನಂಬಿಕೆ. ಅಪ್ಪಾಜಿ ಅಪಘಾತದಲ್ಲಿ ಸತ್ತುಹೋದ ನಂತರ ಆ ವಂಶದಲ್ಲಿ ಉಳಿದವನು ನಾನೊಬ್ಬನೇ ಆದರಿಂದಾಗಿ ತಂದೆತಾಯಿಗಳನ್ನು ಕಳೆದುಕೊಂಡ ನನ್ನನ್ನು ಗ್ರಾಮದ ಪ್ರಜೆಗಳೇ ಸಾಕಿ ಸಲಹಿ ಬೆಳೆಸಿದರು ನನಗೆ ಏನೊಂದೂ ಕೊರತೆಯಾಗದಂತೆ ನೋಡಿಕೊಂಡರು ಓದಿಸಿದರು, ನಾನು ಸಕ್ಕರೆ ಇಡೀ ಹಳ್ಳಿಯೇ ನಕ್ಕಿತು. ನಾನು ಅತ್ತರೆ ಗ್ರಾಮವೂ ಅತ್ತಿತು. ಆ ರೀತಿ ನಾನು ಬೆಳೆಯುತ್ತಿರುವಾಗ ನಮ್ಮ ದಿವಾನರು

ಕೆಲಸ ಬಿಟ್ಟು ಬಿಟ್ಟರು. ನಮ್ಮ ಹೊಲಗಳೆಲ್ಲವನ್ನೂ ಯಾರ್ಯಾರೋ ಆಕ್ರಮಿಸಿ ಕೊಂಡರು.”

“ನೀನಿಗ ಆ ಆಚಾರವನ್ನು ಮತ್ತೆ ಮುಂದುವರಿಸ್ತಿದೀಯಾ” ಎಂದು ಕೇಳಿದ ನರ. ಅವನಿಗೆ ಆ ಪಾಯಿಂಟ್ ತುಂಬಾ ಹೊಸದಾಗಿ ವಿಚಿತ್ರವಾಗಿ ಅನಿಸಿತ್ತು. ಅದಕ್ಕೇ ಆ ಪ್ರಶ್ನೆ ಹಾಕಿದ.

“ಅಕ್ಷರಶಃ ಅದು ಆಚಾರವಲ್ವೇ, ಕೇವಲ ಅದರಿಂದಾಗಿಯೇ ಜನ ನನ್ನನ್ನ ಸಾಕಿ ಸಲಹಿದರು ನಮ್ಮ ವಂಶದಲ್ಲಿ ಉಳಿದಿರೋ ಗಂಡಸು ನಾನೊಬ್ಬನೇ ಅಲ್ವಾ ಅದಕ್ಕೇ ಅದನ್ನ ಪಾಲಿಸ್ತಿದೀನಿ. ಆ ಆಚಾರ ಹದಿನ್ನಾರನೆಯ ವಯಸ್ಸಿನಿಂದಲೇ ಪ್ರಾರಂಭವಾಯ್ತು.”

“ಆಹಾ ಆಹಾ ನಿಮ್ಮದು ಎಂತಹ ವಂಶ ಗುರುವೆ! ವಂಶಪಾರಂಪರ್ಯವಾಗಿ ಭೂಮಿ, ಆಸ್ತಿ-ಪಾಸ್ತಿ, ಹೆಸರು, ಖ್ಯಾತಿ, ಪದವಿ ಇವೆಲ್ಲ ಬರೋದನ್ನ ಕೇಳಿದೀನಿ, ನೋಡಿದೀನಿ ಈ ರೀತಿ ಇಷ್ಟು ಅದ್ಭುತವಾದ ರೊಮ್ಯಾಂಟಿಕ್ ನೆಟವ್ ಬರೋದನ್ನ ನೋಡೋದು, ಕೇಳೋದು ಇದೇ ಮೊದಲ ಸಲ ಗುರುವೆ! ಅದೃಷ್ಟ ಅಂದ್ರೆ ನಿಂದೇ ಮಜ ಮಜವಾಗಿ ಹೊಸ ಹೊಸ ಹುಡಗೀರ ಜೊತೆ ರಾತ್ರಿ ಕಳೀತೀಯ ನಿನ್ನನ್ನು ನೋಡಿದ್ರೆ ನನಗೆ ಹೊಟ್ಟೆಕಿಚ್ಚಾಗ್ತಿದೆ ಗುರುವೆ”

“ಅದು ನಮ್ಮ ವಂಶದ ಮಹಾತ್ಮೆ ಬರೋ ಜನ್ಮ ಏನ್ನೋದೇನಾದ್ರೂ ಇದ್ರೆ ನಮ್ಮ ವಂಶದಲ್ಲೇ ಹುಟ್ಟೋವಂತೆ”

‘ಖಂಡಿತವಾಗ್ಲೂ ಗುರುವೆ! ಆ ದೇವರನ್ನು ಹೆದರಿಸಿಯಾಗ್ಲಿ, ಬೇಡಿ ಕೊಂಡಾಗ್ಲಿ ನಿಮ್ಮ ವಂಶದಲ್ಲಿ ಹುಟ್ತೇನಿ” ಎಂದ ನರ ಆ ಯುವಕ ನಕ್ಕ. ಸ್ವಲ್ಪ ಹೊತ್ತಿನ ನಂತರ ಮತ್ತೆ ನರನೇ,‘ ದಿನಾಲ್ಲೂ ಒಬ್ಬಳೊಂದಿಗೆ ಕಳೀಬೇಕಾ ಎಂದು ಪ್ರಶ್ನಿಸಿದ. ಅವನಿಗೆ ಏನೇನೋ ಸಂದೇಹಗಳುಂಟಾಗುತ್ತಿದ್ದವು.

“ದಿನಾಲೂ ಅಲ್ಲ ಹುಣ್ಣಿಮೆಯ ದಿನ ಹಳ್ಳಿಯಲ್ಲಿನ ಸ್ತ್ರೀಯರಲ್ಲಿ ಯಾರನಾದರೂ ಒಬ್ಬಳನ್ನು ನಾನು ಆರಿಸಿಕೊಂಡು ಹುಣ್ಣಿಮೆ ದಿನ ಅವಳಿಗೆ ಹೇಳಿ ಕಳುಹಿಸಬೇಕು. ಆ ಸುದ್ದಿ ಪಡೆದ ಆ ಸ್ತ್ರೀ ಹುಣ್ಣಿಮೆ ದಿನ ರಾತ್ರಿ ನನ್ನ ಬಳಿಗೆ ಬಂದು ಇದ್ದು ಹೋಗ್ತಾಳೆ ಒಬ್ಬ ಯುವತಿಯೊಂದಿಗೆ ಒಂದು ರಾತ್ರಿಯಷ್ಟೇ ಕಳೆಯಬೇಕು. ಎಲ್ಲರಿಗೂ ಅವಕಾಶ ಬರಲೆಂಬುದಕ್ಕಾಗಿ ಈ ಏರ್ಪಾಡು. ಇನ್ನು ಊಟದ ವಿಷಯ ಕೂಡ ಅಷ್ಟೇ. ಹಳ್ಳಿಯ ಜನರೇ ಪಾಳಿ ಹಾಕ್ಕೊಳ್ತಾರ ದಿನಕ್ಕೊಬ್ಬರಂತೆ ಮೂರು ಹೊತ್ತೂ ಕ್ಯಾರಿಯರ್ ಕಳಿಸುತ್ತಾರ. ಅಂದ್ರೆ ರೊಟೇಶನ್ ಪದ್ಧತಿಯಲ್ಲಿ ಒಟ್ಟು ಸಾವಿರ ಕುಟುಂಬಗಳವರೂ ದಿನಕ್ಕೊಬ್ಬರಂತ ಊಟ ಕಳಿಸುವುದು ಮುಗಿದ ನಂತರ ಮತ್ತೆ ಮೊದಲು ಊಟ ಕಳಿಸಿದ

ಊರು ಆ ಬೆಳದಿಂಗಳಿನಲ್ಲಿ ಗಾಜಿನ ಕಟ್ಟು ಹಾಕಿದ ಚಿತ್ರಪಟದಂತಿತ್ತು. ಪಕ್ಕದಲ್ಲಿರುವ ದೇವಾಲಯು ಮರಳಿನಲ್ಲಿ ಮಾಡಿರುವ ಗುಬ್ಬಿಗೂಡಿನಂತಿತ್ತು

"ಅದು ಯಾವ ದೇವಾಲಯು ?"

"ಮನ್ಮಥನ ದೇವಾಲಯು"

"ಮನ್ಮಥನ ದೇವಾಲಯುವೆ?!"ಎಂದು ನಿಬ್ಬೆರಗಾಗಿ ಕೇಳಿದ ನರ ಸ್ವಲ್ಪ ಹೊತ್ತಿನ ನಂತರ ಸುಧಾರಿಸಿಕೊಂಡು ನುಡಿದ." ಅದೇನು ಗುರುವೆ! ಎಲ್ಲಿ ಯಾದ್ರೂ ರಾಮಾಲಯು ಕೃಷ್ಣನ ಗುಡಿ ಇರುತ್ವೇ ಹೊರತು, ಇದೆಲ್ಲಿಯ ಚೋದ್ಯ?! ಶೃಂಗಾರ ದೇವನಿಗೆ ದೇವಾಲಯು ಇರೋದನ್ನ ನಾನಿಲ್ಲೀವರೆಗೂ ಕೇಳಿಲ್ಲ."

"ಅದೇ ಮತ್ತೆ ನಮ್ಮೂರಿನ ಸ್ಪೆಶಾಲಿಟಿ ಮುಕ್ತಿಗೆ ಮಾರ್ಗ ಭಕ್ತಿ, ರಕ್ತಿ ಎಂದು ಹಿರಿಯರು ಹೇಳಿದ್ದಾರೆ. ನಾವು ಎರಡನೆಯದನ್ನು ಆರಿಸಿಕೊಂಡಿದ್ದೇವೆ ಅಷ್ಟೇ ವ್ಯತ್ಯಾಸ ಇನ್ನೊಂದು ವಿಚಿತ್ರ ಹೇಳ್ಲಾ? ಆ ದೇವಾಲಯುದೊಳಗೆ ಹೋಗಿ ದೇವರನ್ನು ದರ್ಶನ ಮಾಡಬೇಕೆಂದರೆ ಸ್ತ್ರೀಯರು ಸೆರಗು ತೆಗೆದು ಹೊಕ್ಕಳ ಬಳಿ ತುರುಕಿಕೊಂಡು ಹೋಗಬೇಕು. ಪುರುಷರು ತಮ್ಮ ಶಲ್ಯ ಟವೆಲ್ಲುಗಳನ್ನು ಸೊಂಟಕ್ಕೆ ಸುತ್ತಿಕೊಳ್ಳಬೇಕು. ಅಂದ್ರೆ ಟಾಪ್‌ಲೆಸ್ ಆಗಿ ಇದು ದೇವಾಲಯುದಲ್ಲಿ ಆಚರಣೆಯಲ್ಲಿರೋ ಪದ್ಧತಿ."

ನರ ಬಾಯಿತೆರೆದು ಕೇಳುತ್ತಿದ್ದು ಬಿಟ್ಟ, ಮತ್ತೆ ಗೋಪಾಲಕೃಷ್ಣನೇ ಮುಂದುವರಿಸಿದ. "ಯಾಕಷ್ಟು ಆಶ್ಚರ್ಯ ಪಡ್ತಿಯೇಯು? ಆ ವೆಂಕಟೇಶ್ವರ ಸ್ವಾಮಿಯು ಬಳಿಗೆ ಹೋದವರು ತಲೆ ಬೋಳಿಸಿಕೊಳ್ಳುತಾರಲ್ಲ, ಯಾಕೆ ಅಂತಂದ್ಕೊಳ್ತಿದೀಯು? ತಮ್ಮ ಅಹಂಕಾರ ತಗ್ಗಬೇಕೆಂಬುದಕ್ಕಾಗಿ. ಅದೇ ರೀತಿ ಇಲ್ಲಿ ಮೇಲೆ ಯಾವ ಆಚ್ಛಾದನೆಯೂ ಇಲ್ಲದಂತೆ ಹೋಗಿ ದೇವರನ್ನು ದರ್ಶನ ಮಾಡಲು ಕಾರಣ ಮೋಹ ತಗ್ಗಬೇಕೆಂದು ಆಫ್‌ಕೋರ್ಸ್, ಸ್ತ್ರೀಯರಿಗೆ ರವಿಕೆ ಇರಬಹುದು, ಕೇವಲ ಸೆರಗನ್ನಷ್ಟೇ ತೆಗೆಯಬೇಕು."

"ಆಹಾ ನಿಮ್ಮ ಊರು ಅದ್ಭುತವೋ ಅದ್ಭುತ ಗುರುವೆ. ಇಂತಹ ಊರನ್ನು ನಾನಿಲ್ಲೀವರೆಗೂ ಕಂಡಿಲ್ಲ, ಕೇಳಿಲ್ಲ"

"ಈಗ ಕಂಡಾಯ್ತಲ್ಲ" ಎಂದು ನಕ್ಕ ಗೋಪಾಲಕೃಷ್ಣ.

"ನಾಳೆಯಿಂದ ನಾನೂ ಮನ್ಮಥ ದೇವನನ್ನು ಪೂಜಿಸ್ತೀನಿ ಅವಕಾಶ ಸಿಕ್ಕಿದ್ರೆ ರಕ್ತಿ ಇಲ್ಲಾಂದ್ರೆ ಮುಕ್ತಿ."

"ಹುಶಾರು ಕಾಮುಕ ದೃಷ್ಟಿಯಿಂದ ನೋಡ್ತಿಯಾಂತ ಜನರಿಗೆ ಗೊತ್ತಾದ್ರೆ ಎಲುಬು ಪುಡಿ ಪುಡಿ ಮಾಡಿ ಸುಣ್ಣ ಮಾಡಿಡ್ತಾರೆ"ಎಂದು ನಗುತ್ತ

ಎಚ್ಚರಿಸಿದ ಗೋಪಾಲಕೃಷ್ಣ.

ನರ ಅತ್ತಿತ್ತ ನೋಡುತ್ತ,"ಆಹಾ, ಬೆಳದಿಂಗಳು ಸಖತ್ತಾಗಿದೆ ಗುರುವೆ. ಇಂತಹ ಬೆಳದಿಂಗಳು ನೋಡಿ ಎಷ್ಟು ಕಾಲವಾಗಿತ್ತೋ! ಆ ಪಟ್ಟಣದಲ್ಲಿ ಟ್ಯೂಬ್ ಲೈಟುಗಳ ಬೆಳಕು ಬಿಟ್ಟರೆ ಬೆಳದಿಂಗಳು ಕಂಡು ಬರೋದಿಲ್ಲ."

"ಬೇದಿಂಗಳು ಇವತ್ತು ಅದ್ಭುತವಾಗಿರುತ್ತೆ--ಹುಣ್ಣಿಮೆ ಅಲ್ವಾ"

ನರ ಒಂದು ಕ್ಷಣ ಕಾಲ ಪುಟಿದುಬಿದ್ದ. ಗೋಪಾಲಕಷ್ಣನತ್ತ ತಿರುಗಿ, ಅಂದ್ರೆ ಈ ದಿನ.. "ಎಂದ. ಮುಂದಿನ ಮಾತು ಅವನ ಬಾಯಿಯಿಂದ ಹೊರ ಬೀಳಲಿಲ್ಲ. ಅವನ ಕಣ್ಣುಗಳ ಮುಂದೆ ಯುವತಿಯೊಬ್ಬಳು ನಾಚಿಕೆಯ ಭಾರ ವನ್ನು ಹೊತ್ತುಕೊಂಡು, ನಾಳೆಯಿಂದ ತನಗೂ, ತನ್ನ ಕುಟುಂಬಕ್ಕೂ ಬರ ಲಿರುವ ಅದೃಷ್ಟವನ್ನು ನೆನೆಸಿಕೊಳ್ಳುತ್ತ ಬೆಟ್ಟ ಹತ್ತಿ ಬರುತ್ತಿರುವುದು ಕಂಡು ಬಂತು.. ...

...ಆ ರೀತಿ ಗೋಪಾಲಕೃಷ್ಣನ ಬಳಿ ನೆಲೆಗೊಂಡ ನರ ಆ ದಿನ ಕ್ಯಾರಿ ಯರ್ ಹಿಡಿದುಕೊಂಡು ಹೆಜ್ಜೆ ಹಾಕುತ್ತಿದ್ದ. ಪೂರ್ವ ದಿಕ್ಕಿನಲ್ಲಿ ಆಕಾಶದ ಮೇಲೆ ಚಂದ್ರಬಿಂಬ ಅಪೂರ್ಣವಾಗಿ ಮೂಡಿತ್ತು. ಹುಣ್ಣಿಮೆ ಎಂದಿದೆಯೋ ಎಂದುಕೊಳ್ಳುತ್ತ ನರ ಗುಡ್ಡ ಹತ್ತತೊಡಗಿದ.

ಸರಿಯಾಗಿ ಅದೇ ಸಮಯದಲ್ಲಿ ಆ ಊರಿನಲ್ಲಿನ ಮಾಜಿ ದಿವಾನ ವೆಂಕಟ ರಾಮಯ್ಯ ಗೋಪಾಲಕೃಷ್ಣನ ಪೀಡೆ ತೊಲಗಿಸಿಕೊಳ್ಳಲು ಏನು ಮಾಡ ಬೇಕೆಂದು ರೂಢಿಯ ಪ್ರಕಾರ ಆಲೋಚಿಸುತ್ತಿದ್ದ.

೩

"ಇಲ್ನೋಡಮ್ಮ! ಮುಂದೆ ಬರೋದೇ ಶೃಂಗಾರಪುರ. ಕಂಡಕ್ಟರ್‌ಗೆ ಹೇಳು ನಿಲ್ದಾಣ ಬಂದಕೂಡ್ಲೇ ಸೀಟಿ ಊದ್ತಾನೆ" ಹಿಂದಿದ್ದ ಮುದುಕಿ ಭುಜ ಅಲುಗಾಡಿಸಿ ಹೇಳಿದ್ದರಿಂದ, ವರ್ಷಾ ಗಡಿಬಿಡಿಯಿಂದ ಮೇಲೆದ್ದು, ಕಿಟಕಿ ಯೊಳಗಿಂದ ಹೊರಗಿಣುಕಿ ನೋಡಿದಳು.

ರಸ್ತೆಯ ಅತ್ತ ಇತ್ತ ಹಸುರಾದ ಪೊದೆಗಳು ಭೂಮಿಗಂಟಿಸಿರುವ ಪಚ್ಚೆ ಗಳಂತಿದ್ದವು. ಕೆಂಪನೆಯ ಚಿಕ್ಕ ಚಿಕ್ಕ ದುಂಡುಗಲ್ಲುಗಳ ಪಚ್ಚೆಗಳ ನಡುವೆ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಹವಳದಂತಿದ್ದವು. ನೀಲಿ ಬಣ್ಣದ ಆಕಾಶದಲ್ಲಿ ತೇಲಾಡುತ್ತಿದ್ದ ಬಿಳಿ ಮೋಡಗಳು ತೂತು ಬಿದ್ದ ಹಾಸಿಗೆಯಿಂದ ಹಾರಾಡು ತ್ತಿರುವ ಅರಳೆಯಂತಿದ್ದವು.

ಕೇಳುತ್ತಿದ್ದವರೆಲ್ಲರೂ ನಗುತ್ತಿದ್ದರು.

ಆ ವ್ಯಕ್ತಿ ನಾಟಕ ಕಲಿಸುವ ಮಾಸ್ತರನೆಂದು ವರ್ಷಾಳಿಗೆ ಅರ್ಥವಾಯ್ತು. ಹಳ್ಳಿಯೂರುಗಳಲ್ಲಿ ಇಂತಹದ್ದಿಮಾಕು ಹಟಮಾರಿತನ ಸಾಮಾನ್ಯವೇ ಇಷ್ಟಿದ್ದರೂ ಪಟ್ಟಣಗಳಿಗಿಂತ ಹಳ್ಳಿಯೂರುಗಳೇ ತುಂಭಾ ಉತ್ತಮವೆಂದು ಅವಳ ನಂಬಿಕೆಯಾಗಿತ್ತು.

ತಮ್ಮ ಹಿಂದೆ ಯಾರೋ ಬರುತ್ತಿರುವಂತೆ ಅನ್ನಿಸಿದ್ದರಿಂದ ನಾಟಕದ ಮಾಸ್ತರ ಹಿಂದಿರುಗಿ ನೋಡಿದ. ನಾಗರಿಕಳಂತೆ ಕಂಡು ಬರುತ್ತಿದ್ದ ವರ್ಷಾಳನ್ನು ನೋಡಿ ನಿಂತು ಕೊಂಡು"ಯಾರಮ್ಮಾ?" ಎಂದು ಮಾತಾಡಿಸಿದ.

"ನನ್ನ ಹೆಸರು ವರ್ಷಾ ಈ ಊರಿನ ಹೊಸ ಟೀಚರ್ ವರ್ಗ ಆಗಿದ್ರಿಂದ ಈ ಊರಿಗೆ ಬಂದಿದೀನಿ"

"ಹಾಗಾ"ಎಂದು ಮತ್ತೊಬ್ಬನತ್ತ ತಿರುಗಿ"ಲೋ ಗಂಗಣ್ಣ ಆ ಸೂಟ್‌ಕೇಸ್ ತೊಗೊಳ್ಳೋ ಪಾಪ ಹೆಣ್ಣೈಗ್ಸು ಅಷ್ಟಷ್ಟು ಭಾರ ಹೊತ್ತಿದಾಳೆ" ಎಂದ.

ಒಬ್ಬ ವ್ಯಕ್ತಿ ಅವಳ ಕೈಯಲ್ಲಿದ್ದ ಸೂಟ್‌ಕೇಸ್ ಇಸಿದುಕೊಂಡ ಮತ್ತೆ ಎಲ್ಲರೂ ನಡೆಯತೊಡಗಿದರು. ಅವಳು ಅವರ ಹಿಂದೆಯೇ ಮೆಲ್ಲಗೆ ನಡೆಯತೊಡಗಿದಳು ನಾಟದ ಮೇಷ್ಟ್ರು ಮತ್ತೆ ತನ್ನ ನಾಟಕದ ಪ್ರಪಂಚದೊಳಗೆ ತೇಲಿ ಹೋದ.

"ಮೊನ್ನೆ ದಸರಾ ಉತ್ಸವಕ್ಕೆ ನೆರಬೈಲಿನಲ್ಲಿ ನಾಟಕ ಹಾಕಿದ್ವಿ ಸುಭದ್ರಾ ಪರಿಣಯ. ನಾಟಕ ಇನ್ನು ಸ್ವಲ್ಪ ಹೊತ್ತಿನಲ್ಲಿ ಶುರುವಾಗಲಿದೆ ಅನ್ನೋವಾಗ ಕೃಷ್ಣ,ಸುಭದ್ರ ಇಬ್ಬರು ಪರಾರಿ ನನಗೆ ಬಿ.ಪಿ ಏರಿಬಿಟ್ತು ಹಾರ್ಮೋನಿಯಂನ್ನು ಅಲ್ಲೇ ಬಿಟ್ಟು ಲಾಂದ್ರ ಹಿಡ್ಕೊಂಡು ಅವರನ್ನ ಹುಡುಕೋಕೆ ಹೊರಟೆವು. ಕಂಟಿ, ಪೊದೆ ಎಲ್ಲಾ ಕಡೆ ಹುಡುಕಿದ್ದಾಯ್ತು. ಎಲ್ಲೂ ಕಾಣಿಸ್ಲಿಲ್ಲ ಬಯಲಿನಲ್ಲಿ ತಿರುಗಾಡ್ತಿದ್ರೂ ನನ್ನ ಮೈಬೆವತು ಒದ್ದೆ ಮುದ್ದೆಯಾಗಿತ್ತು ಇನ್ನರ್ಧಗಂಟೆ ಕಾಲ ಕಲ್ಲು ಮುಳ್ಳಲ್ಲಿ ತಿರುಗಾಡಿ ಹುಡುಕಿದಾಗ ಕೊನೆಗೆ ಬ್ರಿಡ್ಜೊಂದರ ಕೆಳಗೆ ಸಿಕ್ಕಿದ್ರು. ಅವರನ್ನು ನೋಡುತ್ತಲೇ ನಾಟಕದ ಕಂಟ್ರಾಕ್ಟರ್ ಕಣ್ಣಲ್ಲಿನೀರು ತುಂಬಿಕೊಂಡು ಬಿಕ್ಕುತ್ತ,ಯಾಕೆ ಈ ರೀತಿ ಓಡಿಬಂದ್ರೀಂತ ಕೇಳಿದ.ಅವರಿಬ್ಬರೂ ಗಂಡ–ಹೆಂಡತಿ ಆದರಿಂದಾಗಿ ರಾತ್ರಿಯಾಗುತ್ಲೇ ಬ್ರಿಡ್ಜ್‌ನ ಕೆಳಗೆ ಸೇರಿಕೊಂಡಿದ್ರು.

"ಕೃಷ್ಣನ ಪಾರ್ಟು ಮಾಡಿದವನು ನೆರಬೈಲಿನವನಲ್ವೇನು"ಎಂದು ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿ ಕೇಳಿದ.

"ಅಲ್ಲ ಕೊನೆಯ ನಿಮಿಷದಲ್ಲಿ ಆತನಿಗೆ ಟೈಫಾಯ್ಡ್ ಬಂದದ್ದರಿಂದ ನಾಯಕಿ ಪಾತ್ರ ಮಾಡ್ತಿದ್ದ ಅಪರ್ಣಾಳಿಗೆ ಮೊದಲನೇ ಕೃಷ್ಣನನ್ನು ಕರ್ಕೊಂಬಾ

ಕಂಡಕ್ಟರ್ ಜೋರಾಗಿ, "ಶೃಂಗಾರಪುರ . ಶೃಂಗಾರಪುರ .. "ಎಂದು ಕೂಗಿದ.

ವರ್ಷಾ ತನ್ನ ಲಗೇಜ್ ಎತ್ತಿಕೊಂಡು ಬಾಗಿಲ ಬಳಿ ಬಂದು ನಿಂತು ಕೊಂಡಳು. ಬಸ್ಸು ಮತ್ತೆರಡು ನಿಮಿಷಗಳ ಕಾಲ ಉರುಳಿ ನಿಂತಿತು. ಅವಳು ಬಡಬಡನೆ ಕೆಳಗಿಳಿದಳು ಅವಳ ಹಿಂದೆ ಹತ್ತು-ಹನ್ನೆರಡು ಜನ ಕೆಳಗಿಳಿದರು. ಬಸ್ಸು ಹೊರಟು ಹೋಯ್ತು.

ವರ್ಷಾ ಅತ್ತಿತ್ತ ನೋಡಿದಳು. ರಸ್ತೆಯ ಪಕ್ಕದಲ್ಲಿ ನಾಮಫಲಕ ಕಂಡು ಬಂತು. ಹಳದಿ ಬಣ್ಣ ಬಳಿದ ಬಂಡೆಗಲ್ಲೊಂದರ ಮೇಲೆ, 'ಶೃಂಗಾರಪುರ-ಒಂದು ಕಿಲೋ ಮಿಟರ್' ಎನ್ನುವ ಕಪ್ಪು ಅಕ್ಷರಗಳು ಬೆಳಗಿನ ಎಳೆಬಿಸಿಲಲ್ಲಿ ಮಿನುಗು ತ್ತಿದ್ದವು. ಅಕ್ಷರಗಳ ಕೆಳಗೆ ಬಾಣದ ಗುರುತು ಊರು ಉತ್ತರ ದಿಕ್ಕಿಗಿದೆ ಎನ್ನುವುದನ್ನು ಸೂಚಿಸುತ್ತಿತ್ತು.

ಅವಳೊಂದಿಗೆ ಬಸ್ಸಿಳಿದವರೆಲ್ಲರೂ ಅತ್ತಲೇ ಹೆಜ್ಜೆ ಹಾಕುತ್ತಿದ್ದರು. ಅವಳು ಮೆಲ್ಲಗೆ ಅವರನ್ನು ಹಿಂಬಾಲಿಸಿದಳು. ಅವರು ಎರಡು ಗುಂಪುಗಳಾಗಿ ಬೇರ್ಪಟ್ಟು ನಡೆಯುತ್ತಿದ್ದರು. ಮುಂದೆ ಆರು ಜನ ಬಡಬಡನೆ ಹೆಜ್ಜೆ ಹಾಕು ತ್ತಿದ್ದರೆ, ಹಿಂದೆ ನಾಲ್ವರು ಮಾತಾಡಿಕೊಳ್ಳುತ್ತ ಸಾವಕಾಶವಾಗಿ ನಡೆಯು ತ್ತಿದ್ದರು.

ಅವಳು ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತ ಹೆಜ್ಜೆ ಹಾಕುತ್ತಿದ್ದಳು, ನಾಲ್ವರಲ್ಲಿ ಸ್ವಲ್ಪ ನಾಗರಿಕನಂತಿದ್ದ ವ್ಯಕ್ತಿ ಹೇಳುತ್ತಿದ್ದ.

"ಮೊನ್ನೆ ಅಂದ್ರೆ ಈ ನಡುವೆ ನಾಟಕ ಕಲಿಸೋದಿಕ್ಕೆ ಒಪ್ಕೊಂಡಿದ್ದ ನಾಟಕ ಗಯೋಪಾಖ್ಯಾನ.ಮೊದಲನೆಯ ಕೃಷ್ಣನಪಾರ್ಟು ಆ ಊರಿನ ಸರಪಂಚ ರವೀಂದ್ರರೆಡ್ಡಿ ಮಾಡುತ್ತಿದ್ದ.ನಾಟಕದ ಖರ್ಚು ನನ್ನ ಖರ್ಚು ಎಲ್ಲಾ ಆತನದೇ ಇಲ್ಲೀವರಗೂ ಚೆನ್ನಾಗಿತ್ತಾದರೂ ಈಗ ತೊಡಕು ಬಂದಿದೆ. ಕಥೆಯ ಪ್ರಕಾರ ಗಯ ಉಗುಳಿದ ಉಗುಳು ಕೃಷ್ಣನ ಕೈಯಲ್ಲಿ ಬೀಳಬೇಕಲ್ವೇ ಆದರೆ ಇದಕ್ಕೆ ರವೀಂದ್ರರೆಡ್ಡಿ ಒಪ್ಪಿಕೊಳ್ತಿಲ್ಲ. ಯಾವನ್ದೋ ಉಗುಳನ್ನು ನನ್ನ ಬೊಗಸೇಲಿ ಹಿಡಿಬೇಕಾ? ಇದು ಸರಪಂಚಗಿರಿಗೇ ಇನ್‌ಸಲ್ಟ ಅಷ್ಟಾಗಿ ಬೇಕು ಅನ್ನೋದಿದ್ರೆ ಅವನ ಕಿರೀಟ ಕಳಚಿ ನನ್ನ ಕೈಯಲ್ಲಿ ಬೀಳುವಂತೆ ಕಥೆ ಬದಲಾಯಿಸೆಂದು ಸರಪಂಚ ಹಠ ಹಿಡ್ದಿದಾನೆ. ಅಯ್ಯಾ ಮಹಾನುಭಾವಾ, ಅದು ನಾಟಕ ನಮ್ಮಿಷ್ಟ ಬಂದಂತೆ ಬದಲಾಯಿಸಿದ್ರೆ ಜನ ಚಪ್ಪಾಳ ತಟ್ಟೋದಿಲ್ಲ, ಚಪ್ಪಲಿ ಎಸೀತಾರೆ ಅಂತಂದ್ರೂ ಕೇಳಿದ್ರೆ ತಾನೆ! ಆತನನ್ನು ನಾಟದಿಂದ ತೆಗೆಯೋ ಣಾಂದ್ರೆ ಖರ್ಚು ಹಾಕಿಕೊಳ್ಳಬಲ್ಲ ಮತ್ತೊಬ್ಬ ಇಲ್ಲ. ಇಟ್ಕೊಂಡ್ರೆ ಕಿರಿಕಿರಿ ಏನು ಮಾಡ್ಬೇಕೂಂತ ಗೊತ್ತಾಗದೆ ಒದ್ದಾಡ್ತಿದೀನಿ."

ಅಂತ ತಂತಿ ಕೊಟ್ಟಿದ್ದೆ. ಬೇರೆಯವರ್‍ಯಾಕೆ ಅಂತ ಅವಳು ತನ್ನ ಗಂಡನನ್ನೇ ಕರ್ಕೊಂಬಂದಿದ್ಲು."

"ಅವರಿಬ್ಬರನ್ನೂ ಅಲ್ಲಿಂದ ಕರ್ಕೊಂಬಂದು ನಾಟಕ ಶುರುಮಾಡಿದ್ರಾ?"

ಆ....ನಾವು ಬರುವ ಹೊತ್ತಿಗೆ ಪ್ರೇಕ್ಷಕರು ಸುತ್ತಲೂ ಇದ್ದ ಡೇರೆಯನ್ನು ಅರ್ಧದಷ್ಟು ಕಿತ್ತು ಹಾಕಿದ್ದರು. ಅವರ ಸಿಟ್ಟು ಇಳಿಸಿ ನಾಟಕ ಶುರುಮಾಡು ವಷ್ಟರಲ್ಲಿ ಬೆಳಗಿನಜಾವ ಮೂರು ಗಂಟೆಯಾಯ್ತು.

ಕೇಳುತ್ತಿದ್ದವರೆಲ್ಲರೂ ನಕ್ಕರು. ವರ್ಷಾ ಕೂಡ ತುಟಿಯನ್ನು ಬಿಚ್ಚಿಯೂ ಬಿಚ್ಚದಂತೆ ನಕ್ಕಳು. ನಾಗರಿಕತೆ ದೂರವಾಗಿ ಬಿಸುಡಿದಂತಿರುವ ಇಂತಹ ಹಳ್ಳಿಗಳಲ್ಲಿ ಸೆಕ್ಸ್ ಒಂದೇ ಮನರಂಜನೆ, ಅದರ ಬಗೆಗಿನ ಮಾತುಕತೆಯಿಂದಲೇ ಹೊತ್ತು ಕಳೆಯುವುದೆನ್ನುವುದು ಅವಳಿಗೆ ಅರ್ಥವಾಯ್ತು.

ಅವರು ಮಾತಾಡುತ್ತಿರುವಂತೆಯೇ ಊರು ಬಂತು ಊರಿನ ಸರಹದ್ದಿನಲ್ಲಿ ಪ್ರವೇಶಿಸುತ್ತಿದ್ದರೆ, ವರ್ಷಾಳ ಮನಸ್ಸಿನಲ್ಲಿ ಅದೊಂದು ರೀತಿಯ ಉದ್ವೇಗದ ಭಾವನೆ ಮೂಡಿತು. ಆ ಕ್ಷಣದವರೆಗೂ ಎಂತಹುದೇ ಸಂಬಂಧವಿರದಿದ್ದ ಆ ಗ್ರಾಮದಲ್ಲಿ ಸುಮಾರು ಮೂರು ವರ್ಷಗಳ ಕಾಲ ಕೆಲಸ ಮಾಡಬೇಕಾಗಿ ಅವಳಿಗೆ ವಿಚಿತ್ರವೆಂದೇ ಅನ್ನಿಸಿತ್ತು. ಜೀವನವೆಂದರೇನೇ ನಾವು ಊಹಿಸಿರದ ಘಟನೆಗಳ ಸಮ್ಮೇಳನ ಯಾವಾಗ ಏನು ನಡೆಯುತ್ತದೆಂದು ಗೊತ್ತಿಲ್ಲದಿರುವುದು ಜೀವನದಲ್ಲಿ ಅತ್ಯಂತ ವಿಷಾದದ ಘಟ್ಟ. ಅದೇ ರೀತಿ ವಿನೋದದ ಘಟ್ಟವೂ ಹೌದು, ಅದು ಉಂಟಾಗುವ ಪರಿಣಾಮಗಳ ಮೇಲೆ ಆಧರಿಸಿರುತ್ತದೆ.

ಬೀದಿಯು ಪ್ರಾರಂಭವಾಗುವಲ್ಲಿ ಬರುತ್ತಲೇ, "ಅಲ್ನೋಡಮ್ಮ, ಅದೇ ಸರಪಂಚರ ಮನೆ. ಅಲ್ಲಿಗೆ ಹೋಗಿ ಆತನನ್ನು ಬೇಟಿಯಾಗಿ. ನಿಮಗೆಲ್ಲ ಸೌಕರ್ಯ ಮಾಡಿಕೊಡ್ತಾನೆ."ಎಂದು ಹೇಳಿದ ನಾಟಕದ ಮೇಷ್ಟ್ರು ಮತ್ತೊಂದು ಬೀದಿಗೊಳಗೆ ಹೋದ.

ಸರಿಯೆನ್ನುವಂತೆ ತಲೆಯಾಡಿಸಿದ ವರ್ಷಾ ಮುಂದೆ ಸಾಗಿದಳು.

## ೬

ಸರಪಂಚನ ಮನೆ ಸಾಕಷ್ಟು ದೊಡ್ಡದಾಗಿತ್ತು. ಮನೆಯ ಮುಂದಿದ್ದ ವರಾಂಡವೇ ಪಟ್ಟಣದಲ್ಲಿನ ಅವಳ ಮನೆಯಷ್ಟಿತ್ತು ಬಿಸಿಲಿನಲ್ಲಿ ಆ ಮನೆ ದೇವತೆಗಳ ರಾಜನ ತಲೆಯ ಮೇಲಿನ ಕಿರೀಟದಂತಿತ್ತು.

ಬಾಗಿಲ ಬಳಿ ನಿಂತು, "ಏನ್ರೀ!" ಎಂದು ಕೂಗಿದಳು. ಸ್ವಲ್ಪ ಹೊತ್ತಿನ ನಂತರ ಯುವತಿಯೊಬ್ಬಳು ಬಾಗಿಲ ಬಳಿಗೆ ಬಂದು, "ಯಾರೂ!" ಎನ್ನುತ್ತ

ಪ್ರಶ್ನಾರ್ಥಕವಾಗಿ ನೋಡಿದಳು. ಅವಳಿಗೂ ವರ್ಷಾಳ ವಯಸ್ಸೇ ಇರಬಹುದು ಇನ್ನೂ ಮದುವೆಯಾಗಿರಲಿಲ್ಲ. ಸುಂದರವಾಗಿ, ಅದಕ್ಕಿಂತಲೂ ಕೋಮಲವಾಗಿ ಇದ್ದಳು. ಮೈ ಮೇಲೆ ಕಂಡೂ ಕಾಣದಂತಿದ್ದ ಹಳದಿ ಛಾಯೆ, ದೇವತೆಗಳ ಹಿಂದೆ ಕಂಡು ಬರು ಬೆಳಕಿನಂತಿತ್ತು.

"ನಾನು ಈ ಊರಿಗೆ ಹೊಸದಾಗಿ ಬಂದಿರೋ ಟೀಚರ್, ಹೆಸರು ವರ್ಷಾ ಸರಪಂಚರಿದ್ದಾರಾ?" ಎನ್ನುತ್ತ ತನ್ನನ್ನು ತಾನು ಪರಿಚಯ ಮಾಡಿ ಕೊಂಡಳು.

"ಟೀಚರ್ ಏ! ಒಳಗ್ಬನ್ನಿ. ಅಪ್ಪ ಬರ್ತಾರೆ" ಎಂದು ಅವಳು ವರ್ಷಾ ಳನ್ನು ಒಳಗೆ ಆಹ್ವಾನಿಸಿದಳು. ವರ್ಷಾ ಒಳಗೆ ಪ್ರವೇಶಿಸಿದಳು.

ಆ ಯುವತಿ ವರ್ಷಾಳನ್ನು ಹಿತ್ತಲಿಗೆ ಕರೆದೊಯ್ದು ಅಲ್ಲಿದ್ದ ಒಲೆಯ ಬಳಿ ಒಂದು ಸ್ಟೂಲ್ ಹಾಕಿ ಕುಳಿತುಕೊಳ್ಳೆಂದಳು. ವರ್ಷಾ ಕುಳಿತುಕೊಂಡ ನಂತರ ಅವಳ ವಿವರಗಳನ್ನು ಕೇಳಿ ತಿಳಿದುಕೊಂಡಳು.

ತನ್ನ ಬಗ್ಗೆ ಎಲ್ಲವನ್ನೂ ಹೇಳಿದ ನಂತರ, "ನನ್ನ ಬಗ್ಗೆ ಎಲ್ಲವನ್ನೂ ಕೇಳಿ ದ್ಯಲ್ಲ. ಮತ್ತೆ ನಿನ್ನ ಬಗ್ಗೆ ಹೇಳ್ತಿಲ್ಲವಲ್ಲ" ಎಂದು ಕೇಳಿದಳು ವರ್ಷಾ. ಆ ಸ್ವಲ್ಪ ಸಮಯದಲ್ಲೇ ಅವರಲ್ಲಿ ಸಲಿಗೆ ಬೆಳೆದು, ಸ್ನೇಹಿತೆಯರಾಗಿ ಏಕವಚನಕ್ಕಿಳಿ ದಿದ್ದರು.

"ನನ್ನ ಬಗ್ಗೆ ಹೇಳ್ಕೊಳ್ಳೋದಕ್ಕೇನಿದೆ? ನನ್ನ ಹೆಸರು ಧಾನ್ಯ ನಮಗೆ ಸಿರಿಸಂಪತ್ತೆಲ್ಲ ಧಾನ್ಯವೇ ಆಗಿರೋದ್ರಿಂದ ಅಪ್ಪ ನನಗೆ ಆ ಹೆಸರಿಟ್ಟಿದ್ದಾರೆ. ಇಂಟರ್ ತನಕ ಸಿಟೀಲಿದ್ದು ಓದ್ದ. ಅದಕ್ಕಿಂತ್ಲೂ ಮುಂದೆ ಓದಿಸೋದು ಅಪ್ಪ ನಿಗೆ ಇಷ್ಟವಿರದ್ರಿಂದ ಇಲ್ಲಿಗೆ ಬಂದುಬಿಟ್ಟೆ. ನಾನು ಸಣ್ಣವಳಿರೋವಾಗ್ಲೇ ಅಮ್ಮ ಸತ್ತುಹೋದ್ಲು. ಇಷ್ಟು ದೊಡ್ಡ ಮನೇಲಿ ನಾನೂ ಅಪ್ಪ ಬಿಟ್ರೆ ಯಾರೂ ಇಲ್ಲ. ಅವರಿಗೆ ನಾನು ಜೊತೆ, ನನಗೆ ಅವರು ಜೊತೆ."

"ನಿನ್ನ ಹೆಸರು ತುಂಬಾ ಚೆನ್ನಾಗಿದೆ."

"ಥ್ಯಾಂಕ್ಸ್"ಧಾನ್ಯ ಬಹುದಿನಗಳ ನಂತರ ಆ ಪದವನ್ನು ಉಚ್ಚರಿಸಿದಳು

ಅಷ್ಟರಲ್ಲಿ ಸರಪಂಚ ಶಿವರಾಮಯ್ಯ ಅಲ್ಲಿಗೆ ಬಂದು ಮಗಳೊಂದಿಗಿದ್ದ ಮತ್ತೊಬ್ಬ ಯುವತಿಯನ್ನು ನೋಡಿ, ಯಾರು ಎನ್ನುವಂತೆ ಕಣ್ಸನ್ನೆಯಿಂದ ಕೇಳಿದ.

ಧಾನ್ಯ ವರ್ಷಾಳ ವಿವರಗಳನ್ನು ಹೇಳಿ, "ಅವರು ನಮ್ಮ ತಂದೆ" ಎಂದು ಪರಿಚಯಮಾಡಿಸಿದಳು.

ವರ್ಷಾ ಎರಡೂ ಕೈಎತ್ತಿ ನಮಸ್ಕರಿಸಿದಳು.

"ನೀನು ಹೊಸ ಟೀಚರ್ ಅಂತಾಯ್ತು. ಅದಕ್ಕೆ ಮುಂಚೆ ಇದ್ದ ಟೀಚರ್ ಒಂದು ತಿಂಗಳು ಕೆಲಸಮಾಡಿ ಈ ಹಳ್ಳೀಲಿರೋಕ್ಕಾಗ್ದೆ ಓಡಿಹೋಗ್ಬಿಟ್ಟೆ. ನೀನು ಹಾಗೆ ಮಾಡೋದಿಲ್ಲಂತ ನನಗನ್ನಿಸ್ತಿದೆ" ಎನ್ನುತ್ತ ತನ್ನ ಅಲ್ಲಿರೋ ಸಿಮೆಂಟ್ ಜಗುಲಿಯ ಮೇಲೆ ಕುಳಿತುಕೊಂಡ.

ಆತನಿಗೆ ಐವತ್ತು ವರ್ಷಗಳಿರಬಹುದು. ಯಾವಾಗಲೂ ಬಿಳಿ ಬಟ್ಟೆಗಳಲ್ಲಿ ಗಂಭೀರನಾಗಿರುತ್ತಿದ್ದ. ಇಪ್ಪತ್ತು ವರ್ಷಗಳಿಂದ ಆತನೇ ಆ ಊರಿಗೆ ಏಕಗ್ರೀವ ಸರಪಂಚನಾಗಿದ್ದ.

"ನನಗೆ ಹಳ್ಳಿಯೂರುಗಳೆಂದರೆ ಇಷ್ಟ. ಆದ್ದರಿಂದ ಸರಕಾರದವರು ತಿರುಗಿ ವರ್ಗ ಮಾಡಿದ ಹೊರತು ಹೋಗೋದಿಲ್ಲ"

"ಹಾಗಾದ್ರೆ ಇನ್ಮೇಲಾದ್ರೂ ನಮ್ಮೂರಿನ ಮಕ್ಕಳು ನಾಲ್ಕು ಅಕ್ಷರ ಕಲ್ತ್ಕೋತಾರೆ. ನೀನು ಒಂಟಿ ಹೆಣ್ಣು, ಬೇರೆಲ್ಲೋ ಇರೋದ್ಯಾಕೆ? ನಮ್ಮ ಮನೇಲೇ ಇರು. ಜನ ಇಲ್ದೆ ಈ ಮನೆ ಭಣಭಣ ಅಂತಿರೋದನ್ನ ನೋಡಿರಬೇಕಲ್ಲ. ಆದ್ರಿಂದ ನೀನು ಒಂದು ಕೋಣೆಲಿ ಇರಬಹುದು. ಅಷ್ಟೇ ಅಲ್ಲ ನಿನ್ನ ಊಟದ ವ್ಯವಸ್ಥೆಕೂಡ ಇಲ್ಲೇ ಆಗುತ್ತೆ. ನೀನಿದ್ರೆ ನನ್ನ ಮಗಳಿಗೂ ಹೊತ್ತುಹೋದಂತಾಗುತ್ತೆ."

ಅವಳು ದಾಕ್ಷಿಣ್ಯ ಪಡುತ್ತ ಏನೋ ಹೇಳಲು ಹೋದಳು. ಅದನ್ನು ಗಮನಿಸಿದ ಧಾನ್ಯ "ಇನ್ನು ನೀನೇನೂ ಹೇಳ್ಬೇಡ, ನಮ್ಮ ತಂದೆ ಮಾತು ಮೀರಿದೋರು ಇಲ್ಲಿವರೆಗೂ ಈ ಊರಿನಲ್ಲಿಲ್ಲ. ಹೊಸದಾಗಿ ಅವರಿಗೆ ಅಪ್ರತಿಷ್ಠೆ ತರ್ಬೇಡ" ಎಂದು ನಗುತ್ತ ನುಡಿದಳು.

ವರ್ಷಾಳಿಗೂ ತಾನು ಬೇರೆಲ್ಲೋ ಒಂಟಿಯಾಗಿರುವುದಕ್ಕಿಂತ ಇಲ್ಲೇ ಇರೋದು ಒಳ್ಳೆಯದೆನಿಸಿತು.ತಿಂಗಳಿಗೆ ಒಂದಿಷ್ಟು ದುಡ್ಡುಕೊಟ್ಟು ಪೇಯಿಂಗ್ ಗೆಸ್ಟ್‌ನಂತಿದ್ದರಾಯ್ತೆಂದು ನಿರ್ಧರಿಸಿಕೊಂಡು, "ಆಗ್ಲಿ" ಎಂದು ಧಾನ್ಯಳತ್ತ ನೋಡುತ್ತ ನುಡಿದಳು. ತನಗೆ ಒಳ್ಳೆಯ ಜೊತೆ ಸಿಕ್ಕಿದ್ದಕ್ಕೆ ಧಾನ್ಯಳ ಮುಖದಲ್ಲಿ ಆನಂದ ಮೂಡಿತು. ಶಿವರಾಮಯ್ಯ ಮೇಲೆದ್ದು "ನಾನು ಹಾಗೇ ಹೊಲದ ಕಡೆ ಹೋಗ್ಬರ್ತಿನಮ್ಮ" ಎಂದು ಹೆಜ್ಜೆ ಮುಂದಿಟ್ಟು, ಏನೋ ನೆನಪಾದವನಂತೆ ಮಗಳತ್ತ ತಿರುಗಿ, "ಗೋಪಾಕೃಷ್ಣ ಏನಂತಿದಾನಮ್ಮ? ಬೇಗ ಕರುಣಸೂಂತ ಹೇಳು, ಹೇಗಾದ್ರೂಮಾಡಿ ಅವನ ದೃಷ್ಟೀನ ಆಕರ್ಷಿಸು. ಹೊಲ ಬೆಳೆದು ಮೂರು ವರ್ಷವಾಯ್ತು. ಏನು ಶನಿ ಹಿಡ್ಕೊಂಡಿದ್ಯೋ ಏನೋ? ರಾಶಿ, ರಾಶಿ ಧಾನ್ಯ ಬೆಳೀಬೇಕಾದದ್ದು ಒಂದು ಕಾಳೂ ಬರ್ತಿಲ್ಲ, ನೀವಿಬ್ಬರೂ ಒಂದಾದ ಹೊರತು ನಮಗೆ ಒಳ್ಳೇ ಕಾಲ ಬರೋದಿಲ್ಲ" ಎಂದು ನುಡಿದು ಹತಾಶಯ್ಯ

ಹೆಜ್ಜೆ ಇಡುತ್ತ ಹೊರಟು ಹೋದನಾತ.

ಶಿವರಾಮಯ್ಯ ಕಣ್ಮರೆಯಾದೊಡನೆಯೇ, ವರ್ಷಾ ಧಾನ್ಯಳನ್ನು ನೋಡಿ ಕಣ್ಣು ಮಿಟಿ, "ಗೋಪಾಲಕೃಷ್ಣ ಯಾರು? ನಿನ್ನ ಭಾವಿ ಪತೀನಾ?" ಎಂದು ಕೇಳಿದಳು.

ಧಾನ್ಯ ಬಿದ್ದು ಬಿದ್ದು ನಕ್ಕಳು. ಸ್ವಲ್ಪಹೊತ್ತಿಗೆ ಬಲವಂತದಿಂದ ನಗು ತಡೆದುಕೊಂಡು, "ಗೋಪಾಲಕೃಷ್ಣ ನನ್ನ ಭಾವೀ ಪತಿಯಲ್ಲ. ಈ ಗ್ರಾಮದಲ್ಲಿ ಮದನ ಕಾಮರಾಜು ವಂಶಕ್ಕೆ ಸೇರಿದ ಪುರುಷ. ಆತನೊಂದಿಗೆ ಹುಣ್ಣಿಮೆ ದಿನದಂದು ರಾತ್ರಿ ಕಳೆದರೆ. ಎನ್ನುತ್ತ ಆ ಊರಿನಲ್ಲಿದ್ದ ಆಚಾರದ ಬಗ್ಗೆ ಹೇಳಿದಳು.

ಕೇಳುತ್ತಿದ್ದ ವರ್ಷಾಳಿಗೆ ದಿಗ್ಭ್ರಮೆಯಾದಂತಾಯ್ತು. ಹೆಡ್ ಮೇಷ್ಟ್ರು ತನ್ನ ಕೈಗೆ ಟ್ರಾನ್ಸ್‌ಫರ್ ಆರ್ಡರ್ ಕೊಡುತ್ತ ಈ ಗ್ರಾಮದ ಬಗ್ಗೆ ಹೇಳಿದ ಮಾತುಗಳು ನೆನಪಾದವು. ಆ ಆಘಾತದಿಂದ ಚೇತರಿಸಿಕೊಳ್ಳಲು ಅವಳಿಗೆ ಬಹಳ ಹೊತ್ತೇ ಹಿಡಿಯಿತು.

೫

ಆ ಹುಣ್ಣಿಮೆಯ ದಿನ ಪರಮಾನಂದನ ಮನೆಯಲ್ಲಿ ಉತ್ಸಾಹ ಕುಣಿದಾಡುತ್ತಿತ್ತು. ಕಾರಣ—ಆತನ ಹಿರಿ ಸೊಸೆ ಲಹರಿಗೆ ಗೋಪಾಲಕೃಷ್ಣನ ಬಳಿಯಿಂದ ಕರೆ ಬಂದಿತ್ತು, ನಾಳೆಯಿಂದ ತಮ್ಮ ಮನೆಯ ರೂಪುರೇಷೆಗಳೇ ಬದಲಾಗಿ ಹೋಗುತ್ತವೆಂದು ಅಂದುಕೊಳ್ಳುತ್ತ ತಮಗೆ ಬರಲಿರುವ ಸಿರಿಸಂಪತ್ತಿನ ಬಗ್ಗೆ ಕನಸು ಕಾಣುವುದರಲ್ಲೇ ಆ ಮನೆಯವರೆಲ್ಲ ಮುಳುಗಿ ಹೋಗಿದ್ದರು ಎಲ್ಲರೂ ಯಾವುದೋ ಭ್ರಾಂತಿ [Trance]ಯಲ್ಲಿರುವಂತೆ ಕಂಡು ಬರುತ್ತಿದ್ದರು.

"ಮನ್ಮಥ ದೇವಾ! ನಮ್ಮ ಮೊರೇನ ಇಷ್ಟು ಕಾಲಕ್ಕೆ ಕೇಳಿಸಿಕೊಂಡು ಗೋಪಲಕೃಷ್ಣನಿಂದ ಕರೆಬರೋ ಹಾಗೆ ಮಾಡಿದೆ ಯೇನಯ್ಯ" ಎನ್ನುತ್ತ ಪರಮಾನಂದ ಪ್ರತಿ ಐದು ನಿಮಿಷಗಳಿಗೊಮ್ಮೆ ಪುರ್ವದಿಕ್ಕಿನ ಗುಡ್ಡದತ್ತ ನೋಡುತ್ತ ನಮಸ್ಕಾರ ಮಾಡುತಿದ್ದ.

ಲಹರಿಯನ್ನು ಗೋಪಾಲಕೃಷ್ಣ ಆ ರಾತ್ರಿಗೆ ಬರಲು ಹೇಳಿ ಕಳುಹಿಸಿದ್ದಾನೆಂದು ಕೇಳಿದೊಡನೆಯೇ ಪರಮಾನಂದನ ಎರಡನೇ ಸೊಸೆ ಪದ್ಮ ತನ್ನ ಗಂಡನನ್ನು ಕೋಣೆಯಲ್ಲಿ ಎಳೆದುಕೊಂಡು ಹೋಗಿ "ಆ ಸೋಗಲಾಡಿಗೆ ಕರ ಬಂದಿದೆ. ನಾವು ಒಂದೇ ಛತ್ತಿನಡಿ ಇದ್ರೂ ಬೇರೆ ಸಂಸಾರ ಹೂಡಿದೀವಲ್ಲ ಒಂದ್ವೇಳೆ ಸಿರಿ

ಸಂಪತ್ತೆಲ್ಲ ನಿಮ್ಮಣ್ಣನಿಗೇ ಬರುತ್ತೇನೋ! ಹೌದೂ ಗೋಪಾಲಕೃಷ್ಣ ಇವಳನ್ನು ಆರಿಸಿಕೊಂಡಿದ್ದಾನಲ್ಲ?! ನೋಡೋದಿಕ್ಕೆ ಕಣ್ಣು ಮೂಗು ಚೆನ್ನಾಗಿದ್ರೂ ಮೈ ಮೇಲೆ ಮಾಂಸ ಎಲ್ಲಿದೆ? ಅದೇ ನನ್ನ ನೋಡಿ-ಬಣ್ಣ ಸ್ವಲ್ಪ ಕಡಿಮೆ ಇದ್ರೂ ಮೈ ಮಾಟ ತುಂಬ್ಕೊಂಡೇ ಇದೀನಿ ಅಷ್ಟಕ್ಕೂ ಗೋಪಾಲಕೃಷ್ಣ ಎದುರಾದಾಗಲೆಲ್ಲ ನನ್ನ ಮೈಮಾಟ ಕಂಡು ಬರುವಂತೆ ಮಾಡಿದೆ ಆದರೆ ನನಗೆ ಅವಕಾಶ ಬರ್ಲಿಲ್ಲ ಆತನ ಟೇಸ್ಟ್ ಅದೆಂಥದೋ.. . ,ಎಂದು ಮೂತಿ ಗಂಟಿಕ್ಕಿದಳು.

ಅದೇ ಸಮಯದಲ್ಲಿ ಪರಮಾನಂದನ ಕಿರಿಸೊಸೆ ಚಿತ್ರ ತನ್ನ ಗಂಡನೊಂದಿಗೆ ಹೇಳುತ್ತಿದ್ದಳು "ಗೋಪಾಲಕೃಷ್ಣ ಮೂವತ್ತು ವರ್ಷದವಳನ್ನ ಆರಿಸ್ಕೊಂಡಿದಾನಲ್ಲ? ಆದ್ರೂ ಆ ವಯ್ಯಾರಿಗೆ ಅಷ್ಟು ವಯಸ್ಸಾಗಿರೋ ಹಾಗೆ ಕಾಣಿಸೋದಿಲ್ಲಾಂತಿಟ್ಕೊಳ್ಳಿ ಮುದಕನಿಗೆ ದಸರಾಹಬ್ಬ ಅನ್ನೋ ಹಾಗೆ ಅದೃಷ್ಟ ನಿಮ್ಮಣ್ಣನಿಗೆ ಬಲಿದಿದೆ ತನಗಿಂತಲೂ ಅರ್ಧವಯಸ್ಸು ಕಡಿಮೆ ಇರುವವಳನ್ನು ಕಟ್ಕೊಂಡು ಏಗೋಕ್ಕಾಗ್ದೆ ಒದ್ದಾಡ್ತಿರೋ ಆತನಿಗೆ ನಾಳೆಯಿಂದ ಆಯುರಾರೋಗ್ಯ ಅಷ್ಟೈಶ್ವರ್ಯಗಳು ಒದಗಿ ಬರುತ್ತವೇನೋ! ಇನ್ನೂ ಇಪ್ಪತ್ತೈದು ತುಂಬಿರದ ನನ್ನನ್ಯಾಕೆ ಕರೀಲಿಲ್ವೋ!' ಚಿತ್ರಳ ಗಂಡ ವ್ಯಂಗವಾಗಿ "ಇನ್ನೂ ಮೇಲು ನಿನ್ನ ವಯಸ್ಸು ಹದಿನಾರು ಅಂತನ್ನಿಲ್ಲ" ಎಂದ

"ನಾನು ಸುಳ್ಳು ಹೇಳ್ತಿದೀನೀತೀರಾ? ನನ್ನ ಡೇಟ್ ಆಫ್ ಬರ್ತ್ ಎಷ್ಟು ಅಂದ್ಕೊಳ್ತಿದೀರಿ?"

"ಎಷ್ಟಾದ್ರೂ ಇರ್ಲಿ. ನೀನು ನೋಡೋದಿಕ್ಕೆ ಮಾತ್ರ ನಮ್ಮತ್ತಿಗೆಗಿಂತ್ಲೂ ದೊಡ್ಡೋಳಥರಾ ಕಾಣಿಸ್ತೀಯ"

ಅದರಿಂದಾಗಿ ಚಿತ್ರಳಿಗೆ ಕೋಪ ಉಕ್ಕಿಬಂತು ಗಂಡನನ್ನು ನೋಟದಿಂದಲೇ ನುಂಗುವವಳಂತೆ ನೋಡಿ ಅಲ್ಲಿಂದ ಎದ್ದು ಹೋದಳು.

ಇನ್ನು ಲಹರಿ ಅವಳ ಗಂಡ ಚಲಪತಿ ತಮ್ಮ ಕೋಣೆಯಲ್ಲಿ ಏಕಾಂತವಾಗಿ ಮಾತಾಡಿ ಕೊಳ್ಳುತ್ತಿದ್ದರು.

"ಯಾವುದ್ರು ಏನಾದ್ರೂ ನಾಳೆಯಿಂದ ನಮ್ಮ ಜಾತಕ ಬದಲಾಗಲಿದೆ ಭೂತಾನ್ ಲಕ್ಷ್ಮಿ ಲಾಟರಿ ಒಂದು ಹತ್ತಿದ್ರೆ ಸಾಕು. ಈ ಊರಿನಲ್ಲಿರೋ ಶ್ರೀಮಂತ ವೆಂಕಟರಾಮಯ್ಯನನ್ನೂ ಮೀರಿಸಬಹುದು" ಎಂದು ತನ್ನ ಹೆಂಡತಿ ಯತ್ತ ಮೆಚ್ಚುಗೆಯಿಂದ ನೋಡುತ್ತ ನುಡಿದ.

ಅವಳು ಏನೂ ಮಾತಾಡಲಿಲ್ಲ ಸುಮಾರು ಮೂರು ವರ್ಷಗಳ ಕಾಲ ಎಂತಹುದೇ ಮನ್ನಣೆಯಿಲ್ಲದಂತಿದ್ದ ಅವಳನ್ನು ಕುಟುಂಬವೆಲ್ಲ ಒಂದೇ ಸಲಕ್ಕೆ ಆಕಾಶಕ್ಕೇರಿಸುತ್ತಿದ್ದುದರಿಂದ ಕಕ್ಕಾಬಿಕ್ಕಿಗೊಳ್ಳುತ್ತಿದ್ದಳು. ತನ್ನನ್ನು ಎಲ್ಲರೂ

ಗೌರವಿಸುವುದು, ಮೆಚ್ಚುಗೆಯಿಂದ ನೋಡುವುದು ಮಹತ್ತರ ಆನಂದವ ನ್ನುಂಟು ಮಾಡುತ್ತಿತ್ತು. ಏನೆಂದುಗೊತ್ತಿರದ ಉತ್ಸುಕತೆತುಂಬಿಕೊಂಡಿದ್ದರಿಂದ ಅವಳ ಬಾಯಿಂದ ಮಾತು ಹೊರಬರುತ್ತಿದ್ದಿಲ್ಲ. ಆತ್ರೇಯಮನೆಗೆ ಸಂಸಾರ ಬದ ಲಾಯಿಸಿದ ಈ ನೂರು ವರ್ಷಗಳ ಕಾಲದಿಂದ ರೊಟೀನ್ ಆಗಿ ಸಾಗಿ ಹೋಗು ತ್ತಿದ್ದ ಜೀವನದಲ್ಲಿ ಒಂದು ಕುಲುಕಾಟ ಸಂಭವಿಸಿದಂತಿತ್ತವಳಿಗೆ. ಇಷ್ಟು ಕಾಲ ಮುಳ್ಳಿನ ದಾರಿಯಲ್ಲಿ ಸಾಗುತ್ತಿದ್ದ ಬದುಕು, ಇದ್ದಕ್ಕಿದ್ದಂತೆ ಹೂವಿನ ತೋಟ ದೊಳಗೆ ತಿರುಗಿದಂತಾಯ್ತು. ಆ ತೋಟದಲ್ಲಿ ಯಾವು ಯಾವುದೋ ಸುವಾ ಸನೆ ಹೊತ್ತು ತಂದು ತನಗೆ ಅಭಿಷೇಕ ಮಾಡುತ್ತಿರುವ ಗಾಳಿ,ತನಗೋಸ್ಕರವೇ ಅರಳಿರುವಂತೆ ತಲೆದೂಗುತ್ತಿರುವ ಹೂಗಳು, ಶೃಂಗಾರ ಗೀತೆಗಳನ್ನು ಒಪ್ಪಿಸು ತ್ತಿರುವಂತೆ ಅತ್ತಿತ್ತ ಹಾರಾಡುತ್ತಿರುವ ದುಂಬಿಗಳೂ, ಇಂತಹ ಚಿತ್ರ ವಿಚಿತ್ರ ಗಳೆಲ್ಲವೂ ಮನಸ್ಸನ್ನು ಪುಳಕಕ್ಕೀಡುಮಾಡುತ್ತಿದ್ದವು.

"ಮಾತಾಡ್ತಿಲ್ವಲ್ಲ?" ಎಂದು ಅನುನಯದಿಂದ ಕೇಳಿದ ಚಲಪತಿ ಬೇರೆ ಸಮಯವಾಗಿದ್ದರೆ ಮಾತಾಡಿಸಿದರೆ ಬೇಸರಿಸಿಕೊಳ್ಳುತ್ತಿದ್ದ ಅವನಿಗೆ ಈಗ ತನ್ನ ಹೆಂಡತಿ ತನಗೆ ಅದೃಷ್ಟ ತರುವ ದೇವತೆಯಂತೆ ಕಂಡು ಬರುತ್ತಿದ್ದಳು. ಅಷ್ಟೇ ಅಲ್ಲದೆ ಗೋಪಾಲ ಕೃಷ್ಣ ಬಯಸಿದ್ದರಿಂದ, ಲಹರಿ ನಿಜವಾಗಿಯೂ ಸುಂದರಿ ಯೇನೋ ಎನ್ನುವ ಅನುಮಾನ ಮೊದಲ ಬಾರಿಗೆ ಉಂಟಾಗಿತ್ತು.

ಅವಳಿಂದ ಏನೂ ಮಾತಾಡಲಾಗಲಿಲ್ಲ. ಯಾವು ಯಾವುದೋ ಮಧುರ ಊಹೆ, ಪ್ರಕಂಪನಗಳು ಶರೀರವನ್ನು ವೀಣೆಯಂತೆ ಮೀಟುತ್ತಿದ್ದವು. ವಕ್ಷಸ್ಥ ಳಕ್ಕೆ ಕಟ್ಟಿಕೊಂಡಿದ್ದ ಅರವತ್ತೈದು ಸೆಂ. ಮೀ. ಗಳ ಪಾಲಿಯೆಸ್ಟರ್ ಕುಪ್ಪ ಸವೇ ಭಾರವೆಂದೆನಿಸತೊಡಗಿತ್ತು. ವಿಶಾಲವಾದ ಕಣ್ಣುಗಳಿಗೆ ಹಚ್ಚಿಕೊಂಡಿದ್ದ ಕಾಡಿಗೆಯೇ ಕಚಗುಳಿ ಇಡುತ್ತಿರುವಂತಿತ್ತು. ಕಣ್ರೆಪ್ಪೆಗಳು ಶೃಂಗಾರ ಕಾವ್ಯ ಗಳನ್ನು ಬರೆಯಲು ಬಾಗಿರುವ ಲೆಕ್ಕಣಿಕೆಯ ಪತ್ತಿಗಳಂತಿದ್ದವು. ಹಣೆಯ ಮೇಲಿದ್ದ ಕುಂಕುಮದ ಬೊಟ್ಟು ತನ್ನಲ್ಲಿನ ಕೋರಿಕೆಯನ್ನು ಜ್ವಲಿಸುತ್ತಿರು ವಂತಿತ್ತು. ಸೊಂಟ ವಯ್ಯಾರದ ನದಿ ದಂಡೆಯಂತೆ ಕಂಡು ಬರುತ್ತಿತ್ತು. ಅದರ ನಡುವೆ ಇರುವ ಹೊಕ್ಕಳು ಮುನ್ಮುಂದೆ ಸುಳಿಗಳಿವೆ ಎಂದು ಎಚ್ಚರಿಸುತ್ತಿರುವ ಸಂಕೇತದಂತಿತ್ತು.

ಅವಳ ಕಣ್ಣುರೆಪ್ಪೆಗಳು ಮುಚ್ಚಿಕೊಳ್ಳಲು ಒಲ್ಲನೆನ್ನುತ್ತಿದ್ದವು. ಪಕ್ಕ ದಲ್ಲಿ ಗಂಡನಿರುವನೆನ್ನುವ ಧ್ಯಾಸವೇ ಇರಲಿಲ್ಲ. ತಾನು ಜೀವನದಲ್ಲಿ ಯಾರಿಗೂ ಹೇಳಿರದ ಘಟನೆಯ ಬಗ್ಗೆ ಅವಳು ಆಲೋಚಿಸುತ್ತಿದ್ದಳು.

ಮದನಕಾಮರಾಜ ವಂಶಕ್ಕೆ ಸೇರಿಸಿದ ಪುರುಷನೊಂದಿಗೆ ಸಂಭೋಗಿಸುವ

ಮುನ್ನ ಆ ಸ್ತ್ರೀ ತಾನು ಅದಕ್ಕೆ ಮುನ್ನ ಯಾರಿಗೂ ಹೇಳಿರದ ಘಟನೆಯ ಬಗ್ಗೆ ಹೇಳಬೇಕಿತ್ತು. ಇದೂ ಆಚಾರದಲ್ಲಿ ಒಂದು ಭಾಗವಾಗಿತ್ತು.

ಇದನ್ನು ನೆನೆಸಿಕೊಂಡದ್ದರಿಂದ ಅವಳಿಗೆ ಮಹಾಭಾರತದಲ್ಲಿನ ಚಿಕ್ಕದೊಂದು ಕಿರು ಕಥೆ ನೆನಪಿಗೆ ಬಂತು. ಪಾಂಡವರು, ಶ್ರೀ ಕೃಷ್ಣ ಒಂದು ಸಲ ಕಾಡಿನಲ್ಲಿ ಹೋಗುತ್ತಿರುವಾಗ ಆಕಸ್ಮಾತ್ತಾಗಿ ಗಿಡದಿಂದ ಹಣ್ಣೊಂದನ್ನು ಕಿತ್ತುಬಿಡುತ್ತಾರೆ. ಅದು ಮುನಿಯೊಬ್ಬನಿಗೆ ಸೇರಿದ ಹಣ್ಣು. ಅದನ್ನು ತಿರುಗಿ ಕೊಂಬೆಗೆ ಸೇರಿಸಬೇಕೆಂದರೆ ಎಲ್ಲರೂ ತಮ್ಮ ತಮ್ಮ ಮನಸ್ಸಿನಲ್ಲಿನ ಮಾತನ್ನು ಹೇಳಬೇಕೆಂದು ಶ್ರೀ ಕೃಷ್ಣ ಸೂಚಿಸುತ್ತಾನೆ ಒಬ್ಬೊಬ್ಬರಾಗಿ ತಮ್ಮ ಮನಸ್ಸಿನಲ್ಲಿನ ಮಾತನ್ನು ಹೇಳುತ್ತಿದ್ದರೆ ಆ ಹಣ್ಣು ಸ್ವಲ್ಪಸ್ವಲ್ಪವೇ ಮೇಲೇರಿ ಕೊಂಬೆಗೆ ಅಂಟಿಕೊಳ್ಳುತ್ತದೆ.

ಇದೆಲ್ಲ ಅವಳ ಕಣ್ಣ ಮುಂದೆ ಸುಳಿದಾಡಿತು. ತಾನೂ ಇಲ್ಲಿಯವರೆಗೆ ಯಾರಿಗೂ ಹೇಳಿರದ ಘಟನೆಯ ಬಗ್ಗೆ ಹೇಳಬೇಕು ಎಂದುಕೊಂಡಳು. ಮನಸ್ಸಿನಲ್ಲಿ ಎಂತಹುದೇ ಕಶ್ಮಲವಿರದಂತೆ ಮಾಡಲು, ಸ್ತ್ರೀ-ಪುರುಷರ ನಡುವೆ ಸಾಮೀಪ್ಯ ಬೆಳೆಯಲು ಈ ಪದ್ಧತಿ ಇಟ್ಟಿರಬಹುದೆನಿಸಿತು. ಸಂಭೋಗದಲ್ಲಿ ನಿಜವಾದ ಆನಂದ ಉಂಟಾಗಬೇಕೆಂದರೆ ಎಂತಹುದೇ ಹಿಂಜರಿಕೆ ಇರಕೂಡದೆಂದು ಆಲೋಚಿಸಿ ಈ ನಿಯಮ ಇಟ್ಟಿರುತ್ತಾರೆಂದು ಕೂಡ ಹೊಳೆಯಿತು

ಅಷ್ಟರಲ್ಲಿ ಚಲಪತಿ ಅವಳನ್ನು ಮೊಣಕೈನಿಂದ ಮೆಲ್ಲಗೆ ತಿವಿದ. ಅವಳು ಬೆಚ್ಚಿಬಿದ್ದು ತಕ್ಷಣವೇ ಸುಧಾರಿಸಿಕೊಂಡಳು.

"ಏನು ಯೋಚಿಸ್ತಿದೀಯ?"

"ಏನೂ ಇಲ್ಲ. ಸುಮ್ಮನೇ, ಕಣ್ಣು ಎಳೀತಿವೆ."

"ಚೆನ್ನಾಗಿ ನಿದ್ದೆ ಮಾಡು. ಇನ್ನು ಈ ರಾತ್ರಿಯೆಲ್ಲ ನಿದ್ದೆ ಇರೋದಿಲ್ವಲ್ಲ" ಎಂದು ಹೇಳಿ ಚಲಪತಿ ಹೊರಗೆ ಹೊರಟುಹೋದ.

ತಾನು ಅಲ್ಲಿಯ ವರೆಗೆ ಯಾರಿಗೂ ಹೇಳಿರದ ಘಟನೆಯ ಬಗ್ಗೆ ನೆನೆಸಿಕೊಳ್ಳುತ್ತಿದ್ದರೆ ಅವಳಿಗೆ ನಗು ಉಕ್ಕುಕ್ಕಿ ಬರುತ್ತಿತ್ತು. ಅದನ್ನು ಕೇಳಿ ಗೋಪಾಲಕೃಷ್ಣ ಹೇಗೆ ಪ್ರತಿಕ್ರಿಯಿಸುತ್ತಾನೋ ಎನ್ನುವ ಊಹೆ ತುಂಬಾ ಮೋಜೆನಿಸುತ್ತಿತ್ತು. ಸಾಯಂಕಾಲ ನಾಲ್ಕು ಗಂಟೆಯ ಸಮಯದಲ್ಲಿ ಅತ್ತೆ ಅನಸೂಯಮ್ಮ ಬರುವವರೆಗೂ ಅವಳು ಹಾಗೆಯೇ ಮಲಗಿದ್ದಳು.

ಆಕೆ ತುಂಬಾ ಗೌರವದಿಂದ, "ಬಾಮ್ಮಾ ಸ್ನಾನ ಮಾಡಿ ತಯಾರಾರೋಗೋವಂತೆ" ಎಂದು ಕರೆದಳು. ಲಹರಿ ಹಾಸಿಗೆ ಬಿಟ್ಟೆದ್ದು ಆಕೆಯ ಹಿಂದೆಯೇ ಹೋದಳು. ಕೋಣೆಯ ಹೊರಗೆಯೇ ಇಬ್ಬರು ಓರಗಿತ್ತಿಯರು ಇದ್ದರು,

ಮೂವರೂ ಕೂಡಿ ಅವಳನ್ನು ಸ್ನಾನದ ಕೋಣೆಗೆ ಕರೆದೊಯ್ದರು. ತಲೆಗೆ ನೀರೆರೆದರು. ಅನಸೂಯಮ್ಮ ರೇಷ್ಮೆ ಸೀರೆ ತಂದುಕೊಡಲು ಹೋದಾಗ ಬೇಡ ವೆಂದು ಗಂಜಿ ಹಾಕಿದ ಹಸಿರು ಬಣ್ಣದ ಸೌತ್‌ಕಾಟನ್ ಸೀರೆಉಟ್ಟುಕೊಂಡಳು ಹೂವಿನ ಜಡೆ ಹೆಣೆದುಕೊಳ್ಳಬೇಕೆಂದು ಪದ್ಮ ಚಿತ್ರ ಬಲವಂತ ಮಾಡಿದರೂ ಮೃದುವಾಗಿ ನಿರಾಕರಿಸಿ, ಕೂದಲುಗಳನ್ನು ಹಾಗೆಯೇ ಬಿಟ್ಟು, ತುದಿಯಲ್ಲಿ ರಬ್ಬರ್ ಬ್ಯಾಂಡ್ ಹಾಕಿಕೊಂಡಳು. ಶರೀರಕ್ಕೆಲ್ಲ ತೆಳುವಾಗಿ ಪೌಡರ್ ಲೇಪಿಸಿ ಕೊಂಡು, ಹಣೆಗೆ ಸ್ವಲ್ಪ ದೊಡ್ಡದಾಗೇ ಬೊಟ್ಟಿಟ್ಟುಕೊಂಡಳು.

ಅವಳಿಗೆ ಮೂವತ್ತು ವರ್ಷಗಳಾದರೂ, ಇನ್ನೂ ಮಕ್ಕಳಾಗದ್ದರಿಂದ ಮೈ ಬಿಗುವನ್ನು ಕಳೆದುಕೊಂಡಿರಲಿಲ್ಲ. ಶರೀರಾಕೃತಿಯ ಬಗ್ಗೆ ತುಂಬಾ ಕಾಳಜಿ ಇದ್ದವಳಾದ್ದರಿಂದ ಸಪೂರವಾಗಿರಲು ಎಲ್ಲ ರೀತಿಯ ಎಚ್ಚರಿಕೆ ವಹಿಸು ತ್ತಿದ್ದಳು ಆದಕ್ಕೇ ಅವಳಿಗೆ ಇಪ್ಪತ್ತೈದು ವರ್ಷಗಳೆಂದರೂ ಕೂಡ ಯಾರೂ ನಂಬುತ್ತಿರಲಿಲ್ಲ.

ಅಲಂಕಾಲ ಪೂರ್ತಿಯಾಗುವಷ್ಟರಲ್ಲಿ ಆರು ಗಂಟೆಯಾಯ್ತು. ರಾತ್ರಿ ಊಟಕ್ಕೋಸ್ಕರ ವಡೆ, ಪಾಯಸ ಮಾಡಿದರು. ಎಂಟು ಗಂಟೆಯ ಹೊತ್ತಿನಲ್ಲಿ ನರ ಕ್ಯಾರಿಯರ್‌ಗೋಸ್ಕರ ಬಂದ. ಸ್ತ್ರೀಯರು ಅವನಿಗೆ ಕ್ಯಾರಿಯರ್ ಕೊಟ್ಟು ಮಾತಿಗೆ ತೊಡಗಿದರು. ಗಂಡಸರು ಬೀದಿಯ ಜಗುಲಿಯ ಮೇಲೆ ಕುಳಿತು ಹರಟೆ ಕೊಚ್ಚುತ್ತಿದ್ದರು. ಚಲಪತಿ ಎಲ್ಲರಿಗಿಂತಲೂ ಹೆಚ್ಚು ಮಾತಾಡುತ್ತಿದ್ದ. ಮಾಮೂಲಿನಂತಾದರೆ ಅವನು ತುಂಬಾ ನಿಧಾನಿ. ಶಾಂತ ಸ್ವಭಾವದವನು. ಆದರೆ ಅವನಿಗೆ ಎರಡು ದೌರ್ಬಲ್ಯಗಳಿದ್ದವು. ಒಂದು-ಲಾಟರಿಯ ಹುಚ್ಚಾಗಿ ದ್ದರೆ, ಎರಡನೆಯದು ಭಜನೆಯ ಹುಚ್ಚು. ಈ ಎರಡು ವಿಷಯಗಳಲ್ಲಿ ಮಾತ್ರ ಅವನುತುಂಬಾ ಚುರುಕಾಗಿರುತ್ತಿದ್ದ. ತಮ್ಮ ಅತ್ತಿಗೆಗೆ ಬಂದ ಅವಕಾಶ ತಮ್ಮ ಹೆಂಡಂದಿರಿಗೆ ಬಂದಿಲ್ಲವೆಂದು ಚಿಂತಿಸುತ್ತಿದ್ದುದರಿಂದ ಅವನ ತಮ್ಮಂದಿರು ಸುಮ್ಮನೆ ಅವನ ಮಾತುಗಳನ್ನು ಕೇಳುತ್ತಿದ್ದರು. ಪರಮಾನಂದ ಮಾತ್ರ ಆಗಾಗ ತನ್ನ ಹಿರಿಮಗನತ್ತ ಹೆಮ್ಮೆಯಿಂದ ನೋಡುತ್ತಿದ್ದ.

ಬೀದಿಯಲ್ಲಿ ಹೋಗುವ ಸ್ತ್ರೀಯರೂ, ಪುರುಷರೂ ತಮ್ಮ ಮನೆಯತ್ತ ಈರ್ಷ್ಯೆಯಿಂದ ನೋಡುವುದನ್ನು ಅವರು ಗಮನಿಸುತ್ತಲೇ ಇದ್ದರು.

ಒಂಟಿಯಾಗಿ ಕುಳಿತಿದ್ದ ಲಹರಿಗೆ ಮಾತ್ರಯಾಕೋ ತಡಬಡಿಕೆಯುಂಟಾ ಗಿತ್ತು. ಮೊದಲ ಸಲಕನ್ಯಾಪೂರೆ ಕಳಚಿಕೊಳ್ಳಲಿರುವವಳಂತೆ ಸ್ವಲ್ಪ ಆನಂದ. ಸ್ವಲ್ಪ ಹೆದರಿಕೆ ಎರಡೂ ಬೆರೆತ ಭಾವನೆ ಮನಸ್ಸಿನಲ್ಲಿ ಸುಳಿದಾಡಿ ಮಾಯವಾಗು ತ್ತಿತ್ತು. ಆಗಾಗ ಕಿಟಕಿಯೊಳಗಿಂದ ಹೊರಗೆ ನೋಡುತ್ತಿದ್ದಳು.

ಬೆಳದಿಂಗಳು ಮೆಲ್ಲ ಮೆಲ್ಲಗೆ ದಟ್ಟವಾಗುತ್ತಿತ್ತು. ಒಂಭತ್ತು ಗಂಟೆಯು ಹೊತ್ತಿಗೆ ಅನಸೂಯಮ್ಮ ಬಂದು ಸೊಸೆಯನ್ನು ಹೊರಗೆ ಕರೆತಂದಳು. ನಾಚಿಕೆ ಪ್ರತಿಯೊಂದು ಅಂಗದಲ್ಲೂ ತುಂಬಿಕೊಂಡಿದೆಯೇನೋ ಎನ್ನುವಂತೆ ಲಹರಿಗೆ ಶರೀರ ಭಾರವೆಂದು ಭಾಸವಾಗುತ್ತಿತ್ತು. ಮನಸ್ಸು ಮಾತ್ರ ಹಗುರ ವಾಗಿ ಯಾವು ಯಾವುದೋ ಸುಂದರ ಲೋಕಗಳಲ್ಲಿ ಹಾರಾಡುತ್ತಿತ್ತು.

ಅವಳು ಬೀದಿಯೊಳಗೆ ಬಂದಳು. ಗಂಡಸರು ಜಗುಲಿ ಇಳಿದು ಹೋಗಿ ಬಾ ಎನ್ನುವಂತೆ ಮೆಲ್ಲಗೆ ನಗುತ್ತ ಕೈ ಬೀಸಿದರು. ಹೋಗಿ ಬರುತ್ತೇನೆನ್ನು ವಂತೆ ಅವಳು ಅತ್ತೆಗೂ, ಓರಗಿತ್ತಿಯರಿಗೂ ಹೇಳಿ ನಡೆಯತೊಡಗಿದಳು.

ಊರು ದಾಟಿದಳು. ಆಕಾಶದಲ್ಲಿನ ಚಂದ್ರ ತನಗೆ ದಾರಿ ತೋರಿಸಲು ಉರಿಯುತ್ತಿರುವ ಟಾರ್ಚ್‌ಲೈಟಿನಂತಿದ್ದ ನಕ್ಷತ್ರಗಳು ಸೀಮೆಸುಣ್ಣದಿಂದ, ಆಕಾಶದ ಕ್ಯಾನ್ವಾಸಿನ ಮೇಲೆ ಮನ್ಮಥ ರತಿ ಭಂಗಿಗಳನ್ನು ಬರೆದಿರುವಂತೆ ಬಿಳಿ ಮೋಡಗಳು ಕಂಡು ಬರುತ್ತಿದ್ದವು.

ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಗುಡ್ಡದ ಬಳಿಗೆ ಬಂದಳು. ಇನ್ನು ಮುಂದೆ ಹೋಗಲು ಕಾಲ, ಬರಲಿಲ್ಲ ನಾಚಿಕೆ. ಕಾಲುಗಳಿಗೆ ತೊಡರಿಕೊಳ್ಳು ತ್ತಿತ್ತು. ಕಣ್ಣು ಮೇಲೆತ್ತಿ ನೋಡಿದಳು. ಬೆಳದಿಂಗಳಿನಲ್ಲಿ ಗೋಪಾಲಕೃಷ್ಣನ ಭವನ, ಬೆಳದಿಂಗಳಿನ ಒತ್ತಡಕ್ಕೆ ಅರಳಿದ ಬಿಳಿ ಪದ್ಮದಂತಿತ್ತು. ಹೇಗೋ ಸಾವರಿಸಿಕೊಂಡು, ಮೇಲೆ ಹತ್ತೋಣವೆಂದು, ಸೀರೆ ನೆರಿಗೆಗಳನ್ನು ಮೆಲ್ಲಗೆ, ಮೃದುವಾಗಿ ಮೇಲೆತ್ತಿ ಹಿಡಿದುಕೊಂಡು, ಹೆಜ್ಜೆ ಮುಂದಿಡಲು ಹೋದಳು,

"ಸ್ವಾಗತ-ಸುಸ್ವಾಗತ" ಎನ್ನುವ ಧ್ವನಿ ಕೇಳಿ ಅವಳು ತಟಕ್ಕನೆ ನಿಂತು ಬಿಟ್ಟಳು. ನೆರಿಗೆಗಳನ್ನು ಗಾಬರಿಯಿಂದ ಕೆಳಗೆ ಬಿಟ್ಟು, ಕಕ್ಕಾಬಿಕ್ಕಿಯಾಗಿ ಅತ್ತಿತ್ತ ನೋಡಿದಳು. ಬೆಳದಿಂಗಳೊಳಗಿಂದ ನಡೆದು ಬಂದವನಂತೆ ಎದುರಿಗೆ ಗೋಪಾಲಕೃಷ್ಣ ಬಿಳಿ ಬಟ್ಟೆಗಳಲ್ಲಿ ಕಂಗೊಳಿಸುತ್ತಿದ್ದ.

ಅವಳ ಮೈ ಕಂಪಿಸಿತು. ತನ್ನಲ್ಲಿನ ಯಾವುದೋ ಕೆಲವು ಅವಯವಗಳು ಉಕ್ಕುತ್ತಿರುವಂತೆನ್ನಿಸಿತು. ಅವುಗಳನ್ನು ತಕ್ಷಣವೇ ಬಚ್ಚಿಟ್ಟುಕೊಳ್ಳಬೇಕೆಂದೆ ನಿಸಿ, ಎರಡು ಕೈಗಳನ್ನೂ ಎದೆಯ ಮೇಲಿಟ್ಟುಕೊಂಡಳು. ಅವಳ ವರ್ತನೆಗೆ ಅವನು ನಕ್ಕ. ಅವಳು ಮತ್ತಷ್ಟು ನಾಚಿಕೊಂಡು ಕೈಗಳನ್ನು ಅದುಮಿಕೊಂ ಡಳು. ಆಕಸ್ಮಾತ್ತಾಗಿ ಅವನು ಕಂಡು ಬಂದದ್ದರಿಂದ ಏನುಮಾತಾಡಬೇಕೆಂದು ಅವಳಿಗೆ ಹೊಳೆಯಲಿಲ್ಲ.

"ನಿನ್ನನ್ನು ನೋಡ್ತಿದ್ರೆ ಏನನ್ನಿಸ್ತಿದೆ. ಗೊತ್ತಾ" ಎಂದು ಅವನು ಕೇಳು ತ್ತಿದ್ದರೂ ಅವಳಿಂದ ತಲೆ ಎತ್ತಲಾಗಲಿಲ್ಲ. ಯಾವುದೋ ಸಂವೇದನೆ ಶರೀರವ

ವನ್ನಾವರಿಸಿ ತಿನಳುತ್ತಿರುವಂತೆನಿಸಿತು. ಅವನ ಮುಂದೆ ಮಾತಾಡದಿದ್ದುದರಿಂದ ಕಣ್ಣುಗಳನ್ನಷ್ಟೇ ಮೇಲೆತ್ತಿದಳು ಅದಕ್ಕೇ ಅಲ್ಲಿಯವರಗೆ ಮೌನವಾಗಿದ್ದವ ನಂತ ಅವನು ನುಡಿದ. "ಯಾರೋ ಒಬ್ಬ ಹೇಳಿದಂತೆ. ನನ್ನ ಕೈಯಲ್ಲಿ ಸ್ವಿಚ್ ಇದ್ದಿದ್ರೆ ಆ ಚಂದ್ರನನ್ನು ಆರಿಸಿ ಬಿಟ್ಟಿರುತ್ತಿದ್ದ. ಏಕೆಂದರೆ ಇಲ್ಲ, ನನ್ನೆದುರಿಗೇ ಒಂದು ಚಂದ್ರಬಿಂಬ ಇರುವುದ್ದರಿಂದ."

ಅವಳು ಥೇಟ್ ಬೆಳದಿಂಗಳಿನಂತೆಯೇ, ಹಾಯಾಗಿ ನಕ್ಕಳು. ಯಾಕೋ ಅವನು ಪರ ಪುರುಷನೆಂದು ಭಾಸವಾಗಲಿಲ್ಲ. ಪೂರ್ವ ಜನ್ಮದಲ್ಲಿ ವಿಧಿವಶಾತ್ತು ಬೇರ್ಪಟ್ಟು ಈಗ ಭೇಟಿಯಾಗಿರುವಂತಿತ್ತು. ಅವಳು ಮತ್ತಷ್ಟು ಕಣ್ಣರಳಿಸಿ, ಅವನ ಕಣ್ಣಪಾಪೆಗಳಲ್ಲಿ ತನ್ನ ರೂಪವಿದೆಯೇನೋ ಎಂದು ಹುಡುಕುತ್ತಿರು ವಂತೆ ಹಾಗೆಯೇ ಇದ್ದುಬಿಟ್ಟಳು.

ಅವನು ತುಂಬಾ ನಲಿಗೆಯಿಂದ ಕೈ ಹಿಡಿದುಕೊಂಡು "ನಾವು ಬಿಡದಿಗೆ ಹೋಗೋಣ್ವಾ?" ಎಂದ ಅವಳು ಆ ಸ್ಪರ್ಶಕ್ಕೆ ಮೆಲ್ಲಗೆ ಅದುರಿದಳು. ಮಾಧು ರ್ಯದ ಒತ್ತಡಕ್ಕೆ ಶರೀರ ಅರಳಿಕೊಳ್ಳುತ್ತಿರುವ ಅನುಭೂತಿ ಉಂಟಾಯ್ತು. ಅದನ್ನು ಮುಚ್ಚಿಟ್ಟುಕೊಳ್ಳಲೆನ್ನುವಂತೆ, ಅವನ ಕೈಯನ್ನು ಬೆರಳುಗಳಿಂದ ಬಿಗಿದು ಮುಂದೆ ಚಲಿಸಿದಳು.

ಯಾಕೋ ಅವಳಿಗೆ ತನ್ನ ಮೊದಲ ರಾತ್ರಿ ನೆನಪಾಯ್ತು. ಮುತ್ತೈದೆ ಯರು ತನ್ನನ್ನು ಗಂಡನ ಕೋಣೆಯೊಳಗೆ ತಳ್ಳುತ್ತಿರುವಾಗ, ಬೆಂಕಿಯನ್ನು ನೋಡಿ ಕುದುರೆ ಕೊಸರಾಡಿದಂತಾಗಿತ್ತು. ಮನಸ್ಸು ವಿಕಸಿಸುವ ಬದಲಾಗಿ ನೋವಿನಿಂದ ಮತ್ತಷ್ಟು ಮುದುಡಿ ಹೋಗಿತ್ತು. ಆ ದಿನ ಪರಿಸ್ಥಿತಿಗಳಿಂದಾ ಗಿಯೇ ಅವಳು ಆ ರೀತಿ ಕುಗ್ಗಿ ಹೋಗಿದ್ದಳು

ರಾಹುಕಾಲ, ಯಮಗಂಡ, ವರ್ಜ್ಯದಂತಹ ಅರ್ಥಹೀನವಾದವುಗಳನ್ನೆಲ್ಲ ನೋಡಿ, ಒಳ್ಳೆಯ ಮುಹೂರ್ತ ಬರಲು ಹನ್ನೊಂದು ಗಂಟೆಯಾಯ್ತು. ಅಷ್ಟು ಹೊತ್ತಿಗೆ ಮದುವೆ ಹಂದರದಲ್ಲಿ ಒಹಳಷ್ಟು ಜನ ಅಡ್ಡಾದಿಡ್ಡಿಯಾಗಿ ಮಲಗಿ ಕೊಂಡು ಯುದ್ಧಭೂಮಿಯನ್ನು ನೆನಪಿಗೆ ತರುತ್ತಿದ್ದರು.

ಮದುವೆಗಾದ ಖರ್ಚನ್ನೆಲ್ಲ ಲೆಕ್ಕ ಹಾಕಿ. ಒಂದು ಮೂಲೆಯಲ್ಲಿ ಬಂಧು ವಿನ ಬಳಿ ತನ್ನ ಸಂಕಟವನ್ನೆಲ್ಲ ಕಕ್ಕಿಕೊಳ್ಳುತ್ತಿದ್ದ ತಂದೆ, ಲಾಡು ಉಳಿದಿಲ್ಲ ವೆಂದೂ ಈಗ ಬೀಗರ ಮನೆಗೆ ಏನು ಕಳಿಸಬೇಕೆಂದು ದಿಗಿಲುಪಡುತ್ತಿದ್ದ ತಾಯಿ, ಮದುವೆಯಲ್ಲಿ ಮರ್ಯಾದೆಗಳು ಸರಿಯಾಗಿ ನಡೆದಿಲ್ಲವೆಂದು ಮದು ಮಗನ ಕಡೆಯವರು ಮಾಡುತ್ತಿದ್ದ ಕಿರಿಕಿರಿ ಇವೆಲ್ಲ ಅವಳ ಮೂಡ್‌ನ್ನು ಬಹ ಳಷ್ಟು ಹಾಳುಮಾಡಿಬಿಟ್ಟಿದ್ದವು.

ತನ್ನ ಹಿಂದೆಯೇ ಮುಚ್ಚಿಕೊಂಡ ಬಾಗಿಲನ್ನು ಹತಾಶೆಯಿಂದ ನೋಡು ತ್ತಿದ್ದುಬಿಟ್ಟಳು. ಅವಳು ಒಳಗೆ ಕಾಲಿಟ್ಟೊಡನೆಯೇ ಚಲಪತಿ ಓಡಿ ಬಂದು, "ಈ ಊರಿಗೆ ಪೇಪರ್ ಬರುತ್ತಾ?" ಎಂದು ಒಂದೇ ಉಸಿರಿನಲ್ಲಿ ಕೇಳಿದ್ದ.

"ಬರುತ್ತೆ"

"ಅಬ್ಬಾ!" ಎಂದು ಅವನು ಎದೆ ತುಂಬಾ ಉಸಿರೆಳೆದುಕೊಂಡು, "ಬರೋದಿಲ್ವೇನೋ ಅಂತ ಗಾಬರಿಯಾಗಿದ್ದೆ. ನಾಳೆ ತಮಿಳ್ನಾಡುಲಾಟರಿಡ್ರಾ. ನೆನ್ನೇನೇ ಮದುವೆಗೆ ಬರ್ತಾ ಪಟ್ಟಣದಲ್ಲಿ ಟಿಕೆಟ್ ತಗೊಂಡಿದ್ದೆ. ಈ ಟಿಕೆಟ್ ಗಳಿಗೆ ಪ್ರೈಜ್ ಗ್ಯಾರಂಟಿ" ಎಂದ. ಅವಳ ಪ್ರತಿಕ್ರಿಯೆಯನ್ನು ಗಮನಿಸದೆ, ಅವನು ಹಾಸಿಗೆಯ ಬಳಿಗೆ ಹೋಗಿ ದಿಂಬಿನ ಕೆಳಗೆ ಬಚ್ಚಿಟ್ಟಿದ್ದ ಲಾಟರಿ ಟಿಕೆಟ್ ಗಳನ್ನು ತಂದು ತೋರಿಸಿದ. ಈ ಸಲ ತಾನು ಯಾಕ ಒಂದೇ ಸಿರೀಸ್ ಟಿಕೆಟ್‌ಗಳನ್ನು ತೆಗೆದುಕೊಂಡನೆಂಬುದನ್ನು ತರ್ಕಬದ್ಧವಾಗಿ ಒಂದರ್ಧ ಗಂಟೆ ಕಾಲ ಹೇಳಿದ.

ಅವಳಿಗೆ ಪ್ರಜ್ಞೆ ತಪ್ಪುತ್ತಿರುವಂತೆನ್ನಿಸಿತು. ಬಲವಂತವಾಗಿ ನಿಗ್ರಹಿಸಿ ಕೊಂಡು ಜೀವವಿಲ್ಲದ ಶುಷ್ಕ ನಗುವೊಂದನ್ನು ಬೀರಿದಳು. ಇನ್ನು ನಿಲ್ಲಲು ತ್ರಾಣವಿಲ್ಲವೆನ್ನುವಂತೆ ಮಂಚದ ಮೇಲೆ ಕುಳಿತಳು. ಆಗ ಅವನಿಗೆ ಶೋಭನದ ಬಗ್ಗೆ ನೆನಪಾಯ್ತು. ಲಾಟರಿ ಟಿಕೆಟ್‌ಗಳನ್ನು ಜೇಬಿನಲ್ಲಿ ತುರುಕಿಕೊಂಡು ಅವಳ ಮೇಲೆ ಒರಗಿದ.

ಈ ಹಟಾತ್ ಪರಿಣಾಮಕ್ಕೆ ಅವಳು ಪೆಚ್ಚಾದರೂ, ಮರುಕ್ಷಣ ಸುಧಾ ರಿಸಿಕೊಂಡಳು, ಅಷ್ಟು ದಿನಗಳ ಕಾಲ ಹೃದಯದ ಕೋಣೆಯಲ್ಲಿ ಬಂಧಿಸಿಟ್ಟಿದ್ದ ಕೋರಿಕೆಗಳೆಲ್ಲವೂ ರೆಕ್ಕೆ ಬಿಚ್ಚಿ ವಾರಿವಾಳಗಳಂತೆ ಮೇಲೆ ಹಾರಿದವು. ಇನ್ನು ನಿಗ್ರಹಿಸಿಕೊಳ್ಳಲಾಗದೆ ಅವನ ಬೆನ್ನಿನ ಸುತ್ತಲೂ ಕೈ ಬಳಸಿ ಗಟ್ಟಿಯಾಗಿ ಅದುಮಿಕೊಂಡಳು. ಆ ಒತ್ತಡಕ್ಕೆ ಸ್ತನಗಳು ಮಧುರವಾಗಿ ನರಳಿದವು.

ಅವಳ ಮೇಲಿದ್ದ ಅವನು ಇಬ್ಬಂದಿಯಿಂದ ಮಿಸುಕಾಡುತ್ತ, "ಅಷ್ಟು ಗಟ್ಟಿಯಾಗಿ ತಬ್ಕೋ ಬೇಡ ಲಾಟರಿ ಟಿಕೆಟ್‌ಗಳು ನಲುಗಿ ಹೋಗುತ್ವೆ" ಎಂದ. ಅಷ್ಟೇ. ವಿದ್ಯುದಾಘಾತ ತಗುಲಿತೇನೋ ಎನ್ನುವಂತೆ ಅವಳು ಕೈ ತೆಗೆ ದಳು. ಕೋರಿಕೆಯಿಂದ ಜ್ವಲಿಸಿ, ಅನುಭವದಿಂದ ತಂಪುಗೊಳ್ಳಬೇಕೆಂದು ಕೊಂಡಿದ್ದ ಶರೀರ ತಿರುಗಿಬಿದ್ದು ಗಟ್ಟಿಯಾಗಿ ಸೆಟೆದುಕೊಂಡಿತು. ಇದಾವು ದನ್ನೂ ಗಮನಿಸದ ಅವನು, ಗಡಿಬಿಡಿಯಿಂದ ಪತ್ರಿಕೆಯಲ್ಲಿ ನಂಬರ್ ಹುಡುಕಿ ದಂತೆ ಆ ಕಾರ್ಯಕ್ರಮವನ್ನು ಮುಗಿಸಿ ಕೆಳಗಿಳಿದ ಜೇಬಿನಲ್ಲಿದ್ದ ಸಿಗರೇಟನ್ನು ಪುಸು ಪುಸು ಸೇದಿ ಪಕ್ಕಕ್ಕೆ ಬಂದು ಮಲಗಿಕೊಂಡ.

ಇನ್ನಾದರೂ ಹಾಯಾಗಿ ಮಾತಾಡೋಣವೆಂದು ಪಕ್ಕಕ್ಕೆ ತಿರುಗಿ ನೋಡಿದ ಅವಳಿಗೆ ಅವನು ನಿದ್ದೆ ಮಾಡುತ್ತಿರುವುದು ಕಾಣಿಸಿತು. ಮೊದಲ ರಾತ್ರಿಯ ಅನುಭವದ ಬಗ್ಗೆ ಸಿನಿಮಾಗಳಲ್ಲೂ, ಪುಸ್ತಕಗಳಲ್ಲೂ ವರ್ಣಿಸುವುದೆಲ್ಲಸುಳ್ಳೆಂಬು ದನ್ನು ತಿಳಿದುಕೊಂಡಳು . .

ಅದೆಲ್ಲ ಕಣ್ಣ ಮುಂದೆ ಸುಳಿದಾಡಿದಂತಾಗಿ ಆಗಿಗೂ, ಈಗಿಗೂ ಇರುವ ವ್ಯತ್ಯಾಸವನ್ನು ನೆನೆಸಿಕೊಳ್ಳುತ್ತಿದ್ದರೆ ಅವಳಿಗೆ ನಗು ಬಂತು. ಅವನನ್ನೇ ದಿಟ್ಟಿಸಿ ನೋಡುತ್ತ, "ಏನು ನಗ್ತಿದೀಯಾ" ಎಂದು ಕೇಳಿದ.

ಅವಳಿಗೆ ಅದನ್ನೆಲ್ಲ ಹೇಳಲು ಇಷ್ಟವಿರಲಿಲ್ಲ ... . . ಅದಕ್ಕೇ "ಏನಿಲ್ಲ" ಎಂದಳು.

"ನೀನೇನೋ ಮುಚ್ಚಿಡ್ತಿದೀಯ. ಈ ಗುಡ್ಡ ಹತ್ತಿದಾಗಿನಿಂದ ಇಳಿಯು ವವರೆಗೆ ಏನನ್ನೂ ಮುಚ್ಚಿಡಕೂಡದು. ಅದ೦ ಅಲ್ಲದೆ ಇಷ್ಟು ಕಾಲಯಾರಿಗೂ ಹೇಳಿರದ ಘಹನೆಗಳೆಲ್ಲವನ್ನೂ ಹೇಳಬೇಕು ಇಲ್ಲಾಂದ್ರೆ, ಅದೋ ಆ ಶೃಂಗಾರ ದೇವನಿಗೆ ಕೋಪ ಬರುತ್ತೆ."

ಇನ್ನು ಹೇಳದೆ ನಿರ್ವಾಹವಿಲ್ಲವೆನ್ನುವಂತೆ ಅವಳು ತನ್ನ ಮೊದಲ ರಾತ್ರಿಯ ಅನುಭವದ ಬಗ್ಗೆ ಹೇಳಿದಳು. ಎಲ್ಲವನ್ನೂ ಕೇಳಿದ ನಂತರ ಅವನು "ನಿನ್ನ ಗಂಡನಷ್ಟೇ ಅಲ್ಲ ಬಹಳಷ್ಟು ಜನರಿಗೆ ಮಲಗುವ ಕೋಣೆಯಲ್ಲಿಎಂತಹ ವಿಷಯಗಳನ್ನು ಮಾತಾಡಬೇಕೆಂಬುದು ಗೊತ್ತಿರುವುದಿಲ್ಲ. ಗಂಡ ಹೆಂಡತಿಯ ಕುಪ್ಪಸದ ಹುಕ್ ಬಿಚ್ಚುತ್ತ ತಾನು ಬೆಳಿಗ್ಗೆ ಮಾರುಕಟ್ಟೆಯಲ್ಲಿ ಎಷ್ಟು ಬುದ್ಧಿ ವಂತಿಕೆಯಿಂದ ಚೌಕಾಶಿ ಮಾಡಿ, ಬದನೇಕಾಯಿ ಕೆ.ಜಿ ಗೆ. ನಾಲ್ಕಾಣೆ ಕಡಿಮೆ ಮಾಡಿಸಿ, ತಗೊಂಡದ್ದನ್ನ ಹೇಳ್ತಾನೆ. ಅವಳು ಕೂಡ ಅವನಿಗಿಂತ ಕಡಿಮೆ ಇರೋದಿಲ್ಲ. ಅವನ ಎದೆಯ ಮೇಲಿನ ಕೂದಲುಗಳನ್ನು ತೀಡುತ್ತ, ತಾನು ಮಧ್ಯಾಹ್ನ ಮಾಡಿದ ಶೇಂಗಾ ಚಟ್ನಿಯನ್ನು ಅಕ್ಕಪಕ್ಕದಮನೆಯವರು ಎಷ್ಟು ಮೆಚ್ಚಿಕೊಂಡರೆನ್ನುವುದನ್ನು ಹೇಳುತ್ತಾಳೆ. ನಮ್ಮಲ್ಲಿನ ಬೆಡ್‌ರೂಮ್ ಮಾತು ಕತೆ ಹೀಗೆ ನಡೆಯುತ್ತೆ ಅದಕ್ಕೇ, ಗಂಡ ಹೆಂಡತಿಯರಿಗೆ ಅಲ್ಪಾವಧಿಯಲ್ಲೇ ಲೈಂಗಿಕ ಕ್ರಿಯೆ ರೋಟೀನಾಗಿಬಿಡುತ್ತೆ 'ಬೆಡ್ ಟೈಮ್ ಟಾಕ್' ಅಂದರೆ ಮನ ಸ್ಸನ್ನು ತಾಕುವಂತೆ, ಶರೀರವನ್ನು ಕೆರಳಿಸುವಂತ ಇರಬೇಕು. ರತಿಕಲೆಯಲ್ಲಿ ಬೆಡ್ ಟೈಮ್ ಟಾಕ್ ಕೂಡ ಒಂದು ಭಾಗ" ಎಂದ.

"ಬಹಳಷ್ಟು ಮನೆಗಳಲ್ಲಿ ಬೆಡ್‌ರೂಮ್ ಏ ಇರೋದಿಲ್ಲ." ಇನ್ನು ಬೆಡ್ ಟೈಮ್ ಟಾಕ್ ಎಲ್ಲೀದು? ಹಳ್ಳಿಯೂರುಗಳಲ್ಲಾದರಂತೂ ಮತ್ತೂ ಘೋರ. ಒಂದೇ ಮನೆಯಲ್ಲಿ ಇಡೀ ಸಂಸಾರ ಇರುತ್ತೆ. ಎಲ್ಲರೂ ಒಂದೇ ಕಡೆ ಮಲಗು

ತ್ತಾರೆ. ಯಾವಾಗಲೋ ಅಪರಾತ್ರಿ ಹೊತ್ತಿನಲ್ಲಿ ಮೂಡ್ ಬಂದಾಗ ಗಂಡ ಮೆಲ್ಲಗೆ ಎಲ್ಲರ ಕಣ್ತಪ್ಪಿಸಿ ಹೆಂಡತಿಯ ಪಕ್ಕಕ್ಕೆ ಬಂದು. ಬೆಕ್ಕು ಹಾಲು ಕುಡಿದಂತೆ ನಿಶ್ಶಬ್ದವಾಗಿ ತನ್ನ ಬಯಕೆ ತೀರಿಸಿಕೊಳ್ಳುತ್ತಾನೆ. ಇನ್ನು ಮಾತಾಡೋಕೆ ಅವಕಾಶ ಎಲ್ಲೀದು? ಮಾತು ಕೇಳಿಬಂದ್ರೆ ಯಾರಾದ್ರೂ ಏನ್ತಾರೇನೋ ಅನ್ನುವ ಭಯ ಅದಕ್ಕೆ ಮುಂಚಿತವಾಗಿ ನಮಸ್ಕಾರದ ಬಾಣಗಳಲ್ಲೇನೇ ಯುದ್ಧ ಶುರುವಾಗುತ್ತೆ. ಇದಕ್ಕೆ ಉದಾಹರಣೆಯಾಗಿ ಈ ನಡುವೆ ನಮ್ಮ ಮನೇಲಿ ನಡೆದ ಒಂದು ಘಟನೆ ಹೇಳ್ತೀನಿ" ಎನ್ನುತ್ತ ಪ್ರಾರಂಭಿಸಿದಳು.

"ನಮ್ಮ ಮನೆಯಲ್ಲಿ ಹೆಸರಿಗೆ ಮೂರು ಕೋಣೆಗಳಿದ್ರೂ ಅವ್ಯಾವತ್ತೂ ಖಾಲಿಯಾಗಿರೋದಿಲ್ಲ ಭತ್ತವೋ, ಗೋದಿಯೋ, ಎಳ್ಳೋ ಏನಾದರೊಂದು ತುಂಬಿರುತ್ತಾರೆ. ಅದಕ್ಕಾಗಿ ನಾವೆಲ್ಲ ಹಾಲ್‌ನಲ್ಲೇ ಮಲಕ್ಕೊಳ್ತಿದ್ವಿ.ಈನಡುವೆ ನಮ್ಮ ಮೈದುನ ಊರಿಗೆ ಹೋಗಿ ಬಂದ. ರಾತ್ರಿ ಎಂಟು ಗಂಟೆಗೆ ಬಂದೊಡನೆಯೇ ಬಾತ್‌ರೂಮಿನತ್ತ ನುಗ್ಗಿ, ಸರಸರನೆ ಸ್ನಾನ ಮುಗಿಸಿ, ತಟ್ಟೆ ಮುಂದೆ ಕುಳಿತುಕೊಂಡ. ಅವನು ಗಡಿಬಿಡಿಯೆಲ್ಲ ಯಾಕೆಂಬುದು ನಮಗೆ ಗೊತ್ತಾಗುತ್ತಲೇ ಇತ್ತು. ಊಟ ಮುಗಿದ ನಂತರ ಎಲ್ಲರೂ ಹಾಲ್‌ನಲ್ಲಿ ಮಲಗಿಕೊಂಡೆವು.

'ಈವತ್ತು ಕೂಡ ಹಾಲ್‌ನಲ್ಲೇ ಮಲಗೋದಾ .. ?' ಎಂದು ಅವನು ಮೆಲ್ಲಗೆ ತನ್ನ ಹೆಂಡತಿ ಚಿತ್ರಳನ್ನು ಕೇಳಿದರೂ, ಅದು ನಮಗೆ ಕೇಳಿಸಿತು.

'ಹೂಂ . ಎಲ್ಲ ಕೋಣೆಗಳೂ ತುಂಬಿಹೋಗಿವೆ ಎಲ್ಲರೂ ಹಾಲ್‌ನಲ್ಲೇ ಮಲಕ್ಕೋಬೇಕು!' ಎಂದು ತನ್ನ ಅಸಹಾಯಕತೆಯನ್ನುಸೂಚಿಸಿದಳು ಚಿತ್ರ.

ನಮ್ಮತ್ತೆ, ಮಾವ, ಓರಗಿತ್ತಿಯರು, ಗಂಡಸರು-ಎಲ್ಲರೂ ಹಾಲ್‌ನಲ್ಲಿ ಮಲಗಿದೆವು. ಒಂದು ಹೊತ್ತಿನಲ್ಲಿ ನಮ್ಮ ಮೈದುನ ತನ್ನ ಹೆಂಡತಿಯ ಬಳಿಗೆ ಸರಿದ. ಬಹಳ ದಿನಗಳ ನಂತರ ಮನೆಗೆ ಬಂದಿದ್ದನಾದ್ದರಿಂದ,ತುಂಬಾ ಕೋರಿಕೆಯಲ್ಲಿದ್ದನೇನೋ ಮಲಗಿಕೊಂಡ ಅರ್ಧ ಗಂಟೆಗೇ ಅವಳ ಮೇಲೆ ಬಿದ್ದ. ಚಿತ್ರ ತುಂಬಾ ಬುದ್ಧಿವಂತಿಕೆಯಿಂದ ಗಂಡ ಕಂಡುಬರದಂತೆ ದುಪ್ಪಟ್ಟಿ ಹೊದಿಸಿದಳು. ನಿಶ್ಶಬ್ದವಾಗಿ ಅವನು ತನ್ನ ಕೋರಿಕೆ ತೀರಿಸಿಕೊಳ್ಳುತ್ತಿದ್ದ. ಆದರೆ ಸ್ವಲ್ಪ ಹೊತ್ತಿಗೆ ನಿಶ್ಶಬ್ದ ಪಾಲಿಸುವದು ಅವನಿಂದಾಗಲಿಲ್ಲ ಏದುಸಿರು, ಉಚ್ಛ್ವಾಸ ನಿಶ್ವಾಸ ಕೂಡ ಜಾಸ್ತಿಯಾಯ್ತು. ಇಂತಹವು ಮನೆಗಳಲ್ಲಿ ಮಾಮೂಲೇ ಆದ್ರಿಂದ, ನಾವು ಪಕ್ಕಕ್ಕೆ ತಿರುಗಿ ಮಲಗಿ ನಿದ್ದೆ ಮಾಡುತ್ತಿರುವವರಂತೆ ನಟಿಸುತ್ತಿದ್ದವು.

ಆ ಸುದ್ದಿಗೆ ನಮ್ಮತ್ತೆ ಎದ್ದಳು. 'ಥೂ ಥೂ ದರಿದ್ರ ಇಲಿಗಳು.ಕಣ್ತುಂಬ

ನಿದ್ದೆ ಮಾಡೋದಿಕ್ಕೂ ಬಿಡೋದಿಲ್ಲ' ಎಂದು ಬೈಯತೊಡಗಿದಳು. ಸದ್ದು ನಿಂತುಹೋಯ್ತು .. ಚಿತ್ರ ತನ್ನ ಗಂಡನಿಗೆ ಮೆಲ್ಲಗೆ ಬೈಯ್ದದ್ದೂ ಕೇಳಿಸು ತ್ತಿತ್ತು. ನಮ್ಮತ್ತೆ, ಇಡೀ ಇಲಿಗಳ ಕುಲವೆಲ್ಲ ನಾಶವಾಗಲೆಂದು ಶಾಪ ಹಾಕುತ್ತ ತಿರುಗಿ ನಿದ್ದೆ ಮಾಡತೊಡಗಿದಳು. ಮತ್ತೈದು ನಿಮಿಷಗಳ ನಂತರ ಸದ್ದು ತಿರುಗಿ ಪ್ರಾರಂಭವಾಯ್ತು.

ಈ ಸಲ ಅತ್ತೆಯ ಬದಲು ಮಾವ ಎದ್ದ. 'ಈ ಹೆಗ್ಗಣಗಳ ಕಾಟ ಸಾಕಾಗಿ ಹೋಯ್ತು. ಎಂಡ್ರಿನ್ ಹಾಕಿ ಕೊಂದ್ರೂ ಪಾಪ ಬರೋದಿಲ್ಲ' ಎಂದು ತನ್ನ ಸಿಟ್ಟನ್ನೆಲ್ಲ ಪ್ರಕಟಿಸಿದ. ಈ ಮಾತಿಗೆ ಅತ್ತೆ ಎದ್ದು 'ಅವು ಹೆಗ್ಗಣಗಳಲ್ಲ, ಇಲಿಗಳೆ'ಂದರೆ, "ಅಲ್ಲ, ಅವು ಹೆಗ್ಗಣಗಳೇ" ಎಂದು ನಮ್ಮ ಮಾವ ಇಬ್ಬರೂ ವಾದ ಮಾಡತೊಡಗಿದರು. ಎಷ್ಟು ಹೊತ್ತಾದರೂ ಅವರ ವಾದ ನಿಲ್ಲಲಿಲ್ಲ. ಅದರಿಂದಾಗಿ ನಮ್ಮ ಇನ್ನೊಬ್ಬ ಓರುಗಿತ್ತಿ ಪದ್ಮಳಿಗೆ ತಿಕ್ಕಲೆದ್ದು ಬಿಟ್ಟಿತು. ತಟಕ್ಕನೆ ಎದ್ದು ಕುಳಿತು, ಅವು ಇಲಿಗಳಲ್ಲ ಹೆಗ್ಗಣಗಳಂತೂ ಅಲ್ವೇ ಅಲ್ಲ. ಆ ಸದ್ದು ಮಾಡ್ತಿರೋದು ನಿಮ್ಮ ಕಿರಿ ಮಗ. ಏನು, ಎತ್ತ ಅತ್ತ ಕೇಳ್ದೆ ಬಿದ್ಕೊಳ್ಳಿ' ಎಂದುಬಿಟ್ಟಳು.

"ಪಾಪ! ನಮ್ಮ ಮೈದುನ ಹೆಂಡತಿಯ ಮೇಲಿಂದ ಇಳಿದು ಮೊಣಕಾಲು ಗಳ ಮೇಲೆ ತೆವಳುತ್ತ ಹೋಗುವುದು ಕಂಡು ಬಂತು."

ಗೋಪಾಲಕೃಷ್ಣ ಬಿದ್ದು ಬಿದ್ದು ನಗತೊಡಗಿದ. ಲಹರಿಯೂ ಅವನೊಂ ನಿಗೆ ದನಿಗೂಡಿಸಿದಳು. ಸ್ವಲ್ಪ ಹೊತ್ತಾದ ನಂತರ, "ನಿಜ! ಇಂತಹ ತೊಡಕು ಗಳಿವೆ. ನಾನು ಹೇಳೋದು ಬೆಡ್‌ರೂಮಿದ್ದೂ ಬೆಡ್‌ಟೈಮ್ ಟಾಕ್ ಬಗ್ಗೆ ಗೊತ್ತಿಲ್ದಿರೋರ ಬಗ್ಗೆ... " ಎಂದು.

"ಅಂತಹವರೂ ಸಾಕಷ್ಟು ಜನರಿದ್ದಾರೆ ಇದಕ್ಕೆ ಒಳ್ಳೇ ಉದಾಹರಣೆ ಯೆಂದ್ರೆ ನಮ್ಮ ಚಿಕ್ಕಪ್ಪನ ಮಗ ಸುಧಾಕರ್" ಎನ್ನುತ್ತ ಲಹರಿ ಮತ್ತೊಂದು ಘಟನೆ ಹೇಳತೊಡಗಿದಳು.

"ನನ್ನ ತವರು ಮನೆ ಮಾಧವೀಮಾಲ. ನಮ್ಮ ಮನೆಯ ಪಕ್ಕದಲ್ಲೇ ನಮ್ಮ ಚಿಕ್ಕಪ್ಪನ ಮಗ ಸುಧಾಕರ್ ಇರುತ್ತಿದ್ದ. ಅವನಿಗೆ ಸಾಲ ಮಾಡೋ ದೊಂದ್ರೆ ತುಂಬಾ ಭಯ. ಸಾಲದವನು ಮನೆಗೆ ಬರಕೂಡದೆನ್ನುವುದು ಅವನ ತತ್ವ. ಅಂತಹವನು ಅನಿವಾರ್ಯವಾಗಿ ತನ್ನ ಮದುವೆಗೆ ಪಕ್ಕದಲ್ಲೇ ಪಟ್ಟದಲ್ಲಿ ರುವ ಶೆಟ್ಟಿಯ ಬಳಿ ಇಪ್ಪತ್ತು ಸಾವಿರ ಸಾಲ ಮಾಡಬೇಕಾಗಿ ಬಂತು. ವರ ದಕ್ಷಿಣೆ ದುಡ್ಡಿನಲ್ಲಿ ಅದನ್ನು ತೀರಿಸಬೇಕೆಂದುಕೊಂಡಿದ್ದನಾದರೂ, ಏನೇನೋ ಅನಿವಾರ್ಯತೆಗಳೊದಗಿ ಬಂದು ಅದು ಸಾಧ್ಯವಾಗಲಿಲ್ಲ.

ಅವನ ಹೆಂಡತಿ ಕಲಾವತಿ ಸಂಸಾರಕ್ಕೆ ಬಂದಳು. ಹೊಸ ಹೆಂಡತಿ, ಹೊಸ ಸಂಸಾರಕ್ಕಿಂತಲೂ ಅವನಿಗೆ ಪದೇಪದೇ ಸಾಲವೇ ನೆನಪಾಗುತ್ತಿತ್ತು. ಅದಕ್ಕೇ, ಬೆಡ್‌ರೂಮಿನಲ್ಲಿ ಕೂಡ, ಹೆಂಡತಿಯೊಂದಿಗೆ ಸರಸವಾಡುವುದರ ಬದಲಾಗಿ ಸಾಲದ ಬಗ್ಗೆ ಅದನ್ನು ತೀರಿಸಲು ತಾನು ಏನು ಉಪಾಯ ಮಾಡು ತ್ತಿರುವನೆಂಬುದರ ಬಗ್ಗೆ ಹೇಳುತ್ತಿದ್ದ. ಇದು ಒಂದೆರಡು ದಿನಗಳಾದರೆ ಪರ ವಾಗಿರಲಿಲ್ಲ. ಪ್ರತಿದಿನವೂ ಇದೇ ಗೋಳಾದ್ದರಿಂದ, ಕಲಾವತಿ ಬೆಡ್‌ರೂಮ್ ಅಂದ್ರೇನೇ ನಡುಗುತ್ತಿದ್ದಳು.

ಒಂದು ದಿನ ಅವಳು ನನ್ನ ಬಳಿಗೆ ಬಂದು "ಸಾವಿರ, ಲಕ್ಷಗಟ್ಟಲೆ ಸಾಲ ಇರೋರನ್ನ ನೋಡಿದೀನಾದ್ರೂ, ನಿಮ್ಮ ತಮ್ಮನಂತಹವನನ್ನು . . . ಈ ಪ್ರಪಂಚದಲ್ಲಿ ನೋಡಿಲ್ಲ.ಜಡೆಯಲ್ಲಿ ಹೂವಿಡುತ್ತಿದ್ರೂ,ಕೊನೆಗೆ ಲಂಗದ ಲಾಡಿ ಎಳೀತ್ತಿದ್ದಾಗ಼್ೂ ಸಾಲದ್ದೇ ಮಾತು ಥೂ ಥೂ! ತವರು ಮನೆಗೆ ಹೋಗಿ ಆ ಇಪ್ಪತ್ತು ಸಾವಿರ ತಗೊಂಬಂದು ಮುಖಕ್ಕೆಸೆಯ್ತೀನೇ . ಬೇಕೂಂದ್ರೆ ಅಲ್ಲಿನ ಪರಿಸ್ಥಿತಿ ಚೆನ್ನಾಗಿಲ್ಲ" ಎಂದು ತನ್ನ ನೋವನ್ನೆಲ್ಲ ಹೇಳಿಕೊಂಡಳು.

"ಮತ್ತೇನು ದಾರಿ?"

"ಅದೇ ಆಲೋಚಿಸ್ತಿದೀನಿ" ಎಂದು ನುಡಿದು ಗಂಭೀರವಾಗಿ ಹೊರಟು ಹೋದಳು. ಮರುದಿನವೇ ತಾನು ತವರು ಮನೆಗೆ ಹೋಗುತ್ತಿರುವುದಾಗಿಯೂ, ವಾರದ ನಂತರ ತಿರುಗಿ ಬರುತ್ತೇನೆಂದೂ ಗಂಡನೊಂದಿಗೆ ಹೇಳಿ ಹೊರಬಿದ್ದಳು. ಸಾಲ ತೀರಿಸುವ ನಿರ್ಧಾರದಿಂದಲೇ ಅವಳು ಹೋಗುತ್ತಿರುವಳೆಂದು ನನಗರ್ಥ ವಾಯ್ತು.

ಸರಿಯಾಗಿ ಒಂದು ವಾರದ ನಂತರ, ಮಧ್ಯಾಹ್ನದ ಹೊತ್ತು ನಾನು ಸುಧಾಕರ್ ಮನೆಯಲ್ಲಿರುವಾಗ ಒಬ್ಬ ವ್ಯಕ್ತಿ ಬಂದ. ಆಗ ನಾನು ಸುಧಾಕರ ನಿಗೋಸ್ಕರ ಅಡಿಗೆ ಮಾಡುತ್ತಿದ್ದೆ. ಆ ವ್ಯಕ್ತಿಯನ್ನು ನೋಡುತ್ತಲೇ ಸುಧಾ ಕರ್ ನಡುಗಿ ಬಿಟ್ಟು, ವಿಪರೀತ ಮರ್ಯಾದೆ ತೋರಿಸಿದ. ವರಾಂಡದ ಕಟ್ಟೆ ಯನ್ನು ಟವೆಲ್ಲಿನಿಂದ ಒರೆಸಿ ಕುಳಿತುಕೊಳ್ಳೆಂದ. ನಾನು ಬಾಗಿಲ ಬಳಿ ನಿಂತು ನೋಡುತ್ತಿದ್ದರೆ, ಅವನು ನನ್ನ ಬಳಿಗೆ ಬಂದು, 'ಆತನೇ ಶೆಟ್ಟಿ. ನಾನು ಬಾಕಿ ಇರೋದು ಆತನಿಗೇ' ಎಂದು ಹೇಳಿದ.

ಅಷ್ಟರಲ್ಲಿ ಶೆಟ್ಟಿ ಕರೆದ. ನಮ್ಮವನು ಹೋಗಿ ಆತನೆದುರಿಗೆ ವಿನಯದಿಂದ ನಿಂತುಕೊಂಡ. ಶೆಟ್ಟಿ ಸಾಲ ತೀರಿಸದಿದ್ದುದಕ್ಕೆ ಅವನನ್ನು ಜಾಡಿಸುತ್ತಾನೆಂದು ಕೊಂಡೆ. ಆದರೆ ಅಂತಹುದೇನೂ ಆಗಲಿಲ್ಲ. ಬದಲಾಗಿ ಶೆಟ್ಟಿಯ ಮುಖ ಪ್ರಸನ್ನವಾಗಿತ್ತು.

ಸುಧಾಕರ್ ಉಗುಳು ನುಂಗುತ್ತ, 'ನಿಮ್ಮ ಸಾಲ ಬೇಗದಲ್ಲೆ . .' ಎಂದು ಏನೋ ಹೇಳುತ್ತಿರುವಾಗ ಶೆಟ್ಟಿ ನಡುವೆ ಬಾಯಿ ಹಾಕಿದ. 'ಸಾಲದ ಬಗ್ಗೆ ಮರೆತುಬಿಡು. ನೀನು ನನ್ನ ಸಾಲತೀರುಗಿ ಕೊಡಬೇಕಿಲ್ಲ.ಹೌದಯ್ಯ ಸುಧಾಕರ್ ನಿನ್ನಂತಹ ಒಳ್ಳೇ ವ್ಯಕ್ತಿಯ ಮದುವೆಗೆ. ಕೊಟ್ಟ ದುಡ್ಡು ಇಸ್ಕೊಳ್ಳೋ ದಿಕ್ಕೆ ಮನಸ್ಸಾಗ್ತಿಲ್ಲ ನಾನೋ ಒಬ್ಬಂಟಿ. ಹೆಂಡತಿ, ಮಕ್ಕಳು ಮರಿ, ಇಲ್ದಿರೋನು ಇರೋ ದುಡ್ಡನ್ನೇನು ಮಾಡ್ಕೋಬೇಕು. ಅಂತ ಗೊತ್ತಾಗ್ತಿಲ್ಲ?

ನಮ್ಮವನು ಹಿಗ್ಗಿನಿಂದ ಉಬ್ಬಿ, ತಬ್ಬಿಬ್ಬಾದ 'ನೀವು ಹೇಳ್ತಿರೋದು'

'ಬೇಡ ಇನ್ನೇನೂ ಮಾತಾಡ್ಬೇಡ. ಇದೋ, ನೀನು ಬರ್ಕೊಟ್ಟಿರೋ ಪ್ರಾಮಿಸರಿ ನೋಟ್ ಹರಿದು ಹಾಕ್ತಿದೀನಿ.' ಎಂದು ಜೇಬಿನಿಂದ ಕಾಗದವನ್ನು ಹೊರತೆಗೆದು, ತುಂಡು ತುಂಡಾಗಿ ಹರಿದು ಕೆಳಗೆ ಹಾಕಿದ.

ನಮ್ಮವನ ಆನಂದ ವರ್ಣಿಸಲಸದಳ. ಹಿಗ್ಗಿನಿಂದ ಉಬ್ಬುತ್ತ, 'ಶೆಟ್ಟಿಯವರೆ' ಏಳಿ. ಯಾವಾಗ ಹೊರಟಿದ್ರೋ ಏನೋ ಊಟ ಮಾಡುವಿರಂತೆ' ಎಂದು ಕರೆದ.

'ಊಟಗೀಟ ಏನೂ ಬೇಡ. ಒಂದು ಚಾಪೆ ದಿಂಬು ಕೊಡ್ಸು, ನಿನಗೆ ಪುಣ್ಯ ಬರುತ್ತೆ, ವಾರದಿಂದ ಕಣ್ಣಿಗೆ ನಿದ್ದೆ ಇಲ್ಲ' ಎಂದು ಆಕಳಿಸಿದ ಶೆಟ್ಟಿ. ಸುಧಾಕರ್ ಚಾಪೆ, ದಿಂಬು ಕೊಟ್ಟ ಎಷ್ಟು ನಿದ್ದೆ ಗೆಟ್ಟಿದ್ದನೋ ಹಾಸಿಗೆಗೆ ಬೆನ್ನು ಕೊಡುತ್ತಲೇ ಶೆಟ್ಟಿ ಗೊರಕೆ ಹೊಡೆಯತೊಡಗಿದ

ನೆಕ್ಸ್ಟ ಟ್ರಿಪ್ ಬಸ್ಸಿನಲ್ಲಿ ಕಲಾವತಿ ಬಂದಳು. ಬರುತ್ತಿದ್ದಂತೆಯೇ 'ಅತ್ತಿಗೆ! ನಾನು ಮಲಕ್ಕೊತೀನಿ. ಒಂದು ವಾರದಿಂದ ನಿದ್ದೆ ಇಲ್ಲ. ನಮ್ಮಜಮಾನರಿಗೆ ನೀನೇ ಬಡಿಸಿಬಿಡು, ಎನ್ನುತ್ತ ಅವಳೂ ಮಲಗಿಬಿಟ್ಟಳು.

"ನಮ್ಮವನ ಸಾಲ ಹೇಗೆ ತೀರಿತೂಂತ ನನಗಾಗ ಅರ್ಥವಾಯ್ತು."

ಎಲ್ಲವನ್ನೂ ಕೇಳಿದ ಗೋಪಾಲಕೃಷ್ಣ ಹೂ ಬೆಳದಿಂಗಳು ಚೆಲ್ಲಿದಂತೆ ನಕ್ಕ. ಆ ನಗು ಲಹರಿಗೆ ತುಂಬಾ ಚೆನ್ನೆನಿಸಿತು ಅವನು ಅವಳ ಭುಜದ ಮೇಲೆ ಕೈಹಾಕಿ, "ನಿಮ್ಮ ಚಿಕ್ಕಪ್ಪನ ಮಗನ ಸಾಲ ಆ ರೀತಿತೀರಿತೆಂದಾಯ್ತು"ಎಂದು ಅದನ್ನೆಲ್ಲ ನೆನೆಸಿಕೊಂಡು, ಮತ್ತೆ ನಕ್ಕ. ಇಬ್ಬರೂ ಬೆಟ್ಟ ಹತ್ತುತ್ತಿದ್ದರು.

"ಈ ಬೆಳದಿಂಗಳಿನಲ್ಲಿನಿನ್ನಂತಹ ಸುಂದರ ಹೆಣ್ಣಿನೊಂದಿಗೆ ನಡೆಯುವುದು ಮಹತ್ತರ ಅನುಭವ" ಎಂದ ಗೋಪಾಲಕೃಷ್ಣ.

ಅವಳಲ್ಲಿ ಹೆಮ್ಮೆಯಂತಹ ಭಾವನೆಯುಂಟಾಯ್ತು.

"ನಿನ್ನನ್ನು ನಿನ್ನ ಹೆಸರಿನಿಂದಲ್ಲದೆ ಮುದ್ದಿನ ಹೆಸರಿನಿಂದ ಕರೀಬೇಕೂಂತಿದ್ದ. "ಅಮೆರಿಕಾದಲ್ಲಿ ಯುವಕರು ತಮ್ಮ ಸ್ನೇಹಿತೆಯರನ್ನು ಮುದ್ದಿನ 'ಹನೀ'

ಎಂದು ಕರೆಯುತ್ತಾರಂತೆ" ಎಂದ ಗೋಪಾಲಕೃಷ್ಣ.

"ನನ್ನನ್ನ ಯಾವ ಹೆಸರಿನಿಂದ ಕರೀತೀರಿ?"

"ಕಿನ್ನರಿ"

ಅವಳ ಹೃದಯದಲ್ಲೆಲ್ಲೋ ಮೂಡಿದ ಕಿರು ಕಂಪನ, ಪ್ರತಿಯೊಂದು ಅವಯುವಕ್ಕೂ ಹರಡಿ, ಉತ್ತುಂಗ ತರಂಗವಾಗಿ, ಅಲುಗಾಡಿಸಿಬಿಟ್ಟಿತು. ತನ್ನ ಪ್ರೇಮವನ್ನೆಲ್ಲ ತಿಳಿಯಪಡಿಸಲು ಭುಜದ ಮೇಲಿದ್ದ ಅವನ ಕೈಮೇಲೆ ಕೈ ಹಾಕಿ ಬಲವಾಗಿ ಒತ್ತಿದಳು. ಅವನು ಅವಳ ಮೇಲೆ ಬಾಗಿ ಮುತ್ತಿಟ್ಟ. ಅವಳು ಅನಾಲೋಚಿತವಾಗಿ ಕಣ್ಣು ಮುಚ್ಚಿಕೊಂಡಳು. ಮುತ್ತಿಡುವುದು ಮುಗಿದ ನಂತರವೂ ಕಣ್ಣು ತೆರೆಯಲಿಲ್ಲ. ತನ್ನ ತುಟಿಗಳಮೇಲೆಅವನತುಟಿಗಳು ಎಬ್ಬಿಸಿದ ಸಂಚಲನೆ ರಕ್ತದಲ್ಲಿ ಹರಿದಾಡುತ್ತಿದೆ ಎನ್ನುವ ಭಾವನೆ ಉಂಟಾಯ್ತು. ಕಣ್ಣು ತೆರೆದರೆ ಆ ಭಾವನೆ ಅದೃಶ್ಯವಾಗಿ ಬಿಡುತ್ತದೇನೋ ಎನ್ನುವ ಸಂದೇಹದಿಂದ ಹಾಗೆಯೇ ಇದ್ದುಬಿಟ್ಟಳು.

ಅವಳಿಗೆ ಅದು ಕಳೆದ ಮೂರುವರ್ಷದಲ್ಲಿ ಅನುಭವಿಸಿದ ಮೊದಲ ಮುತ್ತು ಎಂದು ಭಾಸವಾಗಿದ್ದು ಅವಳ ಗಂಡನ ದುರದೃಷ್ಟ.

ಇಬ್ಬರೂ ತಿರುಗಿ ನಡೆಯತೊಡಗಿದರು. ಬೆಟ್ಟದ ತುದಿ ತಲುಪಿದರು. ನರ ಭವನಕ್ಕೂ, ದೇವಾಲಯಕ್ಕೂ ನಡುವೆ ಹಾಸಿಗೆ ವ್ಯವಸ್ಥೆ ಮಾಡಿದ್ದ. ಅವನು ಭವನದೊಳಗೆ ನಿದ್ದೆ ಮಾಡುತ್ತಿದ್ದ.

"ಇದೇ ನಮ್ಮ ಹಾಸಿಗೆ" ಎನ್ನುತ್ತ ಗೋಪಾಲಕೃಷ್ಣ ಹಾಸಿಗೆಯ ಮೇಲೆ ಕುಳಿತುಕೊಂಡು, ಲಹರಿಯ ಕೈ ಹಿಡಿದೆಳೆದ. ಅವಳು ತೂರಾಡಿ ಅವನ ಮೇಲೆ ಬಿದ್ದಳು. ಅವನು ಎಷ್ಟು ಲಾಘವದಿಂದ ಎಳೆದನೆಂದರೆ ಅವಳ ಸ್ತನಗಳು ಸರಿಯಾಗಿ ಅವನ ಎದೆಗೆ ಒತ್ತಿಕೊಂಡವು. ಬೆಳದಿಂಗಳಲ್ಲಿನ ಲಾಲಿತ್ಯ ವನ್ನೂ, ಚಂದ್ರ ಶಿಲೆಯಲ್ಲಿನ ಕಾಠಿಣ್ಯವನ್ನೂ ಒದಗಿಸಿದಂತೆ, ಅವನಿಗೆ ಎರಡು ರೀತಿಯ ಭಾವನೆಗಳು ಏಕಕಾಲದಲ್ಲಿ ಉಂಟಾದುದಕ್ಕೆ ಕಾರಣ–ಅವಳ ಎದೆ ಮಾಡಿದ ಇಂದ್ರಜಾಲ.

ಅವನು ಅವಳನ್ನು ಮತ್ತಷ್ಟು ಹತ್ತಿರಕ್ಕೆಳೆದುಕೊಂಡು, ಮೂಗಿನ ಮೇಲೆ ಬೆರಳಿನಿಂದ ತೀಡುತ್ತ, "ರೋಮನ್ ಶಿಲ್ಪ ಕಲೆಯನ್ನು ನೆನಪಿಗೆ ತರುತ್ತಿದೆ" ಎಂದು, ತುಟಿಗಳ ಮೇಲೆ ತುಟಿಯಾನಿಸಿ, "ಫ್ರಾನ್ಸನಲ್ಲಿನ ದ್ರಾಕ್ಷಿ ಹಣ್ಣಿನ ತೋಟಗಳು," ಎಂದು ಪ್ರಶಂಶಿಸಿ, ಕೊರಳಿನುದ್ದಕ್ಕೂ ನಾಲಿಗೆಯಿಂದ ಸವರುತ್ತ, "ಭಾರತೀಯ ದೇವಾಲಯದ ಗೋಪುರ" ಎಂದು ಹೊಗಳಿ,

ಹಾಗೆಯೇ ಕೆಳಗೆ ಜಾರಿ ವಕ್ಷಸ್ಥಳಕ್ಕೆ ತಲೆ ಒತ್ತಿ, "ಈಜಿಪ್ಟಿನ ಪಿರಮಿಡ್ಡು ಗಳು" ಎಂದ.

ತನ್ನ ಸೌಂದರ್ಯದಲ್ಲಿ ಪ್ರಪಂಚವನ್ನು ನೋಡುತ್ತಿರುವ ಅವನಿಗೆ ತನ್ನ ಸೌಂದರ್ಯವನ್ನು ಮತ್ತಷ್ಟು ತೋರಿಸಬೇಕೆನ್ನುವ ಆಕಾಂಕ್ಷೆಯಿಂದ. ಅನಾಲೋಚಿತವಾಗಿಯೆನ್ನುವಂತೆ ಸೊಂಟಕ್ಕಂಟಿಕೊಂಡಿದ್ದ ಸೀರೆಯನ್ನು ಸರಿಸಿದಳು.

"ಅಮೆರಿಕನ್ ಯುವತಿಯರು ತಮ್ಮ ಶರೀರವನ್ನು ಯುವಕರು ಭೂಗೋಳದೊಂದಿಗೆ ಹೋಲಿಸುವುದನ್ನು ಇಷ್ಟಪಡುತ್ತಾರಂತೆ. 'ನಿನ್ನ ಸೊಂಟ ಥೇಮ್ಸ್ ನದಿಯಂತಿದೆ,' 'ನಿನ್ನ ನಗು ನಯಾಗರಾ ಜಲಪಾತದಂತಿದೆ.' ಹೀಗೆ. ಅದೇ ಫ್ರೆಂಚ್ ಯುವತಿಯರು ತಮ್ಮ ಅವಯವಗಳನ್ನು ತಿನಿಸುಗಳೊಂದಿಗೆ ಹೋಲಿಸಿದರೆ ಸಂತೋಷಪಡುತ್ತಾರಂತೆ ಇನ್ನು ಭಾರತೀಯ ಯುವತಿಯರು ತಮ್ಮನ್ನು ಹೂವುಗಳೊಂದಿಗೆ ಹೋಲಿಸಿ ವರ್ಣಿಸಿದರೆ ಆನಂದಪಡುತ್ತಾರಂತೆ" ಎಂದ ಗೋಪಾಲಕೃಷ್ಣ.

"ಅದಕ್ಕೇ ಏನೋ, ಕಾವ್ಯ, ಪ್ರಬಂಧಗಳಲ್ಲಿ ಅಂತಹ ವರ್ಣನೆಗಳನ್ನು ತುಂಬಿಬಿಟ್ಟಿದ್ದಾರೆ."

"ಮತ್ತೆ ನಿನಗೆಂತಹ ವರ್ಣನೆಗಳೆಂದರೆ ಇಷ್ಟ . .. . ." ಎಂದು ಕೇಳಿದ ಗೋಪಾಲಕೃಷ್ಣ.

"ನೀನು ಏನು ಹೇಳಿದ್ರೂ ನನಗೆ ಚೆನ್ನಾಗಿರುತ್ತೆ" ಎಂದಳು. ಲಹರಿ ಅವನ ಮಡಿಲಲ್ಲಿ ಕೈ ಇಟ್ಟು, ಅವಳ ಉದ್ದನೆಯ ಬೆರಳುಗಳು ಅವನನ್ನು ಆಕರ್ಷಿಸಿದವು. ಅವುಗಳನ್ನು ನೇವರಿಸಿ ನುಡಿದ." ಉಗುರುಗಳನ್ನು ನೋಡಿ ಆ ಸ್ತ್ರೀಯ ಮನೋ ಸ್ವಭಾವ ಎಂತಹುದೂಂತ ಹೇಳಬಹುದು ಅಂತ ಗೋಣಿಕಾ ಪುತ್ರನೆನ್ನುವ ನಮ್ಮ ಪೂರ್ವಜ ಹೇಳಿದ್ದಾನೆ."

ಅವಳಲ್ಲಿ ಆಸಕ್ತಿ ಬೆಳೆಯಿತು. "ನನ್ನ ಉಗುರುಗಳನ್ನು ನೋಡಿ, ನಾನು ಎಂತಹವಳನ್ನೋದನ್ನ ಹೇಳಿ" ಎನ್ನುತ್ತ ಕೈಗಳನ್ನು ಮುಂದೆ ಚಾಚಿದಳು.

"ನಿನ್ನವು ಉದ್ದನೆಯ ಉಗುರುಗಳು ಇಂತಹ ಉಗುರುಳ್ಳವರು ಕಲಾ ಪಿಪಾಸಿಗಳಾಗಿರುತ್ತಾರಂತೆ ಲಲಿತ ಕಲೆಗಳ ಬಗ್ಗೆ ಅನುರಕ್ತಿಹೊಂದಿ ರುತ್ತಾರಂತೆ."

ಲಹರಿ ಹಿಗ್ಗಿದಳು. ಮತ್ತಷ್ಟು ಕುತೂಹಲದಿಂದ, "ಮತ್ತೆ ಅಗಲ ಉಗುರು ಇದ್ರೆ" ಎಂದು ಕೇಳಿದಳು.

"ಅಂತಹವರಿಗೆ ಸ್ವಾರ್ಥ ಹೆಚ್ಚಿಗಿರುತ್ತದೆಂದು ಗೋಣಿಕಾಪುತ್ರನು

ಹೇಳುತ್ತಾನೆ. ಅವರು ಪುರುಷನನ್ನು ಪ್ರೇಮಿಸಲಾರರು. ಅವನಿಂದುಂಟಾಗುವ ಲಾಭದ ಮೇಲಷ್ಟೇ ಗಮನ ಇರುತ್ತದೆ. ಪ್ರತಿಯೊಂದನ್ನೂ ಅನುಮಾನದಿಂದ ನೋಡುತ್ತಾಳೆ."

"ನೀವು ಹೇಳಿದ್ದು ಸರಿ. ನನ್ನ ಓರಗಿತ್ತಿ ಪದ್ಮಳಿಗೆ ಅಗಲವಾದ ಉಗುರು ಗಳಿವೆ. ಯಾವಾಗಲೂ ಗಂಡನನ್ನು ಅನುಮಾನಿಸುತ್ತಿರುತ್ತಾಳೆ."

"ಇನ್ನು ವಲಯಾಕಾರದ ಉಗುರುಗಳಿರುವ ಸ್ತ್ರೀಯರು ಕೆಟ್ಟವರಾಗಿರು ತ್ತಾರೆ. ಯಾವಾಗಲೂ ಅಸಂತೃಪ್ತಿಯಿಂದ ನರಳುತ್ತಿರುತ್ತಾರೆ. ವಕ್ರ ಉಗುರು ಗಳಿರುವ ಸ್ತ್ರೀಯರು ಯಾವುದನ್ನೂ ಆಸಕ್ತಿಯಿಂದ ಮಾಡುವುದಿಲ್ಲ. ಗಂಡ ಇಷ್ಟಪಟ್ಟು ಪಕ್ಕಕ್ಕೆ ಬಂದರೂ, ಮುಖ ಮುದುಡಿ ಇದ್ಯಾವುದೋ ಅನಿ ವಾರ್ಯ ಕಾರ್ಯಕ್ರಮವೆನ್ನುವಂತೆ ವರ್ತಿಸುತ್ತಾರೆ. ಇನ್ನು ಕೆಲವರಿಗೆ ವಿಶಾಲ ವಾದ ಉಗುರುಗಳಿರುತ್ತವೆ. ಇಂತಹ ಉಗುರುಳ್ಳ ಸ್ತ್ರೀಯರು ತುಂಬಾ ನಿಧಾನ ಸ್ವಭಾವದವರಾಗಿರುತ್ತಾರೆ. ಹಾಸಿಗೆಯಲ್ಲಿ ಕೂಡ ಗಂಡನ ಸುಖವೇ ತನ್ನ ಸುಖವೆಂದುಕೊಳ್ಳುತ್ತಾರೆ.

"ನಿಮ್ಮ ಉಗುರುಗಳ ಸಿದ್ಧಾಂತ ಚೆನ್ನಾಗಿದೆ" ಎಂದು ಮೆಚ್ಚಿಕೊಂಡಳು ಲಹರಿ.

ಗೋಪಾಲಕೃಷ್ಣ ಮಲಗಿಕೊಂಡ, ಕಣ್ಣುಗಳಲ್ಲಿ ಬೆಳದಿಂಗಳನ್ನು ತುಂಬಿ ಕೊಳ್ಳುತ್ತ ಅವಳತ್ತ ನೋಡಿ, "ಮಲಕ್ಕೋ" ಎಂದ. ಅವಳು ಒಂದು ಕ್ಷಣ ತಟಪಟಾಯಿಸಿ ಅತ್ತಿತ್ತ ನೋಡಿ ಹಾಸಿಗೆಯ ಮೇಲೆ ಒರಗಿದಳು. ಅವನು ಅವಳ ವಕ್ಷಸ್ಥಳದತ್ತ ನೋಡುತ್ತ ನುಡಿದ "ತಾಜ್‌ಮಹಲಿನ ಪಕ್ಕದಲ್ಲಿನ ನೆರ ಳಲ್ಲಿ ಮಲಗಿ, ಕಣ್ಣು ಮೇಲೆತ್ತಿ ನೋಡಿದರೆ ಮಹಲಿನ ಗೋಪುರಗಳು ಕಂಡು ಬಂದಂತಿದೆ."

ಅವಳು ನಾಚಿಕೊಂಡಳು.

ಬಯಲಿನಲ್ಲಿ ಬೆಳದಿಂಗಳಿನಲ್ಲಿ ಆ ರೀತಿ ಮಲಗಿಕೊಳ್ಳುವುದು ಅವಳಿಗೆ ಮತ್ತೇರಿಸುತ್ತಿತ್ತು. "ಆ ಮನೆಗಳಲ್ಲಿ ಕಿಟಕಿ ಬಾಗಿಲು ಮುಚ್ಚಿಬಿಟ್ಟು ಸೆಕೆ ಯಲ್ಲಿ ಮಲಗೋದು ನರಕಪ್ರಾಯ" ಎಂದಳು.

"ಪ್ರತಿಯೊಂದು ಅನುಭವಕ್ಕೂ ಹಿಂದೂ, ಮುಂದೂ ಇರುವಂತೆಯೇ ಕಾಮಕ್ಕೂ ಇರುತ್ತೆ. ಇದನ್ನು ಗುರುತಿಸಿ, ಎಲ್ಲವನ್ನೂ ಹೊಂದಿಸಿಕೊಂಡರೇನೇ ರಸಾನುಭೂತಿ ಉಳಿಯುತ್ತೆ. ಇದು ಬಹಳಷ್ಟು ಜನ ದಂಪತಿಗಳಿಗೆ ತಿಳಿದಿರುವು ದಿಲ್ಲ. ಅದಕ್ಕೆ ಮಧ್ಯ ರಾತ್ರಿಯಲ್ಲೋ, ಇನ್ಯಾವಾಗಲೋ ಆ ಮೂಡ್ ಬಂದಾಗ ಬಾಗಿಲು ಮುಚ್ಚಿಕೊಂಡುಬಿಡ್ತಾನೆ."

"ನಮ್ಮಜಮಾನರಂತಹವರಾದರೆ ಮತ್ತೂ ತುರ್ತು. ಮುತ್ತಿಡೋದ್ರಿಂದ ಹಿಡಿದು ಉಳದೆಲ್ಲ... .... ಕಾರ್ಯಕ್ರಮವನ್ನೂ ಮೂರೇ ನಿಮಿಷದಲ್ಲಿ ಮುಗಿಸಿ ಬಿಡ್ತಾನೆ"

ಗೋಪಾಲಕೃಷ್ಣ ನಗುತ್ತ, "ಅತ ಅಷ್ಟು ತುರ್ತೆ?" ಎಂದ.

"ಅಂ.... ಲಾಟರಿ ಟಿಕೆಟ್ ನಂಬರ್ ಹುಡುಕಿದಂತೆಯೇ ... . . –ಎಲ್ಲಾ ಶಾರ್ಟ್‌ಕಟ್".

"ಬಹಳಷ್ಟು ಜನ ಅಷ್ಟೇ, ಇದನ್ನೊಂದು ಕ್ರೀಡೆ ಅಂತ ಭಾವಿಸೋದಿಲ್ಲ, ಆಟ ಅಂದಾಗ ಇಬ್ಬರೂ ಸಮ ಹುದ್ದರಿಗಳಾರಗಿಬೇಕು. ಆಗಲೇ ಆಟಕ್ಕೆಮಜಾ ಬರೋದು ಯಾವ ಆಟವೇ ಆಗಲಿ, ಏಕಪಕ್ಷೀಯವಾಯ್ತೊಂದ್ರೆ, ಸಪ್ಪೆ ಸಪ್ಪೆಯಾಗಿರುತ್ತೆ. ಸೆಕ್ಸ್ ಅಂದ್ರೇನೆ ಅಶ್ಲೀಲ ಅನ್ನೋ ಅಭಿಪ್ರಾಯ ಇದೆ. ಇದರಿಂದಾಗಿ ಕೆಲವೊಂದು ತಪ್ಪು ಕಲ್ಪನೆಗಳನ್ನು ಏರ್ಪಡಿಸಿಕೊಳ್ಳುತ್ತಾರೆ. ಸ್ತ್ರೀಯ ಬೆತ್ತಲೆ ದೇಹವನ್ನು ನೋಡಿದರೆ ದರ್ಪದವು ಸತ್ತಿಕೊಳ್ಳುತ್ತೆ .. ಎಂದು ಭಾವಿಸುವ ಪುರುಷ ಪುಂಗವರಿದ್ದಾರೆ. ಆದರೆ ನಗ್ನತೆಯನ್ನು ನೋಡಿದರೆ ಮತ್ತಷ್ಟು ಉದ್ರೇಕ ಉಂಟಾಗುತ್ತದೆಂದು ಮಾಸ್ಟರ್ಸ್ ಆ್ಯಂಡ್ ಜಾನ್‌ಸನ್ಸ್ ಹೇಳಿದ್ದಾರೆ."

"ನಮ್ಮಜಮಾನರಂತಹವರಿಗೆ ಅಷ್ಟು ಪುರಸೊತ್ತೆಲ್ಲೀದು? ಡೀಲಕ್ಸ್ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವಾಗ, ಮಧ್ಯರಾತ್ರಿ ಇದ್ದಕ್ಕಿದ್ದಂತೆ ದಾರಿಗಳ್ಳರು ಅಡ್ಡಗಟ್ಟಿ, ಮೈಮೇಲಿನವೆಲ್ಲ ಸುಲಿದುಕೊಂಡು ಹೋದಂತಿರುತ್ತೆ ನಮ್ಮಜಮಾನರಂತಹವರ ವರ್ತನೆ. ಅಪರಾತ್ರಿ ಹೊತ್ತಿನಲ್ಲಾಬ್ಯವಾಗಲೋ ಪಕ್ಕಕ್ಕೆ ಬಂದು ಅಷ್ಟೆಲ್ಲ ತರಾತುರಿ ಮಾಡಿಬಿಡ್ತಾರೆ. ಈಗೀಗಂತೂ ಅದೂ ಇಲ್ಲ."

"ನಿಜ. ಗಂಡ ಹೆಂಡಿರಾದವರು ಕಾಮವನ್ನು ಒಂದು ಕಲೆ ಎಂಬುದಾಗಿಯೂ, ಮೋಜೆಂಬುದಾಗಿಯೂ ತಿಳಿದುಕೊಂಡು ವರ್ತಿಸಬೇಕು. ಯಾವಾಗೆಂದರೆ ಆವಾಗ, ನೀನು ಹೇಳಿದಂತೆದಾರಿಗಳ್ಳರಂತೆ ತರಾತುರಿ ಮಾಡಿ ಮುಗಿಸಬಾರದು. ಇದಕ್ಕೋಸ್ಕರ ಗಂಡ–ಹೆಂಡತಿ ಇಬ್ಬರೂ ಕೂಡಿ ಪ್ರತ್ಯೇಕವಾಗಿ ರಾತ್ರಿ ದಿನಚರಿಯಂತಹುದನ್ನು ಬರೆದುಕೊಳ್ಳಬೇಕು. ಆ ದಿನಚರಿಯಲ್ಲಿ ಯಾವಾಗ ಶೃಂಗಾರದಲ್ಲಿ ಭಾಗವಹಿಸಬೇಕೋ ಆ ದಿನ ಎಂತಹ ಉಡುಪು ಧರಿಸಬೇಕು ಯಾವ ರೀತಿಯಲ್ಲಿ ಎಷ್ಟು ಹೊತ್ತು ಭಾಗವಹಿಸಬೇಕು ಎಂಬೆಲ್ಲದರ ಬಗ್ಗೆ ಇಬ್ಬರೂ ಮೋಜಿನಿಂದ ಚರ್ಚಿಸಿ ಟಿಪ್ಪಣಿ ಮಾಡಿಕೊಳ್ಳಬೇಕು. ಆ ಘಟ್ಟದಲ್ಲಿನ ಚಿಕ್ಕಪುಟ್ಟ ವಿಷಯಗಳನ್ನು ಕೂಡ ಬರೆದುಕೊಳ್ಳಬೇಕು. ಈ ರೀತಿ

ರಾತ್ರಿ ದಿನಚರಿ ಬರೆಯುವುದರಿಂದ ತಾವು ನಿರ್ಧರಿಸಿಕೊಂಡ ರಾತ್ರಿಗೋಸ್ಕರ ಕಾಯುವುದು, ಆ ದಿನ ಹಾಕಿಕೊಳ್ಳಬೇಕೆಂದುಕೊಂಡ ಉಡುಪುಗಳನ್ನು ತೆಗೆದಿಟ್ಟುಕೊಳ್ಳುವುದು ಇಂತಹವುಗಳೆಲ್ಲ ಚೆನ್ನಾಗಿರುತ್ತವೆ."

"ಈ ರಾತ್ರಿ ದಿನಚರಿಯ ಐಡಿಯಾ ಚೆನ್ನಾಗಿದೆ. ಆ ದಿನದ ಅಲಂಕಾರದ ಬಗ್ಗೆ ಈ ದಿನದಿಂದಲೇ ಊಹಿಸಿಕೊಳ್ಳುವುದು. ಆ ರಾತ್ರಿಗೋಸ್ಕರ ಕನಸು ಕಾಣುವುದು, ಆ ರಾತ್ರಿಯ ಭಂಗಿ ಪದೇ ಪದೇ ಕಣ್ಣಲ್ಲಿ ಸುಳಿದಾಡುವುದು. ತೀರಾ ಆ ದಿನ ಬಂದ ನಂತರ ತಡಬಡಿಸುವುದು ಇವೆಲ್ಲ ಚೆನ್ನಾಗಿರುತ್ತೆ."

ಬೆಳದಿಂಗಳು ಅವರಿಬ್ಬರ ಮೇಲೆ ಸುರಿದು, ನಿಶ್ಯಬ್ದವಾಗಿ ಕೆಳಗೆ .. .. ಜಾರುತ್ತಿತ್ತು.

ಸ್ವಲ್ಪ ಹೊತ್ತಿನ ಮೌನದ ನಂತರ, "ನೀನು ಇಲ್ಲೀವರೆಗೆ ಯಾರಿಗೂ ಹೇಳದಿರುವ ಘಟನೆ ಏನಾದ್ರೂ ಇದ್ಯಾ" ಎಂದು ಕೇಳಿದ ಗೋಪಾಲಕೃಷ್ಣ. ಅವಳು ಉತ್ತರಿಸಲಿಲ್ಲ. ಮತ್ತೇ ಅವನೇ ಮುಂದುವರಿಸಿದ. "ಇದೂ ಆಚಾರದಲ್ಲಿ ಒಂದು ಭಾಗ. ಇದನ್ನು ಹೇಳಿಬಿಟ್ಟರೆ ಆ ನುತರ ನಾವು.. " ಮುಂದೆ ಅವನು ವಿವರಿಸಲಿಲ್ಲ.

ಎದೆಯೊಳಗೆ ನಿಶ್ಯಬ್ದವಾಗಿ ಕೋರಿಕೆಯನ್ನು ತಟ್ಟಿ ಎಬ್ಬಿಸುತ್ತಿರುವ ಬೆಳದಿಂಗಳು, ಪಕ್ಕ, ಪಕ್ಕದಲ್ಲಿಯೇ ಗುಟ್ಟು ಮಾತಾಡಿಕೊಳ್ಳುತ್ತಿರುವಂತೆ ಪರಸ್ಪರ ತೀಡಿಕೊಳ್ಳುತ್ತಿರುವ ಶರೀರಗಳು .. ಇವೆಲ್ಲ ಅವನನ್ನು ಅವಸರಪಡಿಸುತ್ತಿವೆ ಎಂಬುದನ್ನು ಗ್ರಹಿಸಿದಳು. ಅವಳಿಗೂ ಅದೇ ರೀತಿ ಇತ್ತು. ಹೇಳಲು ಸಿದ್ಧವಾಗುತ್ತಿರುವಂತೆ ಗಂಟಲು ಸರಿಪಡಿಸಿಕೊಂಡಳು. ಅವನು ಅವಳತ್ತ ತಿರುಗಿ ಮುಖವನ್ನು ದಿಟ್ಟಿಸಿ ನೋಡುತ್ತ ಕೇಳುತ್ತಿದ್ದ.

"ನನಗಾಗ ಇಪ್ಪತ್ತು ವರ್ಷ. ಋತುಮತಿಯಾಗಿ ಅಲ್ಲಿಗೆ ಏಳು ವರ್ಷಗಳಾಗಿತ್ತು. ಯೌವನ ಪ್ರತಿಯೊಂದು ಅಂಗಾಂಗದಲ್ಲೂ ತುಂಬಿಕೊಂಡು ಕಿರಿಕಿರಿ ಮಾಡುತ್ತಿತ್ತು.ಹಗಲು ಅದೂ ಇದೂ ಕೆಲಸದಲ್ಲಿ ಕಳೆದು ಹೋಗುತ್ತಿತ್ತಾದರೂ ರಾತ್ರಿಯೇ ಬಹಳ ಕಿರಿಕಿರಿ, ಕಾಟ ಕೊಡುತ್ತಿತ್ತು. ಒಂಟಿತನದಿಂದಾಗಿ ತಳಮಳಿಸುವ ನನ್ನನ್ನು ಹಾಸ್ಯ ಮಾಡುತ್ತಿದೆ ಎನ್ನುವಂತೆ ಮಂಚ ಮತ್ತಷ್ಟು ಬಿರುಸೆನ್ನಿಸುತ್ತಿತ್ತು. ಗಾಳಿ ಕೂಡ ನನ್ನನ್ನು ಸುತ್ತಿ ಸುಳಿದು ಮುಟ್ಟಿ ಅಣಕಿಸುತ್ತಿತ್ತು. ಆಗಾಗ ಕಿಟಕಿಯ ಬಳಿ ಬರುತ್ತಿದ್ದ ಚಂದ್ರ ಪೋಲಿ ಹುಡುಗನಂತೆ, ಕಚಗುಳಿ ಇಡುವವನಂತೆ ನೋಡುತ್ತಿರುತ್ತಿದ್ದ ಕಡುಗಪ್ಪಾದ ಕತ್ತಲು ನನ್ನ ಮೇಲೆ ಬಿದ್ದು ನನ್ನನ್ನು ಮತ್ತಷ್ಟು ತಾಪಕ್ಕೀಡುಮಾಡುತ್ತಿತ್ತು.

ಈ ರೀತಿ ಒದ್ದಾಡುತ್ತಿರುವಾಗ, ಒಂದು ದಿನ ನಮ್ಮಮ್ಮ ನನ್ನನ್ನು

ತಾರಸಿಯ ಮೇಲೆ ಕರೆದಳು.

'ಯಾಕಮ್ಮಾ ಗಡಿಬಿಡಿಯಿಂದ ಕರೆದ್ಯಲ್ಲ.'

'ಇನ್ಮೇಲೆ ಎಲ್ಲಾ ಗಡಿಬಿಡಿನೇ.. ! ನೀನು ಊಂ ಅಂದ್ರೆ ನಿನಗೆ ಮದುವೆ ಮಾಡೋಣಾಂತಿದೀವಿ. ಹತ್ತನೇ ತರಗತಿ ಓದಿದೀಯ. ದೇವರ ದಯೆಯಿಂದ ಯಾವುದಕ್ಕೂ ಕೊರತೆ ಇಲ್ಲ. ಗಂಡೆಂದರೂ ಹೆಣ್ಣೆಂದರೂ ನಮಗೆ ನೀನೊಬ್ಬಳೇ ಅದಕ್ಕೇ ನಿನ್ನ ಮದುವೆ ಮಾಡಿ, ಆ ಮಂಗಳ ಕಾರ್ಯ ಕಣ್ಣಾರೆ ನೋಡೋಣಾಂತ. ಅದರಲ್ಲೂ ನಿನಗೆ ಇಪ್ಪತ್ತು ವರ್ಷ ತುಂಬ್ತಾ ಬಂತು. ನಿನ್ನ ಮಾವ ಚಲಪತಿಯ ಬಗ್ಗೆ ನಿನ್ನ ಅಭಿಪ್ರಾಯ ಏನು ಅನ್ನೋದನ್ನ ಹೇಳು.'

ಇದೆಲ್ಲ ಯಾವುದಕ್ಕೆ ಉಪೋದ್ಘಾತವೆನ್ನುವುದು ಕೊನೆಯ ವಾಕ್ಯದಿಂದ ನನಗರ್ಥವಾಯ್ತು. ಚಲಪತಿ ನಮ್ಮ ತಾಯಿಯ ತಮ್ಮ, ಊರಲ್ಲಿ ನಮಗೆ ಹತ್ತು ಎಕರೆ ಹೊಲ. ಎರಡು ಪಂಪ್‌ಸೆಟ್ ಮೋಟಾರ್‌ಗಳೂ ಇದ್ದವು. ನನ್ನ ತಂದೆ ತಾಯಿಗಳಿಗೆ ನಾನೊಬ್ಬಳೇ ಸಂತಾನ. ಅದಕ್ಕೇ ವ್ಯವಸಾಯದಲ್ಲಿ ಜೊತೆಗಿರುತ್ತಾನೆಂದು ನಮ್ಮ ಮಾವನನ್ನು ಮನೆಗೆ ಕರೆಸಿಕೊಂಡಿದ್ದರು. ಆತ ಬಂದು ಎರಡು ವರ್ಷಗಳಾಗಿತ್ತು. ಆಗಿನಿಂದಲೂ ನಮ್ಮ ಮನೆಯಲ್ಲೇ ಇದ್ದು, ಎಲ್ಲ-ವನ್ನೂ ನೋಡಿಕೊಳ್ಳುತ್ತಿದ್ದ.

ಆಗ್ಗೆ ಆತನಿಗೆ ನಲವತ್ತು ವರ್ಷಗಳಾಗಿದ್ದವು.ಹೆಚ್ಚುಕಡಿಮೆ ನನಗಿಂತಲೂ ದುಪ್ಪಟ್ಟು ವಯಸ್ಸು. ಅದಕ್ಕೇ ಇರಬೇಕು –ನಾನ್ಯಾವತ್ತೂ ಆತನ ಬಗ್ಗೆ ಯೋಚಿಸಿರಲಿಲ್ಲ. ತಾಯಿಯ ತಮ್ಮ ಅನ್ನೋ ಭಾವನೆ ಬಿಟ್ಟರೆ ಮತ್ತೊಂದು ಅಭಿಪ್ರಾಯವಿರಲಿಲ್ಲ ಈಗ ಅಮ್ಮ ಹೀಗೆ ಇದ್ದಕ್ಕಿದ್ದಂತೆ ಕೇಳಿದ್ದರಿಂದ ನನಗೆ ಏನು ಉತ್ತರ ಹೇಳಬೇಕೆಂಬುದು ಗೊತ್ತಾಗಲಿಲ್ಲ.

ಅಮ್ಮ ಅದನ್ನು ಗಮನಿಸಿಯೇ ನುಡಿದಳು. 'ಅವನಿಗೆ ಸ್ವಲ್ಪ ವಯಸ್ಸು ಜಾಸ್ತಿ ಅನ್ನೋ ಲೋಪ ಬಿಟ್ಟರೆ ಮತ್ತೇನೂ ಇಲ್ಲ. ಕಣ್ಣಿಲ್ವಾ? ಕಾಲಿಲ್ವಾ? ಗುಂಡು ಕಲ್ಲಿನ ಹಾಗಿದ್ದಾನೆ. ಅದೂ ಅಲ್ದೆ ಅವನಿಗದೇನು ಮಹಾ ವಯಸ್ಸಾಗಿರೋದು? ಅಬ್ಬಬ್ಬಾ ಅಂದ್ರೆ ಮೂವತ್ತೈದಿರಬಹುದು. ಈ ಕಾಲದಲ್ಲಿ ಅದೇನಷ್ಟು ಹೆಚ್ಚು ವಯಸ್ಸಲ್ಲ. ನಿನಗೂ, ಅವನಿಗೂ ಈಡು/ ಜೋಡು ಚೆನ್ನಾಗಿರುತ್ತೆ. ಯಾರೇ ಆಗ್ಲಿ, ಯಾವತ್ತಿದ್ರೂ ಮುದುಕರಾಗಲೇ ಬೇಕಲ್ಲ. ಚೆನ್ನಾಗಿ ಯೋಚನೆ ಮಾಡು''

ಯಾರೇ ಆಗಲಿ ಮುದುಕರಾಗುತ್ತಾರೆಂದು, ಈಗ ನಲವತ್ತು ವರ್ಷ ತುಂಬಿದವನನ್ನು ಕಟ್ಟಿಕೊಳ್ಳೆನ್ನುತ್ತಿರುವ ಅಮ್ಮನ ತರ್ಕ ನನಗರ್ಥವಾಗಲಿಲ್ಲ.

'ಆದ್ರೆ ...'

'ಆ ರೀತಿ ರಾಗ ಎಳೀಬೇಡ. ನೀನು ನಮಗೊಬ್ಬಳೇ. ನಿನ್ನನ್ನ ಬಿಟ್ರೆ ನಮಗ್ಯಾರೂ ಇಲ್ಲ. ನೀನು ಯಾರನ್ನೋ ಮದುವೆಯಾಗಿ, ಎಲ್ಲೋ ಸಂಸಾರ ಮಾಡೋದಕ್ಕಿಂತ ಇಲ್ಲೇ ನಮ್ಮನೇಲೇ ಇರಬೇಕೂನ್ನೋದು ನಮ್ಮ ಬಯಕೆ. ನಿನಗೆ ಮದುವೆಯಾಗಿ ನಿನ್ನ ಹೊಟ್ಟೇಲೊಂದು ಮಗುವಾದ್ರೆ, ಆ ಮಗುವಿನ ಜೊತೆ ಆಟವಾಡ್ತಾ ಉಳಿದ ಆಯುಸ್ಸ್ನ ಹಾಯಾಗಿ ಕಳೀಬಹುದು. ನಿನ್ನನ್ನು ಮದುವೆಯಾಗಿ,ಮನೆ ಅಳಿಯನಾಗಿರಲು ತಯಾರಾಗಿರೋನು ಸಿಗಬೇಕಲ್ಲ. ಚಲ ಪತಿ ಅಂದ್ರೆ ಈಗಾಗ್ಲೇ ಇಲ್ಲೇಇದ್ದಾನೆ.ನಿನ್ನನ್ನು ಮದುವೆಯಾದ ನಂತರ ಕೂಡ ಇಲ್ಲೇ ಇದ್ದು ಬಿಡ್ತಾನೆ.'

'ಅದಲ್ಲಮ್ಮ. '

'ಇನ್ನು ನಿನ್ನ ಸಂದೇಹ, ಅಪನಂಬಿಕೆ ಎಲ್ಲ ನಾನು ಕೇಳೋದಿಲ್ಲ. ಇನ್ನೊಂದು ಗುಟ್ಟು ಹೇಳ್ಲಾ? ಈ ಆಸ್ತೀನೆಲ್ಲಾ ಯಾವನೋ ಅನುಭವಿಸೋದ ಕ್ಕಿಂತ ನಮ್ಮ ಆಸ್ತಿ ನಾವೇ ಅನುಭವಿಸಿದರಾಗದೆ?'ಅವನ್ಯಾರೋಪರಕೀಯನಲ್ಲ ನನಗೆ ತಮ್ಮ ನಿಮ್ಮಪ್ಪನಿಗೆ ಹಿರಿಭಾವೈದ, ನಿನಗೆ ಮಾವ,ನಮ್ಮ ಆಸ್ತಿ ನಮ್ಮ ಬಳಿಯೇ ಇರಬೇಕೂಂದ್ರೆ, ಅವನಾದ್ರೇನೇ ಒಳ್ಳೇದು. ಮದುವೆ ಅಂದ್ರೆ ಎರಡು ಮೂರು ವರ್ಷಗಳ ಸಂಭ್ರಮವಲ್ಲ. ನೂರ್ಕಾಲ ಇರುವಂಥಾದ್ದು.

ನನ್ನ ಸಂಕಟವೂ ಅದೇ ಆಗಿತ್ತು. ನೂರ್ಕಾಲದಲ್ಲಿ ಆಗಲೇ ನಲವತ್ತು ವರ್ಷ ತುಂಬಿರುವವನನ್ನು ಮದುವೆಯಾಗು ಅನ್ನೋದು ದಾರುಣ. ಅದಕ್ಕೇ ಖಡಾಖಂಡಿತವಾಗಿ ಹೇಳಿಬಿಟ್ಟೆ.

'ಬೇಡಮ್ಮಾ!ನೀನು ಸಾವಿರ ಹೇಳು, ನಲವತ್ತು ವರ್ಷದವನನ್ನು ನಾನು ಸತ್ರೂ ಮಾಡ್ಕೊಳ್ಳೋದಿಲ್ಲ.'

ಅಮ್ಮ ಈ ಸಲ ಮತ್ತಷ್ಟು ರಮಿಸುತ್ತ ..'ಹಾಗನ್ಬೇಡ. ಇಷ್ಟು ಸಣ್ಣ ಕಾರಣದಿಂದಾಗಿ ನಿನ್ನ ಜೀವನವನ್ನು ಮತ್ತೊಬ್ಬರೊಂದಿಗೆ ಗಂಟು ಹಾಕಿ ಕೊಂಡು ಒದ್ದಾಡ್ಬೇಡ ನಾವು ನಿನ್ನ ತಂದೆ ತಾಯಿಗಳೇ ಹೊರತು ಶತ್ರುಗಳಲ್ಲ ಅವನಿಗೇನಾದರೂ ದುಶ್ಚಟಗಳಿವೆಯಾ ಅಂದ್ರೆ ಅದೂ ಇಲ್ಲ. ಸಿಗರೇಟ್ ಸೇದೋ ದಿಲ್ಲ, ಕುಡಿಯೋದಿಲ್ಲ. ವ್ಯಭಿಚಾರ ಮಾಡೋದಿಲ್ಲ. ಆಗಾಗ ಲಾಟರಿ ಟಿಕೆಟ್ ತಗೊಳ್ಳೋದನ್ನ ಬಿಟ್ರೆ .. ಮತ್ತ್ಯಾವ... ಚಟಾನೂ ಇಲ್ಲ . 'ಎಂದು ಮಾವನ ಒಳ್ಳೆಯ ಗುಣಗಳ ಪಟ್ಟಿಯನ್ನೇ ಹೇಳಿದಳು.

ಅಮ್ಮ ಹೇಳಿದ ಒಳ್ಳೆಯ ಗುಣಗಳೆಲ್ಲದರ ಬಗ್ಗೆ ಅದೇನೋ ಏನೋ ನನಗೆ ಮಾತ್ರ ಚಲಪತಿಯಲ್ಲಿ ಕಂಡು ಬಂದ ಒಳ್ಳೆಯ ಗುಣ ಒಂದೇ.ಪ್ರಶಾಂತ ತೆಯನ್ನು ಬಯಸುವ ಸ್ವಭಾವ ತುಂಬಸಿಧಾನಿ.ಯಾವತ್ತೂಜೋರಾಗಿ ಮಾತಾ

ಡಿದವನಲ್ಲ. ಶಾಂತವಾಗಿರುತ್ತಿದ್ದ. ಮನೆಯಲ್ಲಿ ಕೂಡ ಪ್ರಶಾಂತತೆಯನ್ನುಬಯಸುತ್ತಿದ್ದ ಮೌನ ಯಾವಾಗಲೂ ಮೌನವಾಗಿ, ಋಷ್ಯಾಶ್ರಮದಂತಿರಬೇಕೆನ್ನುತ್ತಿದ್ದ. ನಮ್ಮ ತಾಯಿ ಯಾರ ಮೇಲಾದರೂ ಕೂಗಾಡುತ್ತಿದ್ದರೆತಕ್ಷಣವೇ ಅಡ್ಡ ಬಂದು ಶಾಂತಪಡಿಸುತ್ತಿದ್ದ. ನಾವು ನಷ್ಟ ಅನುಭವಿಸಿದರೂ ಸರಿ, ಪ್ರಶಾಂತವಾಗಿರುವ ಪರಿಸ್ಥಿತಿಯನ್ನು ಏರ್ಪಾಡು ಮಾಡಿಕೊಳ್ಳಬೇಕೆಂದುಕೊಳ್ಳುತ್ತಿದ್ದ. ಈ ಒಂದೇ ಒಂದು ಒಳ್ಳೆಯ ಗುಣಕ್ಕಾಗಿ ಆತನನ್ನು ಮದುವೆಯಾಗುವುದು ಅಸಂಭವ ಅದೇ ಮಾತು ಹೇಳಿ ಕೆಳಗೆ ಬಂದುಬಿಟ್ಟೆ.

ಮರುದಿನ ಅಪ್ಪ ನನ್ನ ಕಿವಿ ತನ್ನ ವಶಕ್ಕೆ ತಗೆದುಕೊಂಡ- ಮಾವನನ್ನು ಮದುವೆಯಾಗೆಂದು ಬೇಡಿಕೊಂಡ, ರಮಿಸಿದ. ಕೊನೆಯ ಅಸ್ತ್ರವೆನ್ನುವಂತೆ ಈ ಮದುವೆಗೆ ಒಪ್ಪಿಕೊಳ್ಳದಿದ್ದರೆ ಬಾವೀನೋ, ಕೆರೇನೋ ನೋಡ್ಕೊಳ್ತೀನಿಂತ ಹೆದರಿಸಿದ. ಮನೆಯಲ್ಲಿ ತಂದೆ ತಾಯಿಗಳೇ ಈ ರೀತಿ ಶತ್ರುಗಳಾಗಿಬಿಟ್ಟರೆ ನಾನೇನು ಮಾಡಬಲ್ಲೆ? ಕೊನೆಗೆ ಅನಿವಾರ್ಯ ಪರಿಸ್ಥಿತಿಗಳಲ್ಲಿ ತಲೆಯಾಡಿಸಿದೆ.

ಮದುವೆ ಎಂದರೆ ಉಂಟಾಗಬೇಕಾದ ರೋಮಾಂಚನ ಉಂಟಾಗಲಿಲ್ಲ. ನನ್ನ ಊಹೆಗಳಿಗೆ, ನನ್ನ ಬಣ್ಣದ ಕನಸುಗಳಿಗೆ ಅಂತ್ಯಕ್ರಿಯೆ ಎಂದೆನಿಸಿತು. ಮಾವನೊಂದಿಗೆ ನನ್ನ ಮದುವೆ ನಿಶ್ಚಯವಾದ ನಂತರ ಊರಲ್ಲಿನ ನನ್ನ ಜೊತೆಗಾತಿಯರು ನನ್ನತ್ತ ಮರುಕದಿಂದ ನೋಡುತ್ತಿರುವಂತೆನಿಸಿತು. ನೋವು, ಸಂಕಟ ಉಕ್ಕೇರುತ್ತಿತ್ತು.

ನಮ್ಮ ಮನೆಯಲ್ಲಿ ಮದುವೆಯ ಕೆಲಸ ಕಾರ್ಯಗಳು ಶುರುವಾದವು. ಕಾಂಚಿಪುರಕ್ಕೆ ಹೋಗಿ ಸೀರೆಗಳನ್ನು ತಂದರು. ತಿರುಪತಿಗೆ ಹೋಗಿ ಬಂಗಾರದ ನಗಗಳನ್ನು ತಂದರು. ಮದುಮಗಳ ಅಲಂಕಾರಕ್ಕೋಸ್ಕರ ಎಲ್ಲ ಅಲಂಕಾರದ ವಸ್ತುಗಳನ್ನೂ ಮದ್ರಾಸಿನಿಂದ ತರಿಸಿದರು. ಇವು ಯಾವುದೂ ನನಗೆ ಆನಂದವನ್ನುಂಟು ಮಾಡಲಿಲ್ಲ. ನನ್ನ ಯೌವನ ಸಾಮ್ರಾಜ್ಯಕ್ಕೆ ಕಾವಲು ಕಾಯುವ ಇಂದ್ರಚಾಪದಂತಿರಬೇಕಾದ ರೇಶ್ಮೆ ಸೀರೆ ಬರೀ ಬಟ್ಟೆಯಂತೆನಿಸಿತು. ನನ್ನ ಶರೀರದ ಬಣ್ಣವನ್ನು ನೋಡಿ ತಲೆತಗ್ಗಿಸಿದಂತೆ ಭಾಸವಾಗಬೇಕಾದ ಬಂಗಾರದ ಆಭರಣಗಳು ಬರಿ ಲೋಹದ ಹುಚ್ಚುಚ್ಚು ಡಿಜೈನುಗಳಂತೆ ಕಂಡು ಬಂದವು. ನನ್ನ ಸೌಂದರ್ಯಕ್ಕೆ ಮೆರುಗು ನೀಡಲೆಂದೇ ಹುಟ್ಟಿವೆ ಎನ್ನಿಸಬೇಕಾದ ಕಾಸ್ಮೆಟಿಕ್ಸ್ ಬರೀ ರಾಸಾಯನಿಕ ಅಂಟುಗಳಂತೆ ಭಾಸವಾದವು.

ನನಗೇನೂ ರೋಮಾಂಚನವನ್ನುಂಟು ಮಾಡದೆಯೆ ನನ್ನ ಮದುವೆ ಮುಗಿದು ಹೋಯ್ತು. ನನ್ನ ಮೊದಲ ರಾತ್ರಿ ಹೇಗೆ ರಸಹೀನವಾಗಿ ಮುಗಿದು ಬೆಳಕು ಹರಿಯಿತೋ, ಉಳಿದ ದಿನಗಳೂ ಹಾಗೆಯೇ ಅನ್ನಿಸಿದವು. ನನ್ನ ಗಂಡ

ನಡು ವಯಸ್ಸಿನಲ್ಲಿ ಎಷ್ಟು ಸ್ಪಂದನೆ ಇರಬೇಕೋ ಅಷ್ಟೇ ಪ್ರದರ್ಶಿಸುತ್ತಿದ್ದ. ನನ್ನ ಅಭಿರುಚಿಗಳಿಗೂ, ಆತನ ಮನೋಭಾವನೆಗಳಿಗೂ ಎಲ್ಲೂ ಹೊಂದಾಣಿಕೆ ಇರಲಿಲ್ಲ.

ಎರಡು ವರ್ಷಗಳು ಕಳೆದು ಹೋದವು. ಅಮ್ಮನಿಗೆ ಟೈಫಾಯ್ಡ್ ಬಂದು ಅಪ್ಪನಿಗೆ ಕ್ಷಯ ಬಂದು ಇಬ್ಬರೂ ಸತ್ತು ಹೋದರು . . ನನಗೆ ಮಕ್ಕಳೂ ಆಗಲಿಲ್ಲ... .. ಇದರಿಂದಾಗಿ.. ... ಮತ್ತೆ ನಾನು ಒಂಟಿಯಾಗಿಬಿಟ್ಟೆ. ನನಗೆ ಮದುವೆಯಾಗಿದೆ ಎನ್ನುವ ವಿಷಯ ಕೂಡ ಆಗಾಗ ನೆನಪಿರುತ್ತಿರಲಿಲ್ಲ. ನನ್ನ ವರ್ತನೆಯಲ್ಲಿ ಬಹಳಷ್ಟು ಮಾರ್ಪಾಡುಗಳುಂಟಾದವು. ಬಹಳಷ್ಟು ಗಯ್ಯಾಳಿ ತನ ರೂಢಿಯಾಯ್ತು. ಆಗ ಹೋಗದ್ದಕ್ಕೆಲ್ಲ ಕೆಲಸಗಾರರ ಮೇಲೆ ರೇಗುತ್ತಿದ್ದ. ಹೊರಗಿನವರೊಂದಿಗೆ ಕೂಡ ಹಾಗೆಯೇ ವರ್ತಿಸುತ್ತಿದ್ದೆ. ಚಿಕ್ಕ ಪುಟ್ಟ ವಿಷ ಯಕ್ಕೂ ಕಠಿಣವಾಗಿ ವರ್ತಿಸುತ್ತಿದ್ದೆ. ಬೈಗುಳ ರೂಢಿಯಾಯ್ತು. ಅಶ್ಲೀಲ ಬೈಗುಳ ಕೂಡ ಮೈಗಂಟಿಕೊಂಡಿತು. ಜನರನ್ನು ನೋಡಿದರೇನೇ ತಿಕ್ಕಲೆದ್ದು ಬಿಡುತ್ತಿತ್ತು. ಮನುಷ್ಯರೆಲ್ಲ ಅಸಹ್ಯವಾಗಿ ಕಂಡುಬರುತ್ತಿದ್ದರೂ ನೆರಹೊರೆ ಎಂದರೆ ನನ್ನನ್ನು ಕಿತ್ತು ತಿನ್ನಲೆಂದೇ ಇರುವವರೆಂದು ಭಾಸವಾಗುತ್ತಿತ್ತು.

ಕೆಲ ದಿನಗಳಿಗೆ ಇಡೀ ಊರಿಗೆ ಊರೇ ನಾನೆಂದರೆ ಹೆದರಿ ನಡುಗುವ ಸ್ಥಿತಿಗೆ ಬಂತು, ನನ್ನಂತಹ ಗಯ್ಯಾಳಿ, ಜಗಳಗಂಟಿ, ಕಿರಿಕಿರಿಯವಳು, ಚಾಡಿ ಹೇಳುವವಳು ಮತ್ತೊಬ್ಬಳು ಈ ಪ್ರಪಂಚದಲ್ಲಿರಕ್ಕಿಲ್ಲವೆಂಬ ಕುಖ್ಯಾತಿ ಉಂಟಾಯ್ತು. ಹೊರಗಷ್ಟೇ ಅಲ್ಲ, ಮನೆಯಲ್ಲೂ ಅಷ್ಟೇ ಕೆಲಸದವರ ಮೇಲೆ ಉರಿದು ಬೀಳುತ್ತಿದ್ದೆ. ಎಷ್ಟೇ ಅಲ್ಪ ವಿಷಯವಾಗಿದ್ದರೂ ನನ್ನ ಗಂಡನ ಮೇಲೆ ಕವಕ್ಕನೆ ಹರಿಹಾಯುತ್ತಿದ್ದ. ಪ್ರತಿಯೊಂದಕ್ಕೂ ಜಗಳಕ್ಕಿಳಿಯುತ್ತಿದ್ದ.

ನನ್ನ ಗಂಡನಿಗೆ ನರಕ ಹೇಗಿರುತ್ತದೆನ್ನುವುದನ್ನು ನನ್ನ ವರ್ತನೆಯಿಂದ ರುಚಿ ತೋರಿಸಿದೆ. ಆತ ಬಯಸುವ ಪ್ರಶಾಂತತೆ ಪೂರ್ತಿಯಾಗಿ ಹಾಳಾಯ್ತು. ದಿನದಲ್ಲಿ ಒಂದು ನಿಮಿಷ ಕೂಡ ಆತನಿಗೆ ಶಾಂತಿ ಸಿಕ್ಕದಂತೆ ಮಾಡುತ್ತಿದ್ದೆ. ಈ ಗುಣಗಳೆಲ್ಲವೂ ನನಗೆ ಹೇಗೆ ರೂಢಿಗೊಂಡವೆಂಬುದು ನನಗೆ ತಿಳಿಯದು. ನನ್ನ ಗಂಡ ಪ್ರಶಾಂತ ವಾತಾವರಣವನ್ನು ಇಷ್ಟಪಡುತ್ತಿದ್ದನಾದ್ದರಿಂದ, ಆತನ ಮೇಲೆ ಸೇಡು ಸಾಧಿಸಬೇಕೆನ್ನುವ ಬಯಕೆಯಿಂದ ನಾನು ಆ ರೀತಿ ಬದಲಾದೆ ನೇನೋ ಎನ್ನುವುದು ಗೊತ್ತಾಗಲಿಲ್ಲ.

ಎಲ್ಲರಂತೆ ನನ್ನನ್ನು ವ್ಯಕ್ತಿಪಾಗಲೂ ನಾನು ವಿಶ್ಲೇಷಣೆ ಮಾಡಿಕೊಳ್ಳಲಿಲ್ಲ. ನನಗೆ ಏನು ಬೇಕು, ನನಗೇನುಕಡಿಮೆಯಾಗಿದೆಯೋ ಎನ್ನುವುದರ ಬಗ್ಗೆ ನನ್ನ ಅಂತರಂಗವನ್ನು ಹುಡುಕಿ ತಿಳಿದುಕೊಳ್ಳಲಿಲ್ಲ. ಗಯ್ಯಾಳಿಯಾಗಿರುವುದರಲ್ಲಿ,

ಇತರರ ಮೇಲೆ ಚಾಡಿ ಹೇಳುವುದರಲ್ಲಿ, ಅಸಹ್ಯವಾಗಿ ಮಾತಾಡುವುದರಲ್ಲಿ, ಇತರರು ನೈತಿಕವಾಗಿ ಹೇಗೆ ಪತನಗೊಳ್ಳುತ್ತಿದ್ದಾರೋ ಎಂದು ಆಡಿಕೊಳ್ಳುವು ದರಲ್ಲಿ ಇರುವ ಆನಂದವನ್ನು ಅನುಭವಿಸುತ್ತಿದ್ದ.

ಮನೆ ಆ ರೀತಿ ನರಕಪ್ರಾಯವಾದುದನ್ನು ನನ್ನ ಗಂಡನಿಂದ ಸಹಿಸಿ ಕೊಳ್ಳಲಾಗಲಿಲ್ಲ. ಅದಕ್ಕೇ ರಾತ್ರಿಯಾಗುತ್ತಿದ್ದಂತೆಯೇ ಭಜನೆ ಮಾಡಲು ಹೋಗಿ ಬಿಡುತ್ತಿದ್ದ. ಬೇಗದಲ್ಲೇ ಆತ ಭಜನೆ ಕಲಿಸುವ ಗುರುವಿನ ಮಟ್ಟಕ್ಕೇರಿ ಬಿಟ್ಟ. ಹುಡುಗರಿಗೆ ಭಜನೆ ಕಲಿಸಿಕೊಟ್ಟು ಮಧ್ಯರಾತ್ರಿ ದಾಟಿದ ನಂತರ ಮನೆ ಸೇರಿಕೊಳ್ಳುತ್ತಿದ್ದ.

ಹೀಗೆ ದಿನಗಳು ಸರಿಯುತ್ತಿದ್ದಾಗಲೇ ನಮ್ಮೂರಿಗೆ ವಂಶಿ ಬಂದ. ಅವ ನದು ನಮ್ಮ ಊರೇ, ತನ್ನ ಅಜ್ಜಿಯ ಊರಿಗೆ ಹೋಗಿದ್ದ . ಅಲ್ಲೇ ಡಿಗ್ರಿಯ ವರೆಗೆ ಓದಿದ್ದ . ಆಗಾಗ ಬಂದು ಹೋಗುತ್ತಿದ್ದ. ಊರಿಗೆ ಬಂದಾಗ ಎರಡು ಮೂರು ದಿನವಷ್ಟೇ ಇರುತ್ತಿದ್ದುದರಿಂದ ನಾನ್ಯಾವತ್ತೂ ಅವನನ್ನು ಪರಿಶೀಲಿಸಿ ರಲಿಲ್ಲ. ಆ ನಡುವೆಯಷ್ಟೇ ಅವನ ತಾತ ಸತ್ತುಹೋಗಿದ್ದ. ಅದರಿಂದಾಗಿ ಅಲ್ಲಿದ್ದ ಹೊಲ, ಮನೆ ಎಲ್ಲವನ್ನೂ ಮಾರಿಕೊಂಡು ಅವನ ಅಜ್ಜಿ ಮಗಳ ಬಳಿಗೆ ಬಂದುಬಿಟ್ಟಳು. ಅಜ್ಜಿಯೊಂದಿಗೆ ಶಾಶ್ವತವಾಗಿ ಅವನೂ ಊರಿಗೆ ಬಂದು ಬಿಟ್ಟ.

ಅವನು ಬಂದ ಎರಡನೆಯ ದಿನಕ್ಕೋ, ಮೂರನೆಯ ದಿನಕ್ಕೋ ಬೀದಿ ಯಲ್ಲಿ ಹೋಗುತ್ತಿದ್ದಾಗ ನೋಡಿದ. ಬಂಧುಗಳ ಹುಡುಗನಾದ್ದರಿಂದ, 'ಯಾವಾಗ ಬಂದೆ ವಂಶಿ?' ಎಂದು ಮಾತಾಡಿಸಿದೆ.

'ಮೊನ್ನೆ ಬಂದೆ, ಎಲ್ರೂ ಚೆನ್ನಾಗಿದ್ದಿರಾ?' ಎನ್ನುತ್ತ ನಾನಿದ್ದ ವರಾಂಡ ದೊಳಗೆ ಬಂದ.

'ಆಂ . '

'ಮಾವ ಎಲ್ಲಿ?'

'ಭಜನೆಗೋಸ್ಕರ ಏರ್ಪಾಡು ನೋಡ್ಕೊಳ್ಳೋದಕ್ಕೆ ಹೋಗಿದ್ದಾನೆ.'

ವಂಶಿ ಹೊರಟು ಹೋದ. ಎರಡನೇ ದಿನ ಇನ್ನಷ್ಟು ಹೊತ್ತು ಕುಂತಿದ್ದ ನಂತರ ಬಂದ ವರಾಂಡದಲ್ಲಿದ್ದ ಮಂಚದ ಮೇಲೆ ಕುಳಿತುಕೊಂಡು ಅದೂ ಇದೂ ಮಾತಾಡತೊಡಗಿದ. ನನ್ನ ಸ್ವಭಾವ ಗೊತ್ತಿದ್ದು ಯಾರೂ ನಮ್ಮ ಮನೆಗೆ ಬರುತ್ತಿರಲಿಲ್ಲ. ಈಗ ಈ ರೀತಿ ಮಾತು ಕತೆಯಾಡಲು ಒಬ್ಬ ವ್ಯಕ್ತಿ ಸಿಕ್ಕಿದ್ದು ತುಂಬಾ ನಿರುಮ್ಮಳವಾಗಿತ್ತು. ಅದಕ್ಕೇ ಅವನುಚಿಕ್ಕಪುಟ್ಟ ಪ್ರಶ್ನೆ ಹಾಕಿದರೂ ಉದ್ದುದ್ದನೆಯ ಉತ್ತರ ಕೊಡುತ್ತಿದ್ದೆ.

ಆ ನಂತರ ವಂಶಿ ದಿನಾಲೂ ರಾತ್ರಿ ಏಳು ಗಂಟೆಯ ಸಮಯದಲ್ಲಿ ನಮ್ಮ ಮನೆಗೆ ಬರುತ್ತಿದ್ದ. ಆ ಸಮಯದಲ್ಲಿ ನನ್ನ ಗಂಡ ಭಜನೆ ಕಲಿಸಲು ದೇವಾಲಯದ ಬಳಿಗೆ ಹೋಗಿರುತ್ತಿದ್ದ. ನಾನೂ ವಂಶಿ ಹೊರಗೆ ಬಯಲಿನಲ್ಲಿ ಕುರ್ಚಿ ಹಾಕಿಕೊಂಡು ಕುಳಿತು ಹರಟೆ ಹೊಡೆಯುತ್ತಿದ್ದೆವು. ಎರಡು ಮೂರು ತಾಸಿನ ನಂತರ ಅವನು ತನ್ನ ಮನೆಗೆ ಹೋಗುತ್ತಿದ್ದ.

ಕ್ರಮೇಣ ನನ್ನಲ್ಲಿ ಬದಲಾವಣೆ ಬರತೊಡಗಿತು. ಮನುಷ್ಯರ ಮೇಲೆ, ನೆರೆಹೊರೆಯವರ ಮೇಲೆ ಮುನ್ನಿನಷ್ಟು ದ್ವೇಷವಿರಲಿಲ್ಲ. ಗಯ್ಯಾಳಿತನ ಒಂದಿಷ್ಟು ಕಡಿಮೆಯಾಯ್ತು. ಕೆಲಸದವರ ಮೇಲೂ ಅಪರೂಪಕ್ಕೊಮ್ಮೆ ಸಿಟ್ಟಿಗೇಳುತ್ತಿದ್ದೆ. ಚಾಡಿ ಹೇಳುವುದೂ ಕಡಿಮೆಯಾಯ್ತು. ಮನಸ್ಸಿನಲ್ಲಿ ಅದಕ್ಕೆ ಮುನ್ನ ಇದ್ದಷ್ಟು ಗೊಂದಲವಿರಲಿಲ್ಲ, ಹತಾಶೆಯಿಂದ ಹುಚ್ಚು ಹಿಡಿದವಳಂತೆ ವರ್ತಿಸುವ ನಾನು ಸಹಜ ಸ್ಥಿತಿಗೆ ಬಂದೆ. ಅದಕ್ಕೆ ಮುಂಚಿನಂತೆ ಹುಚ್ಚುಚ್ಚು ಕನಸುಗಳೂ ಬೀಳುತ್ತಿದ್ದಿಲ್ಲ. ಆದರೆ ನನ್ನಲ್ಲಿ ಈ ರೀತಿ ಬದಲಾವಣೆಯಾದುದನ್ನು ಮಾತ್ರ ನಾನು ಗ್ರಹಿಸಲಿಲ್ಲ. ನನ್ನೊಳಗೆ ನಾನು ಇಣುಕಿ ನೋಡಿಕೊಳ್ಳಬೇಕೆಂದರೆ ನನಗ್ಯಾವತ್ತೂ ಭಯವೇ.

ವಂಶಿ ತುಂಬಾ ತಮಾಷೆ ಸ್ವಭಾವದ ವ್ಯಕ್ತಿ. ಇಪ್ಪತ್ತು ವರ್ಷಕ್ಕೆ ಅಷ್ಟು ಚೆನ್ನಾಗಿ ಮಾತಾಡೋದು ತುಂಬಾ ವಿರಳ. ಅವನಲ್ಲಿ ಮುಖ್ಯವಾಗಿ ನನಗೆ ಹಿಡಿಸಿದ್ದೆಂದರೆ ಅವನ ಸಮಯಸ್ಫೂರ್ತಿ. ಅವನಲ್ಲಿ ಒಳ್ಳೇ ಹಾಸ್ಯಪ್ರಜ್ಞೆಯಿತ್ತು. ಜೀವನದಲ್ಲಿ ಅಷ್ಟು ಚೆನ್ನಾದ ಹಾಸ್ಯ ಇರುತ್ತದೆನ್ನುವುದನ್ನು ಅವನ ಮೂಲಕವೇ ಮೊದಲ ಬಾರಿಗೆ ತಿಳಿದುಕೊಂಡೆ. ನನ್ನೊಂದಿಗೆ ಮಾತಾಡುವ ಆ ಎರಡು ಮೂರು ತಾಸಿನಲ್ಲಿ ನನ್ನನ್ನು ಬಹಳಷ್ಟು ನಗಿಸುತ್ತಿದ್ದ. ಅವನ ಸಹವಾಸಕ್ಕಿಂತಲೂ ಅವನ ಹಾಸ್ಯ ನನ್ನನ್ನು ಹೆಚ್ಚು ಒಳಗು ಮಾಡಿಕೊಂಡಿತು.

ಆ ದಿನ ಶಿವರಾತ್ರಿ ... ಬೆಳಿಗ್ಗೆ ನಿದ್ದೆಯಿಂದೇಳುತ್ತಲೇ ತಲೆಗೆ ನೀರೆರೆದುಕೊಂಡೆ. ಆ ದಿನ ಉಪ್ಪೊತ್ತಾದ್ದರಿಂದ ತಿಂಡಿ ಗಿಂಡಿ ತಿನದೆ ಊಟ ಮಾಡಬೇಕಿತ್ತಾದ್ದರಿಂದ ಆ ಕೆಲಸಕ್ಕೆ ತೊಡಗಿದೆ. ವಡೆ, ಪಾಯಸ, ಸಾಂಬಾರ್, ಕೊಬ್ಬರಿ ಚಟ್ನಿ ಹೀಗೆ ಹಲವಾರು ಅಡಿಗೆ ಮಾಡಿ ಮುಗಿಸುವ ಹೊತ್ತಿಗೆ ಮಧ್ಯಾಹ್ನ ಎರಡಾಯ್ತು. ನಾನು ನನ್ನ ಗಂಡ ಊಟ ಮುಗಿಸಿದೆವು. ಸ್ವಲ್ಪ ಹೊತ್ತು ನಿದ್ದೆ ತೆಗೆಯೋಣವೆಂದು ಹಾಸಿಗೆಗೆ ಬೆನ್ನು ಒರಗಿಸಿ ಏಳುವಷ್ಟರಲ್ಲಿ ನಾಲ್ಕು ಗಂಟೆಯಾಯ್ತು.

ಮಧ್ಯಾಹ್ನದ ಅಡಿಗೇನೇ ಸಾಕಷ್ಟು ಉಳಿದಿತ್ತಾದ್ದರಿಂದ ರಾತ್ರಿಗೆ ಅದನ್ನೇ ಸರಿಮಾಡಿದರಾಯಿತೆಂದುಕೊಂಡೆ.... ಅಷ್ಟರಲ್ಲಿ ಪಕ್ಕದ ಮನೆಯ

ಸುಗುಣ, ಮಮತ ಬಂದು ಗುಡಿಗೆ ಹೋಗಿ ಬರೋಣವೆಂದು ಕರೆದರು. ನನ್ನಲ್ಲಿ ಬದಲಾವಣೆ ಉಂಟಾದಾಗಿನಿಂದಲೇ ನಮ್ಮ ಮನೆಗೆ ಒಬ್ಬೊಬ್ಬರೇ ಬರತೊಡಗಿದ್ದರು.

ನಮ್ಮ ಊರಿಗೆ ಎರಡು ಫರ್ಲಾಂಗುಗಳ ದೂರದಲ್ಲಿ ಶಿವಾಲಯವಿತ್ತು. ಅವರೊಂದಿಗೆ ಗುಡಿಗೆ ಹೋಗಿ, ತಿರುಗಿ ಬರುವಷ್ಟರಲ್ಲಿ ಆರು ಗಂಟೆಯಾಯ್ತು. ಅಷ್ಟೊತ್ತಿಗೆಲ್ಲ ಇಡೀ ರಾತ್ರಿ ಜಾಗರಣೆ ಮಾಡಲೆಂದು ಯಾರಷ್ಟಕ್ಕವರು ತಮಗಿಷ್ಟವಾದ ಸಮಯ ಕಳೆಯುವ ಉಪಾಯ ಹುಡುಕುತ್ತಿದ್ದರು.

ನನ್ನ ಗಂಡ ಅಷ್ಟೊತ್ತಿಗೆಲ್ಲ ಸಿದ್ಧನಾಗಿ ನನಗೋಸ್ಕರ ಕಾಯುತ್ತಿದ್ದ. ಸೊಂಟಕ್ಕೆ ಕಾಷಾಯ ವಸ್ತ್ರ, ಕೈಯಲ್ಲಿ ಚಯ್ಯಮ್ಮಗಳನ್ನು ನೋಡುತ್ತಲೇ ಆತ ಭಜನೆಗೆ ಹೋಗಲು ತಯಾರಾಗಿರುವಂತೆ ಅರ್ಥವಾಯ್ತು.

'ನಾನು ಭಜನೆಗೆ ಹೋಗ್ತಿದೀನಿ. ಈ ದಿನ ಬೆಳಗಾಗುವ ತನಕ ಭಜನೆ ಇರುತ್ತೆ. ಊಟ ಬಡಿಸು. ಮಾಡಿ ಹೋಗ್ತೀನಿ.'

ಆತನಿಗೆ ಊಟಕ್ಕೆ ಬಡಿಸಿದೆ. ಹತ್ತು ನಿಮಿಷದ ನಂತರ ಆತ ಹೊರಡಲು ಸಿದ್ಧನಾದ. 'ಮತ್ತೆ ನೀನು ಸಮಯ ಹೇಗೆ ಕಳೀತೀಯ? ಮಾತಾಡೋಕೆ ವಂಶಿ ಕೂಡ ಬಂದಿರೋ ಹಾಗಿಲ್ವಲ್ಲ ...' ಎಂದ.

'ಬೆಳಿಗ್ಗೆಯಿಂದ ಕಾಣಿಸಿಲ್ಲ. ಬಹುಶಃ ಸಿನಿಮಾಗೆಹೋಗಿದ್ದಾನೇನೋ . . ಈ ದಿನ ಒಂದು ಟಿಕೆಟ್ಟಿಗೆ ಎರಡು ಆಟವಲ್ವೆ.'

'ಬೇಸರ ಆದ್ರೆ ಹಾಗೇ ದೇವಾಲಯದ ಕಡೆ ಬಾ. ಈ ದಿನ ಭಜನೆ ಚೆನ್ನಾಗಿರುತ್ತೆ. ತಬಲಾ ಮಾಸ್ತರನನ್ನು ತಿರುಪತಿಯಿಂದ ಕರ್ಸಿದೀವಿ.'

'ಆಗ್ಲಿ'

"ಆತ ಅತ್ಯುತ್ಸಾಹದಿಂದ ಹೊರಟು ಹೋದ ... ಮತ್ತೆ ಮತ್ತೆ ಅಡಿಗೆ ಪಾತ್ರೆಗಳನ್ನೆಲ್ಲ ಕಿತ್ತೋದು, ಜೋಡಿಸೋದು, ತೊಳೆಯೋದು ಯಾಕೇಂತ ನಾನೂ ಊಟ ಮುಗಿಸಿ ಬೀದಿಯೊಳಗೆ ಬಂದು ನಿಂತುಕೊಂಡೆ. ಆ ಕೋಲಾಹಲ ವರ್ಣಿಸಲು ಮಾತುಗಳು ಸಾಲವು. ಬೀದಿ ದೀಪಗಳ ಕೆಳಗೆ ಜನ ಗುಂಪು ಗುಂಪಾಗಿ ಇದ್ದರು. ವಯಸ್ಸಿನಲ್ಲಿರೋ ಹುಡುಗಿಯರು ಗುಂಪು ಗುಂಪಾಗಿ ಬೇರ್ಪಟ್ಟು ಹಲವಾರು ಆಟಗಳನ್ನು ಆಡುತ್ತಿದ್ದರು. ಕೆಲವರು ಕುಂಟೋಬಿಲ್ಲೆ, ಇನ್ನು ಕೆಲವರು ಕುಂಟಾಟ, ಮತ್ತೆ ಕೆಲವರು ಕಣ್ಣಾಮುಚ್ಚಾಲೆ ಹೀಗೆ ಹಲವಾರು ಆಟಗಳನ್ನು ಆಡುತ್ತಿದ್ದರು. ಕೆಲವರು ವೃದ್ಧರು 'ಹುಲಿಮೇಕೆ' ಆಟದಲ್ಲಿ ಮಗ್ನರಾಗಿದ್ದರು. ಇನ್ನು ಕೆಲವರು ಭಜನೆಗೆ ಹೊರಡಲು ಸಿದ್ಧರಾಗಿದ್ಧರು.

ನಾನೂ ಯಾವುದಾದರೂ ಗುಂಪಿನಲ್ಲಿ ಸೇರಿಕೊಂಡರಾಯಿತೆಂದುಕೊಳ್ಳುತ್ತಿರುವಾಗ ಸುಗುಣ, ಮಮತ ಬಂದರು.

'ಏನ್ಮಾಡೋಣ' ಎಂದು ಕೇಳಿದಳು ಮಮತ.

'ಅದೇ ಯೋಚಿಸ್ತಿದೀನಿ'

'ನಮ್ಮೆಜಮಾನರು ಎಲ್ಲರೂ ಕೂಡಿ 'ಪತಾಜೋರ್' ಆಟ ಆಡೋಣ ಅಂತಿದಾರೆ . ' ಎಂದಳು ಸುಗುಣ.

"ಎಲ್ಲರೂ ಸೇರಿದ್ರೆ ಯಾವ್ದೋ ಒಂದು ಆಡಬಹುದು ಬಿಡು–ಒಂದೇ ಆಟ ಆಡ್ತಿದ್ರೆ ಬೇಸರವಾಗುತ್ತೆ, ಸ್ವಲ್ಪ ಹೊತ್ತು 'ಪತಾಜೋರ್,' ಸ್ವಲ್ಪ ಹೊತ್ತು ಕಣ್ಣಾಮುಚ್ಚಾಲೆ, ಸ್ವಲ್ಪ ಹೊತ್ತು ಕುಂಟೋಬಿಲ್ಲೆ.. ಹೀಗೆ ಬೇರೆ ಬೇರೆ ಆಡೋಣ. ಸಿನಿಮಾ ರಶ್ ಆಗಿರುತ್ತೇಂತ ನಮ್ಮೆಜಮಾನರ ಮನೆಯಲ್ಲಿದ್ದಾರೆ. ಎಲ್ರೂ ಕೂಡಿದ್ರೆ ಟೈಂ ಪಾಸಾಗುತ್ತೆ. ಇಷ್ಟಕ್ಕೂ ಚಲಪತೆಣ್ಣ ಎಲ್ಲಿ? ಭಜನೆಗೆ ಹೋಗಿದ್ದಾನಾ?"

"ಅಂ.. ಗುರು ಹೋಗಿದ್ದಿದ್ರೆ ಅದೋ, ಆಗ್ಲೇ ತಬಲಾ ಶೃತಿ ಮಾಡ್ತಿರೋ ಹಾಗಿದೆ. ಎಲ್ರೂ ಒಂದೆಡೆ ಸೇರೋಣ. ಮನೆಗೆ ಬೀಗ ಹಾಕಿ ಬರ್ತೀನಿ" ಎಂದು ಒಳಗೆ ಹೋದೆ. ವಂಶಿ ಎಲ್ಲಿಗೆ ಹೋಗಿರಬಹುದು. ಎಂದು ಯೋಚಿಸುತ್ತ ಅಡಿಗೆ ಮನೆ ಸ್ವಚ್ಛಗೊಳಿಸಿ ಮನೆಗೆ ಬೀಗ ಹಾಕಿದೆ. ಹೊರಬರುತ್ತಿದ್ದಂತೆಯೇ ವಂಶಿ ಎದುರಾದ.

"ಎಲ್ಲಿಗ್ಹೋಗಿದ್ದೆ? ಇಷ್ಟು ಹೊತ್ತೂ ನಿನಗೋಸ್ಕರಾನೇ ಕಾಯ್ತಿದ್ದೆ."

"ಎಲ್ಲಿಗೂ ಹೋಗಿರಲಿಲ್ಲ. ಯಾವ್ದೋ ಸಣ್ಣ ಪುಟ್ಟ ಕೆಲಸ ನೋಡಿಕೊಂಡು ಬರುವಷ್ಟರಲ್ಲಿ ಇಷ್ಟು ಹೊತ್ತಾಯ್ತು."

"ಶಿವರಾತ್ರಿ ಅಲ್ವಾ, ಸಿನಿಮಾಗೆ ಹೋಗಿರಬೇಕು. ಅಂತಂದ್ಕೊಂಡಿದ್ದೆ."

"ಸ್ನೇಹಿತರು ಬಾ ಅಂತಂದ್ರು, ಆದ್ರೆ ಹೋಗ್ಲಿಲ್ಲ."

"ರಾತ್ರಿ ಜಾಗರಣೆ ಮಾಡ್ತೀಯಾ?"

"ಊಂ... "

"ಮತ್ತೆ ಈ ಹೊತ್ತು ಹೇಗೆ ಕಳೀತೀಯ? ಸುಗುಣ, ಮಮತ, ಆಟ ಆಡೋಣ ಅಂದಿದ್ರಿಂದ ಹೊರಟಿದೀನಿ ... ನೀನೂ ನಂಜೊತೆ ಸೇರ್ಕೋ ... ... ಮಜವಾಗಿರುತ್ತೆ."

"ಆಗ್ಲಿ."

ಇಬ್ಬರೂ ಸುಗುಣಳ ಮನೆಗೆ ಹೋಗುವಷ್ಟರಲ್ಲಿ ಎಲ್ಲರೂ ನನಗೋಸ್ಕರ ಕಾಯುತ್ತಿದ್ದರು. ವಂಶಿ ಕೂಡ ಬಂದದ್ದರಿಂದಅವರು ತುಂಬಾ ಆನಂದಪಟ್ಟರು.

ಬಚ್ಚಿಟ್ಟುಕೊಳ್ಳೋ ಆಟವು ಶುರುವಾಯ್ತು. ಎಲ್ಲರೂ ವರ್ತುಲಾಕಾರವಾಗಿ ನಿಂತು ಚಪ್ಪಾಳೆಹಾಕಿದೆವು ಮೊದಲು ಸುಗುಣಳ ಗಂಡ ಕಳ್ಳನಾದ ಕಳ್ಳನಾದ ವ್ಯಕ್ತಿಗೆ ಕಣ್ಣು ಮುಚ್ಚಿ ಎಲ್ಲರೂ ಬಚ್ಚಿಟ್ಟುಕೊಂಡ ನಂತರ ಕಣ್ಣು ತೆರೆಯುವ ಜವಾಬ್ದಾರಿಯನ್ನು ಸುಗುಣಳ ಅತ್ತೆಗೆ ವಹಿಸಿದೆವು. ಆಕೆಗೆ ಸುಮಾರು ಎಪ್ಪತ್ತು ವರ್ಷ ವಯಸ್ಸಾಗಿತ್ತು. ಆಕೆ ತನ್ನ ಅಳಿಯನನ್ನು ಮುಂದೆ ಕೂಡಿಸಿಕೊಂಡು ಕಣ್ಣುಮುಚ್ಚಿದಳು.

ನಾವೆಲ್ಲ ತಲಾ ಒಂದು ದಿಕ್ಕಿಗೆ ಓಡಿದೆವು. ನಾನು ಅವರ ಮನೆಯ ಹಿಂದಿದ್ದ ಹುಲ್ಲಿನ ಬಣವೆಯಲ್ಲಿ ಬಚ್ಚಿಟ್ಟುಕೊಂಡೆ ಸ್ವಲ್ಪ ಹೊತ್ತಿನ ನಂತರ ಕಳ್ಳ ಮಮತಳನ್ನು ಹಿಡಿದನೆಂದೂ, ಎಲ್ಲರೂ ಬಂದುಬಿಡಿರೆಂದೂ ಸುಗುಣ ಕೂಗು ಹಾಕಿದಳು. ನನ್ನನ್ನು ಯಾರೂ ಕಂಡು ಹಿಡಿಯಲಿಲ್ಲವೆನ್ನುವ ಆನಂದದಿಂದ ಹೊರಬಂದೆ ವಂಶಿಯನ್ನು ನೋಡಿ ಗರ್ವದಿಂದ ನಕ್ಕೆ.

ಈ ಸಲ ಮಮತಳ ಕಣ್ಣು ಮುಚ್ಚಲಾಯ್ತು. ನಾನು ಬುದ್ಧಿ ಬಳಸಿ ಮುದುಕಿಯ ಹಿಂದೆಯೇ ಅಡಗಿಕೊಂಡೆ. ಆ ಮುದುಕಿ ಕಣ್ಣಿಗಡ್ಡವಿಟ್ಟಿದ್ದ ಕೈಗಳನ್ನು ತೆಗೆದ ನಂತರ ಮಮತ ಹುಡುಕಲು ಹೊರಟಳು.

ಈ ಸಲ ವಂಶಿ ಸಿಕ್ಕಿಬಿದ್ದ.

'ಭಲೇ ಭಲೇ . ನೀನು ಕಳ್ಳ ಆಗ್ಬಿಟ್ಟೆ' ಎನ್ನುತ್ತ ಚಿಕ್ಕ ಹುಡುಗಿಯಂತೆ ಚಪ್ಪಾಳೆ ತಟ್ಟಿದೆ. ಆ ಆಟ ಆಡುತ್ತ ನಾನು ಚಿಕ್ಕ ಹುಡುಗಿಯೇ ಆಗಿಬಿಟ್ಟೆ. ನನ್ನ ತಂದೆ-ತಾಯಿ ನನಗಿಷ್ಟವಿರದಿದ್ದರೂ ಮಾವನಿಗೆ ಕೊಟ್ಟು ಮದುವೆ ಮಾಡಿದ್ದಾಗಲಿ, ನಮ್ಮಿಬ್ಬರ ನಡುವೆ ಪೇರಿಕೊಂಡ ಅಸಂತೃಪ್ತಿಯಾಗಲಿ, ನನಗಿನ್ನೂ ... ಮಕ್ಕಳಾಗಿಲ್ಲವೆನ್ನುವ .. ಕೊರಗಾಗಲಿ, ಯಾವುದೂ ನೆನಪಿಗೆ ಬರಲಿಲ್ಲ. ಬಹುಕಾಲದ ನಂತರ ನನ್ನನ್ನು ನಾನು ಮರೆತುಬಿಟ್ಟೆ. ನನಗಿನ್ನೂ ಮದುವೆಯಾಗದಿರುವಂತೆಯೂ ಹಾಯಾಗಿ ಮೋಜಿನಿಂದ ಮುಸುಕು ಬೆಳದಿಂಗಳಿನಲ್ಲಿ ಸ್ನೇಹಿತೆಯರೊಂದಿಗೆ ಕೂಡಿ ಆಡುತ್ತಿರುವಂತಿತ್ತು.

ಆ ಮುದುಕಿ ವಂಶಿಯ ಕಣ್ಣು ಮುಚ್ಚಿದಳು.ಎಂತಹುದೇಪರಿಸ್ಥಿತಿಯಲ್ಲಿ ವಂಶಿಗೆ ಕಾಣಬಾರದೆಂದುಕೊಂಡು, ಎಲ್ಲಿ ಬಚ್ಚಿಟ್ಟುಕೊಳ್ಳಬೇಕೆಂದು ಆಲೋಚಿಸಿದೆ. ನಮ್ಮ ತಾರಸಿ ಸರಿಯಾದ ಸ್ಥಳವೆನಿಸಿತು. ಸುಗುಣಳ ಮನೆಯಿಂದ ನೇರವಾಗಿ ಹೋಗಿ ನಮ್ಮ ಮನೆ ಹಿತ್ತಲೊಳಗೆ ಸೇರಿ, ಅಲ್ಲಿಂದ ಹಿಂದಿನ ದಾರಿಯ ಮೂಲಕ ಮುಂದೆ ಬಂದು ಮೆಟ್ಟಿಲು ಹತ್ತಿದೆ. ಒಂದು ಮೂಲೆಯಲ್ಲಿ ಮುದುಡಿ ಕುಳಿತೆ.

ಭಜನೆ ಮೆಲ್ಲಗೆ ಕೇಳಿ ಬರುತ್ತಿತ್ತು. ಬೀದಿಯಲ್ಲಿ ದೀಪಗಳಿದ್ದುದರಿಂದ ತೆಳುವಾದ, ಬೆಳಕು ಕತ್ತಲೆ ದೇಹದ ಮೇಲೆ ಪಲ್ಯದಂತೆ ಕಂಡು ಬರುತ್ತಿತ್ತು. ಒಪ್ಪತ್ತಿದೆಯೇನೋ ಎನ್ನುವಂತೆ ಗಾಳಿ ಮೆಲ್ಲಗೆ ಬೀಸುತ್ತಿತ್ತು. ಆಕಾಶದಲ್ಲಿ ಅಲ್ಲಿದ್ದ ನಕ್ಷತ್ರಗಳು ಶಿವನನ್ನು ಪೂಜಿಸಲು ದೇವತೆಗಳು ಆಯ್ದುತಂದ ತುಂಬೆ ಹೂಗಳಂತಿದ್ದವು.

ವಂಶಿ ಬಂದರೂ ಕಂಡುಬರದಂತಿರಲು ತಲೆ ತಗ್ಗಿಸಿಕೊಂಡು ಮೋಟು ಗೋಡೆಯ ಮರೆಯಲ್ಲ ಕುಳಿತಿದ್ದೆ. ಐದು ನಿಮಿಷಗಳು ಕಳೆದವು. ಇನ್ನು ವಂಶಿ ಇಲ್ಲಿಗೆ ಬರುವುದಿಲ್ಲವೆಂದು ಅಂದುಕೊಳ್ಳುತ್ತಿರುವಂತೆ ಯಾರೋ ನನ್ನ ಗದ್ದ ಹಿಡಿದು ಮೇಲೆತ್ತುತ್ತಿರುವಂತೆನ್ನಿಸಿತು. ತಟಕ್ಕನೆ ತಲೆ ಎತ್ತಿದೆ.

ನನ್ನೆದುರಿಗೆ ಮೊಣಕಾಲೂರಿ ಕುಳಿತಿದ್ದ ವಂಶಿ ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದ. ನಾನು ಏನೋ ಮಾತಾಡಬೇಕೆಂದುಕೊಂಡವಳು, ಅವನನ್ನು ನೋಡಿ ಆ ಪ್ರಯತ್ನ ಕೈ ಬಿಟ್ಟೆ. ಅವನು ನನ್ನ ಪ್ರಮೇಯವೇನೂ ಇಲ್ಲ ದೆಯೇ ನನ್ನ ಮೇಲೆ ಬಾಗಿ ಗಾಢವಾಗಿ ಮುತ್ತಿಟ್ಟ ಇದ್ದಕ್ಕಿದ್ದಂತೆ ನನ್ನಲ್ಲಿ ತೀವ್ರ ಚಲನೆಯುಂಟಾಯ್ತು ವಿಚಿತ್ರವೇನೆಂದರೆ ನನಗೆ ಆ ಕ್ಷಣದಲ್ಲಿ ನನ್ನ ಗಂಡ ನೆನಪಿಗೆ ಬರಲಿಲ್ಲ. ನಾನು ವಿವಾಹಿತೆ ಎನ್ನುವ ವಿಷಯವನ್ನೇ ಮರೆತು ಬಿಟ್ಟೆ. ಅದಕ್ಕೆ ಮುನ್ನ ಆಟ ಶುರು ಮಾಡಿದಾಗ ಉಂಟಾದ ಭಾವನೆಯೇ ಮುಂದುವರಿಯಿತು. ನನಗಿನ್ನೂ ಮದುವೆಯಾಗದಿರುವಂತೆ, ಹಾಯಾಗಿ ಮಬ್ಬು ಬೆಳದಿಂಗಳಲ್ಲಿ ಸ್ನೇಹಿತರೊಂದಿಗೆ ಕೂಡಿ ಆಟವಾಡುತ್ತಿರುವಂತೆ ಈಗ ವಂಶಿ ನನಗೆ ಮುತ್ತಿಡುತ್ತಿರುವಂತೆ ಭಾಸವಾಯ್ತು.

"ವಂಶಿ... " ಎಂದೆ.

ಅವನು ಏನೂ ಮಾತಾಡಲಿಲ್ಲ. ನನ್ನನ್ನು ಗಟ್ಟಿಯಾಗಿ ತಬ್ಬಿಕೊಂಡ. ಆ ಹಿಡಿತದಲ್ಲಿಯೇ ನನ್ನ ಮೇಲೆ ಅವನಿಗಿರುವ ಮೋಹ ಗೊತ್ತಾಗುತ್ತಿತ್ತು. ಅವನು ಬಿಡುತ್ತಿರುವ ಉಸಿರಿನಲ್ಲಿಯೇ ನನ್ನ ಮೇಲಿರುವ ಕೋರಿಕೆ ಗೊತ್ತಾಗುತ್ತಿತ್ತು. ಅವನ ಹೃದಯದ ಬಡಿತದಲ್ಲಿಯೇ ಆವೇಶದ ತೀವ್ರತೆ ಎಷ್ಟಿದೆ ಎನ್ನುವುದು ಗೊತ್ತಾಗುತ್ತಿತ್ತು. ಹುಚ್ಚು ಹಿಡಿದವನಂತೆ ನನ್ನ ಮೈಯನ್ನು ಹಿಂಡಿ, ಹಿಪ್ಪೆ ಮಾಡುತ್ತ, ಮುತ್ತಿನ ಮಳೆಗರೆಯುತ್ತಿದ್ದ.

ಆ ಮಾಧುರ್ಯಕ್ಕೆ ನನ್ನ ತುಟಿಗಳು ಹವಳಗಳಾಗಿ, ನನ್ನ ಕಣ್ಣುಗಳು ನೀಲಮಣಿಗಳಾಗಿ, ನನ್ನ ಕೆನ್ನೆಗಳು ರತ್ನಗಳಾಗಿ, ನನ್ನ ಸ್ತನಗಳು ವಜ್ರ ಗಳಾಗಿ–ನಾನೇ ನವರತ್ನ ಖಚಿತ ಕಿರೀಟವಾಗಿ ಅವನ ತಲೆಯ ಮೇಲೆ ಅಲಂಕಾರಗೊಂಡಂತೆ ಭಾಸವಾಯ್ತು.

ಅವನು ತಟಕ್ಕನೆ ನನ್ನನ್ನು ಬಿಟ್ಟು ಮೆಲ್ಲಗೆ ತಳ್ಳಿದ. ಎಷ್ಟು ಲಾಘವದಿಂದ ತಳ್ಳಿದನೆಂದರೆ, ನನ್ನ ತಲೆಗೂದಲು ಗಂಟು ಕಳಚಿಕೊಂಡಿತು ಕೂದಲುಗಳನ್ನೆಲ್ಲ ಎರಡು ಕೈಗಳಲ್ಲಿಹಿಡಿದುಕೊಂಡು ಮುಖ ಮೇಲೆ ತಿಕ್ಕಿಕೊಂಡ. ಎಷ್ಟು ಲಾಲಿತ್ಯದಿಂದ ತಿಕ್ಕಿಕೊಂಡನೆಂದರೆ ಪ್ರಾಣವಿಲ್ಲದ ಕೂದಲುಗಳು ಕೂಡ ಪುಳಕಗೊಂಡಂತೆ ಅನ್ನಿಸಿತು.

645520R

ನನ್ನ ಮುಖದ ಮೇಲೆಹಾಗೆಯೇ ತಲೆಯಿಟ್ಟು ಅದುಮಿದ. ಎಷ್ಟು ಬಲವಾಗಿ ಅದುಮಿದನೆಂದರೆ, ಕಣ್ಣುಗಳಲ್ಲಿನ ಬಣ್ಣದ ಕನಸುಗಳೆಲ್ಲವೂ ಒಂದೇ ಸಲಕ್ಕೆ ಬಿಚ್ಚಿಕೊಂಡವು. ತುಟಿಗಳ ಮೇಲೆ ತುಟಿಯಿಟ್ಟು ಒತ್ತಿದ. ಎಷ್ಟು ಮಾಧುರ್ಯದಿಂದ ಒತ್ತಿದನೆಂದರೆ, ಅಲ್ಲೆಲ್ಲ ಅಮೃತ ತುಂಬಿದ ತತ್ತಿಗಳು ಬಿರಿದಂತೆ ಎಂಜಲುಮಯವಾಯ್ತು. ಹಾಗೆಯೇ ಕೆಳಗೆ ಸರಿದು ನನ್ನ ವಕ್ಷಸ್ಥಳದ ಮೇಲೆ ಮುಖ ಹಿಡಿದ.

ಎಷ್ಟು ಆವೇಶದಿಂದ ಹಿಡಿದನೆಂದರೆ, ನನ್ನ ಯೌವನಕಲಶಗಳು ಉಕ್ಕೇರಿ ಪರವಶಗೊಂಡವು. 'ಏ' ಆಕಾರದಲ್ಲಿ ತೆರೆದುಕೊಂಡಿದ್ದ ಭಾಗದಲ್ಲಿ ಹಲ್ಲುಗಳಿಂದ ಅದುಮಿದ. ಏನೋ ಬೇಕೆನ್ನುವ ಬಯಕೆ, ತಾಪ ಎದ್ದಿತು.

ಅಲ್ಲಿಂದ ಕೆಳಗೆ ಜಾರಿ ನನ್ನ ಸೊಂಟದ ಮಡಿಕೆಗಳನ್ನು ಕೈಗಳಿಂದ ಒತ್ತಿದ. ಎಷ್ಟು ಅದ್ಭುತವಾಗಿ ಒತ್ತಿದನೆಂದರೆ, ಅಲ್ಲಿ ಪ್ರಾರಂಭವಾದ ಕಂಪನದ ಅಲೆಗಳು ಶರೀರವನ್ನೆಲ್ಲ ವ್ಯಾಪಿಸಿ ಅಲುಗಾಡಿಸಿ ಬಿಟ್ಟವು. ಹೊಕ್ಕುಳನ್ನು ಹುಡುಕಾಡಿ ಮುದ್ದಿಸಿದ. ಅದು ಎಷ್ಟು ರೋಮಾಂಚನಕಾರಕವಾಗಿತ್ತೆಂದರೆ, ಸುಖವನ್ನೀಯುವ ನಾಡಿಗಳೆಲ್ಲವೂ ಅಲ್ಲಿಯೇ ಕೇಂದ್ರೀಕೃತವಾಗಿರುವಂತೆ ಅನಿಸಿತು.

ಮೊದಲ ಬಾರಿಗೆ ಪುರುಷನನ್ನು ಹಂಚಿಕೊಳ್ಳುತ್ತಿರುವ ಅನುಭೂತಿ.ವಂಶಿ ನನಗಿಂತಲೂ ಚಿಕ್ಕವನೆಂದೂ, ನಾನವನಿಗೆ ಅತ್ತೆಯಾಗುತ್ತೇನೆಂದೂ, 'ಪತಾ ಚೋರ್' ಆಟ ಆಡುತ್ತ ನಾವು ಹೀಗೆ ಸಿಕ್ಕಿಬಿದ್ದೆವೆಂದಾಗಲಿ ಅನ್ನಿಸಲಿಲ್ಲ. ಸೃಷ್ಟಿಯ ಮಾಧುರ್ಯವನ್ನು ಸವಿನೋಡಲು ಸಿದ್ಧವಾಗುತ್ತಿರುವ ಎರಡುಜೀವಿಗಳಾಗಿಬಿಟ್ಟೆವು.

ದೂರದಲ್ಲಿ ಭಜನೆಯ ಹಾಡು ಕೇಳಿಸುತ್ತಿತ್ತು. ಸುಖದ ಅಮಲಿಗೆ ನನ್ನ ಕಣ್ಣುಗಳು ಮುಚ್ಚಿಕೊಂಡವು. ವಂಶಿ ನನ್ನನ್ನು ಪೂರ್ತಿಯಾಗಿ ಆಕ್ರಮಿಸಿಕೊಂಡ ಹದಿನೈದು ನಿಮಿಷಗಳ ಕಾಲ, ಇಬ್ಬರೂ ಸುಖದ ಅನ್ವೇಷಣೆಯಲ್ಲಿ ಕೊಸರಾಡಿದೆವು ಕೋರಿಕೆಯಿಂದ ಬಿಸಿಯೇರಿದ ಶರೀರಗಳು ರಸಾನುಭೂತಿಯಲ್ಲಿ ತೊಯ್ದು ತಂಪುಗೊಂಡವು.

ವಂಶಿ ಮೆಲ್ಲಗೆ ಮೇಲೆದ್ದು, ನನ್ನನ್ನು ಎಬ್ಬಿಸಲು ಕೈ ನೀಡಿದ. ಇಬ್ಬರೂ ತಾರಸಿಯ ಮೆಟ್ಟಿಲಿಳಿಯುತ್ತಿರುವಾಗ ಗೇಟಿನ ಬಳಿ ಸದ್ದಾಯ್ತು. ಯಾರೋ ಬರುತ್ತಿರುವಂತೆನ್ನಿಸಿ ವೇಗವಾಗಿ ಎರಡು ಹೆಜ್ಜೆ ಮುಂದಿಟ್ಟೆ.

ನನ್ನ ಗಂಡ ಗೇಟಿನೊಳಗೆ ಬಂದು ಹಾಗೆಯೇ ನಿಂತು ಬಿಟ್ಟ. ಆತನತ್ತ ನೋಡಲು ಧೈರ್ಯ ಸಾಲದೆ ತಲೆ ತಗ್ಗಿಸಿದೆ. ಯಾವುದೋ ಅರಿಯದ ಭಯ ಶರೀರವನ್ನು ವಶಪಡಿಸಿಕೊಳ್ಳುತ್ತಿದೆಯೆನ್ನುವಂತೆ ತೂರಾಡಿ ಬೀಳಲಿದ್ದವಳು ಬಲವಂತವಾಗಿ ನಿಗ್ರಹಿಸಿಕೊಂಡೆ. ಪಾಪ... ! ದಿಕ್ಕು ತೋಚದಂತಾದ ವಂಶಿ ಹಾಗೆಯೇ ನನ್ನ ಹಿಂದೆ ನಿಂತು ಬಿಟ್ಟ.

ಮೊದಲು ಸುಧಾರಿಸಿಕೊಂಡದ್ದು ನನ್ನ ಗಂಡನೇ. ಮೆಲ್ಲಗೆ ಚಲಿಸಿ ವರಾಂಡದೊಳಗೆ ಬಂದು ನಿಂತುಕೊಂಡ. ನಾನು ಸ್ವಲ್ಪ ಧೈರ್ಯ ತಂದು ಕೊಂಡೆ. ತೀರಾ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿಲ್ಲವಾದ್ದರಿಂದ ಏನೋ ಒಂದು ಸುಳ್ಳು ಹೇಳೋಣವೆಂದುಕೊಂಡು, ವಂಶಿಯತ್ತ ತಿರುಗಿ ಹೊರಟು ಹೋಗು ವಂತೆ ಕೈ ಸನ್ನೆ ಮಾಡಿದೆ. ಅವನು ಕ್ಷಣ ಹೊತ್ತು ನನ್ನನ್ನು ದಿಟ್ಟಿಸಿ ನೋಡಿ, ಆ ನಂತರ ಮೆಲ್ಲಗೆ ಹೆಜ್ಜೆ ಇಡುತ್ತ ಹೊರಟುಹೋದ ನಾನು ವರಾಂಡದೊಳಗೆ ಬಂದು ಬೀಗ ತೆಗೆದೆ.

ನನ್ನ ಗಂಡ ಮನೆಯೊಳಗೆ ಬಂದು ಹಾಲ್‌ನಲ್ಲಿ ನಿಂತ. ದೀಪ ಹಾಕಲಿಲ್ಲ ಮಬ್ಬು ಬೆಳಕು ಕತ್ತಲಲ್ಲಿ ಈಜುತ್ತಿರುವ ಮೀನು ಮರಿಯು ಚರ್ಮದಂತಿತ್ತು.

'ಲಹರಿ' ನನ್ನ ಗಂಡ ಕರೆದ. ಏನೆನ್ನುವಂತೆ ಎದುರಿಗೆ ಹೋಗಿ ನಿಂತು ಕೊಂಡೆ. 'ನೀನು ನನಗೊಂದು ವಚನ ಕೊಡಬೇಕು' ಎನ್ನುತ್ತ ಕೈ ಚಾಚಿದ.

ಆ ವಚನ ಏನಾಗಿರಬಹುದೆಂದು ಆ ಕ್ಷಣದಲ್ಲಿ ಹಲವಾರು ರೀತಿ ಊಹಿಸಿದೆ. ಆದರೆ ನನ್ನ ಊಹೆಗಳೆಲ್ಲವೂ ತಪ್ಪಾದವು.

'ಆ ವಚನ ಏನು ಗೊತ್ತಾ ... ...?ನೀನು ಎಂದಿಗೂ ವಂಶಿಯನ್ನು ಬಿಡ ಕೂಡದು '

ನನ್ನ ಗಂಡ ಎದುರಾದಾಗ ಕೂಡ ನಾನಷ್ಟು ಆಘಾತಕ್ಕೀಡಾಗಿರಲಿಲ್ಲ. ಆಶ್ಚರ್ಯದಿಂದ ನನ್ನ ಮೈ ಉಬ್ಬಿತು. ನಾನು ಕೇಳುತ್ತಿರುವುದು ನಿಜವೇ ಎಂದು ನಂಬಿಕೆ ಉಂಟು ಮಾಡಲೆಂದೋ ಏನೋ ಎರಡನೇ ಸಲ ಹೇಳಿದ. "ನಿಮ್ಮಿಬ್ಬರ ಸಂಬಂಧ ಜೀವನವಿಡೀ ಮುಂದುವರೆಯಬೇಕು."

ನನ್ನ ಬಾಯಿಂದ ಮಾತು ಹೊರಡಲಿಲ್ಲ. ತುಟಿಗಳು ಒಣಗಿಕೊಂಡವು. ಮೈಯಲ್ಲಿನ ಶಕ್ತಿಯೆಲ್ಲ ಆವಿಯಾಗಿ ಹೋದಂತೆನಿಸಿತುಹೇಗೋ ಬಾಯಿಬಿಟ್ಟೆ.

'ಏನು ನೀವು ಹೇಳ್ತಿರೋದು' ಎಂದು ಕೇಳಿದೆ.

'ನಾನು ಹೀಗೆ ಕೇಳೋದಿಕ್ಕೆ ಕಾರಣ ಇದೆ. ನಿನಗೆ ಗಯ್ಯಾಳಿತನದ ರೋಗ ಹೇಗೆ ಬಂತ ಅಂತು ನಮ್ಮ ಮದುವೆಯಾದಾಗಿನಿಂದ ಯೋಚಿಸ್ತಿದೀನಿ' ಆ ರೋಗಕ್ಕೆ ಏನೌಷಧಿ ಅಂತ ಇಷ್ಟು ಕಾಲ ತಲೆ ಕೆಡಿಸಿಕೊಂಡೆ. ತಮಾಷೆ ಏನು ಗೊತ್ತಾ? ಆ ರೋಗ ವಾಸಿಯಾಗತೊಡಗಿದಾಗ, ಆ ರೋಗಕ್ಕೆ ಕಾರಣ ವೇನು?ಅದಕ್ಕೆ ಔಷಧಿ ಏನು ಅಂತ ನನಗೆ ಗೊತ್ತಾಯ್ತು. "ಅದಕ್ಕೇ ವಂಶೀನ ಯಾವತ್ತಿಗೂ ಬಿಡ್ಬೇಡ."

ನಾನು ಏನೂ ಮಾತಾಡಲಿಲ್ಲ. ಮತ್ತೆ ನನ್ನ ಗಂಡನೇ ಮುಂದುವರಿಸಿದ. "ವಂಶೀನ ಎಂದಿಗೂ ಬಿಡೋದಿಲ್ಲಾಂತ ನೀನು ನನಗೆ ಮಾತು ಕೊಡದಿದ್ರೆ, ನಾನು ಈಗ್ಲೇ ನೇಣು ಹಾಕ್ಕೊಂಡು ಸತ್ತೋಗ್ತೀನಿ. ಅವನು ನಮ್ಮ ಮನೆಗೆ ಯಾವಾಗಲೂ ಬಂದು ಹೋಗ್ತಾ ಇರಬೇಕು "

ನನಗೆ ಮೈಯೆಲ್ಲ ಬೆವರೊಡೆದು ಒದ್ದೆಯಾಗಿತ್ತು.ನಾನು ಏನೂ ಮಾತಾಡದಿದ್ದುದರಿಂದ ಆತ ಗಂಭೀರವಾಗಿ ದೇವರ ಕೋಣೆಯೊಳಗೆ ಹೋಗಿ, ಅದೇ ವೇಗದಲ್ಲಿ ಬಾಗಿಲು ಮುಚ್ಚಿ ಅಗುಳಿ ಹಾಕಿಕೊಂಡ.

ಹೆಂಡತಿಯ ಪ್ರಿಯತಮ ಯಾವಾಗಲೂ ಮನೆಗೆ ಬಂದು ಹೋಗುತ್ತಿರ ಬೇಕೆನ್ನುವ ವಚನಕ್ಕೋಸ್ಕರ ನೇಣು ಹಾಕಿಕೊಳ್ಳುತ್ತೇನೆನ್ನುವ ಗಂಡನಿಗೆ ಏನು ಉತ್ತರ ಹೇಳಬೇಕೆಂಬುದು ಯಾರಿಗೆ ಮಾತ್ರ ಏನು ಗೊತ್ತಿರುತ್ತೆ? ಆ ರೀತಿ ಉಪೇಕ್ಷೆ ಮಾಡುತ್ತಿದ್ದರೆ ಆತ ಸತ್ತು ಹೋಗುತ್ತಾನೆನಿಸಿ, "ಆಗ್ಲಿ ಕಣ್ರೀ ನೀವು ಹೇಳಿದಂತೆಯೇ ನಮ್ಮ ಸಂಬಂಧ ಮುಂದುವರೆಯುತ್ತೆ."ಬಾಗಿಲುತೆಗೀರಿ ಎನ್ನುತ್ತ ನಾನು ಬಲವನ್ನೆಲ್ಲ ಕೈಗೆ ತಂದುಕೊಂಡು ಬಾಗಿಲು ಬಡೆಯು ತೊಡಗಿದೆ.

"ಮುಂದಿನ ಕ್ಷಣ ಬಾಗಿಲು ತೆರೆದುಕೊಂಡಿತು."

ಲಹರಿ ಹೇಳುವುದನ್ನು ಪೂರ್ತಿಮಾಡಿ ಗೋಪಾಲಕೃಷ್ಣನ ಪ್ರತಿಕ್ರಿಯೆಯನ್ನು ನೋಡಲು ಮತ್ತಷ್ಟು ಕಣ್ಣರಳಿಸಿದಳು.

"ಮತ್ತೆ ಆ ಊರು ಬಿಟ್ಟು ಇಲ್ಲಿಗ್ಯಾಕೆ ಬಂದಿರಿ ...... " ಎಂದು ಕೇಳಿದ ಗೋಪಾಲಕೃಷ್ಣ."

"ಯಾಕೋ ನಮ್ಮೂರಿನಲ್ಲಿ ಭೂ ಜಲ ಪೂರ್ತಿ ತಳಕ್ಕಿಳಿದುಬಿಟ್ಟಿತು . . ನೀರಿನ ಸೌಕರ್ಯ ಪೂರ್ತಿಯಾಗಿ ಇಲ್ಲವಾಯ್ತು. ಅದರಿಂದಾಗಿ ಊರಿನ ಜನ ತಮಗೆ ಅನುಕೂಲವಾದ ಸ್ಥಳಗಳಿಗೆ ಹೊರಟು ಹೋದರು. ನಾವು ಇಲ್ಲಿಗೆ ಬಂದ್ವಿ.'

"ವಂಶಿ?"

"ಮಿಲಿಟರಿ ಸೇರಿಕೊಂಡ ..... ... ಅವನನ್ನು ನೋಡಿ ನಾಲ್ಕು ವರ್ಷ ಆಯ್ತು."

ಆ ನಂತರ ಅವರಿಬ್ಬರೂ ಬಹಳ ಹೊತ್ತಿನವರೆಗೆ ಏನೂ ಮಾತಾಡಲಿಲ್ಲ. ತಮ್ಮ ತಮ್ಮ ಆಲೋಚನೆಗಳಲ್ಲಿ ತಾವು ಮುಳುಗಿದ್ದರು. ಕೊನೆಗೆ ಗೋಪಾಲ ಕೃಷ್ಣನೇ ಆಲೋಚನೆಯಿಂದ ಹೊರಬಿದ್ದು ಲಹರಿಯನ್ನು ತನ್ನತ್ತ ತಿರುಗಿಸಿ ಕೊಂಡ. ಅವಳನ್ನು ಹಳೆಯ ನೆನಪಿನಿಂದ ಹೊರತರಲೆಂದು, "ಬೆಳದಿಂಗಳು ತುಂಬಾ ಚೆನ್ನಾಗಿದೆ ಅಲ್ವಾ" ಎಂದು ಕೇಳಿದ.

"ಊಂ" ಎಂದಳು.

"ಈ ಬೆಳದಿಂಗಳಿನಲ್ಲಿ ನೀನು ಹೇಗಿದೀಯ ಗೊತ್ತೇ? ಯಾವಳೋ ಗಂಧರ್ವಕನ್ಯೆಯ ಶಾಪವಶಾತ್ ಭೂಮಿಗಿಳಿದು ಬಂದು ನನ್ನ ಪಕ್ಕದಲ್ಲಿ ಮಲ ಗಿರುವಂತಿದೆ."

ಅವಳು ತುಟಿಯನ್ನು ಬಿಚ್ಚಿಯೂ ಬಿಚ್ಚದಂತೆ ನಕ್ಕಳು. ಅವನು ತನ್ನ ಮೇಲೆ ಬಾಗುತ್ತಿರುವಾಗ, ಆ ಅನುಭೂತಿಯನ್ನೆಲ್ಲ ಅನುಭವಿಸಲು ಕಣ್ಣು ಮುಚ್ಚಿಕೊಂಡಳು. ಎಷ್ಟು ಹೊತ್ತಾದರೂ ಅವನ ತುಟಿಗಳುತನ್ನನ್ನು ಸ್ಪರ್ಶಿಸ ದಿದ್ದುದರಿಂದ ಕಣ್ಣು ಬಿಟ್ಟು ಯಾಕೆ ನಿಂತಿಯೆನ್ನುವಂತೆ ನೋಡಿದಳು.

"ನಾನು ಎಲ್ಲಿ ಮುತ್ತಿಡಬೇಕೆನ್ನುವುದನ್ನು ನೀನು ಹೇಳಬೇಕು. ಆ ಪದ ದಲ್ಲಿ ಎಷ್ಟು ಅಕ್ಷರಗಳಿರುತ್ತವೆಯೋ, ಅಷ್ಟು ಸಲ ಅಲ್ಲಿ ಮುತ್ತಿಡುತ್ತೇನೆ. " ಎಂದ.

ಹಾಗಾದರೆ ಮೇಲಿಂದ ಶುರು ಮಾಡಬೇಕೆಂದು ನಿರ್ಧರಿಸಿಕೊಂಡಳು. ಅಕ್ಷರಕ್ಕೊಂದು ಮುತ್ತು ಎಂದಿರುವವನಾದ್ದರಿಂದ ಹೆಚ್ಚು ಅಕ್ಷರಗಳಿರುವ ಪದ ಹೇಳಬೇಕೆಂದುಕೊಂಡಳು- ಮೊದಲು ಹಣೆಯ ಮೇಲೆ ಮುತ್ತಿಡು ಎಂದು ಕೇಳ ಬೇಕೆಂದುಕೊಂಡವಳು, ಹಣೆ ಎನ್ನುವ ಪದದಲ್ಲಿ ಎರಡೇ ಅಕ್ಷರಗಳಿವೆಯಾದ್ದ ರಿಂದ, ಆ ಭಾಗಕ್ಕಿರುವ ಪರ್ಯಾಯ ಪದಗಳ ಬಗ್ಗೆ ಯೋಚಿಸಿದಳು. "ಫಾಲ ಭಾಗ" ಎನ್ನುವ ಪದ ಹೊಳೆಯಿತು. ಇದರಲ್ಲಿ ನಾಲ್ಕುಅಕ್ಷರಗಳಿವೆಯಾದ್ದರಿಂದ "ಫಾಲಭಾಗ" ಎಂದಳು.

ಅಷ್ಟು ಉದ್ದನೆಯ ಪದ ಯಾಕೆ ಹೇಳಿದಳೆಂಬುದು ಅರ್ಥವಾಗಿ ಅವನು ನಗುತ್ತ ಅಲ್ಲಿ ತುಟಿಯೂನಿಸಿದ. ಒಟ್ಟು ನಾಲ್ಕು ಮುತ್ತಿಟ್ಟ.

"ನಯನಗಳು."

ಕಣ್ಣುಗಳ ಮೇಲೆ ತುಟಿಗಳನ್ನು ಒತ್ತಿದ.

"ನಾಸಿಕ"

ಮತ್ತೆ ಮೂರು ಮುತ್ತಿಟ್ಟ.

"ತುಟಿಗಳು" ಎನ್ನುತ್ತಿರುವಂತೆ ಅವಳ ಧ್ವನಿಯಲ್ಲಿ ಮಾರ್ಪಾಡು ಉಂಟಾಯ್ತು. ಯಾವುದೋ ಸಿಹಿಯಾದ ಅಮಲುಗಂಟಲನ್ನು ಹಿಂಡಿದಂತಾಗುತ್ತಿತ್ತು. ಅವಳು ಒಂದೊಂದೇ ಭಾಗದ ಹೆಸರು ಹೇಳಿದಂತೆಲ್ಲ ಅವನು ಕೆಳಗೆ ಸರಿಯುತ್ತಿದ್ದ. ಹೊಕ್ಕುಳು ಬಳಿಗೆ ಬರುವಷ್ಟರಲ್ಲಿ ಅವಳಿಗೆ ಪರ್ಯಾಯ ಪದ ಸಿಗಲಿಲ್ಲ. ಆ ರೀತಿ ಯೋಚಿಸುತ್ತಿರುವಾಗ ನಾಭಿ ಎನ್ನುವ ಪದ ನೆನಪಾಯ್ತು. ಹೊಸ ಪದ ಹೊಳೆಯಿತೆನ್ನುವ ಆನಂದದಿಂದ ಅದನ್ನು ಹೇಳಲು ಹೋದವಳಿಗೆ ಅದರಲ್ಲಿ ಎರಡೇ ಅಕ್ಷರಗಳಿವೆಯೆನ್ನುವ ವಿಷಯ ಸ್ಫುರಿಸಿ ತಡೆಹಿಡಿದಳು. ಇನ್ನು ಲಾಭವಿಲ್ಲವೆಂದುಕೊಂಡು ಮೆಲ್ಲಗೆ "ಹೊಕ್ಕಳು" ಎಂದು ಹೇಳಿ,"ಒತ್ತಕ್ಷರ ಇದ್ರೆ ಕನ್ಸೊಲೇಶನ್ ಮುತ್ತು ಕೊಡಬಹುದಲ್ಲ" ಎಂದಳು.

ಅವನು ನಗುತ್ತ "ಅದೆಲ್ಲ ಆಗೋದಿಲ್ಲ" ಎಂದು ಮೂರು ಸಲಮುತ್ತಿಟ್ಟ. ತಲೆ ಮೇಲೆತ್ತಿ ಅವಳನ್ನು ದಿಟ್ಟಿಸಿ ನೋಡುತ್ತ, "ಆಮೇಲೆ?" ಎಂದ.

"ಆಮೇಲೆ . ಆಮೇಲೆ ಏನೂ ಇಲ್ಲ" ಎಂದಳು ಲಹರಿ. ನಾಚಿಕೆಯಿಂದ ಅವಳ ಧ್ವನಿ ಮೆಲುವಾಗಿ ಕೇಳಿ ಬಂತು. ಅವನು ಅದಕ್ಕೆ ಒಪ್ಪಿದವನಂತೆ ಅಡ್ಡವಾಗಿ ತಲೆಯಾಡಿಸಿದ ಆ ಮೇಲೆ ಮುಂದುವರಿಸಲು ಇಷ್ಟವಿರಲಿಲ್ಲ. ಆದರ ಅವನು ತೀರಾ ಬಲವಂತ ಮಾಡಿದ್ದರಿಂದ, ಆ ಅಪಾಯದಿಂದ ಹೇಗೆ ಪಾರಾಗಬೇಕೆಂಬುದು ಗೊತ್ತಾಗದೆ, ಸ್ವಗತವೆನ್ನುವಂತೆ, "ಅಯ್ಯೋ . . .! ದೇವರೇ" ಎಂದಳು.

"ಅಂದ್ರೆ, ಮೂರು ಅಕ್ಷರಗಳಿಂದಾಯ್ತು." ಎಂದು ಕೆಳಗೆ ಬಾಗಿದ. ತಾನು ಹೇಳಿದ ದೇವರಿಗೂ, ಅವನು ಅಂದ ಮೂರು ಅಕ್ಷರಗಳಿಗೂ ಸಂಬಂಧವೇನೆಂಬುದು ಅವಳಿಗೆ ಅರ್ಥವಾಗಲಿಲ್ಲ. ಅರ್ಥವಾಗುವುದರೊಳಗೆ ಮೂರು ಮುತ್ತಿಟ್ಟು ಎದ್ದ.

ಅವನು ಅವಳನ್ನು ಗಾಢವಾಗಿ ಅಪ್ಪಿಕೊಂಡು, ಶರೀರದ ಮೇಲೆ ತುಟಿಗಳಿಂದ ಮುದ್ರೆ ಒತ್ತತೊಡಗಿದ. ಹಣೆಗಿಟ್ಟ ಮುತ್ತು ಹಳದಿ ಕಣಗಿಲಾಗಿ, ಕಣ್ಣುಗಳ ಮೇಲೆ ಇತ್ತ ಮುತ್ತು ಕನಕಾಂಬರವಾಗಿ, ತುಟಿಗಳ ಮೇಲೆಒತ್ತಿದ. ಮುತ್ತು ಮಂದಾರ ಪುಷ್ಪವಾಗಿ, ವಕ್ಷದ ಮೇಲಿಟ್ಟ ಮುತ್ತು ದುಂಡು ಮಲ್ಲಿಗೆಯಾಗಿ ತನ್ನ ಇಡೀ ಶರೀರ ಕದಂಬ ಪುಷ್ಪಮಾಲೆಯಾದಂತೆ ಅವಳು ಪುಳಕಗೊಂಡಳು.

ಅವನೊಂದಿಗೆ ಒಂದಾಗಿ ಬಿಡಬೇಕೆನ್ನುವಕೋರಿಕೆಯಿಂದ ಅರ್ಥ ಅಂಗುಲ ತನ್ನ ಇಡೀ ಶರೀರವನ್ನು ಮೇಲೆತ್ತಿ ಅವನನ್ನು ತನ್ನತ್ತ ಬಲವಾಗಿ ಅದುಮಿ:

ಕೊಂಡಳು. ಅವರಿಬ್ಬರ ಸಮಾಗಮಕ್ಕೆ ಕಾಲ ಕಾವಲಾಗಿ ನಿಂತಿತು.

ಒಂದು ಗಂಟೆಯ ನಂತರ ಅವಳು ಮನೆಯತ್ತ ಹೊರಟಳು.

ಆ ಹುಣ್ಣಿಮೆ ಕಳೆದ ಮೇಲೆ ಸರಿಯಾಗಿ ಹದಿನೈದು ದಿನಗಳಿಗೆ ಅವಳ ಗಂಡನಿಗೆ ಲಾಟರಿಯಲ್ಲಿ ಇಪ್ಪತ್ತೈದುಸಾವಿರ ರೂ. ಗಳ ಬಹುಮಾನ ಬಂತು. ಪರಂಧಾಮಯ್ಯನ ಸೊಂಟದ ನೋವು ಕಡಿಮೆಯಾಯ್ತು. ಅನಸೂಯಮ್ಮನ ಹಲ್ಲು ನೋವು ಮಾಯವಾಯ್ತು.

ಈ ರೀತಿ ಆ ಮನೆಯಲ್ಲಿನವರಿಗೆಲ್ಲ ಯಾವುದೋ ಒಂದು ಲಾಭ ಒದಗಿ ಬಂತು.

ಆ ರಾತ್ರಿ ಚಲಪತಿ ಲಹರಿಯ ಪಕ್ಕದಲ್ಲಿ ಸೇರಿದ. ಗೋಡೆಯತ್ತ ತಿರುಗಿ ಮಲಗಿಕೊಂಡಿದ್ದ ಅವಳನ್ನು ತನ್ನತ್ತ ತಿರುಗಿಸಿಕೊಂಡು, "ನೀನು ಗೋಪಾಲ ಕೃಷ್ಣನೊಂದಿಗೆ ಇದ್ದು ಬಂದ ನಂತರ ಮನೆಯಲ್ಲಿ ಎಲ್ಲರಿಗೂ ಒಳಿತಾಗಿದೆ. ಮತ್ತೆ ಮೂಲ ಕಥಾನಾಯಕಿಯಾದ ನಿನಗೆ ಏನು ಬಂದಿದೆ" ಎಂದು ಕೇಳಿದ.

ಅವಳು ಮತ್ತೆ ಯಥಾ ಪ್ರಕಾರ ಗೋಡೆಯತ್ತ ತಿರುಗುತ್ತ ಹೇಳಿದಳು "ಗರ್ಭ."

೬

ಬೆಳಗಿನ ಐದು ಗಂಟೆಯಾಗಿತ್ತು. ಇನ್ನೂ ಪೂರ್ವದ ಬಾಗಿಲು ತೆರೆದು ಕೊಂಡಿಲ್ಲವೆನ್ನುವಂತೆ ಕತ್ತಲು ಅಂತರ್ಧಾನವಾಗಿರಲಿಲ್ಲ. ಪಕ್ಷಿಗಳು ಆಗಷ್ಟೇ ನಿದ್ದೆಯಿಂದೆದ್ದು ಒಂದಕ್ಕೊಂದು ಶುಭೋದಯ ಹೇಳಿಕೊಳ್ಳುತ್ತಿರುವಂತೆ ಮೆಲ್ಲಗೆ ಕಲರವ ಮಾಡುತ್ತಿದ್ದವು. ಗಾಳಿ ಬೆಳಗಿನ ತಿರುಗಾಟಕ್ಕೆ ಹೊರಟಿದೆ ಎನ್ನುವಂತೆ ಮೆಲ್ಲಗೆ ಬೀಸುತ್ತಿತ್ತು.

ಪಂಡಿತ ದೇವಾಲಯದ ಆವರಣದಲ್ಲಿದ್ದ ಬಾವಿಯ ಬಳಿ ತಲುಪಿದ. ಆತ ಮನ್ಮಥ ದೇವಾಲಯದ ಅರ್ಚಕ. ವಯಸ್ಸು ಮೂವತ್ತೈದಿರಬಹುದು. ತನ್ನ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ ಅರ್ಚಕ ವೃತ್ತಿಯನ್ನು ಸ್ವೀಕರಿಸಿದ್ದ. ಆಲಯ ದಲ್ಲಿನ ಅರ್ಚಕ ಕಡ್ಡಾಯವಾಗಿ ಬ್ರಹ್ಮಚರ್ಯವನ್ನು ಪಾಲಿಸಬೇಕಿತ್ತು.

ಸ್ತ್ರೀಯರು ಟಾಪ್‌ಲೆಸ್ ಆಗಿ ದೇವರ ದರ್ಶನ ಮಾಡಿಕೊಳ್ಳಬೇಕೆಂಬ ನಿಯಮವಿರುವ ದೇವಾಲಯದಲ್ಲಿ ಅರ್ಚಕ ಕಠೋರ ಬ್ರಹ್ಮಚಾರಿಯಾಗಿರ ಬೇಕೆಂಬ ನಿಯಮ ನರಕ ಸದೃಶವಾದುದು. ಈ ವಿಷಯ ಆತ ಅರ್ಚಕ ವೃತ್ತಿ ಕೈಗೊಂಡ ಮೊದಲ ದಿನವೇ ಅರ್ಥವಾಗಿತ್ತು. ಅದಕ್ಕೆ ಮುಂಚೆ ಇದ್ದ ಅರ್ಚಕ ಯಾಕೆ ನಲವತ್ತು ವರ್ಷಕ್ಕೆಲ್ಲ ಹುಚ್ಚನಾಗಿ ದೇಶಾಂತರ ಹೋದನೆಂಬುದು ಕೂಡ ಅರ್ಥವಾಗಿತ್ತು. ಅರ್ಚಕ ವೃತ್ತಿ ಬಿಟ್ಟು ಬೇರೊಂದು ಜೀವನೋಪಾಯದ

ದಾರಿ ಗೊತ್ತಿಲ್ಲದ್ದರಿಂದ ಅನಿವಾರ್ಯ ಪರಿಸ್ಥಿತಿಯಲ್ಲಿ ಅಲ್ಲಿ ಸೇರಿಕೊಂಡಿದ್ದ.

ಸರಸರನೆ ನಾಲ್ಕು ಬಿಂದಿಗೆ ನೀರೆಳೆದುಕೊಂಡು, ಮೈಮೇಲೆ ಸುರಿದುಕೊಂಡ ಟವೆಲ್ಲಿನಿಂದ ಮೈ ಒರೆಸಿಕೊಂಡ. ಮುನ್ನಾದಿನ ಒಗೆದಿಟ್ಟುಕೊಂಡಿದ್ದ ಪಂಚೆಯನ್ನು ಉಟ್ಟುಕೊಂಡು ಗರ್ಭಗುಡಿಯೊಳಗೆ ಹೋದ. ದೇವರಿಗೆ ಅಭಿಷೇಕ ಮಾಡಿ, ಅಲಂಕರಿಸಿದ. ಹೂಮಾಲೆಗೋಸ್ಕರ ಕಾಯುತ್ತ ಹೊರಗೆ ಬಂದು ಕುಳಿತುಕೊಂಡ.

ಐದು ನಿಮಿಷಗಳ ನಂತರ ಮೋಹನ ಅಲ್ಲಿಗೆ ಬಂದಳು. ಅವಳಿಗೆ ಮೂವತ್ತು ವರ್ಷಗಳಿರಬಹುದು. ಮದುವೆಯಾಗಿತ್ತು. ದೇವಾಲಯದ ಪರಿಚಾರಿಕೆ. ಬೆಳಿಗ್ಗೆ ಬಂದು ದೇವಾಲಯವನ್ನು ಶುಭ್ರಗೊಳಿಸುವುದು, ಪಂಡಿತನಿಗೆ ಅದೂ ಇದೂ ಸಹಾಯ ಮಾಡುತ್ತ ಜೊತೆಯಾಗಿರುವುದು ಅವಳ ಕರ್ತವ್ಯವಾಗಿತ್ತು. ಇದಕ್ಕೋಸ್ಕರ ಅವಳಿಗೆ ಎರಡು ಎಕರೆ ಹೊಲ ನೀಡಲಾಗಿತ್ತು. ಅದರಲ್ಲಿ ಬರುವ ಬೆಳೆ-ಬಿತ್ತು ಅವಳು ಪರಿಚಾರಿಕೆಯಾಗಿದ್ದಷ್ಟು ಕಾಲ ಅನುಭವಿಸಬಹುದಿತ್ತು.

ದೇವಾಲಯದೊಳಗೆ ಕಾಲಿಡುತ್ತಲೇ ಆಚಾರದ ಪ್ರಕಾರ ಅವಳು ಸೆರಗು ತೆಗೆದು ಆಚಾರದ ಪ್ರಕಾರ ಸೆರಗನ್ನು ತೆಗೆದು ಹೊಕ್ಕಳ ಮುಂದೆ ಸಿಕ್ಕಿಸಿಕೊಂಡಳು. ಅತ್ತಕಡೆ ನೋಡಕೂಡದೆಂದು ಮನಸ್ಸನ್ನು ಎಷ್ಟು ತಿರುಗಿಸಿಕೊಂಡರೂ ಸಾಧ್ಯವಾಗಲಿಲ್ಲ. ನೋಟ ಅವಳ ಎದೆಯ ಮೇಲೆ ಬಿತ್ತು. ವಾಸ್ತವಕ್ಕೆ ಅವಳ ಎದೆ ಇರಬೇಕಾದುದಕ್ಕಿಂತಲೂ ಉನ್ನತವಾಗಿತ್ತು. ತನ್ನ ಮನಸ್ಸನ್ನು ತುಂಡು ತುಂಡು ಮಾಡಲು ಫಿರಂಗಿಗಳಂತೆ ಅವುಗಳನ್ನು ಸಂಧಿಸಿದಂತೆನಿಸಿ ಆತ ವಿಲಿ ವಿಲಿ ಒದ್ದಾಡಿದ, ಇನ್ನೂ ಸ್ವಲ್ಪ ಹೊತ್ತು ಹಾಗೆ ನೋಡಿದರೆ ತನ್ನ ಕಣ್ಣುಗಳು ಸಿಡಿದು ಹೋಗುತ್ತವೆಯೇನೋ ಎಂದೆನಿಸಿ ನೋಟವನ್ನು ಕೆಳಗಿಳಿಸಿದ.

"ದೇವರಿಗೆ ಹೂಮಾಲೆ ತಗೊಳ್ಳಿ. ಪೂಜೆಗೋಸ್ಕರ ಬಿಡಿ ಹೂಗಳೂ ಇವೆ. ನೋಡ್ಕೊಳ್ಳಿ." ಎನ್ನುತ್ತ ಹೂವಿನ ಬುಟ್ಟಿಯನ್ನು ಕೈಗಿತ್ತಳು. ರೂಢಿಯಾದ ನೋಟ ಮೇಲೊಂದು ಸಲ ತಿವಳಿ, ತುಂಟ ಕೋತಿ ಆ ಕೊಂಬೆಗೆ ಹಾರಿದಂತೆ ಅತ್ತಿತ್ತ ಹರಿದಾಡಿತು.

ಸ್ತ್ರೀಯರು ಸೆರಗು ತೆಗೆದು ದೇವರ ದರ್ಶನ ಮಾಡಬೇಕೆಂಬ ನಿಯಮವಿರುವ ಇಂತಹ ದೇವಾಲಯದಲ್ಲಿ ಪೂಜಾರಿ ಬ್ರಹ್ಮಚಾರಿಯಾಗಿರಬೇಕೆಂಬ ನಿಬಂಧನೆ ವಿಧಿಸಿದವನು ಸಿಕ್ಕಿದರೆ ಜುಟ್ಟು ಹಿಡಿದೆಳೆದು ಒದೆಯಬೇಕೆನ್ನುವಷ್ಟು ಕೋಪ ಬಂತು. ತನ್ನ ಕೋಪವನ್ನು ನುಂಗಿಕೊಳ್ಳುತ್ತ ಪೂಜೆಯಲ್ಲಿ ಮಗ್ನನಾದ

ಮಂತ್ರಗಳನ್ನು ಓದುತ್ತ ದೇವರನ್ನು ಪುಷ್ಪಮಾಲೆಯಿಂದ ಅಲಂಕರಿಸಿದ.

ಮೋಹನ ದೇವಾಲಯವನ್ನೆಲ್ಲ ಪೊರಕೆಯಿಂದ ಗುಡಿಸಿ, ದೇವಾಲಯದ ಪ್ರಾಂಗಣದಲ್ಲಿ ನೀರು ಚಿಮುಕಿಸಿ ರಂಗೋಲಿ ಇಡತೊಡಗಿದಳು. ಅಷ್ಟರಲ್ಲಿ ಮೊದಲ ಭಕ್ತೆಯಾಗಿ ಒಬ್ಬ ಮುದುಕಿ ಬಂದಳು. ಅವಳಿಗೆ ಎಪ್ಪತ್ತಕ್ಕೂ ಮೇಲ್ಪಟ್ಟ ವಯಸ್ಸಾಗಿತ್ತು. ಬರುತ್ತಲೇ ಸೆರಗು ತೆಗೆದು ಹೊಕ್ಕಳಿನ ಮುಂದೆ ಸಿಕ್ಕಿಸಿಕೊಂಡು, ಗರ್ಭ ಗುಡಿಯ ಮುಂದೆ ನಿಂತು ಎರಡೂ ಕೈ ಜೋಡಿಸಿದಳು ಪಂಡಿತ ಅವಳನ್ನು ನೋಡಿದ.

ಅವಳ ಎದೆಯೆಲ್ಲ ಒಣಗಿ ಹೋಗಿದ್ದು, ಒಂದೊಮ್ಮೆ ಯೌವನದಿಂದ ಕಂಗೊಳಿಸಿ, ಮೆರೆದಾಡಿದ ಆ ಸ್ಥಳ ಈಗ ಕಾಲದ ಮೇಲೆ ಹೋರಾಡಿ, ಬಳಲಿ, ಸೊರಗಿ ಹೋಗಿರುವಂತೆ ಕಂಡು ಬಂದವು. ಯೌವನದಲ್ಲಿರುವ ಸ್ತ್ರೀಯರು ಬಂದರೆ ಒಂದು ರೀತಿಯ ಸಂಕಟ. ವಯಸ್ಸು ಉಡುಗಿ ಹೋದವರು ಬಂದರೆ ಮತ್ತೊಂದು ರೀತಿಯ ಸಂಕಟ.ಅವಳ ಎದೆಯನ್ನುನೋಡಿದೊಡನೆಯೇ ಪಂಡಿತ ನಿಗೆ ಜೀವನದ ಮೇಲಿನ ಮಮಕಾರ ಅರ್ಧಕ್ಕರ್ಧ ಸತ್ತು ಹೋಯ್ತು. ಕ್ಷಣ ಕಾಲ ಮೆರೆದು ಮಾಯವಾಗುವ ಈ ಶರೀರದ ಮೇಲೆ ಯಾಕಿಷ್ಟು ಮಮಕಾರ ಎಂದು ಅನ್ನಿಸುತ್ತಿತ್ತು. ತುಚ್ಛವಾದ ಬಯಕೆಗಳನ್ನು ಪೂರೈಸಿಕೊಳ್ಳಲು ಮನುಷ್ಯ ಪಡುವ ತಾಪತ್ರಯವೆಲ್ಲ ಅಜ್ಞಾನವೆನ್ನುವ ವೇದಾಂತ ಮನಸ್ಸಿನಲ್ಲಿ ಮೂಡಿ ಬರುತ್ತಿತ್ತು. ಸ್ತ್ರೀ–ಪುರುಷರ ನಡುವೆ ಇರುವ ಆಕರ್ಷಣೆ, ಸಂಸಾರ ಬಂಧನ ಇವೆಲ್ಲವೂ ನೀಚವಾದವುಗಳೆನಿಸುತ್ತಿದ್ದವು. ಎಂದೋ ಒಂದೊಮ್ಮೆ ಗಾಳಿಯಲ್ಲಿ ಬೆರೆತು ಹೋಗುವ ಪ್ರಾಣದ ಮೇಲೆ ಆಸೆ ಇಟ್ಟುಕೊಂಡಿರುವುದು ಶುದ್ಧ ದಂಡವೆನ್ನುವ ತತ್ವ ಮನಸ್ಸಿಗೆ ಸಾರ್ಥಕ್ಯವನ್ನು ಉಂಟುಮಾಡುತ್ತಿತ್ತು ಇಂತಹ ಹಲವಾರು ಭಾವನೆಗಳಿಂದ ಆತ ನಲುಗಿ ಹೋಗಿದ್ದ.

ದೇವನಿಗೆ ಆರತಿ ಬೆಳಗಿ ಅದನ್ನು ಅವಳ ಮುಂದೆ ಹಿಡಿದ. ಅವಳು ಆರತಿ ಯನ್ನು ಕಣ್ಣಿಗೊತ್ತಿಕೊಂಡು, ಪೂಜಾರಿ ತೀರ್ಥಪ್ರಸಾದ ಕೊಟ್ಟೊಡನೆಯೇ ಹೊರಟುಹೋದಳು. ಅರ್ಧಗಂಟೆಯ ನಂತರ ಅವಿವಾಹಿತ ಯುವತಿಯೊಬ್ಬಳು ಬಂದಳು. ಅವಳು ದೇವಾಲಯದೊಳಗೆಬರುತ್ತಿರುವಂತೆಯೇ ಸೆರಗು ತಗೆಯುವ ಸನ್ನಿವೇಶವನ್ನು ಪಂಡಿತ ಕಣ್ಣರಳಿಸಿ ನೋಡಿದ. ಅದಕ್ಕೆ ಮುಂಚೆ ವೃದ್ಧ ಸ್ತ್ರೀ ಬಂದಾಗ ಉಂಟಾದ ವೇದಾಂತವೆಲ್ಲ ಅವಳ ವಕ್ಷ ಸೌಂದರ್ಯದ ಮುಂದೆ ತರ ಗೆಲೆಯಂತೆ ಹಾರಿಹೋಯ್ತು.

ಪ್ರಪಂಚವನ್ನು ಧಿಕ್ಕರಿಸಿ ಮುನ್ನುಗ್ಗಿ ಬಂದಂತಿರುವ ಅವಳ ಯೌವನ ಕಲಶಗಳು ಆತನ ಮನಸ್ಸಿನಲ್ಲಿ ಬಿರುಗಾಳಿಯನ್ನೆಬ್ಬಿಸುತ್ತಿದ್ದವು. ಅವುಗಳ

ದುಂಡು ದುಂಡನೆಯ ಮಾಟ ಮನಸ್ಸನ್ನು ಮುದ್ದೆ ಮಾಡಿ, ಎಲ್ಲೋ ಕೋರಿಕೆಯ ಸುಳಿಯಲ್ಲಿ ಗಿರಗಿರನೆ ತಿರುಗಿಸುತ್ತಿತ್ತು. ಆ ಉಬ್ಬುಗಳು ಮನಸ್ಸಿನಲ್ಲಿ ತಳಮಳವನ್ನೆಬ್ಬಿಸುತ್ತಿದ್ದವು. 'ಬಾ' ದಮ್ಮಿದ್ದರೆ ಅನುಭವಿಸು. ಅರ್ಥವಿಲ್ಲದ ಸಂಶಯಗಳಬೇಡ ಬೇಡ' ಎಂದು ಅವು ಕರೆಯುತ್ತಿರುವಂತಿದ್ದವು, 'ನಾಳೆಸ್ವರ್ಗ ನರಕಗಳಿವೆಯೋ ಇಲ್ಲವೋ ಯಾರಿಗೆ ಗೊತ್ತು... ... ಯೌವನವಿರುವಾಗಲೇ ಸೌಂದರ್ಯವನ್ನು ನಿನ್ನ ವಶ ಮಾಡಿಕೋ' ಎಂದು ಅವು ಬೋಧಿಸುತ್ತಿರುವಂತೆ ಅನ್ನಿಸುತ್ತಿತ್ತು.

ಈ ರೀತಿ ಎರಡು ರೀತಿಯ ವೇದಾಂತಗಳ ನಡುವೆ ಪಾಪ, ಆತ ಯಾವಾಗಲೂ ಒದ್ದಾಡುತ್ತಿರುತ್ತಿದ್ದ. ಅದಕ್ಕೇ ಆನೆಯಂತಿದ್ದವನು ಒಣಗಿ ಕಡ್ಡಿಯಂತಾಗಿದ್ದ

ಆ ಯುವತಿಗೆ ತೀರ್ಥ ಪ್ರಸಾದ ಕೊಟ್ಟು ಕಳುಹಿಸಿದ. ಮೋಹನ ಕೆಲಸಗಳೆಲ್ಲವನ್ನೂ ಮುಗಿಸಿಕೊಂಡು ಹೊರಟುಹೋದಳು. ಭಕ್ತರು ಬಂದರೆ ಅವರಿಗೆ ತೀರ್ಥಪ್ರಸಾದ ಕೊಡುವುದು, ಭಕ್ತರಿಲ್ಲದ ಸಮಯದಲ್ಲಿ ಅಲ್ಲೇ ಒಂದುಕಂಬಕ್ಕೆ ಬೆನ್ನೊರಗಿಸಿ ಕುಳಿತುಕೊಳ್ಳುವುದು ಆತನ ನಿತ್ಯ ಕೃತ್ಯವಾಗಿತ್ತು. ಆ ರೀತಿ ಮಧ್ಯಾಹ್ನವಾಯ್ತು. ಬಾವಿಯ ಬಳಿಗೆ ಹೋಗಿ ಅನ್ನ ಬೇಯಿಸಿದ.ಸಾಂಬಾರ್ ಮಾಡಿದ ನಂತರ ಊಟ ಮಾಡಿದ. ತುಂಬಾ ಬಳಲಿದ್ದರಿಂದ ಶರೀರ ವಿಶ್ರಾಂತಿಯನ್ನು ಬಯಸುತ್ತಿತ್ತು. ದೇವಾಲಯದೊಳಗೆ ಬಂದು ತಲೆಯ ಕೆಳಗೆ ಉತ್ತರೀಯವನ್ನಿಟ್ಟುಕೊಂಡು ಮಲಗಿದ ನಿದ್ದೆ ಕಣ್ರೆಪ್ಪೆಗಳನ್ನು ಮುಚ್ಚುತ್ತಿರುವಾಗ ಬಾಗಿಲ ಬಳಿ ಸದ್ದಾಯ್ತು. ಕಣ್ಣು ಬಿಟ್ಟು ನೋಡಿದ.

ಮೋಹನ ಅವನನ್ನು ನೋಡುತ್ತ, "ಏನು ಪೂಜಾರಿಗಳೆ! ನಿದ್ದೇನಾ? ಊಟ ಆಯ್ತಾ?" ಎನ್ನುತ್ತಾ ಒಳಗೆ ಬಂದಳು. ಸೆರಗು ತೆಗೆದು ಹೊಕ್ಕುಳಿನ ಮುಂದೆ ಸಿಕ್ಕಿಸಿಕೊಳ್ಳುತ್ತ ಆತನ ಬಳಿ ನಿಂತಳು. ಯಾರೋ ತನ್ನ ನರಗಳನ್ನು ಜೋರಾಗಿ ಹಿಡಿದೆಳೆದು ಬಿಟ್ಟಂತೆ ಆತ ಒಂದು ಸಲ ಮಿಸುಕಾಡಿದ. ಅವಳ ಎದೆ ಆಕಾಂಕ್ಷೆಯನ್ನು ಕೆಣಕುತ್ತಿರುವ ಜೇನುಗೂಡಿನಂತಿತ್ತು.

ಆತನ ನಿದ್ದೆ ಹಾರಿಹೋಯ್ತು. ಕೋರಿಕೆಶರೀರವನ್ನು ದಹಿಸತೊಡಗಿತು. ಆದರೆ ಆಚಾರ ವ್ಯವಹಾರಗಳು ಆತನನ್ನು ಅದಕ್ಕಿಂತಲೂ ಮುಂದೆ ಸಾಗಲು ಬಿಡವು. "ಈ ಸಮಯದಲ್ಲಿ ಇಲ್ಲಿಗ್ಯಾಕೆ ಬಂದೆ?" ಎಂದು ತಡವರಿಸುತ್ತ ಪ್ರಶ್ನಿಸಿದ.

ಅವಳು ಮತ್ತೊಂದು ಕಂಬದ ಬಳಿಗೆ ಹೋಗಿ, ಅಲ್ಲಿ ಸ್ವಚ್ಛ ಮಾಡಿ ಮಲಗಿಕೊಂಡಳು. "ಸೆರಗನ್ನು ತಲೆಯ ಕೆಳಗೆ ಉಂಡೆ ಮಾಡಿಟ್ಟುಕೊಂಡಳು."

"ಏನು ಮಾಡ್ಲಿ ಪೂಜಾರಿಗಳೆ! ಆ ಮನೇಲಿ ಬಿಸಿ, ಸೆಕೆ, ಹಾಯಾಗಿ ಬಟ್ಟೆ ಬಿಚ್ಚಿ ಹಾಕಿ ನೀರಲ್ಲೇ ಮಲಗಿರಬೇಕೂಂತ ಅನ್ನಿಸ್ತೆ. ಆದ್ರೆ ಗಾಳಿಯಾದ್ರೂ ಆಡುತ್ತೇಂತ ಸೆರಗು ತೆಗೆದ್ರೆ ಅವನು ಆದೇ ನನ್ನ ಗಂಡ ಮೇಲೆ ಬೀಳ್ತಾನೆ. ಈ ಸೆಕೆಯಲ್ಲಿ ಅವನ್ನೆಲ್ಲ ತಡ್ಕೊಳ್ಳೋಕಾಗುತ್ತಾ? ಅದಕ್ಕೇ ಇಲ್ಲಿಗೆ ಬಂದೆ. ಹಾಯಾಗಿ ಸೆರಗು ತೆಗೆದು ನಿದ್ದೆ ಮಾಡಬಹುದಲ್ಲ," ಎನ್ನುತ್ತ ಕಣ್ಣು ಮುಚಿಕೊಂಡಳು.

ಕ್ಷಣ ಮಾತ್ರದಲ್ಲಿ ಅವಳಿಗೆ ನಿದ್ದೆ ಹತ್ತಿತೆಂದು ಆತನಿಗೆ ಅರ್ಥವಾಯ್ತು. ಅವಳ ಸೆರಗನ್ನು ನೋಡುತ್ತಿದ್ದ ಆತನಿಗೆ ನಿದ್ದೆ ಬರಲಿಲ್ಲ. ಸುತ್ತಲೂ ರುಚಿಕರವಾದ ತಿನಿಸುಗಳನ್ನಿಟ್ಟು ಬಾಯಿ ಹೊಲಿದುಬಿಟ್ಟಂತೆ ಆತ ವಿಲಿವಿಲಿ ಒದ್ದಾಡುತ್ತಲೇ ಇದ್ದ.

೪

ಆ ಬೀದಿಯ ತಿರುವಿನಲ್ಲಿ ಹೊರಳುತ್ತಲೇ ಹುಲಿರಾಜನ ಹೃದಯದ ಬಡಿತ ಏರಿತು. ಕೂದಲುಗಳೆಲ್ಲವೂ ನಿಮಿರಿ ನಿಂತವು. ಇನ್ನೊಂದು ನಿಮಿಷದಲ್ಲಿ ಪುನರ್ವಸು ಕಾಣಿಸಿಕೊಳ್ಳುತ್ತಾಳೆನ್ನುವ ಆಲೋಚನೆಯಿಂದ ಶರೀರ ಮೆಲ್ಲಗೆ ಕಂಪಿಸಿತು.

ಅವನಿಗೆ ಇಪ್ಪತ್ತೈದು ವರ್ಷಗಳಿರಬಹುದು- ತೆಳ್ಳಗೆ ಉದ್ದವಾಗಿದ್ದ.

ಆ ಸುತ್ತಮುತ್ತಲ ಗ್ರಾಮಗಳೆಲ್ಲವಕ್ಕೂ ಅವನೊಬ್ಬನೇ ಭೂತವೈದ್ಯನಾಗಿದ್ದ. ಪ್ರತಿ ರವಿವಾರ ಮನೆಗೆ ದೆವ್ವ ಮೆಟ್ಟಿಕೊಂಡವರನ್ನೆಲ್ಲ ಚಿಕಿತ್ಸೆಗೆ ಕರೆತರುತ್ತಿದ್ದರು. ಆ ದಿನ ಅವನಿಗೆ ಪುರಸೊತ್ತಿರುತ್ತಿರಲಿಲ್ಲ ದೆವ್ವಗಳೊಂದಿಗೆ ಕುಸ್ತಿಯಾಡುವುದರಲ್ಲೇ ಇಡೀ ದಿನ ಕಳೆದು ಹೋಗುತ್ತಿತ್ತು. ಬಂದ ಜನ ಕೊಟ್ಟದ್ದುದನ್ನು ಸ್ವೀಕರಿಸುತ್ತಿದ್ದ. ನಂತರ ವಾರದ ಉಳಿದ ದಿನಗಳಲ್ಲಿ ಯಾವೊಂದು ಕೆಲಸವೂ ಇರುತ್ತಿರಲಿಲ್ಲ. ತೀರಾ ತುರ್ತುಪರಿಸ್ಥಿತಿಯಲ್ಲಿ ಬಿಟ್ಟರೆ ಉಳಿದ ದಿನಗಳಲ್ಲಿ ದೆವ್ವ ಬಿಡಿಸುತ್ತಿರಲಿಲ್ಲ. ದೆವ್ವ ತೀರಾ ಗಟ್ಟಿ ಪಿಂಡವಾಗಿದ್ದರೆ ಅಮಾವಾಸ್ಯೆಯ ದಿನ ಅದನ್ನು ಬಿಡಿಸಲು ಪ್ರಯತ್ನಿಸುತ್ತಿದ್ದ. ಅವನ ತಂದೆ ಮರಣಿಸಿದ್ದ. ತಾಯಿ ಇದ್ದಳು. ಅವನ ತಂದೆಯೂ ಮಂತ್ರವಾದಿಯಾಗಿದ್ದ. ಸ್ಮಶಾನದಲ್ಲಿ ಮಂತ್ರಗಳನ್ನು ತಪ್ಪಾಗಿ ಓದಿದ್ದರಿಂದ ದೆವ್ವ ಅವನ ರಕ್ತ ಹೀರಿತೆಂದು ಜನರಲ್ಲಿ ಪ್ರತೀತಿ ಹರಡಿತ್ತು. ಅದರಲ್ಲಿ ಸತ್ಯ ಸುಳ್ಳಿನ ವಿಷಯ ಎಷ್ಟಿತ್ತೋ ಏನೋ– ಆದರೆ ಅವನು ಸತ್ತದ್ದು ಮಾತ್ರ ಸ್ಮಶಾನದಲ್ಲಿಯೇ. ಚಿಕ್ಕಂದಿನಲ್ಲಿ ತಂದೆ ಕಲಿಸಿದ ವಿದ್ಯೆಯೇ ಇಂದು ಜೀವನೋಪಾದಿಗೆ ಸಹಾಯಕವಾಗಿತ್ತು.

ದೆವ್ವಗಳನ್ನು ಓಡಿಸುವ ಅವನು ಇತ್ತೀಚೆಗೆ 'ಪ್ರೇಮ' ಪಿಶಾಚಿಯ ತೆಕ್ಕೆಗೆ ಸಿಕ್ಕಿ ಬಿದ್ದಿದ್ದ.ಅದೇ ಊರಿನ 'ಪುನರ್ವಸು' ಅವನನ್ನು ಆಕರ್ಷಿಸಿದ್ದಳು. ಅವಳೊಂದಿಗೆ ಬಾಳು ಹಂಚಿಕೊಳ್ಳಬೇಕೆಂಬ ಬಯಕೆ ದಿನದಿನಕ್ಕೂ ಅವನಲ್ಲಿ ಬಲಗೊಳ್ಳುತ್ತಿತ್ತು. ಇಪ್ಪತ್ತು ವರ್ಷದ 'ಪುನರ್ವಸು' ಸುಂದರ ಹೆಣ್ಣೇ. ನಿಂಬೆ ಹಣ್ಣಿನ ಮೈಬಣ್ಣ. ಶರೀರದಲ್ಲಿ ಪ್ರತಿಯೊಂದು ಅವಯವವೂ ಕಣ್ಣಿನಿಂದ ಕಾಲುಗಳವರೆಗೆ ಇರಬೇಕಾದ ಅಳತೆಗಿಂತ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿದ್ದವು. ಒಣಕಲ ಬಡ್ಡಿಯಂತಹ ತಾನು ಮಜಬೂತಾದ ಹೆಣ್ಣಿನ ಪ್ರೇಮ ಪಾಶಕ್ಕೆ ಹೇಗೆ ಸಿಲುಕಿಕೊಂಡೆ ಎಂದು ಅವನಿಗೆ ಆಗಾಗ್ಗೆ ಆಶ್ಚರ್ಯವುಂಟಾಗುತ್ತಿತ್ತಾದರೂ, ಪುನರ್ವಸುವಿನ ಮೇಲಿನ ಮೋಹ . ... ಅದರ ಮೇಲೆ ಪರದೆಯನ್ನು ಎಳೆದಿತ್ತು.

ಆದರೆ ಅವನ ಪ್ರೇಮ, ಮೋಹ–ಇದೆಲ್ಲ ಪುನರ್ವಸುವಿಗೆ ಗೊತ್ತಿರಲಿಲ್ಲ. ಹುಲಿರಾಜನ ಪ್ರೇಮ ಅಲ್ಲಿಯವರೆಗೂ ಒಮ್ಮುಖವಾದುದಾಗಿತ್ತು. ತನ್ನ ಪ್ರೇಮವನ್ನು ಹೇಗಾದರೂ ಮಾಡಿ ಪುನರ್ವಸುವಿಗೆ ತಿಳಿಸಿಯೇ ಬಿಡಬೇಕೆಂದು ನಿರ್ಧರಿಸಿ ಅವಳ ಮನೆಯತ್ತ ಹೊರಟಿದ್ದ. ಆದರೆ ಮನಸ್ಸಿನ ಒಂದು ಮೂಲೆಯಲ್ಲಿ ಅಳುಕು ಇದ್ದೇ ಇತ್ತು.

ದೆವ್ವಗಳಿಗೂ ಹೆದರದಿರುವ ತಾನು ಪ್ರೇಮದ ವಿಷಯಕ್ಕೆ ಇಷ್ಟು ಅಳುಕುತ್ತಿರುವುದು ಅವನಿಗೇ ಆಶ್ಚರ್ಯವನ್ನುಂಟು ಮಾಡಿತ್ತು. ಹೇಗಾದರೂ ಅವಳ ಪ್ರೇಮ ಪಡೆಯಬೇಕೆಂಬ ಹಂಬಲ ಮನಸ್ಸನ್ನು ಕಾಡುತ್ತಿತ್ತು. ಅವಳು ಒಂಟಿಯಾಗಿ ಸಿಗುತ್ತಾಳೇನೋ ಎಂದು ಕಾಯುತ್ತಿದ್ದ. ಅವಳು ಸಿಕ್ಕಾಗ ಏನೇನು ಹೇಳಬೇಕು . ... ಎಂಬುದರ ಬಗ್ಗೆ ಬಹಳಷ್ಟು ಸಲ ಮನಸ್ಸಿನಲ್ಲೇ ರಿಹರ್ಸಲ್ ಮಾಡಿಕೊಂಡಿದ್ದ. ಆದರೆ ಅವಕಾಶ ಒದಗಿಬಂದಿರಲಿಲ್ಲ. ಇಂದು ಆ ಅವಕಾಶವನ್ನು ತಾನಾಗಿಯೇ ಉಂಟುಮಾಡಿಕೊಂಡಿದ್ದ.

ಅಷ್ಟೊತ್ತಿಗೆಲ್ಲ ಕತ್ತಲು ಕವಿದುಕೊಳ್ಳತೊಡಗಿತ್ತು. ಆಕಾಶದಲ್ಲಿ ಪೂರ್ವ ದಿಕ್ಕಿನಲ್ಲಿ ಬೆಳ್ಳಿ ಚಂದ್ರ ನಗುತ್ತಿದ್ದ ವಾತಾವರಣದಲ್ಲಿಯೇ ಪರಿಮಳ ದ್ರವ್ಯವನ್ನು ಚಿಮುಕಿಸಲಾಗಿದೆಯೇನೋ ಎನ್ನುವಂತೆ, ಹೂಗಳ ಮೃದು ಪರಿಮಳ ಗಾಳಿಯಲ್ಲಿ ತೇಲಿಕೊಂಡು ಬರುತ್ತಿತ್ತು.

ಪುನರ್ವಸುಳ ಮನೆ ಸಮೀಪಿಸಿತು. ಹುಲಿರಾಜನ ಹೆಜ್ಜೆಗಳು ತಡವರಿಸಿದವು. ಮೈಯೆಲ್ಲ ಕಣ್ಣು ಮಾಡಿಕೊಂಡು ನೋಡಿದ. ಪುನರ್ವಸು ಎಲ್ಲಿಯೂ ಕಂಡು ಬರಲಿಲ್ಲ. ಆ ಮನೆಯ ಹೊಸ್ತಿಲ ಮುಂದೆ ನಿಂತು ಇಣುಕಿದ. ಅವಳು ಹಿತ್ತಲಲ್ಲಿ ಹಾಲು ಕರೆಯುತ್ತಿದ್ದಳು. ಚಿತ್ರಪಟದಲ್ಲಿಯ ಚಿತ್ರದಂತೆ ಅವಳು

ದೂರದಿಂದ ಚಿಕ್ಕದಾಗಿ, ಮನೋಹರವಾಗಿ ಕಂಡು ಬಂದಳು, ಅವಳು ಕಣ್ಣಿಗೆ ಬೀಳುತ್ತಿದ್ದಂತೆಯೇ ಅವನ ಹೃದಯದ ಬಡಿತ ತನ್ನಿಂದ ತಾನೇ ಹೆಚ್ಚಿತು. ಕ್ಷಣ ಕಾಲ ಕಾಲಿಗೆ ತಡೆಯೊಂದು ಬಂದಂತೆ ನಿಂತು, ಮತ್ತೆ ಮುಂದೆ ಸಾಗಿದ.

ಹೃದಯದ ಬಡಿತ ಮತ್ತೆ ಮಾಮೂಲು ಸ್ಥಿತಿಗೆ ಮರಳಿತು. ಅವಳನ್ನು ಮತ್ತೊಂದು ಸಲ ನೋಡಬೇಕೆನ್ನುವ ಆತುರ ಮನಸ್ಸನ್ನು ಕುಣಿಸುತ್ತಿತ್ತು, ಬೀದಿಯ ಕೊನೆಯವರೆಗೂ ಹೋಗಿ ಮತ್ತೆ ಹಿಂದಿರುಗಿದ. ಅಲ್ಲೇ ಇದ್ದ ಜಗುಲಿಯ ಮೇಲೆ ಕುಳಿತು ನಾಲ್ಕೈದು ನಿಮಿಷ ಪುನರ್ವಸುವಿನೊಂದಿಗೆ ತಾನೇನು ಹೇಳಬೇಕೆಂದಿರುವನೆಂದುಕೊಂಡಿದ್ದನ್ನು ಮನನಮಾಡಿಕೊಂಡ. ನಂತರ ಎದ್ದು ಮತ್ತೆ ಪುನರ್ವಸುವಿನ ಮನೆಯತ್ತ ಹೆಜ್ಜೆ ಹಾಕತೊಡಗಿದ.

ಅಷ್ಟೊತ್ತಿಗೆ ಹಾಲು ಕರೆಯುವುದನ್ನು ಮುಗಿಸಿದ್ದ ಪುನರ್ವಸು ಬೀದಿ ಬಾಗಿಲಿನ ಬಳಿ ಬಂದು, ಏನನ್ನೋ ನೋಡುತ್ತ ನಿಂತಿದ್ದಳು. ಅವಳು ಅಲ್ಲಿ ನಿಂತಿರುವುದನ್ನು ದೂರದಿಂದಲೇ ಗಮನಿಸಿದ ಹುಲಿರಾಜನ ಹೃದಯದ ಬಡಿತ ಮತ್ತೆ ಏರಿತು ಅವಳನ್ನು ನೋಡುತ್ತಲೇ ತನ್ನ ಶರೀರದಲ್ಲಿ ಇಷ್ಟೆಲ್ಲ ಅಸಂಕಲ್ಪಿತ ಬದಲಾವಣೆಯಾಗುತ್ತದಲ್ಲ ಎಂದು ಸೋಜಿಗಗೊಂಡ.

ಈ ಸಲ ಅವನು ಮೊದಲಿನಂತೆ ಪುನರ್ವಸುವಿನ ಮನೆ ದಾಟಿ ಸಾಗಿ ಹೋಗದೇ ಅಲ್ಲಿಯೇ ನಿಂತ. ವಾಸ್ತವಕ್ಕೆ ಆ ಸಮಯದಲ್ಲಿ ತನ್ನ ಮುಖದಲ್ಲಿ ಯಾವ ಯಾವ ಭಾವನೆಗಳು ವ್ಯಕ್ತಗೊಳ್ಳುತ್ತಿರುವವೋ ಎಂಬುದು ಅವನಿಗೆ ಗೊತ್ತಾಗುತ್ತಿರಲಿಲ್ಲ. ಆದರೆ ತಾನು ಅವಳನ್ನು ನೋಡಿ ನಗುತ್ತಿರುವನೆಂಬುದು ಮಾತ್ರ ಗೊತ್ತಾಯ್ತು.

ಬೀದಿಯಲ್ಲಿ ನಿಂತು ತನ್ನತ್ತ ನೋಡಿಯೇ ನಗುತ್ತಿರುವಹುಲಿರಾಜನನ್ನು ನೋಡಿದ ಪುನರ್ವಸು ಅದೊಂದು ರೀತಿಯ ಗೊಂದಲಕ್ಕೀಡಾದಳು. ಕಳೆದ ಕೆಲವು ದಿನಗಳಿಂದ ತಾನು ಕಣ್ಣಿಗೆ ಬಿದ್ದಾಗಲೆಲ್ಲ ಅವನು ಕಣ್ಣರಳಿಸಿ, ತಿಂದು ಬಿಡುವವನಂತೆ ನೋಡುತ್ತಿದ್ದುದನ್ನು ಗಮನಿಸಿದ್ದಳಾದರೂ, ಅವನು ತನ್ನೊಡನೆ ಅಲ್ಲಿಯವರೆಗೆ ಏನು ಮಾತಾಡಿದ್ದಾಗಲಿ, ಮಿತಿ ಮೀರಿ ವರ್ತಿಸಿದ್ದಾಗಲಿ ಮಾಡಿರದ್ದರಿಂದ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ ಹೆಣ್ಣನ್ನು ನೋಡುವ ಗಂಡಿನ ಸ್ವಾಭಾವಿಕ ನೋಟ ಎಂದೇ ಅದನ್ನು ಪರಿಗಣಿಸಿದ್ದಳು ಆದರೆ ಎಂದೂ ಇಲ್ಲದ ಅವನು ಇವತ್ತು ತನ್ನ ಮುಖವನ್ನು ನೋಡುತ್ತ ಹಲ್ಲು ಕಿರಿಯ ತೊಡಗಿದ್ದರಿಂದ ಅವಳಿಗೆ ಗೊಂದಲ ಉಂಟಾಗಿದ್ದು ಸ್ವಾಭಾವಿಕವೇ ಆಗಿತ್ತು. ಅವನ ವರ್ತನೆ ತನಗೆ ಅರ್ಥವಾಗಿಲ್ಲವೆನ್ನುವ ಭಾವನೆಯನ್ನು ಮುಖದಲ್ಲಿ ಮೂಡಿಸಿಕೊಂಡು ಅವನತ್ತಲೇ ನೋಡಿದಳು.

ಅವನು ಅಲ್ಲಿಂದ ಅಲುಗಾಡಲಿಲ್ಲ. "ನಿಮ್ಮಪ್ಪ ಇದ್ದಾನೆಯೆ?" ಎಂದು ಕೇಳಿದ. ಎಂದೂ ಇಲ್ಲದ್ದು ತನ್ನ ಧ್ವನಿ ನಡುಗುತ್ತಿದೆ ಎನ್ನುವುದು ಅವನಿಗೆ ಗೊತ್ತಾಗುತ್ತಿತ್ತು.

ಅಷ್ಟು ದಿನಗಳ ಕಾಲ ಕೇವಲ ತನ್ನನ್ನು ನೋಡುತ್ತಿದ್ದವನು, ತಟಕ್ಕನೆ ಮಾತಾಡಿಸಿದ್ದರಿಂದ ಪುನರ್ವಸು ಸ್ವಲ್ಪ ತಡವರಿಸಿದಳು. ಅವಳ ಅವಸ್ಥೆಯನ್ನು ಗಮನಿಸಿದ ಹುಲಿರಾಜ ಮತ್ತೊಮ್ಮೆ ಅದೇ ಪ್ರಶ್ನೆಯನ್ನು ಕೇಳಿದ.

ಅಷ್ಟೊತ್ತಿಗೆ ಚೇತರಿಸಿಕೊಂಡಿದ್ದ ಪುನರ್ವಸು, "ಇಲ್ಲ. ಹೊಲದತ್ತ ಹೋಗಿದ್ದಾನೆ" ಎಂದುತ್ತರಿಸಿದಳು.

"ನಿಮ್ಮ ತಾಯಿ?"

"ಆಕೆ ಕೂಡ ಹೊಲಕ್ಕೆ ಹೋಗಿದ್ದಾಳೆ."

ಇನ್ನು ಕೇಳಬೇಕಾದುದೇನೂ ಇಲ್ಲವೆನ್ನುವಂತೆ ಅವನು ಬಾಗಿಲಲ್ಲಿ ನಿಂತಿದ್ದ ಪುನರ್ವಸುವನ್ನು ಒಲಿಸಿಕೊಳ್ಳುವವನಂತೆ, ಮನೆಯೊಳಗೆ ಬಂದ. ಅವನ ಆಕಸ್ಮಿಕ ಚರ್ಯೆಗೆ ಅವಳು ತತ್ತರಿಸಿದಳು. ಅವನು ಆ ರೀತಿ ಮಾಡಬಹುದೆಂಬುದನ್ನು ಅವಳು ನಿರೀಕ್ಷಿಸಿಯೂ ಇರಲಿಲ್ಲ. ಗೂಳಿಯಂತೆ ಒಳನುಗ್ಗಿದ ಅವನತ್ತ ಭಯದಿಂದ ನೋಡುತ್ತ, "ನಿಮಗೇನು ಬೇಕಿತ್ತು?" ಎಂದು ಕೇಳಿದಳು.

ಹುಲಿರಾಜ ತಾಲೀಮು ಮಾಡಿಕೊಂಡು ಬಂದಿದ್ದರಲ್ಲಿ ಇಂತಹ ಪ್ರಶ್ನೆ ಇರಲಿಲ್ಲ. ಆದ್ದರಿಂದ ಅವನಿಗೆ ಉತ್ತರ ಹೊಳೆಯಲಿಲ್ಲ. "ಅದು . ಅದು .. " ಎನ್ನುತ್ತ ತಡವರಿಸಿದ. ಅವಳು ಮೌನವಾಗಿ ಅವನತ್ತಲೇ ನೋಡುತ್ತ ನಿಂತಿದ್ದಳು. ಅವನ ಕಣ್ಣುಗಳಲ್ಲಿ ಯಾವುದೋ ಬೇಡಿಕೆ, ವಿನಂತಿ ಸೂಕ್ಷ್ಮವಾಗಿ ಕಂಡು ಬರುತ್ತಿತ್ತು. ತುಟಿಗಳು ಏನನ್ನಾದರೂ ಜಪಿಸುತ್ತಿವೆಯೇನೋ ಎನ್ನುವಂತೆ ಪಿಟಿ ಪಿಟಿ ಮಾಡುತ್ತಿದ್ದವು. ಗಂಟಲಿನ ಮಣಿ ಎದೆಯಲ್ಲಿ ಹೂತಿರುವ ಶಬ್ದಗಳನ್ನು ಮೇಲೆತ್ತುತ್ತಿವೆಯೇನೋ ಎನ್ನುವಂತೆ ಏರಿಳಿಯುತ್ತಿತ್ತು. ಇಷ್ಟು ಕಾಲ ತನ್ನಲ್ಲಿ ಬಚ್ಚಿಟ್ಟುಕೊಂಡ ಭಾವನೆಗಳನ್ನೆಲ್ಲ ಹೊರಗೆ ಪಂಪ್ ಮಾಡಲೆನ್ನುವಂತೆ ಹೃದಯ ಮತ್ತೂ ಜೋರಾಗಿ ಬಡಿದುಕೊಳ್ಳತೊಡಗಿತು.

ಸಮಸ್ತ ಚೈತನ್ಯವನ್ನು ಒಗ್ಗೂಡಿಸಿಕೊಂಡು, ಕಣ್ಣೆವೆಯಿಕ್ಕದೆ, "ನೀನು ಬೇಕು.. . " ಎಂದುಬಿಟ್ಟ. ತನ್ನ ಮನಸ್ಸಿನ ಭಾವನೆ ಹೊರ ಹಾಕಿದ ನಂತರ ಹೃದಯದ ಮೇಲಿನ ಭಾರ ಸರಿಯಿತೆನ್ನುವಂತೆ ನಿಡುಸುಯ್ದ.

ಅವನು ಏನು ಕೇಳಿದನೆಂಬುದು ಪುನರ್ವಸುವಿಗೆ ತಟಕ್ಕನೆ ಅರ್ಥವಾಗಲಿಲ್ಲ. ಅರ್ಥವಾದ ನಂತರ ಒಂದೆರಡು ಕ್ಷಣ ಏನೂ ಹೊಳೆಯಲಿಲ್ಲ. ಮಿದುಳೆಲ್ಲ 'ಖಾಲಿಖಾಲಿ' ಎನ್ನುವ ಭಾವನೆಯುಂಟಾಯ್ತು ಅವಳಿಗೆ ತನ್ನ ಮನಸ್ಸೇನೆಂಬುದು

ಸ್ಪಷ್ಟವಾಗಿ ಗೊತ್ತಿತ್ತು. ಅದಕ್ಕೇ ತಲೆ ತಗ್ಗಿಸಿದಳು. ಹುಲಿರಾಜನ ನೋಟ ಅವಳನ್ನು ಅತ್ತಿತ್ತ ಸರಿದಾಡಲಿಲ್ಲ. ಪುನರ್ವಸು ಮತ್ತೆ ತಲೆ ಎತ್ತಿ ಹುಲಿರಾಜನ ಮುಖ ನೋಡಿದಳು. ಅವಳ ಮುಖದಲ್ಲಾಗಲಿ, ನೋಟದಲ್ಲಾಗಲಿ ಯಾವುದೇ ಭಾವನೆ ಕಂಡು ಬರದ್ದರಿಂದ, ತಾನು ಹೇಳಿದ್ದು ಅವಳಿಗೆ ಅರ್ಥವಾಯ್ತೋ ಇಲ್ಲವೋ ಎನ್ನುವ ಅನುಮಾನ ಅವನಿಗುಂಟಾಯ್ತು. ಅದಕ್ಕೇ ಮತ್ತೆ, ನಾನು ನಿನ್ನನ್ನು ಪ್ರೇಮಿಸುತ್ತಿದ್ದೇನೆ" ಎಂದ. ಪ್ರೇಮಿಯೊಬ್ಬ ಒಳಗಾಗುವ ಭ್ರಮೆಗೆ ಅವನೂ ಹೊರತಾಗಲಿಲ್ಲ. ಅದರಿಂದಾಗಿಯೇ ಅವನು ತನ್ನ ಮಾತನ್ನು ಪುನಃ ಹೇಳಿದ್ದ.

ಅಷ್ಟೊತ್ತಿಗೆ ಪುನರ್ವಸು ಚೇತರಿಸಿಕೊಂಡಿದ್ದಳು. ಹುಲಿರಾಜ ಭೂತ ವೈದ್ಯನಾದುದರಿಂದ ಸ್ತ್ರೀಯರಿಗೆ ಅವನ ಬಗ್ಗೆ ಒಂದು ರೀತಿಯ ಭಯವಿತ್ತು. ಅವನು ಸಾಮಾನ್ಯ ವ್ಯಕ್ತಿಯಲ್ಲವೆನ್ನುವ ಭಾವನೆ ಮನಸ್ಸಿನಲ್ಲಿರುತ್ತಿತ್ತು. ಅವನ ವೃತ್ತಿಯೇ ಅಂತಹುದು ದೆವ್ವಗಳನ್ನೂ ಓಡಿಸಬಲ್ಲುದೇ ಹೊರತು ಮನುಷ್ಯರನ್ನು ಹತ್ತಿರ ಸೇರಿಸುವಂತಹುದಲ್ಲ. ಅದೇ ಭಾವನೆ ಪುನರ್ವಸುವಿನ ಮನಸ್ಸಿನಲ್ಲಿಯೂ ಇತ್ತು. ಅದೂ ಅಲ್ಲದೆ ತನ್ನ ಅಂತರಂಗದಲ್ಲಿ ಏನಿದೆ ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆಯಿತ್ತು. ಅಷ್ಟರ ಮಟ್ಟಿಗೆ ಅವಳು ಉತ್ತರ ಹೇಳಲು ತಪ ಪರಿಸಬೇಕಾದ ಅಗತ್ಯವಿರಲಿಲ್ಲ.ಆದರೆ ಆ ಉತ್ತರವನ್ನು ಹೇಗೆ ಹೇಳಬೇಕೆನ್ನುವ ದಾಕ್ಷಿಣ್ಯ ಕಾಡುತ್ತಿತ್ತು.

"ಎಷ್ಟೋ ದಿನಗಳಿಂದ ನಿನ್ನೊಂದಿಗೆ ಈ ಮಾತು ಹೇಳಬೇಕೆಂದಿತ್ತು. ಆದರೆ .. " ಎಂದು ಅರ್ಧೋಕ್ತಿಯಲ್ಲೇ ನಿಲ್ಲಿಸಿದ ಹುಲಿರಾಜ.

"ಆದರೆ ಏನು . ಬೆಕ್ಕೇನಾದರೂ ಅಡ್ಡ ಬಂತೆ?" ಎಂದು ನಕ್ಕಳು ಪುನರ್ವಸು. ಆ ನಗುವಿನ ಹಿಂದಿರುವ ಅರ್ಥವೇನೆಂದು . . . ಗೊತ್ತಾಗದೆ ಅವನು ತಲ್ಲಣಿಸಿದ.

ಸ್ತ್ರೀಯರು ಅಷ್ಟೇ. ತಮಗೆ ಬೇಕಾದುವನ್ನು ಅವರು ಎಷ್ಟು ಗಾಢವಾಗಿ ಬಯಸುತ್ತಾರೋ, ತಮಗೆ ಬೇಕಾಗಿರದುದನ್ನು ಅಷ್ಟೇ ತೃಣೀಕಾರ ಭಾವನೆಯಿಂದ ಕಾಣುತ್ತಾರೆ. ತನ್ನ ಅಂತರಂಗದ ಆಸೆ ಬೇರೆಯೇ ಆಗಿದ್ದ ಪುನರ್ವಸು ನಿರಾಳ ಭಾವನೆಯಿಂದಿದ್ದಳು. ಹುಲಿರಾಜನ ಮಾತು ತಮಾಷೆ ಎನಿಸತೊಡಗಿತ್ತು. ಅವಳ ದೃಷ್ಟಿಯಲ್ಲಿ ಅವನು ಹೀನಾಯಗೊಳ್ಳತೊಡಗಿದ್ದ.

"ಮತ್ತೆ ಯಾಕೆ ಹೇಳಲಿಲ್ಲ" ಎಂದು ಮತ್ತೆ ಪುನರ್ವಸುವೇ ಕೇಳಿದಳು.

"ಅದೂ.. ಅದೂ.. "

"ಅಷ್ಟುದ್ದುದ್ದ . . ಇರೋ ಮಂತ್ರಗಳನ್ನು ತಪ್ಪಿಲ್ದೇ ಓದೋ ನೀನು,

ಇಷ್ಟು ಸಣ್ಣ ಮಾತು ಹೇಳೋದಿಕ್ಕೆ ತಡವರಿಸ್ತಿದೀಯಲ್ಲ" ಎಂದು ನಗುತ್ತಲೇ ನುಡಿದಳು ಪುನರ್ವಸು.

"ಹೇಳಬೇಕೆಂದೇ ಇತ್ತು ಆದರೆ, ಏನೋ ಹೆದರಿಕೆ... ಹಿಂಜರಿತ.. "

"ಹೋಗ್ಲಿಬಿಡು, ಈಗ್ಲಾದ್ರೂ ಹೇಳಿದೆಯಲ್ಲ . " ಎಂದು ಪುನರ್ವಸು ಒಂದು ಕ್ಷಣ ತಡೆದಳು. ಹುಲಿರಾಜನ ಹೃದಯದ ಬಡಿತ ನೂರು ಪಟ್ಟು ಹೆಚ್ಚಿತು. ಪುನರ್ವಸು ಮುಂದುವರಿಸಿದಳು. "ಆದರೆ . "

'ಆದರೆ' ಎನ್ನುವ ಪದ ಹುಲಿರಾಜನ ಹೃದಯದಲ್ಲಿ ನ್ಯೂಟ್ರಾನ್ ಬಾಂಬಿನಂತೆ ಸಿಡಿಯಿತು.

" . ಏನೂ ತಿಳ್ಕೋಬೇಡ ಹುಲಿರಾಜ. ನಿನ್ನ ಬಗ್ಗೆ ನನಗೆ ಅಂತಹ ಯಾವ ಉದ್ದೇಶವೂ ಇಲ್ಲ. ಯಾಕಿಲ್ಲ ಅಂತ ಕೇಳ್ಬೇಡ. ನಿನ್ನ ಮೇಲೆ ಯಾಕೆ ಇಷ್ಟ ಇಲ್ಲ ಅನ್ನೋದನ್ನ ಏಕೆ ಹೇಳೋಕ್ಕಾಗೋದಿಲ್ವೋ ಅದೇ ರೀತಿ ಗೋಪಾಲಕೃಷ್ಣನ ಮೇಲೆ ನನಗೆ ಯಾಕಷ್ಟು ಇಷ್ಟ ಇದೆ ಅನ್ನೋದನ್ನೂ ಹೇಳಲಾರೆ."

ಆ ನಂತರ ಅವಳು ಹೇಳಿದ ಮಾತುಗಳು ಅವನ ಕಿವಿಯೊಳಗೆ ಬೀಳಲಿಲ್ಲ. ಮೆದುಳು ಮರಗಟ್ಟಿ ಹೋದಂತಾಗಿತ್ತು... . . ತಿರಸ್ಕಾರಕ್ಕೀಡಾದುದರಿಂದ ಉಂಟಾದ ನೋವು, ಮೈಯಿಡೀ ವಿಷದಂತೆ ಹರಡಿಕೊಂಡಿತು. ಕಣ್ಣು ಜಿನುಗಿ ಮುಂದಿನ ದೃಶ್ಯ ಮಸುಕಾಯಿತು.

ಪುನರ್ವಸು ಅವನ ಸ್ಥಿತಿಯನ್ನು ಗಮನಿಸದೆಯೇ, "ನೀನಿನ್ನು ಹೋಗ್ಬಹುದು" ಎಂದು ಹೇಳಿ ಒಳಗೆ ಹೊರಟುಹೋದಳು.

ಹುಲಿರಾಜ ಭಾರವಾಗಿ ಕಾಲೆಳೆಯುತ್ತ ಆ ಮನೆಯಿಂದ ಹೊರಬಿದ್ದ.

*        *        *        *

ಹೇಗೆ ನಡೆದನೋ ಎಂಬುದರ ಅರಿವಿಲ್ಲದೆ, ಹತ್ತು ನಿಮಿಷಗಳ ನಂತರ ಹುಲಿರಾಜ ಊರಿನ ಸರಹದ್ದು ದಾಟಿದ್ದ. ಹೊಲಗದ್ದೆಗಳಲ್ಲಿ ಅಡ್ಡಾದಿಡ್ಡಿಯಾಗಿ ಹೆಜ್ಜೆ ಹಾಕುತ್ತ ಸಾಗುತ್ತಿದ್ದ ಅದರ ಪರಿವೆ ಅವನಿಗಿರಲಿಲ್ಲ. ಆಗಾಗ ತಲೆ ಎತ್ತಿ ಮೇಲೆ ನೋಡುತ್ತಿದ್ದ. ಬೆಣ್ಣೆಮುದ್ದೆಯಂತಹ ಚಂದ್ರ ಆಕಾಶದಲ್ಲಿ ಕಂಗೊಳಿಸುತ್ತಿದ್ದ.

ಆ ರೀತಿ ತಾನು ಎಷ್ಟು ಹೊತ್ತು ಅಲೆದಾಡಿದನೆಂಬುದು ಅವನಿಗೆ ಗೊತ್ತಿರಲಿಲ್ಲ. ಚಂದ್ರ ಆಕಾಶದಲ್ಲಿ ನಡು ನೆತ್ತಿಯ ಮೇಲೆಬಂದಿದ್ದ. ಯಾರದೋ ಮಾತಿನ ಧ್ವನಿ ಕೇಳಿ ಬಂದುದರಿಂದ ತಟಕ್ಕನೆ ನಿಂತುಕೊಂಡು ಸುತ್ತಲೂ ಪರಿಶೀಲಿಸಿ ನೋಡಿದ. ತಾನೆಲ್ಲಿರುವನೆಂಬುದನ್ನು ಗ್ರಹಿಸಲು ಐದು ನಿಮಿಷ

ಹಿಡಿಯಿತು. ತಾನು ಗೋಪಾಲಕೃಷ್ಣನ ಬಂಗಲೆಗೆ ಹತ್ತಿರವಾಗಿ, ಬೆಟ್ಟದ ತುದಿಗೆ ಬಂದಿರುವನೆಂದೂ,ಮಾತಾಡುತ್ತಿರುವುದು ಗೋಪಾಲಕೃಷ್ಣನು ಮತ್ತೊಬ್ಬ ಸ್ತ್ರೀ ಎಂದೂ ಅರ್ಥವಾಯ್ತು. ಆ ದಿನ ಹುಣ್ಣಿಮೆಯೋ ಅಲ್ಲವೋ ಎಂದು ತಿಳಿದುಕೊಳ್ಳಲು ತಲೆ ಎತ್ತಿ ನೋಡಿದ. ಪೂರ್ಣ ಚಂದ್ರ ಅವನನ್ನು ಅಣಕಿಸುವಂತೆ ನಗುತ್ತಿದ್ದ.

ಅವನ ವೃತ್ತಿಗೂ, ಹುಣ್ಣಿಮೆಗೂ ಎಣ್ಣೆ-ಸೀಗೇಕಾಯಿ. ಗೋಪಾಲಕೃಷ್ಣನ ಪ್ರವೃತ್ತಿಗೆ ಅಮಾವಾಸ್ಯೆಯೆಂದರಾಗದು. ಈ ರೀತಿ ಎರಡು ವಿಭಿನ್ನ ಧೃವಗಳಂತಹ ಅವರಿಬ್ಬರೂ ಶತ್ರುಗಳಾಗಿ ಭಯಂಕರ ಯುದ್ಧಕ್ಕೆ ತಲೆಗೊಡುವಂತಾಗಲೂ ಪುನರ್ವಸು ತನಗರಿವಿಲ್ಲದಂತೆ ಕಾರಣಳಾದಳು. ಅವಳುಅವನನ್ನು ಪ್ರೇಮಿಸುವುದಿಲ್ಲವೆಂದಿದ್ದರೆ ಪರವಾಗಿರಲಿಲ್ಲ. ಆವಳು ಅಷ್ಟಕ್ಕೇ ಸುಮ್ಮನಾಗದೆ ತಾನು ಯಾರನ್ನು ಪ್ರೇಮಿಸುತ್ತಿರುವಳೆಂಬುದನ್ನೂ ಹೇಳಿಬಿಟ್ಟಿದ್ದಳು. ಪ್ರೇಮಿಸಿದವಳಿಂದ ತಿರಸ್ಕಾರಕ್ಕೀಡಾಗಿ, ಅವಮಾನಿತನಾದ ಹುಲಿರಾಜನ ಮನಸ್ಸು ಕೊತಕೊತನೆ ಕುದಿಯಿತು. ತನ್ನ ಪ್ರೇಮದ ಹಾದಿಯಲ್ಲಿ ಹೆಬ್ಬಂಡೆಯಾಗಿ ನಿಂತ ಗೋಪಾಲಕೃಷ್ಣನ ಮೇಲೆ ಸಕಾರಣ (?!)ವಾಗಿ ದ್ವೇಷವು ಉಕ್ಕಿ ಬಂದಿತ್ತು. ಆ ದ್ವೇಷವೇ .. . ಅವನನ್ನು ಅವನಿಗರಿವಿಲ್ಲದಂತೆ ಅಲ್ಲಿಗೆಳೆದು ತಂದಿತ್ತು.

ಗೋಪಾಲಕೃಷ್ಣನ ಪಕ್ಕದಲ್ಲಿ ಮತ್ತೊಬ್ಬಳು ಸ್ತ್ರೀಇರುವಳೆಂದರೆ ಆ ದಿನ ಖಂಡಿತವಾಗಿಯೂ ಹುಣ್ಣಿಮೆಯೇ ಎಂಬುದನ್ನು ಬೇರೆ ಹೇಳಬೇಕಾಗಿರಲಿಲ್ಲ. ತಾನು ಅವರ ಕಣ್ಣಿಗೆ ಬೀಳಬಾರದೆಂದುಕೊಂಡು ಮೆಲ್ಲಗೆ ಕಳ್ಳ ಹೆಜ್ಜೆ ಇಡುತ್ತ ಅಲ್ಲೇ ಇದ್ದ ದೊಡ್ಡ ಬಂಡೆಯೊಂದರ ಹಿಂದೆ ಹೋಗಿ ನಿಂತುಕೊಂಡ. ಅಲ್ಲಿಂದ ನೋಡಿದರೆ ಗೋಪಾಲಕೃಷ್ಣನ ಜೊತೆ ಒಂದು ಹೆಣ್ಣು ಇರುವುದು ಸ್ಪಷ್ಟವಾಗಿ ಕಂಡು ಬರುತ್ತಿತ್ತು.

ಆವರಿಬ್ಬರೂ ಮಲಗಿಕೊಂಡು ಮಾತಾಡುತ್ತಿದ್ದರು. ಹುಲಿರಾಜ ಮೊಣಕಾಲೂರಿ ಕುಳಿತು ಅವರೇನು ಮಾತಾಡಿಕೊಳ್ಳುತ್ತಿರುವರೆಂಬುದನ್ನು ಕೇಳಿಸಿಕೊಳ್ಳಲು ಕಿವಿಗಳನ್ನು ಅತ್ತ ಹರಿಬಿಟ್ಟ.

ಗೋಪಾಲಕೃಷ್ಣನ ಧ್ವನಿ ಕೇಳಿ ಬಂತು. "ವಿಶಾಖಾ, ನಿನ್ನ ಜೀವನದಲ್ಲಿ ಯಾರಿಗೂ ಹೇಳಿರದ ಘಟನೆಯ ಬಗ್ಗೆ ಹೇಳು."

"ಓಹೋ! ಇವತ್ತು ವಿಶಾಖಳ ಸರದಿ ಬಂದಿದೆ ಎಂದಾಯ್ತು" ಎಂದುಕೊಂಡ ಹುಲಿರಾಜ. ಅವಳು ಅದೇ ಊರಿನ ರಘುಪತಿಯ ಹೆಂಡತಿ. ಇಪ್ಪತ್ತೆಂಟು ವರ್ಷದವಳಿರಬಹುದು. ನೋಡಲು ಸೊಂಪಾದ ಮೈಕಟ್ಟು ಹೊಂದಿದ

ಅವಳು ಸುಂದರಿಯೇ.

"ಊಂ" ಎಂದು ವಿಶಾಖ ಹೇಳತೊಡಗಿದಳು.

"ಇದು ಎಂಟು ವರ್ಷಗಳ ಹಿಂದೆ ನಡೆದ ವಿಷಯ. ಆದರೂ ಇದು ನೆನ್ನೆ ಮೊನ್ನೆ ನಡೆದಿರುವಂತೆ ಅನಿಸುತ್ತದೆ. ಈ ಘಟನೆಯ ಸವಿ ನೆನಪು ನನ್ನಲ್ಲಿರದಿದ್ದರೆ ಬಹುಶಃ ನಾನು ಇನ್ನೂ ಗಂಡನ........ ಸೇವೆ ಮಾಡುತ್ತ ಇಲ್ಲಿ ಇರುತ್ತಿರಲಿಲ್ಲ ವೇನೋ!

ನನಗಾಗ ಹದಿನೆಂಟು ವರ್ಷ. ಅಷ್ಟೊತ್ತಿಗೆ ನನ್ನಲ್ಲಿನ ಸ್ತ್ರೀ ಹಾರ್ಮೋನು ಗಳೆಲ್ಲವೂ ಪೂರ್ಣ ಪ್ರಮಾಣದಲ್ಲಿ ಸ್ರವಿಸಲು ....... ಪ್ರಾರಂಭಗೊಂಡಿದ್ದವೆಂದು ಕಾಣುತ್ತೆ. ಬೆಳದಿಂಗಳೂ ಬಿಸಿ ಎಂದು ಭಾಸವಾಗುವಂತಹ ವಯಸ್ಸು. ಯಾವ ನಾದರೂ ಪುರುಷನೊಂದಿಗೆ ಗಾಢವಾದ ಸ್ನೇಹ ಬೆಳೆಸಬೇಕೆಂದು ಹಾತೊರೆಯು ತ್ತಿದ್ದ ಮನಸ್ಸು.

ನನ್ನ ಓರಗೆಯ ಹುಡುಗಿಯರೆಲ್ಲ ಪ್ರೇಮದ ವಿಷಯದಲ್ಲಿ ಯಾವುದಾದ ರೊಂದು ಹಂತದಲ್ಲಿದ್ದರು. ಒಬ್ಬಳು ನೋಟದೊಂದಿಗೆ ನೋಟ ಬೆರೆಸುವ ಹಂತ ದಲ್ಲಿದ್ದರೆ, ಮತ್ತೊಬ್ಬಳು ಮಾತಾಡುವ ಹಂತದಲ್ಲಿ, ಇನ್ನೊಬ್ಬಳು ಪ್ರೇಮ ಪತ್ರ ಬರೆಯುವ ಹಂತದಲ್ಲಿ ಇದ್ದರು. ನನಗೆ ಆಗಿನ್ನೂ ಯಾವ ಹುಡುಗನ ಮೇಲೂ ಮನಸ್ಸಾಗಿರಲಿಲ್ಲ. ವಯಸ್ಸಿಗನುಗುಣವಾಗಿ ಬೀದಿಯಲ್ಲಿ ತಿರುಗಾಡು ತ್ತಿರುವ ಹುಡುಗರನ್ನು ಸಹಜವಾಗಿ ನೋಡುತ್ತಿರುತ್ತಿದ್ದೆ.

ಆ ರೀತಿ ನೋಡುತ್ತಿರುವ ಹುಡುಗರಲ್ಲಿ ಸುಧೀರ್ ಎನ್ನುವವನು ನನ್ನ ದೃಷ್ಟಿಯಲ್ಲಿ ಕೊಂಚ ಪ್ರತ್ಯೇಕವಾಗಿ ಕಂಡುಬಂದ ಆವನು ಆಗ ಯೂನಿವರ್ಸಿಟಿ ಯಲ್ಲಿ ಎಂ ಎ. ಓದುತ್ತಿದ್ದ. ನಮ್ಮ ಬೀದಿಯಲ್ಲೇ, ನಮ್ಮ ಮನೆಗೆ ನಾಲ್ಕಾರು ಮನೆ ದಾಟಿ ಇದ್ದ ಮನೆಯೇ ಅವನ ಮನೆ.ಅವನು ಯೂನಿವರ್ಸಿಟಿಕ್ಯಾಂಪಸ್ಸಿ ನಿಂದ ಪ್ರತಿ ಶನಿವಾರ-ರವಿವಾರ ಊರಿಗೆ ಬರುತ್ತಿದ್ದ

ಅವನು ತೀರಾ ಚುರುಕು ಸ್ವಭಾವದ ಹುಡುಗನೇನೂ ಆಗಿರಲಿಲ್ಲ. ಇತರ ಹುಡುಗರಂತೆ ಚೆಲ್ಲೆ ವರ್ತನೆ ಮಾಡುವವನೂ ಆಗಿರಲಿಲ್ಲ.ಅವನ ನೋಟ ವರ್ತ ನೆಯ ಮೇಲಿಂದ ಸೌಂದರ್ಯ ಪ್ರಜ್ಞೆಯುಳ್ಳ ವ್ಯಕ್ತಿಯೆಂದು ನನಗನಿಸಿತ್ತು. ಆದರೆ ಆಗಿಗೆ ಅವನ ಮೇಲೆ ನನಗೆ ಅಷ್ಟಾಗಿಯೇನೂ ಆಸಕ್ತಿ, ಇಷ್ಟ ಇರಲಿಲ್ಲ. ಗೇಟಿನ ಬಳಿ ನಿಂತಿರುವಾಗ ಅವನು ಬೀದಿಯುಲ್ಲಿ ಹೋಗುತ್ತಿದ್ದರೆ ನೋಡುತ್ತಿದ್ದ. ಅಷ್ಟೇ ಹೊರತು ಮತ್ತೊಂದು ಹೆಜ್ಜೆ ಇಡುವ ಸ್ಥಿತಿಯಲ್ಲಿರಲಿಲ್ಲ.

ಅದೇ ಸಂದರ್ಭದಲ್ಲಿ ನಮ್ಮ ಊರಿನಲ್ಲಿ ಶ್ರೀರಾಮ ನವಮಿ ಉತ್ಸವಗಳು ಪ್ರಾರಂಭವಾದವು. ನಮ್ಮ ಊರಿನಲ್ಲಿ ಶ್ರೀರಾಮ ನವಮಿ ಉತ್ಸವವನ್ನು

ಸಂಭ್ರಮೋತ್ಸಾಹದಿಂದ ಆಚರಿಸಲಾಗುತ್ತಿತ್ತು. ಸಾಯಂಕಾಲದಿಂದ ರಾತ್ರಿ ಹತ್ತು-ಹನ್ನೊಂದು ಗಂಟೆಯವರೆಗೆ ಇಡೀ ಊರಿನಲ್ಲೆಲ್ಲಾ ಗಡಿಬಿಡಿಯಿಂದ ತುಂಬಿರುತ್ತಿತ್ತು.

ನಾವಿರುವ ಬೀದಿಯಲ್ಲಿಯೇ ರಾಮಾಲಯವಿತ್ತು. ಉತ್ಸವ ನಡೆಯುತ್ತಿರುವಷ್ಟು ದಿನಗಳ ಕಾಲ ಆಯಾ ದಿನದ ಪೂಜೆ, ಪ್ರಸಾದ ವಿನಿಮಯದ ಜವಾಬ್ದಾರಿಯನ್ನು ಒಂದೊಂದು ಮನೆಯವರು ವಹಿಸಿಕೊಳ್ಳುತ್ತಿದ್ದರು ಸಾಯಂಕಾಲದಿಂದ ಭಜನೆ ಶುರು ಮಾಡಿ, ಎಂಟು ಗಂಟೆಯ ನಂತರ ದೇವರ ಅಲಂಕಾರ, ಪ್ರಸಾದದ ಹಂಚಿಕೆ ಶುರುವಾಗಿ ಹನ್ನೊಂದು ಗಂಟೆಗೆ ಮುಗಿಯುತ್ತಿದ್ದವು.

ನನ್ನ ಓರಗೆಯ ಹುಡುಗಿಯರೆಲ್ಲ ಎಂಟುಗಂಟೆಗಳ ಸಮಯಕ್ಕೆ ಗುಡಿಯ ಹಿಂದೆ ನೆರೆಯುತ್ತಿದ್ದೆವು. ಮುಂದೆಲ್ಲ ಹುಡುಗರು ತುಂಬಿಕೊಂಡಿರುತ್ತಿದ್ದುದರಿಂದ ದೇವಾಲಯದ ಹಿಂದೆ ಮಬ್ಬುಗತ್ತಲಲ್ಲಿ ನಿಂತುಕೊಂಡು ನೋಡುತ್ತಿದ್ದವು. ಸಮಯವಾಗಿ ಪ್ರಸಾದ ಹಂಚುವಾಗ ಬೀದಿಯಲ್ಲಿರುವ ಉಳಿದ ಸ್ತ್ರೀಯರೆಲ್ಲ ಬಂದು ನಮ್ಮೊಡನೆ ಸೇರುತ್ತಿದ್ದರು.ಪ್ರಸಾದ ಹಂಚುವವನು ಮೊದಲು ಮುಂದೆ ಇರುವ ಗಂಡಸರಿಗೂ, ಮಕ್ಕಳಿಗೂ ಪ್ರಸಾದ ಹಂಚಿ ನಂತರ ನಮ್ಮ ಬಳಿಗೆ ಬಂದು ಪ್ರಸಾದ ಕೊಡುತ್ತಿದ್ದ. ದಿನವೂ ನಡೆಯುತ್ತಿದ್ದ ಈ ಕಾರ್ಯಕ್ರಮದಲ್ಲಿ ಅತಿ ಮುಖ್ಯವಾದ ಘಟ್ಟ. ಮೋಜಿನ ಅಂಶ ಏನೆಂದರೆ ಗಂಧ ಬಳಿಯುವುದು.

ದೇವರ ಕೈಂಕರ್ಯ ವಹಿಸಿಕೊಂಡವರು ದೊಡ್ಡದೊಂದು ಪಾತ್ರೆಯಲ್ಲಿ ಗಂಧವನ್ನು ದೇವರಿಗೆ ಸಮರ್ಪಿಸುತ್ತಿದ್ದರು. ಪೂಜಾರಿ ಅದನ್ನು ದೇವರಿಗೆ ನೈವೇದ್ಯ ಮಾಡಿ, ಅಲ್ಲಿರುವ ಜನರಿಗೆ ನೀಡುತ್ತಿದ್ದ ನಾವು ಅದನ್ನು ನಮಗಿಷ್ಟರಾದ ವ್ಯಕ್ತಿಗೆ ಬಳಿಯಬಹುದಿತ್ತು. ಆ ಗಂಧವನ್ನು ಕೆಲವರು ತೆಗೆದುಕೊಳ್ಳುತ್ತಿದ್ದರು. ಇನ್ನು ಕೆಲವರು ತೆಗೆದುಕೊಳ್ಳುತ್ತಿದ್ದಿಲ್ಲ, ಆದರೆ ಚಿಗುರು ಮೀಸೆಯ ಹುಡುಗ-ಹುಡುಗಿಯರು ಮಾತ್ರ ಈ ಗಂಧವನ್ನು ಬಿಡದೆ ತೆಗೆದುಕೊಳ್ಳುತ್ತಿದ್ದರು. ಸಮಯ ನೋಡಿಕೊಂಡು ಯಾರ ಕಣ್ಣಿಗೂ ಬೀಳದಂತೆ, ತಮಗಿಷ್ಟರಾದವರಿಗೆ ಗಂಧ ಸವರುತ್ತಿದ್ದರು. ಬಹಳಷ್ಟು ಪ್ರೇಮ ಪ್ರಕರಣಗಳು ಈ ಗಂಧ ಸವರುವ ಕಾರ್ಯಕ್ರಮದಲ್ಲಿಯೇ ಹುಟ್ಟಿಕೊಳ್ಳುತ್ತಿದ್ದವು. ಹುಟ್ಟಿಕೊಂಡವುಗಳು ಇತರರಿಗೆ ಗೊತ್ತಾಗುತ್ತಿದ್ದವು.

ಆ ವರ್ಷ ಉತ್ಸವ ಪ್ರಾರಂಭವಾದ ಮೊದಲ ದಿನ, ಮೊದಲ ಬಾರಿಗೆ ನಾನು ಗಂಧವನ್ನು ಎತ್ತಿಕೊಂಡೆ. ಗಂಧವನ್ನು ಕೈಗೆ ಬಳಿದುಕೊಂಡ ನಂತರ, ಉಳಿದ ಹುಡುಗಿಯರೊಂದಿಗೆ ನಾನೂ ದೇವಾಲಯದ ಹಿಂದೆ ಬಂದುಬಿಟ್ಟೆ.

ಉಳಿದ ಸ್ನೇಹಿತೆಯರು ತಮಗಿಷ್ಟರಾದ ಹುಡುಗರಿಗೋಸ್ಕರ ಕಾಯುತ್ತಿದ್ದರು.

ಹುಡುಗರ ಒಬ್ಬೊಬ್ಬರಾಗಿ ಬರತೊಡಗಿದರು. ನನ್ನ ಸ್ನೇಹಿತೆಯರೆಲ್ಲ ತಮಗೆ ಬೇಕಾದವರಿಗೆ ಗಂಧ ಪೂಸಿದರು, ಅವರಿಂದ ಗಂಧ ಬಳಿಸಿಕೊಂಡರು. ಆ ಕಾರ್ಯಕ್ರಮವೆಲ್ಲ ಎಷ್ಟು ಅವಸರದಿಂದ ನಡೆಯಿತೆಂದರೆ ಕೆಲವೇ ಕ್ಷಣಗಳಲ್ಲಿ ಮಿಂಚಿನಂತೆ ಮುಗಿದು ಹೋಗಿತ್ತು.

ಕೊನೆಯಲ್ಲಿ ಉಳಿದದ್ದು ನಾನೊಬ್ಬಳೇ ನನ್ನ ಕೈಯಲ್ಲಿದ್ದ ಗಂಧ ಮೆಲ್ಲಗೆ ಗಟ್ಟಿಗೊಳ್ಳತೊಡಗಿತ್ತು. ನಾನು ಗಂಧ ಬಳಿಯಬೇಕಂದರೆ ನನಗಿಷ್ಟನಾದವನೆ ನ್ನುವವನು ಒಬ್ಬನೂ ಇರಲಿಲ್ಲ. ಯೋಚಿಸುತ್ತಿರುವಂತೆ ನನಗೆ ತಟಕ್ಕನೆ ಸುಧೀರನ ನೆನವಾಯ್ತು ಅವನು ಸಾಯಂಕಾಲ ಬೀದಿಯಲ್ಲಿ ಹೋಗುತ್ತಿಗ ಬೇಕಾದರೆ ನೋಡಿದ್ದೆ. ಆ ದಿನವೇ ಕ್ಯಾಂಪಸ್ಸಿನಿಂದ ಬಂದಿದ್ದಿರಬೇಕು.

ಆದರೆ ಅವನು ದೇವಾಲಯದ ಹಿಂದೆ ಬರುವ ಅವಕಾಶವಿರಲಿಲ್ಲ. ನಾನು ಮುಂದೆ ಹೋಗುವಂತಿರಲಿಲ್ಲ ಏನು ಮಾಡಬೇಕೆಂದು ಯೋಚಿಸುತ್ತಿದ್ದು ಬಿಟ್ಟೆ ಕೊನೆಗೆ ಪಕ್ಕದಲ್ಲಿದ್ದ ನನ್ನ ಸ್ನೇಹಿತೆಗೆ ಬಳಿಯಬೇಕೆಂದುಕೊಂಡೆನಾದರು ಅದಕ್ಕೆ ನನ್ನ ಮನಸ್ಸೇಕೋ ಒಡಂಬಡಲಿಲ್ಲ. ಇನ್ನೂ ಸ್ವಲ್ಪ ಹೊತ್ತು ಕಾದು ನೋಡೋಣವೆಂದುಕೊಂಡೆ.

ನನ್ನ ಮೊರೆಯನ್ನು ಆ ಶ್ರೀರಾಮ ಕೇಳಿಸಿಕೊಂಡನೇನೋ ಸುಧೀರ್ ದೇವಾಲಯದತ್ತ ಬರುತ್ತಿರುವುದು ಕಾಣಿಸಿತು. ಮನಸ್ಸಿನಲ್ಲಿ ಅದೊಂದು ರೀತಿಯ 'ಥ್ರಿಲ್' ಮೂಡಿ, ಅಲುಗಾಡಿಸಿಬಿಟ್ಟಿತು ಶರೀರದಲ್ಲೆಲ್ಲ ಮಧುರ ವಾದ ಕಂಪನದ ಅಲೆಗಳು ಹರಡಿಕೊಂಡವು. ಆ ಅನುಭವ ಅದುವರೆವಿಗೂ ನನಗುಂಟಾಗಿರದಿದ್ದಂತಹುದು. ಪುಳಕೀರಿಸುವಂತಹ ಆ ಅನುಭವ ಗಮ್ಮತ್ತಿನ ದಾಗಿತ್ತು.

ಸುಧೀರ್ ಹತ್ತಿರವಾಗತೊಡಗಿದ. ನನ್ನಿಂದ ನಿಲ್ಲಲಾಗಲಿಲ್ಲ. ಅದು ಬೀದಿ ಎಂಬುದನ್ನೂ ಯೋಚಿಸದೆ ಮಬ್ಬುಗತ್ತಲಲ್ಲಿ ಮುಂದೆ ಸರಿದು ಅವನ ಬಳಿ ಸಾರಿ, ಕೆನ್ನೆಗೆ ಮೃದುವಾಗಿ ಗಂಧ ಸವರಿದೆ, ನನ್ನ ಕೈ ನಡುಗುವುದು, ನಾಲಿಗೆ ಒಣಗಿದಂತಾಗಿದ್ದು ನನಗನುಭವವಾಗುತ್ತಿತ್ತು.

ನನ್ನ ಹಠಾತ್ ಚರ್ಯೆಗೆ ಸುಧೀರ್ ಮೊದಲು ಆಶ್ಚರ್ಯಗೊಂಡರೂ, ಆ ನಂತರ ನನ್ನನ್ನು ಗುರುತಿಸಿ ಮೆಲ್ಲಗೆ ನಕ್ಕ. ಅಷ್ಟೆಲ್ಲ ನಡೆದ ನಂತರ ಆ ರಾತ್ರಿ ನಿದ್ದೆ ಬರುತ್ತದೆಂದು ನನಗನಿಸಲಿಲ್ಲ. ಬೆಳಗಾಗುವವರೆಗೆ ಆ ರೀತಿ ನವಮಿ ಉತ್ಸವ ನಡೆಯುತ್ತಿದ್ದರೆ ಎಷ್ಟು ಚೆನ್ನಾಗಿರುತ್ತೆ ಎನಿಸಿತು. ಆದರೆ ತಕ್ಷಣವೇ ಪ್ರಸಾದವನ್ನು ಹಂಚುವ ಕಾರ್ಯಕ್ರಮವನ್ನು ಶುರುಮಾಡಲಾಯ್ತು.

ಪ್ರಸಾದ ಪಡೆದ ನಂತರ ಮನೆಗೆ ಬಂದೆನಾದರೂ ಏನೂ ಕೆಲಸ ಮಾಡಲು, ನನ್ನಿಂದಾಗಲಿಲ್ಲ. ಸುಧೀರನ ಕೆನ್ನೆಯ ಒರಟುತನ ನನ್ನ ಹೃದಯ ದಲ್ಲಿ 'ಡವಡವ'ವನ್ನು ಹುಟ್ಟಿಸುತ್ತಿತ್ತು ಹಾಸಿಗೆಯ ಮೇಲೆ ಮಲಗಿಕೊಂಡೆ ನಾದರೂ ನಿದ್ದೆ ಸನಿಹವೂ ಸುಳಿಯಲಿಲ್ಲ. ಆ ರೀತಿ ಯೋಚಿಸುತ್ತ ಬೆಳಗಿನ ಜಾವದಲ್ಲಿ ಯಾವಾಗಲೋ ನಿದ್ದೆ ಹತ್ತಿರಬೇಕು. ಆ ನಿದ್ದೆಯಲ್ಲೆ ಯಾವು ಯಾವುದೋ ರಂಗುರಂಗಿನ ಕನಸುಗಳು ಬಿದ್ದವು.

ಅಂದಿನಿಂದ ವಾರಕ್ಕೊಂದು ಸಲ ಬರುವ ಅವನಿಗೋಸ್ಕರ ನಿರೀಕ್ಷಣೆ ಪ್ರಾರಂಭವಾಯ್ತು. ಅವನು ಬಂದರೆ ನನಗೊಬ್ಬಳಿಗೆ ಹಬ್ಬ ಬಂದಂತಾಗು ತ್ತಿತು. ಆ ಎರಡು ದಿನ ಯಾವೊಂದು ಕೆಲಸವನ್ನೂ ಮಾಡದೆ ಬೀದಿ ಬಾಗಿಲಿ ನತ್ತ ನನ್ನ ದೃಷ್ಟಿಯನ್ನು ನೆಟ್ಟಿರುತ್ತಿದ್ದೆ. ಅವನೂ ಅಷ್ಟೇ. ಸುಮ್ಮನೇ ಏನಾದ ರೊಂದು ನೆಪ ಮಾಡಿ ಹೂಡಿ ಆ ಬೀದಿಯಲ್ಲಿ ತಿರುಗಾಡುತ್ತ ನನಗೋಸ್ಕರ ನೋಟದ ಬಲೆಯನ್ನು ಬೀಸುತ್ತಿದ್ದ. ಯಾವಾಗಲಾದರೂ ಕತ್ತಲಲ್ಲಿ ಎದುರಾ ದಾಗ ಗಟ್ಟಿಯಾಗಿ ತಬ್ಬಿಕೊಂಡು ಮುತ್ತಿಡುತ್ತಿದ್ದ. ಆ ಕ್ಷಣದಲ್ಲಿ ನನ್ನ ರಕ್ತ ಹೆಪ್ಪುಗಟ್ಟಿದಂತೆ ನನಗನ್ನಿಸುತ್ತಿತ್ತು. ಆಗಾಗ ಪ್ರೇಮ ಪತ್ರಗಳೂ ವಿನಿಮಯ ವಾಗುತ್ತಿದ್ದವು. ಎಲ್ಲರೂ ಮಲಗಿದ ಮೇಲೆ ಕೋಣೆಯಲ್ಲಿ ಒಂಟಿಯಾಗಿ ಮೇಣದ ಬತ್ತಿಯ ಬೆಳಕಿನಲ್ಲಿ ಪ್ರಿಯತಮನ ಪ್ರೇಮ ಪತ್ರ ಓದುವುದು ತುಂಬಾ ಸೊಗಸಿನ, ರೋಮಾಂಚನ ಒದಗಿಸುವ ಅನುಭವ.

ನಮಗಿಬ್ಬರಿಗೂ ಒಂದೆರಡು ನಿಮಿಷಗಳಿಗಿಂತ ಹೆಚ್ಚು ಕಾಲ ಜೊತೆಗಿ ರುವ ಅವಕಾಶ ಒದಗಿ ಬಂದಿರಲಿಲ್ಲ. ಅವನು ಮೊದಲ ವರ್ಷದ ಪರೀಕ್ಷೆ ಬರೆದು ಮನೆಗೆ ಬಂದ ರಜೆಯ ಎರಡು ತಿಂಗಳು ಅಲ್ಲೇ ಕಳೆಯುವವನಿದ್ದ. ಒಂದು ದಿನ ನಮಗಿಬ್ಬರಿಗೂ ಗಂಟೆಗೂ ಮೇಲ್ಪಟ್ಟು ಏಕಾಂತದಲ್ಲಿ ಕಳೆಯುವ ಅವಕಾಶ ಬಂತು. ಆ ಅವಕಾಶ ತಾನಾಗಿ ಒದಗಿ ಬರಲಿಲ್ಲ. ನಾವಿಬ್ಬರೂ ಆ ರೀತಿ ಅವ ಕಾಶ ಒದಗುವಂತೆ ಪ್ಲಾನ್ ಮಾಡಿ ಭೇಟಿಯಾದೆವು.

ಆ ದಿನ ಮಧ್ಯಾಹ್ನ ಮೂರು ಗಂಟೆಯಿಂದ ನಾಲ್ಕು ಗಂಟೆಗಳ ವರೆಗೂ ಸೂರ್ಯಗ್ರಹಣವಿತ್ತು. ಆ ಸಮಯದಲ್ಲಿ ಸೂರ್ಯ ಪೂರ್ತಿಯಾಗಿ ಕಂಡು ಬರುವುದಿಲ್ಲವೆಂದೂ, ಆ ಒಂದು ಗಂಟೆ ಕಾಲ ಪೂರ್ತಿಕತ್ತಲಾಗಿಬಿಡುತ್ತದೆಂದೂ ಆಗ ಯಾರೂ ಹೊರಗೆ ತಿರುಗಾಡಬಾರದೆಂದೂ, ಸೂರ್ಯ ಗ್ರಹಣದ ನಂತರ ಹೊರಗೆ ಬರಬೇಕೆಂದೂ ಊರಿನಲ್ಲಿ ಡಂಗೂರ ಹಾಕಲಾಗಿತ್ತು.

ಹಾಡುಹಗಲಿನಲ್ಲಿ ಕತ್ತಲು ಆವರಿಸಿಕೊಳ್ಳುವುದೆಂದರೆ ಅದು ಊಹೆಗೆಟು ಕದ ವಿಷಯ. ಆ ಅದ್ಭುತವನ್ನು ಸುಧೀರ್‌ನೊಂದಿಗೆ ಸೇರಿ ನೋಡಬೇಕೆಂದು

ಮನಸ್ಸು ಹಾತೊರೆಯಿತು. ನಮ್ಮ ಮನೆಯ ಹಿಂದೆ, ಬೀದಿಗೆದೂರವಾಗಿ ಒಬ್ಬ ಮುದುಕಿಯ ಮನೆಯಿತ್ತು. ಆಕೆಯನ್ನು ನಾವೆಲ್ಲ ಅಜ್ಜಿ ಎಂದು ಕರೆಯುತ್ತಿದ್ದವು. ಆ ಮನೆಯಲ್ಲಿ ಇದ್ದದ್ದು ಆಕೆಯೊಬ್ಬಳೇ. ಅಲ್ಲಿಗೆ ಹೋದರೆ ಸೂರ್ಯ ಗ್ರಹಣದ ಸಮಯದಲ್ಲಿ ಯಾರೂ, ಹೊರಗೆಲ್ಲೂ ಬರುವುದಿಲ್ಲವಾದ್ದರಿಂದ ನಾವಿಬ್ಬರೂ ಸಂತೋಷವಾಗಿ ಕಾಲ ಕಳೆಯಬಹುದೆಂದು ತೋರಿಯಿತು. ಮೂರು ಗಂಟೆಗೆ ಐದು ನಿಮಿಷಗಳಿರುವಾಗಲೇ ಅಲ್ಲಿಗೆ ಬರಬೇಕೆಂದು ಸುಧೀರನಿಗೆ ಗುಟ್ಟಾಗಿ ಚೀಟಿ ತಲುಪಿಸಿದೆ. ಎರಡೂವರೆಯಾಗುತ್ತಿದ್ದಂತೆ, 'ನಾನು ಅಜ್ಜಿ ಮನೆಯಲ್ಲಿ ಇರ್‍ತೀನಿ. ಇಲ್ಲಿ ಬೇಜಾರಾಗ್ತಿದೆ' ಎಂದು ಅಮ್ಮನೊಂದಿಗೆ ಹೇಳಿದೆ.

'ಇಲ್ಲಿಯೋ, ಅಲ್ಲಿಯೋ ಎಲ್ಲಾದರೊಂದು ಕಡೆ ಇರು. ಗ್ರಹಣ ಇರೋವಾಗ ಹೊರಗೆ ಬರಬೇಡ' ಎಂದು ನನ್ನ ತಾಯಿ ಒಪ್ಪಿಸಿಕೊಂಡಳು.

'ಆಗ್ಲಿ' ಎಂದು ತಲೆಯಾಡಿಸಿ, ಲಗುಬಗೆಯಿಂದ ಆ ಅಜ್ಜಿಯ ಮನೆಯತ್ತ ಹೆಜ್ಜೆ ಹಾಕಿದೆ ಆಕೆಗೆ ಎಂಬತ್ತು ವರ್ಷಗಳಿದ್ದಿರಬಹುದು. ಸೊಂಟ ಪೂರ್ತಿಯಾಗಿ ಬಗ್ಗಿ ಹೋಗಿತ್ತು. ನೋಟ ಕ್ಷೀಣಗೊಂಡಿತ್ತು. ಕಿವಿ ತಕ್ಕಮಟ್ಟಿಗೆ ಚೆನ್ನಾಗಿಯೇ ಇದ್ದವು ನಾನು ಆಗಾಗ ಆ ಅಜ್ಜಿಯ ಮನೆಗೆ ಹೋಗಿ ಬಂದು ಮಾಡುತ್ತಿದ್ದನಾದ್ದರಿಂದ ಅಮ್ಮನಿಗೆ ಯಾವ ರೀತಿಯಲ್ಲೂ ಸಂದೇಹ ಮೂಡಲಿಲ್ಲ.

ನಾನು ಹೋದಾಗ ಆ ಅಜ್ಜಿ ಒಂದು ಮೂಲೆಯಲ್ಲಿ ಮಲಗಿದ್ದಳು. ನನ್ನ ಹೆಜ್ಜೆಯ ಸದ್ದು ಕೇಳಿ, 'ಯಾರೂ?' ಎಂದಳು.

'ನಾನು' ಎಂದೆ. ನನ್ನ ಧ್ವನಿಯ ಗುರುತು ಹಿಡಿದ ಆಕೆ ಮತ್ತೆ ಮುಸುಗು ಹೊದ್ದು ಮಲಗಿದಳು ಆ ಮನೆ ತಕ್ಕಮಟ್ಟಿಗಿತ್ತು. ಒಂದು ಭಾಗದಲ್ಲಿ ತಡಿಕೆ ಕಟ್ಟಿ ಮರೆ ಮಾಡಲಾಗಿತ್ತು. ಅಲ್ಲಿ ಆ ಮುದುಕಿಯ ಬಟ್ಟೆಬರೆ, ಒಂದು ದೊಡ್ಡ ಮರದ ಪೆಟ್ಟಿಗೆ ಇದ್ದವು. ಈ ಭಾಗದಲ್ಲಿ ಒಂದು ನೂಲಿನ ಮಂಚ ಇತ್ತು. ಅದರ ಮೇಲೆ ಹಾಸಿಗೆ ಎರಡು ದಿಂಬುಗಳಿದ್ದವು.

ನಾನು ಹಾಸಿಗೆಯ ಮೇಲೆ ಮಲಗಿ, ಹೊತ್ತು ಕಳೆಯಲೆಂದು ಜೊತೆಗೆ ತಂದಿದ್ದ ವಾರ ಪತ್ರಿಕೆಯೊಂದನ್ನು ತಿರುವಿಹಾಕತೊಡಗಿದೆ. ಹತ್ತು ನಿಮಿಷ ಕಳೆಯುವಷ್ಟರಲ್ಲಿ ಸುಧೀರ್ ಅಲ್ಲಿಗೆ ಬಂದ. ಯಥಾ ಪ್ರಕಾರ ಅಜ್ಜಿ 'ಯಾರು' ಎಂದಳು.

'ನಾನಜ್ಜಿ ಸುಧೀರ್' ಎನ್ನುತ್ತಲೇ ಮತ್ತೆ ಮುಸುಗಿಕ್ಕಿದಳು. ಆಕೆಗೆ ಕಣ್ಣು ಸರಿಯಾಗಿ ಕಾಣುವುದಿಲ್ಲವೆಂದೂ, ಕಿವಿಗಳೂ ಅಷ್ಟಕ್ಕಷ್ಟೇ ಎಂದು ಅರಿತ್ತಿದ್ದ ಸುಧೀರ್ ಬಂದೊಡನೆಯೇ ನನ್ನ ಪಕ್ಕದಲ್ಲಿ ಮಂಚದ ಮೇಲೆ ಕುಳಿತು

ಕೊಂಡ. ಇನ್ನೂ ಗ್ರಹಣ ಪ್ರಾರಂಭವಾಗಿದ್ದಿಲ್ಲವಾದ್ದರಿಂದ ಅತ್ತ ಕಡೆ ಯಾರಾದರೂ ಬಂದು ಬಿಡುವ ಅಪಾಯವಿದೆಯೆಂದು ನಾನು ತಟಕ್ಕನೆ ಮೇಲೆದ್ದು ಮಂಚದ ಬಳಿ ಇದ್ದ ಸ್ಟೂಲಿನ ಮೇಲೆ ಕುಳಿತೆ.... ... ಇಬ್ಬರೂ ಅದೂ ಇದೂ ಹರಟಿದೆವು.

ಮೂರು ಗಂಟೆಯಾಯ್ತು. ಗ್ರಹಣ ಪ್ರಾರಂಭವಾಯ್ತು. ಆದರೆ ಎಲ್ಲರೂ ಹೇಳಿದಂತೆ ಕತ್ತಲು ಆವರಿಸಿಕೊಳ್ಳಲಿಲ್ಲ. ಬಿಸಿಲಿನ ತೀಕ್ಷ್ಣತೆ ತುಂಬಾ ಕಡಿಮೆಯಾಯ್ತು. ಅಷ್ಟೇ ಅಲ್ಲದೆ ಬಿಸಿಲಿನಲ್ಲಿ ಏನೋ ಮಾರ್ಪಾಡುಂಟಾಯ್ತು ಕುಲುಮೆಯಲ್ಲಿ ಬಂಗಾರವನ್ನು ಕರಗಿಸುತ್ತಿರುವಂತೆ ಬಿಸಿಲು ಬಂಗಾರದ ಬಣ್ಣ ತಾಳಿತು.

ಬಾಗಿಲಿನ ಬಳಿಗೆ ಬಂದು ನೋಡಿದೆ ಬೀದಿಯಲ್ಲಾಗಲಿ, ಮನೆಗಳ ಹೊರಗಾಗಲಿ ಯಾರೊಬ್ಬರೂ ಕಂಡು ಬರಲಿಲ್ಲ. ಎಲ್ಲರೂ ಬಾಗಿಲು ಮುಚ್ಚಿಕೊಂಡು ಒಳಗೇ ಇದ್ದು ಬಿಟ್ಟಿದ್ದರು. ನಾನೂ ಒಳಗೆ ಬಂದು ಬಾಗಿಲನ್ನು ಸ್ವಲ್ಪ ಮುಂದೆ ಮಾಡಿದೆ. ಇನ್ನೇನೂ ಭಯವಿಲ್ಲವೆಂದು ಸುಧೀರನ ಪಕ್ಕದಲ್ಲಿ ಕುಳಿತೆ. ಅಜ್ಜಿ ಬಾಗಿಲಿನತ್ತ ಮುಖವನ್ನು ಮಾಡಿ ಮಲಗಿದ್ದರಿಂದ ಆಕೆಯ ಬೆನ್ನು ನಮಗೆ ಕಾಣಿಸುತ್ತಿತ್ತು.

ನನ್ನ ಶರೀರ ತನ್ನನ್ನು ತಾಕುತ್ತಿದ್ದುದರಿಂದ ಸುಧೀರನಿಂದ ಏನೂ ಮಾತಾಡಲಾಗಿರಲಿಲ್ಲ. ಮನಸ್ಸು ಮತ್ತೇನನ್ನೋ ಬಯಸುತ್ತಿರುವಂತೆ ಏನೋ ಸಂಬಂಧವಿಲ್ಲದ ವಿಷಯಗಳನ್ನೆಲ್ಲ ಮಾತಾಡತೊಡಗಿದ.

ಅವನ ಅವಸ್ಥೆ ನೋಡಿ ಕಿಲ ಕಿಲನೆ ನಕ್ಕು, 'ಏನಿದು ಹುಚ್ಚು ಹುಚ್ಚಾಗಿ ಮಾತಾಡ್ತಿದೀಯಲ್ಲ'' ಎಂದೆ.

'ನಿನ್ನಂತಹ ಸುಂದರ ಹೆಣ್ಣನ್ನು ಪಕ್ಕದಲ್ಲಿಟ್ಟುಕೊಂಡು ಸುಮ್ಮನೇ ಇದ್ದರೆ ಹುಚ್ಚು ಹಿಡಿಯದೆ ಇರುತ್ತಾ''

'ಏನು ಬೇಕು?'

ಅವನು ನನ್ನತ್ತ ತಿರುಗಿದ. ಕಣ್ಣುಗಳು ಕೋರಿಕೆಯಿಂದ ಕೆಂಪು ವರ್ಣ ತಾಳಿದ್ದವು. ಶ್ವಾಸವನ್ನು ಗಾಢವಾಗಿ ಎಳೆದು ಬಿಡುತ್ತಿದ್ದುದರಿಂದ ಎದೆ ಏರಿ, ಏರಿ ಇಳಿಯುತ್ತಿತ್ತು.

'ಪ್ಲೀಜ್ ಒಂದು ಸಲ ಮುತ್ತಿಡ್ತೀನಿ' ಎಂದು ವಿನಂತಿಸುವವನಂತೆ ಕೇಳಿದ ಸುಧೀರ್. ಅವನು ತುಂಬಾ ನಾಜೂಕು ಮನಸ್ಸಿನ ಜೀವಿಯಾದ್ದರಿಂದ ಆ ರೀತಿ ಪ್ರತಿಯೊಂದಕ್ಕೂ ಒಪ್ಪಿಗೆ ಕೇಳುತ್ತಿದ್ದ. ವಾಸ್ತವಕ್ಕೆ ಅಂತಹ ಸಂದರ್ಭದಲ್ಲಿ ಹುಡುಗಿಯ ಒಪ್ಪಿಗೆ ಕೇಳಬಾರದು. ತೀರಾ ಅಭ್ಯಂತರ ಹೇಳುವವರಿಗೆ

ತನ್ನ ಕೆಲಸ ತಾನು ಮಾಡಿಕೊಂಡು ಹೋಗುವುದು ಉತ್ತಮ. ನಾನು ಮೌನ ವಾಗಿದ್ದುಬಿಟ್ಟೆ. ನನ್ನ ಮುಖ ಪ್ರಸನ್ನವಾಗಿರುವುದನ್ನು ಗಮನಿಸಿ. 'ಮೌನಂ ಸಮ್ಮತಿ ಲಕ್ಷಣಂ' ಎಂದು ಗ್ರಹಿಸಿ ಎರಡೂ ಕೈಗಳಲ್ಲಿ ನನ್ನ ತಲೆಯನ್ನು ಹಿಡಿದುಕೊಂಡು ಮುತ್ತಿಟ್ಟ. ನನ್ನ ಶರೀರವಿಡೀ ಮಧುರವಾಗಿ ಕಂಪಿಸಿತು. ಗ್ರಹಣ ವಾದುದರಿಂದ ಯಾರೂ ಅತ್ತ ಬರುವುದಿಲ್ಲವೆನ್ನುವ ಧೈರ್ಯದಿಂದ ತಲೆಯನ್ನು ಬಿಟ್ಟು ಗಟ್ಟಿಯಾಗಿ ತಬ್ಬಿಕೊಂಡ. ನನ್ನ ಸ್ತನಗಳು ಅವನ ಎದೆಯೊಳಗೆ ನಾಟಿಕೊಳ್ಳುತ್ತವೇನೋ ಎನ್ನುವಂತೆ ಅದುಮಿಕೊಂಡಿತು. ಇನ್ನಷ್ಟು-ಮತ್ತಷ್ಟು-ನನ್ನೊಳಗೆ ಬೆರೆತು ಹೋಗಬೇಕೆನ್ನುವ ಆತುರದಿಂದ ತನ್ನ ಅಪ್ಪುಗೆಯನ್ನು ಮತ್ತಷ್ಟು ಬಿಗಿಗೊಳಿಸಿದ. ಎಲುಬುಗಳು ಪುಡಿಪುಡಿಯಾಗುತ್ತವೇನೋ ಎಂದು ನನಗನಿಸಿತು, ಉಸಿರು ಎಟುಕುತ್ತಿದ್ದಿಲ್ಲ. ಅಲ್ಲಿಯವರೆಗೂ ಅಂತಹ ಸುಖವನ್ನು ಅರಿತಿರದಿದ್ದ ಶರೀರ ಮತ್ತಿನಿಂದ ತೂರಾಡಲು ಸಿದ್ಧವಾಗುವಂತಿತ್ತು.

ಅವನ ಭಾರಕ್ಕೆ ಮೆಲ್ಲಗೆ ಹಾಗೆಯೇ ದಿಂಬಿನ ಮೇಲೆ ಒರಗಿದೆ. ಅವನು ಸೊಂಟದವರೆಗೆ ನನ್ನ ಮೇಲೆ ಒರಗಿ ತುಟಿಗಳನ್ನು ಬಾಯೊಳಗೆ ತಳ್ಳಿದ. ಚಿಕ್ಕಂದಿನಲ್ಲಿ ನಾವು ಇತರರ ಎಂಜಲನ್ನು ತಿನ್ನಲು ಬಯಸುವುದಿಲ್ಲ. ಆದರೆ ಈಗ ಅವನ ಎಂಜಲು ಅಮೃತ ಸಮಾನವೆಂದು ಭಾಸವಾಯ್ತು.ಅವನ ಬೆರಳು ಗಳು ನನ್ನ ಮೈಮೇಲೆ ಎಲ್ಲೆಲ್ಲೋ ಹರಿದಾಡುತ್ತಿದ್ದವು. ಅಲ್ಲಿಯತನಕ, ಆ ಅವಯವಗಳು ಅಷ್ಟು ಸುಖವನ್ನು ನೀಡುತ್ತವೆಂದು ನನಗೆ ಗೊತ್ತಿರಲಿಲ್ಲ. ಈ ಸುಖ ನನಗೊದಗಿಸಲೆಂದೇ ಅವು ಬೆಳೆದಿವೆಯೇನೋ ಎಂದು ನನಗನಿಸಿತು.

ಅವನು ಮತ್ತಷ್ಟು ಮುಂದುವರಿಯಲು ಸನ್ನದ್ಧನಾದ. ಆಗ ನನಗೆ ಬರಲಿರುವ ಅಪಾಯದ ಸುಳಿವು ತಟ್ಟಿತು. ಇನ್ನು ಉಪೇಕ್ಷೆ ಮಾಡುವಂತಿಲ್ಲವೆಂದು ಗ್ರಹಿಸಿದೆ. ಚಿಕ್ಕಂದಿನಿಂದಲೂ ತಾಯಿ, ಅಜ್ಜಿ, ಸಿನಿಮಾ, ಟಿ. ವಿ ಪುಸ್ತಕಗಳು ಬೋಧಿಸಿದ ಪಾತಿವ್ರತ್ಯ ನನ್ನನ್ನು ಹಿಂದಕ್ಕೆಳೆಯಿತು. ಅವನನ್ನು ಮೃದುವಾಗಿ ತಳ್ಳಲು ಪ್ರಯತ್ನಿಸಿದೆ.

ಅಲ್ಲಿಯವರೆಗೂ ಬಂದು, ಅರ್ಧದಲ್ಲಿ ಹಿಂದೆ ಸರಿಯುವುದೆಂದರೆ, ಅವನಿಗೆ ತುಂಬಾ ಕಷ್ಟವೆನಿಸಿತ್ತು. ಅದಕ್ಕೇ ನನ್ನ ಕಣ್ಣಲ್ಲಿ ಕಣ್ಣಿಟ್ಟು ಪ್ರಾರ್ಥಿಸುವವನಂತೆ, 'ಪ್ಲೀಜ್ ಕರುಣಿಸುವುದಿಲ್ವೆ' ಎಂದು ಕೇಳಿದ. ಆ ಕರುಣಿಸುವುದು ಯಾವುದಕ್ಕೆಂಬುದು ನನಗೆ ಗೊತ್ತಿತ್ತು, ಆದರೆ ಹಲವಾರು ರೀತಿಯ ಭಯ ನನ್ನನ್ನು ಹಿಂದಕ್ಕೆ ಜಗ್ಗುತ್ತಿತ್ತು. ಅವನನ್ನು ಮೃದುವಾಗಿ ತಡೆಯುತ್ತ, "ಈಗಲ್ಲ-ಇನ್ನೊಮ್ಮೆ ಯಾವತ್ತಾದ್ರೂ..." ಎಂದೆ. ಆ ಮಾತಿನಿಂದ ಅವನು ಮಂತ್ರ ಬಂಧನಕ್ಕೀಡಾದವನಂತೆ ನಿಂತುಬಿಟ್ಟ. ನನ್ನ ಅನುಮತಿ ಇಲ್ಲದೆ ಮುತ್ತಿಡಲೂ

ಕೂಡ ಧೈರ್ಯ ಮಾಡುವುದಿಲ್ಲವೆಂಬುದು ನನಗೆ ಗೊತ್ತಿತ್ತು. ನಾನು ಅವನ ಹಿಡಿತದಿಂದ ಬಿಡಿಸಿಕೊಂಡು ಎದ್ದು ಸ್ಟೂಲಿನ ಮೇಲೆ ಕುಳಿತುಕೊಂಡೆ. ಅವನ ಗಮನವನ್ನು ಬೇರೆಡೆ ಸೆಳೆಯಲು ಏನೇನೋ ಪ್ರಶ್ನೆಗಳನ್ನು ಕೇಳಿದೆ. ಅವನು ಎಲ್ಲವಕ್ಕೂ ಅನ್ಯಮನಸ್ಕನಾಗಿಯೇ ಉತ್ತರವಿತ್ತ. ಕೊನೆಗೆ ನಾನು ಸುರಕ್ಷಿತ ವಾಗಿಯೇ ಅಲ್ಲಿಂದ ಹೊರಬಿದ್ದೆ.

ಆಗಿನಿಂದ ಯಾವಾಗಲಾದರೂ ನಾವು ಭೇಟಿಯಾದಾಗ, ಮುತ್ತಿಟ್ಟು, ನಂತರ, "ಈಗಲಾದರೂ ಕರುಣಿಸುತ್ತೀಯಾ" ಎಂದು ಕೇಳುತ್ತಿದ್ದ. ನಾನು, 'ಈಗಲ್ಲ ಇನ್ನ್ಯಾವತ್ತಾದ್ರೂ' ಎಂದು ಅದೇ ಪಲ್ಲವಿ ಹಾಡುತ್ತಿದ್ದೆ.

ಅವನು ಎಂ. ಎ. ಅಂತಿಮ ವರ್ಷದಲ್ಲಿರುವಾಗ ನನಗೆ ಒಂದು ಸಂಬಂಧ ಬಂತು. ನನ್ನೊಬ್ಬಳದಷ್ಟೇ ಅಲ್ಲ, ಬಹಳಷ್ಟು ಜನರ ಪ್ರೇಮ ಪ್ರಕರಣಗಳು ಹೀಗೆ ಮಧ್ಯಂತರದಲ್ಲೇ ನಿಂತು ಬಿಡುತ್ತಿದ್ದವು. ಯಾವುದೂ ಮದುವೆಯವರೆಗೆ ಮುಂದುವರಿಯುತ್ತಿದ್ದಿಲ್ಲ, ಇದಕ್ಕಿದ್ದ ಕಾರಣಗಳು ಹಲವಾರು.

ನಮ್ಮೂರಿನ ಹುಡುಗಿಯರಲ್ಲಿ ಶೇಕಡಾ ತೊಂಬತ್ತರಷ್ಟು ಜನ ಪ್ರೇಮ ಪಾಶಕ್ಕೆ ಸಿಲುಕಿಕೊಳ್ಳುತ್ತಿದ್ದವರೇ. ಕೆಲವರು ನೋಟ ವಿನಿಮಯಕ್ಕಷ್ಟೇ ಸೀಮಿತಗೊಳಿಸಿದರೆ, ಇನ್ನು ಕೆಲವರು ಪ್ರೇಮ ಪತ್ರ ಬರೆಯುವವರೆಗೂ ಮುಂದುವರಿದು ನಂತರ ನಿಲ್ಲಿಸುತ್ತಿದ್ದರು ಇನ್ನು ಕೆಲವರು ಕದ್ದು ಮುಚ್ಚಿ ಸಿನಿಮಾ ನೋಡುವವರೆಗೆ ಮುಂದುವರಿದರೆ, ಯಾರೋ ಒಬ್ಬಿಬ್ಬರು ಹಾಸಿಗೆ ಹಂಚಿಕೊಳ್ಳುತ್ತಿದ್ದರು. ಇನ್ನು ಮದುವೆಯವರೆಗೆ ಮುಂದುವರಿಯುವುದೆನ್ನು ವುದು ತೀರಾ ತೀರಾ ವಿರಳ. ಕುಲ-ಮತ, ಆಸ್ತಿ-ಅಂತಸ್ತು-ಹೀಗೆ ಹಲವಾರು ಅಡ್ಡಗೋಡೆಗಳಿರುವುದರೊಂದಿಗೆ ಪ್ರೇಮಿಸಿದವನನ್ನೇ ಮದುವೆಯಾಗಬೇಕೆ ನ್ನುವ ಪರಿಣತಿ ಬರದಿರುವುದು ಕೂಡ ಒಂದು ಕಾರಣ. ಏನನ್ನಾದರೂ ಮುಕ್ತ ವಾಗಿ ಮಾತಾಡಿ ಚರ್ಚಿಸುವ ಸ್ವೇಚ್ಛೆಯನ್ನು ನೀಡದಿರುವ ತಂದೆ-ತಾಯಂದಿ ರಿಗೆ ಭಯಪಡುವ ಬಹಳಷ್ಟು ಜನ ಹುಡುಗಿಯರು ನಡುವೆಯೇ ಟಾಟಾ ಹೇಳಿಬಿಡುತ್ತಿದ್ದರು.

ನಾನೂ ಅಷ್ಟೇ. ನನ್ನ ತಂದೆಯೇನೋ ಒಳ್ಳೆಯವನೇ. ಆದರೆ ಈ ಪ್ರೇಮಗೀಮ ಇತ್ಯಾದಿಗಳ ವಿಷಯ ಎತ್ತಿದರೆ ಕರ್ಕೋಟಕನಾಗಿ ಬಿಡುತ್ತಿದ್ದ. ನಾನು ಸುಧೀರನನ್ನು ಮದುವೆಯಾಗುವೆನೆಂದರೆ ಮನೆಯಲ್ಲಿ ಎಷ್ಟು ರಭಸ ವಾಗಬಹುದೆಂದು ಗೊತ್ತಿತ್ತಾದ್ದರಿಂದ ಹಿರಿಯರು ನೋಡಿದ ಸಂಬಂಧವನ್ನೇ ಕಟ್ಟಿಕೊಳ್ಳಲು ನಿರ್ಧರಿಸಿದೆ.

ವಧು ಪರೀಕ್ಷೆ ಮುಗಿಯಿತು. ಎಲ್ಲರಿಗೂ ಎಲ್ಲವೂ ಹಿಡಿಸಿತಾದ್ದರಿಂದ ಆ

ರಾತ್ರಿ ಎರಡೂ ಕಡೆಯ ಹಿರಿಯರೆಲ್ಲ ವರದಕ್ಷಿಣೆ, ಕೊಡು-ಕೊಳ್ಳುವುದರ ಬಗ್ಗೆ ಚರ್ಚೆ ಮಾಡತೊಡಗಿದರು. ಮದುವೆಯಾಗುವವರ ಮುಂದೆಯೇ ಇಂತಹವುಗಳ ಬಗ್ಗೆ ಚರ್ಚೆ ಮಾಡುವುದು ದಾರುಣವೆಂದು ನನ್ನ ಭಾವನೆ. ಮದುವೆಯಾಗಲಿರುವ ವರ ಮಾತ್ರ ಒಂದಿಷ್ಟೂ ಸಂಕೋಚ,ದಾಕ್ಷಿಣ್ಯವಿಲ್ಲದೆ ಆ ಚರ್ಚೆಯಲ್ಲಿ ಮುಳುಗಿ ಹೋದ- ಮದುವೆ ಗಂಡು, ಅವನ ತಂದೆ-ತಾಯಿ ವರದಕ್ಷಿಣೆ, ವರೋಪಚಾರಗಳ ವಿಷಯದಲ್ಲಿ ತೋರ್ಪಡಿಸಿದ ತಿರುಪೆ ಬುದ್ಧಿಯನ್ನುನೋಡುತ್ತಿದ್ದಂತೆ ನನಗೆ ಮದುವೆ ನಿಶ್ಚಯವಾಯಿತಲ್ಲ ಎನ್ನುವ ಸಂತೋಷದ ಬದಲಾಗಿ ದಿಗಿಲು ಪ್ರಾರಂಭವಾಯ್ತು. ಮೊಸಳೆಗಳು ತುಂಬಿರುವ ಮಡುವಿನೊಳಗೆ ಕಾಲಿಡುತ್ತಿರುವೆನೇನೋ ಎನ್ನುವ ಭಾವನೆಯುಂಟಾಯ್ತು.

ಭಾವೀ ಮಾವ, 'ಊಟ ಬಡಿಸಲು ಬಾಳೆ ಎಲೆಗಳನ್ನೇ ಉಪಯೋಗಿಸಬೇಕು.' ಎಂಬ ಶರತ್ತನ್ನು ಹಾಕಿದ. ಇನ್ನು ಭಾವೀ ಅತ್ತೆ, 'ಪಾಯಸದ ದೊನ್ನೆಗಳು ದೊಡ್ಡವಾಗಿರಬೇಕು. ನಮ್ಮ ಬಂಧು-ಬಳಗವೆಲ್ಲ ದೊಡ್ಡ ದೊಡ್ಡ ಮನೆತನದವರು. ಚಿಕ್ಕ ದೊನ್ನೆ ಮಾಡಿಸಿದ್ರೆ ನಾಚಿಕೆಗೇಡೆನಿಸಿಕೊಳ್ಳುತ್ತೆ.' 'ಮದುವೆ ವೈಭವೋಪೇತವಾಗಿ ನಡೆಸಿಕೊಡಬೇಕು. ನನ್ನ ಸ್ನೇಹಿತರು ಬಹಳಷ್ಟು ಜನ ಮದುವೆಗೆ ಬರ್ತಾರೆ' ಎಂದು ಜಂಭಕೊಚ್ಚಿಕೊಂಡ ಭಾವೀ ವರ, ಇಂತಹ ಶರತ್ತುಗಳೊಂದಿಗೆ ಮೂವತ್ತು ಸಾವಿರ ನಗದು, ಇಪ್ಪತ್ತೈದು ತೊಲೆ ಬಂಗಾರಕ್ಕೆ ವ್ಯವಹಾರ ಕುದುರಿತು. ಇನ್ನು ಅವರು ಏಳುತ್ತಾರೇನೋ ಎಂದುಕೊಳ್ಳುತ್ತಿರುವಾಗ ಭಾವೀ ವರ ಮತ್ತೊಂದು ಸಲ ತನ್ನ ಕೀಳುತನವನ್ನು ತೋರ್ಪಡಿಸಿಕೊಳ್ಳುತ್ತ ತನ್ನ ಕೋರಿಕೆಗಳ ಪಟ್ಟಿ ಒಪ್ಪಿಸಿದ, 'ಟೈಟನ್ ಸ್ಪೈಗಡಿಯಾರ, ಹುಣ್ಣಿಮೆ-ಅಮವಾಸ್ಯೆ ತೋರಿಸುವಂತಹುದು ಬೇಕು ಕಾಶೀ ಪ್ರಯಾಣದ ಸಂದರ್ಭದಲ್ಲಿ ಕೊಡೋ ಸಂಪ್ರದಾಯ ಇದೆಯಲ್ಲ, ಅದಕ್ಕೆ ಲೇಟೆಸ್ಟ್ ಮಾಡೆಲ್ ಕೊರಿಯಾ ಛತ್ರಿ ತರಿಸಿ ಹಾಗೆಯೇ ಚಪ್ಪಲಿಕೊಡುತ್ತಾರಲ್ಲ, ನನಗೆ ಚಪ್ಪಲಿ ಬೇಡ, ಬೂಟುಗಳು ಬೇಕು, ಅದೂ ಆ್ಯಕ್ಷನ್ ಕಂಪನಿಯ ಬೂಟುಗಳು.'

ನನಗೆ ಅವನ ಕೆನ್ನೆಗೆ ಬಾರಿಸಬೇಕೆನಿಸಿತು. ಆದರೆ ತಡೆದುಕೊಂಡೆ. ಇಂತಹವನನ್ನು ಪ್ರೇಮಿಸುವುದು ಸಾಧ್ಯವಾಗದ ಕೆಲಸ. ಅದಕ್ಕೇ ಬಹಳಷ್ಟು ಜೋಡಿಗಳಲ್ಲಿ ವಿವಾಹ ಬಂಧನವಿರುತ್ತದೆಯೇ ಹೊರತು ಪ್ರೇಮ ಬಂಧನ ಇರುವುದಿಲ್ಲ.

ನನ್ನ ತಂದೆ ವರನ ಕಡೆಯವರ ಎಲ್ಲ ಶರತ್ತು, ಕೋರಿಕೆಗಳಿಗೆ ಒಪ್ಪಿಕೊಂಡ ನಂತರ ನಿಶ್ಚಿತಾರ್ಥದ ತಾಂಬೂಲ ಬದಲಾಯಿಸಿಕೊಂಡರು. ಇಪ್ಪತ್ತು

ದಿನಗಳ ನಂತರ ಇದ್ದ ಮುಹೂರ್ತಕ್ಕೆ ಮದುವೆಯನ್ನು ಮಾಡುವುದೆಂದು ನಿಶ್ಚಯವಾಯ್ತು.

ಭಾವೀ ವರನ ಕಡೆಯವರು ಬೆಳಿಗ್ಗೆ ಹೊರಟೊಡನೆಯೇ ನಮ್ಮ ಮನೆಯಲ್ಲಿ ಮದುವೆ ತಯಾರಿ ಶುರುವಾಯ್ತು.

ಮದುವೆಯೆಂದರೆ ಇರಬೇಕಾದ ರೋಮಾಂಚನವಾಗಲಿ, ಆನಂದವಾಗಲಿ ನನ್ನಲ್ಲಿರಲಿಲ್ಲ. ಬದಲಾಗಿ ಇಂತಹುದೆಂದು ಹೇಳಲಾಗದ ದಿಗಿಲು ನನ್ನಲ್ಲಿ ಸೇರಿಕೊಂಡು ಬಿಟ್ಟಿತ್ತು. ದುಡ್ಡಿಗೋಸ್ಕರ ಸಗಣಿ ತಿನ್ನಲೂ ಹೇಸದ ಆ ಮನುಷ್ಯರ ನಡುವೆ ಜೀವನದ ಮೇಲೆ ಮಮಕಾರವನ್ನು ಕಳೆದುಕೊಳ್ಳದಂತೆ ಹೇಗೆ ಬದುಕಬೇಕೆಂಬ ಯೋಚನೆಯೇ ನನ್ನನ್ನು ಕಾಡುತ್ತಿತ್ತು. ಅದಕ್ಕೇ ತವರುಮನೆಯಿಂದ ಅಪರೂಪವಾದುದೊಂದು ಕಾಣಿಕೆಯನ್ನು ಒಯ್ಯಬೇಕೆನ್ನುವ ಬಯಕೆ ನನ್ನಲ್ಲಿ ಮೂಡಿತು. ಆದರೆ ಅದೇನೆಂಬುದು ನನಗೆ ಹೊಳೆಯಲಿಲ್ಲ.

ಮದುವೆಯ ದಿನ ಹತ್ತಿರವಾಯ್ತು. ಕೆಲಸ ಕಾರ್ಯಗಳು ಚುರುಕಾಗಿ ಸಾಗಿದ್ದವು. ಮದುವೆಗೆ ಇನ್ನೊಂದು ವಾರವಿದೆ. ಎನ್ನುವಾಗ ಲಗ್ನ ಪತ್ರಿಕೆಗಳು ಅಚ್ಚಾಗಿ ಬಂದವು. ಮೊದಲ ಲಗ್ನಪತ್ರಿಕೆಯನ್ನು ಎತ್ತಿಕೊಂಡು ಅದರ ಮೇಲೆ 'ಇಂತಹ ದಿನ ನನ್ನ ಮದುವೆ ಇದೆಯೆಂದೂ, ಅಷ್ಟರೊಳಗೆ ಒಂದು ಸಲ ಬಂದು ಭೇಟಿಯಾಗೆಂ'ದು ಬರೆದು ಸುಧೀರನಿಗೆ ಪೋಸ್ಟ್ ಮಾಡಿದೆ. ಆ ನಂತರ ಮದುವೆಯ ಗಡಿಬಿಡಿಯಲ್ಲಿ ಮುಳುಗಿ ಹೋದೆ. ಬೆರಳುಗಳಿಗೆ ಗೋರಂಟಿ ಹಚ್ಚಿಕೊಳ್ಳುವುದು, ಮ್ಯಾಚಿಂಗ್ ಬ್ಲೌಸ್ ಹೊಲಿಸಿಕೊಳ್ಳುವುದು. ಸ್ನೇಹಿತೆಯರಿಗೆ ಲಗ್ನಪತ್ರಗಳನ್ನು ಹಂಚುವುದು,ಬರುತ್ತಿರುವಬಂಧುಗಳನ್ನು ಆಹ್ವಾನಿಸುವುದು ಇತ್ಯಾದಿಗಳಲ್ಲೇ ಕಾಲ ಸರಿದುಹೋಯ್ತು. ಮದುವೆಯ ದಿನ ಹತ್ತಿರವಾಯ್ತು.

ಮರು ದಿನ ಬೆಳಿಗ್ಗೆ ನಮ್ಮ ಊರಿಗೆ ಹತ್ತಿರದಲ್ಲಿರುವ ವೆಂಕಟಗಿರಿಯಲ್ಲಿನ ಛತ್ರವೊಂದರಲ್ಲಿ ಮದುವೆ ಇತ್ತು. ಅದರಿಂದಾಗಿ ನನ್ನನ್ನು ಆ ದಿನ ಮದುಮಗಳನ್ನಾಗಿ ಮಾಡಿ, ಸಾಯಂಕಾಲ ಅಲ್ಲಿಗೆ ಕರೆದುಕೊಂಡು ಹೋಗಲಾಯ್ತು. ಛತ್ರ ತಲುಪುವಷ್ಟರಲ್ಲಿ ಸಾಯಂಕಾಲ ಏಳು ಗಂಟೆಯಾಯ್ತು. ಹೆಣ್ಣಿನ ಕಡೆಯವರು ಅಲ್ಲೆಲ್ಲ ಹೊಂದಿಸಿಟ್ಟುಕೊಂಡರು. ಗಂಡಿನ ಕಡೆಯವರಿಗೋಸ್ಕರ ಹೋಟಲ್‌ಗಳಲ್ಲಿ ಕೋಣೆಗಳನ್ನು ಕಾದಿರಿಸಲಾಯ್ತು. ಮದುಮಗ ಬೆಳಗಿನ ಜಾವ ಮೂರು ಗಂಟೆಗೆ ಬಿಡದಿಯಿಂದ ಹೊರಟು ಬರುತ್ತಿದ್ದ. ನಡುವೆ ದೇವರ ಪೂಜೆ, ಮತ್ತಿತರ ಘಟ್ಟಗಳಿದ್ದವು.

ರಾತ್ರಿ ಹತ್ತು ಗಂಟೆಗೆ ಊಟ ಮಾಡಿಕೋಣೆಯೊಂದರಲ್ಲಿ ಮಲಗಿಕೊಂಡೆ

ಎರಡು ಗಂಟೆಯ ಸಮಯದಲ್ಲಿ ನನ್ನನ್ನು ಎಬ್ಬಿಸಿ, ಸ್ನಾನ ಮಾಡಿದ ನಂತರ ಸಿಂಗಾರ ಮಾಡತೊಡಗಿದರು ಅಲಂಕಾರ ಮುಗಿಯುವಷ್ಟರಲ್ಲಿ ಬೆಳಗಿನ ಜಾವ ಮೂರು ಗಂಟೆಯಾಯ್ತು ನನ್ನನ್ನು ಸಿಂಗರಿಸಿದವರೆಲ್ಲ ತಾವೂ ಸ್ನಾನ ಮಾಡಿ, ತಯಾರಾಗುತ್ತೇವೆಂದು ಹೇಳಿ ಹೊರಟುಹೋದರು.

ನಾನೊಬ್ಬಳೇ ಆ ಕೋಣೆಯಲ್ಲಿ ಒಬ್ಬಂಟಿಯಾಗಿ ಉಳಿದೆ. ಮದುವೆ ಹಾಲ್‌ನಲ್ಲಿದ್ದ ಕೆಲವು ಜನ ಬಂಧುಗಳು ಪರಿವಾರದವರು ಆಡುತ್ತಿದ್ದ ಮಾತುಗಳನ್ನು ಬಿಟ್ಟರೆ ಇಡೀ ಛತ್ರ ಪ್ರಶಾಂತವಾಗಿತ್ತು. ಅಲ್ಲೇ ಇದ್ದ ಸೂಟ್‌ಕೇಸಿನ ಮೇಲೆ ಸೊಂಟ ಆನಿಸಿ ಕಣ್ಣು ಮುಚ್ಚಿಕೊಂಡೆ. ಇನ್ನೆರಡು ಗಂಟೆಗಳ ನಂತರ ಮದುವೆ ಎಂದುಕೊಳ್ಳುತ್ತಿದ್ದಂತೆ ಬಾಗಿಲ ಬಳಿ ಸದ್ದಾಯ್ತು. ಕಣ್ತೆರೆದು ನೋಡಿದಾಗ ಬಾಗಿಲ ಬಳಿ ಸುಧೀರ್ ನಿಂತಿದ್ದುದು ಕಾಣಿಸಿತು. ಚಟಕ್ಕನೆ ಮೇಲೆದ್ದು, ಅವನ ಬಳಿಗೋಡಿ ನಿಂತೆ.

"ಸಾರಿ! ಮುಂಚಿತವಾಗಿ ಬರಲಾಗಲಿಲ್ಲ. ಬ್ಯಾಂಕ್ ರಿಕ್ರೂಟ್‌ಮೆಂಟ್ ಪರೀಕ್ಷೆ ಇದ್ದುದರಿಂದ ಹೈದರಾಬಾದಿಗೆ ಹೋಗಿದ್ದೆ. ರಾತ್ರಿಯೇ ತಿರುಗಿ ಬಂದೆ. ಕೋಣೆಯ ಬಾಗಿಲು ತೆರೆಯುತ್ತಿದ್ದಂತೆಯೇ ನಿನ್ನ ಲಗ್ನಪತ್ರಿಕೆ ಸಿಕ್ಕಿತು. ಬಟ್ಟೆ ಕೂಡ ಬದಲಾಯಿಸದೆ ಹೀಗೆ ಬಂದು ಬಿಟ್ಟೆ' ಎಂದ ಸುಧೀರ್. ಅವನ ಧ್ವನಿಯಲ್ಲಿ ತುಂಬಾ ನೋವಿದ್ದುದನ್ನು ನಾನು ಗ್ರಹಿಸಿದೆ.

ನನ್ನ ಬಾಯಿಯಿಂದ ಮಾತು ಹೊರಬೀಳಲಿಲ್ಲ. ಏನೊಂದು ಗೊತ್ತಾಗದ ಭಾವೋದ್ವೇಗ ನನ್ನ ಮನಸ್ಸನ್ನು ಹಿಡಿದು ಅಲ್ಲಾಡಿಸುತ್ತಿತ್ತು. ಆದರೆ ಸಮಯ ಇರಲಿಲ್ಲ ನನ್ನ ನಿರ್ಧಾರವನ್ನು ತಕ್ಷಣವೇ ಜಾರಿಗೆ ತರಬೇಕೆಂದು ಕೊಂಡು.

'ಸುಧೀರ್! ನಿನಗೋಸ್ಕರ ಎಷ್ಟು ದಾರಿ ಕಾದೆ ಗೊತ್ತಾ? ಇನ್ನು ನನ್ನ ಮದುವೆಯಾಗುವುದರೊಳಗೆ ನೀನು ಬರುತ್ತೀಯೋ ಇಲ್ಲವೋ ಎನ್ನುವ ದಿಗಿಲಾಗಿತ್ತು. ನೀನು ಬರದಿದ್ದರೆ ಆ ಕೊರಗು ಹಾಗೇ ಉಳಿದಿರುತ್ತಿತ್ತು. ಇನ್ನೂ ಎರಡು ಗಂಟೆಗಳಲ್ಲಿ ಮದುವೆ. ನೀನು ನನಗೊಂದು ಅಪೂರ್ವವಾದಬಹುಮಾನವನ್ನು ಕೊಡಬೇಕು, ಕೊಡ್ತೀಯಾ?'' ಎಂದು ಕೇಳಿದೆ.

'ಖಂಡಿತ ಕೊಡ್ತೀನಿ. ಏನು ಬೇಕು?' ಎಂದ ಸುಧೀರ್. ತನ್ನ ಮೈಯಲ್ಲಿನ ರಕ್ತವನ್ನೆಲ್ಲ ಕೇಳಿದರೂ ಹಿಂಜರಿಯದೆ ಧಾರೆ ಎರೆದುಕೊಡಬಲ್ಲ ಸುಧೀರನೊಂದಿಗೆ ಟೈಟನ್ ವಾಚು, ಬೂಟು ಕೇಳಿದ ಮದುಮಗನನ್ನು ಹೋಲಿಸಿ ನೋಡಿಕೊಂಡೆ ನನ್ನ ನಿರ್ಧಾರ ಸರಿಯಾದುದೇ ಎನ್ನುವ ನಂಬಿಕೆ ಮತ್ತಷ್ಟು ಬಲಗೊಂಡಿತು.

'ಸುಧೀರ್ ನೀನು ಕೊಡುವ ಬಹುಮಾನ ನನಗ್ಯಾವತ್ತೂ ಒಂದು ಮಧುರವಾದ ಸ್ಮೃತಿ ರಮ್ಯ ಸ್ಮೃತಿಯಾಗಿ ಉಳಿಯುವಂತಹುದಾಗಿರಬೇಕು. ಮುಂದೆ ನನ್ನ ಜೀವನದಲ್ಲಿ ಬರುವ ಹಲವಾರು ಸಂಕಷ್ಟಗಳಿಂದ ನನ್ನನ್ನು ಮೈ ಮರೆಸಬಲ್ಲಂತಹ ಸುಂದರ ಜ್ಞಾಪಕ, ನನ್ನಲ್ಲಿನ ಸ್ಪಂದನೆಗೆ ಸದಾ ಜೀವ ತುಂಬ ಬಲ್ಲ ಅದ್ಭುತ ಜ್ಞಾಪಕ ನನಗೆ ಕಾಣಿಕೆಯಾಗಿ ಬೇಕು, ಅದನ್ನು ನೀನೊಬ್ಬನೇ ಕೊಡಬಲ್ಲ. ಮತ್ತೆ ಕೊಡ್ತೀಯಾ'' ಎಂದು ಕೈಯನ್ನು ಮುಂದೆ ಚಾಚಿದೆ.

ಸುಧೀರನ ಕಣ್ಣುಗಳು ಹನಿಗೂಡಿದ್ದು ಲೈಟಿನ ಬೆಳಕಿನಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಅವನು ನನ್ನ ಕೈ ಮೇಲೆ ಕೈ ಹಾಕಿದ. 'ಹಾಗಾದರೆ ಬಾ' ಎನ್ನುತ್ತ ಮುಂದೆ ಚಲಿಸಿದೆ. ಆ ರೀತಿ ಹೆಜ್ಜೆ ಹಾಕುತ್ತಿದ್ದ ನನಗೆ ಬೀಗಹಾಕಿರ ದಿದ್ದ ಕೋಣೆಯೊಂದು ಕಾಣಿಸಿತು. ಅದೃಷ್ಟ ನನ್ನ ಪರವಾಗಿದೆ ಎನಿಸಿತು. ಬಾಗಿಲು ತೆರೆದು ನೋಡಿದೆ. ಯಾರೂ ಇರಲಿಲ್ಲ. ಅದು ಉಗ್ರಾಣವಿರಬೇಕು. ಒಂದು ಮೂಲೆಯಲ್ಲಿ ಈರುಳ್ಳಿ, ಪಕ್ಕದಲ್ಲಿ ಚಪ್ಪರದವರೆ, ಕ್ಯಾಬೇಜು ಟೊಮ್ಯಾಟೋ ಇತ್ಯಾದಿ ತರಕಾರಿಗಳಿದ್ದವು.

ಸುಧೀರ್ ಒಳಗೆ ಬಂದೊಡನೆಯೇ ಬಾಗಿಲು ಮುಚ್ಚಿ ಅಗುಳಿ ಹಾಕಿದೆ. ಕೋಣೆಯಲ್ಲಿ ಜೀರೋ ಕ್ಯಾಂಡಲ್ ಬಲ್ಬೊಂದು ಕ್ಷೀಣ ಬೆಳಕನ್ನು ಬೀರುತ್ತಿತ್ತು ಮದುಮಗಳ ಅಲಂಕಾರದಲ್ಲಿದ್ದ, ಇನ್ನೊಂದು ಗಂಟೆಯಲ್ಲಿ ಬೇರೊಬ್ಬನಿಂದ ತಾಳಿ ಕಟ್ಟಿಸಿಕೊಳ್ಳಲಿದ್ದ ನಾನು ಗೋಡೆಗೆ ಒರಗಿ ಕುಳಿತು ಸುಧೀರನ ಕೈ ಹಿಡಿದು ಎಳೆದೆ. ಅವನು ನನ್ನ ಮಡಿಲಲ್ಲಿ ಬಂದುಬಿದ್ದ.

ಅವನನ್ನು ಗಟ್ಟಿಯಾಗಿ ತಬ್ಬಿಕೊಳ್ಳುತ್ತ, 'ಪ್ಲೀಜ್! ಕರುಣಿಸುವುದಿಲ್ಲವೆ ಎಂದು ಯಾವಾಗಲೂ ಕೇಳುತ್ತಿರುತ್ತಿದ್ದೆಯಲ್ಲ, ಇದೋ, ಈಗ ಕರುಣಿಸುತ್ತಿದ್ದೇನೆ, ಎಂದು ಅವನ ತುಟಿಗಳಿಗೆ ನನ್ನ ತುಟಿಗಳನ್ನು ಬೆಸೆದೆ. ಅವನು ನನ್ನನ್ನು ಪೂರ್ತಿಯಾಗಿ ಆಕ್ರಮಿಸಿಕೊಂಡ. . ಹತ್ತು ನಿಮಿಷಗಳ ನಂತರ ಇಬ್ಬರೂ ಬೇರ್ಪಟ್ಟೆವು.

'ಥ್ಯಾಂಕ್ಸ್ ಸುಧೀರ್. ಈ ಅದ್ಭುತವಾದ ಜ್ಞಾಪಕವನ್ನು ನನಗೆ ಒದಗಿಸಿದ್ದಕ್ಕೆ ನಿನಗೆ ಹೇಗೆ ಕೃತಜ್ಞತೆ ತಿಳಿಸಬೇಕೆಂದು ನನಗೆ ಅರ್ಥವಾಗುತ್ತಿಲ್ಲ ನನ್ನ ಅತ್ತೆ ಮನೆಯವರು ನನ್ನ ತಂದೆ ಕೊಟ್ಟ ದುಡ್ಡು, ಬಂಗಾರವನ್ನು ತಮಗಿಷ್ಟ ಬಂದಂತೆ ಮಾಡಿಕೊಳ್ಳಬಹುದು. ಆದರೆ ಈ ಮಧುರ ಜ್ಞಾಪಕವನ್ನು ನನ್ನಿಂದ ಬೇರ್ಪಡಿಸಲು ಅವರಿಗೆ ಸಾಧ್ಯವಿಲ್ಲ' ಎಂದು ಕೊನೆಯದಾಗಿ ಅವನ ಮುಂಗೈಗೆ ಮುತ್ತಿಟ್ಟು, ತಿರುಗಿ ನನ್ನ ಕೋಣೆಗೆ ಬಂದುಬಿಟ್ಟೆ.

"ಮುಹೂರ್ತ ಪ್ರವೇಶಿತೆನ್ನುವಂತೆ ಮದುವೆ ಹಂದರಲ್ಲಿ ಮಂಗಳ

ವಾದ್ಯಗಳು ಮೊಳಗತೊಡಗಿದವು" ಎಂದು ಹೇಳುವುದನ್ನು ಮುಗಿಸಿದಳು.

ಅವಳು ಹೇಳಿದ ಈ ಘಟನೆ ಗೋಪಾಲಕೃಷ್ಣನ ಮನಸ್ಸನ್ನು ಕಲಕಿ ಬಿಟ್ಟಿತು. ಕಣ್ಣುಗಳಲ್ಲಿ ಕಣ್ಣೀರಿನ ತೆಳುವಾದ ಪೊರೆ ಹರಡಿಕೊಂಡಿತು. ಬಹಳ ಹೊತ್ತಿನವರೆಗೂ ಅವರಿಬ್ಬರೂ ಏನೂ ಮಾತಾಡಲಿಲ್ಲ.

ಅವರು ಆಡಿದ ಮಾತುಗಳನ್ನೆಲ್ಲ ಮರೆಯಲ್ಲಿದ್ದು ಕೇಳಿಸಿಕೊಳ್ಳುತ್ತಿದ್ದ ಹುಲಿರಾಜ. ಅವರಿಬ್ಬರೂ ಮಾತು ನಿಲ್ಲಿಸಿದರೆಂಬುದನ್ನು ನಿರ್ಧಾರಪಡಿಸಿ ಕೊಂಡ ನಂತರ ಅಲ್ಲಿಂದ ಮೇಲೆದ್ದ. ಗೋಪಾಲಕೃಷ್ಣನ ಮೇಲೆ ಉಂಟಾಗಿದ್ದ ದ್ವೇಷ ಕ್ಷಣ ಕ್ಷಣಕ್ಕೂ ಹೆಚ್ಚುತ್ತಿತ್ತು. ಏನೋ ನಿರ್ಧಾರಕ್ಕೆ ಬಂದವನಂತೆ ಅಲ್ಲಿಂದ ಚಲಿಸಿದ.

ಊರೊಳಗೆ ಬಂದು ದಿವಾನ್ ವೆಂಕಟರಾಮಯ್ಯನ ಮನೆ ಬಾಗಿಲನ್ನು ತಟ್ಟಿದ. ಐದು ನಿಮಿಷಗಳ ನಂತರ ಬಾಗಿಲು ತೆರೆದುಕೊಂಡಿತು. ಅಷ್ಟು ಅಪ ರಾತ್ರಿಯ ಹೊತ್ತಿನಲ್ಲಿ, ಕೋಪ, ದ್ವೇಷದಿಂದ ಉರಿಯುತ್ತಿದ್ದ ಮುಖ ಹೊತ್ತು ಮನೆ ಬಾಗಿಲಲ್ಲಿ ನಿಂತಿದ್ದ ಅವನನ್ನು ನೋಡಿ ವೆಂಕಟರಾಮಯ್ಯ ಆಶ್ಚರ್ಯ ಗೊಂಡರೂ ತೋರಿಸಿಕೊಳ್ಳದೆ ಒಳಗೆ ಕರೆದ.

೮

ಸಂಜೆಯಾಗಿತ್ತು. ಸೂರ್ಯ ಆಕಾಶದ ಸೆರಗಿನ ತುದಿಯನ್ನು ಹಿಡಿದು ಕೊಂಡು ಅತ್ತಲಿನ ಪ್ರಪಂಚದೊಳಗೆ ಜಾರಿ ಹೋಗುತ್ತಲಿದ್ದ. ಪಕ್ಷಿಗಳು ತಿರುಗಿ ಗೂಡು ಸೇರಿಕೊಳ್ಳಬೇಕೆಂಬ ಆತುರದಿಂದ ರೆಕ್ಕೆಗಳನ್ನು ವೇಗವಾಗಿ ಬಡಿಯುತ್ತ ಹಾರುತ್ತಿದ್ದವು. ಪ್ರಪಂಚ ತಾಂಬೂಲ ಸೇವಿಸಿದ ಬಾಯಿಯನ್ನು ತೆರೆದಿದೆ ಎನ್ನುವಂತೆ ಸಂಧ್ಯೆ ಬಾನಿಗೂ, ಭುವಿಗೂ ನಡುವೆ ಕೆಂಪಗೆ ಹರಡಿಕೊಂಡಿತ್ತು. ಫ್ಯಾಶನ್ ಪರೇಡಿನಲ್ಲಿ ಭಾಗವಹಿಸುತ್ತಿರುವ ಯುವತಿಯರಂತೆ ತೆಳುವಾದ ಮೋಡಗಳು ವಿಧವಿಧವಾದ ಆಕಾರಗಳಲ್ಲಿ ತೇಲುತ್ತಿದ್ದವು.

ಗೋಪಾಲಕೃಷ್ಣ 'ಟ್ರೆಸ್' ಆಗಿ ಮನೆಯಿಂದ ಹೊರಗೆ ಬಂದು ನಿಂತ. ಬಿಳಿ ಪೈಜಾಮಾ, ಜುಬ್ಬಾ ಧರಿಸಿದ್ದ ಅವನು ಮಲ್ಲಿಗೆ ಮೊಗ್ಗುಗಳ ನಡುವೆ ಒಂಟಿ ಮಂದಾರ ಮೊಗ್ಗಿನಂತಿದ್ದ. ಅವನು ಹೊರಡಬೇಕೆಂದುಹೆಜ್ಜೆ ಕಿತ್ತುತ್ತಿರು ವಂತೆ ಹಿಂದಿನಿಂದ ನರ ಕೂಗಿದ. "ಗುರುವೆ! ಈ ದಿನ ನಾನೂ ನಿನ್ನೊಂದಿಗೆ ತಿರುಗಾಡೋದಿಕ್ಕೆ ಬರ್‍ತೀನಿ. ಒಬ್ಬನೇ ಇದ್ರೆ ಇಲ್ಲಿ ಹೊತ್ತೇ ಹೋಗೋದಿಲ್ಲ"

"ಸರಿ, ಬೇಸರವಾಗುತ್ತಿದೆ ಅಂದ್ರೆ ಹೊಸದಾಗಿ ಏನೋ ಬೇಕೆನಿಸುತ್ತಿದೆ ಎಂದು ಅರ್ಥ."

ನರ ಅದಕ್ಕೇನೂ ಹೇಳದೆ ಮುಸಿ ಮುಸಿ ನಗುತ್ತ ಗೋಪಾಲಕೃಷ್ಣನನ್ನು ಹಿಂಬಾಲಿಸಿದ. ಒಹುದಿನಗಳ ನಂತರ ಸಾಯಂಕಾಲದ ಹೊತ್ತು ಆ ರೀತಿ ಹೊರಗೆ ತಿರುಗಾಡಲು ಹೊರಟದ್ದರಿಂದ ಅವನಿಗೆ ತುಂಬಾಸಂತೋಷವಾಗಿತ್ತು. ಗೋಪಾಲಕೃಷ್ಣ ದಿನಾಲೂ ಸಾಯಂಕಾಲದ ಹೊತ್ತು ಆ ರೀತಿ ತಿರುಗಾಡಲು ಹೋಗುತ್ತಿದ್ದ. ಆ ಸಮಯದಲ್ಲಿ ನರ ಮನೆ ಸ್ವಚ್ಛಗೊಳಿಸುವುದೋ, ಬಟ್ಟೆ ಒಗೆಯುವುದೋ ಇತ್ಯಾದಿ ಕೆಲಸಗಳಲ್ಲಿ ಮುಳುಗಿರುತ್ತಿದ್ದ. ಅವತ್ತು ತಿರುಗಾಡಲು ಹೋಗಬೇಕೆನಿಸಿದ್ದರಿಂದ ಗೋಪಾಲಕೃಷ್ಣನ ಹಿಂದೆ ಬಿದ್ದಿದ್ದ.

ಇಬ್ಬರೂ ಗುಡ್ಡ ಇಳಿದು ಹೊಲಗಳಲ್ಲಿ ನಡೆಯುತ್ತಿದ್ದರು.

"ಗುರುವೆ?"

"ಏನು ಶಿಷ್ಯೋತ್ತಮ . ?" ಎಂದು ನಾಟಕೀಯ ಶೈಲಿಯಲ್ಲಿ ಕೇಳಿದ ಗೋಪಾಲಕೃಷ್ಣ.

"ದಿನಾಲೂ ಸಾಯಂಕಾಲ ಈ ಕಡೆ ಬರ್ತೀರಲ್ಲ ಏನು ಕಾಣಿಸುತ್ತೆ ಅಂತ" ಎಂದು ಕೇಳಿದ.

"ಏನಾದರೂ ಕಾಣಿಸುತ್ತೆ ಅಂತ ನಂಜೊತೆ ಬಂದ್ಯಾ" ಎಂದು ಎದುರು ಪ್ರಶ್ನೆ ಹಾಕಿದ ಗೋಪಾಲಕೃಷ್ಣ.

"ಅಲ್ಲ ಅಂತಿಟ್ಕೋ. ಆದರೆ ಈ ರೀತಿ ಹೊಲ-ಗದ್ದೆಗಳಲ್ಲಿ ಸುತ್ತಾಡೋ ಬದಲು ಊರಲ್ಲಿ ತಿರುಗಾಡಿದ್ರೆ ಒಂದಿಷ್ಟು ಕಲರ್ ಆದ್ರೂ ಕಾಣಿಸ್ತಿತ್ತಲ್ಲ ಅಂತ."

"ಕಲರ್ ಅಂದ್ರೆ?"

"ಇದು ರೈಲ್ವೇಸ್ಟೇಶನ್ ಭಾಷೆ. ಕಲರ್ ಅಂದ್ರೆ ಹುಡುಗಿಯರು."

"ಹಾಗಾದ್ರೆ ನಿನಗೆ ಹೆಣ್ಣಿನ ಖಯಾಲಿ ಉಂಟಾಗಿದೆ ಎಂದಾಯ್ತು. ಈ ಊರಿನಲ್ಲಿ ಹುಲಿರಾಜ ಅನ್ನೋ ಭೂತ ವೈದ್ಯ ಇದ್ದಾನೆ ಅವನ ಬಳಿಗೆ ಹೋಗು. ನಿನಗೆ ಹಿಡಿದಿರೋ ಹೆಣ್ಣು ಗಾಳೀನ ಬಿಡಿಸ್ತಾನೆ." ಎಂದು ನಕ್ಕ ಗೋಪಾಲಕೃಷ್ಣ.

"ಮತ್ತೆ ನಾನು ಸಾಕ್ಷಾತ್ ಮದನಕಾಮರಾಜ ವಂಶಕ್ಕೆ ಸೇರಿದ ಮನೆಯಲ್ಲಿ ಕೆಲಸ ಮಾಡುತ್ತಿರುವವನು. ಪಕ್ಕದಲ್ಲಿಯೇ ಇರುವ ಶತ ಸಹಸ್ರವನಿತಾ ಮನೋಹರ ಮದನಾಕರನ ದೇವಾಲಯದಲ್ಲಿನ ದೇವರನ್ನು ಪೂಜಿಸುತ್ತಿರುವವನು ಮತ್ತೆ ಹೆಣ್ಣು ಗಾಳಿ ತಾಕದೆ ಇರುತ್ತಾ? ಅದೂ ಅಲ್ಲದೆ ಆ ದೇವಾಲಯದೊಳಗೆ ಬರುವ ಸೆರಗಿಲ್ಲದ ಆ ಸ್ತ್ರೀಯರನ್ನು ನೋಡ್ತಿದ್ರೆ . ಆಹಾ.. "

"ಅಲ್ಲಲ್ಲಿ ಆ ನಿಯಮಹಾಕಿದ್ದು ಮೋಹ ಕಡಿಮೆಯಾಗೋದಿಕ್ಕೇಹೊರತು

ಮೋಹ ಹೆಚ್ಚಾಗೋದಿಕ್ಕಲ್ಲ."

"ಹುಡುಗಿ ಸೆರಗಿಲ್ಲದೆ ತುಂಬು ಎದೆಯಲ್ಲಿ ಕಾಣಿಸ್ತಿದ್ರೆ ಮೋಹ ಕಡಿಮೆಯಾಗುತಾ? ಮತ್ತಷ್ಟು ಜಾಸ್ತಿಯಾಗುತ್ತಪ್ಪ."

"ಓಹೋ, ಅದಕ್ಕೇ ಏನೋ ಸಮಯ ಸಿಕ್ಕಾಗಲೆಲ್ಲ ನೀನು ದೇವಾಲಯದಲ್ಲಿ ಹೋಗಿ ಕುಳಿತುಕೊಳ್ಳೋದು."

"ಶಿವಶಿವ! ಅಂತಹ ಮಾತಾಡ್ಬೇಡ ಏನೋ ಹೊತ್ತು ಕಳೆಯೋದಿಕ್ಕೆ ಪೂಜಾರಿ ಜೊತೆ ಮಾತಾಡಲು ಹೋಗ್ತಿರ್ತೀನಿ ಆದರೆ ಇವತ್ತ್ಯಾಕೋ ಅತ್ತ ಹೋಗುವ ಮನಸ್ಸಾಗಲಿಲ್ಲ, ನಿಂಜೊತೆ ಊರಲ್ಲಿ ಹಾಯಾಗಿ ತಿರುಗಾಡೋಣ ಅಂತ ಅನ್ನಿಸ್ತು. ನೀನು ನೋಡಿದ್ರೆ ಈ ರೀತಿ ಹೊಲ ಗದ್ದೆಗಳಲ್ಲಿ ತಿರುಗಾಡ್ತಿದೀಯ" ಎಂದ ನರ.

"ನಾನು ದಿನಾಲೂ ಈ ಕಡೇನೇ ಬರೋದು. ಒಂದಷ್ಟು ತಂಗಾಳಿ ಸೇವಿಸೋಣ ಅಂತ ಬರ್ತೀನಿ "

"ನಿನಗದೆಲ್ಲ ಅಗತ್ಯವಿಲ್ಲವಲ್ಲ ಗುರುವೆ. ಬಯಸಿದ ಹೆಣ್ಣಿಗೆ ಹೇಳಿ ಕಳಿಸಿದರೆ ಸಾಕು ಓಂದು ತೆಕ್ಕೆಗೆ ಸೇರಿಕೊಳ್ತಾಳೆ."

"ಅಯ್ಯಾ ಪುಣ್ಯಾತ್ಮ, ಅದೆಲ್ಲ ನಮ್ಮ ವಂಶದ ಮಹಾತ್ಮೆ."

"ವಂಶ ಅಂದ್ರೆ ನಿನ್ನದೇ ಗುರುವೆ! ಮಹಾ ಮಹಾ ಸಾಮ್ರಾಟರಿಗೂ ನಿನ್ನಂತಹ ಅದೃಷ್ಟವಿರಲಿಕ್ಕಿಲ್ಲ! ವಂಶಪಾರಂಪರ್ಯವಾಗಿ ಒದಗಿ ಬಂದಿರೋ ಅದ್ಭುತ ಆಚಾರ! ಆಹಾ... ಇಂತಹ ಆಚಾರ ನಾನೆಲ್ಲೂ ಕೇಳಿರಲಿಲ್ಲ ಗುರುವೆ ಏನದೃಷ್ಟ .. ರಂಗೇಳಿರಾಜ ಅಂದ್ರೆ ನೀನೇ ...ದ್ವಾಪರಯುಗದ ಕೃಷ್ಣನಿಗೆ ಈ ಗೋಪಾಲಕೃಷ್ಣ ಏನೂ ಕಡಿಮೆ ಇಲ್ಲ ನೋಡು."

"ನಿಜವಾಗ್ಲೂ ಅದೃಷ್ಟ ಅಂತೀಯಾ? ಆದರೆ ನನಗೆ ಮಾತ್ರ . . . " ಎನ್ನುತ್ತಿದ್ದ ಗೋಪಾಲಕೃಷ್ಣನಿಗೆ ತುಂಬಾ ದೂರದಲ್ಲಿ ಇಬ್ಬರು ಯುವತಿಯರು ಕಂಡು ಬಂದರು. ಆದರಿಂದಾಗಿ ವಾಕ್ಯವನ್ನು ಪೂರ್ತಿಗೊಳಿಸದೆ ಯಾರಾಗಿರಬಹುದು! ಎನ್ನುವ ಯೋಚನೆಗೆ ತೊಡಗಿದ.

ಸ್ವಲ್ಪ ಹೊತ್ತು ಅವರಿಬ್ಬರೂ ಮೌನವಾಗಿ ಹೆಜ್ಜೆ ಹಾಕಿದರು.

ಆ ಮೌನವನ್ನು ಭಗ್ನಗೊಳಿಸುತ್ತ, "ಗುರುವೆ, ಬಹುದಿನಗಳಿಂದ ನಿನ್ನನ್ನೊಂದು ಪ್ರಶ್ನೆ ಕೇಳೋಣ ಅಂತಿದೀನಿ. ಏನೂ ಅಂದ್ಕೊಳ್ಳೋದಿಲ್ಲ ತಾನೆ" ಎಂದು ಕೇಳಿದ ನರ.

"ಇಲ್ಲ ಕೇಳು."

"ಪ್ರೇಮ ಅಂದರೇನು ಗುರುವೆ?"

"ಪ್ರೇಮ ಅಂದರೆ?! ನನಗೂ ಗೊತ್ತಿಲ್ಲವಲ್ಲ. ಯಾಕಂದ್ರೆ ನಾನು ಇಲ್ಲಿ ವರೆಗೂ ಯಾರನ್ನೂ ಪ್ರೇಮಿಸಿಲ್ಲವಾದ್ದರಿಂದ."

"ಪ್ರೇಮಿಸಿಲ್ಲವೆ?! ಅಷ್ಟೆಲ್ಲ ಹುಡುಗಿಯರ ಜೊತೆ ಪರಿಚಯವಿದೆ. ಇಲ್ಲಿಯ ವರೆಗೂ ಯಾರನ್ನೂ ಪ್ರೇಮಿಸದಿರುವುದೆಂದರೆ ಆಶ್ಚರ್ಯವೇ"ಎಂದು ಆಶ್ಚರ್ಯ ವ್ಯಕ್ತಪಡಿಸಿದ ನರ.

"ಅದಕ್ಕೆ ನಾನೇನು ಮಾಡಲಿ? ಯಾರನ್ನೂ ಪ್ರೇಮಿಸಬೇಕೆನಿಸಲಿಲ್ಲ. ಇಷ್ಟಕ್ಕೂ ಪ್ರೇಮ ಎಂದರೇನು ಅನ್ನೋ ಸಂದೇಹ ಆಗಾಗ ನನಗೂ ಉಂಟಾಗು ತ್ತಿರುತ್ತದೆ. ಬಹುಶಃ ಭಗವಂತ ಒಬ್ಬೊಬ್ಬ ಭಕ್ತನಿಗೆ ಒಂದೊಂದು ರೂಪದಲ್ಲಿ ಕಂಡು ಬಂದಂತೆ ಪ್ರೇಮ ಕೂಡ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಅನು ಭವಕ್ಕೆ ಬರುತ್ತದೇನೋ. ಭಗವಂತನ ಇರುವು ಭಕ್ತನ ಮೇಲೆ ಆಧಾರ ಪಟ್ಟಿರುವಂತೆ ಪ್ರೇಮದ ಇರವು ಪ್ರೇಮಿಗಳ ಮೇಲೆ ಆಧಾರಪಟ್ಟಿರುತ್ತ ಏನೋ..."

"ದೇವರಂತೆ ಇದೂ ಅರ್ಥವಾಗಲಿಲ್ಲ ಗುರುವೆ."

"ಹೇಗೆ ಅರ್ಥವಾಗುತ್ತೆ? ದೇವರು ಅರ್ಥವಾಗಬೇಕೇದರೆ ವಯಸ್ಸು ಹಣ್ಣಾಗಬೇಕು. ಪ್ರೇಮ ಅರ್ಥವಾಗಬೇಕೆಂದರೆ ವಯಸು, ಮನಸ್ಸು ಪರಿಪಕ್ವ ಗೊಳ್ಳಬೇಕು."

"ಪ್ರೇಮವೇ ದೇವರು ಅಂತಾರಲ್ಲ, ಹಾಗೇಕೆ ಅಂತಾರೆ? ಎರಡಕ್ಕೂ ಇರುವ ಸಾಮೀಪ್ಯತೆ ಏನು ಗುರುವೆ?"

"ಏನೋಪ್ಪ, ನನಗೂ ಗೊತ್ತಿಲ್ಲ."

ಅಷ್ಟೊತ್ತಿಗೆ ಆ ಯುವತಿಯರು ಮತ್ತಷ್ಟು ಹತ್ತಿರವಾದರು. ಅವರಿ ಬ್ಬರೂ ಇವರನ್ನು ನೋಡಿರಲಿಲ್ಲ. ತಲೆ ತಗ್ಗಿಸಿಕೊಂಡು ಏನೋ ಮಾತಾಡುತ್ತ ನಡೆದು ಬರುತ್ತಿದ್ದರು. ಮುಂದೆ ಇರುವವಳು ಧಾನ್ಯ ಎಂಬುದನ್ನು ಗೋಪಾಲ ಕೃಷ್ಣ ಗುರುತಿಸಿದ. ಹಿಂದೆ ಬರುತ್ತಿರುವವರು ಯಾರೆಂಬುದು ಗೊತ್ತಾಗಲಿಲ್ಲ.

ನರನೂ ಆ ಯುವತಿಯರನ್ನು ನೋಡಿದ "ಗುರುವೆ ಯಾರೋ ಹುಡುಗಿ ಯರು ಇತ್ತಲೇ ಬರುತ್ತಿದ್ದಾರೆ." ಎಂದು ಉತ್ಸುಕ ಸ್ವರದಲ್ಲಿ ನುಡಿದ.

"ನೋಡಿದೀನಿ." ಎಂದು ಗೋಪಾಲಕೃಷ್ಣ "ತಮಾಷೆ ಏನೆಂದರೆ ಅವರು ನಮ್ಮನ್ನು ನೋಡದೆ ನಾವು ನಡೆಯುತ್ತಿರುವ ಬದುವಿನ ಮೇಲೆಯೇ ಬಂದಿ ದ್ದಾರೆ. ಈ ಬದುವಿನ ಮೇಲೆ ಇಬ್ಬರು ಎದುರು ಬದುರಾಗಿ ದಾಟುವುದು ಕಷ್ಟ ಯಾರಾದರೊಬ್ಬರು ಹೊಲದಲ್ಲಿಳಿದು ಇನ್ನೊಬ್ಬರಿಗೆ ದಾರಿ ಬಿಡಬೇಕು. ಆದರೆ ಕೆಳಗೆ ಇಳಿದರೆ ಕೆಸರಿನಲ್ಲಿ ಕಾಲಿಡಬೇಕು. ಆದ್ದರಿಂದ ನಾವು ಹಿಂದೆ ಹೋಗಿ

ಅವರಿಗೆ ದಾರಿ ಕೊಡೋಣ" ಎನ್ನುತ್ತ ಅವನು ಹಿಂದಕ್ಕೆ ತಿರುಗಿದ. ನರನೂ ಹಿಂದಕ್ಕೆ ತಿರುಗಿ ಒಂದು ಹೆಜ್ಜೆ ಇಟ್ಟ.

ಅದೇ ಸಮಯದಲ್ಲಿ ಧಾನ್ಯ ಅವರನ್ನು ನೋಡಿದಳು. ಅವಳು ಗೋಪಾಲ ಕೃಷ್ಣನನ್ನು ಉದ್ದೇಶಿಸಿ "ಹಲೋ" ಎಂದು ಜೋರಾಗಿ ಕೂಗಿದಳು.

ಅವನು ನಿಂತು, ಅವಳತ್ತ ತಿರುಗಿ ಮುಗುಳ್ನಕ್ಕು, "ಹಲೋ" ಎನ್ನುತ್ತ ಬಲಗೈ ಮೇಲೆತ್ತಿ ಬೀಸಿದ.

"ನಾವಿಬ್ಬರೂ ಒಂದೇ ಬದುವಿನ ಮೇಲೆ ನಡೆಯುತ್ತ ಎದುರಾಗಿದ್ದು ಅದ್ಭುತವಾಗಿದೆ. ನೀನು ಬಹಳ ದೂರ ಬಂದಿದೀಯಾದ್ದರಿಂದ ನೀನೇ ಮುಂದಕ್ಕೆ ಬಂದು ಬಿಡು. ನಾವು ಹಿಂದಕ್ಕೆ ಹೋಗ್ತೀವಿ" ಎಂದಳು ಧಾನ್ಯ.

ಇನ್ನೇನೂ ತಪ್ಪುವಂತಿಲ್ಲವೆಂದು ಗೋಪಾಲಕೃಷ್ಣ ಮುಂದೆ ನಡೆದ. ನರನಿಗೆ ಆ ರೀತಿ ಹೊಲದ ಬದುವಿನ ಮೇಲೆ ನಡೆಯುವ ರೂಢಿ ಇರಲಿಲ್ಲ. ಅದಕ್ಕೇ ಎಲ್ಲಿ ಕಾಲು ಜಾರುತ್ತೋ ಎಂದು ಹುಷಾರಾಗಿ ಹೆಜ್ಜೆ ಇಡುತ್ತಿದ್ದ.

ಗೋಪಾಲಕೃಷ್ಣ ಅವರನ್ನು ಸಮೀಪಿಸಿದ. ಆ ಸಮಯದಲ್ಲಿ ಬರುತ್ತಿರುವವರು ಯಾರು ಎನ್ನುವ ಕುತೂಹಲವೂ ಇಲ್ಲದೆ, ವರ್ಷಾ ಆಕಾಶವನ್ನು ನೋಡುತ್ತ ನಿಂತಿದ್ದಳು. ಅವಳಿಗೆ ಅವನು ಗೋಪಾಲಕೃಷ್ಣ ಎನ್ನುವುದು ಗೊತ್ತಿರಲಿಲ್ಲ. ಬರುತ್ತಿರುವವರು ಬದುವಿನ ಮೇಲೆ ದಾಟಲು ಸ್ವಲ್ಪ ಸಮಯ ಹಿಡಿಯುತ್ತದಾದ್ದರಿಂದ, ಅವರನ್ನು ನೋಡುತ್ತ ನಿಲ್ಲುವುದಕ್ಕಿಂತಲೂ ಆ ರೀತಿ ಆಕಾಶದತ್ತ ನೋಡುವುದು ಚೆನ್ನ ಎನ್ನುವ ಉದ್ದೇಶದಿಂದ ಅವಳು ಆ ರೀತಿ ತಲೆ ಎತ್ತಿ ನೋಡುತ್ತಿದ್ದಳು.

ನೀಲಿ ಬಣ್ಣದ ಆಕಾಶದ ಮೇಲೆ ಮೂಡಿದ್ದ ಕೆಂಪು ಛಾಯೆ ಅವಳನ್ನು ಮುಗ್ಧಳನ್ನಾಗಿ ಮಾಡಿತ್ತು. ಆ ವರ್ಣ ಸಂಯೋಜನೆಗೆ ಆಶ್ಚರ್ಯಗೊಳ್ಳುತ್ತಿರುವಂತೆ ಗೋಪಾಲಕೃಷ್ಣ ಬದುವನ್ನು ಪೂರ್ತಿಯಾಗಿ ದಾಟಿ ಅಲ್ಲಿಗೆ ಬಂದ. ಅವರು ಬಂದಿರುವುದರಿಂದ ವರ್ಷಾ ತಲೆ ಕೆಳಗಿಳಿಸಿ ನೋಡಿದಳು.

ಆ ಕ್ಷಣದಲ್ಲಿ ಅವಳನ್ನು ನೋಡಿದ ಗೋಪಾಲಕೃಷ್ಣ ಒಂದು ಕ್ಷಣ ಹಾಗೆಯೇ ನಿಂತುಬಿಟ್ಟ. ಅವಳಲ್ಲಿದ್ದ ಇಂತಹುದೆಂದು ವ್ಯಾಖ್ಯಾನಿಸಲಾಗದ ಆಕರ್ಷಣೆಗೆ ಮಂತ್ರಮುಗ್ಧನಾದವನಂತೆ, ಕಣ್ರೆಪ್ಪೆ ಮಿಟುಕಿಸಬೇಕೆನ್ನುವುದನ್ನೂ ಮರೆತವನಂತೆ ಕಣ್ಣರಳಿಸಿ ನೋಡುತ್ತಿದ್ದುಬಿಟ್ಟ. ಯಾವ ಸ್ತ್ರೀಯನ್ನೂ ನೋಡಿದರೂ ಉಂಟಾಗದಿದ್ದ ಅದೊಂದು ರೀತಿಯ ಸ್ಪಂದನ ಮೊದಲ ಬಾರಿಗೆ ಅವನಲ್ಲುಂಟಾಯಿತು. ಅನಿರ್ವಚನೀಯವಾದ ತಳಮಳವೊಂದು ಮನಸ್ಸಿನಲ್ಲುಂಟಾಯಿತು. ಅಲ್ಲಿಯವರೆಗೂ ಯಾವ ಸ್ತ್ರೀಯೊಂದಿಗೆ ಪರಿಚಯವಿಲ್ಲದ ಯುವಕ

ಮನಸ್ಸಿಗೆ ಹಿಡಿಸಿದ ಯುವತಿಯನ್ನು ಮೊದಲ ಬಾರಿಗೆ ಕ್ಲೋಜಪ್ಪಿನಲ್ಲಿ ನೋಡುತ್ತಿರುವಂತೆ, ಗೋಪಾಲಕೃಷ್ಣ ವರ್ಷಾಳನ್ನು ನೋಡುತ್ತಿದ್ದ.

ಅದನ್ನು ಗಮನಿಸಿದ ಧಾನ್ಯ, "ಗೋಪಾಲಕೃಷ್ಣ, ಈಕೆಯೇ ವರ್ಷಾ, ನಮ್ಮೂರಿಗೆ ಹೊಸದಾಗಿ ಬಂದಿರೋ ಟೀಚರ್" ಎಂದು ಪರಿಚಯ ಮಾಡಿಸಿದಳು. ಅವನು ತಟಕ್ಕನೆ ಈ ಲೋಕಕ್ಕೆ ಬಂದು ಬಿದ್ದವನಂತೆ ಬೆಚ್ಚಿಬಿದ್ದು, ಕೈ ಜೋಡಿಸಿ ನಮಸ್ಕರಿಸಿದ. ವರ್ಷಾ ಪ್ರತಿಯಾಗಿ ನಮಸ್ಕರಿಸಿದಳು.

"ಈತ ಗೋಪಾಲಕೃಷ್ಣ. ನಮ್ಮ ಊರಿನ ಹೀರೋ ಈತನೇ. ಮದನ ಕಾಮರಾಜ ವಂಶಕ್ಕೆ ಸೇರಿದ ಏಕೈಕ ಪುರುಷ..." ಎಂದು ವರ್ಷಾಳತ್ತ ತಿರುಗಿ ನುಡಿದಳು ಧಾನ್ಯ. ಅವನು ಯಾರೆಂಬುದು ಗೊತ್ತಾಗುತ್ತಿದ್ದಂತೆಯೇ ಮೈ ಮೇಲೆ ಕಂಬಳಿ ಹುಳು ಹರಿದಾಡಿದಂತಹ, ಜುಗುಪ್ಸೆಯ ಭಾವನೆಯೊಂದು ವರ್ಷಾಳ ಮನಸ್ಸಿನಲ್ಲಿ ಮೂಡಿತು. ಅದನ್ನು ಹೊರಗೆ ತೋರ್ಪಡಿಸದೆ, ಸುಮ್ಮನೇ ನೋಡುತ್ತಿದ್ದುಬಿಟ್ಟಳು.

ಧಾನ್ಯ ಗೋಪಾಲಕೃಷ್ಣನೊಂದಿಗೆ ನಾಲ್ಕಾರು ಮಾತು ಆಡಿ, ಕೊನೆಗೆ, "ಇನ್ನು ಹೋಗಿ ಬರಲಪ್ಪಣೆಯನ್ನು ಕೊಡಿ ಮಹಾಶಯಾ! ಅಲ್ಲಿ ನನ್ನಸ್ನೇಹಿತೆ ಹೋಗೋಣವೆನ್ನುವಂತೆ ಕಣ್ಣಲ್ಲೇ ಬೇಡಿಕೊಳ್ಳುತ್ತಿದ್ದಾಳೆ. ಇಷ್ಟಕ್ಕೂ ಕೃಷ್ಣ ಪರಮಾತ್ಮನ ದಯೆ ಈ ಗೋಪಿಕೆಯ ಮೇಲೆ ಎಂದಿಗುಂಟಾಗುತ್ತದೋ"ಎಂದು ಕಣ್ಣುಮಿಟುಕಿಸಿದಳು.

ಅವನು ನಗುತ್ತ, ಹೋಗಿ ಬನ್ನಿರೆನ್ನುವಂತೆ ತಲೆಯಾಡಿಸಿದ. ಅವರಿಬ್ಬರು ಕಣ್ಮರೆಯಾಗುವವರೆಗೆ ಅವನು ಅಲ್ಲಿಂದ ಅಲುಗಾಡಲಿಲ್ಲ. ಆ ನಂತರ ಅಲ್ಲಿಂದ ಚಲಿಸಿದ. ತನ್ನ ಗುರು ಯಾವುದೋ ಯೋಚನೆಯಲ್ಲಿ ಮುಳುಗಿರುವನೆಂಬುದನ್ನು ಗ್ರಹಿಸಿದ ನರ ಮೌನವಾಗಿ ಹಿಂದೆ ಹೆಜ್ಜೆ ಹಾಕುತ್ತಿದ್ದ.

ಸ್ವಲ್ಪ ಹೊತ್ತಿನ ನಂತರ ಗೋಪಾಲಕೃಷ್ಣ ಇದ್ದಕ್ಕಿದ್ದಂತೆ, "ನರಾ! ನೀನು ಇದಕ್ಕೆ ಮುನ್ನ ಒಂದು ಪ್ರಶ್ನೆ ಹಾಕಿದ್ದೆಯಲ್ಲ, ಅದಕ್ಕೆ ಈಗ ಉತ್ತರ ಹೇಳುತ್ತಿದ್ದೇನೆ. ಪ್ರೇಮಕ್ಕೂ, ದೇವರಿಗೂ ಸಾಮಿಪ್ಯತೆ ಏನು ಎಂದಲ್ಲವೆ ನೀನು ಕೇಳಿದ್ದು?" ಎಂದ.

"ಹೌದು ಗುರುವೆ."

"ಪ್ರೇಮ ಒಂದು ಕ್ಷಣದಲ್ಲಿ ಉಂಟಾಗುತ್ತದೆ. ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಕೆಲವು ವರ್ಷಗಳ ಕಾಲ ತಾಪತ್ರಯಪಡಬೇಕು. ಅದೇ ದೇವರ ವಿಷಯದಲ್ಲಾದರೆ, ಕೆಲವು ವರ್ಷಗಳ ಕಾಲ ತಪಸ್ಸು ಮಾಡಿದರೆ ದೇವರು ಕ್ಷಣ ಕಾಲ ಕಾಣಿಸಿಕೊಂಡು ಮಾಯವಾಗುತ್ತಾನೆ. ಇದೇ ದೇವರಿಗೂ, ಪ್ರೇಮಕ್ಕೂ

ಇರುವ ಹೋಲಿಕೆ ಮತ್ತು ವ್ಯತ್ಯಾಸ ಕೂಡ."

ಕೆಲವು ಕ್ಷಣಗಳ ಹಿಂದೆ ಪ್ರೇಮವೆಂದರೇನು ಎಂದು ಕೇಳಿದರೆ ಉತ್ತರಿಸಲಾಗದಿದ್ದ ಗೋಪಾಲಕೃಷ್ಣ, ಇದ್ದಕ್ಕಿದ್ದಂತೆ ಹೇಗೆ ಉತ್ತರ ಹೇಳಬಲ್ಲವನಾದ ಎಂಬುದು ನರಸಿಗೆ ಅರ್ಥವಾಗಲಿಲ್ಲ. ಆದರೆ ಅವನು ತನ್ನ ಅನುಮಾನವನ್ನು ವ್ಯಕ್ತಪಡಿಸಲಿಲ್ಲ.

* * * *

ಆ ಪೌರ್ಣಮಿಯ ದಿನ ವಿಲಾಸಿನಿಗೆ ಗೋಪಾಲಕೃಷ್ಣನಿಂದ ಕರೆಬಂತು. ರಾತ್ರಿ ಬರಬೇಕೆಂದು ಕರೆ ಬಂದುದರಿಂದ ಅವಳು ಉಬ್ಬಿ ಹೋದಳು. ಇದು ಸತ್ಯ ಎಂದು ಬಡಪೆಟ್ಟಿಗೆ ನಂಬಲು ಅವಳಿಂದಾಗಲಿಲ್ಲ. "ಇದು ಕನಸೋ? ನನಸೋ? ಎಂದು ಪ್ರತಿ ಐದು ನಿಮಿಷಗಳಿಗೊಂದು ಸಲ ಮೈ ಜಿಗುಟಿ ನೋಡಿಕೊಂಡಿದ್ದಳು. ಪ್ರಪಂಚದಲ್ಲಿ ತನ್ನಷ್ಟು ದುರದೃಷ್ಟವಂತ ಮತ್ತೊಬ್ಬರಿಲ್ಲ ಎನ್ನುವುದು ಅವಳ ನಂಬಿಕೆಯಾಗಿತ್ತು. ಆ ರೀತಿ ಅವಳು ಭಾವಿಸಲು ಕಾರಣವೂ ಇತ್ತು. ಅವಳ ಮದುವೆಯಾದ ವರ್ಷದೊಳಗೇ ಮದುವೆಯೊಂದು ಮುರಿದು ಹೋಗಲು ಬೇಕಾದ ದುರ್ಘಟನೆಗಳು ಒಂದರ ಹಿಂದೊಂದರಂತೆ ನಡೆದುಹೋಗಿದ್ದವು. ಸದ್ಯಕ್ಕೆ ಅವಳು ವಿಧವೆಯಾಗಿದ್ದಳು. ತನ್ನ ಬದುಕು ಈ ರೀತಿ ಬಣ್ಣಗೆಡಲು ಕಾರಣವಾದ ಪರಿಸ್ಥಿತಿಗಳ ಕುರಿತಾದ ಚಿಂತ ಅವಳನ್ನು ಸೊರಗುವಂತ ಮಾಡಿತ್ತು. ಮೊದಲಿಗಿಂತ ಅವಳು ತೆಳ್ಳಗಾಗಿದ್ದರೂ, ಅದು ಹೆಚ್ಚುವರಿ ಆಕರ್ಷಣೆಯಾಗಿತ್ತೇ ಹೊರತು, ಅವಳ ಸೊಗಸಿಗೇನೂ ಕುಂದು ಉಂಟಾಗಿರಲಿಲ್ಲ.

ಅವಳಿಗೆ ಇಪ್ಪತ್ತೆಂಟು ವರ್ಷಗಳಿದ್ದಿರಬಹುದು. ಗೋಪಾಲಕೃಷ್ಣನಿಂದ ಕರೆ ಬಂದಾಗಿನಿಂದ ಅವಳ ಕಾಲು ನಿಂತೆಡೆ ನಿಲ್ಲುತ್ತಿರಲಿಲ್ಲ. ಮನಸ್ಸು ತೇಲಾಡುತ್ತಿರುವಂತಿತ್ತು. ತನ್ನ ಶರೀರವಿಡೀ ಅರಳಿಕೊಳ್ಳುತ್ತಿರುವ ಭಾವನೆಯುಂಟಾಗುತ್ತಿತ್ತು ಮಧ್ಯಾಹ್ನ ಊಟ ಮಾಡಲೂ ಮನಸ್ಸಾಗಲಿಲ್ಲ. ಎಂದೋ ಬಹುದಿನಗಳ ಹಿಂದೆ ತನ್ನ ಗಂಡನ ಸ್ಪರ್ಶವನ್ನು ಬಿಟ್ಟು, ಬೇರೊಬ್ಬ ಗಂಡಸಿನ ಸ್ಪರ್ಶವನ್ನು ಅವಳು ಅನುಭವಿಸಿರಲಿಲ್ಲ. ಈಗ ಗೋಪಾಲಕೃಷ್ಣನಿಂದ ಕರೆ ಬಂದುದರಿಂದ ಮೈಯೆಲ್ಲ ಬಿಸಿಯೇರಿದಂತಾಗಿತ್ತು. ಆ ರಾತ್ರಿ ಒದಗಲಿರುವ ಅನುಭವದ ನೆನಕೆಯೇ ಮತ್ತೇರಿಸುತ್ತಿದ್ದಂತಿತ್ತು.

ವಾಸ್ತವಕ್ಕೆ ಅವಳು ತನಗೆ ಮುಂದೆಂದೋ ಅದೃಷ್ಟದ ಬಗ್ಗೆ ಯೋಚಿಸುತ್ತಿರಲಿಲ್ಲ. ಅವತ್ತು ತನಗೊದಗಿ ಬಂದಿರುವ ಅದೃಷ್ಟದ ಬಗ್ಗೆ ನೆನೆಸಿಕೊಳ್ಳುತ್ತ ಪುಳಕಗೊಳ್ಳುತ್ತಿದ್ದಳು.

ಸಾಯಂಕಾಲ ನಾಲ್ಕು ಗಂಟೆಯ ಸಮಯದಲ್ಲಿ ಹಾಸಿಗೆ ಬಿಟ್ಟೆದ್ದು ತಯಾರಾಗತೊಡಗಿದಳು. ಗಂಡ ಸತ್ತು ಹೋದಾಗಿನಿಂದ ಅಲಂಕಾರದ ಬಗ್ಗೆ ಅವಳೆಂದೂ ಅಷ್ಟಾಗಿ ಕಾಳಜಿ ವಹಿಸಿದವಳೇ ಆಗಿರಲಿಲ್ಲ. ಬಹು ದಿನಗಳ ನಂತರ ಪುರುಷೋತ್ತಿನಲ್ಲಿ, ಅದಕ್ಕಿಂತಲೂ ಮಿಗಿಲಾಗಿ ಶ್ರದ್ಧೆಯಿಂದ ಅಲಂಕರಿಸಿಕೊಳ್ಳ ತೊಡಗಿದಳು.

ಕೂದಲಿಗೆ ತೆಳುವಾಗಿ ಎಣ್ಣೆ ಹಚ್ಚಿಕೊಂಡು, ಜಡೆ ಹೆಣೆದುಕೊಳ್ಳುತ್ತಿರು ವಾಗ ಯಾವುಯಾವುದೋ ಮಧುರ ಕಲ್ಪನೆಗಳಿಂದ ಬೆರಳುಗಳು ಕಂಪಿಸಿದವು. ಮುಖಕ್ಕೆ ಪೌಡರ್ ಹಚ್ಚಿಕೊಳ್ಳುತ್ತಿರುವಾಗ ಶರೀರ ತೇಲತೊಡಗಿದೆ ಎನಿ ಸಿತು. ಹಣೆಗೆ ಕಪ್ಪು ಬೊಟ್ಟಿಟ್ಟುಕೊಳ್ಳುತ್ತಿರುವಾಗ ಮನಸ್ಸು ಹಿಡಿತತಪ್ಪಿತು ಕಣ್ಣುಗಳಿಗೆ ಕಾಡಿಗೆ ಹಚ್ಚಿಕೊಳ್ಳುತ್ತಿರುವಾಗ ಶರೀರ ಸೂಕ್ಷ್ಮವಾಗಿ ಕಂಪಿ ಸಿತು. ಬ್ರಾ ಹಾಕಿಕೊಳ್ಳುತ್ತಿರುವಾಗ ವಕ್ಷಸ್ಥಳವೆಲ್ಲ ಹಿಗ್ಗಲಿಸಿದಂತಾಯ್ತು. ಆದ್ದರಿಂದಾಗಿ ಬ್ರಾನ ಹುಕ್ ಹಿಡಿಯದೆ ಬಹಳ ಹೊತ್ತು ಒದ್ದಾಡಿದಳು. ಸೀರೆ ಉಟ್ಟುಕೊಳ್ಳುತ್ತಿರುವಾಗ ಮನಸ್ಸು ಅದರಲ್ಲಿ ಮಗ್ನಗೊಳ್ಳದ್ದೆ ನೆರಿಗೆಗಳು ಸರಿಯಾಗಿ ಬರಲಿಲ್ಲ. ತೀರಾ ಬಲವಂತದಿಂದ ಕೈಗಳನ್ನು ನಿಯಂತ್ರಣದಲ್ಲಿಟ್ಟು ನೆರಿಗೆ ಮಾಡಿಕೊಂಡಳು. ಕಾಲುಗಳಿಗೆ ಗೆಜ್ಜೆ ಧರಿಸಬೇಕೆನಿಸಿದರೂ, ಅವು ಆ ಸಮಯದಲ್ಲಿ ಏಕಾಗ್ರತೆಯನ್ನು ಭಂಗಗೊಳಿಸುತ್ತವೇನೋ ಎಂಬ ಅನು ಮಾನದಿಂದ ಆ ಪ್ರಯತ್ನವನ್ನು ಕೈಬಿಟ್ಟಳು.

ಇದೆಲ್ಲ ಮುಗಿಯುವಷ್ಟರಲ್ಲಿ ಸಾಯಂಕಾಲ ಆರು ಗಂಟೆಯಾಯ್ತು. ಸೂರ್ಯ ಸಂಧ್ಯೆಯ ಮಡಿಲಲ್ಲಿ ಪವಡಿಸುವ ಹವಣಿಕೆಯಲ್ಲಿದ್ದ. ಏಳು ಗಂಟೆಯ ಸಮಯದಲ್ಲಿ ನರ ಬಂದು ಕ್ಯಾರಿಯರ್ ಒಯ್ದು. ಅವನು ಅತ್ತ ಹೋದೊಡ ನೆಯೇ ವಿಲಾಸಿನಿ ತಟ್ಟೆಯ ಮುಂದೆ ಕುಳಿತು ಊಟದ ಶಾಸ್ತ್ರವನ್ನು ಮುಗಿಸಿ ಎದ್ದಳು.

ಶರೀರದಲ್ಲಿನ ಕೆಲವು ಅವಯವಗಳು ಭಾರವಾಗಿಬಿಟ್ಟಂತಾಗಿ, ಇಡೀ ಶರೀರ ರೋಮಹಿಡಿದಂತಾಗಿರುವುದನ್ನು ಅವಳು ಬೆಳಿಗ್ಗೆಯಿಂದಲೂ ಗಮನಿ ಸುತ್ತಲೇ ಇದ್ದಳು. ಈಗ ಆ ಭಾರ ಮತ್ತಷ್ಟು ಹೆಚ್ಚಿತೆನ್ನುವುದೇ ಹೊಸ ವಿಷಯವಾಗಿತ್ತು. ಇನ್ನೊಂದು ಕ್ಷಣ ಕೂಡ ತಡೆಯಲಾಗದೆನ್ನಿಸಿ ತಟಕ್ಕನೆ ಮಂಚ ಬಿಟ್ಟೆದ್ದಳು. ತಾಯಿಗೆ ಹೇಳಿ ಬೀದಿಯೊಳಗೆ ಬಂದಳು.

ಆ ಬೀದಿ ಬೆಳಕಿನ ಕಾಲುವೆಯಂತಿತ್ತು. ತಾನು ಅದರಲ್ಲಿ ಪಯಣಿಸುತ್ತಿ ರುವ ಹೂದೋಣಿ ಎನ್ನುವಂತೆ ಭಾಸವಾಗಿ ತನ್ನತ್ತ ತಾನೇ ನೋಡಿಕೊಂಡಳು ಯಾವುದೋ ನಾಚಿಕೆ ಕಾಲಿಗೆ ತೊಡರಿಕೊಳ್ಳುತ್ತಿರುವಂತೆ ಭಾಸವಾಯ್ತು

ತೇಲುತ್ತಿರುವವಳಂತೆ ಹೆಜ್ಜೆ ಹಾಕುತ್ತ ಬೆಟ್ಟದ ಬಳಿ ಸೇರಿದಳು.

ಮೇಲೆ ಹತ್ತಲು ಸಿದ್ಧಳಾಗಿ ಎರಡು ಹೆಜ್ಜೆ ಮುಂದಿಟ್ಟಳು. ಯಾರೋ ಹಿಂದಿನಿಂದ ಅವಳ ಕಣ್ಣುಗಳನ್ನು ಮುಚ್ಚಿದ್ದರಿಂದ ತಟಕ್ಕನೆ ನಿಂತಳು. ಎಂದೋ ರುಚಿನೋಡಿದ್ದ ಪುರುಷನ ಸ್ಪರ್ಶವನ್ನು ಅವಳು ಸಲೀಸಾಗಿಯೇ ಗುರುತು ಹಿಡಿಯಬಲ್ಲವಳಾದಳು. ಅವನು ಗೋಪಾಲಕೃಷ್ಣನೇ ಎಂಬುದು ಸ್ಪಷ್ಟವಾಗಿ ಗೊತ್ತಿದ್ದರೂ, ಹೆಸರು ಹೇಳುತ್ತಲೇ ತೆಗೆದು ಬಿಡುತ್ತಾನಲ್ಲ ಎನಿಸಿ, ಯಾರೆಂಬುದು ಗೊತ್ತಿಲ್ಲವೆನ್ನುವಂತೆ ಕೈಗಳನ್ನು ನೇವರಿಸುತ್ತ, "ಯಾರಿದು .. . ?" ಎಂದಳು.

ಅವನು ಕೈಗಳನ್ನು ಮತ್ತಷ್ಟು ಬಿಗಿಗೊಳಿಸಿದ. ಆ ಸ್ಪರ್ಶ ಅವಳಲ್ಲಿ ಮಹೇಂದ್ರಜಾಲವನ್ನು ಸೃಷ್ಟಿಸುತ್ತಿತ್ತು. ರಕ್ತಚಲನೆ ಮೊದಲಿಗಿಂತಲೂ ದುಪ್ಪಟ್ಟಾಯ್ತು . ಶರೀರದ ಮೇಲೆ ಹೂಮಳೆಸುರಿಯುತ್ತಿರುವ ಅನುಭೂತಿ ಉಂಟಾಯ್ತು.

ವಿಲಾಸಿನಿ ಈ ಸಲ ಧ್ವನಿಯಲ್ಲಿ ಮತ್ತಷ್ಟು ಆಶ್ಚರ್ಯವನ್ನು ತುಂಬಿ ಕೊಳ್ಳುತ್ತ, "ಯಾರೂ... ... ?" ಎಂದಳು. ಉತ್ತರ ಬರಲಿಲ್ಲ. ಕೈಗಳ ಹಿಡಿತ ಮತ್ತಷ್ಟು ಬಿಗಿಗೊಂಡಿತು ಇನ್ನು ಅನಿವಾರ್ಯವೆನ್ನುವಂತೆ, "ಗೋಪಾಲಕೃಷ್ಣ" ಎಂದಳು. ತಕ್ಷಣವೇ ಹಿಡಿತ ಸಡಿಲಗೊಂಡಿತು. ಸರ್ರನೆ ಹಿಂದಿರುಗಿ ನೋಡಿದಳು. ನಗುತ್ತ ನಿಂತಿದ್ದ ಗೋಪಾಲಕೃಷ್ಣನನ್ನು ನೋಡಿ ತಾನೂ ನಕ್ಕಳು.

"ಏನು ವಿಶೇಷ? ಮದುವೆಗೆ ಮುನ್ನ ಯಾವಾಗಲೋ ಒಂದ್ಸಲ ನೋಡಿದ್ದೆ. ಮತ್ತೆ ಈ ನಡುವೆ ಒಂದಿನ ನೋಡ್ದೆ. ತವರು ಮನೆಗೆ ತಾಯೀನ ಮಾತಾಡ್ಸೋಕೆ ಬಂದಿದೀಯೇನೋ ಅಂದ್ಕೊಂಡಿದ್ದೆ ಆದರೆ ಗಂಡ ಸತ್ತದ್ದ ರಿಂದ ತವರು ಮನೆ ಸೇರಿಕೊಂಡಿದ್ದೀಯೆಂದು ಕಸ್ತೂರಿ ಹೇಳಿದ್ಲು."

"ಹೌದು. ಅತ್ತೆ ಮನೆಗೆ ಎಷ್ಟು ಬೇಗ ಹೋದೆನೋ ಅಷ್ಟೇ ಬೇಗ ತವರುಮನೆಗೆ ಬಂದು ಬಿಟ್ಟೆ.

"ನಿನ್ನ ಗಂಡನಿಗೆ ಏನಾಗಿತ್ತು?"

"ಹಾವು ಕಡಿದು ಸತ್ತುಹೋದ."

"ಅಯ್ಯಯ್ಯೋ.. "

ಇಬ್ಬರೂ ಬೆಟ್ಟ ಹತ್ತುತ್ತಿದ್ದರು. ಮತ್ತೆ ಗೋಪಾಲಕೃಷ್ಣನು "ಹಾವು ಎಲ್ಲಿ ಕಚ್ಚಿತು?" ಎಂದು ಕೇಳಿದ.

"ಅದೆಲ್ಲ ಒಂದು ದೊಡ್ಡ ಕಥೆ," ಎಂದು ಒಂದು ಕ್ಷಣ ತಡೆದು.

"ಹೇಗೂ ನಾನು ಇಲ್ಲಿಯವರೆಗೂ ಯಾರಿಗೂ ಹೇಳಿರದ ಘಟನೆಯ ಬಗ್ಗೆ ಹೇಳಬೇಕಲ್ಲ. ಅದನ್ನೂ ಸೇರಿಸಿ ಎಲ್ಲವನ್ನೂ ಹೇಳ್ತೀನಿ" ಎಂದಳು. ಮತ್ತೊಂದು ಸಲ ಅದರ ಬಗ್ಗೆ ಹೇಳುತ್ತ ಸಮಯವನ್ನು ವ್ಯರ್ಥ ಮಾಡುವುದು ಅವಳಿಗೆ ಇಷ್ಟವಿರಲಿಲ್ಲ.

"ಊಂ ಹೇಳು" ಎಂದ ಗೋಪಾಲಕೃಷ್ಣ.

ಅವಳು ಹೇಳತೊಡಗಿದಳು.

"ಅದೃಷ್ಟವೋ, ದುರದೃಷ್ಟವೋ ಗೊತ್ತಿಲ್ಲವಾದರೂ ನೋಡಲು ಬಂದ ಮೊದಲ ಗಂಡಿನೊಂದಿಗೇ ಮದುವೆ ನಿಶ್ಚಯವಾಯ್ತು. ವರನದು ರೇಣಿಗುಂಟಕ್ಕೆ ಹತ್ತಿರವಿದ್ದ ಹಳ್ಳಿ ರೈಲ್ವೇ ಇಲಾಖೆಯಲ್ಲಿ ಯಾವುದೋ ಚಿಕ್ಕ ನೌಕರಿ ಇತ್ತು. ತಂದೆ ತಾಯಿಗಳಿಗೆ ಒಬ್ಬನೇ ಮಗ.

ಮದುವೆಯಾಯ್ತು. ಗಂಡನ ಮನೆಗೆ ಹೋದೆ. ಅಲ್ಲಿಯವರೆಗೆ ಪರಿಚಯವಿರದ ವ್ಯಕ್ತಿಯೊಂದಿಗೆ ಬಾಳುವೆ ಮಾಡಬೇಕಿತ್ತು. ಎಲ್ಲವೂ ಹೊಸದು ಗಂಡ, ನೆರೆ-ಹೊರೆ, ಊರಿನ ಜನ ಎಲ್ಲವೂ ಅರ್ಥವಾಗುವಷ್ಟರಲ್ಲಿ ಎಲ್ಲವೂ ಚೆನ್ನಾಗಿಯೇ ಇವೆಯಾದರೂ ಗಂಡನೇ ಚೆನ್ನಾಗಿಲ್ಲವೆಂದು ಅರ್ಥವಾಯ್ತು.

ನನ್ನ ಗಂಡನಿಗಿದ್ದ ರೋಗ-ಕೀಳರಿಮೆ. ತನಗಿಂತಲೂ ಎಲ್ಲರೂ ಯಾವುದೋ ಒಂದು ರೀತಿಯಲ್ಲಿ ಮೇಲಾದವರೆನ್ನುವ ಮನೋ ಸ್ವಭಾವ. ಇಂತಹ ಖಾಯಿಲೆಯುಳ್ಳವರು ತಮ್ಮ ಕೀಳರಿಮೆಯನ್ನು ಮುಚ್ಚಿಟ್ಟುಕೊಳ್ಳಲು ಎರಡು ಪದ್ಧತಿಗಳನ್ನು ಅವಲಂಬಿಸುತ್ತಾರೆ. ಒಂದು– ತಮ್ಮನ್ನು ತಾವು ಮಹತ್ತರವಾಗಿ ಚಿತ್ರಿಸಿಕೊಳ್ಳುವುದು. ಎರಡು– ಇತರರು ಯಾವುದಕ್ಕೂ ಉಪಯೋಗವಿಲ್ಲದವರೆಂದು ಹೇಳುವುದು ನನ್ನ ಗಂಡನದು ಎರಡನೆಯ ಪದ್ಧತಿ.

ಯಾವನಿಗೆ ಕೀಳರಿಮೆ ಇರುತ್ತದೋ ಅವನಿಗೆ ಹೆಂಡತಿಯ ಮೇಲೆ ಅನುಮಾನ ಕೂಡ ಇರುತ್ತದೆನ್ನುವುದನ್ನು ಅನುಭವದಿಂದ ತಿಳಿದುಕೊಂಡೆ. ನನ್ನ ಗಂಡ ಕೊಂಚ ಬುದ್ಧಿವಂತನಾದುದರಿಂದ ತನಗೆ ಅನುಮಾನ ಪಿಶಾಚಿ ಮೆಟ್ಟಿಕೊಂಡಿದೆ ಎನ್ನುವುದನ್ನು ಬಹಿರಂಗವಾಗಿ ಹೇಳದೆ, ಸುತ್ತು ಬಳಸಿನ ಪದ್ಧತಿಯಲ್ಲಿ ನನ್ನನ್ನು ನಿಯಂತ್ರಿಸಬೇಕೆಂದು ಪ್ರಯತ್ನಿಸುತ್ತಿದ್ದ. ಮೊದಲಲ್ಲಿ ಇದೆಲ್ಲ ನನಗರ್ಥವಾಗುತ್ತಿರಲಿಲ್ಲ.

ಯಾವನಾದರೊಬ್ಬ ಗಂಡಸು ಮನೆಗೆ ಬಂದು ಹೋದರೆ, ನನ್ನನ್ನು ಎದುರಿಗೆ ಕೂಡ್ರಿಸಿಕೊಂಡು, ಆ ಬಂದವನು ಎಂತಹ ದುಮಾರ್ಗಿ ಎನ್ನುವುದನ್ನು ಹೇಳುತ್ತಿದ್ದ. ಅದನ್ನೆಲ್ಲ ಕೇಳಿ ಎಲ್ಲರ ಮೇಲೂ ಅಸಹ್ಯ, ತಿರಸ್ಕಾರದ ಭಾವನೆಯನ್ನು ಏರ್ಪಡಿಸಿಕೊಳ್ಳುವೆನೆಂದೂ, ಅದರಿಂದಾಗಿ ನಾನು ಯಾರತ್ತಲೂ

ಆಕರ್ಷಿತಳಾಗುವುದಿಲ್ಲವೆಂಬುದು ಅವನ ನಂಬಿಕೆಯಾಗಿತ್ತು. ಅದಕ್ಕೇ ಒಂದು ಕ್ರಮಬದ್ಧ ಪದ್ಧತಿಯಂತೆ ಎಲ್ಲರ ಮೇಲೂಕೆಟ್ಟದಾಗಿ ಹೇಳುತ್ತ, ಅವನ ನಗತೆಯನ್ನು ಕಪ್ಪು ಬಣ್ಣದಲ್ಲಿ ಕೆತ್ತಿರಿಸಲು ಪ್ರಯತ್ನಿಸುತ್ತಿದ್ದ.

ನಮ್ಮ ಮನೆಯ ಎದುರಿನ ಮನೆಯಲ್ಲಿ ಒಬ್ಬ ಯುವಕ ಹೆಚ್ಚು ಕಡಿಮೆ ನನ್ನ ವಯಸ್ಸಿನವನು ಇದ್ದ. ಹೆಸರು ಆನಂದ್ ಮದುವೆಯಾಗಿತ್ತು. ಹೆಂಡತಿ ಎಲ್ಲೋ ದೂರದೂರಿನಲ್ಲಿ ನೌಕರಿ ಮಾಡುತ್ತಿದ್ದಳು. ಅವನಿಗೆ ಯೂನಿವರ್ಸಿಟಿ ಲೈಬ್ರರಿಯಲ್ಲಿ ನೌಕರಿಯಿತ್ತು. ತಾಯಿಯೊಂದಿಗೆ ಇರುತ್ತಿದ್ದ. ನೋಡಲು ಚೆನ್ನಾಗೇ ಇದ್ದ.

ಮದುವೆಯಾದ ಹೊಸದರಲ್ಲಿ ಸಾಯಂಕಾಲದ ಹೊತ್ತು ಸುಮ್ಮನೇ ಬೀದಿಯ ವರಾಂಡದಲ್ಲಿ ಕುಳಿತಿರುತ್ತಿದ್ದೆ. ಒಂದು ದಿನ ಸಂಜೆ ಆ ರೀತಿ ಕುಳಿತಿರುವಾಗ ಆನಂದ್ ಆಫೀಸಿನಿಂದ ಬಂದ. ನಾನು ಅವನನ್ನು ನೋಡಿದ್ದು ಅದೇ ಮೊದಲು. ಅವನ ಹಿಂದೆಯೇ ನನ್ನ ಗಂಡ ಕೂಡ ಆಫೀಸಿನಿಂದ ಬಂದ. ನಾನು ಆನಂದನನ್ನು ನೋಡಿದೆನೆಂದು ಗ್ರಹಿಸಿ, ಮನೆಯೊಳಗೆ ಕೂಡ ಹೋಗದೆ ನನ್ನೆದುರಿಗೆ ಕುಳಿತುಕೊಂಡ.

'ಅವನದು ನಮ್ಮ ಎದುರಿನ ಮನೆ ನೋಡು.ಹೆಸರು ಆನಂದ್ ಯೂನಿವರ್ಸಿಟಿಯಲ್ಲಿ ಅಟೆಂಡರ್.'

ಅದು ಸುಳ್ಳೆಂಬುದು ನನಗೆ ಗೊತ್ತಿತ್ತು. ಯೂನಿವರ್ಸಿಟಿ ಲೈಬ್ರರಿಯಲ್ಲಿ ಆತ ಗುಮಾಸ್ತನಾಗಿದ್ದ. ಅಟೆಂಡರ್‌ಗಿರಿ ಗುಮಾಸ್ತರಿಗಿಂತ ಕಡಿಮೆಯಲ್ಲವೆ, ಅದಕ್ಕೇ ಹಾಗೆ ಹೇಳಿದ್ದ.

'... ಪಕ್ಕಾ ವ್ಯಭಿಚಾರಿ. ಹೆಣ್ಣಿನ ಖಯಾಲಿ ಜಾಸ್ತಿ. ಎಷ್ಟೋ ಜನರನ್ನು ಪ್ರೇಮಿಸಿದವನಂತೆ ನಂಬಿಸಿ, ನಾಟಕವಾಡಿ ವಂಚಿಸಿದ್ದಾನೆ. ಲವರ್ಸ್ ಸಾಕಷ್ಟು ಜನರಿದ್ದಾರೆ. ಅವರೊಂದಿಗೆ ರೊಮ್ಯಾನ್ಸ್ ಮಾಡುವುದು ಹೆಂಡತಿಗೆ ಗೊತ್ತು. ಆದರೇನು ಮಾಡ್ತಾಳೆ? ಎಲ್ಲೋ ನೌಕರಿ ಮಾಡುತ್ತ ಅವಳು ಗಂಡನ ಅವ್ಯವಹಾರವನ್ನೆಲ್ಲ ಸಹಿಸಿಕೊಂಡಿದ್ದಾಳೆ. ಅವನಿಗೆ ಈ ಊರಿನಲ್ಲಿಯೇ ಸಾಕಷ್ಟು ಜನ ಸ್ತ್ರೀಯರೊಂದಿಗೆ ಸ್ನೇಹ ಇದೆ.'

'ಹೌದೇ? ನೋಡೋಕೆ ಚೆನ್ನಾಗಿದ್ದಾನೆ. ಮುಖ ನೋಡಿದರೆ ತುಂಬ ಒಳ್ಳೆಯವನಂತೆ ಕಾಣ್ತಾನೆ. ಹೆಂಗಸರು ಬೆನ್ನುಬೀಳ್ತಾರೆ ಅಂದ್ರೆ ನನಗೇನೂ ಆಶ್ಚರ್ಯವಾಗ್ತಿಲ್ಲ' ಎಂದೆ.

ನನ್ನ ಗಂಡ ಬೆಚ್ಚಿಬಿದ್ದ. ಇಷ್ಟು ಕಾಲ ಕೆಲಸಮಾಡಿದ ತನ್ನ ಉಪಾಯ ಎದುರೇಟು ನೀಡಿತೆನ್ನುವಂತೆ ಆಘಾತಕ್ಕೀಡಾದ. ಬಹಳಷ್ಟು ಜನ ಸ್ತ್ರೀಯ

ರೊಂದಿಗೆ ಸ್ನೇಹ ಇದೆ ಅನ್ನೋದು ಕೆಟ್ಟ ಗುಣವೆಂಬುದಾಗಿ ಅಂದುಕೊಳ್ಳುತ್ತೀನೆಂದು ಅವನು ಭಾವಿಸಿದ್ದ. ಆದರೆ ನಾನದನ್ನು ಕೆಟ್ಟ ಗುಣವೆಂಬುದರ ಬದಲಾಗಿ ಆನಂದನಿಗೇ ಹೊಗಳಿದ್ದು ಅವನಿಂದ ಸಹಿಸಲಾಗಲಿಲ್ಲ. ಆದರೆ ಬುದ್ಧಿವಂತನಾದುದರಿಂದ, ಎಂತಹುದೇ ಭಾವನೆಯನ್ನು ವ್ಯಕ್ತಪಡಿಸದೆ, ಇದರಿಂದ ಹೇಗೆ ಹೊರಗೆಳೆಯಬೇಕೆಂದು ಯೋಚಿಸಿದ.

ಯಾವುದೋ ಹೊಸ ಉಪಾಯ ಹೊಳೆಯಿತೆನ್ನುವಂತೆ ಮುಖ ಅರಳಿತು. 'ಒಹಳಷ್ಟು ಜನ ಹೆಣ್ಣುಗಳೊಂದಿಗೆ ಸಂಪರ್ಕ ಮಾಡಿದ್ದರಿಂದ ಏನೇನೋ ರೋಗಗಳು ಅಂಟಿಕೊಂಡಿವೆಯಂತೆ' ಎಂದ. ಈ ಅಸ್ತ್ರದಿಂದಲಾದರೂ ನನ್ನನ್ನು ಕೆಡವಬೇಕೆಂಬುದು ಅವನ ಅಭಿಪ್ರಾಯವಾಗಿತ್ತು.

'ಆದರೆ ನೋಡಲು ಹಾಗೆ ಕಾಣುತ್ತಿಲ್ಲವಲ್ಲ' ಎಂದೆ. ಈ ಸಲ ನನ್ನ ಗಂಡ ಮತ್ತಷ್ಟು ಕುಸಿದ. ಇನ್ನು ಈ ಹೊತ್ತಿಗೆ ಸಾಧ್ಯವಾಗದೆಂದುಕೊಂಡನೇನೋ ಮಾತು ನಿಲ್ಲಿಸಿ ಮನೆಯೊಳಗೆ ಹೊರಟು ಹೋದ,' ಎಂದು ಒಂದು ಕ್ಷಣಮಾತು ನಿಲ್ಲಿಸಿ, ಉಸಿರೆಳೆದುಕೊಂಡ ವಿಲಾಸಿನಿ, ಗೋಪಾಲ ಕೃಷ್ಣನಿಗೆ ತನ್ನ ಕಥೆಯನ್ನು ಹೇಳುವುದನ್ನು ಮುಂದುವರಿಸಿದಳು.

"ಆದರೆ ಅನುಮಾನದ ಗಂಡ ಅಷ್ಟಕ್ಕೇ ಬಿಡುವುದಿಲ್ಲವಲ್ಲ... ಕೆಲವು ದಿನಗಳ ನಂತರ ಒಂದು ದಿನ ತಾರಸಿಯ ಮೇಲೆ ಬೆಳದಿಂಗಳಲ್ಲಿ ಕುಳಿತು ಮಾತಾಡುತ್ತಿರುವಾಗ 'ಅತ್ತ ಕಡೆ ನೋಡುತ್ತಿಲ್ಲ ತಾನೆ' ಎಂದು ಕೇಳಿದ.

'ಇಲ್ಲ'

'ಅವನು ನೋಡುತ್ತಿದ್ದಾನೆಯೆ?'

ಅವನ ಅಜ್ಞಾನಕ್ಕೆ ನಗಬೇಕೋ, ಅಳಬೇಕೋ ಎನ್ನುವುದು ನನಗೆ ಗೊತ್ತಾಗಲಿಲ್ಲ. 'ನಾನು ನೋಡಿದರೆ ತಾನೆ, ಅವನು ನೋಡ್ತಿರೋದು, ಇಲ್ದಿರೋದು ಗೊತ್ತಾಗೋದು' ಎಂದೆ.

'ಕದ್ದು ಮುಚ್ಚಿ ಪರೀಕ್ಷಿಸಿ ನೋಡು.'

'ಆ ರೀತಿ ನಾನು ಕದ್ದು ಮುಚ್ಚಿ ಆನಂದನತ್ತ ನೋಡುವುದು ರೂಢಿಯಾಯ್ತು. ಈ ರೂಢಿಯಿಂದಾಗೆಯೇ ನನಗರಿವಿಲ್ಲದಂತೆ ಆನಂದನೆಂದರೆ ಅದೊಂದು ರೀತಿಯ ಕುತೂಹಲವೂ ಹುಟ್ಟಿಕೊಂಡಿತು. ಅವನು ಯಾವಾಗ ಹೊರಗೆ ಬರುತ್ತಾನೆ? ಯಾವಾಗ ಆಫೀಸಿಗೆ ಹೋಗುತ್ತಾನೆ? ಯಾವಾಗ ಮನೆಗೆ ಬರುತ್ತಾನೆ ಎಂದು ನೋಡುತ್ತಿರುತ್ತಿದ್ದೆ. ಈ ರೀತಿ ನನ್ನ ಗಂಡ ನನ್ನ ಮನಸ್ಸಿನಲ್ಲೊಂದು ವಿಷದ ಬೀಜವನ್ನು ಬಿತ್ತಿದ.

ವಾಸ್ತವಕ್ಕೆ ಆನಂದ್ ಎಂದೂ ನಮ್ಮ ಮನೆಯತ್ತ ಕಣ್ಣೆತ್ತಿ ನೋಡು

ತ್ತಿರಲಿಲ್ಲ. ತನ್ನ ಕೆಲಸವನ್ನಷ್ಟೇ ತಾನು ಗಮನಿಸಿಕೊಂಡಿರುತ್ತಿದ್ದ. ಇಂತಹ ವನನ್ನು ಸ್ತ್ರೀ ಲೋಲನೆಂಬುದಾಗಿ ನನ್ನ ಗಂಡನು ಚಿತ್ರಿಸಲು ಪ್ರಯತ್ನಿಸಿದ್ದು ನನಗೆ ವಿಚಿತ್ರವೆನಿಸಿತು. ಅಲ್ಲಿಗೂ ನನ್ನ ಗಂಡನ ಅನುಮಾನದ ಸ್ವಭಾವ ನನಗೆ ಅರ್ಥವಾಗಿರಲಿಲ್ಲ.

ಆನಂದನ ಮೇಲೆ ನಿಗಾ ಇಡೆಂದು ನನ್ನ ಗಂಡ ಪುಸಲಾಯಿಸಿದ ನಂತರ ಒಂದು ದಿನ ನಾನು ವರಾಂಡದಲ್ಲಿ ಕುಳಿತುಕೊಂಡು ತನ್ನತ್ತ ತದೇಕವಾಗಿ ನೋಡುತ್ತಿರುವುದು ಅವನ ಕಣ್ಣಿಗೆ ಬಿತ್ತು. ಆ ರೀತಿ ನಾನು ನೋಡುತ್ತಿರು ವುದು ಹೊಸದೆನ್ನಿಸಿತೇನೋ ಅವನು ಶಿಲಾಪ್ರತಿಮೆಯಂತಾಗಿಬಿಟ್ಟ. ಅವನ ಕಣ್ಣುಗಳಲ್ಲಿ ಒಂದಿಷ್ಟು ಆಶ್ಚರ್ಯ ತುಂಬಿ ತುಳುಕಿತು. ನಾನು ತಟಕ್ಕನೆ ತಲೆ ತಗ್ಗಿಸಿದೆ.

ಆಗಿನಿಂದ ಅವನು ಆಗಾಗ ನಾನು ನೋಡುವುದನ್ನು ಗಮನಿಸುತ್ತಿದ್ದ. ನನ್ನ ಗಂಡ ಹೇಳಿದ್ದಕ್ಕೆ ಪೂರ್ಣ ವಿರುದ್ಧವಾಗಿ... ಅಂದರೆ ಅವನು ನೋಡುವು ದನ್ನು ನಾನು ಗಮನಿಸುವ ಬದಲಾಗಿ ನಾನು ನೋಡುವುದನ್ನು ಅವನು ಗಮನಿ ಸುವುದು. ಈ ರೀತಿ ನಮ್ಮಿಬ್ಬರ ನೋಟಗಳು ಬೆರೆಯುತ್ತಿರುವುದು ಒಂದು ಸಲ ನನ್ನ ಗಂಡನ ಕಣ್ಣಿಗೆ ಬಿತ್ತು. ನನ್ನನ್ನು ಗಡಿಬಿಡಿಯಿಂದ ತಾರಸಿಯ ಮೇಲೆ ಕರೆದೊಯ್ದು, 'ನಾನು ಹೇಳಿದ್ದು ಸರಿ ತಾನೆ. ಅವನು ನಮ್ಮ ಮನೆ ಕಡೆ ಬಿಟ್ಟರೆ ಮತ್ತೊಂದು ದಿಕ್ಕಿನ ಕಡೆ ನೋಡುತ್ತಿಲ್ಲ, ಅಲ್ವೇ.. ....' ಎಂದು ಕೇಳಿದ.

ನನಗೆ ಏನುತ್ತರ ಹೇಳಬೇಕೆಂದು ಹೊಳೆಯಲಿಲ್ಲ. ಮತ್ತೆ ನನ್ನ ಗಂಡನೇ ಮುಂದುವರಿಸಿದ. 'ನಿನ್ನಿಂದ ಉತ್ತರ ಹೇಳಲಾಗದೆಂದು ನನಗೆ ಗೊತ್ತು. ಮರ್ಯಾದೆ "ಇರೊ ಯಾವ ಹೆಣ್ಣೂ ಇಂತಹುದನ್ನೆಲ್ಲ ಬಾಯಿಬಿಟ್ಟು ಹೇಳ ಲಾರಳು. ಇನ್ನು ಅವನು ನೋಡುವಷ್ಟಕ್ಕೇ ನಿಲ್ಲಿಸುವುದಿಲ್ಲ. ಸನ್ನೆ ಮಾಡೋ ದನ್ನ ಶುರು ಮಾಡ್ತಾನೆ, ನೋಡ್ತಿರು. ನನ್ನ ಮಾತು ಸುಳ್ಳಾಗೋದಿಲ್ಲ. ಬೇಕಾದ್ರೆ ಬೆಟ್ ಕಟ್ತೇನಿ.'

ಆ ಮಾತುಗಳನ್ನು ಕೇಳುತ್ತಿದ್ದರೆ ನನ್ನ ಮೈ ಝುಮ್ಮೆಂದಿತು. ಮುಂದಿನ ಹೆಜ್ಜೆ ಏನೆಂಬುದನ್ನು ನನ್ನ ಗಂಡನೇ ಪರೋಕ್ಷವಾಗಿ ಹೇಳಿಬಿಟ್ಟಿದ್ದ. ಆ ಕ್ಷಣ ದಿಂದ ನಾನು ನನಗರಿವಿಲ್ಲದಂತೆ ಆನಂದ್ ಸನ್ನೆ ಮಾಡುವುದನ್ನೇ ಕಾಯ ತೊಡಗಿದೆ.

ಈ ಘಟನೆ ಆದಾಗಿನಿಂದ ನನ್ನ ಗಂಡನ ಅನುಮಾನ ಮತ್ತೂ ಜಾಸ್ತಿ ಯಾಯ್ತು. ಹಗಲು ಕೆಲಸಕ್ಕೆ ಹೋಗಿ ಬಂದರೂ, ಯಾವುದಾದರೂ ನೆಪ

ಹುಡುಕಿ ಅಟ್ಟದ ಮೇಲೆ, ಮಂಚದ ಕೆಳಗೆ, ಬಾಗಿಲ ಮರೆಯಲ್ಲಿ ಯಾರಾದರೂ ಇರುವರೇನೋ ಎಂದು ನೋಡುತ್ತಿದ್ದ. ನನ್ನ ಮುಖದಲ್ಲಿ ಏನಾದರೂ ಕಚ್ಚಿದ ಗುರುತುಗಳು ಕಂಡು ಬರುತ್ತವೇನೋ ಎಂದು ಕಣ್ಣಲ್ಲೇ ಹುಡುಕಾಡುತ್ತಿದ್ದ.

ಅಷ್ಟೊತ್ತಿಗೆ ಅವನ ಸ್ವಭಾವವೆಂತಹುದೆಂಬುದು ಪೂರ್ತಿಯಾಗಿ ಅರ್ಥ ವಾಗಿತ್ತು. ಆದರೆ ಏನೂ ಗೊತ್ತಿಲ್ಲದಿರುವಂತೆ ನಾನೂ ನಟಿಸತೊಡಗಿದೆ. ಅವ ನೆಂದರೆ ದಿನದಿನಕ್ಕೂ ನನ್ನಲ್ಲಿ ಹೇಸಿಗೆ, ಅಸಹ್ಯ ಬೆಳೆಯತೊಡಗಿದವು. ಆ ನಂತರ ಕೂಡ ಆನಂದ್ ಎಂದೂ ಮಿತಿ ಮೀರಿ ವರ್ತಿಸಲಿಲ್ಲ. ಆದರೆ ನಾನು ಸಹಜವಾಗಿಯೇ ಆ ಕಡೆ ಹೆಚ್ಚಾಗಿ ನೋಡುತ್ತಿದ್ದುದರಿಂದ ತಾನೂ ನೋಡ ತೊಡಗಿದ.

ಒಂದು ದಿನ ನನ್ನ ಗಂಡ ಅತ್ತ ಹೋದೊಡನೆಯೇ ಯಾಕೋ ಇದ್ದಕ್ಕಿ ದ್ದಂತೆ ಮೈ ಝುಮ್ಮೆಂದಂತಾಯ್ತು. ನಾನು ಬೀದಿಬಾಗಿಲಿನ ಬಳಿ ಮಾವಿನ ಎಲೆಯ ತೋರಣದಂತೆ ನಿಂತಿದ್ದೆ. ಸಂಜೆಯಾಗಿತ್ತು. ಕತ್ತಲು ಇನ್ನೂ ದಾಳಿ ಯನ್ನು ಪ್ರಾರಂಭಿಸಿರಲಿಲ್ಲ. ತನ್ನ ಮನೆಯ ಆವರಣದೊಳಗೆ ಬಂದ ಆನಂದ ನನ್ನು ನೋಡಿ ಸನ್ನೆ ಮಾಡಬೇಕೆಂಬ ತುಂಟ ಕೋರಿಕೆ ನನ್ನ ಮನಸ್ಸಿನಲ್ಲಿ ಪ್ರವೇಶಿಸಿತು. ತಲೆ ನೇವರಿಸಿಕೊಳ್ಳುತ್ತಿರುವಂತೆ ತಲೆ ಮೇಲೆ ಕೈ ಒಯ್ದು, ಕರೆಯುವವಳ ಹಾಗೆ ಬೆರಳಾಡಿಸಿದೆ.

ಅವನು ಅದನ್ನು ನಿರೀಕ್ಷಿಸಿರಲಿಲ್ಲವೇನೋ ಇದ್ದಕ್ಕಿದ್ದಂತೆ ವಿದ್ಯುದ್ಘಾತ ತಗುಲಿದವನಂತೆ ಕಣ್ಣರಳಿಸಿ ನೋಡಿ, ಏನೋ ಕೆಲಸವಿರುವವನಂತೆ ಒಳಗೆ ಹೋದ. ಬಹಳ ಹೊತ್ತು ಒಳಗಿರಲಾರನೆಂಬುದು ನನಗೆ ಗೊತ್ತಿತ್ತು. ಅದಕ್ಕೇ ಕಂಪೌಂಡ್ ಗೋಡೆಯತ್ತಲೇ ದೃಷ್ಟಿ ನೆಟ್ಟು ಅಲ್ಲಿಯೇ ನಿಂತುಕೊಂಡೆ. ಐದು ನಿಮಿಷಗಳೊಳಗಾಗಿಯೇ ಅವನು ಹೊರಗೆ ಬಂದ. ಈ ಸಲ ಮತ್ತಷ್ಟು ಸ್ಪಷ್ಟ ವಾಗಿ ಬೆರಳಾಡಿಸಿದೆ.

ಅವನು ಹಿಂದೆಮುಂದೆ ನೋಡುತ್ತಲೇ ಬೀದಿಯಲ್ಲಿ ಬಂದು, ಅತ್ತಿತ್ತ ನೋಡಿ ನನ್ನ ಬಳಿಗೆ ಬಂದ. ಅವನನ್ನು ಕರೆದೆನಾದರೂ ಏನು ಮಾತಾಡ ಬೇಕೆಂದು ಹೊಳೆಯಲಿಲ್ಲ. ಏನಾದರೊಂದು ಮಾತಾಡೆಂದು ಮನಸ್ಸು ಅವಸರ ಪಡಿಸುತ್ತಿತ್ತು.

"ಕಳೆದ ಎರಡು ದಿನ ನೀವು ಎಲ್ಲಿ ಹೋಗಿದ್ರಿ? ಕಾಣಲೇ ಇಲ್ಲ. ನಮ್ಮ ಜ ಮಾನರಿದ್ದಾರೆಂದು ಹೊರಗೇ ಬರುತ್ತಿಲ್ಲವೆಂದು ಕಾಣುತ್ತೆ. ನನಗೊಂದು ಉಪಾಯ ಹೊಳೆದಿದೆ.ನನ್ನ ಗಂಡ ಮನೆಯಲ್ಲಿದ್ದರೆ, ಇನ್ನು ಮೇಲಿಂದ ಎರಡು ಜಡೆ ಹಾಕಿಕೊಳ್ತೀನಿ. ಆಫೀಸಿಗೆ ಹೋಗಿದ್ದರೆ ನಾನುಒಂಟಿಯಾಗಿರುವೆನೆನ್ನುವು

ದಕ್ಕೆ ಕುರುಹಾಗಿ ಒಂದೇ ಜಡೆ ಹಾಕಿಕೊಳ್ತೀನಿ. ಅದೇ ಸೂಚನೆ. ಒಂದೇ ಜಡೆ ಹಾಕಿಕೊಂಡಾಗ ಕಾಣಿಸುತ್ತಾ ಇರಿ ಮಹಾನುಭಾವ........' ಎಂದು ಮೆಲ್ಲಗೆ ನುಡಿದೆ.

ಇಂತಹ ಮಾತುಕತೆಯನ್ನು ಆತ ಊಹಿಸಿರಲಿಕ್ಕಿಲ್ಲ.ಅದಕ್ಕೇ ಆಗಲೆನ್ನುವಂತೆ ಗಾಬರಿಯಲ್ಲಿ ತಲೆಯನ್ನು ಅತ್ತಿಂದಿತ್ತ ಆಡಿಸಿ ಅಲ್ಲಿಂದ ಹೊರಟುಹೋದ ನಾನು ಮನೆಯೊಳಗೆ ಬಂದುಬಿಟ್ಟೆ.

ಮರುದಿನ ಹೋಳಿಹುಣ್ಣಿಮೆ ಇತ್ತು. ರಜೆಯಿದ್ದ ಕಾರಣ ನನ್ನ ಗಂಡ ಮನೆಯಲ್ಲೇ ಉಳಿದ. ನಾನು ಎರಡು ಜಡೆ ಹಾಕಿಕೊಂಡೆ. ಹೋಳಿ ಹಬ್ಬದ ಬಗ್ಗೆ ಎಂದೂ ಹಚ್ಚಿಕೊಳ್ಳದಿದ್ದ ನಾನು, ಆ ದಿನ ಹೇಗಾದರೂಮಾಡಿಆನಂದನ ಮೇಲೆ ಬಣ್ಣ ಚಲ್ಲಬೇಕಂದುಕೊಂಡೆ.ಆದರೆ ಬಣ್ಣದ ಪುಡಿಯನ್ನು ಎಲ್ಲಿಂದ ತರಲಿ? ಎಂದು ಯೋಚಿಸುತ್ತಿರುವಂತೆ ಕುಂಕುಮವನ್ನು ಚೆಲ್ಲಬಹುದೆನ್ನುವ ಉಪಾಯ ಮೂಡಿತು. ಆದರೆ ನನ್ನ ಗಂಡ ಇದ್ದರೆ ಅದು ಸಾಧ್ಯವಾಗದು. ಅದಕ್ಕೇ ಏನು ಮಾಡಬೇಕೆಂದು ತೋಚದೆ ದಿಗಿಲು ಶುರುವಾಯ್ತು.

ನನ್ನ ಅದೃಷ್ಟ ಚೆನ್ನಾಗಿತ್ತು. ನನ್ನ ಗಂಡ ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿನಲ್ಲಿ ತಿರುಪತಿಗೆ ಹೋಗಿ ಬರುತ್ತೇನೆಂದು ಮನೆಯಿಂದ ಹೊರಬಿದ್ದ. ನನ್ನ ಆನಂದಕ್ಕೆ ಎಲ್ಲೆಯಿಲ್ಲದಂತಾಯ್ತು. ಚಿಕ್ಕ ಹುಡುಗಿಯಂತೆ ಮನೆಯಲ್ಲೇ ಕುಣಿದಾಡಿದೆ. ಸರಸರನೆ ಸ್ನಾನ ಮುಗಿಸಿ, ಎರಡು ಜಡೆಗಳನ್ನು ಬಿಚ್ಚಿ, ಒಂದು ಜಡೆ ಹಾಕಿಕೊಂಡು, ವರಾಂಡದೊಳಗೆ ಬಂದು ಬೆನ್ನನ್ನು ಬೀದಿಯತ್ತ ತಿರುಗಿಸಿ, ಅತ್ತಿತ್ತ ತಿರುಗಾಡತೊಡಗಿದೆ.

ನಾನು ಬಯಸಿದಂತೆ ಆನಂದ್ ನನ್ನ ಜಡೆಯ ವಿನ್ಯಾಸವನ್ನು ಗಮನಿಸಿ ಜಗುಲಿಯ ಮೇಲೆ ಕುಳಿತುಕೊಂಡ. ಕತ್ತಲಾದೊಡನೆಯೇ ಕಂಪೌಂಡ್ ಗೋಡೆಯ ಹತ್ತಿರ ನಿಂತುಕೊಂಡು ಬಾ ಎನ್ನುವಂತೆ ಕೈ ಬೀಸಿದೆ. ಈ ಸಲ ಧೈರ್ಯವಾಗಿಯೇ ಬಂದ ಹತ್ತಿರ ಬರುತ್ತಲೇ ಎಡಗೈ ಮುಷ್ಟಿಯಲ್ಲಿದ್ದ ಕುಂಕುಮವನ್ನು ಬಲಗೈಗೆ ಬದಲಾಯಿಸಿಕೊಂಡು ತಟಕ್ಕನೆ ತಲೆಯ ಮೇಲೆ ಚೆಲ್ಲಿದೆ ..... ಏನು ನಡೆಯಿತೆಂದು ಅವನು ತಿಳಿದುಕೊಳ್ಳುವುದರೊಳಗೆಯೇ ಕುಂಕುಮ ತಲೆಯ ಮೇಲಿಂದ ಜಾರಿ, ಅಂಗಿಯ ಮೇಲೆ ಚುಕ್ಕಿ ಚುಕ್ಕಿಯಾಗಿ ಬಿದ್ದು ಅಂಟಿಕೊಂಡಿತು.

'ಈ ದಿನ ಹೋಳಿ, ಆದಕ್ಕೇ ಈ ಬಣ್ಣದ ಅಭಿಷೇಕ ಎಂದೆ.'

ಅವನು ಆ ಅಭಿಮಾನಕ್ಕೆ ಮನಸೋತವನಂತೆ ನಕ್ಕ. ಅಷ್ಟರಲ್ಲಿ ಯಾರೋ ಬೀದಿಯಲ್ಲಿ ಓಡಿ ಬರುತ್ತಿರುವಂತೆನ್ನಿಸಿ ಭಯದಿಂದ ಬೀದಿಯ

ತುದಿಯತ್ತ ನೋಡಿದೆ! ನನ್ನ ಗಂಡ ಓಡಿ ಬರುತ್ತಿದ್ದ.

ನನ್ನ ಮುಖ ಕಪ್ಪಿಟ್ಟಿತು. ಆನಂದ್ ಕೂಡ ಗಾಬರಿಯಿಂದ ಅತ್ತಿತ್ತ ನೋಡಿದ. ಹೊರಟು ಹೋಗೆಂದು ಹೇಳಬೇಕೆಂದುಕೊಳ್ಳುತ್ತಿರುವಷ್ಟರಲ್ಲಿಯೇ ತಡವಾಗಿ ಬಿಟ್ಟಿತು. ನನ್ನ ಗಂಡ ಬಡಿಗೆಯಿಂದ ಅವನ ತಲೆಯ ಮೇಲೆ ಹೊಡೆದದ್ದು, ತಲೆ ಒಡೆದು ರಕ್ತ ಉಕ್ಕಿದ್ದು, ಆ ಮಬ್ಬುಗತ್ತಲಲ್ಲಿ ನನಗೆ ಕಂಡು ಬಂತು. ಕಿಟಾರನೆ ಕಿರುಚಿದೆ. ಅಷ್ಟೊತ್ತಿಗೆ ಏನೋ ನಡೆಯುತ್ತಿದೆಯೆಂದು ಜನ ಓಡಿ ಬಂದರು. ಆನಂದ್ 'ಅಮ್ಮಾ' ಎನ್ನುತ್ತ ಕುಸಿದ.

ಸುತ್ತಲೂ ಜನ ನೆರೆದರು. ನನ್ನ ಗಂಡನ ಆವೇಶ, ಕೋಪ ಅಲ್ಲಿಗೂ ಕಡಿಮೆಯಾಗಿರಲಿಲ್ಲ. ಚಪ್ಪಲಿಗಾಲಿನಿಂದ ಎಲ್ಲಿ ಬೇಕೆಂದರಲ್ಲಿ ಒದ್ದ. 'ಇವನು ಈ ಲೋಫರ್ ನನ್ಮಗ ನನ್ನ ಹೆಂಡತಿಯ ಮೇಲೆ ಕಣ್ಣು ಹಾಕ್ತಾನಾ? ಇಂತಹುದೇನೋ ನಡೆಯುತ್ತೇಂತ ನನಗೆ ಮೊದಲಿನಿಂದಲೂ ಅನುಮಾನ, ನನ್ನ ಅಂದಾಜು ತಪ್ಪಾಗಲು ಸಾಧ್ಯವಿಲ್ಲ. ಅದಕ್ಕೇ ಇವನ ವ್ಯವಹಾರ ಕಂಡು ಹಿಡಿಯೋಣಾಂತ ತಿರುಪತಿಗೆಂದು ಹೇಳಿ ಅಲ್ಲಿಯೇ ಕಬ್ಬಿನ ತೋಟದಲ್ಲಿ ಬಚ್ಚಿಟ್ಟುಕೊಂಡು ನೋಡುತ್ತಿದ್ದೆ. ಅಷ್ಟರಲ್ಲಿ ಇವನು ನನ್ನ ಹೆಂಡತಿಯ ಬಳಿಗೆ ಬರುತ್ತಿರುವುದನ್ನು ನೋಡಿ ರಭಸದಿಂದ ಓಡಿ ಬಂದೆ' ಎಂದು ಹೇಳುತ್ತ ಆನಂದನನ್ನು ಒದೆಯುತ್ತಿದ್ದ.

ನನ್ನ ಮನಸ್ಸು ವಿಲಿ ವಿಲಿ ಒದ್ದಾಡಿತು. 'ಆನಂದ್ ಇಂತಹವನೆಂದು ಅಂದುಕೊಂಡಿರಲಿಲ್ಲವಲ್ಲ' ಎನ್ನುವ ಅರ್ಥ ಬರುವಂತೆ ಮಾತಾಡುತ್ತ, ನೆರೆದಿದ್ದ ಜನರೆಲ್ಲ ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಿದ್ದರು. ಅಷ್ಟರಲ್ಲಿ ಯಾರೋ ಆನಂದನನ್ನು ಮೇಲೆಬ್ಬಿಸಿದರು. ನೋವು, ಅಸಹಾಯಕತೆ, ಅವಮಾನ, ಕೋಪ ಇತ್ಯಾದಿ ವಿಧವಿಧವಾದ ಭಾವನೆಗಳು ಮನಸ್ಸನ್ನು ಕುಗ್ಗಿಸುತ್ತಿವೆಯೇನೋ ಎನ್ನುವಂತೆ ಅವನು ತಲೆ ತಗ್ಗಿಸಿಕೊಂಡು ಮನೆಯೊಳಗೆ ಹೊರಟು ಹೋದ.

ಜನರೆಲ್ಲ ಹೊರಟು ಹೋದ ನಂತರ ನನ್ನ ಗಂಡ ನನ್ನನ್ನು ಒಳಗೆಳೆದು ಬಂದು, 'ವ್ಯವಹಾರ ಗೋಡೆಯವರೆಗೆ ಬಂದಿದ್ಯಾ? ಗೋಡೆ ಹಾರೋವರೆಗೆ ತಂದಿದ್ಯಾ?' ಎಂದು ಕಿಡಿಕಾರುತ್ತ ಕೇಳಿದ.

ನಾನು ಏನೂ ಉತ್ತರಿಸಲಿಲ್ಲ, ಮೌನವಾಗಿ ನನ್ನ ಕೋಣೆಯೊಳಗೆ ಹೋಗಿ ಮಲಗಿಕೊಂಡೆ. ಆಗಲೇ ಎದ್ದು ಹೋಗಿ ಆನಂದನನ್ನು ಸಮಾಧಾನಪಡಿಸಬೇಕೆನ್ನುವ ಬಲವಾದ ಕೋರಿಕೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಎಷ್ಟರ ಮಟ್ಟಿಗೆ ಅತ್ತೆನೆಂಬುದನ್ನು ಮಾತುಗಳಲ್ಲಿ ಹೇಳಲಾಗದು.

ಕೆಲ ದಿನಗಳು ಉರುಳಿದವು. ಆನಂದನನ್ನು ಸಮಾಧಾನಪಡಿಸಬೇಕೆನ್ನುವ ಕೋರಿಕೆ ನನ್ನನ್ನು ಪ್ರಾಪಂಚಿಕ ವಿಷಯಗಳ ಬಗ್ಗೆ ಕುರುಡಾಗಿ ಮಾಡಿಬಿಟ್ಟಿತು. ಅಷ್ಟೆಲ್ಲ ಅವಮಾನ, ನೋವನ್ನು ಸಹಿಸಿದ ಆನಂದನನ್ನು ಹೇಗೆ ಸಮಾಧಾನಪಡಿಸಬೇಕೆಂದು ತಿಳಿಯದೆ ವಿಲಿ ವಿಲಿ ಒದ್ದಾಡುತ್ತಿದೆ. ಮೂರು ತಿಂಗಳುಗಳು ಕಳೆದವು. ಸರಿಯಾದ ಸಮಯಕ್ಕೋಸ್ಕರ ಕಾಯುತ್ತಿದ್ದ ನನಗೆ ನನ್ನ ಗಂಡ ಆಫೀಸ್ ಕೆಲಸದ ಮೇಲೆ ಗುಂತಕಲ್ಲಿಗೆ ಹೋಗಿದ್ದರಿಂದ, ಅವಕಾಶ ಒದಗಿ ಬಂತು. ಬೆಳಿಗ್ಗೆ ಹತ್ತು ಗಂಟೆಗೆ ನನ್ನ ಗಂಡ ಹೋದೊಡನೆಯೇ ಆನಂದ ನಿಗೋಸ್ಕರ ನನ್ನ ಕಣ್ಣುಗಳು ಹುಡುಕಾಡಿದವು. ಅದೃಷ್ಟವಶಾತ್ ಆ ದಿನ ರಜೆ ಇದ್ದುದರಿಂದ ಅವನು ಮನೆಯ ಬಳಿಯೇ ಇದ್ದಾನೆಂದು ಗೊತ್ತಾಯಿತು.

ಇನ್ನು ನನ್ನಿಂದ ತಾಳಲಾಗಲಿಲ್ಲ. ಮಧ್ಯಾಹ್ನ ಒಂದು ಗಂಟೆಯ ಹೊತ್ತಿನಲ್ಲಿ ಬಟ್ಟೆ ಒಗೆಯುವ ನೆಪದಿಂದ ಕೆರೆಯತ್ತ ಹೊರಟೆ. ತುಫಾನು ಬೀಸುತ್ತಿದ್ದುದರಿಂದಾಗಿ ಮೆಲ್ಲಗೆ ಹನಿಯತೊಡಗಿತ್ತು. ನಾವು ಒಂದಾಗುವುದನ್ನು ಜಗತ್ತು ನೋಡಬಾರದೆಂದು ದೇವರೇ ಮೇಘಗಳ ದುಪ್ಪಟಿಯನ್ನು ಹೊದಿಸಿರುವಂತಿತ್ತು. ಹಗಲಲ್ಲೇ ಕತ್ತಲು ಕವಿದುಕೊಂಡಿತ್ತು.

ಅವನೊಂದಿಗೆ ಮಾತಾಡಬೇಕೆಂದಿದೆಯೆಂದೂ, ಈ ಒಂದು ಸಲಕ್ಕೆ ಕೆರೆ ದಂಡೆಯ ಮೇಲೆ ಭೇಟಿಯಾಗಬೇಕೆಂದು ಬೇಡಿಕೊಳ್ಳುತ್ತ ಚಿಕ್ಕದೊಂದು ಚೀಟಿ ಬರೆದು ಆನಂದನಿಗೆ ಕಳಿಸಿಕೊಟ್ಟೆ. ಏನೇನೋ ಆಲೋಚನೆಗಳು ಒಂದಕ್ಕೊಂದು ತಾಕಲಾಡುತ್ತಿರುವಂತೆ ಕೆರೆಯನ್ನು ತಲುಪಿದೆ.

ಮಳೆ ಹನಿ ಜೋರಾಯಿತು. ಕೆರೆ ದಂಡೆಯ ಮೇಲೆ ಒಂದೇ ಒಂದು ಹುಣಿಸೇ ಮರವಿತ್ತು. ಅದರ ಕೆಳಗೆ ನಿಂತುಕೊಂಡು ಊರಿನತ್ತ ನೋಡುತ್ತಿದ್ದೆ. ಮಳೆ ಎಲೆಗಳ ಮೇಲೆ ಬಿದ್ದು, ಅಲ್ಲಿಂದ ಜಾರಿ ನನ್ನ ಮೇಲೆ ಟಪಟಪನೆ ತೊಟ್ಟಿಕ್ಕುತ್ತಿತ್ತು. ಆಕಾಶದಲ್ಲಿ ಕರಿ ಮೋಡಗಳು ದಟ್ಟಗೊಳ್ಳತೊಡಗಿದವು. ಗಾಳಿ ಮಳೆಯನ್ನು ಕೈ ಹಿಡಿದುಕೊಂಡು ಕರೆದೊಯ್ಯುತ್ತಿದೆಯೇನೋ ಎನ್ನುವಂತೆ ರಾಚುತ್ತಿತ್ತು.

ಆನಂದ್ ಬರುತ್ತಾನೋ, ಇಲ್ಲವೋ ಎನ್ನುವ ಸಂದಿಗ್ಧತೆ ನನ್ನನ್ನು ನಡುಗಿಸುತ್ತಿತ್ತು. ದಿಗಿಲಿನಿಂದಿದ್ದ ನನ್ನ ಮನಸ್ಸಿಗೆ ಸಮಾಧಾನ ಉಂಟಾಗುವಂತೆ ನನಗೋಸ್ಕರ ಬರುತ್ತಿದ್ದ ಆನಂದ್ ಕಾಣಿಸಿದ. ಆಗ ನಾನೇನಾನಾಗಿಬಿಟ್ಟೆನೆಂಬುದನ್ನು ಈಗ ಹೇಗೆಂದರೂ ಹೇಳಲು ನನ್ನಿಂದಾಗದು! ಭಾವೋದ್ವೇಗಕ್ಕೆ ನಾನು ಗುಲಾಮಳಾಗಿಬಿಟ್ಟೆ.

ಆನಂದ್ ಬಂದು ನನಗೆ ಹತ್ತಡಿ ದೂರದಲ್ಲಿ ನಿಂತ. ಮಳೆಯಲ್ಲಿ

ತೊಯ್ಯುತ್ತಿದ್ದ ಅವನು ನನಗೆ ಪುನೀತ ಪುರುಷನಂತೆ ಭಾಸವಾದ. ಮೊದಲೆಲ್ಲ ಸನ್ನೆ ಮಾಡಿದಂತೆಯೇ ತಲೆ ಮೇಲೆ ಕೈಯಾನಿಸಿ, ಬಾ ಎನ್ನುವಂತೆ ಬೆರಳಾಡಿ ಸಿದೆ. ಮೆಲ್ಲಗೆ ಹೆಜ್ಜೆ ಇಡುತ್ತ ಸಮೀಪಿಸಿದ.

"ನನಗೋಸ್ಕರ ನೀನು ಪಟ್ಟ ಅವಮಾನ........"ಅಳು ಒತ್ತರಿಸಿಕೊಂಡು ಬಂದುದರಿಂದ ಮುಂದೆ ಮಾತುಗಳು ಹೊರಬರಲಿಲ್ಲ. ಅವನನ್ನು ಹಾಗೆಯೇ ನೋಡುತ್ತ. ಕಣ್ಣೀರೊರೆಸಿಕೊಂಡು ನನ್ನನ್ನು ನಾನು ನಿಯಂತ್ರಿಸಿಕೊಂಡು, "ಇದಕ್ಕಿಂತಲೂ ಹೆಚ್ಚಿಗೆ ಹೇಗೆ ಸಮಾಧಾನಪಡಿಸಬೇಕೆಂದು ಗೊತ್ತಾಗು ತ್ತಿಲ್ಲ. " ಎನ್ನುತ್ತ ಆನಂದನ ಕೈಗಳನ್ನು ಹಿಡಿದುಕೊಂಡು ನನ್ನ ಹತ್ತಿರ ಕ್ಕೆಳೆದುಕೊಂಡೆ.

ನನ್ನ ತಲೆ ಮೇಲೆ ಬಿದ್ದ ಮಳೆ ಧಾರೆಕಟ್ಟಿ ಭಗೀರಥನ ಗಂಗೆ ಧುಮ್ಮಿಕ್ಕಿ ದಂತೆ ಮೂಗಿನ ಮೇಲೆ ಧುಮುಕಿ, ಅಲ್ಲಿಂದ ಸಪ್ತಗಿರಿಗಳಲ್ಲಿ ಜನಿಸಿ ಕಪಿಲೇ ಶ್ವರನ ಪಾದಗಳ ಮೇಲೆ ಒರಗಿದ.. ಕಪಿಲ ತೀರ್ಥ ಜಲಪಾತದಂತೆ ತುಟಿಗಳ ಮೇಲೆ ಬಿದ್ದು, ಸೊಗಸಿನ ಕೃಷ್ಣವೇಣಿಯಾಗಿ, ಅಲ್ಲಿಂದ ವಕ್ಷಸ್ಥಳದ ನಡುವೆ ಜಾರಿ, ಪಾಪಿಕೊಂಡಗಳ ನಡುವೆ ಪ್ರವಹಿಸುವ ಗೋದಾವರಿಯಾಗಿ, ಹರಿದು ಹೊಕ್ಕುಳನ್ನು ತೊಯ್ಯಿಸಿ, ಸಮುದ್ರ ಗರ್ಭದಲ್ಲಿ ಬೆರೆಯಲು ಓಡುತ್ತಿರುವ ಕಾವೇರಿಯಾಗುತ್ತಿತ್ತು.

ನನ್ನತ್ತ ನೋಡುತ್ತಿದ್ದ ಅವನು ಕರಗಿದ. ಯಾವುದೊಂದು ಗೊತ್ತಿರದ ಆವೇಶ ನನ್ನನ್ನು ಆವಹಿಸಿಕೊಳ್ಳುತ್ತಿದ್ದಂತೆ ಮತ್ತಷ್ಟು ಮೇಲೆಳೆದುಕೊಂಡೆ. 'ಇಲ್ಲೇ ಅಲ್ವಾ ನನ್ನ ಗಂಡ ಬಡಿಗೆಯಿಂದ ಹೊಡೆದದ್ದು' ಎನ್ನುತ್ತ ಹುಚ್ಚು ಹಿಡಿದವಳಂತೆ ಅಲ್ಲೆಲ್ಲ ಮುತ್ತಿನ ಮಳೆಗರೆದೆ. "ಇಲ್ಲೇ ಅಲ್ವಾ....ಇಲ್ಲೇ ಅಲ್ವಾ ಇಲ್ಲೇ ಅಲ್ವಾ .." ಎನ್ನುತ್ತ ನನ್ನ ಗಂಡ ಒದ್ದ ಕಡೆಯಲ್ಲೆಲ್ಲ ತುಟಿಗಳನ್ನೊ ತ್ತಿದೆ. ನನ್ನ ಅಭಿಮಾನ, ವಾತ್ಸಲ್ಯ ಪ್ರೇಮಕ್ಕೆ, ಅಮೂಲ್ಯವಾದ ನನ್ನ ಚರ್ಯೆಗೆ ಕೃತಜ್ಞತೆ ಹೇಳಲೆನ್ನುವಂತೆ ಪಾದಗಳ ಬಳಿ ಒರಗುತ್ತಿದ್ದ ನನ್ನನ್ನು ಮೇಲೆಬ್ಬಿಸಿ ಗಟ್ಟಿಯಾಗಿ ತಬ್ಬಿಕೊಂಡ.

"ಅದಕ್ಕೇ ಸ್ತ್ರೀಯರೆಲ್ಲ ಒಳ್ಳೆಯವರೇ" ಎಂದ.ಅದೇ ಅವನು ನನ್ನೊಂದಿ ಗಾಡಿದ ಮೊದಲನೆ ಮಾತು.

ಅನುಮಾನ ಪಿಶಾಚಿ ಗಂಡನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದರೆ, ಅವನೊಂದಿಗೆ ಪೂರ್ತಿ ಸುಖವನ್ನನುಭವಿಸಬೇಕೆನ್ನಿಸಿ ತಲೆ ಮೇಲೆತ್ತಿ ಅವನ ತುಟಿಗಳನ್ನು ಮೃದುವಾಗಿ ಕಚ್ಚಿದೆ. 'ಅಬ್ಬಾ' ಎಂದ. ಸುಖಕರ ನೋವು ಎನ್ನುವುದು ಹೇಗಿರುತ್ತದೆನ್ನುವುದನ್ನು ಅವನ ಮುಖ ನೋಡಿ ತಿಳಿದುಕೊಂಡೆ.

ಇನ್ನು ತವಕವನ್ನು ತಾಳಲಾರೆನೆನ್ನುವಂತೆ ತನ್ನ ಕೈಗಳಲ್ಲಿ ನನ್ನನ್ನು ಬಂಧಿಸಿ, ತುಟಿಗಳ ಮೇಲೆ ಗಟ್ಟಿಯಾಗಿ ತುಟಿಗಳನ್ನೊತ್ತಿ, ಕೋರಿಕೆ ವಿಜೃಂಭಿಸುತ್ತಿರುವಂತೆ ನನ್ನನ್ನು ಹಾಗೆಯೇ ಮೇಲೆತ್ತಿದ. ಮುಂಗಾಲುಗಳ ಮೇಲೆ ನಿಂತು ಅವನ ಮುಖದ ಮೇಲೆ ನಾಲಿಗೆಯಿಂದ ತೀಡಿದೆ. ನಾಲಿಗೆಯನ್ನು ಅವನ ಬಾಯೊಳಗೆ ಸೇರಿಸಿದೆ. ಸ್ತನಗಳನ್ನು ಅವನ ಎದೆಗೆ ಬಲವಾಗಿ ಅದುಮಿದೆ. ನನ್ನ ಬೆನ್ನಿನ ಸುತ್ತಲೂ ಹೆಣೆದುಕೊಂಡಿದ್ದ ಅವನ ಕೈಗಳು ಇನ್ನಷ್ಟು ಕೆಳಗಿಳಿದು ಸೊಂಟದ ಬಳಿ ನಿಂತುಬಿಟ್ಟವು.

ಮಳೆ ಜೋರಾಯ್ತು, ತೂತು ಬಿದ್ದ ಛತ್ರಿಯಂತಿದ್ದ ಹುಣಸೇಮರದ ಕೆಳಗಾಗಲೇ ನೀರು ನಿಂತುಬಿಟ್ಟಿತ್ತು. ನಾವಿಬ್ಬರೂ ಪೂರ್ತಿಯಾಗಿ ಒದ್ದೆಯಾಗಿಬಿಟ್ಟಿವು, ಆದರೆ ಅದು ಪೂರ್ಣ ಬಟಾಬಯಲು ಪ್ರದೇಶವೆಂಬುದಾಗಲಿ, ನಾವು ಮಳೆಯಲ್ಲಿ ತೊಯ್ದು ಒದ್ದೆಯಾಗಿಬಿಟ್ಟಿರುವೆವೆಂದಾಗಲಿ, ನಾವಿಬ್ಬರೂ ಪರಪುರುಷ-ಪರಸ್ತ್ರೀಯರೆಂದಾಗಲಿ ನಮ್ಮ ನೆನಪಿಗೆ ಬರಲಿಲ್ಲ. ಪರಸ್ಪರರನ್ನು ಗಾಢವಾಗಿ ಬಯಸುತ್ತಿರುವ ಸ್ತ್ರೀ-ಪುರುಷರೆನ್ನುವ ಭಾವನೆಯೊಂದನ್ನು ಬಿಟ್ಟರೆ ಬೇರಾವುದರ ಕಲ್ಪನೆಯೂ ಇರಲಿಲ್ಲ.ಅದ್ವೈತವೆಂದರೆ ಇದೇ ಇರಬೇಕು ಎಂದು ನನಗನ್ನಿಸಿತು.

ಮಳೆ ಹನಿಯೊಂದಿಗೆ ಗಾಳಿಯೂ ಬೀಸುತ್ತಿದ್ದುದರಿಂದ ಚಳಿ ನಡುಗಿಸುತ್ತಿತ್ತು. ಆದರೆ ನನ್ನ ಮುಖದಲ್ಲಿ ಮುಖವಿಟ್ಟಿದ್ದ ಅವನ ಉಚ್ಛ್ವಾಸ, ನಿಶ್ವಾಸ ಬೆಚ್ಚಗೆ ತಾಕುತ್ತಿತ್ತು. ಅವನ ವಕ್ಷಸ್ಥಳ ಅಗ್ನಿಕುಂಡವೆಂದೆನಿಸುತ್ತಿತ್ತು. ಅವನ ಸೊಂಟ ಅಗ್ಗಿಷ್ಟಿಕೆಯಂತೆ ಭಾಸವಾಗುತ್ತಿತ್ತು. ನನ್ನನ್ನು ತಿಕ್ಕಿಕೊಳ್ಳುತ್ತಿದ್ದ ಅವನ ಕಾಲುಗಳು ಸುಡುತ್ತಿರುವಂತೆ ಭ್ರಮೆಯುಂಟಾಗುತ್ತಿತ್ತು.

ಬೆಚ್ಚ-ಬೆಚ್ಚಗಿದ್ದ ಮತ್ತೆ ಮತ್ತೆ ಅವನನ್ನು ಇನ್ನಷ್ಟು ನನ್ನೊಳಗೆ ಸೇರಿಸಿಕೊಳ್ಳಬೇಕೆನ್ನುವ ಆಕಾಂಕ್ಷೆಯಿಂದ ಮತ್ತಷ್ಟು ಗಟ್ಟಿಯಾಗಿ ಅದುಮಿಕೊಂಡೆ. ಇನ್ನು ಆ ರೀತಿ ಸಾಧ್ಯವಾಗುವುದಿಲ್ಲವೆನಿಸಿತನ್ನುವಂತೆ, ಅವನು ಮೆಲ್ಲಗೆ ಅತ್ತಿತ್ತ ಮಿಸುಕಾಡಿ, ನನ್ನನ್ನು ಹಿಡಿತದಿಂದ ಸಡಲಿಸಿ, ಮರದ ಬುಡದಲ್ಲಿ ಕುಳಿತುಕೊಂಡು, ನನ್ನ ಕೈಗಳನ್ನು ಹಿಡಿದೆಳೆದ. ಕೆಳಗೆಲ್ಲ ಕೆಸರು ಕೆಸರಾಗಿದ್ದರೂ ನನಗದರ ಪರವೆ ಇರಲಿಲ್ಲ. ಒಂಚಿಷ್ಟೂ ಸಂಕೋಚಿಸದೆ ಅವನ ಪಕ್ಕದಲ್ಲಿ ಕುಳಿತುಕೊಂಡೆ. ಕೋರಿಕೆ ತುಂಬಿದ ಕಣ್ಣುಗಳಿಂದ ನನ್ನನ್ನು ನೋಡುತ್ತ ಅವನು ನನ್ನ ಮೇಲೆ ಒರಗಿದ. ನನ್ನ ಮೇಲೆ, ನನ್ನ ವಯಸ್ಸಿನ ಮೇಲೆ, ನನ್ನ ಕನಸುಗಳ ಮೇಲೆ, ನನ್ನ ಸೊಗಸಿನ ಮೇಲೆ, ನನ್ನ ಅವಯುವಗಳ ಮೇಲೆಅವನು

ಸಂಪೂರ್ಣ ನಿಯಂತ್ರಣವನ್ನು ಸಾಧಿಸಿದ.

ಆ ನಂತರ ಹತ್ತು ನಿಮಿಷಗಳ ಕಾಲ ಮಳೆ ಸುರಿಯಿತೋ ಇಲ್ಲವೋ ಎನ್ನುವುದು ನನಗೆ ಇಂದಿಗೂ ನೆನಪಿಲ್ಲ.

ನನ್ನ ಸುತ್ತಲೂ ಗಮ್ಮತ್ತಾಗಿ ಆವರಿಸಿಕೊಂಡಿದ್ದ ಮತ್ತಿನಿಂದ ಚೇತರಿಸಿ ಕೊಂಡು ಆನಂದದಿಂದ ಬೀಳ್ಕೊಡುಗೆ ಪಡೆದು ಮನೆಯತ್ತ ಹೊರಟೆ. ಮನೆಗೆ ಬಂದ ಮೇಲೂ ಸುಂದರವಾದ ಆ ಅನುಭವವನ್ನು ನೆನಪಿಗೆ ತರುವ ಮಳೆಯಲ್ಲಿ ತೊಯ್ಯುತ್ತ ಇರಬೇಕೆನಿಸಿತು.

ಸಾಯಂಕಾಲ ಆರುಗಂಟೆಗಳಾಗುತ್ತಿರುವಾಗ ನನ್ನ ಗಂಡಮನೆಗೆ ಬಂದ. ಚಪ್ಪಲಿಯನ್ನೂ ಕಳಚದೆ ಶುರು ಮಾಡಿದ. "ಅವನು ಏನಂತಿದಾನೆ? ಪೆಟ್ಟು ತಿಂದರೂ ಅಂತಹವನಿಗೆ ಬುದ್ಧಿ ಬರುವುದಿಲ್ಲ. ನೀನೂ ಆ ಮೂರ್ಖ್ಹಾಳನಿಗೆ ಪ್ರೋತ್ಸಾಹ ನೀಡುತ್ತಿದ್ದೀಯೆಂದು ನನಗನ್ನಿಸ್ತಿದೆ. ಪ್ರೇಮಪತ್ರವನ್ನೇನಾದರೂ ಬರೆದಿದ್ದಾನೆಯೆ?"

ನಾನು ಅವನ ಮಾತಿಗೆ ಅಡ್ಡ ಬರುತ್ತ, 'ಪ್ರೇಮ ಪತ್ರ ಏನೂ ಬರೆದಿಲ್ಲ ಆದರೆ ಆಡಬೇಕಾದ ಮಾತುಗಳನ್ನೆಲ್ಲ ನಮ್ಮಿಬ್ಬರ ಶರೀರಗಳು ಮಾತಾಡಿ ಕೊಂಡಾಯ್ತು' ಎಂದೆ.

ಆಗ ನನ್ನ ಗಂಡನ ಮುಖನೋಡಬೇಕಿತ್ತು. ಇಂತಹುದೆಂದು ವರ್ಣಿಸ ಲಾಗದ ಭಾವನೆ ಮುಖವನ್ನು ಇಳಿ ಹಾಕಿಸಿತು. ನಾನು ಮುಂದುವರಿಸಿದೆ.

"ನಿನ್ನಂತಹ ಅನುಮಾನ ಪಿಶಾಚಿ ಗಂಡನಿಗೆ ಇಂತಹ ಮಾತುಗಳು ಅರ್ಥವಾಗುವುದಿಲ್ಲ. ಬಿಡು. ಒಟ್ಟಿನಲ್ಲಿ ನಿನ್ನ ಅನುಮಾನ ನಿಜವಾಯ್ತು. ಹೆಂಡತಿ ಕೆಟ್ಟು ಹೋಗುವುದಕ್ಕಿಂತಲೂ, ಅನುಮಾನ ನಿಜವಾಯಿತೆನ್ನುವ ಆನಂದವೇ ನಿನ್ನಂತಹವನಿಗೆ ಹೆಚ್ಚು ಎಂದುಕೊಳ್ಳುತ್ತೇನೆ. ನಿನ್ನಂತಹವರು ತಮ್ಮ ಅನುಮಾನ ನಿಜವಾಗುವವರೆಗೂ ಯಾವುದಾದರೊಂದು ರೀತಿಯಲ್ಲಿ ಹೆಂಡಂದಿರನ್ನು ಕೆಣಕುತ್ತಲೇ ಇರುತ್ತಾರೆ. ನನ್ನ ವಿಷಯದಲ್ಲಿಯೂ ಹಾಗೇ ಆಯ್ತು. ನೀನೇ ಆ ಆನಂದನನ್ನು ನೋಡುವಂತೆ ಮಾಡಿದೆ. ಸನ್ನೆ ಮಾಡ ಬೇಕೆನ್ನುವ ಬಯಕೆಯನ್ನು ಪ್ರೇರೇಪಿಸಿದೆ. ಕೊನೆಗೆ ಅವನೊಂದಿಗೆ ಸುಖ ಹಂಚಿಕೊಳ್ಳುವ ಹುಚ್ಚು ಕೋರಿಕೆ ಕೂಡ ಹುಟ್ಟಿಕೊಳ್ಳುವಂತೆ ಮಾಡಿದೆ. ಇನ್ನು ನೀನು ಹೇಗಾದರೂ ಸಾಯಿ–ನನಗೆ ಅನಾವಶ್ಯಕ. ನಾನೀಗಲೇ ಹೊರಟು....ಹೋಗ್ತಿದೀನಿ.. ....'ಎಂದು ಉಟ್ಟ ಬಟ್ಟೆಯಲ್ಲಿಯೇ ಮನೆಯಿಂದ ಹೊರಬಿದ್ದೆ.

ಊರು ದಾಟಿದ ನಂತರ ಎಲ್ಲಿಗೆ ಹೋಗಬೇಕೆಂದು ಹೊಳೆಯಲಿಲ್ಲ.

ಅಂತಹವನೊಂದಿಗೆ ಬಾಳುವುದು ಅಸಹನೀಯವೆಂದುಕೊಂಡು ಹೊರಬಿದ್ದಿನಾದರೂ ಎಲ್ಲಿಗೆ ಹೋಗಬೇಕೆಂಬುದು ತಿಳಿಯಲಿಲ್ಲ. ತವರು ಮನೆಗೆ ಹೋಗಿ ಪುರಸೊತ್ತಾಗಿ ಯೋಚಿಸಿದರಾಯಿತೆಂದು ಬಸ್‌ಸ್ಟ್ಯಾಂಡಿನತ್ತ ಹೆಜ್ಜೆ ಹಾಕಿ, ಬಸ್‌ಗೋಸ್ಕರ ಕಾಯುತ್ತ ಒಬ್ಬಳೇ ನಿಂತೆ.

ಸ್ವಲ್ಪ ಹೊತ್ತಿನ ನಂತರ ಯಾರೋ ಬರುತ್ತಿರುವರೆನ್ನಿಸಿ ಊರಿನತ್ತ ತಿರುಗಿ ನೋಡಿದೆ. ಏದುಸಿರು ಬಿಡುತ್ತ ಓಡಿ ಬರುತ್ತಿದ್ದ ಆನಂದ್ ಕಾಣಿಸಿದ ನಾನು ಗಂಡನನ್ನು ಬಿಟ್ಟು ಹೋಗುತ್ತಿರುವ ಸುದ್ದಿ ಆಗಲೇ ಊರಿನಲ್ಲೆಲ್ಲ ಹರಡಿಕೊಂಡಂತಿತ್ತು. ವಿಷಯ ಗೊತ್ತಾಗುತ್ತಿದ್ದಂತೆಯೇ ಓಡಿಬಂದವನಂತಿದ್ದ. ಆಯಾಸವಿನ್ನೂ ಕಡಿಮೆಯಾಗಿರಲಿಲ್ಲ.

'ಎಲ್ಲಿಗೆ' ಎಂದು ಕೇಳಿದ.ಅವನ ಧ್ವನಿಯಲ್ಲಿ ಗಾಬರಿ, ಕಾತುರ ಇದ್ದವು.

'ತವರು ಮನೆಗೆ'

'ಅಂದ್ರೆ?'

'ಶಾಶ್ವತವಾಗಿ ಹೊರಟು.... ಹೋಗ್ತಿದೀನಿ . .... ಮದುವೆಯ ಬಂಧನ ಹರಿದುಕೊಂಡು.'

'ಎಲ್ಲಿಗೆ ಹೋಗ್ತಿದೀಯ?'

'ಹೇಳಿದೆನಲ್ಲ ತವರುಮನೆಗೆ.'

'ಆದ್ರೆ . '

'ಮತ್ತಿನ್ನೇನು ಮಾಡಲಿ? ಹೋಗ್ಲಿ, ನಿಮ್ಮ ಮನೆಗೆ ಬರ್‍ಲಾ?' ಎಂದು ನಗುತ್ತ ಕೇಳಿದೆ. ಆನಂದ್ ಅದಕ್ಕುತ್ತರಿಸದೆ ತಲೆ ತಗ್ಗಿಸಿದ.

"ನೋಡಿದ್ಯಾ, ನೀನು ಬಾಯಿ ಮಾತಿಗಾದರೂ ಬಾ ಅಂತ ಅನ್ಲಿಲ್ಲ, ಸಮಾಜದಲ್ಲಿ ಮಾನ, ಮರ್ಯಾದೆ, ಪ್ರತಿಷ್ಠೆ, ಹೆಂಡತಿ– ಇನ್ನೂ ಇರುವ ವಿಧ ವಿಧವಾದ ಸಂಬಂಧಗಳನ್ನು ನನಗೋಸ್ಕರ ಬಿಟ್ಟುಕೊಡಲಾರೆ.. ."

ಅವನು ಏನೂ ಮಾತಾಡಲಿಲ್ಲ. ದೂರದಲ್ಲಿ ಬಸ್ಸು ಬರುವುದುಕಾಣಿಸಿತು.

'ಹೋಗ್ಬರ್‍ತೀನಿ ಆನಂದ್. ನೀನು ನನ್ನೊಂದಿಗೆ ಆಡಿದ ಮೊದಲ ವಾಕ್ಯ ಏನು ಗೊತ್ತೇ? ಸ್ತ್ರೀಯರೆಲ್ಲ ಒಳ್ಳೆಯವರು ಎಂಬುದು. ನಾನು ನಿನ್ನೊಂದಿಗೆ ಹೇಳುತ್ತಿರುವ ಕೊನೆಯ ವಾಕ್ಯ ಏನೆಂದು ಊಹಿಸಬಲ್ಲೆಯಾ? ಪುರುಷರೆಲ್ಲ ಕೆಟ್ಟವರೇ ಅನ್ನೋದು.'

ಆನಂದ್ ಅಳುಮುಖ ಮಾಡಿದ. ಅವನನ್ನು ಆ ರೀತಿ ನೋಡಲು ಇಷ್ಟವಾಗದೆ, 'ಆದರೆ ಆ ಪುರುಷರಲ್ಲಿ ನೀನಿಲ್ಲ ಬಿಡು' ಎಂದೆ.

ಬಸ್ಸು ಬಂದು ನಿಂತಿತು........ ಅದರಲ್ಲಿ ಹತ್ತಿ ಆನಂದನತ್ತ ಕೈಬೀಸಿದೆ,

ಬಸ್ಸು ಅಲ್ಲಿಂದ ಕಣ್ಮರೆಯಾಗುವವರೆಗೂ ಆನಂದ್ ಅಲ್ಲಿಯೇ ನಿಂತಿದ್ದ. ಆ ನಂತರ ಆರು ತಿಂಗಳಿರಬೇಕು. ನನ್ನ ಗಂಡನು ಹಾವಿನಿಂದ ಕಚ್ಚಿಸಿಕೊಂಡು ಸತ್ತುಹೋದ. ಆ ರೀತಿ ಆ ಬಂಧನ ಶಾಶ್ವತವಾಗಿ ಕಿತ್ತುಹೋಯ್ತು."

ಎಂದು ಹೇಳುವುದನ್ನು ಮುಗಿಸಿದ ವಿಲಾಸಿನಿ ಸುಮ್ಮನೆ ಆಕಾಶವತ್ತ ನೋಡಿದಳು. ತುಂಬು ಚಂದಿರ ಆಕಾಶದ ನಟ್ಟನಡುವೆ ಇದ್ದ.

ಗೋಪಾಲಕೃಷ್ಣನೂ ಮೌನವಾಗಿದ್ದ. ತನ್ನಿಂದಾಗಿ ಅವಮಾನಕ್ಕೀಡಾದ ವ್ಯಕ್ತಿಯನ್ನು ಸಮಾಧಾನಪಡಿಸಲು ತನ್ನನ್ನು ತಾನೇ ಅರ್ಪಿಸಿಕೊಂಡು, ತವರುಮನೆ ಸೇರಿದ ಅವಳ ವ್ಯಕ್ತಿತ್ವ ಉನ್ನತವಾದುದೆಂದು ಅವನಿಗನ್ನಿಸಿತು. ಅವಳ ದುರದೃಷ್ಟಕ್ಕೆ ಮನಸ್ಸು ಕಲಕಿದಂತಾಗಿ ಆರ್ದ್ರಗೊಂಡಿತು.

ಮೌನವಾಗಿಯೇ ಅವಳ ಕೈ ಹಿಡಿದು ಮೇಲೆಬ್ಬಿಸಿ ಮಂಚದ ಬಳಿಗೆ ಕರೆತಂದ. ಇಬ್ಬರೂ ಮಲಗಿಕೊಂಡರು. ಅವನ ಜೀವನದಲ್ಲಿ ತುಂಬಿಕೊಂಡಿರುವ ವಿಷಾದವನ್ನೆಲ್ಲ ಸ್ವಲ್ಪ ಸಮಯದ ಮಟ್ಟಿಗಾದರೂ ಮರೆತು ಹೋಗುವಂತೆ ಮಾಡಬೇಕೆಂದು ನಿರ್ಧರಿಸಿಕೊಂಡ.ಅವಳು ಹೇಳಿದುದನ್ನೆಲ್ಲ ತಾತ್ಕಾಲಿಕವಾಗಿ ಮನಸ್ಸಿನಿಂದ ಕಿತ್ತು ಹಾಕಿದ. ಅವಳನ್ನು ಹತ್ತಿರಕ್ಕೆಳೆದುಕೊಂಡ.ಅವಳು ಒಂದು ಕ್ಷಣ ಬೆಚ್ಚಿಬಿದ್ದರೂ ನಂತರ ಸುಧಾರಿಸಿಕೊಂಡಳು.

ಅವಳ ತುಟಿಗಳ ಮೇಲೆ ಗಾಢವಾಗಿ ಮುತ್ತಿಟ್ಟು ಸೆರಗನ್ನು ತೊಲಗಿಸಲು ಹೋದ. ಅವಳು ನಾಚಿಕೆಯಿಂದ ಮುದುಡಿದುಕೊಂಡು ಅವನ ಪ್ರಯತ್ನಕ್ಕೆ ತಡೆ ಒಡ್ಡಿದಳು. ಅವಳ ಹಿಂಜರಿತವನ್ನು ತೊಡೆಯಬೇಕೆಂದುಕೊಂಡ. ಬಹುದಿನಗಳ ನಂತರ ಪುರುಷನ ಸಾಮೀಪ್ಯ ಲಭಿಸಿದ್ದರಿಂದ ಅವಳು ಹೆಚ್ಚು ನಾಚುತ್ತಿರುವಳೆಂಬ ವಿಷಯವನ್ನು ಗ್ರಹಿಸಿದ ಅವಳ ಮೇಲೆ ಒರಗಿ, "ನಾವು ತಮಾಷೆಯ ಆಟವೊಂದನ್ನು ಆಡೋಣ್ವಾ" ಎಂದು ಕೇಳಿದ.

ಅವಳಲ್ಲಿ ಉತ್ಸುಕತೆ ಮೂಡಿತು. "ಆ ಆಟ ಯಾವುದು?"

"ನಿನಗೆ ಮೈಮೇಲೆ ಎಲ್ಲೆಲ್ಲಿ ಮಚ್ಚೆಗಳಿವೆ ಅನ್ನೋದನ್ನು ಹೇಳುತ್ತೇನೆ." ಅವಳು ಆಶ್ಚರ್ಯಗೊಂಡು, "ನೋಡದೆಯೆ ಹೇಳ್ತೀಯಾ" ಎಂದಳು.

"ಊಂ.. ."

"ಹಾಗಾದ್ರೆ ಸರಿ, ಹೇಳಿ" ಎಂದಳು ವಿಲಾಸಿನಿ.

"ನಿನ್ನ ಕುತ್ತಿಗೆಯ ಹಿಂದೆ ದೊಡ್ಡದೊಂದು ಹುಟ್ಟು ಮಚ್ಚೆ ಇದೆ ಹೌದು ತಾನೆ" ಎಂದ ಗೋಪಾಲಕೃಷ್ಣ.ತನಗೆ ಅಲ್ಲಿ ಹುಟ್ಟು ಮಚ್ಚೆ ಇದೆಯೋ ಇಲ್ಲವೋ ಎನ್ನುವುದು ಅವಳಿಗೆ ಗೊತ್ತಿರಲಿಲ್ಲ. ಎಂದೂ ಕನ್ನಡಿಯನ್ನು ಹಿಂದೆ ಇಟ್ಟುಕೊಂಡು ನೋಡಿಕೊಂಡಿರಲಿಲ್ಲ. ಯಾರೂ ಹೇಳಿರಲೂ ಇಲ್ಲ. ಅದಕ್ಕೇ

ಹೌದು ಎನ್ನಲಿಲ್ಲ, ಇಲ್ಲ ಎನ್ನಲಿಲ್ಲ. ಸುಮ್ಮನೇ ಅವನತ್ತ ನೋಡಿದಳು.

"ನಿಜವಾಗ್ಲೂ ಇದೆ. ಬೇಕಾದ್ರೆ ನೋಡ್ಕೋ."

"ಹೇಗೆ ನೋಡ್ಕೊಳ್ಳಲಿ?"

"ನಾನು ನೋಡಿ ಹೇಳ್ತೀನಿ" ಎಂದು ಅವಳ ಕತ್ತಿನ ಮೇಲೆ ಬಾಗಿ," ಇದೋ, ಇಲ್ಲಿದೆ. ನಾನು ಗೆದ್ದೆ, ಆಟದ ನಿಯಮದ ಪ್ರಕಾರ ಯಾರು ಗೆಲ್ಲುತ್ತಾರೋ ಅವರು ಹೇಳಿದಂತೆ ಇನ್ನೊಬ್ಬರು ಕೇಳಬೇಕು ಎಂದ. ಸರಿಎನ್ನುವಂತೆ ತಲೆಯಾಡಿಸಿದಳು.

"ನಿನ್ನ ತಲೆಗೂದಲು ಬಿಚ್ಚು" ಎಂದ. ಇಷ್ಟೇನಾ?ಎನ್ನುವಂತೆ ತುರುಬಿನ ಗಂಟು ಬಿಚ್ಚಿದಳು. ಕಪ್ಪು ಮೇಘಗಳ ತೆರೆಯಂತೆ ಕೂದಲು ಭುಜದ ಮೇಲೆ ಹರಡಿಕೊಂಡಿತು.

"ಮತ್ತೆ ಎರಡನೇ ಮಚ್ಚೆ ಎಲ್ಲಿದೆ ಅನ್ನೋದನ್ನ ಹೇಳು.ಈ ಸಲ ಖಂಡಿತವಾಗಿ ನೀನು ಸೋಲ್ತೀಯ" ಎಂದಳು.

"ನಿನ್ನ ಎದೆ ಮೇಲೆ ಇದೆ."

ಅವನು ಸೋತದ್ದಕ್ಕೆ ಅವಳಿಗೆ ತುಂಬಾ ಸಂತೋಷವೆನಿಸಿತು. "ನನಗಲ್ಲಿ ಮಚ್ಚೆ ಇಲ್ಲ" ಎಂದಳು ಸಂತೋಷದಿಂದ.

"ಎಲ್ಲಿ ತೋರ್ಸು"

ತಾನು ಗೆದ್ದಿರುವುದನ್ನು ಸಾಬೀತು ಮಾಡಬೇಕೆನ್ನುವ ಹಂಬಲದಿಂದ ಅವಳು ಸರಸರನೆ ತನ್ನ ಕುಪ್ಪಸ ಬಿಚ್ಚಿದಳು. ಆಚ್ಛಾದನೆ ಇಲ್ಲದ ಆ ಭಾಗ ಸಮುದ್ರದ ಅಲೆಗಳು ಉಕ್ಕುತ್ತಿರುವಂತಿತ್ತು. ಬೆಳದಿಂಗಳು ಕೂಡ ಕುಚಾಗ್ರಗಳ ಮೇಲೆ ಬಿದ್ದು ಕಪ್ಪಗೆ ಬಣ್ಣ ಮಾರ್ಪಟ್ಟಿತು.

ಅವನು ಪರಿಶೀಲಿಸಿ ನೋಡಿ, "ನೀನು ಹೇಳಿದ್ದು, ಸರಿ ನೀನೇ ಗೆದ್ದೆ.ನೀನು ಏನು ಮಾಡೆಂದರೆ ಅದನ್ನು ಮಾಡ್ತೀನಿ" ಎಂದ.

ಅವಳು ಒಂದು ಕ್ಷಣ ಯೋಚಿಸಿ, "ಸ್ತ್ರೀಯರು ಯಾವಾಗೆಂದರೆ ಆವಾಗ ವರ ನೀಡೆಂದು ಕೇಳುವುದಿಲ್ಲ. ಸಮಯ, ಸಂದರ್ಭ ಬಂದಾಗ ಮಾತ್ರ ಅವುಗಳನ್ನು ಕೇಳುತ್ತಾರೆಂದು ನಮ್ಮ ಪುರಾಣಗಳಲ್ಲೇಇದೆಯಲ್ಲ. ಆದ್ದರಿಂದ ನಾನು ಕೂಡ ಸಮಯ ಬಂದಾಗ ಕೇಳ್ತೀನಿ" ಎಂದಳು.

"ಸರಿ ಹಾಗೇ ಆಗ್ಲಿ."

"ನಂತರ, ಇನ್ನೆಲ್ಲಿ ಮಚ್ಚೆ ಇದೆ ಅನ್ನೋದನ್ನ ಹೇಳು."

"ಬಲಗಾಲಿಗೆ ಮೊಣಕಾಲಿನ ಕೆಳಗೆ ಇದೆ."

"ಅವಳು ಸಂಭ್ರಮಾಶ್ಚರ್ಯದಿಂದ, "ಸರಿಯಾಗೇ ಹೇಳಿದೆಯಲ್ಲ..." ಎಂದಳು.

"ಮತ್ತೆ,ಗೋಪಾಲಕೃಷ್ಣ ಅಂದ್ರೆ ಏನಂದ್ಕೊಂಡಿದೀಯ........" ಎಂದು ಠೋರಿಕೆಯ ಜಂಭದಿಂದ ನುಡಿದ.

"ಹೇಗೆ ಗೊತ್ತಾಯ್ತು" ಎಂದು ಕಣ್ಣರಳಿಸಿ ಕೇಳಿದಳು.

"ಎಲ್ಲಾ ತಾಯತ್ತಿನ ಮಹಿಮೆ" ಎನ್ನುತ್ತ ಕಣ್ಣು ಮಿಟುಕಿಸಿದ ಗೋಪಾಲಕೃಷ್ಣ. "ಮತ್ತೆ ನಾನು ಹೇಳಿದಂತೆ ಮಾಡ್ತೀಯ?"

"ತಪ್ಪಾಯ್ತೆ ಸರಿ, ಏನ್ಮಾಡ್ಬೇಕು ಹೇಳು."

"ಹುಟ್ಟುಡುಗೆಯಲ್ಲಿ ನನ್ನೆದುರು ನಿಂತ್ಕೊಬೇಕು."

ಅವಳಿಗೆ ಅರ್ಥವಾಗಲಿಲ್ಲ. "ಹಾಗಂದ್ರೆ ಹ್ಯಾಗೆ?"

"ಹೀಗೆ" ಎನ್ನುತ್ತ ಅವನು ಸೀರೆ ಸೆರಗು ಹಿಡಿದೆಳೆದ. ಮರುಕ್ಷಣದಲ್ಲಿ ಅವಳು ಹುಟ್ಟುಡುಗೆಯಲ್ಲಿ ನಿಂತಳು. ಬೆಳದಿಂಗಳಿನಲ್ಲಿ ಅವಳ ಶರೀರ ಶೃಂಗಾರ ಪುಷ್ಪಪರಾಗವನ್ನು ಸವರಿಕೊಂಡಿರುವಳೆನ್ನುವಂತೆ ಮಿನುಗುತ್ತಿತ್ತು. ಅವನ ಆಕಾಂಕ್ಷೆಯನ್ನು ಕಣ್ಣುಗಳಲ್ಲಿ ತುಂಬಿಕೊಂಡು, ಅವಳಲ್ಲಿ ಒಂದಾಗಬೇಕೆಂದು ಮುಂದೆ ಬಾಗಿದ.

ಅವಳು ಅದನ್ನು ಗಮನಕ್ಕೆ ತಾರದೆ, "ಹೌದೂ, ನನ್ನ ಮೊಣಕಾಲಿನ ಮೇಲೆ ಮಚ್ಚೆ ಇದೇಂತ ಹೇಗೆ ತಿಳ್ಕೊಂಡೆ" ಎಂದು ಕೇಳಿದಳು.

ಆ ಗುಟ್ಟು ಹೇಳದಿದ್ದರೆ ಅವಳಲ್ಲಿನ ರಹಸ್ಯವನ್ನು ಶೋಧಿಸಲು ಸಹಕರಿಸುವುದಿಲ್ಲವೆಂಬುದನ್ನು ಗ್ರಹಿಸಿ, "ನನ್ನ ಬಳಿ ಯಾವ ಮಹಿಮೆಯೂ ಇಲ್ಲ. ಸುಮ್ಮನೇ ಊಹಿಸಿ ಹೇಳಿದೆ. ಬಟ್ಟೆಬಿಚ್ಚಲು ನಾಚುತ್ತಿದ್ದ ನಿನ್ನನ್ನು ಹೇಗಾದರೂ ಮಾಡಿ, ಆ ನಾಚಿಕೆಯಿಂದ ಹೊರಗೆಳೆಯಬೇಕೆಂದು ಉಪಾಯಹೂಡ್ದೆ" ಎಂದ.

ಆಗ ಅವಳಿಗೆ ತಾನು ನಗ್ನವಾಗಿರುವೆನೆಂಬುದು ನೆನಪಾಯ್ತು. ತಟಕ್ಕನೆ ಕಾಲುಗಳನ್ನು ಹಿಂದಕ್ಕೆಳೆದುಕೊಂಡು ಮೈಯನ್ನು ಮುದುಡಿಕೊಳ್ಳಲು ಪ್ರಯತ್ನಿಸಿದಳು.

"ಇದೋ- ಈ ನಾಚಿಕೆಯನ್ನು ಹೋಗಲಾಡಿಸಲೆಂದೇ ನಾನು ಇಷ್ಟೆಲ್ಲ ಉಪಾಯ ಮಾಡಿದ್ದು. ಸ್ತ್ರೀಯ ಚೇಷ್ಟೆಗಳಿಂದ ಅವಳು ಎಂತಹವಳೋ, ಏನು ಬೇಕೆಂದು ಬಯಸುತ್ತಾಳೋ ಎಂಬುದನ್ನು ಸುಲಭವಾಗಿ ಗ್ರಹಿಸಬಹುದೆಂದು ವಾತ್ಸಾಯನ ತನ್ನ ಕಾಮಸೂತ್ರಗಳಲ್ಲಿ ಹೇಳಿದ್ದಾನೆ."

ಅವಳು ಸ್ವಲ್ಪ ನಿರಾಳಗೊಳ್ಳಲು ಪ್ರಯತ್ನಿಸುತ್ತಿರುವವಳಂತೆ ಚಲಿಸಿದಳು. ಅವನು ಅವಳನ್ನು ಗಟ್ಟಿಯಾಗಿ ತಬ್ಬಿಕೊಂಡು ಮುತ್ತಿಟ್ಟ. ತುಟಿಗಳು

ಬೇರ್ಪಟ್ಟ ನಂತರ ಅವಳು "ಸಂಪುಟಿಕ" ಎಂದಳು. ಹಾಗೆಂದರೇನು ಎನ್ನುವಂತೆ ಹುಬ್ಬು ಕುಣಿಸಿದ ಗೋಪಾಲಕೃಷ್ಣ.

"ನಿಮ್ಮ ಗುರು ವಾತ್ಸಾಯನ ಹೇಳಿದುದೇ- ಬಿಗಿಯಪ್ಪುಗೆಯಲ್ಲಿ ನೀಡುವ ಮುತ್ತಿಗೆ ಆತ "ಸಂಪುಟಿಕ" ಎಂದು ಹೆಸರು ನೀಡಿದ್ದಾನೆ. ನನ್ನ ಗಂಡನ ಮನೆಯಲ್ಲಿ ಇದ್ದ ಏಕೈಕ ಪುಸ್ತಕ ಕಾಮಸೂತ್ರಗಳು. ನನ್ನ ಗಂಡ ಯಾವುದೋ ಪ್ರವಾಸದ ಮೇಲೆ ಹೋಗಿದ್ದಾಗ ಅದನ್ನು ತಂದಿದ್ದ. ಯಾವಾಗ ಲಾದರೂ ಬೇಸರವಾದಾಗ ಸುಮ್ಮನೇ ಅದರ ಪುಟಗಳನ್ನು ತಿರುವಿ ಹಾಕುತ್ತಿದ್ದೆ "

"ಒಟ್ಟು ಹದಿನಾರು ರೀತಿಯ ಮುದ್ದುಗಳಿರುತ್ತವೆಂದು ಆತ ಹೇಳಿದ್ದಾನೆ. ಅದರಲ್ಲಿ ನಿನಗೆ ಎಂತಹ ಮುದ್ದೆಂದರೆ ಇಷ್ಟ... .. .. " ಎಂದು ಕೇಳಿದ ಗೋಪಾಲಕೃಷ್ಣ.

"ಹದಿನಾರು ರೀತಿಯ ಮುದ್ದುಗಳಿಗಿಂತಲೂ ಹದಿನಾರರಲ್ಲಿನ ಆರು ಎಂದರೆ ತುಂಬಾ ಇಷ್ಟ."

"ಆ ಅಂಕಿ ಅಂದ್ರೆ ಇಷ್ಟವೆ?"

"ಊಂ.. " ಎನ್ನುತ್ತ ಮೃದುವಾಗಿ ನಕ್ಕಳು.

"ಬೆಳದಿಂಗಳಿನಲ್ಲಿ ನಿನ್ನ ನಗು ಹೇಗಿದೆ ಗೊತ್ತಾ?"

"ಹೇಗಿದೆ?"

"ಸಪ್ತವರ್ಣಗಳ ಇಂದ್ರಛಾಪದ ಮೇಲೆ ಕುಳಿತಿರುವ ಅಷ್ಟವಿಧ ನಾಯಕಿಯರಲ್ಲಿ ಒಬ್ಬಳಾದ ವಿರಹೋತ್ಕಂಠಿತೆಯ ಕತ್ತಿನಲ್ಲಿನ ನವರತ್ನ ಖಚಿತ ಹಾರ ಎಳೆಬಿಸಿಲಿನಲ್ಲಿ ತಳಕ್ಕನೆ ಮಿನುಗಿದಂತಿದೆ."

ಅವನ ಹೊಗಳಿಕೆಗೆ ವಿಲಾಸಿನಿ ಎದೆ ಮತ್ತಷ್ಟು ಉಬ್ಬಿತು. ಹಿಗ್ಗಿನಿಂದಲೇ, "ನವರತ್ನದ ಹಾರ ಹೇಗಿರುತ್ತದೆಂಬುದು ನನಗೆ ಗೊತ್ತಿಲ್ಲವಲ್ಲ. " ಎಂದಳು.

"ಕನ್ನಡಿಯ ಮುಂದೆ ನಿಂತು ನಗು ನಿನ್ನ ನಗು ಹೇಗಿರುತ್ತದೋ ಆ ಹಾರ ಕೂಡಹಾಗೇ ಇರುತ್ತದೆ. ಹೌದೂ, ನಿನಗೆ ನವರತ್ನದ ಹಾರವೆಂದರೆ ಇಷ್ಟವೆ?"

"ನವರತ್ನಗಳಿಗಿಂತಲೂ ಆ ಒಂಭತ್ತು ಸಂಖ್ಯೆಯೆಂದರೆ ಇಷ್ಟ. ....." ಎಂದಳು.

"ಈಗ ತಾನೇ ಆರು ಅಂದ್ರೆ ಇಷ್ಟ ಅಂತಂದೆ. ಈಗ ಒಂಭತ್ತೆಂದರೆ ಇಷ್ಟ ಅಂತಿದೀಯ. ಅದರರ್ಥ ಏನು?"

"ಶೃಂಗಾರವೆಲ್ಲ ಆ ಎರಡು ಅಂಕಿಗಳಲ್ಲಿಯೇ ಇದೆ. ಸ್ವಲ್ಪ ಹೊತ್ತಿಗೆ

ಮುಂಚೆ ನಾನು ಗೆದ್ದಾಗ ನನಗೊಂದು ವರ ದಯಪಾಲಿಸಿದ್ದೆ. ಅದನ್ನು ಕೇಳಲು ಸಮಯ ಈಗ ಒದಗಿ ಬಂದಿದೆ. ಕೇಳು ಅಂತೀಯಾ?" ಎಂದು ತುಂಟ ತನದಿಂದ ನೋಡುತ್ತ ಕೇಳಿದಳು.

"ಅಂ...."

"ಆರು, ಒಂಭತ್ತು ಅಂಕಿಗಳನ್ನು ಒಂದೆಡೆ ಸೇರಿಸು . .ಈಗಲೇ" ಎಂದು ನುಡಿದು, ಆ ನಂತರ ಅವನ ಮುಖ ನೋಡಲು ನಾಚಿಕೆ ಅಡ್ಡ ಬಂದುದರಿಂದ ತಲೆಯನ್ನು ಪಕ್ಕಕ್ಕೆ ತಿರುಗಿಸಿಕೊಂಡಳು.

ಅವನಿಗೆ ಅರ್ಥವಾಗಿ ಅವಳ ಕೋರಿಕೆಯನ್ನು ನೆರವೇರಿಸಿದ.

೯

ಹಾಗಾದ್ರೆ ಗೋಪಾಲಕೃಷ್ಣನಿಗೆ ಏನು ಮಾಡಬೇಕೆಂದುಕೊಂಡಿದ್ದೀಯ? "ಮಾಟ ಮಾಡ್ತೀಯ... ಅಥವ ಬಾನುಮತಿ ಮಾಡ್ತೀಯ? ಇಷ್ಟು ದಿನ ಯೋಚಿಸಿ ಏನು ನಿರ್ಧಾರ ತಗೊಂಡಿದೀಯ ..." ಎಂದು ಕೇಳಿದ ದಿವಾನ್ ವೆಂಕಟರಾಮಯ್ಯ ಎದುರಿಗೆ ಹುಲಿರಾಜ ಕುಳಿತಿದ್ದ.

ಆಗ ರಾತ್ರಿ ಒಂಭತ್ತು ಗಂಟೆಯಾಗಿದ್ದಿರಬೇಕು. ಸುತ್ತಲೂ ಹರಡಿದ್ದ ಕತ್ತಲೆ ಭಯಂಕರವಾಗಿತ್ತು. ಪೌರ್ಣಮಿ ಹೋಗಿ ಹತ್ತು ದಿನ ದಾಟಿರಬಹುದೆನ್ನುವುದಕ್ಕೆ ಕುರುಹಾಗಿ ಕತ್ತಲು ದಟ್ಟವಾಗಿ ಹರಡಿಕೊಂಡಿತ್ತು.

"ನಾನು ಅವನಿಗೆ ಮಾಡುವುದು ಮಾಟ ಅಲ್ಲ ಕಾಟ...." ಎಂದು ಗಡುಸಾಗಿ ನುಡಿದ ಹುಲಿರಾಜ.

"ಅಂದ್ರೆ?" ಎಂದು ಕೇಳಿದ ವೆಂಕಟರಾಮಯ್ಯ.

"ಅಂದ್ರೆ ಅವನನ್ನ ಕೊಲ್ಲೋದಿಲ್ಲ. ಕೊಲ್ಲೋದು ನನಗಿಷ್ಟವಿಲ್ಲ. ಅವನು ಯಾವುದಕ್ಕೂ ಉಪಯೋಗವಿಲ್ಲದವನಂತೆ, ಭಿಕ್ಷೆ ಎತ್ತಿ ಬಾಳುವಂತೆ ಹೂವಿನಂತಿರುವ ಅವನ ಬದುಕು ಮುಳ್ಳಿನ ಹಾಸಿಗೆಯಾಗುವಂತೆ ಕಾಟ ಕೊಡಬೇಕು" ಎಂದ ಹುಲಿರಾಜ.

ಪುನರ್ವಸು ತನ್ನನ್ನು ಪ್ರೇಮಿಸುವ ಬದಲಾಗಿ ಗೋಪಾಲಕೃಷ್ಣನ ಮೇಲೆ ಮನಸ್ಸಿದೆ ಎಂದು ಹೇಳಿದ್ದನ್ನು ಅವನಿಂದ ಜೀರ್ಣಿಸಿಕೊಳ್ಳಲಾಗಿರಲಿಲ್ಲ. ಅಸಹನೀಯ ನೋವು ಗುಂಡಿಗೆಯನ್ನು ಛಿದ್ರ ಮಾಡುತ್ತಿತ್ತು. ಹಾಗೆಂದು ಅವನಿಗೆ ಪುನರ್ವಸುಳ ಮೇಲೆ ಕೋಪ ಉಂಟಾಗಿರಲಿಲ್ಲ ಗೋಪಾಲಕೃಷ್ಣ ಇರದಿದ್ದರೆ ಅವಳು ತನ್ನನ್ನು ಪ್ರೇಮಿಸಿರುತ್ತಿದ್ದಳೆಂಬುದು ಅವನ ದೃಢ

ನಂಬಿಕೆಯಾಗಿತ್ತು. ಪ್ರೇಮದಲ್ಲಿರುವ ಶಕ್ತಿಯೇ ಅದು. ನಾವು ಪ್ರೇಮಿಸಿರುವ ವ್ಯಕ್ತಿ ಎಂತಹ ದೊಡ್ಡ ತಪ್ಪು ಮಾಡಿದರೂ ನಾವು ಆ ವ್ಯಕ್ತಿಯನ್ನು ಅಸಹ್ಯಿಸಿಕೊಳ್ಳಲಾರೆವು. ಆ ತಪ್ಪಾಗಲು ಕಾರಣಗಳೇ ಬೇರೆ ಎಂದು ನಂಬಿ, ಆ ಕಾರಣಗಳಿಗೆ ಕಾರಣರಾದವರನ್ನು ದ್ವೇಷಿಸುತ್ತೇವೆ.

ಆದರೆ ಹುಲಿರಾಜ ಅಷ್ಟಕ್ಕೇ ನಿಲ್ಲದೆ, ತಮ್ಮ ಪ್ರೇಮ ಸಫಲಗೊಳ್ಳಲು ಗೋಪಾಲಕೃಷ್ಣನ ಅಡ್ಡಿ ನಿವಾರಿಸಿಕೊಂಡರೆ ಸಾಕೆನ್ನುವ ಭ್ರಮೆಗೀಡಾಗಿ ಬಿಟ್ಟಿದ್ದ. ಅವನ ಮೇಲೆ ಹಗೆ ಸಾಧಿಸುವುದು ಅಷ್ಟು ಸುಲಭವಲ್ಲವೆನ್ನುವುದೂ ಗೊತ್ತಿತ್ತು. ಅದಕ್ಕೇ ಗೋಪಾಲಕೃಷ್ಣನಿಗೆ ಆಂತರಿಕವಾಗಿ ಶತ್ರುವಾಗಿದ್ದ ವೆಂಕಟರಾಮಯ್ಯನೊಂದಿಗೆ ಕೈಮಿಲಾಯಿಸಿದ್ದ.

ವೆಂಕಟರಾಮಯ್ಯ ಗ್ಲಾಸಿನಲ್ಲಿದ್ದ ವಿಸ್ಕಿಯನ್ನೆಲ್ಲ ಒಂದೇ ಗುಟುಕಿಗೆ ಕುಡಿದು ಬಾಯಿ ಒರೆಸಿಕೊಳ್ಳುತ್ತ, "ಹಾಗಾದ್ರೆ ನಿನಗೂ ಒಬ್ಬ ಪ್ರಬಲನಾದ ಶತ್ರು ತಯಾರಾದನೆಂದಾಯ್ತು. ಶತ್ರುವೆನ್ನುವವನು ಇಲ್ಲವಾದರೆ ನಾವು ಯಾವತ್ತಿಗೂ ಹೀಗೆಯೇ ಇದ್ದು ಬಿಡುತ್ತೇವೆ. ಜೀವನದಲ್ಲಿ ದುಪ್ಪಟ್ಟು ಕಷ್ಟಪಟ್ಟು ಅಭಿವೃದ್ಧಿ ಸಾಧಿಸಬೇಕೆಂದರೆ ಶತ್ರುಗಳಿರಬೇಕು. ನಮ್ಮ ಲಕ್ಷ್ಯವನ್ನು ನಿರ್ಧರಿಸುವುದು ಕೂಡ ಶತ್ರುಗಳೇ. ಅಷ್ಟೇ ಅಲ್ಲದೆ, ಆ ಗುರಿಯನ್ನು ಸಾಧಿಸಲು ಬೇಕಾದ ಸ್ಫೂರ್ತಿಯನ್ನು ಒದಗಿಸುವವರೂ ನಮ್ಮ ಶತ್ರುಗಳೇ. ನನಗೆ ಏರ್ಪಟ್ಟ ಮೊದಲ ಶತ್ರುವೇ ನಾನು ಇಷ್ಟರ ಮಟ್ಟಿಗೆ ಸಂಪಾದಿಸಲು ಕಾರಣ. ಆ ಶತ್ರು ಯಾರು ಗೊತ್ತೇ? ನನ್ನ ಹೆಂಡತಿ ಎಂದ.

ಹುಲಿರಾಜ ರೆಪ್ಪೆ ಕೂಡ ಮಿಟುಕಿಸದೆ ಶ್ರದ್ಧೆಯಿಂದ ಕೇಳುತ್ತಿದ್ದ ವೆಂಕಟರಾಮಯ್ಯ ಮುಂದುವರಿಸಿದ.

"ಹೌದು- ನನ್ನ ಮೊದಲ ಶತ್ರು ನನ್ನ ಹೆಂಡತಿಯೇ- ಆಗ ನಾನು ಗೋಪಾಲಕೃಷ್ಣನ ತಂದೆ ಭೂಪತಿ ರಾಜನ ಬಳಿ ದಿವಾನನಾಗಿ ಕೆಲಸ ಮಾಡುತ್ತಿದ್ದೆ. ಅವರು ಕೊಡುತ್ತಿದ್ದ ಸಂಬಳದಲ್ಲಿ ಸುಖವಾಗಿ ಸಂಸಾರ ಮಾಡುತ್ತಿದ್ದೆ. ನನ್ನ ಹೆಂಡತಿ ಬಂದ ಮೇಲೆಯೇ ನನ್ನ ಸಂಸಾರದಲ್ಲಿ ಕಿರಿಕಿರಿ ಪ್ರಾರಂಭವಾಗಿದ್ದು ಅವಳು ಅಸಂತೃಪ್ತಿಯನ್ನು ವ್ಯಕ್ತಪಡಿಸತೊಡಗಿದಳು. ನನ್ನ ಆದಾಯವನ್ನೂ ನನ್ನ ಬದುಕನ್ನೂ ಅಪಹಾಸ್ಯ ಮಾಡತೊಡಗಿದಳು. ಪ್ರತಿಯೊಂದು ಕೆಲಸದಲ್ಲು ನನ್ನ ಕೈಲಾಗದಿರುವಿಕೆಯನ್ನು ಎತ್ತಿ ತೋರಿಸಿ... .... ಪಾಶವಿಕವಾಗಿ ವರ್ತಿಸುತ್ತಿದ್ದಳು.

ಈ ರೀತಿ ಕೆಲಕಾಲ ನಡೆದ ಅವಳು ನಂತರ ನನಗೆ ಕಾಟ ಕೊಡತೊಡಗಿದಳು. ಕತ್ತು ಕುಯ್ದ್ರೋ, ಕುತಂತ್ರ ಮಾಡಿಯೋ ದುಡ್ಡು ಸಂಪಾದಿಸಬೇಕೆಂದು

ಕಾಡತೊಡಗಿದಳು. ಒಂದು ಮಾತಿನಲ್ಲಿ ಹೇಳಬೇಕೆಂದರೆ ನನಗೆ ಮನಃಶಾಂತಿ ಇಲ್ಲದಂತೆ ಮಾಡಿಬಿಟ್ಟಳು. ಅತ್ತಲೋ ಇತ್ತಲೋ ಎಂಬುದನ್ನು ಬಗೆಹರಿಸಿ ಕೊಳ್ಳಬೇಕಾದ ಸಮಯ ಹತ್ತಿರವಾಯಿತೆಂದು ನನಗೆ ಗೊತ್ತಾಗಿ ಹೋಯ್ತು. ನನ್ನಲ್ಲಿನ ಸೈತಾನವನ್ನು ತಟ್ಟಿ ಎಬ್ಬಿಸಿದೆ. ಸಮಯಕ್ಕೋಸ್ಕರ ಕಾಯುತ್ತಿದ್ದೆ.

ಅದೇ ಸಮಯಕ್ಕೆ ಭೂಪತಿ ರಾಜನ ಹೆಂಡತಿ ಸುಮತಿದೇವಿಗೆ ದಿನಗಳು ತುಂಬಿದವು. ಪಟ್ಟಣದಲ್ಲಿನ ಆಸ್ಪತ್ರೆಯೊಂದರಲ್ಲಿ ಆಕೆ ಗೋಪಾಲಕೃಷ್ಣನನ್ನು ಹೆತ್ತಳು. ಅವರು ತಿರುಗಿ ಊರಿಗೆ ಬರುತ್ತಿರುವಾಗ ಅವರು ಪ್ರಯಾಣ ಮಾಡುತ್ತಿದ್ದ ಕಾರನ್ನು ಲಾರಿಯಿಂದ ಗುದ್ದುವ ಏರ್ಪಾಡು ಮಾಡಿದೆ. ನಾನು ಇನ್ನು ಕೆಲವು ಜನ ಕೆಲಸಗಾರರು . . ಹಿಂದೆ ಮತ್ತೊಂದು.. . . ಕಾರಿನಲ್ಲಿ ಹೊರಟಿದ್ದೆವು.

ನಾನಂದುಕೊಂಡಿದ್ದಂತೆಯೇ ಅಪಘಾತವಾಯ್ತು. ಆದರೆ ಅನಿರೀಕ್ಷಿತ ವಾಗಿ ಗೋಪಾಲಕೃಷ್ಣನು ಒದುಕಿ ಉಳಿದ. ಅಪಘಾತವಾದ ನಂತರ ಬಂದು ನೋಡಿದರೆ ದೊಡ್ಡವರಿಬ್ಬರೂ ಸತ್ತುಹೋಗಿದ್ದರು. ಆದರೆ ಹಸುಗೂಸಾಗಿದ್ದ ಗೋಪಾಲಕೃಷ್ಣ ಬಚಾವಾದ. ಸುತ್ತಲೂ ಜನ ಇದ್ದುದರಿಂದ ಅವನನ್ನು ಕೊಲ್ಲಲಾಗಲಿಲ್ಲ. ನಂತರ ಗ್ರಾಮಸ್ಥರೇ ಅವನನ್ನು ಸಾಕುವ ಹೊಣೆ ಹೊತ್ತು ಕೊಂಡಿದ್ದರಿಂದ ನನಗೆ ಅವನನ್ನು ಕೊಲ್ಲುವ ಅವಕಾಶವೇ ಸಿಗಲಿಲ್ಲ.

ಭೂಪತಿರಾಜ ಸತ್ತ ನಂತರ ನನ್ನ ಬುದ್ಧಿ ಬಳಸಿ ಅವರ ಭೂಮಿಯನ್ನೇ ನನ್ನ ಹೆಸರಿಗೆ ಮಾಡಿಕೊಂಡೆ. ಅವರ ಬಂಗಾರ ದೋಚಿದೆ. ಆದರೆ ಗೋಪಾಲ ಕೃಷ್ಣನಿಗೆ ಮಾತ್ರ ಏನೂ ಮಾಡಲು ನನ್ನಿಂದಾಗಲಿಲ್ಲ. ನಿನಗೂ ನಾಲ್ಕಾರು ಸಲ 'ಅವನನ್ನು ಮಾಟ ಮಾಡಿ ಕೊಂದು ಬಿಡು' ಎಂದು ಕಾಡಿದರೂ ನಿನ್ನಿಂದ ಆ ಕೆಲಸ ಮಾಡಲಾಗಲಿಲ್ಲ. ಆದರೆ ಶತ್ರು ಶೇಷವಿದ್ದರೆ ನನಗೆ ನಿದ್ದೆ ಬರೋದಿಲ್ಲ. ಶತ್ರುವನ್ನು ನಿವಾರಿಸಿಕೊಂಡರೆ ಆಗುವ ಆನಂದ ಅಷ್ಟಿಷ್ಟಲ್ಲವೆಂದು ಅನುಭವ ಪೂರ್ವಕವಾಗಿ ತಿಳಿದುಕೊಂಡಿದ್ದೇನೆ. ನನ್ನ ಮೊದಲ ಶತ್ರು– ಅದೇ ನನ್ನ ಹೆಂಡತಿಯನ್ನು ಕೊಂದ ದಿನ ಉಂಟಾದ ಆನಂದವನ್ನು ಮಾತುಗಳಲ್ಲಿ ವರ್ಣಿಸ ಲಾಗದು" ಎನ್ನುತ್ತ ಕುರ್ಚಿಯಲ್ಲಿ ಹಿಂದಕ್ಕೊರಗಿದ.

"ಊರಿನ ಜನರಿಗೆ ಆ ಗೋಪಾಲಕೃಷ್ಣನಿಗೆ ನೀವು ಅವರ ಆಸ್ತಿಯನ್ನು ಕಬಳಿಸಿರುವಿರೆಂಬುದು ಗೊತ್ತಿದೆಯಾದರೂ ನೀವೇ ಭೂಪತಿರಾಜ ದಂಪತಿ ಗಳನ್ನು ಕೊಂದಿರುವಿರೆಂಬುದು ಗೊತ್ತಿಲ್ಲ. ಇದು ಗೊತ್ತಾದ ದಿನ ಗೋಪಾಲ ಕೃಷ್ಣ ಸುಮ್ಮನಿರುತ್ತಾನೆಯೆ? ನಿಮ್ಮ ಮೇಲೆಹಗೆಸಾಧಿಸುವುದಿಲ್ಲವೇನು"ಎಂದು ತನ್ನ ಅನುಮಾನವನ್ನು ವ್ಯಕ್ತಪಡಿಸಿದ ಹುಲಿರಾಜ.

"ಅದಕ್ಕೇ ಅಲ್ವೇ, ಶತ್ರುಶೇಷವನ್ನು...... ಉಳಿಸಿಕೊಳ್ಳಬಾರದೆಂದು" ಹೇಳ್ತಿರೋದು.

"ಮತ್ತೆ ನಾವು ಅವನನ್ನು ಕೊಲ್ಲಬಾರದು. ಪ್ರತಿಕ್ಷಣವೂ ನರಕಯಾತನೆ ಅನುಭವಿಸುತ್ತ ಬದುಕಿರಬೇಕು... ... ಅದಕ್ಕೆ ತಕ್ಕ ತಂತ್ರೋಪಾಯವನ್ನು ಯೋಚಿಸೋಣ."

"ಅದಕ್ಕಿರೋದು ಒಂದೇ ದಾರಿ" ಎನ್ನುತ್ತ ಏನು ಮಾಡಬೇಕೆಂಬುದನ್ನು ಹೇಳತೊಡಗಿದ ವೆಂಕಟರಾಮಯ್ಯ. ಆ ದುಷ್ಟ ಯೋಜನೆಯನ್ನು ಕೇಳುತ್ತಿದ್ದಂತೆ ಹುಲಿರಾಜನ ಮುಖದ ಮೇಲೆ ಕ್ರೂರ ನಗು ಸುಳಿದಾಡಿತು.

## ೧೦

ಆ ದಿವ ಹುಣ್ಣಿಮೆಯಾಗಿದ್ದರೂ ಆಕಾಶದಲ್ಲೆಲ್ಲ ಮೋಡಗಳು ದಟ್ಟವಾಗಿ ಹರಡಿಕೊಂಡಿದ್ದವು. ಆಗಾಗ ಅವುಗಳ ಮರೆಯಿಂದ ಹೊರಗಿಣುಕಿ ನೋಡಲು ಚಂದ್ರ ವಿಫಲ ಪ್ರಯತ್ನ ಮಾಡುತ್ತಿದ್ದ, ಆಗಾಗ ಕೋಲ್ಮಿಂಚು ಮಿನುಗುತ್ತ ಕರಿ ಮೋಡಗಳ ಹಿನ್ನೆಲೆಯಲ್ಲಿ ಬೆಳ್ಳಿ ಕೋಲಿನಂತೆ ಭಾಸವಾಗುತ್ತಿತ್ತು, ತಂಗಾಳಿಯ ಸ್ಪರ್ಶಕ್ಕೆ ಪುಳಕಗೊಂಡ ಮೇಘ ತನ್ನ ಆನಂದವನ್ನು ಹನಿಗಳ ರೂಪದಲ್ಲಿ ವ್ಯಕ್ತಪಡಿಸುತ್ತಿದೆ ಎನ್ನುವಂತೆ ಮಳೆ ಪ್ರಾರಂಭವಾಯ್ತು.

ಮೂಗಿನ ಮೇಲೆ ಹನಿ ಬಿದ್ದುದರಿಂದ ನಡೆಯುತ್ತಿದ್ದ ತಿಲೋತ್ತಮೆ ಒಂದು ಕ್ಷಣ ನಿಂತಳು. ತಲೆ ಮೇಲೆತ್ತಿ ನೋಡಿದಾಗ ಆಕಾಶದಲ್ಲಿ ಸುಳಿದಿರುಗುತ್ತಿದ್ದ ಕಪ್ಪು ಮೋಡಗಳು ಕಂಡು ಬಂದವು ಇನ್ನು ಸ್ವಲ್ಪ ಹೊತ್ತಿನಲ್ಲಿ ಮಳೆ ಜೋರಾಗುವುದೆಂದು ಅವಳು ಸರಸರನೆ ಹೆಜ್ಜೆ ಹಾಕತೊಡಗಿದಳು.

ಅವಳೂ ಅದೇ ಊರಿನವಳೇ. ಮೂವತ್ತು ವರ್ಷಗಳಿರಬಹುದು.

ಜರ್ಮನ್ನರ ಜಾತ್ಯಹಂಕಾರವೆಲ್ಲ ಮೂಗಿನ ರೂಪು ತಾಳಿರುವಂತೆ ಅವಳ ಮೂಗು ಚೂಪಾಗಿದ್ದು ತುದಿಯಲ್ಲಿ ಕೊಂಚವೇ ಎತ್ತರವಿದ್ದು ಪ್ರಪಂಚವನ್ನೇ ಧಿಕ್ಕರಿಸುತ್ತಿರುವಂತಿತ್ತು. ಗ್ರೀಕರ ತತ್ವ ಚಿಂತನೆಯನ್ನೆಲ್ಲ ಕಣ್ಣುಗಳಲ್ಲಿ ತುಂಬಿಕೊಂಡಿರುವಳೇನೋ ಎನ್ನುವಂತೆ ಅವಳ ಕಣ್ಣುಗಳಲ್ಲಿ ಗಾಢ ಅನುಭವವೊಂದು ದಟ್ಟೈಸಿತ್ತು. ಮಿಸಿಸಿಪಿ ನದಿಯಂತೆ ಅವಳ ಕತ್ತು ನೀಳವಾಗಿತ್ತು.

ಅಲ್ಲಿಂದ ಕೆಳಗೆ ಬಂದರೆ ಉತ್ತರ ಅಮೆರಿಕಾದಲ್ಲಿನ ಎರಡು ದೊಡ್ಡ ದ್ವೀಪಗಳಂತೆ ಅವಳ ಸ್ತನ ಸಂಪತ್ತು ಉನ್ನತವಾಗಿತ್ತು. ಆಫ್ರಿಕನ್ನರ ಕಡುಗಪ್ಪು ಬಣ್ಣವೆಲ್ಲ ಅಲ್ಲೇ ಕೇಂದ್ರೀಕೃತಗೊಂಡಿದೆಯೇನೋ ಎನ್ನುವಂತೆಯೇ ಮೊಲೆ ತೊಟ್ಟುಗಳು ಕಪ್ಪಗಿದ್ದವು. ಅಮೇರಿಕನ್ನರ ಸುಪ್ರಮಸಿಯಂತೆ ಸೊಂಟ

ವಿಸ್ತರಿಸಿಕೊಂಡಿತ್ತು. ಆ ಸುಪ್ರಮಸಿಗೆ ವಿಯತ್ನಾಂ ಹಾಕಿರುವ ತೂತಿನಂತೆ ಹೊಕ್ಕಳು ಕಂಡು ಬರುತ್ತಿತ್ತು. ಎಣೆಯಿಲ್ಲದ ಜಪಾನಿಯರ ಶ್ರಮದಂತೆ ಅವಳ ಹಿಂಭಾಗ ಅನಂತವಾಗಿತ್ತು.

ಒಟ್ಟಿನಲ್ಲಿ ಅವಳೇ ರಹಸ್ಯಮಯ ಪ್ರಪಂಚದಂತಿದ್ದಳು.

ಗುಡ್ಡದ ಬಳಿ ಸೇರುವಷ್ಟರಲ್ಲಿ ಮಳೆ ಹನಿ ಜಾಸ್ತಿಯಾಯ್ತು. ಏನು ಮಾಡಬೇಕೆಂದು ಹೊಳೆಯದೆ ಕಂಗಾಲಾಗಿ ಅತ್ತಿತ್ತ ನೋಡಿದಳು. ಮಳೆಯಿಂದ ತಪ್ಪಿಸಿಕೊಳ್ಳುವ ದಾರಿ ಯಾವುದೂ ಕಂಡುಬರಲಿಲ್ಲ. ಹತ್ತಿರದಲ್ಲೆಲ್ಲೂ ಗಿಡಗಳು ಕಂಡುಬರಲಿಲ್ಲ. ತನಗೋಸ್ಕರ ದೂರದಲ್ಲಿ ಛತ್ರಿ ಹಿಡಿದುಕೊಂಡು ಬರುತ್ತಿದ್ದ ಗೋಪಾಲಕೃಷ್ಣನ ಆಕಾರ ಅಸ್ಪಷ್ಟವಾಗಿ ಕಂಡುಬಂತು. 'ಅಬ್ಬಾ!' ಎಂದು ಕೊಳ್ಳುತ್ತ ಅವನಿಗೆದುರಾಗಿ ಹೆಜ್ಜೆ ಹಾಕಿದಳು.

"ಮಳೆ ಬರುತ್ತಿದ್ದಂತೆಯೇ ನಿನ್ನ ನೆನಪಾಯ್ತು." ದಾರಿಯಲ್ಲಿ ಎಲ್ಲಿ ಒದ್ದಾಡ್ತಿರ್ತೀಯೋ ಅಂತ ಕೊಡೆ ತಗೊಂಬಂದೆ" ಎಂದ ಗೋಪಾಲಕೃಷ್ಣ. ತಿಲೋತ್ತಮೆ ಕೊಡೆಯೊಳಗೆ ತೂರಿಕೊಂಡಳು. ಅವನ ಮೊಣಕೈ ಸರಿಯಾಗಿ ಅವಳ ಸೊಂಟವನ್ನು ತಾಕುತ್ತಿತ್ತು. ಅಲ್ಲಿಂದ ವಿದ್ಯುತ್ ಉತ್ಪತ್ತಿಯಾಗಿ ಶರೀರದಲ್ಲೆಲ್ಲ ಸರಬರಾಜಾಗುತ್ತಿರುವಂತೆ ಭಾಸವಾಯ್ತು. ಅದರಿಂದ ಬೇರೆಡೆ ಗಮನಹರಿಸಬೇಕೆಂದು ಅವಳು ಮಾತಾಡತೊಡಗಿದಳು. "ಗುಡ್ಡದ ಬಳಿ ಬರುವಷ್ಟರಲ್ಲಿ ಮಳೆ ಶುರುವಾಯ್ತು. ಎಲ್ಲೂ ತಲೆ ಮರೆಸಿಕೊಳ್ಳಲು ಅವಕಾಶವಿರಲಿಲ್ಲ. ಏನುಮಾಡಬೇಕೆಂದು ಯೋಚಿಸುತ್ತಿದ್ದಾಗ ನೀನು ಬಂದೆ."

ಮಳೆಯು ಮತ್ತಷ್ಟು ಜಾಸ್ತಿಯಾಯ್ತು. ಗಾಳಿಗೆ ಮಳೆ ಬಿಟ್ಟು ಬಿಟ್ಟು ರಾಚುತ್ತಿತ್ತು. ಇಬ್ಬರೂ ಸರಸರನೆ ಗುಡ್ಡ ಹತ್ತತೊಡಗಿದರು.

"ಈ ರೀತಿ ರಾತ್ರಿ ಹೊತ್ತಿನಲ್ಲಿ ಮಳೆ ಸುರಿಯುತ್ತಿರುವಾಗ ಒಂದೇ ಛತ್ರಿಯ ಕೆಳಗೆ ನಡೆಯೋದು ಎಂದೆಂದಿಗೂ ಮರೆಯಲಾಗದಂತಹ ಮಧುರ ಅನುಭವ" ಎಂದನು ಗೋಪಾಲಕೃಷ್ಣ. ತಿಲೋತ್ತಮೆ ಹೌದೆನ್ನುವಂತೆ ತಲೆ ಯಾಡಿಸಿದಳು. ಬಹುದಿನಗಳ ನಂತರ ಗಂಡಸಿನ ಸಾಮೀಪ್ಯವನ್ನು ಅನುಭವಿಸುತ್ತಿದ್ದ ಅವಳ ಬಾಯಿಯಿಂದ ಮಾತುಗಳು ಹೊರಬರಲಿಲ್ಲ.

"ನಿನಗೆ ಮದುವೆ ಆಗಿದೆಯಲ್ಲ, ಮತ್ತೆ ಬಹಳ ದಿನಗಳಿಂದ ತವರು ಮನೆಯಲ್ಲೇ ಇರೋದನ್ನ ನೋಡ್ತಿದೀನಿ. ಏನಾಯ್ತು? ನಿನ್ನ ಬಗ್ಗೆ ಒಂದು ದಿನ ಮೋಹನಳನ್ನ ಕೇಳಿದಾಗ 'ಗಂಡ ಬಿಟ್ಟಿದ್ದಾನೆ' ಎಂದಷ್ಟೇ ಹೇಳಿದ್ಲು."

"ತಮಾಷೆ ಏನು ಗೊತ್ತಾ? ಅವರು ನನ್ನನ್ನು ಬಿಟ್ಟಿದ್ದಾರೋ, ನಾನೇ ಅವರ ಸಂಬಂಧ ಕಡಿದುಕೊಂಡು ಬಂದೆನೋ ಅನ್ನೋದು ನನಗಿಲ್ಲಿಯ ವರೆಗೂ

ಗೊತ್ತಾಗಿಲ್ಲ. ಇಷ್ಟು ಚಿಕ್ಕ ವಿಷಯ ಕೂಡ ನನಗೆ ಅರ್ಥವಾಗಿಲ್ಲವೆಂದರೆ ನಮ್ಮಿಬ್ಬರ ನಡುವೆ ನಡೆದ ಘಟನೆಗಳು ಎಷ್ಟು ಸಂಕೀರ್ಣವಾದವುಗಳೆಂಬುದು ನಿನಗೆ ಗೊತ್ತಾಗುತ್ತದೆ ಅಂತ ಅಂದ್ಕೊಳ್ತೀನಿ. ಒಟ್ಟಿನಲ್ಲಿ ನಮ್ಮಿಬ್ಬರ ದಾಂಪತ್ಯ ಬಂಧನ ಕಡಿದುಹೋಯ್ತು. ಆರು ತಿಂಗಳಿಂದ ನಾನು ತವರು ಮನೆ ಯಲ್ಲೇ ಇದ್ದೀನೆ" ಎಂದು ವಿರಕ್ತಳಂತೆ ನುಡಿದಳು ತಿಲೋತ್ತಮೆ.

"ಏನಾಯ್ತು?"

"ಹೇಗೂ ಆಚಾರದ ಪ್ರಕಾರ ನಿನಗೆ ನಾನು ಇಲ್ಲಿಯವರೆಗೆ ಯಾರಿಗೂ ಹೇಳಿರದ ಘಟನೆಯ ಬಗ್ಗೆ ಹೇಳಬೇಕಲ್ಲ ಅದನ್ನೇ ಹೇಳ್ತೀನಿ. ನಾನು ಅನುಭವಿ ಸಿದ ಉದ್ವಿಗ್ನತೆ, ಭಯ, ಆನಂದವನ್ನು ಯಾರಾದರೊಬ್ಬರೊಂದಿಗೆ ಹೇಳಿ ಕೊಳ್ಳಬೇಕೆಂಬ ಬಯಕೆ ಈ ನಡುವೆ ಜಾಸ್ತಿಯಾಗತೊಡಗಿತ್ತು. ಬೆಳಿಗ್ಗೆ ನಿನ್ನಿಂದ ಕರೆ ಬಂದೊಡನೆಯೇ ನಿನ್ನೊಡನೆ ಈ ರಾತ್ರಿ ಕಳೆಯಲಿದ್ದೇನಲ್ಲ ಎನ್ನುವ ಆನಂದಕ್ಕಿಂತಲೂ, ನನ್ನಲ್ಲಿ ಇಷ್ಟು ದಿನ ಗುಪ್ತವಾಗಿರುವ ಆ ಘಟನೆ ಗಳನ್ನು ನಿನ್ನೊಂದಿಗೆ ಹೇಳಿಕೊಳ್ಳಬಹುದು ಎನ್ನುವ ಸಂತೋಷವೇ ನನ್ನಲ್ಲಿ ಉಂಟಾಯ್ತು."

ಇಬ್ಬರೂ ಭವನದ ಬಳಿ ತಲುಪಿದರು. ಗೋಪಾಲಕೃಷ್ಣ ಕೊಡೆ ಮಡಿಸಿ ಹೊರಗಿಟ್ಟ. ಹಾಲ್‌ನಲ್ಲಿ ನರ ನಿದ್ದೆ ಮಾಡುತ್ತಿದ್ದ. ಇಬ್ಬರೂ ಹಾಲ್‌ನ ಪಕ್ಕ ದಲ್ಲಿದ್ದ ಮತ್ತೊಂದು ಕೋಣೆಯೊಳಗೆ ಹೋದರು. ಕೋಣೆಯ ನಡುವೆ ಹಳೆಯ ಮರದ ಮಂಚವೊಂದು ಅವಸಾನದ ಹಂತದಲ್ಲಿತ್ತು ಒಂದೆಡೆ ಕಟ್ಟಿದ್ದ ಪ್ಲಾಸ್ಟಿಕ್ ಹಗ್ಗಕ್ಕೆ ಗೋಪಾಲಕೃಷ್ಣನ ಬಟ್ಟೆಗಳು ನೇತಾಡುತ್ತಿದ್ದವು.

"ಇವತ್ತು ರಾತ್ರಿಗೆ ಇದೇ ನಮ್ಮ ಸ್ವರ್ಗ. ಆದರೆ ಸ್ವರ್ಗ ಸ್ವಲ್ಪ ಹಳೆಯ ದಾಗಿದೆ. ಎಂದೋ ಕಟ್ಟಿರೋ ಬಿಲ್ಡಿಂಗ್ ಅಲ್ವೇ" ಎಂದು ನಗುತ್ತ ನುಡಿದ ಗೋಪಾಲಕೃಷ್ಣ.

ಮಳೆಯಲ್ಲಿ ತೊಯ್ದಿಸಿಕೊಂಡಿದ್ದರಿಂದ ತಿಲೋತ್ತಮೆಯ ಬಟ್ಟೆಗಳೆಲ್ಲವೂ ಅವಳ ಮೈಗಂಟಿಕೊಂಡಿದ್ದವು. ಮೈಮಾಟ ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಮುಖ್ಯವಾಗಿ ಅವಳ ಸೊಂಟದ ಭಾಗ ಒದ್ದೆಯಾದುದರಿಂದಲ ಭಾಗ ನೋಟವೂ ಅದರ ಮೇಲಿಂದ ಜಾರುತ್ತದೇನೋ ಎನ್ನುವಷ್ಟು ನುಣುವಾಗಿ ಕಾಣುತ್ತಿತ್ತು. ಮೂಲೆಯೊಂದರಲ್ಲಿ ಬೆಳಗುತ್ತಿದ್ದ ದೀಪದ ಕಾಂತಿ ಅವಳ ಸುತ್ತಲೂ ಬೆಳಕಿನ ರೇಖೆಯೊಂದನ್ನು ಮೂಡಿಸಿತ್ತು.

ಗೋಪಾಲಕೃಷ್ಣ ತನ್ನ ಒದ್ದೆಯ ಬಟ್ಟೆಗಳನ್ನು ಕಳಚಿ, ಬೇರೆ ಬಟ್ಟೆ

ಧರಿಸುತ್ತ, "ನನಗೆ ಒಣಗಿದ ಬಟ್ಟೆ ಇದೆ. ನೀನೇನು ಮಾಡ್ತೀಯ" ಎಂದು ಕೇಳಿದ.

"ಕುಪ್ಪಸಕ್ಕೇನೂ ಪರವಾಗಿಲ್ಲ. ಹತ್ತು-ಹದಿನೈದು ನಿಮಿಷಗಳಲ್ಲಿ ಆರಿ ಹೋಗುತ್ತೆ. ಸೀರೆಯದೇ ತೊಡಕು. ನಿನ್ನ ಲುಂಗಿ ಕೊಡು. ಅದನ್ನ ಉಟ್ಕೊಂಡು ಸೀರೇನ ಒಣಗಲು ಹಾಕ್ತೀನಿ."

"ಕುಪ್ಪಸ ಲುಂಗಿ ಕಾಂಬಿನೇಶನ್ ಚೆನ್ನಾಗಿರೋದಿಲ್ಲ. ಲುಂಗಿ ಜುಬ್ಬಾ ಉಟ್ಕೋ ಆದ್ರೆ ಒಂದೇ ತೊಡಕು" ಎಂದು ಅವಳತ್ತ ತುಂಟತನದಿಂದ ನೋಡುತ್ತ ನುಡಿದ.

"ಅದೇನದು ತೊಡಕು?"

"ಜುಬ್ಬಾ ಹಾಕ್ಕೊಂಡ್ರೆ ನಿನ್ನ ಸೊಂಟದ ಮಾಟ, ಮುಡುಪು ಕಾಣಿಸೋದಿಲ್ಲ. ಅದು ತೊಡಕಲ್ದೆ ಮತ್ತಿನ್ನೇನು?"

"ಹುಡುಗಾಟ ಬಿಟ್ಟು ಲುಂಗಿ, ಜುಬ್ಬಾ ಕೊಡು."

ಗೋಪಾಲಕೃಷ್ಣ ಮುಸಿ ಮುಸಿ ನಗುವನ್ನು ತಡೆಹಿಡಿಯುತ್ತ, ತನ್ನ ಲುಂಗಿ ಜುಬ್ಬಾ ಅವಳಿಗೆ ಕೊಟ್ಟ. ಅವಳು ಅತ್ತ ತಿರುಗಿ ಸೀರೆ, ಕುಪ್ಪಸ ಕಳಚಿ ಲುಂಗಿ, ಜುಬ್ಬಾ ಧರಿಸಿದಳು. ಆ ಉಡುಪಿನಲ್ಲೂ ಅವಳು ಅದ್ಭುತವಾಗಿ ಕಂಡು ಬರುತ್ತಿದ್ದಳು. ಸೊಂಟದ ಮುಡಿಕೆಯ ನಂತರ ಅವಳ ಶರೀರದಲ್ಲಿ ತುಂಬಾ ಸುಂದರವಾದ ಭಾಗವೆಂದರೆ ಅವಳ ಮೂಗು. ಅದು ಮನ್ಮಥ ದೇವನ ಬಿಲ್ಲಿನಂತಿತ್ತು.

ಉಡುಪು ಬದಲಾಯಿಸಿದ್ದರಿಂದ ಶರೀರದಲ್ಲಿ ಸ್ವಲ್ಪ ಬಿಸಿ ಹರಿದಾಡಿದಂತಾಯ್ತು. ಗೋಪಾಲಕೃಷ್ಣ ಮಂಚದ ಮೇಲೆ ಕುಳಿತುಕೊಂಡು, ಕಿಟಕಿಯತ್ತ ನೋಡಿದ. ಮಳೆ ಹನಿಯ ಸದ್ದು ಲಯಬದ್ಧವಾಗಿ ಕೇಳಿಬರುತ್ತಿತ್ತು.

ತಿಲೋತ್ತಮೆ ಅವನ ಎದುರಿಗೆ ಪದ್ಮಾಸನ ಹಾಕಿಕೊಂಡು ಕುಳಿತಳು. ತಾನೂ ಕಿಟಕಿಯತ್ತ ನೋಡುತ್ತ, "ಗುಡ್ಡದ ಮೇಲೆ ಊರಿಗೆ ದೂರವಾಗಿ ಈ ರೀತಿ ಮನೆ ಕಟ್ಟಿಕೊಳ್ಳಬೇಕೆಂಬ ಆಲೋಚನೆ ಮಾಡಿದ ನಿಮ್ಮ ತಾತ-ಮುತ್ತಾತರನ್ನು ಅಭಿನಂದಿಸಲೇಬೇಕು" ಎಂದಳು.

"ನಿಜ. ನಮ್ಮ ಮನೆ ಮತ್ತೊಂದು ಪ್ರಪಂಚದಲ್ಲಿ ಇದ್ದಂತಿರುತ್ತದೆ. ರಾತ್ರಿ ಹೊತ್ತು ವರಾಂಡದಲ್ಲಿ ಕುಳಿತುಕೊಂಡರೆ ಮೇಲೆ ನಕ್ಷತ್ರಗಳು, ಕೆಳಗೆ ಊರಲ್ಲಿನ ದೀಪಗಳು ಕಾಣಿಸುತ್ತವೆ. ಅವುಗಳನ್ನು ನೋಡುತ್ತಿದ್ದರೆ ನಮಗೆ ಎರಡು ನಕ್ಷತ್ರಗಳ ಪ್ರಪಂಚದ ನಡುವೆ ಇರುವ ಅನುಭೂತಿಯುಂಟಾಗುತ್ತದೆ."

ಆ ನೀರವತೆಯಲ್ಲಿ ನರನ ಗೊರಕೆ ಲಘುವಾಗಿ ತೇಲಿ ಬರುತ್ತಿತ್ತು. ಮತ್ತೆ

ಗೋಪಾಲಕೃಷ್ಣನೇ, "ನಿನ್ನ ಕಥೆ ಹೇಳ್ತೀನಿ ಅಂದ್ಯಲ್ಲ" ಎಂದ.

ತಿಲೋತ್ತಮೆ ಹೇಳತೊಡಗಿದಳು.

"ನನಗೀಗ ಮೂವತ್ತು ವರ್ಷ. ನಾನು ಋತುಮತಿಯಾದ ಮೂರು ವರ್ಷಗಳಿಗೆ ನನ್ನ ಮದುವೆ ಶ್ರೀನಿವಾಸರಾವ್‌ನೊಂದಿಗೆ ನಡೆಯಿತು. ನನ್ನ ಮದುವೆಯ ಕಾಲಕ್ಕೆ ಅವರು ಒಂಗೋಲಿನಲ್ಲಿ ನೌಕರಿ ಮಾಡುತ್ತಿದ್ದರು. ಹೊಸ ಸಂಸಾರ, ಹೊಸ ಪ್ರದೇಶ, ಹೊಸ ಜನ ಇವೆಲ್ಲವನ್ನೂ ಅರ್ಥಮಾಡಿಕೊಂಡು ತಿರುಗಿ ನೋಡಿಕೊಳ್ಳುವಷ್ಟರಲ್ಲಿ ಇಬ್ಬರು ಮಕ್ಕಳು, ಸ್ವಲ್ಪ ದಪ್ಪಗಾದ ಮೈ ಕಂಡುಬಂದವು.

ಬಹುದಿನಗಳ ಪ್ರಯತ್ನದ ನಂತರ ನಮ್ಮೆಜಮಾನರಿಗೆ ಸ್ವಂತ ಊರಾದ ತಿರುಪತಿಗೆ ವರ್ಗವಾಯ್ತು. ನಮ್ಮೆಜಮಾನರು ಹುಟ್ಟಿ ಬೆಳೆದದ್ದು ತಿರುಪತಿಯ ಸಮೀಪದಲ್ಲಿನ ಒಂದು ಹಳ್ಳಿಯೂರು. ನಮ್ಮತ್ತೆ, ಮಾವ, ನಮ್ಮೆಜಮಾನರ ಭಾವಮೈದುನ ಮದುಸೂದನನ ಊರಿನಲ್ಲಿ ಇರುತ್ತಿದ್ದರು. ನಾವು ತಿರುಪತಿಯಲ್ಲಿ ಮನೆ ಬಾಡಿಗೆಗೆ ಪಡೆದುಕೊಂಡು ನೆಲೆಸಿದೆವು.

ಹತ್ತಿರಕ್ಕೆ ಬಂದೆವಾದ್ದರಿಂದ ನಮ್ಮೆಜಮಾನರು ದಿನಾಲೂ ಊರಿಗೆ ಹೋಗಿ ವ್ಯವಸಾಯದ ಕೆಲಸವನ್ನು ನೋಡಿಕೊಳ್ಳುತ್ತಿದ್ದರು. ಕುಟುಂಬವನ್ನು ಅಭಿವೃದ್ಧಿಗೆ ತರಬೇಕೆಂದು ತುಂಬಾ ಕಷ್ಟಪಡುತ್ತಿದ್ದರು ಇದರಲ್ಲೊಂದು ಭಾಗವಾಗಿ ಭಾವಮೈದುನ ಮಧುಸೂದನನಿಂದ ಚಂದ್ರಗಿರಿಯಲ್ಲಿ ನರ್ಸರಿ ಪ್ಲಾಂಟೇಶನ್ ಒಂದನ್ನು ಮಾಡಿಸಿಕೊಟ್ಟರು. ಹೂವಿನ ಸಸಿಗಳ ವ್ಯಾಪಾರ.

ನನ್ನ ಜೀವನ ಅಲ್ಲಿಯವರೆಗೆ ಸುಗಮವಾಗಿ, ಸಲೀಸಾಗಿ ಸಾಗಿತ್ತು. ಅದೇ ಕಾಲದಲ್ಲಿ ಅಲ್ಲಿಯೇ ಒಂದು ಕುಲುಕಾಟಕ್ಕೆ ಒಳಗಾಯ್ತು. ಆ ಕುಲುಕಾಟದ ಹೆಸರು ಜಯಂತ್. ಅವನು ವಯಸ್ಸಿನಲ್ಲಿ ನನಗಿಂತಲೂ ತುಂಬಾ ಚಿಕ್ಕವನು ಮಧುಸೂದನನಿಗೆ ಒಳ್ಳೆಯ ಸ್ನೇಹಿತ ದಿನಾಲೂ ಸಾಯಂಕಾಲ ತನ್ನ ಸ್ನೇಹಿತರೊಂದಿಗೆ ತೋಟಕ್ಕೆ ಬಂದು ಹರಟೆ ಕೊಚ್ಚುತ್ತಿದ್ದ. ಆಗಾಗ ನಾನೂ ಮಕ್ಕಳೊಂದಿಗೆ ತೋಟಕ್ಕೆ ಹೋಗಿ ಸ್ವಲ್ಪ ಹೊತ್ತಿದ್ದು ರಾತ್ರಿ ಮನೆಗೆ ಬರುವುದನ್ನು ಮಾಡುತ್ತಿದ್ದ.

ಜಯಂತ್ ನಮ್ಮೆಜಮಾನರ ಸ್ವಭಾವಕ್ಕೆ ಸಂಪೂರ್ಣ ವಿರುದ್ಧ. ಆಗಷ್ಟೇ ಎಂ.ಎ ಮುಗಿಸಿದ್ದ. ಮದುವೆ ಆಲೋಚನೆ ಇನ್ನೂ ಮಾಡದಿರುವ ವಯಸ್ಸು ಇಪ್ಪತ್ತೆರಡು ವರ್ಷಗಳ ವಯಸ್ಸಿದ್ದಿರಬಹುದು. ಎತ್ತರವಾಗಿ, ಸ್ವಲ್ಪ ತೆಳ್ಳಗಿದ್ದರೂ ನೋಡಲು ರೊಮ್ಯಾಂಟಿಕ್ ಆಗಿಯೇ ಇದ್ದ. ಸಾಯಂಕಾಲವಾಗುತ್ತಿದ್ದಂತೆಯೇ ಮಟ್ಟಸವಾಗಿ ಉಡುಪು ಧರಿಸಿ ಕಂಡುಬರುತ್ತಿದ್ದ. ಪ್ರತಿ ಅರ್ಥ

ಗಂಟೆಗೊಮ್ಮೆ ಚಹ ಕುಡಿದು, ಸಿಗರೇಟ್ ಹಚ್ಚುತ್ತಿದ್ದ. ಗುಂಪಿನಲ್ಲಿ ಅವನದೇ ಮೇಲುಗೈ. ಅವನಲ್ಲಿ ಎಲ್ಲಕ್ಕಿಂತಲೂ ಹೆಚ್ಚು ನನ್ನನ್ನು ಆಕರ್ಷಿಸಿದ್ದೆಂದರೆಅವನು ನೀಡುತ್ತಿದ್ದ ಹೇಳಿಕೆಗಳು.

'ಅತ್ತೆಗೂ, ಸೊಸೆಗೂ ಯಾಕೆ ಆಗಿಬರುವುದಿಲ್ಲವೆಂಬುದು ಗೊತ್ತೇ? ಫ್ರಾಯ್ಡ್‌ನ ಮಾತುಗಳಲ್ಲಿ ಹೇಳಬೇಕೆಂದರೆ ಕಾಂಪ್ಲೆಕ್ಸ್. ಅಂದರೆ ತಾಯಿಗೆ ಮಗನ ಮೇಲಿರುವ ಒಂದು ರೀತಿಯ ಪ್ರೇಮ ನಂತರ ಬಂದ ಸೊಸೆ ಮಗನನ್ನು ಮಂಚದ ಮೇಲೆ ಹಂಚಿಕೊಳ್ಳುತ್ತಿರುವಳೆನ್ನುವ ಆಲೋಚನೆಯನ್ನು ತಾಯಿ ಸಹಿಸಲೊಲ್ಲಳು, ಸಹಿಸಲಾರಳು. ಅದಕ್ಕೇ ಪ್ರತಿಯೊಬ್ಬ ಅತ್ತೆಯೂ ಸೊಸೆ ತಡವಾಗಿ ನಿದ್ದೆಯಿಂದೇಳುತ್ತಾಳೆನ್ನುವ ಆರೋಪದಿಂದಲೇ ಯುದ್ಧಕ್ಕೆ ತೊಡಗುತ್ತಾಳೆ.'

"ಸ್ತ್ರೀಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದ್ದರಿಂದಲೇ ಗುಲಾಮಳಾಗಿ ಬಿಟ್ಟಿದ್ದಾಳೆ. ಈ ಸೃಷ್ಟಿಯಲ್ಲಿ ಪ್ರತಿಯೊಂದು ಜೀವಿಯೂ ತನ್ನ ಆಹಾರವನ್ನು ತಾನೇ ಸಂಪಾದಿಸಿಕೊಳ್ಳುತ್ತದೆ. ಕೇವಲ ಮಾನವ ಸ್ತ್ರೀಯೊಬ್ಬಳನ್ನು ಹೊರತುಪಡಿಸಿ, ಇದರಿಂದಾಗಿ ಗಂಡಸಿನ ದೃಷ್ಟಿಯಲ್ಲಿ ಹಗುರಾಗಿ ಬಿಟ್ಟಿದ್ದಾಳೆ. ಸ್ತ್ರೀ ಕಷ್ಟಪಡುತ್ತಾಳಾದರೂ ಅದೆಲ್ಲ ಸಂಸಾರಕ್ಕೋಸ್ಕರ ಮಾತ್ರ. ಆದರೆ ಆರ್ಥಿಕ ಸದೃಢತೆಯಿಲ್ಲದ ಅವಳನ್ನು ಕುಟುಂಬವೆಲ್ಲ ಕೀಳಾಗಿ ಕಾಣುತ್ತದೆ.. "

ಹೀಗೆ ಅವನು ನಿರರ್ಗಳವಾಗಿ ಮಾತಾಡುತ್ತಿದ್ದ. ಅಲ್ಲಿಯವರೆಗೂ ಗಂಡ ಮಕ್ಕಳು ಸಂಸಾರ ಇವುಗಳಲ್ಲಿಯೇ ಸಿಕ್ಕಿ ಬಿದ್ದಿದ್ದ ನನಗೆ ಅವನ ಮಾತುಗಳು ಮನಸ್ಸಿನಾಳವನ್ನು ಹೊಕ್ಕು 'ಶಾಕ್' ಉಂಟು ಮಾಡುತ್ತಿದ್ದವು. ಅವನು ಹೇಳಿದವುಗಳಲ್ಲಿ ಎಷ್ಟರ ಮಟ್ಟಿಗೆ ಸತ್ಯವಿದೆ ಎನ್ನುವ ಯೋಚನೆಯಲ್ಲಿಯೇ ತೊಡಗುತ್ತಿದ್ದೆ.

ಈ ರೀತಿ ಅವನ ಬಗ್ಗೆ ಯೋಚಿಸುವುದು ಜಾಸ್ತಿಯಾಯ್ತು. ಒಂದು ದಿನ ನಮ್ಮೆಜಮಾನರು ಆಫೀಸಿಗೆ ಹೊರಡುವವರಿದ್ದರು. ಸ್ನಾನ ಮಾಡಿ, ಸೊಂಟಕ್ಕೆ ಲುಂಗಿ ಸುತ್ತಿಕೊಂಡು ತಯಾರಾಗತೊಡಗಿದರು

ಅವರಿಗೆ ಕಾಫಿ ಒಯ್ದು ಕೊಟ್ಟೆ. ಅವರನ್ನು ನೋಡುತ್ತಲೇ ಜಯಂತ್ ನೆನಪಿಗೆ ಬಂದುದರಿಂದ, "ನೋಡಿ, ಹೊಟ್ಟೆ ಬಂದು ಎಷ್ಟು ಅಸಹ್ಯವಾಗಿ ಕಾಣ್ತದೆ! ಇನ್ಮೇಲೆ ಆ ಜಯಂತ್ ಥರಾ ಟ್ರಿಮ್ ಮಾಡ್ಕೊಳ್ಳಿ" ಅಂದೆ.

ಅವರು ಏನಂದುಕೊಂಡರೆಂಬುದು ಗೊತ್ತಾಗಲಿಲ್ಲ. ಅವರು ಯಾವತ್ತೂ ಹೆಚ್ಚು ಮಾತಾಡುತ್ತಿರಲಿಲ್ಲ. ಎಂದೂ, ಯಾವೊಂದು ಭಾವನೆಯನ್ನೂ ವ್ಯಕ್ತಪಡಿಸುತ್ತಿದ್ದಿಲ್ಲ. ಯಾವತ್ತಾದರೂ ಮನೆಗೆ ಹೂ ತಂದರೆಂದರೆ, ಸುಮ್ಮನೇ

ಪೊಟ್ಟಣವನ್ನು ಸೋಫಾ ಮೇಲಿಡುತ್ತಿದ್ದರೇ ಹೊರತು 'ಹೂ ಮುಡ್ಕೋ' ಎಂದು ಹೇಳುತ್ತಿರಲಿಲ್ಲ. ಕೊನೆಗೆ ಪ್ರಣಯದಲ್ಲೂ ಅಷ್ಟೇ ನಿಶ್ಶಬ್ದವಾಗಿರುತ್ತಿದ್ದರೇ ಹೊರತು ಬಾಯಿ ಬಿಟ್ಟು ಮಾತಾಡುತ್ತಿರಲಿಲ್ಲ. ಅವರನ್ನು ಜಯಂತ್‌ನೊಂದಿಗೆ ಹೋಲಿಸಿ ನೋಡಿದ್ದು ವಾಸ್ತವಕ್ಕೆ ನನ್ನದೇ ತಪ್ಪು ನಲವತ್ತು ವರ್ಷದವರನ್ನು ಇಪ್ಪತ್ತೆರಡು ವರ್ಷದ ಯುವಕನೊಂದಿಗೆ ಹೋಲಿಸಿ, ಆ ರೀತಿ ಇರಬೇಕೆನ್ನುವುದು ಅಷ್ಟು ಸಮಂಜಸವಲ್ಲ. ಜಯಂತ್ ಯಾವಾಗಲೂ ಟಿಕ್ ಮಾಡಿಕೊಂಡೇ ಇರುತ್ತಾನೆನ್ನುವ ಭ್ರಮೆ ನನಗಿತ್ತು. ಅವನೂ ಮನೆಯಲ್ಲಿ ನಮ್ಮೆಜಮಾನರಂತೆಯೇ ಹೊಟ್ಟೆ ಕಂಡು ಬರುವಂತೆ ಲುಂಗಿಯಲ್ಲಿರುತ್ತಾನೆನ್ನುವ ಸತ್ಯ ನನಗೆ ಹೊಳೆಯಲಿಲ್ಲ.

ಈ ರೀತಿ ವಿಶ್ಲೇಷಣೆ ಮಾಡಿಕೊಳ್ಳುತ್ತ ಹೋದರೆ ಯಾವುದನ್ನೂ ಸರಿಯಾಗಿ ಅನುಭವಿಸಲಾರೆವೇನೋ. ! ಅದಕ್ಕೇ ಬಹಳಷ್ಟು ಜನ ಹೃದಯ ಹೇಗೆ ಹೇಳುತ್ತದೋ ಹಾಗೆ ನಡೆದುಕೊಳ್ಳುತ್ತಾರೆಯೆ ಹೊರತು ಮೆದುಳು ಉಪಯೋಗಿಸಿ ಯೋಚನೆ ಮಾಡುವುದಿಲ್ಲ. ನಾನೂ ಅಷ್ಟೇ.

ಸಾಯಂಕಾಲವಾಗುತ್ತಿದ್ದಂತೆ ನಾನು ಮಕ್ಕಳೊಂದಿಗೆ ತೋಟದ ಬಳಿಗೆ ಹೋಗಲು ಸಿದ್ಧಳಾಗಿಬಿಡುತ್ತಿದ್ದೆ ಯಾವತ್ತಾದರೂ ಜಯಂತ್ ಬರದಿದ್ದರೆ ಅದೇನೊ ಕೊರತ ಎಂದೆನಿಸುತ್ತಿತ್ತು. ಆದರೆ ಆ ಕೊರತೆಯ ಭಾವನೆ ಯಾಕೆ ಅವನಿಂದ ನಾನು ಏನನ್ನು ಬಯಸುತ್ತಿರುವೆ . . ....... ಎನ್ನುವದನ್ನು ನನಗೇ ಗೊತ್ತಿರಲಿಲ್ಲ.

ಒಂದು ದಿನ ಸಾಯಂಕಾಲ ಯಥಾಪ್ರಕಾರ ನಾನು ತೋಟದ ಬಳಿ ಇದ್ದೆ. ಮಕ್ಕಳಿಬ್ಬರೂ ದೂರದಲ್ಲಿ ಆಟವಾಡುತ್ತಿದ್ದರು. ನಮ್ಮೆಜಮಾನರು, ಮಧುಸೂದನ ಏನೋ ಕೆಲಸವಿದೆಯೆಂದು ಮಾರುಕಟ್ಟೆಗೆ ಹೋಗಿದ್ದರು. ಆಗ ಜಯಂತ್ ಬಂದ. ನಾನು ಮೆಲ್ಲಗೆ ನಕ್ಕೆ.

"ನಮ್ಮ ಮಿತ್ರರ್‍ಯಾರೂ ಇನ್ನೂ, ಬಂದಿರೋ ಹಾಗಿಲ್ಲ. ಇವನು ಅದೇ ನಿಮ್ಮ ತಮ್ಮ ಎಲ್ಲಿಗೆ ಹೋಗಿದ್ದಾನೆ" ಎಂದು ಕೇಳಿದ.

"ಮಾರ್ಕೆಟ್ಟಿಗೆ ಹೋಗಿದ್ದಾನೆ" ಎಂದಷ್ಟೇ ಹೇಳಿದೆ. ಅವನೊಂದಿಗೆ ಸಹಜವಾಗಿ ಮಾತಾಡಲು ನನ್ನಿಂದಾಗಲಿಲ್ಲ. ಏನೋ ವ್ಯತ್ಯಾಸವಿತ್ತು. ಅವನು ಸ್ವಲ್ಪ ಹೊತ್ತು ತಡೆದು, "ನೀವು ಅದ್ಭುತವಾಗಿ ವೀಣೆ ನುಡಿಸುತ್ತೀರೆಂದು ಕೇಳಿದ್ದೇನೆ. ನನಗೆ ಅದನ್ನು ಕೇಳಬೇಕೆಂದಿದೆ. ಆದರೆ ಎಲ್ಲರೂ ಇರುವಾಗ ನೀವು ನುಡಿಸುತ್ತೇನೆಂದರ ಆಗದು. ನನಗೆ ಆ ರೀತಿ ಇಷ್ಟವಾಗುವುದಿಲ್ಲ. ನಾವಿಬ್ಬರೇ ಇರಬೇಕು. 'ನೀವು ವೀಣೆ ನುಡಿಸುತ್ತಿದ್ದರೆ ನಾನು ತನ್ಮಯತೆಯಿಂದ

ಕೇಳಬೇಕು. ಆಗ ಕಡ್ಡಾಯವಾಗಿ ಬೆಳದಿಂಗಳಿರಬೇಕು.ಆ ಬೆಳದಿಂಗಳಿನಲ್ಲಿ ನೀವು ವೀಣೆ ನುಡಿಸುವುದನ್ನ ನಾನು ಕೇಳಬೇಕು' ಎಂದ. ಅದನ್ನೆಲ್ಲ ಹೇಳುತ್ತಿರುವಾಗ ಇಂತಹುದೆಂದು ವ್ಯಾಖ್ಯಾನಿಸಲಾಗದ ಭಾವನೆಯಿಂದಾಗಿ ಅವನ ಧ್ವನಿ ಭಾರವಾಗಿ ಕೇಳಿಬಂತು.

ನನ್ನ ಬೆನ್ನ ಹುರಿಯಲ್ಲಿ ಚಿಕ್ಕದೊಂದುಛಳುಕುಮೂಡಿಮಾಯವಾಯ್ತು ಮದುವೆಗೆ ಮುಂಚೆ ವೀಣೆ ಕಲಿತಿದ್ದ. ಮದುವೆಯಾದ ಮೇಲೆ ಯಾವತ್ತಾದರೂ ಒಂಟಿಯಾಗಿರುವಾಗ ಒಂದೋ ಎರಡು ರಾಗ ನುಡಿಸುತ್ತಿದ್ದೆ ಅಷ್ಟೇ. ನಮ್ಮೆಜಮಾನರು ಎಂದೂ ವೀಣೆ ನುಡಿಸೆಂದು ಕೇಳಿರಲಿಲ್ಲ. ನಾನು ಅವರ ಮುಂದೆ ನನ್ನ ವಿದ್ಯೆಯನ್ನು ಪ್ರದರ್ಶಿಸಿರಲೂ ಇಲ್ಲ. ಬಹುದಿನಗಳಿಂದ ವೀಣೆಯನ್ನು ಮುಟ್ಟಿರಲೂ ಇಲ್ಲ.

ಇಷ್ಟುಕಾಲದ ನಂತರ ಈಗ ಒಬ್ಬ ವ್ಯಕ್ತಿ ವೀಣೆ ನುಡಿಸೆಂದು ಕೇಳುತ್ತಿದ್ದಾನೆ. ಅದೂ ಬೆಳದಿಂಗಳಿನಲ್ಲಿ ಪ್ರತ್ಯೇಕವಾಗಿ ಅವನಿಗೋಸ್ಕರವಷ್ಟೇ ನುಡಿಸಬೇಕಂತೆ ನನ್ನ ಹೃದಯ 'ಝಲ್ಲಂ'ದಿತು ನನ್ನ ಬಾಲ್ಯ, ಆಗ ವೀಣೆ ಕಲಿಯಲು ಗುರುಗಳ ಬಳಿ ಹೋಗುತ್ತಿದ್ದುದು, ಕಲಿತ ವಿದ್ಯೆಯನ್ನು ಅಜ್ಜಿಯ ಬಳಿ ಪ್ರದರ್ಶನ ಮಾಡುತ್ತಿದ್ದುದು ಇವೆಲ್ಲ ನನಗೆ ನೆನಪಾದವು.

ಬೆಳದಿಂಗಳಿನಲ್ಲಿ ತನಗೋಸ್ಕರವಷ್ಟೇ ವೀಣೆ ನುಡಿಸಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದ್ದರ ಹಿಂದೆ ಅವನ ಕಲಾಪಿಪಾಸೆ, ಸೌಂದರ್ಯಭಾವನೆ, ಯಾವ ಅನುಭವವನ್ನೇ ಆಗಲಿ ಗಾಢವಾಗಿ ಹೊಂದಬೇಕೆನ್ನುವ ಹಂಬಲ ನನಗೆ ಕಂಡು ಬಂದವು, ನಾನು ಏನೂ ಉತ್ತರಿಸಲಿಲ್ಲ. ಅದೊಂದು ರೀತಿಯ ಮೃದುವಾದ ಶಾಕ್‌ನಿಂದಾಗಿ ಮೌನವಾಗಿದ್ದುಬಿಟ್ಟೆ.

ಅಷ್ಟರಲ್ಲಿ ಅವನ ಸ್ನೇಹಿತರು ಬಂದರು. ಮತ್ತೆ ಚಹ, ಸಿಗರೇಟು' ಹರಟೆಯಲ್ಲಿ ಮುಳುಗಿ ಹೋದ. ಯಾವೊಂದು ದುಶ್ಚಟವೂ ಇಲ್ಲದೆ, ಯಾವಾಗಲೂ "ಮೂಡಿ"ಯಾಗಿ, ಸೌಮ್ಯವಾಗಿರುತ್ತಿದ್ದ ನಮ್ಮೆಜಮಾನರನ್ನು ನೋಡಿ ನೋಡಿ ಬೇಸರಿಕೆ ಉಂಟಾಗಿದ್ದರಿಂದಲೆಂದುಕೊಳ್ಳುತ್ತೇನೆ ಅವನ ವಿಶೃಂಖಲ ವರ್ತನೆ ಅದೊಂದು ರೀತಿಯ ಆಕರ್ಷಣೆಯಾಗಿ ಕಂಡು ಬಂತು.

ಅವನು ವೀಣೆ ನುಡಿಸೆಂದು ಕೇಳಿದ ವಾರದ ನಂತರವಿರಬೇಕು. ನಮ್ಮೆಜಮಾನರು ಕೆಲಸದ ಮೇಲೆ ಒಂಗೋಲಿಗೆ ಹೋದರು. ಎರಡು ದಿನ ಬರುವುದಿಲ್ಲವೆಂದು ಹೇಳಿಯೇ ಹೋಗಿದ್ದರು. ಅವರು ಹೋದ ಸಾಯಂಕಾಲವೇ ನಾನು ಮಕ್ಕಳನ್ನು ಕರೆದುಕೊಂಡು ಚಂದ್ರಗಿರಿಗೆ ಹೋದೆ.ನನ್ನ ತಮ್ಮನನ್ನು ನೋಡುತ್ತಲೇ ಮಕ್ಕಳು ಚಾಕಲೇಟಿಗೋಸ್ಕರ ಕಿರಿಕಿರಿ ಮಾಡತೊಡಗಿದರು. ಅವನು

ಅವರನ್ನು ಕರೆದುಕೊಂಡು ಮಾರುಕಟ್ಟೆಗೆ ಹೋದ. ನಾನು ಕೈಗೆ ಸಿಕ್ಕಿದ ಯಾವುದೋ ಪುಸ್ತಕವನ್ನು ಎತ್ತಿಕೊಂಡು ಓದತೊಡಗಿದೆ. ಸ್ವಲ್ಪಹೊತ್ತು ಕಳೆದಿರಬಹುದು.

'ಹಲೋ' ಎನ್ನುವ ಧ್ವನಿ ತೀರಾ ಹತ್ತಿರದಲ್ಲಿ ಕೇಳಿ ಬಂದದ್ದರಿಂದ ತಟಕ್ಕನೆ ತಲೆ ಎತ್ತಿ ನೋಡಿದೆ. ಎದುರಿಗೆ ಜಯಂತ್ ನಿಂತಿದ್ದ.

"ಯಾವಾಗ ಬಂದಿರಿ? ಇಲ್ಲಿರೋ ಹೂ ಗಿಡಗಳ ನಡುವೆ ನೀವೂ ಒಂದು ಹೂ ಬಳ್ಳಿಯಂತೆ ಬೆರೆತು ಹೋಗಿದ್ದೀರಿ" ಎಂದು ಅವನು ಮನದಾಳದಿಂದ ಆ ಮಾತು ಹೇಳುತ್ತಿರುವನೆಂದು ಅನ್ನಿಸಿದ್ದರಿಂದಲೋ ಏನೋ, ಅವನು ಮಿತಿ ಮೀರತೊಡಗಿದ್ದಾನೆಂದು ಭಾಸವಾಗುವ ಬದಲಾಗಿ, ಹೆಮ್ಮೆ ಎನಿಸಿತು. ತಟಕ್ಕನೆ ನಾಚಿಕೆ ನುಗ್ಗಿಬಂತು.

ವಾಸ್ತವಕ್ಕೆ ಅವನು ಆ ರೀತಿ ಹೊಗಳಿದ್ದು ಮಿತಿ ಮೀರಿದುದೆಂದೇ ಲೆಕ್ಕ. ಆದರೆ ಕೆಲ ವರ್ಷಗಳಿಂದ ಒಂದೇ ರೀತಿಯ ಯಾಂತ್ರಿಕ ಜೀವನಕ್ಕೆ ರೂಢಿಗೊಂಡಿದ್ದ ಮನಸ್ಸು ಬದಲಾವಣೆಯನ್ನು ಬಯಸುತ್ತಿತ್ತು. ಅದಕ್ಕೇ ಅವನ ಮೇಲೆ ಸಿಟ್ಟು ಬರಲಿಲ್ಲ. ಬದಲಾಗಿ ಅದೊಂದು ರೀತಿಯ ಹೆಮ್ಮೆ ನನ್ನನ್ನು ಉಬ್ಬಿಸಿತು. ನಮ್ಮೆಜಮಾನರು ಎಂದೂ ಈ ರೀತಿ ಮಾತಾಡಿದವರಲ್ಲ ನಾನು ಯಾವತ್ತಾದರೂ ಹೊಸ ಸೀರೆ ಉಟ್ಟುಕೊಂಡಾಗಲೂ ಅದು ತಮ್ಮ ಗಮನದಲ್ಲಿಲ್ಲವೆನ್ನುವಂತೆಯೇ ಇರುತ್ತಿದ್ದರು ಮೊದ ಮೊದಲಲ್ಲಿ ಅವರ ವರ್ತನೆಗೆ ಆಶ್ಚರ್ಯಗೊಳ್ಳುತ್ತಿದ್ದರೂ ಕ್ರಮೇಣ ಹೊಂದಿಕೊಂಡಿದ್ದೆ. ಅವರಿಂದ ನಾನ್ಯಾವತ್ತೂ ಹೊಗಳಿಕೆಯನ್ನು ನಿರೀಕ್ಷಿಸಿರಲಿಲ್ಲ.

"ನಿಮ್ಮೆಜಮಾನರು ಬಂಗ್ಳೋರಿಗೆ ಹೋಗಿದ್ದಾರಂತಲ್ಲ. ಮತ್ತೆ ನನ್ನ ಕೋರಿಕೆ ಈಡೇರಿಸುತ್ತೀರಾ? ಬರುತ್ತೇನೆ."

ತಟಕ್ಕನೆ ತಲೆ ಎತ್ತಿದೆ. ನನ್ನ ಕಣ್ಣುಗಳಲ್ಲಿ ಕೋಪ ಮೂಡಿತ್ತೋ, ಇಲ್ಲವೋ ಎನ್ನುವುದನ್ನು ನಾನು ಖಾತ್ರಿಯಾಗಿ ಹೇಳಲಾರೆ ಆದರೆ ನನ್ನ ರಕ್ತ ಚಲನೆಯ ವೇಗ ಹೆಚ್ಚಿತನ್ನುವುದು ಮಾತ್ರ ಗೊತ್ತಾಯ್ತು. ವಿಚಿತ್ರವೇನೆಂದರ ಅವನು ತಡವರಿಸಲಿಲ್ಲ. ಈ ಸಲ ಮತ್ತಷ್ಟು ಸ್ಪಷ್ಟವಾಗಿ ಕೇಳಿದ. "ನಿಮ್ಮ ವೀಣಾರವಳಿ ಕೇಳುವ ಭಾಗ್ಯವನ್ನು ಒದಗಿಸುತ್ತೀರಾ?"

ಅವನು ಕೇಳಿದ್ದು ಅದು. ಏನೇನೋ ಕಲ್ಪನೆ ಮಾಡಿಕೊಂಡಿದ್ದಕ್ಕೆ ನನಗೇ ನಾಚಿಕೆಯಾದಂತಾಯ್ತು. ಏನೂ ಹೇಳದೆ ತಲೆ ತಗ್ಗಿಸಿದೆ.

"ನಾಳೆ ಸಾಯಂಕಾಲ ಆರು ಗಂಟೆಗೆ ಬರುತ್ತೇನೆ" ಎಂದು ಮೆಲ್ಲಗೆ ಹೇಳಿದ. ನಾನು ಏನೋ ಹೇಳಬೇಕೆಂದು ಬಾಯಿ ತೆರೆಯುವಷ್ಟರಲ್ಲಿ ದೂರದಲ್ಲಿ

ಮಧುಸೂದನ್, ಮಕ್ಕಳು ಬರುತ್ತಿರುವುದು ಕಾಣಿಸಿದ್ದರಿಂದ ಸುಮ್ಮನಾದೆ. ಅವನು ಅವರನ್ನು ನೋಡಿ 'ಹಾಯ್' ಎನ್ನುತ್ತ ಎದುರು ಹೋದ. ಅವರು ಮಾತಾಡುತ್ತಿರುವಂತೆಯೇ ಉಳಿದ ಮಿತ್ರರು ಬಂದರು. ಎಲ್ಲರೂ ಹರಟೆಗೆ ತೊಡಗಿದರು. ಎಂಟುಗಂಟೆಯ ಹೊತ್ತಿನಲ್ಲಿ ನಾನು ಮಕ್ಕಳನ್ನು ಕರೆದು ಕೊಂಡು ತಿರುಗಿ ಬಂದುಬಿಟ್ಟೆ.

ಆ ರಾತ್ರಿಯೆಲ್ಲ ನನಗೆ ನಿದ್ದೆ ಹತ್ತಲಿಲ್ಲ. ಏನೇನೋ ಆಲೋಚನೆಗಳು ಮನಸ್ಸನ್ನು ಮುತ್ತಿ ಕಾಡತೊಡಗಿದವು. ಇಂತಹ ಅವಸ್ಥೆಯನ್ನೆಲ್ಲ ಮದುವೆಗೆ ಮುನ್ನ ಅನುಭವಿಸಬೇಕಿತ್ತು. ಆದರೆ ನನಗೆ ಸಾಧ್ಯವಾಗಿರಲಿಲ್ಲ. ನನಗೆ ಮದುವೆ ಸಂಸಾರ ಇತ್ಯಾದಿಗಳ ಬಗ್ಗೆ ಸರಿಯಾಗಿ ಅರಿವು ಮೂಡುವುದರೊಳಗೆಯೇ ಮದುವೆಯಾಗಿ ಹೋಗಿತ್ತು.

ಒಬ್ಬ ಗಂಡಸಿಗೋಸ್ಕರ ಸಾಯಂಕಾಲವಾಗುವಷ್ಟರಲ್ಲಿ ಅಂದವಾಗಿ ಅಲಂಕರಿಸಿಕೊಂಡು ಕಾಯುವುದು, ಅವನುಬೀದಿಯಲ್ಲಿ ಹೋಗುತ್ತಿರಬೇಕಾದರೆ ಓರೆಗಣ್ಣಿನಿಂದ ನೋಡುವುದು, ಯಾವುದಾದರೂ ರಾತ್ರಿ ಹೊತ್ತಿನಲ್ಲಿ, ಬೀದಿ ದೀಪಗಳಿಲ್ಲದೆಡೆ ಅವನು ತಟಕ್ಕನೆ ಕೆನ್ನೆಯ ಮೇಲೆ ಮುತ್ತಿಟ್ಟರೆ ಅದನ್ನು ಬೆಳಕು ಹರಿಯುವ ತನಕ ಮೃದುವಾಗಿ ನೇವರಿಸಿಕೊಳ್ಳುತ್ತಿರುವುದು, ಯಾರಾದರೊಬ್ಬ ಹುಡುಗಿ ಬಂದು, 'ಅಕ್ಕಾ! ಆ ಅಂಕಲ್ ನಿನಗೆ ಇದನ್ನು ಕೊಡಲು ಹೇಳಿದ' ಎಂದು ಪ್ರೇಮ ಪತ್ರ ಕೊಡುವುದು, ಅದನ್ನು ಮಧ್ಯ ರಾತ್ರಿಯ ಹೊತ್ತಿನಲ್ಲಿ ಎಲ್ಲರೂ ನಿದ್ದೆ ಮಾಡಿದ ನಂತರ ಸೀಮೆ ಎಣ್ಣೆ ದೀಪ ವನ್ನು ಮಂದವಾಗಿ ಉರಿಸುತ್ತ ಕಳ್ಳತನದಲ್ಲಿ ಓದುವುದು. ಇವೆಲ್ಲ ಯೌವನ ದಲ್ಲಿಯೇ ನಡೆಯಬೇಕು. ಇಲ್ಲದಿದ್ದರೆ ಯೌವನಕ್ಕೆ ಅರ್ಥವಿಲ್ಲ. ಇಂತಹ ಅನು ಭವಗಳು ಏನೂ ಇಲ್ಲದೆ ನೇರವಾಗಿ ಮದುವೆ ಮಾಡಿಕೊಳ್ಳುವುದು ಎಷ್ಟು ನಿಸ್ಸಾರವೆಂಬುದು ನನಗೆ ಗೊತ್ತಾಗತೊಡಗಿತ್ತು. ಮತ್ತೆ ನನಗೆ ಯೌವನ ಮೂಡಿದ ಅನುಭವವಾಗತೊಡಗಿತ್ತು. ಇದು ತುಂಬಾ ಮಹತ್ತರ ಅನುಭೂತಿ. ಬೆಳಗಿನ ಜಾವದಲ್ಲಿ ಯಾವಾಗಲೋ ನಿದ್ದೆ ಹತ್ತಿತು. ಮದುವೆಯಾದ ಮೇಲೆ ಮೊದಲ ಬಾರಿಗೆ ತಡವಾಗಿ ನಿದ್ದೆಯಿಂದೆದ್ದೆ. ಎಚ್ಚರವಾಗುತ್ತಲೇ ಆ ದಿನ ಸಾಯಂಕಾಲ ಜಯಂತ್ ಬರುತ್ತಾನೆನ್ನುವ ಯೋಚನೆ ನನ್ನನ್ನು ಸುತ್ತುವರಿ ಯಿತು. ಇಂತಹುದೆಂಬುದು ಗೊತ್ತಿರದ ಉತ್ಸಾಹ, ರೋಮಾಂಚನ ನನ್ನನ್ನು ಕುಣಿದಾಡುವಂತೆ ಪ್ರೇರೇಪಿಸುತ್ತಿತ್ತು. ನನ್ನೊಬ್ಬಳಿಗೇ ಹಬ್ಬ ಬಂದಿರು ವಂತಿತ್ತು.

ಸರಸರನೆ ಕೆಲಸಗಳೆಲ್ಲವನ್ನೂ ಮುಗಿಸಿದೆ. ಮಕ್ಕಳಿಬ್ಬರನ್ನೂ ಶಾಲೆಗೆ

ಕಳುಹಿಸಿದೆ. ಯಾವ ಕೆಲಸ ಮಾಡುತ್ತಿದ್ದರೂ ಜಯಂತ್ ಬರಲಿರುವನೆನ್ನುವ ಯೋಚನೆ ಆಂತರಿಕವಾಗಿ ಕಲವವನ್ನೆಬ್ಬಿಸುತ್ತಿತ್ತು. ಹಳತಾಗಿ ಹೋಗಿದ್ದ ಪ್ರಪಂಚಕ್ಕೆ ಹೊಸ ಮೆರುಗು ಬಂದಂತಿತ್ತು. ಪ್ರಪಂಚದಲ್ಲಿರುವ ಸೌಂದರ್ಯ ವೆಲ್ಲ ನನಗೊಬ್ಬಳಿಗೇ ಕಂಡು ಬರುತ್ತಿತ್ತು. ಇಷ್ಟು ಆನಂದವನ್ನು ಅನುಭವಿಸು ತ್ತಿರುವ ನಾನು ಎಲ್ಲರಿಗಿಂತಲೂ ಮಿಗಿಲಾದವಳೆನ್ನುವ ಹೆಮ್ಮೆ ಮೆಲ್ಲಮೆಲ್ಲಗೆ ಹರಡುತ್ತಿತ್ತು. ಉಳಿದವರೆಲ್ಲರೂ ಸುಮ್ಮನೆ ಯಾಂತ್ರಿಕವಾಗಿ ಜೀವನ ಸಾಗಿಸು ತ್ತಿರುವ ಜೀವಚ್ಛವಗಳೆನ್ನುವಂತೆ ಭಾಸವಾಯ್ತು.

ಕಾಲ ಹೇಗೆ ಸರಿಯಿತೆನ್ನುವದು ಗೊತ್ತಾಗಲಿಲ್ಲ. ಹಗಲು ಹೋಗಿ ಸಾಯಂಕಾಲ ಬಂದದ್ದು ಮಹೇಂದ್ರಜಾಲದಂತೆ ಭಾಸವಾಯ್ತು. ದಿನಾಲೂ ತೀರಾ ಸಾಮಾನ್ಯವಾಗಿ ಸರಿಯುತ್ತಿದ್ದ ಕಾಲದಲ್ಲಿನ ಮಾರ್ಪಾಡು ಮಹೇಂದ್ರ ಜಾಲದಂತೆ ಭಾಸವಾಗುತ್ತಿದೆಯೆಂದರೆ ಪ್ರೇಮ ಎಷ್ಟು ಮಹತ್ತರವಾದುದೆಂಬು ದನ್ನು ಯೋಚಿಸಿರೆಂದು ಜನರನ್ನು ಕೇಳಬೇಕೆನಿಸಿತು.

ಐದು ಗಂಟೆಯ ಹೊತ್ತಿಗೆ ತಯಾರಾದೆ. ಬಹುದಿನಗಳ ನಂತರ ಅತ್ಯು ತ್ಸಾಹದಿಂದ ಅಲಂಕರಿಸಿಕೊಂಡೆ. ತಿಳಿ ನೀಲಿ ಬಣ್ಣದ ಕಾಟನ್ ಸೀರೆ ಮೈಗೆ ಚೆನ್ನಾಗಿ ಒಪ್ಪುತ್ತಿತ್ತು. ಮಕ್ಕಳಿಬ್ಬರನ್ನೂ ನಮ್ಮ ಎದುರುಮನೆಯವರಲ್ಲಿ ಆಡಿಕೊಳ್ಳಲು ಬಿಟ್ಟು ಬಂದೆ. ವರಾಂಡದಲ್ಲಿನ ಬೆತ್ತದ ಕುರ್ಚಿಯಲ್ಲಿ ಕುಳಿತು ಕೊಂಡು ಕೈಗೆ ಸಿಕ್ಕಿದ ಪತ್ರಿಕೆಯೊಂದನ್ನು ಎತ್ತಿಕೊಂಡು ಸುಮ್ಮನೆ ತಿರುವಿ ಹಾಕತೊಡಗಿದೆ.

ಮಲ್ಲಿಗೆಯ ಸುವಾಸನೆಯನ್ನು ಹೊತ್ತೊಯ್ಯುತ್ತಿರುವಂತೆ ಗಾಳಿಯಲ್ಲಿ ಪರಿಮಳ ಹರಡಿತ್ತು. ಸೂರ್ಯನ ಎಳೆಬಿಸಿಲು ಭೂಮಿಗೆ ಬಂಗಾರದ ನೀರು ಕುಡಿಸಿರುವಂತಿತ್ತು. ಸೂರ್ಯ ಮರೆಯಾಗುತ್ತಲೇ ಬಂದು ಬಿಡೋಣವೆಂದು ಕತ್ತಲು ದೂರದಲ್ಲೆಲ್ಲೋ ಹೊಂಚುಹಾಕುತ್ತಿದ್ದಿರಬೇಕು.

ಆಗ ಜಯಂತ್ ಬಂದ. ಅವನನ್ನು ನೋಡುತ್ತಿದ್ದಂತೆಯೇ ನನ್ನ ಹೃದ ಯದ ಬಡಿತ ಒಂದು ಕ್ಷಣ ನಿಂತು, ಮತ್ತೆ ಪ್ರಾರಂಭವಾಯ್ತು,ಗೇಟು ತೆಗೆದು ಕೊಂಡು ಬಂದು, 'ಒಳಗೆ ಬರಬಹುದೆ' ಎಂದು ಕೇಳುತ್ತ ಅಲ್ಲಿಯೇ ನಿಂತು ಬಿಟ್ಟ. ನಾನು ಮುಗುಳ್ನಗುತ್ತ ತಲೆಯಾಡಿಸಿದೆ. ಅವನು ವರಾಂಡವೊಳಗೆ ಬಂದೊಡನೆಯೇ ಕುರ್ಚಿ ತೋರಿಸುತ್ತ 'ಕೂತ್ಕೋ' ಎಂದೆ.

'ಸಾಯಂಕಾಲದ ಹೊತ್ತು ನಿಮ್ಮನ್ನು ನೋಡುವುದುಅದ್ಭುತವಾದಅನು ಭವ' ಎಂದ ಜಯಂತ್. ನನ್ನ ಮೈಯಿನಕಣಕಣವೂ ವಿಚಿತ್ರ ಸ್ಪಂದನಕ್ಕೀಡಾ ದವು. ವಯಸ್ಸಿನ ವ್ಯತ್ಯಾಸದಿಂದಾಗಿಯೋ ಏನೋ ಅವನನ್ನುಬಹುವಚನದಿಂದ

ಕರೆಯಲು ನನ್ನಿಂದಾಗಲಿಲ್ಲ. ಅವನ ಸಲಿಗೆಯನ್ನು ನೋಡಿ ಆಶ್ಚರ್ಯ ಉಂಟಾಗುತ್ತಿತ್ತೇ ಹೊರತು ಕೋಪ ಬರಲಿಲ್ಲ. ಈ ರೀತಿ ನನಗೆ ಕೋಪ ಬರ ದಂತಿರುವುದಕ್ಕೆ ನನ್ನ ಗಂಡ... . ಕೂಡ ಆಷ್ಟಿಷ್ಟು... . ಜವಾಬ್ದಾರನೆಂದು ನನಗನ್ನಿಸಿತು.

ಒಳಗೆ ಹೋಗಿ ಕಾಫಿ ಮಾಡಿ ತಂದೆ ಒಂದು ಕಪ್ ಅವನಿಗೆ ಕೊಟ್ಟು ಮತ್ತೊಂದನ್ನು ನಾನೆತ್ತಿಕೊಂಡೆ. ಅವನು ಕಾಫಿ ಹೀರುತ್ತ, 'ಏನಿದು, ಅಕಾಲ ದಲ್ಲಿ ಅಮೃತ' ಎಂದ ನಾನು ಎಷ್ಟೇ ಚೆನ್ನಾಗಿ ಬಿರಿಯಾನಿ ಮಾಡಿದಾಗಲೂ ನನ್ನ ಗಂಡನ ಬಾಯಿಯಿಂದ ಒಂದು ಮೆಚ್ಚಿಗೆಯ ಮಾತು ಬಂದಿರಲಿಲ್ಲ. ಅವನ ನಾಟಕೀಯವಾದ ಸ್ವರದಲ್ಲಿ ಆ ರೀತಿ ಹೇಳುವುದನ್ನು ಕೇಳುತ್ತಿದ್ದರೆ ಮತ್ತೊಂದು ಸಲ ಕಾಫಿ ಮಾಡಿ ತಂದುಕೊಡಬೇಕೆನಿಸಿತು.

'ನಿಮ್ಮ ತಾರಸಿಯ ಮೇಲೆ ವೀಣೆ ಕೇಳುವ ಭಾಗ್ಯ ಒದಗಿಸುತ್ತೀರಾ?' ಎಂದು ಕೇಳಿದ ಜಯಂತ್ ನಾನು ಮೌನವಾಗಿ ಎದ್ದು ಮನೆಯೊಳಗೆ ಹೋದೆ. ನನ್ನ ಹಿಂದೆಯೇ ಜಯಂತ್ ಬಂದ. ಎಂದೋ ಮೂಲೆಯಲ್ಲಿಟ್ಟಿದ್ದ ವೀಣೆಯ ಮೇಲಿನ ಧೂಳು ಜಾಡಿಸಿ ಸಿದ್ಧ ಮಾಡಿಟ್ಟಿದ್ದೆ. ಅದನ್ನೂ, ಒಂದು ದುಪ್ಪಟಿ ಯನ್ನೂ ತೆಗೆದುಕೊಂಡು ತಾರಸಿಯ ಮೇಲೆ ಹೋದೆ. ಹಿಂದೆಯೇ ಜಯಂತ್ ದುಪ್ಪಟಿಯನ್ನು ಹರಡಿ, ಅದರ ಮೇಲೆ ಕುಳಿತುಕೊಂಡು ಶ್ರುತಿ ಸರಿ ಮಾಡಿ ಕೊಳ್ಳತೊಡಗಿದ ಜಯಂತ್ ನನ್ನ ಎದುರಿಗಿದ್ದ ಮೋಟುಗೋಡೆಯ ಮೇಲೆ ಕುಳಿತುಕೊಂಡು ನನ್ನತ್ತಲೇ ದಿಟ್ಟಿಸಿನೋಡುತ್ತಿದ್ದ. ಅಷ್ಟೊತ್ತಿಗಾಗಲೇ ಕತ್ತಲು ಆವರಿಸಿಕೊಳ್ಳತೊಡಗಿತ್ತು. ದೂರದಲ್ಲಿದ್ದ ಬೀದಿ ದೀಪದ ಬೆಳಕು ಕ್ಷೀಣವಾಗಿ ಬೀಳುತ್ತಿತ್ತು.

ವೀಣೆ ಶ್ರುತಿಯಾದ ನಂತರ ಮೆಲ್ಲಗೆ ಮೀಟಿದೆ. ಎರಡು ಕೃತಿಗಳನ್ನು ನುಡಿಸಿದೆ ನಡುವೆ ಅವನು ಏನೂ ಮಾತಾಡಲಿಲ್ಲ. ನುಡಿಸುವುದು ಮುಗಿದ ನಂತರ ಒಂದೇ ಹಾರಿಕೆಗೆ ನನ್ನ ಬಳಿ ಬಂದು ಕೆಳಗೆ ಕುಳಿತುಕೊಳ್ಳುತ್ತ. 'ಅದ್ಭುತವಾಗಿ ನುಡಿಸಿದಿರಿ. ನಿಮಗೆ ತುಂಬಾ ಬೆಲೆಬಾಳುವುದನ್ನೇನಾದರೂ ಕೊಡಬೇಕೆ ಂದಿದೆ ಆದರೆ ಏನು ಕೊಡಬಲ್ಲೆ?' ಎಂದ. ಅವನು ನಿಜಕ್ಕೂ ಆ ಸಂಗೀತದಿಂದ ಆನಂದಪಟ್ಟಿರುವನೆಂಬುದನ್ನು . .. ಅವನ ಧ್ವನಿಯೇ ಹೇಳುತ್ತಿತ್ತು.

"ಏನೂ ಕೊಡಬೇಕಾಗಿಲ್ಲ. ಯಾವತ್ತೋ ಕಲಿತದ್ದು ನೀನು ಕೇಳಿದ್ದರಿಂದ ಧೂಳು ಹಿಡಿದ ವೀಣೆಯನ್ನು ಹೊರತೆಗೆದು ನುಡಿಸಿದೆ."

ಅವನು ಏನೂ ಮಾತಾಡಲಿಲ್ಲ. ಅವನಿನ್ನೂ ಆ ರಸಾನುಭೂತಿಯಿಂದ

ಹೊರಬಂದವನಂತಿರಲಿಲ್ಲ. ಆ ರೀತಿ ಮೌನವಾಗಿ ಹತ್ತು ನಿಮಿಷಗಳು ಉರುಳಿ ಹೋದವು ಆ ನಂತರ ಚೇತರಿಸಿಕೊಂಡವನಂತೆ ಜಯಂತ್ ಮಿಸುಕಾಡಿ ನನ್ನ ಕೈ ಎತ್ತಿಕೊಂಡು ಮುಂಗೈನ ಮೇಲೆ ಮೃದುವಾಗಿ ತುಟಿ ಒತ್ತಿ, ಮತ್ತೇನೂ ಮಾತಾಡದೆ ಮೇಲೆದ್ದು ಹೊರಟು ಹೋದ. ಗೇಟು ತೆರೆದದ್ದು, ತಿರುಗಿ ಮುಚ್ಚಿದ್ದು ಮಾತ್ರ ಕೇಳಿ ಬಂತು.

ಅವನು ಮುತ್ತಿಡುವನೆಂದು ಊಹಿಸಿರದಿದ್ದ ನಾನು ಹಾಗೆಯೇ ಕುಳಿತಿದ್ದುಬಿಟ್ಟೆ. 'ಇದಮಿತ್ಥಂ' ಎಂದು ಹೇಳಲಾಗದ ಭಾವನೆಗಳು ನನ್ನ ಮನಸ್ಸಿನಲ್ಲಿ ಸುಳಿದಿರುಗುತ್ತಿದ್ದವು. ಅದಕ್ಕೇ ಇಂತಹವುಗಳನ್ನು ಪ್ರಾರಂಭಿಸಕೂಡದು. ಒಂದು ಸಲ ಪ್ರಾರಂಭಿಸಿದರೆ ಅವು ಎಲ್ಲಿ ನಿಲ್ಲುತ್ತವೋ, ಯಾವ ತಿರುವು ಪಡೆಯುತ್ತವೋ ಎಂಬುದನ್ನು ಹೇಳಲಾಗದು.

ಮೊಟ್ಟಮೊದಲ ಬಾರಿಗೆ ಗಂಡನಲ್ಲದ ಮತ್ತೊಬ್ಬ ಗಂಡಸು ನನ್ನನ್ನು ಮುಟ್ಟಿದ್ದ. ಅದು ಸಂತೋಷವೋ, ನೋವೋ, ಎನ್ನುವುದು ನನಗೆ ಗೊತ್ತಾಗಲಿಲ್ಲ. ಆ ಎರಡರ ನಡುವೆ ಅಷ್ಟು ಅತ್ಯಲ್ಪ ವ್ಯತಾಸವಿದೆ ಎನ್ನುವುದು ಕೂಡ ಆದೇ ಮೊದಲ ಬಾರಿಗೆ ನನಗೆ ಗೊತ್ತಾಯ್ತು. ಆದಕ್ಕೆ ಏನೋ ನಕ್ಕರೂ, ಅತ್ತರೂ ಕಣ್ಣೀರು ಬರುವುದು.

ಕತ್ತಲು ನನ್ನನ್ನು ಸುತ್ತುಗಟ್ಟುತ್ತಿರುವಂತಿತ್ತು. ಆ ರೀತಿ ಎಷ್ಟು ಹೊತ್ತು ಕುಳಿತಿದ್ದೆನೆಂಬುದು ನನಗೆ ಗೊತ್ತಾಗಲಿಲ್ಲ. ಮಕ್ಕಳಿಬ್ಬರೂ ಕೆಳಗಿನಿಂದ ಕೂಗಿದ್ದನ್ನು ಕೇಳಿ ಎಚ್ಚರಗೊಂಡವಳಂತೆ ಎದ್ದು ಕೆಳಗಿಳಿದು ಬಂದೆ. ಮಕ್ಕಳಿಬ್ಬರಿಗೂ ಊಟ ಮಾಡಿಸಿ ಮಲಗಿಸಿದೆ. ನನಗೆ ಮಾತ್ರ ಹಸಿವು ಸತ್ತು ಹೋದಂತಾಗಿತ್ತು. ಹಾಗೆಯೇ ಹಾಸಿಗೆಯ ಮೇಲೊರಗಿದೆ.

ಬಹುಕಾಲದ ನಂತರ ಬದುಕಿರುವೆನೆನ್ನುವ ಭಾವನೆ ಉಂಟಾಗುತ್ತಿತ್ತು. ಒಟ್ಟನಲ್ಲಿ ಒಂದನ್ನು ಮಾತ್ರ ಸ್ಪಷ್ಟವಾಗಿ ಹೇಳಬಲ್ಲೆ. ನಮ್ಮ ಅಸ್ತಿತ್ವ ನಮಗೆ ಗೊತ್ತಾಗಬೇಕೆಂದರ ನೋವೋ, ಆನಂದವೋ ಇರಬೇಕು. ಆದರೆ ನಮ್ಮೆಲ್ಲರ ಜೀವನ ಬಹು ಪಾಲು ಯಾಂತ್ರಿಕವಾಗಿ ಸಾಗಿ ಹೋಗುತ್ತಿರುತ್ತದೆ ನಾವು ಬದುಕಿದ್ದವರೆನ್ನುವ ಭಾವನೆಯುಂಟಾಗುವುದಿಲ್ಲ.ಅದಕ್ಕೇ ಬಹಳಷ್ಟು ಜನರಲ್ಲಿ ಜೀವಕಳೆ ಇರುವುದಿಲ್ಲ.

ನಮ್ಮಿಬ್ಬರ ನಡುವೆ ಒಂದು ರಹಸ್ಯ ಪ್ರಾರಂಭವಾಗಿಬಿಟ್ಟಿತು. ಈ ರಹಸ್ಯದಲ್ಲಿ ನನ್ನ ಗಂಡನಿಗಾಗಲಿ, ನನ್ನ ತಂದೆ ತಾಯಿಗಳಿಗಾಗಲಿ, ನನ್ನ ಸ್ನೇಹಿತೆಯರಿಗಾಗಲಿ– ಯಾರಿಗೂ ಎಂತಹುದೇ ಭಾಗ ಇಲ್ಲ. ಇದು ನನ್ನೊಬ್ಬಳಿಗೇ ಸೀಮಿತ. ಇದನ್ನು ಯಾರೊಂದಿಗೂ ಹೇಳಿಕೊಳ್ಳಲಾರೆನೆನ್ನುವ ಸತ್ಯ

ಗೊತ್ತಾದ ನಂತರ, ನಮಗೆ ಉಂಟಾದ ಆನಂದ ನಮಗಷ್ಟೇ ಸೀಮಿತವೆನಿಸಿದ ಮೇಲೆ ಯಾವುದೋ ಅಳವಿಗೆ ಸಿಗದ ಅಮೃತ ಭಾಂಡವನ್ನು ಹೃದಯದಲ್ಲಿ ಬಚ್ಚಿಟ್ಟುಕೊಳ್ಳುತ್ತಿರುವಂತೆ ಪ್ರತಿಕ್ಷಣವೂ ಕಕ್ಕಾಬಿಕ್ಕಿಗೊಳ್ಳುತ್ತಿರುತ್ತೇವೆ. ಸಧ್ಯಕ್ಕೆ ನಾನೂ ಅದೇ ಸ್ಥಿತಿಯಲ್ಲಿದ್ದ. ನನಗರಿವಿಲ್ಲದಂತೆಯೇ ನನ್ನ ಮುಂಗೈಯನ್ನು ಪದೇ ಪದೇ ನೋಡಿಕೊಳ್ಳುತ್ತಿದ್ದ. ಅವನು ಆ ರೀತಿ ಮುತ್ತಿಟ್ಟದ್ದು ನನಗೆ ಇಷ್ಟವಾಯ್ತೋ, ಇಲ್ಲವೋ ಎನ್ನುವುದು ಕೂಡ ನನಗೆ ಸ್ಪಷ್ಟವಾಗಿ ಗೊತ್ತಾಗಿರಲಿಲ್ಲ.

ಇಂತಹುದೆಲ್ಲ ನಡೆದ ನಂತರ ಅವನನ್ನು ನಾನು ಯಾವ ರೀತಿಯಾಗಿ, ಎಷ್ಟರ ಮಟ್ಟಿಗೆ ಬಯಸುತ್ತಿರುವೆನೆಂಬುದನ್ನು ತಿಳಿದುಕೊಳ್ಳಬೇಕೆಂದರೆ ಮನಸ್ಸಿನಾಳವನ್ನು ಶೋಧಿಸಿ ನೋಡಿಕೊಳ್ಳಬೇಕು. ಆದರೆ ಬಹಳಷ್ಟು ಜನರಂತೆ ನಾನೂ ನನ್ನೊಳಗೆ ಇಣುಕಿ ನೋಡಿಕೊಳ್ಳಲು ಭಯಪಟ್ಟೆ.

ಮನುಷ್ಯ ಎಂತಹ ದೌರ್ಭಾಗ್ಯದ ಸ್ಥಿತಿಯಲ್ಲಿ ಬದುಕುತ್ತಿರುವನೆಂದರೆ ತಾನೆಂದರೆ ಏನೆಂಬುದು ಕೂಡ ಗೊತ್ತಿರದ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾನೆ. ಇಂತಹ ಸಂದಿಗ್ಧತೆ ಹೆಂಗಸರಲ್ಲಿ ಜಾಸ್ತಿ. ಅವರು ಮನಸ್ಸು ಬಳಸಿ ಯೋಚಿಸುತ್ತಾರೆಯೇ ಹೊರತು, ಮಿದುಳು ಉಪಯೋಗಿಸಿ ಯಾವುದನ್ನೂ ವಿಶ್ಲೇಷಣೆ ಮಾಡಿ ನೋಡಿಕೊಳ್ಳುವುದಿಲ್ಲ. ಅದಕ್ಕೇ ಯಾರನ್ನು ಯಾವ ಪರಿಧಿಯೊಳಗೆ ಇಡಬೇಕೆಂಬುದು ಗೊತ್ತಾಗುವುದಿಲ್ಲ. ಒಬ್ಬ ವ್ಯಕ್ತಿ ಯಾವಾಗಲಾದರೂ ಸ್ವಲ್ಪ ಮುಂದುವರಿದರೆಂದರೆ ಇಂತಹವರು ಆಘಾತಕ್ಕೀಡಾಗುತ್ತಾರೆ. 'ಅವನನ್ನು ಎಂದೂ ಆ ದೃಷ್ಟಿಯಿಂದ ನೋಡಿರಲಿಲ್ಲ. ಆದರೆ ಈ ದಿನ ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದಿರುವಾಗ ಬಂದು ಕೈ ಹಿಡಿದುಕೊಂಡ' ಎಂದು ಕಣ್ಣರಳಿಸಿ . ... ಗಂಡು . ಜಾತಿಯ ಮೇಲೆಯೇ ಗೌರವವಿಲ್ಲದಂತೆ ಮಾತಾಡುತ್ತಾರೆ.

ನಾನೂ ಅಷ್ಟೇ ಆದಕ್ಕೇ ಜಯಂತನೊಂದಿಗೆ ಎಂತಹ ಸಂಬಂಧವನ್ನು ಬಯಸುತ್ತಿರುವೆನೆಂಬುದನ್ನು ವಿಶ್ಲೇಷಣೆ ಮಾಡಿಕೊಳ್ಳಲಿಲ್ಲ. ಅವನು ನನ್ನ ಕಣ್ಣಿಗೆ ಶೀರಾ ಯಾಂತ್ರಿಕವಾದ ಸಂಸಾರ ಜೀವನದಿಂದ ಹೊರಗೆಳೆದು ರೋಮಾಂಚನವನ್ನುಂಟು ಮಾಡುತ್ತಿರುವ ಮಾಂತ್ರಿಕನಂತೆ ಕಂಡುಬರುತ್ತಿದ್ದ. ಮದುವೆಗೆ ಮುನ್ನ ಇಂತಹ ರೋಮಾಂಚಕ ಅನುಭವ ಉಂಟಾಗದಿರುವುದೇ ಇದಕ್ಕೆ ಕಾರಣವಿದ್ದಿರಬಹುದು. ಆದಕ್ಕೇ ಪ್ರತಿಯೊಂದು ಹೆಣ್ಣು ಮದುವೆಗೆ ಮುನ್ನ ಇಂತಹುದ್ಯಾವುದೋ ಅನುಭವವನ್ನು ಸ್ವಲ್ಪ ಮಟ್ಟಿಗೆ ಅನುಭವಿಸಿರಬೇಕು ಎನಿಸಿತು. ನನ್ನ ಗಂಡ ಎಂತಹುದೇ ಭಾವನೆಗಳನ್ನು ನನ್ನ ಬಳಿ ವ್ಯಕ್ತ

ಪಡಿಸದಿರುವುದರಿಂದಾಗಿ ಈ ಅನುಭವ ಮತ್ತಷ್ಟು ಚೆನ್ನೆನಿಸುತ್ತಿತ್ತು.

ನಿದ್ದೆ ಬಹಳ ಹೊತ್ತಿನವರೆಗೆ ನನ್ನಬಳಿಸುಳಿಯಲಿಲ್ಲ. ಕೊನೆಗೊಮ್ಮೆ ನನಗೆ ನಿದ್ದೆ ಬಂದಾಗ ಪೂರ್ವ ದಿಕ್ಕಿನಲ್ಲಿ ಶುಕ್ರ ತನ್ನ ಜೊತೆಗೋಸ್ಕರ ಹುಡುಕಾಡುತ್ತಿದ್ದಿರಬೇಕು.

ಬೆಳಿಗ್ಗೆ ಒಂಭತ್ತು ಗಂಟೆಗೆ ನನ್ನ ಗಂಡ ಊರಿನಿಂದ ಬಂದ. ಬರುತ್ತಿದ್ದಂತೆಯೇ ಗಡಿಬಿಡಿಯಿಂದ ಆಫೀಸಿಗೆ ಹೋದ. ಇಲ್ಲವೆಂದಿದ್ದರೆ ನನ್ನ ಗಾಬರಿಯನ್ನು ಬಚ್ಚಿಟ್ಟುಕೊಳ್ಳುವುದು ಕಷ್ಟಕರವಾಗಿದ್ದಿರುತ್ತಿತ್ತು.

ಆ ದಿನ ಸಾಯಂಕಾಲ ಯಥಾಪ್ರಕಾರ ನಾವೆಲ್ಲ ಚಂದ್ರಗಿರಿಗೆಹೋದೆವು. ನಾವು ಹೋಗುವಷ್ಟರಲ್ಲಿ ಜಯಂತ್ ತನ್ನ ಮಿತ್ರ ಬಳಗದೊಂದಿಗೆ ಅಲ್ಲಿ ಹಾಜರಿದ್ದ. ನಾವಿಬ್ಬರೂ ಪರಸ್ಪರರನ್ನು ನೋಡುವುದು ಹೊಸತಿನ ಅನುಭವ ನೀಡುತ್ತಿತ್ತು. ಅದಕ್ಕೆ ಕಾರಣ-ಮುಂಚೆ ಇರದಿದ್ದ ರಹಸ್ಯ ನಮ್ಮ ನಡುವೆ ಪ್ರಾರಂಭವಾಗಿದ್ದುದೇ. ಆಗಾಗ ಅವನನ್ನು ಗಮನಿಸುವುದು, ಅವನ ಧ್ವನಿ ಕೇಳಿಬರುತ್ತದೇನೋ ಎಂದು ಕಿವಿ ನಿಮಿರಿಸುವುದು, ಸಾಧ್ಯವಾದಾಗಲೆಲ್ಲ ಮುನ್ನಾದಿನದ ಸಾಯಂಕಾಲವನ್ನು ಕಣ್ಣೆದುರಿಗೆ ಮೂಡಿಸಿಕೊಳ್ಳುವುದು ಇವುಗಳಲ್ಲಿಯೇ ಸಮಯ ಸರಿದುಹೋಯ್ತು. ಆ ರೀತಿ ಒಂದು ವಾರ ಕಳೆಯಿತು. ಆಗಾಗ ಅವನು ಮಾತಾಡಿಸಬೇಕೆಂದು ಪ್ರಯತ್ನಿಸಿದನಾದರೂ ಅದಕ್ಕೆ ಅವಕಾಶವಾಗಲಿಲ್ಲ. ಕೊನೆಗೊಮ್ಮೆ ಅವನಿಂದ ತಡೆದುಕೊಳ್ಳಲಾಗಲಿಲ್ಲವೇನೋ ಆ ದಿನ ಎಲ್ಲರೂ ತಿರುಗಿ ಮನೆಯತ್ತ ಹೊರಡಲಿದ್ದಾಗ, ಯಾರ ಕಣ್ಣಿಗೂ ಬೀಳದಂತೆ ನನ್ನ ಕೈಗೊಂದು ಪತ್ರ ಕೊಟ್ಟ. ನಾನು ಚೇತರಿಸಿಕೊಳ್ಳುವುದರೊಳಗಾಗಿ ಅವನು ನನ್ನನ್ನು ದಾಟಿ ಮುಂದೆ ಹೋದ. ಆ ಪತ್ರವನ್ನು ಏನು ಮಾಡಬೇಕೆಂದು ಹೊಳೆಯದೆ, ಕುಪ್ಪಸದಲ್ಲಿಟ್ಟುಕೊಂಡೆ.

ಮನೆಗೆ ಬಂದ ನಂತರ, ಎಲ್ಲರೂ ಮಲಗಿದ ಮೇಲೆ ಬಾತ್‌ರೂಮಿನಲ್ಲಿ ಆ ಪತ್ರವನ್ನು ಬಿಚ್ಚಿ ನೋಡಿದೆ. ಬಿಳಿ ಹಾಳೆಯ ಮೇಲೆ ಬಣ್ಣದ ಸ್ಕೆಚ್‌ಪೆನ್ನಿನಿಂದ ಬರೆದ ಅಕ್ಷರಗಳು ಒಂದೇ ಅಕ್ಷರಗಳು ಒಂದೇ ಪಂಜರದಲ್ಲಿ ಬಂಧಿಸಿಟ್ಟ ವಿಧವಿಧವಾದ ಪಕ್ಷಿಗಳಂತೆ ಭಾಸವಾದವು. ಅದರಲ್ಲಿ 'ನಾಳೆ ಬೆಳಿಗ್ಗೆ ಹನ್ನೊಂದು ಗಂಟೆಗೆ ಬರುತ್ತೇನೆ.' ಎನ್ನುವ ಒಂದೇ ಒಂದು ಸಾಲಿತ್ತು. ಯಾಕೊ ಅದನ್ನು ಎಸೆಯುವ ಬುದ್ಧಿಯಾಗಲಿಲ್ಲ.

ನನ್ನ ಜೀವನದಲ್ಲಿ ಅದು ನನಗೆ ಬಂದ ಮೊದಲ ಪತ್ರ. ನಾನು ಹೆಂಗೆಗೆ ತವರು ಮನೆಗೆ ಹೋಗಿದ್ದಾಗಲೂ ನನ್ನ ಗಂಡ ಒಂದು ಪತ್ರವನ್ನೂ ಬರೆದಿರಲಿಲ್ಲ. ತಾಯಿ ಅಜ್ಜಿಯರು ಬರೆದು ಕ್ಷೇಮ ಸಮಾಚಾರದ ಪತ್ರಗಳನ್ನು ಬಿಟ್ಟರೆ

ಈ ರೀತಿ ವೈಯಕ್ತಿಕವಾದ ಪತ್ರ ಸ್ವೀಕರಿಸಿದ್ದು ಇದೇ ಮೊದಲು. ಅದಕ್ಕೇ ಅದನ್ನು ತಂದು ನನ್ನ ಸೂಟ್‌ಕೇಸಿನ ಅಡಿಯಲ್ಲಿ ಬಚ್ಚಿಟ್ಟೆ.

ಬಂದು ಮಲಗಿಕೊಂಡೆನಾದರೂ ನಿದ್ದೆ ಬರಲಿಲ್ಲ. ಯಾವುಯಾವುದೋ ಆಲೋಚನೆಗಳು ಕಾಡುತ್ತಲೇ ಇದ್ದವು. ಇದೇ ಅವನೊಂದಿಗೆ ಮುಂದುವರಿಸಿದರೆ ಏನಾಗುತ್ತದೆಂಬುದು ಗೊತ್ತಾಗುತ್ತಲೇ ಇತ್ತು. ಈ ಭೇಟಿಗಳೂ, ಮಾತಾಡುವುದೂ, ಪತ್ರಗಳೂ, ಫೋನ್ ಸಂಭಾಷಣೆ ಇಲ್ಲಿಯವರೆಗಷ್ಟೇ ನನಗೆ ಬೇಕು. ಆ ನಂತರದ್ದು ಇಷ್ಟವಿಲ್ಲ. ಆದರೆ ಇವೆಲ್ಲ ಒಬ್ಬ ಗಂಡಸಿನ ಬಳಿಯಿಂದ ಬರಬೇಕೆಂದರೆ ಅವನು ಬಯಸಿದ್ದನ್ನು ಅವನಿಗೆ ಕೊಡಬೇಕು.

ಮತ್ತೆ ದಿನವೆಲ್ಲ ರೋಮಾಂಚನವನ್ನೊದಗಿಸುವ ಪತ್ರಗಳು ಫೋನ್ ಸಂಭಾಷಣೆಗಳಿಗೋಸ್ಕರ ನನ್ನನ್ನು ನಾನು ಅವನಿಗೆ ಅರ್ಪಿಸಿಕೊಳ್ಳಬೇಕೇ? ಅಥವಾ ಅರ್ಪಿಸಿಕೊಳ್ಳುವುದು ಇಷ್ಟವಿರದಿದ್ದರೆ ಇವನ್ನೆಲ್ಲ ಬಿಟ್ಟುಕೊಡಬೇಕೆ? ಎನ್ನುವ ಮಾನಸಿಕ ತಾಕಲಾಟ ನನ್ನಲ್ಲಿ ಶುರುವಾಯ್ತು. ನಾಲ್ಕು ಗಂಟೆಗಳ ನಂತರವೂ ನನ್ನಿಂದ ಏನನ್ನೂ ನಿರ್ಣಯಿಸಿಕೊಳ್ಳಲಾಗಲಿಲ್ಲ.

ಮರುದಿನ ಸರಿಯಾಗಿ ಹೇಳಿದ ಸಮಯಕ್ಕೆ ಜಯಂತ್ ಬಂದ. ನನ್ನ. ಗಂಡ ಆಫೀಸಿಗೆ ಹೋಗಿದ್ದರು. ಮಕ್ಕಳು ಶಾಲೆಗೆ ಹೊರಟು ಹೋಗಿದ್ದರು. ನಾವು ವರಾಂಡದಲ್ಲಿ ಕುಳಿತುಕೊಳ್ಳದೆ ಹಾಲ್‌ನಲ್ಲಿ ಕುಳಿತುಕೊಂಡೆವು. ಕಾಫಿ ಸೇವನೆಯಾದ ನಂತರ ಜಯಂತ್ ನಮ್ಮ ಬೆಡ್‌ರೂಮಿನತ್ತ ನೋಡುತ್ತ, 'ನಿಮ್ಮ ಶೃಂಗಾರ ಸಾಮ್ರಾಜ್ಯ ಅದೇ ಏನು'' ಎಂದು ನಗುತ್ತ ನನ್ನತ್ತ ನೋಡಿ ಕೇಳಿದ ಅವನು ಬಹುದಿನಗಳ ಕಾಲ ಆ ರೀತಿ ನನ್ನನ್ನು ನೋಡುತ್ತ ದೂರವಾಗಿ ಕುಳಿತುಕೊಳ್ಳಲಾರನೆಂದು ನನಗೆ ಗೊತ್ತಾಗುತ್ತಿತ್ತು. ಯಾವುದೋ ಹಿಂಜರಿತ ಭಯ, ಒಂದಿಷ್ಟು ಸಂಸ್ಕಾರ ಕುಣಿದಾಡುತ್ತಿರುವ ಅವನ ಅವಯವಗಳಿಗೆ ಲಗಾಮು ಹಾಕುತ್ತಿದೆಯೇ ಹೊರತು ಮನಸ್ಸು ಮಾತ್ರ ವಾಂಛೆಯಲ್ಲಿ ಕುದಿಯುತ್ತಿರುವ ವಿಷಯ ಅರ್ಥವಾಗುತ್ತಿತ್ತು. ವರಾಂಡದೊಳಗಿಂದ ಹಾಲ್‌ನೊಳಗೆ ಬಂದ ಅವನು ಬೆಡ್‌ರೂಮಿನೊಳಗೆ ನುಗ್ಗಲು ಬಹಳ ಕಾಲ ಹಿಡಿಯ್ಯದೆಂಬುದು ಅರ್ಥವಾಯ್ತು.

ಅವನ ವಯಸ್ಸು ಅಂತಹುದು. ಅವನು ಹಸಿವಿನಿಂದಿದ್ದವನು. ಹಸಿವು ತುಂಬಿಸಿಕೊಂಡಿದ್ದವಳು ....... ನಾನು. ಆ ವ್ಯತ್ಯಾಸ ನಮ್ಮ ನಮ್ಮಗಳ ಚೇಷ್ಟೆಗಳಲ್ಲಿಯೇ ವ್ಯಕ್ತವಾಗುತ್ತಿತ್ತು. ಆ ಒಂದು ವಿಷಯವನ್ನು ಹೊರತಾಗಿಡಬೇಕೆಂದುಕೊಳ್ಳುತ್ತಿದ್ದೆ. ಆ ರೀತಿ ನಾನು ವರ್ತಿಸಿದರೆ ಈ ಥ್ರಿಲ್ ಎಲ್ಲ ಎಲ್ಲಿ ಅದೃಶ್ಯವಾಗಿಬಿಡುತ್ತದೋ ಎನ್ನುವ ಭಯ ನನ್ನಲ್ಲಿತ್ತು.

‘ನೀವು ಅದರ ಮೇಲೆ ದಿನಾಲೂ ಎಷ್ಟೆಲ್ಲ ಸುಖ ಅನುಭವಿಸುತ್ತೀರಲ್ಲವೆ’ ಎಂದ ಜಯಂತ್. ನನ್ನ ಮೇಲೆ ಹುಚ್ಚು ಮೋಹ ಶುರುವಾಗಿದೆ ಎನ್ನುವುದನ್ನು ಅವನ ಮಾತುಗಳೇ ಹೇಳುತ್ತಿದ್ದವು.

‘ಅಂತಹ ಮಾತೆಲ್ಲ ಆಡಬಾರದು. ನಾನು ಮದುವೆಯಾಗಿರುವವಳು’ ಎಂದೆ.

“ನೀವು ಮದುವೆಯಾಗದೆ ಹದಿನಾರು ವರ್ಷದ ಕನ್ಯಾಕುಮಾರಿಯಾಗಿದ್ದಿದ್ದರೆ ಬಹುಶಃ ನಿಮ್ಮ ಮೇಲೆ ಇಷ್ಟು ಮೋಹ ಇದ್ದಿರುತ್ತಿದ್ದಿಲ್ಲವೇನೋ” ಎಂದ. ಅವನ ಉತ್ತರ ನನ್ನ ತಲೆಯನ್ನು ಗಿರ್ರೆನ್ನಿಸಿತು. ಮದುವೆಯಾಗಿದ್ದೇ ಅವನು ನನ್ನನ್ನು ಇಷ್ಟಪಡಲು ಇರುವ ಕ್ವಾಲಿಫಿಕೇಶನ್ ಎಂದು ನೇರವಾಗಿ ಹೇಳಿದ್ದ.

“ಅನುಭವದಿಂದ ಹಣ್ಣಾಗಿರುವ ನಿಮ್ಮ ಸೌಂದರ್ಯ ನನ್ನನ್ನು ಹುಚ್ಚನನ್ನಾಗಿ ಮಾಡುತ್ತಿದೆ” ಎಂದು ಹೇಳಿ ನೋಟ ತಗ್ಗಿಸಿದ. ಈ ಸಲ ಅವನು ಗಂಭೀರನಾದ. ತಾನು ಹೇಳುತ್ತಿರುವುದರಲ್ಲಿ ಇದ್ದ ಸತ್ಯದ ಗಾಢತೆ ನನಗರ್ಥವಾಗಲೆಂದೇ ಗಂಭೀರವಾದನೆಂಬುದು ಗೊತ್ತಾಯ್ತು.

“ವಿವಾಹಿತೆಯಾಗಿ ನನಗೆ ಕೆಲವೊಂದು ಮಿತಿಗಳಿವೆ. ಅವುಗಳನ್ನು ಮೀರಿದರೆ ನನ್ನ ಪರಿಸ್ಥಿತಿ ಎಷ್ಟು ದಾರುಣವಾಗಿ ತಯಾರಾಗುತ್ತದೆನ್ನುವುದನ್ನು ಯೋಚಿಸಿ ನೋಡು” ಎಂದೆ.

‘ಅಂದರೆ ನಿಮಗೆ ಇಷ್ಟವೇ ಎಂದಾಯ್ತು’ ಎಂದ ಜಯಂತ್. ಅವನ ಕಣ್ಣುಗಳಲ್ಲಿ ಆನಂದ ಚಿಮ್ಮಿತು. ಅಲ್ಲಿಯವರೆಗೂ ನಾನು ಇಷ್ಟವಿಲ್ಲವೆಂದು ಹೇಳುತ್ತೇನೇನೋ ಎನ್ನುವ ಅನುಮಾನ ಮಟಾಮಾಯವಾದುದರಿಂದ ಮುಖ ಮತ್ತಷ್ಟು ಕಾಂತಿಯುಕ್ತವಾಯ್ತು. ಸ್ತ್ರೀಯೊಬ್ಬಳು ತನ್ನನ್ನು ಸ್ವೀಕರಿಸಿದಾಗ ಗಂಡಸು ಅಷ್ಟರ ಮಟ್ಟಿಗೆ ಉತ್ಸುಕತೆಗೀಡಾಗುತ್ತಾನೆನ್ನುವುದು ನನಗೆ ಗೊತ್ತಿರಲಿಲ್ಲ. ಆದರೆ ನಾನು ವ್ಯಕ್ತಪಡಿಸಿದ ಭಯದಲ್ಲಿ ಅವನು ಅಂದುಕೊಂಡ ಅರ್ಥವಿದೆಯೆ ಎಂದು ಒಂದು ಕ್ಷಣ ಯೋಚಿಸಿದೆ.

ಇನ್ನು ಮಾತಾಡುವುದು ತನ್ನಿಂದಾಗದೆಂದೂ ಆ ಆನಂದವನ್ನು ತಾನೊಬ್ಬನೇ ಸೆಲಬ್ರೆಟ್ ಮಾಡಿಕೊಳ್ಳಬೇಕೆಂದು ಹೇಳಿ ತಟಕ್ಕನೆದ್ದು, ಮುಗುಳ್ನಕ್ಕು ಹೊರಟು ಹೋದ. ತುರಿಕೆಗಾಗಿ ತುರಿಸಿಕೊಳ್ಳುತ್ತಿರುವಾಗ ಆ ಸುಖಕ್ಕೆ ಆನಂದಿಸಬೇಕೋ, ತುರಿಕೆ ಮತ್ತಷ್ಟು ಜಾಸ್ತಿಯಾಗಿ ಚರ್ಮ ಬಿರಿಯುತ್ತದೆಂದು ಸಂಕಟಪಡಬೇಕೋ ಎಂಬುದು ಗೊತ್ತಾಗದಿರುವಂತೆ ನನ್ನ ಪರಿಸ್ಥಿತಿಯಾಯ್ತು.

ಪ್ರೇಮ, ಆಕರ್ಷಣೆ, ಸೆಕ್ಸ್, ಅಭಿಮಾನ ಇವೆಲ್ಲ ಬೇರೆ ಬೇರೆಯಾಗಿ ನಾವು ಗುರುತಿಸುವಷ್ಟು ಸರಳವಾಗಿ ಇರುವುದಿಲ್ಲ: ಅವೆಲ್ಲವು ಬಂದಾಗಿ ಕಲಬೆರಕೆಯಾಗಿರುತ್ತವೆ. ಅವನ ಮೇಲೆ ನನಗೆ ಎಂತಹ ಇಷ್ಟವಿದೆ ಎನ್ನುವುದನ್ನು ನನ್ನಿಂದ ಅರಿತುಕೊಳ್ಳಲಾಗಲಿಲ್ಲ. ಒಟ್ಟಿನಲ್ಲಿ ಜೀವನದಲ್ಲಿನ ಉದ್ವಿಗ್ನತೆಯನ್ನೆಲ್ಲ ಅನುಭವಿಸುತ್ತಿದ್ದ 'ನೀನಿನ್ನು ಬರಬೇಡ' ಎಂದು ಕಠಿಣವಾಗಿ ಹೇಳಿದರ ಅವ ನೇನೂ ಬರುತ್ತಿರಲಿಲ್ಲ. ಆದರೆ ಆ ರೀತಿ ಹೇಳಿಬಿಟ್ಟರೆ ನನಗೆ ಉಳಿಯುವುದು ಶೂನ್ಯ.

ಇಷ್ಟು ಗೊಂದಲ ಎದ್ದ ನಂತರ ಆ ನಿಶ್ಯಬ್ದವನ್ನು ಸಹಿಸಬಲ್ಲೆನೆ ? ಇದಾದ ಒಂದು ವಾರಕ್ಕೆ ಮತ್ತೆ ನನ್ನ ಗಂಡನಿಗೆ ಒಂಗೋಲಿಗೆ ಹೋಗಬೇಕಾಗಿ ಬಂತು. ಈ ಸಲ ಇಪ್ಪತ್ತು ದಿನಗಳ ಕ್ಯಾಂಪ್ ಇತ್ತು. ಅಷ್ಟು ಸುದೀರ್ಘಕಾಲ ಒಂಟಿಯಾಗಿರಬೇಕಾಗಿ ಬಂದದ್ದು, ಅದೇ ಮೊದಲ ಸಲವಾಗಿತ್ತು. ಈ ಇಪ್ಪತ್ತು ದಿನಗಳಲ್ಲಿ ಏನೋ ನಡೆದು ಹೋಗುತ್ತದೆಂದು ಗೊತ್ತಾಗುತ್ತಲೇ ಇತ್ತು. ಹೇಗಾದರೂ ಈ ಅಪಾಯದಿಂದ ಪಾರಾಗೆಂದು ಒಂದೆಡೆ ಮನಸ್ಸು ಎಚ್ಚರಿಕೆ ನೀಡುತ್ತಲೇ ಇತ್ತು.

ನನ್ನ ಗಂಡ ಹೊರಟು ಹೋದರು. ಆ ದಿನ ಸಾಯಂಕಾಲ ಅವರನ್ನು ರೈಲಿಗೆ ಹತ್ತಿಸಿ ಮನೆಗೆ ಬಂದೆ. ಅಷ್ಟೊತ್ತಿಗೆಲ್ಲ ಕತ್ತಲಾಗಿ ಬಿಟ್ಟಿತ್ತು. ಜಯಂತ್ ಬರುತ್ತಾನೇನೋ ಎಂದು ಹೆದರಿದೆ. ಬಂದರೆ ಚೆನ್ನಾಗಿರುತ್ತದೆನ್ನುವ ಭಾವನೆ ಮನಸ್ಸಿನ ಒಂದು ಮೂಲೆಯಲ್ಲಿತ್ತೆಂಬುದೂ ಅಷ್ಟೇ ಸತ್ಯ. ಊಟ ಮುಗಿಸಿ ಮಲಗಿಕೊಂಡೆ.ಕಿಟಕಿಯಲ್ಲಿನಚಂದಮಾಮನನ್ನತ್ತ್ಯುತ್ಸುಕೋದ್ವಿಗ್ನತೆ ಯಿಂದ ನೋಡುತ್ತಿದ್ದ ಗೋಡೆಗೆ ಅಂಟಿಕೊಂಡಿದ್ದ ಮಲ್ಲಿಗೆ ಬಳ್ಳಿ ಬೆಳದಿಂಗಳಿನಲ್ಲಿ ಮೈ ಆರ ಹಾಕಿದ್ದಂತಿತ್ತು.ಆಗಾಗ ಬಾಗಿಲು ಸಪ್ಪಳಾದಂತೆನಿಸಿ ಬೆಚ್ಚಿ ಬೀಳು ತ್ತಿದ್ದ. ಆದರೆ ಜಯಂತ್ ಬರಲಿಲ್ಲ.

ಬೆಳಗಾಯ್ತು. ಜಯಂತ್‌ನ ಕುರಿತಾದ ಯೋಚನೆಗಳಿಂದ ತಪ್ಪಿಸಿಕೊಳ್ಳ ಬೇಕೆಂದು ಬೇಕೆಂದೇ, ಏನೇನೋ ಕೆಲಸಗಳನ್ನು ಹೂಡಿಕೊಂಡೆ. ಸಂಡಿಗೆಇಟ್ಟೆ. ಮಧ್ಯಾಹ್ನದಿಂದ ಸ್ವೆಟರ್ ಹೆಣೆಯುತ್ತ ಕೂತೆ.ಸಾಯಂಕಾಲವಾಯ್ತು. ಇನ್ನು ಸಹಿಸಲಾಗಲಿಲ್ಲ. ಚಂದ್ರಗಿರಿಗೆ ಹೋಗಬೇಕೆಂದು ಮನಸ್ಸು ಎಳೆಯುತ್ತಿತ್ತು. ಅದನ್ನು ಬಲವಂತದಿಂದ ನಿಯಂತ್ರಿಸಿಕೊಂಡು ಮಕ್ಕಳೊಂದಿಗೆ ಮೊದಲನೆ ಆಟ ಸಿನಿಮಾಗೆ ಹೋದೆ. ತಿರುಗಿ ಬರುವಷ್ಟರಲ್ಲಿ ಒಂಭತ್ತೂವರೆಯಾಯ್ತು: ನಡುವೆ ಜಯಂತ್ ಬಂದಿದ್ದನೇನೋ ಎಂದು ಮನೆಯ ಮುಂದೆ ಬೂಟಿನ ಗುರುತುಗಳಿಗೋಸ್ಕರ ಹುಡುಕಿ ನೋಡಿದೆ ನನ್ನ ಭ್ರಮೆಯದು. ಧೂಳಿನಲ್ಲಿ

ಗುರುತುಗಳು ಸಿಗಲು ಸಾಧ್ಯವೆ ?

ಊಟವಾದ ನಂತರ ಮಲಗಿಕೊಂಡೆವು.

"ಇದೇನಾ . .. ನಿಮ್ಮ ಶೃಂಗಾರ ಸಾಮ್ರಾಜ್ಯ·" ಎಂದು ಜಯಂತ್ ಕೇಳಿದ್ದು ನೆನಪಾಯ್ತು. ಆ ರೀತಿ ಯೋಚಿಸುತ್ತ ಕಣ್ಣುಮುಚ್ಚಿಕೊಂಡೆ. ಮೆಲುನಿದ್ದೆ ಶರೀರವನ್ನು ಮುತ್ತಿಕೊಂಡಿತು. ಬಾಗಿಲ ಸದ್ದಾಗಿದ್ದರಿಂದ ಧಿಗ್ಗನೆ ಎದ್ದು ಕುಳಿತೆ. ಬಾಗಿಲನ್ನು ಯಾರೋ ತಟ್ಟುತ್ತಿರುವಂತೆ ಸದ್ದಾಗುತ್ತಿತ್ತು. ಹೃದಯದಲ್ಲಿ ಕಳವಳದಂತಹುದು ಮೂಡಿತು, ಜಯಂತ್ ಬಂದರೆ ಏನು ಮಾಡಬೇಕೆಂದು ಹೊಳೆಯಲಿಲ್ಲ ಅವನಾಗಿರದೆ ನನ್ನ ಗಂಡ ಬಂದರೆ ಚೆನ್ನಾಗಿರುತ್ತದೆಂದು ಸಾವಿರ ದೇವರುಗಳಿಗೆ ಹರಕೆ ಹೊರುತ್ತ ಬಾಗಿಲ ಬಳಿಗೆ ಬಂದು ಅಗುಳಿ ತೆಗೆದೆ.

ಜಯಂತನೇ ನಗಲು ಪ್ರಯತ್ನಿಸಿ ವಿಫಲನಾದ.

"ನೀನಾ?"

'ಹೌದು ನಿಮ್ಮನ್ನು ನೋಡಬೇಕೆನಿಸಿತು· ಬಂದುಬಿಟ್ಟೆ' ಎಂದು ತಲೆ ತಗ್ಗಿಸಿಕೊಂಡು ಹೇಳಿದ.

'ಎಲ್ಲಿಂದ?'

'ಚಂದ್ರಗಿರಿಯಿಂದ?'

'ಇಷ್ಟು ರಾತ್ರಿ ಹೊತ್ತಿನಲ್ಲಿ ಹೇಗೆ ಬಂದೆ?'

ಸಮಯ ಹನ್ನೆರಡು ಮೀರಿರಬಹುದು.

'ನಡೆಯುತ್ತ

'ನಡೆಯುತ್ತ! ಅಷ್ಟು ದೂರ ನಡ್ಕೊಂಡೇ ಬಂದ್ಯಾ?!'

"ಊಂ! ಬೆಳದಿಂಗಳಿನಲ್ಲಿ ನೀವು ಹೇಗಿರುತ್ತೀರಿ ಅನ್ನೋದನ್ನ ನೋಡ-ಬೇಕು ಅಂತ ಅನ್ನಿಸ್ತು. ಮಲಗಿದ್ದವನು ಹಾಗೇ ಎದ್ದು ಬಂದೆ."

ಅದಕ್ಕೆ ಏನುತ್ತರ ಹೇಳಬೇಕೆಂದು ನನಗೆ ಗೊತ್ತಾಗಲಿಲ್ಲ. ಬಾಗಿಲು ದಾಟಿ ವರಾಂಡದೊಳಗೆ ಬಂದೆ

"ಇನ್ನೂ ಸ್ವಲ್ಪ ಆ ವರಾಂಡಾ ಇಳಿದು ಬನ್ನಿ ....... ಬೆಳದಿಂಗಳಿನಲ್ಲಿ ನಿಮ್ಮನ್ನು ನೋಡಿ ಹೊರಟು ಹೋಗ್ತೀನಿ."

ಅದು ಹುಚ್ಚೋ, ಪ್ರೇಮವೋ, ಮೋಹವೋ,ಕಾಮವೋ ಎಂಬುದನ್ನು ವಿಶ್ಲೇಷಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ವಾದ-ವಿವಾದ, ಬರಿಮಾತು, ನೈತಿಕತೆ ಅನೈತಿಕತೆಯ ಮೀಮಾಂಸೆ, ಒಣ ವೇದಾಂತ ಇವೆಲ್ಲ ಅನವಶ್ಯಕವೆನಿಸಿತು.

ಅದಕ್ಕೆ ಮತ್ತೇನೂ ಮಾತಾಡದೆ ವರಾಂಡಾ ಇಳಿದು ಮುಂದಿರುವ ತೋಟದೊಳಗೆ ಬಂದು ನಿಂತೆ, ನನ್ನ ಹಿಂದೆಯೇ ಜಯಂತ್ ಬಂದ. ಆ ಒಂದು ವಾರದಲ್ಲಿ ಅವನಲ್ಲಿ ಎಷ್ಟೋ ಮಾರ್ಪಾಡುಂಟಾಗಿತ್ತು. ಅಳವಿಗೆಟುಕದ ಕೋರಿಕೆ ಯಾವುದನ್ನೋ ಹೃದಯದಲ್ಲಿ ಹೊತ್ತಿರುವವನಂತೆ ಕುಗ್ಗಿ ಹೋಗಿದ್ದ.

ನನ್ನ ಎದುರಿಗೆ ನಿಂತುಕೊಂಡು, ಒಂದು ಕ್ಷಣ ಕಾಲ ನನ್ನನ್ನು ಆಪಾದ ಮಸ್ತಕ ಪರಿಶೀಲಿಸಿ ವೇಗವಾಗಿ ಹೊರಟುಹೋದ.

ನಾನು ಒಬ್ಬಂಟಿಯಾಗುಳಿದೆ.

ಅಲ್ಲಿಯವರೆಗೂ ಏನು ನಡೆಯಿತೆನ್ನುವದನ್ನು ಯೋಚಿಸಲಾಗದಂತೆ ತಲೆಯೆಲ್ಲ 'ಧಿಂ' ಎನ್ನುತ್ತಿತ್ತು. ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದು, ತಿರುಗಿ ಮನೆಯೊಳಗೆ ಬಂದು ಮಲಗಿಕೊಂಡೆ ಅವನನ್ನು ಹಿಂದಕ್ಕೆ ಕರೆದು ಇನ್ನು ಸ್ವಲ್ಪ ಹೊತ್ತು ಮಾತಾಡಿ ಕಳಿಸಿದರೆ ಚೆನ್ನಾಗಿರುತ್ತಿತ್ತೆನಿಸಿತು, ಆದರ ಅವನು ಬರಿ ಮಾತಿಗೆ ನಿಲ್ಲಿಸುತ್ತಾನೆಯೆ?

ಬೆಳದಿಂಗಳಿನಲ್ಲಿ ನನ್ನನ್ನು ನೋಡಬೇಕೆಂದು ಅಷ್ಟು ಅಪರಾತ್ರಿಯ ಹೊತ್ತಿನಲ್ಲಿ ಸುಮಾರು ಏಳೆಂಟುಕಿಲೋಮೀಟರು ನಡೆದು ಬಂದ ಅವನೊಂದಿಗೆ ನಿರ್ದಯಳಾಗಿ ವರ್ತಿಸಿದೆನೇನೋ ಎನ್ನುವ ತಪ್ಪರಿವು ನಿದ್ದೆಯನ್ನು ದೂರ ತಳ್ಳಿತು. ಇನ್ನು ಹೆಚ್ಚು ಕಾಲ ಈ ಉದ್ವಿಗ್ನತೆಯನ್ನು ಸಹಿಸಲಾರೆನೆನಿಸಿತು. ಅವನೊಂದಿಗೆ ಸಂಬಂಧವನ್ನು ಮುಂದುವರಿಸಬೇಕೋ, ಅಷ್ಟಕ್ಕೇ ನಿಲ್ಲಿಸಬೇಕೆಂಬುದನ್ನು ನಿರ್ಧರಿಸಿಕೊಳ್ಳಬೇಕಾದ ಸಮಯ ಬಂದಿತೆನಿಸಿತು. ಆದರೆ ಎಷ್ಟು ಹೊತ್ತಾದರೂ ಒಂದು ನಿರ್ಧಾರಕ್ಕೆ ಬರಲಾಗಲಿಲ್ಲ.

ನಂತರ ಎರಡು ದಿನಗಳೂ ಚಂದ್ರಗಿರಿಗೆ ಹೋಗಲಿಲ್ಲ. ಅವನೂ ಬರಲಿಲ್ಲ. ಅವನನ್ನು ಮರೆತು ಬಿಡಬೇಕೆಂದು ಬೇರೆ ಕೆಲಸಗಳಲ್ಲಿ ಮಗ್ನಳಾದೆ. ಮೂರನೇ ದಿನ ಮಕ್ಕಳು ಮಾವನನ್ನು ನೋಡಬೇಕೆಂದು ಕಿರಿಕಿರಿ ಮಾಡಿದ್ದರಿಂದ ಸರಿ ಎಂದೊಪ್ಪಿಕೊಂಡೆ. ನನಗೂ ಹೋಗಬೇಕೆಂಬ ತುಡಿತವಿತ್ತೇನೋ?!

ನಾವು ಹೋದಾಗ ಜಯಂತ್ ಇದ್ದಿಲ್ಲ. ಉಳಿದ ಸ್ನೇಹಿತರಿದ್ದರು.ಅವನು ಇಲ್ಲದಿರುವದು ಕೊರತೆ ಎಂದೆನಿಸಿತು. ಆದರೆ ಅದೂ ಒಂದು ರೀತಿಯಲ್ಲಿ ಒಳ್ಳೆಯದೆಂದು ಸಮಾಧಾನ ಹೇಳಿಕೊಂಡೆ. ಸ್ವಲ್ಪ ಹೊತ್ತು ಅನ್ಯಮನಸ್ಕಳಾಗಿಯೇ ಅಲ್ಲಿ ಕಾಲ ಕಳೆದು, ಏಳೂವರೆಯ ಹೊತ್ತಿಗೆ ಮಕ್ಕಳೊಂದಿಗೆ ಹೊರಟೆ ಮಕ್ಕಳು ರೈಲಿಗೆ ಹೋಗೋಣವೆಂದು ಹಠ ಹಿಡಿದುದರಿಂದ ಅವರನ್ನು ಕರೆದುಕೊಂಡು ರೈಲ್ವೇ ನಿಲ್ದಾಣದತ್ತ ಹೆಜ್ಜೆ ಹಾಕಿದೆ.

ರೈಲ್ವೇ ನಿಲ್ದಾಣದಲ್ಲಿ ಕರೆಂಟ್ ಇದ್ದಿಲ್ಲ. ಸಿಗ್ನಲ್ ಲೈಟುಗಳು ಕೊಳ್ಳಿ ದೆವ್ವಗಳಂತೆ ಕಂಡು ಬರುತ್ತಿದ್ದವು. ಮಕ್ಕಳಿಬ್ಬರ ಕೈಗಳನ್ನು ಹಿಡಿದುಕೊಂಡು ಕಾಯುತ್ತಿದ್ದೆ. ಜಯಂತ್ ಯಾಕೆ ಬರಲಿಲ್ಲವೆಂಬುದು ಗೊತ್ತಾಗಲಿಲ್ಲ. ಬಹುಶಃ ಸ್ನೇಹಿತರೊಂದಿಗೆ ಮೊದಲಿನಂತೆ ಬೆರೆಯುತ್ತಿರಲಿಕ್ಕಿಲ್ಲ..

ಅಷ್ಟರಲ್ಲಿ ರೈಲು ಬಂತು. ಜನರೂ ಸಾಕಷ್ಟಿದ್ದರು. ಅಷ್ಟಾಗಿ ಗದ್ದಲವಿರದಿದ್ದ ಬೋಗಿಯನ್ನು ಹುಡುಕಿ ಹತ್ತಿದೆ ಆಗ ಜಯಂತನ ಧ್ವನಿ ಕೇಳಿ ಬಂತು. 'ಏನ್ರೀ. ಏನ್ರೀ.. ಎಲ್ಲಿದ್ದೀರಿ'' ಎಂದು ಕೂಗುತ್ತಿದ್ದ. ನಿಲ್ದಾಣದಲ್ಲೆಲ್ಲ ಕತ್ತಲಿದ್ದುದರಿಂದ ನಮ್ಮ ಜಾಡು ಹಿಡಿಯಲು ಅವನಿಂದಾಗಲಿಲ್ಲ ಕರುಳು ಕಿತ್ತು ಹೊರಗೆ ಬರುತ್ತವೇನೋ ಎನ್ನುವಷ್ಟು ಜೋರಾಗಿ ಕೂಗುತ್ತಿದ್ದ. ಧ್ವನಿ ಕೇಳಿ ಬರುತ್ತಿತ್ತೇ ಹೊರತು ವ್ಯಕ್ತಿ ಕಾಣುತ್ತಿರಲಿಲ್ಲ. ಎಂದೋ ಹಿಂದಿನ ಜನ್ಮದಲ್ಲಿ ಕಳೆದು ಹೋದ ವ್ಯಕ್ತಿಗೋಸ್ಕರ ಈ ಜನ್ಮದಲ್ಲಿ ಹುಡುಕುತ್ತಿರುವಂತೆ ಅವನು ಕೂಗುತ್ತಿದ್ದ ತಕ್ಷಣವೇ ರೈಲಿನಿಂದಿಳಿದು ಅವನಿಗೆ ಕಾಣಿಸಿಕೊಳ್ಳಬೇಕೆಂಬ ಹಂಬಲವನ್ನು ಬಲವಂತವಾಗಿ ಹತ್ತಿಕ್ಕಿದೆ.

ಸಿಳ್ಳೆ ಊದಿದರು. ಅವನು ಸ್ವರನ್ನು ಮತ್ತಷ್ಟು ಹೆಚ್ಚಿಸಿದ. ಆ ಕತ್ತಲೆಯಲ್ಲಿ ನಾನು ಎಲ್ಲಿರುವೆನೆಂಬುದು ಗೊತ್ತಾಗದೆ, ಒದ್ದಾಡುತ್ತ ಕಿರುಚುತ್ತಿದ್ದ ಅವನು, ಯಾವ ರೀತಿ ಹುಚ್ಚು ಹಿಡಿದವನಂತೆ ನಿಲ್ದಾಣದಲ್ಲಿ ತಿರುಗಾಡುತ್ತಿರುವನೆಂಬುದನ್ನು ಊಹಿಸಿದೆ. ಮನಸ್ಸಿನಲ್ಲಿ ಅದೊಂದು ರೀತಿಯ ಕಸಿವಿಸಿ ಮೂಡಿತು. ಕೆಳಗಿಳಿಯಲು ಕಾಲು ಕಿತ್ತಬೇಕೆಂದುಕೊಂಡೆನಾದರೂ ನನ್ನಿಂದ ಏಳಲಾಗಲಿಲ್ಲ. ರೈಲು ಜೋರಾಗಿ ಊಳಿಡುತ್ತ ಮುಂದೆ ಚಲಿಸಿತು. ಜಯಂತ್‌ನ ಕೂಗು ರೈಲಿನ ಸದ್ದನ್ನು ನುಂಗಬೇಕೆಂದು ಮಾಡುತ್ತಿರುವ ಪ್ರಯತ್ನ ಗೊತ್ತಾಗುತ್ತಲೇ ಇತ್ತು.

ರೈಲು ವೇಗವನ್ನು ಪಡೆದುಕೊಂಡಿತು.

ಇಷ್ಟೆಲ್ಲ ನಡೆದ ನಂತರ ಊಟ ಸೇರುತ್ತದೆಂದಾಗಲಿ, ನಿದ್ದೆ ಬರುತ್ತದೆಂದಾಗಲಿ ನನಗನ್ನಿಸಲಿಲ್ಲ, ಪರಧ್ಯಾನತೆಯಿಂದಲೇ ಮಕ್ಕಳಿಗೆ ಊಟ ಬಡಿಸಿ, ಮಲಗಿಸಿದೆ. ಇನ್ನೆಂದೂ ಈ ರೀತಿ ಒಂಟಿಯಾಗಿರಕೂಡದೆಂದು ನಿರ್ಧರಿಸಿಕೊಂಡೆ.

ನಾನು ಊಹಿಸುತ್ತಿರುವಂತೆ ಮರು ದಿನ ಜಯಂತ್ ಮನೆಗೆ ಬಂದ ಆಗಷ್ಟೇ ಮಕ್ಕಳು ಶಾಲೆಗೆ ಹೋಗಿದ್ದರು. ಏನುಮಾಡಬೇಕೆಂದುಕೊಳ್ಳುತ್ತಿರುವ ಅವನು ಬಂದ. ಮುಖ ಕಳಾವಿಹೀನವಾಗಿತ್ತು: ಜ್ವರ ಬಂದವನಂತಿದು ,

ಇನ್ನೂ ಚೇತರಿಸಿಕೊಂಡಂತಿದ್ದಿಲ್ಲ. ಬಿಳಿಯ ಪ್ಯಾಂಟಿನ ಮೇಲೆ ಬಿಳಿಯ ಖಾದಿ ಅಂಗಿ ಸಡಿಲವಾಗಿ ನೇತಾಡುತ್ತಿತ್ತು. ಉಂಗುರು ಗೂದಲನ್ನು ಮಾತ್ರನೀಟಾಗಿ ಬಾಚಿಕೊಂಡಂತಿದ್ದ ತನ್ನ ತಲೆಗೂದಲಿನ ಬಗ್ಗೆ ಬಹಳಷ್ಟು ಮೋಜಿತ್ತು. ಅಂತಹ ಸುಂದರ ತಲೆಗೂದಲು ಬಹಳಷ್ಟು ಕಡಿಮೆ ಜನರಿಗಷ್ಟೇ ಇರುತ್ತ ದೆನ್ನುವುದೂ. ಅವನ ನಂಬಿಗೆಯಾಗಿತ್ತು ಅದು ಸತ್ಯವೂ ಆಗಿತ್ತು! ಅಷ್ಟು ತಾಪದಲ್ಲೂ ಅವನು ಕೂದಲಿನ ಬಗ್ಗೆ ಪ್ರತ್ಯೇಕ ಶ್ರದ್ಧೆವಹಿಸಿದ್ದನೆಂದರೆ. ಅವನಿಗೆ ತನ್ನ ಕೂದಲಿನ ಬಗ್ಗೆ ಅವನಿಗೆಷ್ಟು ಆಸಕ್ತಿ ಇದೆ ಎನ್ನುವುದು ಗೊತ್ತಾಗುತ್ತಿತ್ತು

ಬರುತ್ತಿದ್ದಂತೆಯೇ ನನಗೆ ಮತ್ತಷ್ಟು ಹತ್ತಿರವಾಗಿ ನಿಂತುಕೊಂಡು "ನಿನ್ನೆ ರಾತ್ರಿ ನಿಮಗೋಸ್ಕರ ರೈಲ್ವೇ ನಿಲ್ದಾಣದಲ್ಲಿ ಬಹಳಷ್ಟುಹುಡುಕಾಡಿದೆ. ನನ್ನ ದುರಾದೃಷ್ಟಕ್ಕೆ ನಿಲ್ದಾಣದಲ್ಲಿ ಕರೆಂಟ್ ಇದ್ದಿಲ್ಲ. ಆದರೂ ನಿಮಗೋಸ್ಕರ ಕೂಗಿದೆ. ನಿಮಗೆ ಕೇಳಿಸಲಿಲ್ಲವೆಂದು ಕಾಣುತ್ತೆ ತುಂಬಾ ನಿರಾಸೆಯಿಂದ ತಿರುಗಿ ಹೋದೆ" ಎಂದ.

"ನನ್ನನ್ಯಾಕೆ ಹುಡುಕೋದು?"

"ನಿಮ್ಮನ್ನು ನೋಡಬೇಕು ಅಂತ!"

"ಯಾಕೆ ನೋಡೋದು?"

ಅವನಿಂದ ಉತ್ತರಿಸಲಾಗಲಿಲ್ಲ. ಏನೆಂದು ಹೇಳುತ್ತಾನೆ? ಅವೆಲ್ಲ ಅಷ್ಟು ನೇರವಾಗಿ ಕೇಳಬಾರದಂತಹ ಪ್ರಶ್ನೆಗಳು ಹೃದಯ ಸ್ಪಂದನವೇ ಅವುಗಳಿಗೆ ಉತ್ತರ ಅದನ್ನು ಕೇಳಬೇಕೆಂದರೆ ಎದುರಿಗಿರುವ ವ್ಯಕ್ತಿಯ ಮನಸ್ಸಿನಾಳವನ್ನು ಬಗೆಯಬೇಕು. ಅವನು ಉತ್ತರ ಹೇಳಕೂಡದೆಂದೇ ಆ ಪ್ರಶ್ನೆಗಳನ್ನು ಕೇಳಿದ್ದೆ.

"ನನಗೆ ಮಾರುಕಟ್ಟೆಯಲ್ಲಿ ಅರ್ಜೆಂಟ್ ಕೆಲಸ ಇದೆ. ಹೋಗಬೇಕು" ಎನ್ನುತ್ತ ಅವನತ್ತ ನೋಡದೆ. ಬೀಗವನ್ನೆತ್ತಿಕೊಂಡು ಹೊರಗೆ ಬಂದು ಬೀಗ ಹಾಕಿದೆ. ಅವನೂ ನನ್ನ ಹಿಂದೆಯೇ ಹೊರಟ.

"ನನ್ನನ್ನ ಯಾಕೆ ಈ ರೀತಿ ಹಿಂಬಾಲಿಸ್ತಿದೀಯ? ನನ್ನನ್ನು ಹೋಗಲು ಬಿಡು ಎನ್ನುತ್ತ ನಡಿಗೆಯ ವೇಗವನ್ನು ಹೆಚ್ಚಿಸಿದೆ. ಅವನು ಬೇಡಿಕೊಳ್ಳುವ ಸ್ಥಿತಿ ತಲುಪಿದ ನನ್ನ ಹಿಂದೆಯೇ ಓಡು ನಡಿಗೆಯಲ್ಲಿ ಬರುತ್ತ, "ನಿಮ್ಮೊಂದಿಗೆ ಮಾತಾಡಬೇಕು" ಎಂದ.

"ಏನು ಮಾತಾಡಬೇಕು?"

'ಬಹಳಕಷ್ಟವಿದೆ?'

'ಬಹಳಕಷ್ಟವೆಂದರೆ ಆಗದು. ನನ್ನನ್ನು ಹೀಗೇಕೆ ಕಾಡಿಸ್ತೀಯ? ಯಾರಾದರೂ ನೋಡಿದರೆಂದರೆ ನನ್ನ ಮರ್ಯಾದೆ ಮಣ್ಣುಪಾಲಾಗುತ್ತೆ. ನನ್ನ ಗಂಡನಿಗೆ ಗೊತ್ತಾಯಿತೆಂದರೆ ನನ್ನ ಮನೆಯಿಂದ ಒದ್ದೋಡಿಸುತ್ತಾರೆ. ಆ ನಂತರ ನನ್ನ ಗತಿಯೇನಾಗಬೇಕು'

'ನಿಮ್ಮ ಜೀವನದ ಜವಾಬ್ದಾರಿ ನಾನು ವಹಿಸಿಕೊಳ್ತೀನಿ' ಎಂದು ದೃಢವಾಗಿ ನುಡಿದ.

ನಾನು ತಟಕ್ಕನೆ ನಿಂತುಬಿಟ್ಟೆ. ಇನ್ನು ಇದೆಲ್ಲದಕ್ಕೆ ಇಲ್ಲಿಗೆ ಪೂರ್ಣವಿರಾಮಕೊಡುತ್ತಿದ್ದರೆ ಬಹಳ ದೂರ ಹೋಗುತ್ತದೆಂದು ಗ್ರಹಿಸಿದೆ. ಅದಕ್ಕೇ ಬೇಕೆಂದೇ ಧ್ವನಿಯಲ್ಲಿ ಗಡಸುತನವನ್ನು ತಂದುಕೊಂಡು ನುಡಿದೆ."ಈಗ ಹಾಗೇ ಅಂತೀಯ. ಆದರೆ ನಾಳೆ ನಮ್ಮ ಸಂಬಂಧ ಹೊರಬಿದ್ದರೆ ನೀನು ಸುಲಭವಾಗಿ ತಪ್ಪಿಸಿಕೊಳ್ತೀಯ, ಇದೆಲ್ಲಿಯ ಪೀಕಲಾಟ ಅಂತ ಬಾಯೇ ಬಿಡೋದಿಲ್ಲ. ನೀನಿನ್ನೂ ಮದುವೆಯಾಗದೆ ಇರುವವನು, ನನಗೆ ಮದುವೆಯಾಗಿದೆ. ಇಬ್ಬರು ಮಕ್ಕಳು ಕೂಡ ಇದ್ದಾರೆ. ನೀನು ಸಮಾಜಕ್ಕೆ ಹೆದರದೆ ನನ್ನನ್ನು ಮದುವೆ ಮಾಡಿಕೊಳ್ಳಬಲ್ಲೆಯಾ? ನಿನ್ನ ಜೀವನವನ್ನು ತ್ಯಾಗ ಮಾಡಬಲ್ಲೆಯ? ನಿನ್ನಿಂದಾಗದು ಹತ್ತು ರಾತ್ರಿ ಕಳೆದ ಮೇಲೆ ನನ್ನ ಮೇಲಿನ ಮೋಜು ಕಡಿಮೆಯಾಗ ತ್ತದೆ." ಪಶ್ಚಾತ್ತಾಪ ಶುರುವಾಗುತ್ತದೆ.

'ಮದುವೆಯಾದ ಹೊಸದರಲ್ಲಿ ನನ್ನ ಗಂಡನನ್ನು ತುಂಬಾಸುಂದರನೆಂದು ಅಂದುಕೊಳ್ಳುತ್ತಿದ್ದ. ಕೊಂಚ ಹಳತಾದ ಮೇಲೆ ಆ ಭ್ರಮೆಗಳೆಲ್ಲವೂ ತೊಲಗಿ ಹೋದವು. ನಿನಗೆ ನಾನಾದರೂ ಅಷ್ಟೇ. ಈಗ ರಂಭೆಯಂತ ಕಾಣ್ತೀರೋ ನಾನು ನಾಲ್ಕಾರು ದಿನಗಳ ನಂತರ ಪೀಡೆ ಅಂತ ಅನ್ನಿಸಬಹುದು . '

ಅವನು ನನ್ನ ಮಾತುಗಳನ್ನು ನಡುವೆಯೇ ತುಂಡರಿಸಿದ 'ಇವೆಲ್ಲ ಸಹಜವಾದ ವಿಷಯಗಳು, ಇವುಗಳನ್ನು ಅಸಹಜವೆಂದುಕೊಂಡು ಸಿಟ್ಟುಸಿರಿಡುವದೇ ನಾವೆಲ್ಲ ಸಾಮಾನ್ಯವಾಗಿ ಮಾಡುವ ತಪ್ಪು.'

"ಹೋಗಲಿ, ಅವನ್ನೆಲ್ಲ ಬಿಟ್ಟು ಬಿಡೋಣ. ನಾಳೆ ನನ್ನ ಗಂಡನಿಗೆ ಇದೆಲ್ಲ ಗೊತ್ತಾದರೆ ನೀನು ನನ್ನನ್ನು ಬಾಳಿಸ್ತೀಯಾ? ನನಗೆ ನಂಬಿಕೆ ಇಲ್ಲ. ಅದಕ್ಕೆ ಕಾರಣ ನೀನು ಕೆಟ್ಟವನೆಂದಲ್ಲ, ನಿನ್ನ ಪರಿಸ್ಥಿತಿ ಬಂಗಾರದಂತಹ ಭವಿಷ್ಯವನ್ನು ಬಿಟ್ಟು ಕೊಡಲಾರೆ. ಮಾತುಗಳಿಗೇನು? ಎಷ್ಟಾದರೂ ಆಡಬಹುದು. ತೀರಾ ಕೃತಿಗಿಳಿಸಬೇಕಾಗಿ ಬಂದಾಗಲೇ ಹಿಂಜರಿಯೋದು. ಅಷ್ಟೆಲ್ಲ ಯಾಕೆ ನಿನಗೆ ತುಂಬಾ ಇಷ್ಟವಾದ್ದಾಗಿರುವ ತಲೆಗೂದಲನ್ನು ನನಗೋಸ್ಕರ

ತ್ಯಾಗ ಮಾಡಿ, ತಲೆ ಬೋಳಿಸ್ಕೋತೀಯಾ? ಏಕೆಂದರೆ ನಿನ್ನ ಕೂದಲು ನಿನಗೆ ಶೋಭೆ ನೀಡುತ್ತದೆ. ಅದಕ್ಕೆ ಆದ್ದರಿಂದ ಇನ್ನು ನನ್ನನ್ನು ಮರೆತು ಬಿಡು. ಇನ್ನೆಂದೂ ಭೇಟಿಯಾಗಲು ಪ್ರಯತ್ನಿಸಬೇಡ. ನನ್ನ ಮಾತಿಗೆ ಮನ್ನಣೆ ನೀಡುತ್ತಿ ಅನ್ನೋ ನಂಬಿಕೆ ಇದೆ" ಎಂದು ತುಂಬಾ ಗಂಭೀರವಾಗಿ ಹೇಳಿದೆ.

ಜಯಂತ್ ಏನೋ ಮಾತಾಡಲೆಂದು ಬಾಯಿ ತೆರೆದ ನಾನು ಅಷ್ಟಕ್ಕೇ ಅವನನ್ನು ತಡೆದೆ ನನ್ನ ಮಾತಿನ ಪರಿಣಾಮ ಮತ್ತಷ್ಟು ಆಳಕ್ಕಿಳಿಯ ಬೇಕೆಂದರ ಸಂಭಾಷಣೆಯನ್ನು ಮುಂದುವರಿಸಕೂಡದು. ಅದಕ್ಕೇ ಅಲ್ಲಿ ನಿಂತಿದ್ದ ರಿಕ್ಷಾವನ್ನು ಹತ್ತಿರ ಬರಲು ಸನ್ನೆ ಮಾಡಿದೆ.

ರಿಕ್ಷಾದವನು ಓಡೋಡಿ ಬಂದ. ಆದರಲ್ಲಿ ಹತ್ತಿ ಕುಳಿತು 'ಗುಡ್ ಬೈ' ಎಂದು ಮುಖ ತಿರುಗಿಸಿಕೊಂಡೆ. ಅವನು ತುಂಬಾ ಆಘಾತಕ್ಕೀಡಾದನೇನೋ ಶಿಲಾ ಪ್ರತಿಮೆಯಂತೆ ನೋಡುತ್ತ ನಿಂತುಬಿಟ್ಟ ... . . ನನಗೆ ಬೇಕಾಗಿದ್ದುದು ಅದೇ ರಿಕ್ಷಾ ಚಲಿಸಿತು ಅವನು ಇನ್ನು ಬರುವುದಿಲ್ಲವೆನ್ನುವುದು ಸ್ಪಷ್ಟವಾಗಿತ್ತು. ಅಷ್ಟರ ಮಟ್ಟಿಗೆ ನಿಲ್ಲಿಸಿ ಹೆದರಿಸಿದರೆ ಹಿಂಜರಿಯದಿರುವ ಗಂಡಸು ಬಹಳ ಅಪರೂಪ. ಅದಕ್ಕೇ ಭವಿಷ್ಯದ ಬಗ್ಗೆ ಭಯಂಕರವಾಗಿ ಹೇಳಿ ಹೆದರಿಸಿದೆ. ಆದರೆ ಈ ಶೂನ್ಯವನ್ನು ನಾನು ಸಹಿಸಬಲ್ಲೆ ಎನ್ನುವ ಹೊಸ ಅನುಮಾನ ಉಂಟಾಯ್ತು ಆದರೆ ಆ ಅನುಮಾನ ನಿಜವಾಗದಂತಿರಲು ನಾನು ಬಹಳಷ್ಟು ಎಚ್ಚರಿಕೆವಹಿಸಬೇಕಿತ್ತು.

ನಾನು ಊಹಿಸಿದ್ದಂತೆಯೇ ಜಯಂತ್ ಬರಲಿಲ್ಲ. ಇಷ್ಟೊತ್ತಿಗೆ ಅವನೂ ನನ್ನನ್ನು ಸಾಕಷ್ಟು ಬೈದುಕೊಂಡು ಮರೆತುಬಿಟ್ಟಿರುತ್ತಾನೆಂದುಕೊಂಡೆ. ಎರಡು ದಿನಗಳು ಕಳೆದವು. ಮೂರನೇ ದಿನ ಮಕ್ಕಳನ್ನು ಮಧ್ಯಾಹ್ನದ ಶಾಲೆಗೆ ಕಳುಹಿಸಿದ ನಂತರ ವಿಶ್ರಾಂತಿ ತೆಗೆದುಕೊಂಡರಾಯಿತೆಂದು ಮಲಗಿದೆ. ಹಿಂಗೆಯೇ ನಿದ್ದೆ ಹತ್ತಿತು. ಯಾರೋ ಬಾಗಿಲು ತಟ್ಟಿದಂತೆನಿಸಿದ್ದರಿಂದ ಎಚ್ಚರವಾಯ್ತು. ಇದು ಕನಸೋ, ವಾಸ್ತವವೋ ಎಂದುಕೊಳ್ಳುತ್ತ ಸುತ್ತಲೂ ನೋಡಿದೆ.

ಮತ್ತೆ ಸದ್ದಾಯ್ತು. 'ಈ ಹೊತ್ತಿನಲ್ಲಿ ಯಾರಪ್ಪ, ಬಂದಿರೋದು!' ಎಂದುಕೊಳ್ಳುತ್ತ ಎದ್ದೆ ನಮ್ಮೆಜಮಾನರು ಬೆಳಿಗ್ಗೆಯೇ ಬಂಗೋಲಿನಿಂದ ಫೋನಿನಲ್ಲಿ ಮಾತಾಡಿದ್ದರು. ಎರಡು ದಿನಗಳ ನಂತರ ಬರುವುದಾಗಿ ಹೇಳಿದ್ದರಾದ್ದರಿಂದ ಅವರಾಗಿರಲಿಕ್ಕಿಲ್ಲ. 'ಮತ್ಯಾರಿರಬಹುದು' ಎಂದುಕೊಳ್ಳುತ್ತ ಬಾಗಿಲು ತೆಗೆದೆ

ಎದುರಿಗಿರುವ ವ್ಯಕ್ತಿ ಯಾರೆಂಬುದನ್ನು ಒಂದೆರಡು ಕ್ಷಣಗಳ ಕಾಲ ನನ್ನಿಂದ ಗುರುತು ಹಿಡಿಯಲಾಗಲಿಲ್ಲ. ನುಣ್ಣಗೆ ತಲೆ ಬೋಳಿಸಿಕೊಂಡು ಬೆವರು ಸುರಿಸುತ್ತ, ನನ್ನತ್ತ ದಿಟ್ಟಿಸಿ ನೋಡುತ್ತಿದ್ದ ಜಯಂತನನ್ನು ನೋಡುತ್ತಿದ್ದಂತೆ ನನಗೆ ಏನೇನೋ ಆಗಿಬಿಟ್ಟಿತು.

ನನ್ನ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿ, ನನಗೋಸ್ಕರ ತಲೆ ಬೋಳಿಸಿಕೊಂಡು ಎದುರಿಗೆ ನಿಂತಿದ್ದ ಅವನನ್ನು ನೋಡುತ್ತಿದ್ದಾಗ ನನ್ನ ಹೃದಯವನ್ನು ಹಿಂಡಿದಂತಾಯ್ತು. ರಕ್ತ ನಾಳಗಳು ಶರೀರದೊಳಗಿಂದ ನುಗ್ಗಿ ಬಂದು ರಕ್ತ ಸೋರುತ್ತಿರುವಂತೆನಿಸಿತು. ಜೋರಾದ ಗಾಳಿಯ ಅಲೆಯೊಂದು ತಲೆಯನ್ನು ಬಿರುಸಿನಿಂದ ಅಪ್ಪಳಿಸಿದಂತಾಯ್ತು. ನನ್ನ ಭ್ರಮೆಗಳೆಲ್ಲವೂ ಚೆಲ್ಲಾಪಿಲ್ಲಿಯಾಗಿಬಿಟ್ಟವು.

ಏನೂ ಮಾತಾಡದೆ ಒಳಗೆ ಬಾ ಎನ್ನುವಂತೆ ದಾರಿ ಬಿಟ್ಟೆ. ಒಳಗೆ ಬಂದ ಹಾಲ್‌ನಲ್ಲಿ ಒಬ್ಬರನ್ನೊಬ್ಬರು ಸುಮ್ಮನೇ ದಿಟ್ಟಿಸಿ ನೋಡುತ್ತ ನಿಂತೆವು. ಆಗ ಅವನ ತಲೆಯನ್ನು ನೋಡಿದೆ. ಬೋಳು ತಲೆಯ ಮೇಲೆ ಕೆಂಪು ಬರೆಗಳು ಕಾಣುತ್ತಿದ್ದವು. ಕಸುಬು ಗೊತ್ತಿರದವನು ತಲೆ ಬೋಳಿಸಿರುವಂತೆ ತಲೆಯುದ್ದಲ್ಲ ಗಾಯಗಳಾಗಿದ್ದವು. ರಕ್ತ ಹೆಪ್ಪುಗಟ್ಟಿದ್ದರಿಂದ ಗೆರೆಗಳು ಕೆಂಪಗೆ ಕಂಡು ಬರುತ್ತಿದ್ದವು.

'ಏನಿದೆಲ್ಲ?' ಎಂದು ಕೇಳಿದೆ. ಯಾರೋ ಅದುಮಿ ಹಿಡಿದಿರುವರೇನೋ ಎನ್ನುವಂತೆ ನನ್ನ ಧ್ವನಿ ಕೀರಲಾಗಿ ಕೇಳಿ ಬಂತು.

"ತಲೆ ಬೋಳಿಸಿಕೊಂಡೆ. ನಿಮ್ಮನ್ನು ನಡು ನೀರಲ್ಲಿ ಕೈ ಬಿಡುವದಿಲ್ಲವೆಂದೂ, ನೀವೆಂದರೆ ನನಗೆ ತುಂಬಾ ಇಷ್ಟವೆಂದೂ ಹೇಳಲೆಂದೇ ಈ ರೀತಿ ಮಾಡಿಕೊಂಡೆ. ನೀವು ಹೇಳಿದ್ದನ್ನು ನಾನೇ ಮಾಡಬೇಕೆನ್ನುವ ಹಂಬಲದಿಂದ ನನ್ನ ತಲೆಯನ್ನು ನಾನೇ ಬೋಳಿಸಿಕೊಂಡೆ ಅದಕ್ಕೇ ಸ್ವಲ್ಪ ಜಾಸ್ತಿ ಕತ್ತಿಯೇಟು ಬಿದ್ದಿವೆ. ನಿಮ್ಮನ್ನು ನಂಬಿಸಲಿರುವೆನೆನ್ನುವ ಆನಂದದಲ್ಲಿ ನೋವು ಗೊತ್ತಾಗಲಿಲ್ಲ."

ಆಗ ನಾನು ಅತ್ತೆ. ಜೀವನದಲ್ಲಿ ಬಹು ವರ್ಷಗಳ ನಂತರಮನಃಪೂರ್ವಕವಾಗಿ ಕಣ್ಣೀರಿಟ್ಟೆ.ಮನಸ್ಸಿನಲ್ಲಿನ ಕಲ್ಮಶವೆಲ್ಲ ಕರಗಿ ಹೋಗುವಂತೆ ಅತ್ತೆ. ನನ್ನ ಇಷ್ಟವನ್ನೆಲ್ಲ ಕಣ್ಣೀರಿನಿಂದ ತಿಳಿಯಪಡಿಸಲೆಂದೇ ಅತ್ತೆ. ಆ ಅಭಿಮಾನಕ್ಕೂ, ಆ ಹುಚ್ಚು ಪ್ರೇಮಕ್ಕೂ, ಸೌಂದರ್ಯವನ್ನು ಕೂಡ ತುಂಬಾ ಸುಲಭವಾಗಿ ಕಡೆಗಣಿಸಬಲ್ಲ ಆ ಮೋಹಾವೇಶಕ್ಕೆ ಮನಸ್ಸು ಕಲಕಿ ಕಣ್ಣೀರಿಟ್ಟೆ. ಒಂದು ಹೆಜ್ಜೆ ಮುಂದಿಟ್ಟು ಸೋಫಾದಲ್ಲಿ ಕುಳಿತುಕೊಳ್ಳುತ್ತ ಅವನ ಕೈ ಹಿಡಿದು

ಮೇಲೆಳೆದುಕೊಂಡೆ.ಊಹಿಸಿರದಿದ್ದ ಈ ಚರ್ಯೆಯಿಂದಾಗಿ ಅವನು ಮುಂದಕ್ಕೆ ತೂರಾಡಿ ಪೂರ್ತಿಯಾಗಿ ನನ್ನ ಮೇಲೆ ಒರಗಿದ.

ಅದು ಹಾಲ್ ಎಂದಾಗಲಿ, ಬಾಗಿಲುಗಳನ್ನು ಹಾಕಿಲ್ಲವೆಂದಾಗಲಿ, ಯಾರಾದರೂ ಬಂದರೆ ಸಿಕ್ಕಿ ಬೀಳುತ್ತೇವೆಂದಾಗಲಿ ಇವ್ಯಾವುದೂ ಆ ಕ್ಷಣದಲ್ಲಿ ಹೊಳೆಯಲಿಲ್ಲ. ಮನಸ್ಸು ಭಯವನ್ನು ತನ್ನ ಸನಿಹವೂ ಸುಳಿಯಗೊಡಲಿಲ್ಲ, ಏನನ್ನು ಕೊಟ್ಟು ಅವನನ್ನು ಸಂತೋಷಪಡಿಸಲಿ ಎನ್ನುವ ಯೋಚನೆಯೊಂದೇ ಮನಸ್ಸಿನಲ್ಲಿದ್ದುದು.

ಅವನ ದಿಗಿಲು, ನೋವು, ಕೋರಿಕೆ, ಹಂಬಲ, ಉದ್ವೇಗ, ಉದ್ರೇಕಗಳನ್ನು ಕ್ಷಣದಲ್ಲಿ ಶಮನಗೊಳಿಸಬೇಕೆನ್ನುವ ಆತುರದಿಂದ ಮತ್ತಷ್ಟು ಹತ್ತಿರಕ್ಕೆಳೆದುಕೊಂಡೆ. ನನ್ನನ್ನು ನಾನು ಅವನಿಗರ್ಪಿಸಿಕೊಂಡೆ.

ಇಂಥವುಗಳು ಬಹಳ ದಿವಸ ಗುಟ್ಟಾಗಿ ಉಳಿಯುವದಿಲ್ಲ. ಮೌನವಾಗಿ ಮಾತಾಡಿಕೊಳ್ಳುವ ಒಂದು ನೋಟ ಆತ್ಮೀಯತೆಯನ್ನೆಲ್ಲ ಮೈಗೂಡಿಸಿಕೊಂಡ ಒಂದು ಮಾತು, ಆ ವ್ಯಕ್ತಿ ಕಂಡೊಡನೆಯೇ ಮುಖದಲ್ಲಿ ಮೂಡಿಬರುವ ಶಾಂತಿ ಅವನ ಸಾಮೀಪ್ಯದಲ್ಲಿ ಶರೀರ ಅನುಭವಿಸುವ ಪುಳಕ ಇವೆಲ್ಲ ಇತರರಿಗೆ ನಮ್ಮ ಗುಟ್ಟನ್ನು ಸಲೀಸಾಗಿ ಬಿಟ್ಟುಕೊಡುತ್ತವೇನೋ!

ನಮ್ಮ ಸಂಬಂಧ ಶುರುವಾದ ಆರು ತಿಂಗಳಿರಬೇಕು. ನನ್ನ ಗಂಡನಿಗೆ ಈ ವಿಷಯ ಗೊತ್ತಾಗಿಬಿಟ್ಟಿತು 'ಏನಿದೆಲ್ಲ' ಎಂದು ಕೇಳಿದರು.

ಇಂತಹ ಸಂದರ್ಭಕ್ಕೆ ನಾನೆಂದೋ ಸಿದ್ಧಳಾಗಿದ್ದೆ. 'ಏನು ಮಾಡಲಿ? ಅನಿವಾರ್ಯವಾಯ್ತು' ಎಂದೆ.

"ನನ್ನಿಂದ ಇದನ್ನೆಲ್ಲ ಸಹಿಸಲಾಗದು ಯಾವುದಾದರೊಂದನ್ನು ನಿರ್ಧರಿಸಿಕೋ" ಎಂದರು. ಅವರ ಸಂಸ್ಕಾರ ನನಗೆ ಗೊತ್ತಿತ್ತು. ಮೃದು ಸ್ವಭಾವದ ವ್ಯಕ್ತಿ ಆದಕ್ಕೇ ಅದನ್ನು ಬೀದಿ ರಂಪ ಮಾಡಲಿಲ್ಲ.

"ಎಂದೋ ನಿರ್ಧರಿಸಿಕೊಂಡಾಗಿದೆ ಇಂತಹ ಪರಿಸ್ಥಿತಿ ಎದುರಾದರೆ ಏನು ಮಾಡಬೇಕೆಂದು ನಾವು ಬೇರೆಯಾಗೋಣ. ನಿಮಗೆ ಗೊತ್ತಾಗದಂತೆ ಗುಟ್ಟಾಗಿ ಜಯಂತನೊಂದಿಗೆ ಸಂಬಂಧವಿಟ್ಟುಕೊಳ್ಳುವದು· ನನಗೆ ಮೊದಲಿನಿಂದಲೂ ಇಷ್ಟವಿರಲಿಲ್ಲ. ಆದರೆ ಹೇಳಿದೆನಲ್ಲ ಅನಿವಾರ್ಯವಾಯ್ತು ಅಂತ" ಎಂದು ಎದುರಿಗಿದ್ದ ಗೋಡೆಯನ್ನು ನೋಡುತ್ತ ಹೇಳಿದೆ.

ನಮ್ಮೆಜಮಾನರು ಸ್ವಲ್ಪ ದಿಗ್ಭ್ರಾಂತರಾದರೆಂದು ಕಾಣುತ್ತದೆ. ಸ್ವಲ್ಪ ಹೊತ್ತು ಮೌನವಾಗಿದ್ದ ನಂತರ, "ಅವನೊಂದಿಗೆ ಇರ್ತೀಯಾ?" ಎಂದು ಕೇಳಿದರು.

'ಬಹುಶಃ ಸಾಧ್ಯವಾಗೋದಿಲ್ಲ ಅಂತ ಅನ್ಸುತ್ತೆ........ ನಮ್ಮ ಊರಿಗೆ ಹೊರಟು ಹೋಗ್ತೀನಿ.'

'ಮತ್ತೆ ಮಕ್ಕಳು?'

"ಅವರನ್ನು ಸಲಹಲು ನಿಮ್ಮಿಂದಾಗದು. ಕೆಲಸದಲ್ಲಿ ಬಿಜಿಯಾಗಿರುವ ನಿಮಗೆ ಅವರನ್ನು ಪೋಷಣೆ ಮಾಡುವದು ತುಂಬಾ ಕಷ್ಟ. ಅದಕ್ಕೇ ನಾನು ಕರೆದುಕೊಂಡು ಹೋಗ್ತೀನಿ ಬೇಸಿಗೆಯ ರಜೆಯಲ್ಲೋ, ಹಬ್ಬಕ್ಕೋ, ನಿಮ್ಮ ಬಳಿಗೆ ಕಳಿಸ್ತೀನಿ."

ಇನು ಮಾತಾಡುವುದೇನೂ ಇಲ್ಲವೆನ್ನುವಂತೆ ಅವರು ಹೊರಗೆಹೊರಟು ಹೋದರು ಮಕ್ಕಳು ಶಾಲೆಯಿಂದ ಬಂದ ನಂತರ ಕರೆದುಕೊಂಡು ಈ ಊರಿಗೆ ಬಂದುಬಿಟ್ಟೆ. ನನ್ನ ತಂದೆ-ತಾಯಿಗಳಿಗೆ ನಾನೊಬ್ಬಳೇ ಮಗಳಾದ ರಿಂದ ಮೊದ ಮೊದಲು ನೊಂದುಕೊಂಡರೂ ನಂತರ ಸಮಾಧಾನಪಟು ಕೊಂಡರು."

"ಮತ್ತೆ ಜಯಂತ್" ಎಂದು ಕೇಳಿದ ಗೋಪಾಲಕೃಷ್ಣ ತಿಲೋತ್ತಮೆ ಹೇಳುವದನ್ನು ಅವನು ಪೂರ್ತಿ ತಲ್ಲೀನನಾಗಿ ಕೇಳಿದ್ದ.

ಅವಳು ಅತ್ತಿತ್ತ ಮಿಸುಕಾಡಿ, ಸುಧಾರಿಸಿಕೊಂಡು ಮತ್ತೆ ಹೇಳತೊಡಗಿ ದಳು. "ಜಯಂತನಿಗೆ ಮರುದಿನ ವಿಷಯವೆಲ್ಲ ಗೊತ್ತಾಯ್ತು. ಗೊತ್ತಾಗು ತ್ತಲೇ ನನ್ನ ಬಳಿಗೋಡಿ ಬಂದ." ಊರಿಗೆ ಬರುತ್ತಿದ್ದಂತೆಯೇ 'ಹೊರಡು' ಎಂದ.

"ಎಲ್ಲಿಗೆ?"

"ಎಲ್ಲಿಗೆ ಅಂದ್ರೇನು? ಎಲ್ಲಿಗಾದರೂ ಸರಿ ನಾವು ಕೂಡಿ ಇರೋಣ. ಇಂತಹ ಪರಿಸ್ಥಿತಿಯೇ ಉಂಟಾದರೆ ನೇರವಾಗಿ ನನ್ನ ಮನೆಗೆ ಬಂದು ಬಿಡೆಂದು ಹೇಳಿದ್ದೆನಲ್ಲ" ಎಂದು ನೊಂದುಕೊಂಡು ಮಾತಾಡಿದ.

"ಹೇಗೆ ಬರಲಿ ಜಯಂತ್ ಆವೇಶ ಕಡಿಮೆ ಮಾಡಿಕೊಂಡು ಯೋಚನೆ ಮಾಡಿ ನೋಡು. ನೀನಿನ್ನೂ ಹುಡುಗ ನಿನಗಿನ್ನೂ ಮುಂದೆ ಒಳ್ಳೇ ಭವಿಷ್ಯ ಇದೆ. ನಿನ್ನೊಂದಿಗೆ ಬಂದು ಅದನ್ನೆಲ್ಲ ಹಾಳು ಮಾಡಲೆ? ಬೇಡ. ಅಂತಹ ಹುಚ್ಚುಚ್ಚು ಯೋಚನೆಗಳನ್ನು ಕೈಬಿಡು. ಹಾಯಾಗಿ ಮನೆಗೆ ಹೋಗು. ಮದುವೆ ಮಾಡಿಕೋ. ಇನ್ನೂ ಹೆಚ್ಚಿನ ಓದು ಓದು. ರೀಸರ್ಚ್ ಮಾಡ್ತೀನಿ ಅಂತ ಹೇಳಿದ್ಯಲ್ಲ. ಮೊದಲು ಆ ಕೆಲಸ ಮಾಡು."

ಅವನು ಒಪ್ಪಿಕೊಳ್ಳಲಿಲ್ಲ. ನನ್ನನ್ನು ಬಿಟ್ಟುಹೋಗಲು ಬಹಳಷ್ಟು ತಿಳಿ ಹೇಳಬೇಕಾಗಿ ಬಂತು. ಸುಮಾರು ನಾಲ್ಕುಗಂಟೆ ಕಾಲದ ವಾದ-ವಿವಾದದ

ನಂತರ, ತುಂಬಾ ಕಷ್ಟದಿಂದ ನನ್ನನ್ನು ಬಿಟ್ಟು ಹೋಗಲು ಒಪ್ಪಿಕೊಂಡ. ಅವನನ್ನು ಕಳಿಸಲು ಬಸ್‌ನಿಲ್ದಾಣದ ವರೆಗೂ ಹೋದೆ. ದೂರದಲ್ಲಿ ಬರುತ್ತಿದ್ದ ಬಸ್ ಕಾಣಿಸುತ್ತಿದ್ದಂತೆಯೇ ಪ್ರಯಾಣಿಕರೆಲ್ಲ ಗಡಿಬಿಡಿಯಿಂದ ಎದ್ದರು.

"ಈಗಲೂ ಕಾಲ ಮಿಂಚಿಲ್ಲ. ಮಕ್ಕಳನ್ನು ಕರೆದುಕೊಂಡು ಎಲ್ಲಿಗಾದರೂ ದೂರ ಹೋಗಿ ಮದುವೆ ಮಾಡಿಕೊಳ್ಳೋಣ" ಎಂದು ವಿನಂತಿಸಿಕೊಳ್ಳುವವ ನಂತೆ ಕೈಹಿಡಿದುಕೊಂಡ.

"ಬೇಡ ಜಯಂತ್ . .ನೀನು ಇಲ್ಲಿಗೆ ಬಂದದ್ದೇ ನನಗೆ ದೊಡ್ಡ ಉಪಕಾರ. ಮನುಷ್ಯರ ಮೇಲಿನ ನಂಬಿಕೆ ಹೆಚ್ಚಾಯಿತು. ಅದಕ್ಕಿಂತಲೂ ಹೆಚ್ಚಾಗಿ ಇನ್ನೇನು ಬೇಕು? ಪ್ರೇಮ, ಅಭಿಮಾನ, ಆತ್ಮೀಯತೆ– ಇವೆಲ್ಲ ಕೇವಲ ಒಣ ಮಾತುಗಳಲ್ಲವೆಂದು ನಿರೂಪಿಸಿದೆ. ಮನುಷ್ಯರ ಮೇಲಿನ ನಂಬಿಕೆ ಕಿತ್ತು ಹೋಗುವಂತೆ ಮಾಡಿದೆ. ಮನುಷ್ಯರ ಮೇಲೆ ಪ್ರೇಮ, ನಂಬಿಕೆ ಇಲ್ಲದಂತಾದ ಮೇಲೆ ಹೇಗೆ ಬದುಕುವದು? ಈಗ ಹಾಗಲ್ಲ. ಉಳಿದ ಜೀವನವನ್ನು ನನ್ನ ಸುತ್ತಲೂ ಇರುವ ಮನುಷ್ಯರ ನಡುವೆ ಕಳೆಯಬಲ್ಲ ಉತ್ಸಾಹವನ್ನು ಒದಗಿಸಿ ಕೊಟ್ಟೆ .ನೀನು ಮಾಡಿದ ಈ ಸಹಾಯಕ್ಕೆ ಜೀವನವಿಡೀ ಋಣಿಯಾಗಿರ್ತೀನಿ" ಎಂದೆ. ಬಹುಶಃ ನನ್ನ ಕಣ್ತುಂಬಿ ಬಂದಿರಬೇಕು.

ಬಸ್ಸು ಬಂದು ನಿಂತಿತು. ಜಯಂತನ ಕೈಹಿಡಿದು ಒತ್ತಾಯದಿಂದ ಹತ್ತಿಸಿದೆ ಬಸ್ಸು ಚಲಿಸತೊಡಗಿತು. "ನಾನಿನ್ನ ನಿನ್ನನ್ನು ನೋಡೋದು ನಿನ್ನ ಮದುವೆಯಲ್ಲೇ" ಎಂದು ಜೋರಾಗಿ ಕೂಗಿ ಹೇಳಿದೆ. ನನ್ನ ಕೆನ್ನೆಗಳ ಮೇಲೆ ಜಾರುತ್ತಿದ್ದ ಕಣ್ಣೀರನ್ನು ನೋಡಲಾಗದೆಯೋ, ಏನೋ ಜಯಂತ್ ತಲೆ ತಿರುಗಿಸಿಕೊಂಡ.

"ಬಸ್ಸು ಧೂಳೆಬ್ಬಿಸುತ್ತ ಜಯಂತನನ್ನು ಅಲ್ಲಿಂದ ಕರೆದೊಯ್ಯಿತು" ಎಂದು ಹೇಳುವದನ್ನು ಮುಗಿಸಿದಳು ತಿಲೋತ್ತಮೆ. ಆನಂದಕ್ಕೋ, ವಿಷಾದಕ್ಕೋ, ಅಥವಾ ಎರಡರ ಕಲಬೆರಕೆಗೋ ಅವಳ ಕಣ್ಣುಗಳು ಹನಿಗೂಡಿದವು. ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತ ಬಲವಂತದಿಂದ ನಗಲು ಪ್ರಯತ್ನಿಸಿದಳು.

ತಿಲೋತ್ತಮೆಯ ಕಥೆ ಗೋಪಾಲಕೃಷ್ಣನ ಮನಸ್ಸನ್ನು ಕಲಕಿಬಿಟ್ಟಿತು. ಗಾಢವಾಗಿ ನಿಟ್ಟುಸಿರಿಟ್ಟು, "ನೀವು ಮೂವರೂ ಉನ್ನತ ವ್ಯಕ್ತಿತ್ವದವರು ತಿಲೋತ್ತಮಾ, ನಿಜವಾಗಿ ನಿಮಗೆ ಕೈಮುಗಿಯಬೇಕೆನಿಸುತ್ತಿದೆ. ನಿಮ್ಮ ವ್ಯಕ್ತಿತ್ವ ಗಮನಿಸುತ್ತಿದ್ದರೆ ಮಾನವ ಜಾತಿಯ ಮೇಲೆ ಅಪಾರ ಪ್ರೇಮ ಉಂಟಾಗುತ್ತಿದೆ. ಈ ಭಾವನೆಗಳನ್ನು ಹೃದಯದಲ್ಲಿ ಭದ್ರವಾಗಿ ಗೂಡುಕಟ್ಟಿ ಕೊಳ್ಳಬೇಕೆಂಬ ಹಂಬಲ ಉಂಟಾಗುತ್ತಿದೆ" ಎಂದ.

"ನನ್ನ ಹೃದಯದಲ್ಲಿ ಗೂಡು ಕಟ್ಟಿಕೊಂಡಿದ್ದ ಈ ಅನುಭವವನ್ನು ಹೇಳಲೆಂದೇ ನಾನಿಲ್ಲಿಗೆ ಬಂದದ್ದು. ನಿನ್ನೊಂದಿಗೆ ರಾತ್ರಿ ಕಳೆದು ಸಿರಿ–ಸಂಪತ್ತು ಪಡೆಯಬೇಕೆನ್ನುವ ಉದ್ದೇಶ ನನಗಿಲ್ಲ ಗೋಪಾಲಕೃಷ್ಣ. ಮನುಷ್ಯರ ಮೇಲಿನ ಪ್ರೇಮ ನಂಬಿಕೆಗಿಂತಲೂ ಮಿಗಿಲಾದ ಸಿರಿ–ಸಂಪತ್ತು ಬೇರಾವುದಿದೆ?! ಅವುಗಳನ್ನು ಪುಷ್ಕಳವಾಗಿ ಹೊಂದಿರುವ ನನಗೆ ಬೇರಿನ್ನೇನೂ ಬೇಡ.ನಾನಿನ್ನು ಬರ್‍ತೀನಿ."

ಇಬ್ಬರೂ ಎದ್ದು ಹೊರಗೆ ಬಂದರು. ಮಳೆ ಇನ್ನೂ ನಿಂತಿರಲಿಲ್ಲ: ಹನಿಗಳು ಜೋರಾಗಿಯೇ ಬೀಳುತ್ತಿದ್ದವು. ಬೆಳಕು ಹರಿಯುತ್ತಿದೆ ಎನ್ನುವುದಕ್ಕೆ ಸೂಚನೆಯಾಗಿ ಕಪ್ಪು ಆಕಾಶ ಬೂದಿ ಬಣ್ಣಕ್ಕೆ ತಿರುಗತೊಡಗಿತ್ತು.

"ಮಳೆ ಜೋರಾಗೇ ಇದೆ. ಮನೆತನಕ ಬಿಟ್ಟು ಬರಲೆ?"

"ಬೇಡ."

"ಹೋಗ್ಲಿ, ಕೊಡೆಯನ್ನಾದರೂ ತೆಗೆದುಕೊಂಡು ಹೋಗು."

"ಈ ರೀತಿ ಬೈಗಿನ ಹೊತ್ತು ಮಳೆಯಲ್ಲಿ. ತೊಯ್ಯಿಸಿಕೊಂಡು ಬಹಳ ದಿನಗಳಾಯ್ತು" ಎನ್ನುತ್ತ ತಿಲೋತ್ತಮೆಯು ಮುಂದೆ ಚಲಿಸಿದಳು. ಅವಳು ಕಣ್ಮರೆಯಾಗುವವರೆಗೂ.. .. ಅವಳತ್ತಲೇ ನೋಡನೋಡುತ್ತಾ ನಿಂತಿದ್ದನು ಗೋಪಾಲಕೃಷ್ಣ.

## ೧೧

"ಗೋಪಾಲಕೃಷ್ಣ ಸಿನಿಮಾಗಳಲ್ಲಿ, ಸಾಹಿತ್ಯದಲ್ಲಿ ಆಗಾಗ ನೋಡಿದ್ದ. ಓದಿದ್ದ! ಲವ್ ಎಟ್ ಫಸ್ಟ್ ಸೈಟ್" ಎನ್ನುವುದನ್ನು ಪೂರ್ತಿಯಾಗಿ ನಂಬಿರಲಿಲ್ಲ. ಆ ರೀತಿಯ ಪ್ರೇಮ ಇಲ್ಲವೆನ್ನುವುದು ಅವನ ಅಭಿಪ್ರಾಯವಾಗಿತ್ತು. ಆದರೆ ವರ್ಷಾಳನ್ನು ನೋಡಿದಾಗ ಅವನು ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವ ಸ್ಥಿತಿಗೆ ಬಂದಿದ್ದ.

ಪ್ರೇಮ ಶಕ್ತಿ ತುಂಬಾ ಮಹತ್ತರವಾದುದು. ಪ್ರೇಮ ಪಾಶಕ್ಕೆ ಸಿಲುಕದಿರುವವರೆಗೂನಮ್ಮ ಪರಿಧಿ ವಿಶಾಲವಾಗಿರುತ್ತದೆ. ಒಮ್ಮೆ ಪ್ರೇಮದಲ್ಲಿ ಸಿಲುಕಿಕೊಂಡೆವೆಂದರೆ ನಮ್ಮ ಪರಿಧಿತುಂಬಾ ಸಂಕುಚಿತಗೊಂಡುಬಿಡುತ್ತದೆ.ಪ್ರೇಮಿಸಿದ ವ್ಯಕ್ತಿಯೇ ನಮಗೆ ಸಕಲ ಪ್ರಪಂಚವೆನಿಸತೊಡಗುತ್ತದೆ.ಪ್ರಪಂಚವೇ ಆ ವ್ಯಕ್ತಿಯಂತಾಗಿ ಕಾಣತೊಡಗುತ್ತದೆ. ಈ ಕಾರಣದಿಂದಾಗಿಯೇ ಪ್ರೇಮಿಗಳು ಸಕಲ ಪ್ರಪಂಚವನ್ನು ಮರೆತುಬಿಡುತ್ತಾರೆ.

ಮೃದುವಾದ ಗಾಳಿ, ಹಚ್ಚನೆಯ ಪ್ರಕೃತಿ, ಹೂವುಗಳು, ಅವುಗಳ ಸುವಾಸನೆ ಇವೆಲ್ಲವೂ ನಮ್ಮ ಪ್ರೇಮಿಯ ನೆನಪನ್ನೇ ತಮ್ಮಲ್ಲಿ ಹೊತ್ತು ಕೊಂಡಿರುವಂತೆ ಭಾಸಗೊಳ್ಳತೊಡಗುತ್ತವೆ ಪ್ರೇಮಿಗಳಾದವರು ಅದ್ವೈತ ದಂತಹ ಸ್ಥಿತಿಯನ್ನು ತಲುಪಿಬಿಡುತ್ತಾರೆ.

ಗೋಪಾಲಕೃಷ್ಣನೂ ಇವುಗಳಿಗೆ ಅತೀತನಾಗಿರಲಿಲ್ಲ. ಮೊದಲೇ ಭಾವುಕ ನಾದ್ದರಿಂದ ಈ ಸ್ಥಿತಿಯಲ್ಲೇ ಮತ್ತಷ್ಟು ಐಕ್ಯಗೊಂಡಿದ್ದ. ಅವನ ಕನಸು-ಮನಸಿನಲ್ಲೂ ವರ್ಷಾಳೇ ತುಂಬಿಕೊಂಡುಬಿಟ್ಟಿದ್ದಳು

ವರ್ಷಾಳ ಹೊರತು ಬೇರೆ ಪ್ರಪಂಚದ ಅಗತ್ಯ ತನಗಿಲ್ಲ ಎಂದು ಅವನಿಗ ನ್ನಿಸುತ್ತಿತ್ತು.

ನರನೂ ಗೋಪಾಲಕೃಷ್ಣನ ಅವಸ್ಥೆಯನ್ನು ಗಮನಿಸಿದ್ದ. ತನ್ನ ಗುರು ಪ್ರೇಮ ಪಾಶಕ್ಕೆ ಸಿಲುಕಿರುವನೆಂಬುದನ್ನು ಅವನು ಗ್ರಹಿಸಿದ.

ಗುರುವಿನ ಮನಸ್ಸನ್ನು ಅಪಹರಿಸಿದ ಹೆಣ್ಣು ವರ್ಷಾಳೇ ಎಂಬುದನ್ನು ಅವನೂ ಗ್ರಹಿಸಿದ್ದ!

ಅದರ ಬಗ್ಗೆ ಗೋಪಾಲಕೃಷ್ಣನನ್ನು ಪ್ರಶ್ನಿಸಿದಾಗ ಮುಗುಳ್ನಗುವೇ ಉತ್ತರವಾಗಿ ಲಭಿಸಿತ್ತು.

"ಪ್ರೇಮ... .. .. "

"ಪ್ರೇಮ ಎಂದರೆ 'ಇಂತಹುದು' ಎಂದು ಹೇಳಬಲ್ಲವರ್ಯಾರೂ ಇಲ್ಲ. ಯಾರಾದರೂ ಇದ್ದಾರೆ ಎಂದರೆ, ಅವರು ನಿಜವಾದ ಪ್ರೇಮಿಗಳಲ್ಲ ಪ್ರೇಮ ವೆನ್ನುವುದು ವ್ಯಾಖ್ಯಾನಕ್ಕೆ ಎಟುಕಲಾರದಂತಹುದು. ಇದು ಏನೆಂಬುದು ಗೊತ್ತಿಲ್ಲವಾದ್ದರಿಂದಲೇ ಪ್ರೇಮಿಗಳ ಚರ್ಯೆಗಳು ನಮಗೆ ಹುಚ್ಚು ಚೇಷ್ಟೆ ಗಳಂತೆ ಭಾಸವಾಗುತ್ತವೆ.

ವರ್ಷಾಳೊಂದಿಗೆ ಪ್ರೇಮ ಪಾಶದಲ್ಲಿ ಸಿಲುಕಿದ ಗೋಪಾಲಕೃಷ್ಣ ಎಂದೋ ಅಪರೂಪಕ್ಕೊಮ್ಮೆ ಊರೊಳಗೆ ಬರುತ್ತಿದ್ದವನು. ಈಗ ಸಾಯಂಕಾಲ ತಿರುಗಾಡಲು ಊರೊಳಗೆ ಹೋಗುತ್ತಿದ್ದ... ....ಎಲ್ಲಾದರೂ ವರ್ಷಾಳು ಕಾಣುತ್ತಾಳೇನೋ ಎಂದು ಅವನ ಕಣ್ಣುಗಳು ಕಾತುರದಿಂದ ಹುಡುಕುತ್ತಿದ್ದವು.

ಆ ದಿನ ಕೂಡ ಎಂದಿನಂತೆ ನಿದ್ದೆಯಿಂದ ಎದ್ದು ಕಾಲಕೃತ್ಯಗಳೆಲ್ಲವನ್ನೂ ಮುಗಿಸಿದ ನಂತರ ವರ್ಷಾಳನ್ನೇ ನೆನೆಸಿಕೊಳ್ಳುತ್ತ ಕಂಬವೊಂದಕ್ಕೆ ಒರಗಿ ಕುಳಿತಿದ್ದ. ಊರೊಳಗೆ ಹೋಗಿದ್ದ ನರ ಗಡಿಬಿಡಿಯಿಂದ ಅಲ್ಲಿಗೆ ಬಂದು,

"ಗುರುವೆ ನೀವಿನ್ನೂ ಸ್ನಾನ ಮಾಡಿಲ್ಲವೆ ಅಲ್ಲಿ ಊರಿನ ಜನರೆಲ್ಲ ನಿನಗೋಸ್ಕರ?" ಕಾಯುತ್ತಿದ್ದಾರೆ. ಇವತ್ತು ದೇವರ ಮೆರವಣಿಗೆ ಅನ್ನೋದು ನೆನಪಿಲ್ಲವೆ ಎಂದು ಕೇಳಿದ.

ಆಗ ಗೋಪಾಲಕೃಷ್ಣನಿಗೆ, ಆ ದಿನ ದೇವರ ಮೆರವಣಿಗೆ ಇರುವ ವಿಷಯ ನೆನಪಾಯ್ತು. ಅವನು ಹೋಗಿ ದೇವರಿಗೆ ಆರತಿ ಬೆಳಗುವವರೆಗೆ ಮೆರವಣಿಗೆಯ ಕಾರ್ಯಕ್ರಮಗಳು ಪ್ರಾರಂಭವಾಗುತ್ತಿದ್ದಿಲ್ಲ, ಆದಕ್ಕೇ ಎದ್ದು ತಯಾರಾಗ ತೊಡಗಿದ. ಅರ್ಧಗಂಟೆಯ ನಂತರ ಅವರಿಬ್ಬರೂ ಊರೊಳಗೆ ಹೋದರು ಇವರು ಹೋಗುವಷ್ಟರಲ್ಲಿ ರಥದ ಬಳಿ ಸಾಕಷ್ಟು ಜನ ನೆರೆದಿದ್ದರು. ಗೋಪಾಲಕೃಷ್ಣನನ್ನು ನೋಡುತ್ತಿದ್ದಂತೆಯೇ ಜನರಲ್ಲಿ ಕಲರವ ಶುರುವಾಯ್ತು ಪೂಜಾರಿ ಅವನಿಗೆದುರಾಗಿ ಹೋಗಿ ಆಹ್ವಾನಿಸಿದ.

"ಬನ್ನಿ! ನಿಮಗೋಸ್ಕರವೇ ಕಾಯುತ್ತಿದ್ದೇವೆ. ಈ ದಿನ ಸಾಯಂಕಾಲ ಮೆರವಣಿಗೆ ಇದೆ. ಮದನ ಕಾಮರಾಜ ವಂಶಕ್ಕೆ ಸೇರಿದ ನೀವು ಮೊದಲು ಪೂಜೆಯ ಕಾರ್ಯಕ್ರಮಗಳನ್ನು ನೆರವೇರಿಸಿದರೆ ಕೆಲಸಗಳು ಶುರುವಾಗುತ್ತವೆ" ಎಂದು ವಿನಯದಿಂದ ನುಡಿಯುತ್ತ ಅವನನ್ನು ರಥದ ಬಳಿಗೆ ಕರೆದೊಯ್ದ ಬೀದಿಯ ತುದಿಯಲ್ಲಿದ್ದ ರಥವನ್ನು ಸರ್ವಾಲಂಕೃತಗೊಳಿಸಲಾಗಿತ್ತು.

ಪೂಜಾರಿ ಗೋಪಾಲಕೃಷ್ಣನನ್ನು ಅಲ್ಲಿ ನಿಲ್ಲಿಸಿ ಮಂತ್ರಗಳನ್ನು ಉಚ್ಚರಿಸಿದ. ತಟ್ಟೆಯೊಂದರಲ್ಲಿ ಕರ್ಪೂರ ಹೊತ್ತಿಸಿ, ಅದನ್ನು ಅವನ ಕೈಗಿತ್ತ. ಗೋಪಾಲಕೃಷ್ಣ ಆರತಿಯನ್ನು ಬೆಳಗಿ ತಟ್ಟೆಯನ್ನು ತಿರುಗಿ ಪೂಜಾರಿಯ ಕೈಗಿತ್ತ. ಅದೇ ಸಮಯವನ್ನು ಕಾಯುತ್ತಿದ್ದ ಮಂಗಳ ವಾದ್ಯಗಳು ಮೊಳಗಿದವು. ಪೂಜಾರಿ ರಥವನ್ನು ಹತ್ತಿ ದೇವರಿಗೆ ಅಲಂಕಾರ ಪ್ರಾರಂಭಿಸಿದ.

ಮೆರವಣಿಗೆ ಸಾಯಂಕಾಲ ಹೊರಡುವುದಿತ್ತು. ಅಲ್ಲಿಯವರೆಗೂ ಮೆರವಣಿಗೆಯ ಏರ್ಪಾಡುಗಳು ನಡೆಯುತ್ತಿರುತ್ತಿದ್ದವು.

ಆರತಿ ಎತ್ತುವುದು ಮುಗಿದೊಡನೆಯೇ ಗೋಪಾಲಕೃಷ್ಣ ಅಲ್ಲಿಂದ ಹೊರಟ. ವರ್ಷಾ ಕಾಣಿಸುತ್ತಾಳೇನೋ ಎನ್ನುವ ಆಸೆ ಅವನ ಮನಸ್ಸಿನಲ್ಲಿ ತುಂಬಿಕೊಂಡಿತ್ತು. ತನ್ನ ಮನೆಗೆ ಹೋಗಲು ಹತ್ತಿರದ ದಾರಿ ಬೇರೊಂದು ಇದ್ದರೂ, ಶಿವರಾಮಯ್ಯನ ಮನೆಯ ಮುಂದೆ ಸುತ್ತು ಬಳಸಿನ ಹಾದಿಯಲ್ಲಿ ಹೋದರಾಯಿತೆಂದುಕೊಂಡು ಅತ್ತ ಹೆಜ್ಜೆ ಹಾಕಿದ.

ಶಿವರಾಮಯ್ಯನ ಮನೆ ಹತ್ತಿರವಾಗುತ್ತಿದ್ದಂತೆ ಹೃದಯದ ಬಡಿತ ಹೆಚ್ಚಿತು. ನರಗಳಲ್ಲಿ ರಕ್ತದ ಚಲನೆ ತೀವ್ರಗೊಂಡಿತು. ಮೆಲ್ಲಗೆ ಹೆಜ್ಜೆ ಇಡುತ್ತ ಆ ಮನೆಯತ್ತ ನೋಡಿದ. ಕಿಟಕಿಯ ಪಕ್ಕದಲ್ಲಿ ಕುಳಿತಿದ್ದ ವರ್ಷಾಳನ್ನು

ನೋಡುತ್ತಿದ್ದಂತೆಯೇ ಅವನ ಕಾಲುಗಳು ತನ್ನಿಂತಾನೇ ನಿಂತುಬಿಟ್ಟವು. ಮನೋಹರವಾದ ಅವಳ ರೂಪವನ್ನು ಕಣ್ಣುಗಳಲ್ಲಿ ತುಂಬಿಕೊಂಡು, ಮೆಲ್ಲಗೆ ಅಲ್ಲಿಂದ ಚಲಿಸಿದ.

ವರ್ಷಾಳೂ ಅವನನ್ನು ಗಮನಿಸಿದಳು. ಕಳೆದ ಕೆಲ ದಿನಗಳಿಂದ ತಾನು ಕಣ್ಣಿಗೆ ಬಿದ್ದಾಗಲೆಲ್ಲ ಅವನಲ್ಲುಂಟಾಗುತ್ತಿದ್ದ ಬದಲಾವಣೆಗಳನ್ನು ಅವಳೂ ಗಮನಿಸಿದ್ದಳು. ಆದರೆ ಅವನ ಬಗ್ಗೆ ಒಂದು ಕ್ಷಣ ಹೊತ್ತಾದರೂ ಯೋಚಿಸುವುದು ಇಷ್ಟವಿರದ ಅವಳು ತಿರುಗಿ ಪುಸ್ತಕ ಓದುವುದರಲ್ಲಿ ಮಗ್ನಳಾದಳು.

ಗೋಪಾಲಕೃಷ್ಣ ತನ್ನ ಮನೆ ತಲುಪಿದ. ನರ ಮಾತ್ರ ರಥದ ಬಳಿಯೇ ನಿಂತುಬಿಟ್ಟ. ಜನರ ಕೋಲಾಹಲವನ್ನು ಬಿಟ್ಟು ಒಂಟಿಯಾಗಿ ಅಡವಿಯಲ್ಲಿ ತಪಸ್ಸು ಮಾಡಿಕೊಳ್ಳುತ್ತಿರುವ ಋಷಿಯಂತಿರುವ ತನ್ನ ಗುರುವಿನ ಮನೆಗೆ ಹೋಗುವ ಮನಸ್ಸಾಗಲಿಲ್ಲ. ಜನರೊಂದಿಗೆ ಅದೂ ಇದೂ ಕೆಲಸ ಮಾಡುವುದರಲ್ಲಿ ಮಗ್ನನಾದ ಅಷ್ಟೊತ್ತಿಗೆಲ್ಲ ಊರಿನ ಮಕ್ಕಳು ಸ್ನಾನ ಮಾಡಿ, ಸಿಂಗರಿಸಿಕೊಂಡು ಬೀದಿಯಲ್ಲಿ ತಿರುಗಾಡಲು ಹೊರ ಬಂದಿದ್ದರು. ಸ್ತ್ರೀಯರು ಮನೆಗಳನ್ನೆಲ್ಲ ತೊಳೆದು, ಶುಭ್ರಗೊಳಿಸುತ್ತಿದ್ದರು. ಗಂಡಸರು ರಥದ ಬಳಿ, ಮನೆಯ ಬಳಿ ತಿರುಗಾಡುತ್ತ ಗಡಿಬಿಡಿ ಮಾಡುತ್ತಿದ್ದರು.

ಊರಲ್ಲಿನ ಯುವಕರಲ್ಲಿ ಕೆಲವರು ಬೀದಿಗೆ ಇಕ್ಕೆಲಗಳಲ್ಲಿ ಗಳುಗಳನ್ನು ನೆಡುತ್ತಿದ್ದರು. ಇನ್ನು ಕೆಲವರು ಅವುಗಳಿಗೆ ಬಣ್ಣದ ಕಾಗದಗಳ ತೋರಣಗಳನ್ನು ಕಟ್ಟುತ್ತಿದ್ದರು. ಮಲ್ಲಾಂನಿಂದ ತಂದಿದ್ದ ಗ್ರಾಮೋಫೋನ್ ಕಿರುಚಲು ಸಿದ್ಧವಾಗುತ್ತಿತ್ತು. ಪೂಜಾರಿಯ ಆದೇಶದಲ್ಲಿ ಕೆಲವರು ಹೂಮಾಲೆಗಳಿಂದ ರಥವನ್ನು ಅಲಂಕರಿಸುತ್ತಿದ್ದರು.

ಸಾಯಂಕಾಲ ನಾಲ್ಕು ಗಂಟೆಗಳಿಗೇ ವಾತಾವರಣ ಬದಲಾಯ್ತು. ಪ್ರತಿಯೊಂದು ಮನೆಯ ಮುಂದೆಯೂ ನೀರು ಚಿಮುಕಿಸಿ ರಂಗೋಲಿ ಇಟ್ಟರು ಆ ರಂಗೋಲಿಗಳಿಂದಾಗಿ ಇಡೀ ಊರೇ ಚಿತ್ತಾರಮಯವಾಗಿತ್ತು.

ಸಾಯಂಕಾಲ ಐದು ಗಂಟೆಗೆ ಮೆರವಣಿಗೆಯಲ್ಲಿನ ಮೊದಲನೆ ಭಾಗವಾದ ವಸಂತೋತ್ಸವ ಶುರುವಾಗುತ್ತಿತ್ತು. ರಥದ ಮುಂದೆ ಅತ್ತಿತ್ತ ಇಡಲಾಗಿದ್ದ ಎರಡು ದೊಡ್ಡ ಗಡಿಗೆಗಳಲ್ಲಿ ಓಕುಳಿಯನ್ನು ಬೆರೆಸಿಡಲಾಗುತ್ತಿತ್ತು.

ಓಕುಳಿ ಅಂದರೆ ನೀರಿನಲ್ಲಿ ಅರಿಷಿಣ, ಸುಣ್ಣ ಬೆರೆಸಿದ್ದರಿಂದ ಬರುವ ದ್ರಾವಣ. ಗ್ರಾಮದ ಜನ ಆ ನೀರನ್ನು ಚೆಂಬುಗಳಲ್ಲಿ ತುಂಬಿಕೊಂಡು ತಮಗೆ ಇಷ್ಟರಾದವರ ಮೇಲೆ ಸುರಿಯುವುದೇ ವಸಂತೋತ್ಸವ. ಈ ಘಟ್ಟ ಪ್ರಾರಂಭವಾದ ನಂತರ ಮೆರವಣಿಗೆ ನಡೆಯುತ್ತದೆ, ಗ್ರಾಮದಲ್ಲಿನ ತಮಗೆ ಇತರ

ವ್ಯಕ್ತಿಯ ಮೇಲಿರುವ ಇಷ್ಟವನ್ನು ಈ ರೀತಿ ಓಕುಳಿ ಸುರಿಯುವ ಮೂಲಕ ವ್ಯಕ್ತಪಡಿಸುತ್ತಿದ್ದರು. ಈ ಕಾರ್ಯಕ್ರಮ ಉತ್ಸಾಹದಿಂದಲೂ, ಅದಕ್ಕೆ ಮಿಗಿಲಾದ ಉದ್ರೇಕದಿಂದಲೂ ನಾಗುತ್ತಿತ್ತು. ತಮಗೆ ಇಷ್ಟರಾದ ವ್ಯಕ್ತಿ ಎಲ್ಲಿದ್ದರೂ ಹುಡುಕಿ ಹಿಡಿದು ಓಕುಳಿ ಸುರಿಯುತ್ತಿದ್ದರು. ಈ ಕಾರ್ಯಕ್ರಮ ದಲ್ಲಿ ಚಿಗುರು ಮೀಸೆಯ ಯುವಕರು ಅತ್ಯುತ್ಸಾಹದಿಂದ ಪಾಲುಗೊಳ್ಳುತ್ತಿದ್ದರು. ಅಂದೂ ಬಹಳಷ್ಟು ಜನ ಯುವಕರು ಚೆಂಬುಗಳನ್ನು ಹಿಡಿದುಕೊಂಡು ರಥದ ಬಳಿ ಸಿದ್ಧರಾಗಿ ನಿಂತಿದ್ದರು.

ಗೋಪಾಲಕೃಷ್ಣ ಆರುಗಂಟೆಯ ಸಮಯದಲ್ಲಿ ಅಲ್ಲಿಗೆ ಬಂದ. ಆ ವಸಂತೋತ್ಸವವನ್ನು ತೋರಿಸಲು ಧಾನ್ಯ ವರ್ಷಾಳನ್ನು ಕರೆದುಕೊಂಡು ಬರುತ್ತಾನೆಂಬ ನಂಬಿಕೆಯಿಂದಲೇ ಶವನು ಅಲ್ಲಿಗೆ ಬಂದಿದ್ದ ಅಲ್ಲಿಂದ ನರ ಅವನ ಜೊತೆಗೂಡಿದ.

ಬೀದಿಯಲ್ಲಿ ನೀರು ಚಿಮುಕಿಸಿದ್ದರಿಂದ ಮಣ್ಣಿನ ಪರಿಮಳ ಆ ಪ್ರದೇಶ ದಲ್ಲಲ್ಲ ಹರಡಿಕೊಂಡಿತ್ತು. ಮುಂದಿನ ರಂಗೋಲಿಗಳು ಯಾವಳೋ ವನ ದೇವತೆಯ ಕತ್ತಿನಲ್ಲಿನ ಮುತ್ತಿನ ದಂಡೆಗಳಂತಿದ್ದವು.

ಪೂಜಾರಿ ರಥ ಹತ್ತಿ, ಅದರಲ್ಲಿನ ಉತ್ಸವ ವಿಗ್ರಹಕ್ಕೆ ಪೂಜೆ ಮಾಡುತ್ತಿದ್ದ. ಗೋಪಾಲಕೃಷ್ಣನನ್ನು ನೋಡುತ್ತಿದ್ದಂತಯೇ ಎಲ್ಲರೂ ದಾರಿ ಬಿಟ್ಟರು ಅವನೂ, ನರ ಮುಂದೆ ಸಾಗಿ ರಥದ ಮುಂದೆ ನಿಂತರು. ಗೋಪಾಲಕೃಷ್ಣನ ಕಣ್ಣುಗಳು ವರ್ಷಾಳಿಗೋಸ್ಕರ ಹುಡುಕುತ್ತಿದ್ದವು. ಅವಳು ಎಲ್ಲಿಯೂ ಕಂಡು ಬರಲಿಲ್ಲ. ಗೋಪಾಲಕೃಷ್ಣನಿಗೆ ನಿರಾಶೆಯಾಯ್ತು.

ಪೂಜಾರಿ ಇನ್ನೂ ಪೂಜೆ ಮಾಡುತ್ತಿದ್ದ. ಅಷ್ಟೊತ್ತಿಗೇ ಯುವಕರೆಲ್ಲ ಕೈಗಳಲ್ಲಿ ಚೆಂಬುಗಳನ್ನು ಹಿಡಿದುಕೊಂಡು ಪೂಜೆ ಯಾವಾಗ ಮುಗಿಯುತ್ತೋ ಓಕುಳಿಯಾಟ ಯಾವಾಗ ಶುರುವಾಗುತ್ತೋ ಎಂದು ಆತುರದಿಂದ ಕಾಯುತ್ತಿದ್ದರು. ಕೆಲವರಂತೂ ತಾವು ಯಾರ ಮೇಲೆ ಓಕುಳಿ ಸುರಿಯಬೇಕು ಎಂಬುದನ್ನು ಆಲೋಚಿಸುತ್ತಿದ್ದರು.

ಪೂಜಾರಿ ಕೊನೆಯ ಸಲ ಮಂತ್ರಗಳನ್ನು ಜೋರಾಗಿಉಚ್ಚರಿಸಿ, ವಿಗ್ರಹದ ಕೊರಳಲ್ಲಿದ್ದ ಹೂಮಾಲೆಯನ್ನು ಸರಿಪಡಿಸಿ ಕೆಳಗಿಳಿದ.. ... .. . ವೃದ್ಧರು ಕೈಜೋಡಿಸಿ ಉತ್ಸವ ಮೂರ್ತಿಗೆ ಭಕ್ತಿಯಿಂದ ನಮಸ್ಕರಿಸುತ್ತಿದ್ದರು. ಆ ಉತ್ಸವಕ್ಕೆ ಬಂದಿದ್ದ ಹುಲಿರಾಜ, ವೆಂಕಟರಾಮಯ್ಯರು ಒಂದೆಡೆ ಸೇರಿ ಗೋಪಾಲಕೃಷ್ಣನನ್ನು ದುರುಗುಟ್ಟಿ ನೋಡುತ್ತಿದ್ದರು. ಗೋಪಾಲಕೃಷ್ಣನಿಗೆ

ಲಭಿಸುತ್ತಿದ್ದ ಆದರ, ಮರ್ಯಾದೆ ಅವರ ಮನಸ್ಸಿನಲ್ಲಿ ಕಿಚ್ಚನ್ನು ಮತ್ತಷ್ಟು ಕೆದಕುತ್ತಿತ್ತು.

ಗೋಪಾಲಕೃಷ್ಣ ನೆರೆದಿದ್ದ ಜನರ ಮೇಲೆ ಮತ್ತೊಂದು ಸಲ ಕಣ್ಣಾಡಿಸಿದ. ಆಗಷ್ಟೇ ಧಾನ್ಯಗಳೊಂದಿಗೆ ಬಂದಿದ್ದ ವರ್ಷಾ ಕಣ್ಣಿಗೆ ಬೀಳುತ್ತಿದ್ದಂತೆಯೇ ಅವನ ನೋಟ ಅಲ್ಲಿಯೇ ಕೀಲಿಸಿಬಿಟ್ಟಿತು. ಮನಸ್ಸಿನಲ್ಲಿ ಉತ್ಸಾಹ, ಉತ್ಸುಕತೆ, ಉದ್ವೇಗ ಒಂದರ ಹಿಂದೊಂದರಂತೆ ಉಂಟಾದವು.

ಪೂಜಾರಿ ಅವನ ಬಳಿಗೆ ಬಂದು, "ವಸಂತೋತ್ಸವ ಶುರು ಮಾಡೋಣವೆ ಅಯ್ಯಾ" ಎಂದು ಮೆಲ್ಲಗೆ ನುಡಿದ.ಸರಿಯೆನ್ನುವಂತೆ ತಲೆಯಾಡಿಸಿದ ಗೋಪಾಲಕೃಷ್ಣ ಪೂಜಾರಿ ಜನರತ್ತ ತಿರುಗಿ ವಸಂತೋತ್ಸವ ಶುರು ಮಾಡಬಹುದೆನ್ನುವಂತೆ ಸಂಜ್ಞೆ ಮಾಡಿದ. ಅದನ್ನೇ ಕಾಯುತ್ತಿದ್ದ ಯುವಕರು 'ಹುಯಾ' ಮುಂದೆ ನುಗ್ಗಿದರು. ಕೆಲವರು ಓಕುಳಿ ಅಭಿಷೇಕದಿಂದ ಪಾರಾಗಬೇಕೆಂದು ಮನೆಯತ್ತ ಓಟ ಕಿತ್ತರು. ಕೆಲವರು ಚೆಂಬುಗಳಲ್ಲಿ ಓಕುಳಿ ತುಂಬಿಕೊಂಡು ಅವರ ಬೆನ್ನಟ್ಟಿದರು. ಕ್ಷಣ ಮಾತ್ರದಲ್ಲಿ ಅಲ್ಲಿನ ವಾತಾವರಣ ಕೋಲಾಹಲ ಮಯವಾಗಿ ಮಾರ್ಪಟ್ಟಿತು.

ಅಷ್ಟರಲ್ಲಿ ಜನರ ನಡುವೆ ದಾರಿ ಮಾಡಿಕೊಂಡು ಚೆಂಬಿನಲ್ಲಿ ಓಕುಳಿ ತುಂಬಿಕೊಂಡ ಪುನರ್ವಸು ವೇಗವಾಗಿ ನುಗ್ಗಿ ಬಂದು ಅದನ್ನು ಗೋಪಾಲಕೃಷ್ಣನ ಮೇಲೆ ಸುರಿದಳು. ಗೋಪಾಲಕೃಷ್ಣ ಅದನ್ನು ನಿರೀಕ್ಷಿಸಿರದಿದ್ದುದರಿಂದ ಮೊದಲೊಂದು ಕ್ಷಣ ತಬ್ಬಿಬ್ಬಾಗರೂ ಸುಧಾರಿಸಿಕೊಂಡು ಮುಗುಳ್ನಕ್ಕ.

ಆ ದೃಶ್ಯವನ್ನು ನೋಡಿದ ಹುಲಿರಾಜನ ಹೃದಯ ಭಗಭಗನೆ ಉರಿಯಿತು ಗೋಪಾಲಕೃಷ್ಣನ ಮೇಲಿನ ರೊಚ್ಚು ನೂರ್ಮಡಿಯಾಯ್ತು ತಾನು ಮನಸಾರೆ, ಗಾಢವಾಗಿ ಪ್ರೇಮಿಸುತ್ತಿರುವ ಯುವತಿ, ಬೇರೊಬ್ಬನ ಮೇಲೆ ಓಕುಳಿ ಸುರಿಯುವುದನ್ನು ಸಹಿಸಲು ಅವನಿಂದಾಗಲಿಲ್ಲ. ಕಟಕಟನೆ ಹಲ್ಲುಕಡಿದು ಮುಷ್ಟಿ ಬಿಗಿಸಿದ. ಪಕ್ಕದಲ್ಲೇ ಇದ್ದ ವೆಂಕಟರಾಮಯ್ಯ ಅದನ್ನು ಗಮನಿಸಿ ಸಮಾಧಾನ ಮಾಡಿಕೊಳ್ಳೆನ್ನುವಂತೆ ಭುಜವನ್ನು ತಟ್ಟಿದ

ಪುನರ್ವಸು ಆ ರೀತಿ ಗೋಪಾಲಕೃಷ್ಣನ ಮೇಲೆ ಓಕುಳಿ ಸುರಿದುದನ್ನು ಉಳಿದ ಜನ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು. ಅವಳು ಅತ್ತ ಹೋದೊಡನೆಯೇ ಮತ್ತೊಬ್ಬ ಯುವತಿ ಮುಂದೆ ಬಂದು ಅವನ ಮೇಲೆ ಓಕುಳಿ ಸುರಿದಳು ಜನ ಮತ್ತೆ ಚಪ್ಪಾಳೆ ತಟ್ಟಿದರು. ಗೋಪಾಲಕೃಷ್ಣ ಜನಾಕರ್ಷಣೆಯ ಕೇಂದ್ರಬಿಂದುವಾಗಿಬಿಟ್ಟ. ಅದನ್ನೆಲ್ಲ ನೋಡುತ್ತಿದ್ದ ಹುಲಿರಾಜ, ವೆಂಕಟರಾಮಯ್ಯರ ಮನಸ್ಸಿನಲ್ಲಿ ಕೋಪ ಕೋಪದೊಂದಿಗೆ ಈರ್ಷ್ಯೆ ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಿದ್ದವು.

ತಲೆ ಮೇಲೆ ಪದೇ ಪದೇ ಓಕುಳಿಯ ಅಭಿಷೇಕವಾಗತೊಡಗಿದ್ದರಿಂದ ಗೋಪಾಲಕೃಷ್ಣನಿಗೆ ಉಸಿರುಗಟ್ಟಿದಂತೆನಿಸತೊಡಗಿದರೂ, ಜನರ ಉತ್ಸಾಹಕ್ಕೆ ಅಡ್ಡಬರಲಿಲ್ಲ. ತಲೆ ಮೇಲೆ ಬಣ್ಣದ ನೀರು ದಬ ದಬ ಬೀಳುತ್ತಿದ್ದರೂ. ಅವನ ನೋಟ ವರ್ಷಾಳತ್ತಲೇ ಇತ್ತು.

ಅವನ ನೋಟ ತಮ್ಮತ್ತ ಇರುವುದನ್ನು ಗಮನಿಸಿದ ಧಾನ್ಯ, ಅವನು ತನ್ನನ್ನೇ ನೋಡುತ್ತಿರುವಂತೆ ಭ್ರಮೆ ಪಟ್ಟಳು. ವರ್ಷಾಳನ್ನುದ್ದೇಶಿಸಿ, "ನನ್ನ ಹೀರೋ ನನ್ನ ಕಡೇನೇ ನೋಡ್ತಿದಾನೆ. ಹೋಗಿ ಒಂದಿಷ್ಟು ಓಕುಳಿ ಸುರಿದು ಬರ್‍ತೀನಿ" ಎಂದಳು

"ಆಚಾರದ ಹೆಸರಿನಲ್ಲಿ ಹೆಣ್ಣುಗಳನ್ನು ಅನುಭವಿಸೋ ಅವನು, ಒಂದಿಷ್ಟೂ ಮೈ ಬಗ್ಗಿಸಿ ಕೆಲಸ ಮಾಡದ ಆ ಸೋಮಾರಿ ಹೀರೋನಾ ?! ನಿನ್ನಲೆ ನೀನೇನಾದ್ರೂ ಅವನ ಮೇಲೆ ಓಕುಳಿ ಸುರಿಯೋದಿಕ್ಕೆ ಹೋದ್ರೆ ನಾನು ಮನೆಗೆ ಹೋಗಿಬಿಡ್ತೀನಿ" ಎಂದಳು ವರ್ಷಾ.

"ಅಯ್ಯಯ್ಯೋ-ಬೇಡ ಮಹಾರಾಯ್ತಿ. ನೀನು ಹೋದೆ ಅಂದ್ರೆ ನನಗೆ ಹೊತ್ತು ಹೋಗೋದಿಲ್ಲ. ನಾನು ಹೋಗೋದಿಲ್ಲ ಬಿಡು" ಎಂದಳು ಧಾನ್ಯ-ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳುತ್ತ.

ಅತ್ತ ಯುವತಿಯರೆಲ್ಲ ಪೈಪೋಟಿಯಿಂದ ಗೋಪಾಲಕೃಷ್ಣನಿಗೆ ಓಕುಳಿಯ ಅಭಿಷೇಕವನ್ನು ಮಾಡುತ್ತಿದ್ದರು. ನರ ತನ್ನ ಗುರುವಿಗಾಗುತ್ತಿರುವ ವಸಂತಾಭಿಷೇಕವನ್ನು ಆಸಂದೋತ್ಸಾಹಗಳಿಂದ ನೋಡುತ್ತಿದ್ದ. ಅಷ್ಟರಲ್ಲಿ ಗೋಪಾಲಕೃಷ್ಣನ ಮನಸ್ಸಿನಲ್ಲಿ ತುಂಟ ಯೋಚನೆಯೊಂದು ಮೂಡಿತು. ಅದನ್ನು ತಕ್ಷಣವೇ ಕಾರ್ಯರೂಪಕ್ಕಿಳಿಸಬೇಕೆಂದು ಮೈಯಿನ ನರ-ನರವೂ ಪುಟಿದಾಡಿದವು. ಒಂದು ಕ್ಷಣ ವಿಚಕ್ಷಣಾ ಬುದ್ಧಿಯನ್ನು ತೊರೆದು-ತನ್ನ ಮೇಲೆ ಓಕುಳಿ ಸುರಿದು ನಗುತ್ತ ನಿಂತಿದ್ದ ಯುವತಿಯೊಬ್ಬಳ ಕೈಯಿಂದ ಬೆಳ್ಳಿ ತಂಬಿಗೆಯನ್ನು ಕಸಿದುಕೊಂಡ.

ಅಲ್ಲಿಯವರೆಗೂ ಎಂದೂ ಯಾರ ಮೇಲೂ ಓಕುಳಿ ಸುರಿಯದಿದ್ದ ಗೋಪಾಲಕೃಷ್ಣ ಮೊದಲಬಾರಿಗೆ ಚೆಂಬನ್ನು ಕೈಗೆತ್ತಿಕೊಂಡುದುದನ್ನು ಉತ್ಸುಕರಾಗಿ ನೋಡಿದರು. ಅವನು ಚೆಂಬಿನಲ್ಲಿ ಓಕುಳಿ ತುಂಬಿಕೊಂಡ ಅಲ್ಲಿಯವರೆಗೂ ಅವನ ತಲೆಯ ಮೇಲೆ ಓಕುಳಿ ಸುರಿದಿದ್ದ ಸ್ತ್ರೀಯರೆಲ್ಲರೂ, ಅವನು ತಮ್ಮ ಮೇಲೆ ಓಕುಳಿ ಸುರಿಯಬಹುದೆಂದುಕೊಂಡು ಉದ್ವಿಗ್ನರಾಗಿ ನೋಡುತ್ತ ನಿಂತಿದ್ದರು.

ಗೋಪಾಲಕೃಷ್ಣನ ನೋಟ ಧಾನ್ಯಳತ್ತ ಹರಿಯಿತು. ಅವನ ನೋಟ-ವನ್ನನುಸರಿಸಿ ಜನರ ನೋಟವೂ ಅತ್ತ ಹರಿಯಿತು. ಧಾನ್ಯಳಿಗೆ ಮನಸ್ಸಿನಲ್ಲೇ ಕೇಕೆ ಹಾಕುವಂತಾಗಿತ್ತು. ವರ್ಷಾ ಯಾವೊಂದು ಭಾವನೆಯೂ ಇಲ್ಲದೆ ಸುಮ್ಮನೆ ನಿಂತಿದ್ದಳು. ಗೋಪಾಲಕೃಷ್ಣ ಮೆಲ್ಲಗೆ ಹೆಜ್ಜೆ ಇಡುತ್ತ ಅವರನ್ನು ಸಮೀಪಿಸಿದ. ತಾನು ಸ್ವಲ್ಪ ಮುಂದೆ ಬಂದು ನಿಲ್ಲಬೇಕೆಂದುಕೊಂಡಳಾದರೂ ಧಾನ್ಯಳಿಗೆ ಕಾಲುಗಳು ಸಹಕರಿಸಲಿಲ್ಲ. ಗೋಪಾಲಕೃಷ್ಣ ಮತ್ತಷ್ಟು ಹತ್ತಿರವಾದ. ಧಾನ್ಯ ಕಣ್ಣು ಮುಚ್ಚಿಕೊಂಡಳು . ಜನ ಬಿಟ್ಟ ಕಣ್ಣು ಬಿಟ್ಟಂತೆಯೇ ನೋಡುತ್ತಿದ್ದರು.

ಗೋಪಾಲಕೃಷ್ಣ ಧಾನ್ಯಳ ಬಳಿಗೆ ಬಂದು ಒಂದು ಕ್ಷಣ ನಿಂತು, ಠಕ್ಕನೆ ಪಕ್ಕಕ್ಕೆ ಎರಡು ಹೆಜ್ಜೆ ಇಟ್ಟು ಅಲ್ಲಿಯೇ ನಿಂತಿದ್ದ ವರ್ಷಾಳ ತಲೆಯ ಮೇಲೆ ಓಕುಳಿಯನ್ನು ಸುರಿದ. ಈ ಹಠಾತ್ ಪರಿಣಾಮವನ್ನು ನಿರೀಕ್ಷಿಸದಿದ್ದ ವರ್ಷಾ ತಬ್ಬಿಬ್ಬುಗೊಂಡಳು. ತೆರೆದುಕೊಂಡೇ ಇದ್ದ ಕಣ್ಣುಗಳಲ್ಲಿ ಓಕುಳಿ ನೀರು ಸೇರಿಕೊಂಡು ಉರಿಯತೊಡಗಿತು-ಜೊತೆಗೆ ಮನಸ್ಸು ಕೂಡ.

ಗೋಪಾಲಕೃಷ್ಣ ತಮ್ಮೂರಿನವರನ್ನು ಬಿಟ್ಟು ಬೇರೆ ಊರಿನಿಂದ ಬಂದ ವರ್ಷಾಳ ಮೇಲೆ ಓಕುಳಿ ಸುರಿದುದನ್ನು ನೋಡಿದ ಜನ ಒಂದೆರಡು ಕ್ಷಣ ಚೇಷ್ಟೆಯುಡುಗಿದವರಂತಾದರೂ, ತಕ್ಷಣವೇ ಚೇತರಿಸಿಕೊಂಡು ಚಪ್ಪಾಳೆ ತಟ್ಟಿದರು. ಚಪ್ಪಾಳೆ ಸದ್ದು ಕೇಳಿ ಕಣ್ಣು ಬಿಟ್ಟ ಧಾನ್ಯಳಿಗೆ ಗೋಪಾಲಕೃಷ್ಣ ತನ್ನ ಮೇಲಲ್ಲದೆ ವರ್ಷಾಳ ಮೇಲೆ ಓಕುಳಿ ಸುರಿದುದು ಗೊತ್ತಾಯಿತು. ಒಂದು ಕ್ಷಣ ಮನಸ್ಸಿಗೆ ಪೆಚ್ಚೆನಿಸಿದರೂ, ಮರುಕ್ಷಣವೇ ಅದನ್ನು ಮನಸ್ಸಿನಿಂದ ಕಿತ್ತುಹಾಕಿ ತಾನೂ ಚಪ್ಪಾಳೆ ತಟ್ಟಿದಳು.

ತಬ್ಬಿಬ್ಬಾಗಿದ್ದ ವರ್ಷಾ ಸುತ್ತಲೂ ಸೇರಿ ಚಪ್ಪಾಳೆ ತಟ್ಟುತ್ತಿದ್ದ ಜನರನ್ನೂ, ಮುಗುಳ್ನಗುತ್ತಿದ್ದ ಗೋಪಾಲಕೃಷ್ಣನನ್ನೂ ನೋಡಿ-ಏನೂ ಮಾತಾಡದೆ ತಲೆ ತಗ್ಗಿಸಿಕೊಂಡು ಅಲ್ಲಿಂದ ಓಡಿದಳು. ಮೊದಲ ಬಾರಿಗೆ ಅವಳು ತನ್ನ ಪ್ರವೃತ್ತಿಗೆ ವಿರುದ್ಧವಾಗಿ ವರ್ತಿಸಿದ್ದಳು.

ತಾನು ಓಕುಳಿ ಸುರಿದುದರಿಂದ ನಾಚಿಕೊಂಡು ಹೊರಟು ಹೋದಳೆಂದುಕೊಂಡ ಗೋಪಾಲಕೃಷ್ಣ, ತನ್ನ ಜೀವನದಲ್ಲಿ ಮೊದಲ ಬಾರಿಗೆ ತಪ್ಪು ಗ್ರಹಿಕೆಗೀಡಾದ. ಈ ಎಲ್ಲವುಗಳ ಪರ್ಯಾವಸಾನವೇನೆಂಬುದನ್ನು ಬರಲಿರುವ ಕಾಲವೇ ನಿರ್ಧರಿಸಬೇಕು.

## ೧೨

ಗೋಪಾಲಕೃಷ್ಣನಿಂದ ಕರೆಬಂದುದರಿಂದ ಧಾನ್ಯಳಿಗಿಂತಲೂ ಅವಳ ತಂದೆಗೆ ಹೆಚ್ಚಿನ ಸಂಭ್ರಮವಾಗಿತ್ತು. ಇನ್ನು ತನ್ನ ಮನೆಯಲ್ಲಿ ಧವಸ ಧಾನ್ಯ, ಧನ-ಕನಕಗಳಿಗೆ ಕೊರತೆ ಇರುವುದಿಲ್ಲವೆಂದು ಭಾವಿಸಿದ. ಹಿಗ್ಗಿನಿಂದ ಉಬ್ಬಿದ. ಕಾಲದೊಂದಿಗೆ ಕೈಜಾರಿ ಹೋಗಿದ್ದ ಸಿರಿ ಸಂಪತ್ತನ್ನು ತಿರುಗಿ ಪಡೆಯಲಿರುವೆನೆಂಬ ಭಾವನೆ ಮುದ ನೀಡುತ್ತಿತ್ತು.

ಧಾನ್ಯಳೂ ಸಂತೋಷದಿಂದ ಕುಣಿದಾಡುತ್ತಿದ್ದಳು. ಮನಸ್ಸಿಗೊಪ್ಪಿದ ಪುರುಷನೊಂದಿಗೆ ರಾತ್ರಿ ಸ್ವರ್ಗಸುಖ ಅನುಭವಿಸಲಿರುವೆನೆನ್ನುವ ಊಹೆ ಅವಳು ನಿಂತಲ್ಲಿ ನಿಲ್ಲಗೊಟ್ಟರಲಿಲ್ಲ.

ಆ ಪೌರ್ಣಮಿಯ ದಿನ ಶಿವರಾಮಯ್ಯನ ಮನೆಯಲ್ಲಿ ನಡೆಯುತ್ತಿದ್ದ ಗಡಿಬಿಡಿಯನ್ನೆಲ್ಲ ವರ್ಷಾ ಆಶ್ಚರ್ಯದಿಂದ ಗಮನಿಸುತ್ತಿದ್ದಳು. ಕೇವಲ ಒಂದು ಮೂಢ ನಂಬಿಕೆಯಿಂದಾಗಿ-ತಮಗೆ ಸಿರಿಸಂಪತ್ತು ಲಭಿಸುತ್ತದೆಂದು ನಂಬಿ, ಮದುವೆಯಾಗಿರದ ತನ್ನ ಮಗಳನ್ನು ಪರಪುರುಷನೊಂದಿಗೆ ರಾತ್ರಿ ಕಳೆಯಲು ಕಳುಹಿಸುತ್ತಿರುವ ಶಿವರಾಮಯ್ಯನನ್ನು ಕಂಡರೆ ಅವಳಿಗೆ ಮರುಕ ಉಂಟಾಯ್ತು. ಈ ದುರಾಚಾರವನ್ನು ಹೇಗೆ ತಡೆಗಟ್ಟಬೇಕೆಂಬುದು ಅವಳಿಗೆ ಗೊತ್ತಾಗಲಿಲ್ಲ. ಜನರ ಮನದಲ್ಲಿ ಆಳವಾಗಿ ಬೇರುಬಿಟ್ಟಿರುವ ಈ ನಂಬಿಕೆಯನ್ನು ಸುಲಭದಲ್ಲಿ ತೊಡೆದುಹಾಕುವುದು ಸಾಧ್ಯವಿಲ್ಲವೆಂಬುದೂ ಅವಳಿಗೆ ಗೊತ್ತಿತ್ತು. ಆದಾಗ್ಯೂ ತಡೆದುಕೊಳ್ಳಲಾಗದೆ ಶಿವರಾಮಯ್ಯನನ್ನು ಕರೆದು ಇದೆಲ್ಲ ಮೂಢನಂಬಿಕೆಯೆಂದು ಹೇಳಲು ಬಾಯಿತೆರೆಯುತ್ತಿರುವಂತೆಯೇ ಆತ ನಡುವೆ ಬಾಯಿ ಹಾಕಿ- "ನೀನೇನೂ ಹೇಳಬೇಡಮ್ಮ, ಈ ದಿನ ಯಾವುದನ್ನೂ ಕೇಳುವ ಸ್ಥಿತಿಯಲ್ಲಿಲ್ಲ. ನಾಳೆಯಿಂದ ಈ ಮನೆಯಲ್ಲಿ ಸಿರಿಲಕ್ಷ್ಮಿಯ ಕಾಲುಗೆಜ್ಜೆಯ ನಾದ ಕೇಳಿ ಬರಲಿದೆ. ಸಿರಿ-ಸಂಪತ್ತು ನಮ್ಮನ್ನು ಹುಡುಕಿಕೊಂಡು ಬರಲಿದೆ'' ಎಂದು ಯಾವುದೋ ಭ್ರಾಮಕ ಲೋಕದಲ್ಲಿರುವವನಂತೆ ಮಾತಾಡಿದ.

ಇನ್ನು ತನ್ನಿಂದ ಮಾಡುವುದೇನೂ ಇಲ್ಲವೆನ್ನಿಸಿ ಶಾಲೆಗೆ ಹೋದಳು. ಸಾಯಂಕಾಲ ತಿರುಗಿ ಬರುವಷ್ಟರಲ್ಲಿ ಧಾನ್ಯ ಮದುಮಗಳಂತೆ ಸಿಂಗಾರಗೊಂಡಿದ್ದಳು. ಎಲೆ ಹಸಿರು ಬಣ್ಣದ ಲಂಗಾ, ದಾವಣಿ ಅವಳಿಗೆ ಚೆನ್ನಾಗಿ ಒಪ್ಪುತ್ತಿತ್ತು. ಕೇದಿಗೆ ಜಡೆಯನ್ನು ಹೆಣೆದುಕೊಂಡಿದ್ದಳು. ಕೊರಳಲ್ಲಿ ಒಂದೆಳೆಯ ಮುತ್ತಿನ ಸರವು ತುಂಬಾ ಚೆನ್ನಾಗಿ ಕಾಣುತ್ತಿತ್ತು.

ವರ್ಷಾಳನ್ನು ನೋಡುತ್ತಿದ್ದಂತೆಯೇ ಅವಳು, "ವರ್ಷಾ! ಬಾ" ಎಂದು ಆಹ್ವಾನಿಸಿದಳು. ಅವಳ ಮುಖದಲ್ಲಿ ಆನಂದೋಲ್ಲಾಸ ತುಂಬಿ ತುಳುಕಾಡುತ್ತಿತ್ತು. ವರ್ಷಾ ಏನೂ ಮಾತಾಡದೆ ತನ್ನ ಕೋಣೆಯೊಳಗೆ ಹೋಗಿಬಿಟ್ಟಳು ಥೇಟ್ ಮದುಮಗಳಂತೆ ಸಿಂಗರಿಸಿಕೊಂಡು ತಯಾರಾಗಿದ್ದ ಧಾನ್ಯಳನ್ನು ನೋಡುತ್ತಿದ್ದಂತೆಯೇ ಅವಳ ಹೃದಯ ಕಲಕಿದಂತಾಗಿತ್ತು. ಕೋಣೆಯೊಳಗೆ ಬಂದವಳೇ ಹಾಸಿಗೆಯ ಮೇಲೊರಗಿದಳು. ಧಾನ್ಯಳನ್ನು ನೋಡುತ್ತಿದ್ದಂತೆ ದೇವರಿಗೆ ಬಲಿ ಕೊಡಲು ಸಿಂಗರಿಸಿದ ಮೇಕೆಯ ನೆನಪಾಯ್ತು. ಆ ಮೇಕೆಗೂ, ಧಾನ್ಯಳಿಗೂ ಏನೂ ವ್ಯತ್ಯಾಸ ಕಂಡು ಬರಲಿಲ್ಲ. ಒಂದ. ಪ್ರಾಣ ಕಳೆದುಕೊಂಡರೆ, ಇನ್ನೊಂದು ಮಾನವನ್ನು ಕಳೆದುಕೊಳ್ಳಲಿತ್ತು. ಅದಷ್ಟೇ ವ್ಯತ್ಯಾಸ.

* * *

ರಾತ್ರಿ ದಟ್ಟಗೊಳ್ಳುತ್ತಿರುವಂತೆಲ್ಲ ಚಂದ್ರ ಅದೇ ಅನುಪಾತದಲ್ಲಿ ಬೆಳದಿಂಗಳನ್ನು ಚೆಲ್ಲುತ್ತಿದ್ದ. ಆ ಬೆಳದಿಂಗಳು ಇಡೀ ಭೂಮಿಗೆ ಮಲ್ಲಿಗೆ ಹೂ ಹಾಸಲಾಗಿದೆಯೇನೋ ಎನ್ನುವ ಭಾವನೆಯನ್ನುಂಟು ಮಾಡುತ್ತಿತ್ತು.

ಊಟ ಮಾಡಿ, ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದ ನಂತರ ಧಾನ್ಯ ಗೋಪಾಲಕೃಷ್ಣನ ಬಳಿಗೆ ಹೊರಟಳು. ಬೆಟ್ಟದ ಬಳಿಗೆ ಬರುವಷ್ಟರಲ್ಲಿ ಕಾಲುಗಳು ತಡವರಿಸಿದವು– ಹೃದಯ ವೇಗವಾಗಿ ಬಡಿದುಕೊಳ್ಳತೊಡಗಿತು. ಬೆಟ್ಟ ಹತ್ತತೊಡಗಿದಳು. ಎರಡು ಹೆಜ್ಜೆ ಇಟ್ಟಿದ್ದಳೋ ಇಲ್ಲವೋ– ತನ್ನ ದಾವಣಿ ಯಾವುದಕ್ಕೋ ಸಿಕ್ಕಿಬಿದ್ದು ಹಿಂದಕ್ಕೆಳೆದಂತಾದುದರಿಂದ ತಟಕ್ಕನೆ ನಿಂತು ಹಿಂದಿರುಗಿ ನೋಡಿದಳು. ಗೋಪಾಲಕೃಷ್ಣ ನಗುತ್ತ ನಿಂತಿದ್ದ. ನಾಚಿ, ತಲೆ ತಗ್ಗಿಸಿದಳಾದರೂ, ಕಣ್ಣು ಮೇಲೆತ್ತಿ ಅವನನ್ನೇ ನೋಡುತ್ತಿದ್ದಳು.

"ಭಕ್ತರು ದೇವತೆಯ ಸಾಕ್ಷಾತ್ಕಾರಕ್ಕೋಸ್ಕರ ಸ್ತುತಿ ಗೀತೆ ಹಾಡುತ್ತಾರೆ. ಕಾಳಿದಾಸನಂತೂ, ಕಾಳಿಕಾದೇವಿಯನ್ನು ಸ್ತುತಿಸುವಾಗ 'ಕುಚೋನ್ನತೋ–' ಎಂದೆಲ್ಲ ವರ್ಣಿಸಿದ್ದಾನೆ. ಛೆ ! ನಾನು ಕವಿಯಾದರೂ ಆಗಬಾರದಿತ್ತೆ ?. ಈ ದೇವಿಯನ್ನು ಸ್ತುತಿಸಿ ಪದ್ಯ ಕಟ್ಟಬಹುದಾಗಿತ್ತು" ಎನ್ನುತ್ತ ಅವಳ ಗದ್ದ ಹಿಡಿದು ಮೇಲೆತ್ತಿದ ಗೋಪಾಲಕೃಷ್ಣ. ಅವನ ಮಾತು, ಸ್ಪರ್ಶ ಅವಳ ಶರೀರದಲ್ಲೆಲ್ಲ ಪುಳಕದ ಅಲೆಗಳನ್ನು ಹರಡಿದವು. ಅವಳ ಯೌವನ ಗರಿ ಬಿಚ್ಚಿತು. ಮಧುರ ಭಾವನೆ ಅವಳನ್ನು ಸುತ್ತಿ ಸುತ್ತಿ ಸುಳಿದಾಡಿತು. ಮೆಲ್ಲಗೆ ತುಟಿ ಬಿರಿಸಿದಳು.

"ಬಾ" ಎನ್ನುತ್ತ ಕೈ ಚಾಚಿದ ಗೋಪಾಲಕೃಷ್ಣ. ಧಾನ್ಯ ಅವನೊಂದಿಗೆ ತನ್ನ ಕೈ ಕೂಡಿಸಿದಳು ಇಬ್ಬರು ಬೆಟ್ಟ ಹತ್ತತೊಡಗಿದರು. ನರ ಭವನದ ಹೊರಗೆ ಬಯಲಿನಲ್ಲಿ ಅವರಿಗೆ ಹಾಸಿಗೆ ಹಾಸಿಟ್ಟು, ತಾನು ಒಳಗೆ ಮಲಗಿ ಗೊರಕೆ ಹೊಡೆಯುತ್ತಿದ್ದ.

ಗೋಪಾಲಕೃಷ್ಣ ಹಾಸಿಗೆಯ ಮೇಲೆ ಕುಳಿತುಕೊಳ್ಳುತ್ತ, ಧಾನ್ಯಳನ್ನು ತನ್ನ ಪಕ್ಕದಲ್ಲಿ ಕೂಡಿಸಿಕೊಂಡ. ಮೆಲ್ಲಗೆ ಅವಳ ಮುಂಗುರುಳು ತೀಡುತ್ತ "ನಿಮ್ಮ ಮನೇಲಿರೋ ಟೀಚರ್ ಏನಂತಿದ್ದಾಳೆ. . " ಎಂದು ಕೇಳಿದ. ಆ ಸಂದರ್ಭದಲ್ಲಿ ಬೇರೊಬ್ಬ ಸ್ತ್ರೀಯ ಪ್ರಸ್ತಾಪ ಬಂದದ್ದು ಧಾನ್ಯಳಿಗೇನೂ ಕಿಂಕಿರಿಯೆನಿಸಲಿಲ್ಲ. ವರ್ಷಾಳ ಬಗೆಗಿನ ವಿವರಗಳನ್ನೆಲ್ಲ ಕೇಳಿ ತಿಳಿದುಕೊಂಡ ನಂತರ ಅವಳು ಅಲ್ಲಿಯವರೆಗೂ ಯಾರಿಗೂ ಹೇಳಿರದಿದ್ದ ಘಟನೆಯ ಬಗ್ಗೆ ಕೇಳಿದ.

ಧಾನ್ಯ ಹೇಳತೊಡಗಿದಳು.

"ಈ ಘಟನೆಯನ್ನು ಮತ್ತೊಬ್ಬರಿಗೆ ಹೇಳಬೇಕಾಗಿ ಬರುತ್ತದೆಂದು ನಾನು ಅಂದುಕೊಂಡಿರಲಿಲ್ಲ. ಅದಕ್ಕೇ ಎಲ್ಲಿಂದ, ಹೇಗೆ ಪ್ರಾರಂಭಿಸ ಬೇಕೆನ್ನುವುದು ಗೊತ್ತಾಗುತ್ತಿಲ್ಲ" ಎಂದು ಒಂದು ಕ್ಷಣ ತಡೆದು ಮತ್ತೆ ಹೇಳುವುದನ್ನು ಮುಂದುವರಿಸಿದಳು.

"ಆಗ ನಾನು ಮದರಾಸಿನಲ್ಲಿರುತ್ತಿದ್ದೆ. ನಾನು ಇಂಟರ್ ಓದಿದ್ದು ಅಲ್ಲೇ. ಕೋಡಂಬಾಕ್ಕಿನಲ್ಲಿ ನನ್ನ ಸೋದರತ್ತೆಯೊಬ್ಬಳಿದ್ದಳು. ಆಕೆಗೆ ಯಾರೂ ಇರಲಿಲ್ಲ. ಒಬ್ಬಂಟಿಯಾಗಿದ್ದಳು. ಆಕೆಯೊಂದಿಗಿದ್ದು ಓದಲೆಂದು ನಮ್ಮಪ್ಪ ನನ್ನನ್ನು ಅಲ್ಲಿಗೆ ಕಳುಹಿಸಿದ್ದ. ದಿನಾಲೂ ಕಾಲೇಜಿಗೆ ಹೋಗಿ-ಬರುವುದರಲ್ಲಿ ಹೊತ್ತು ಉರುಳಿ ಹೋಗುತ್ತಿತ್ತು.

ಒಂದುದಿನ ನಮ್ಮ ಸೋದರತ್ತೆಯ ಗಂಡನ ಕಡೆಯ ದೂರದ ಬಂಧು ಯಾರೋ ಸತ್ತು ಹೋದುದರಿಂದ ಊರಿಗೆ ಹೋದಳು. ನಾನೊಬ್ಬಳೇ ಮನೆ ಯಲ್ಲಿ ಉಳಿದೆ. ಸಾಯಂಕಾಲ ಕಾಲೇಜಿನಿಂದ ಮನೆಗೆ ಬಂದ ನಂತರ ಬೇಸರ ವಾಗತೊಡಗಿದ್ದರಿಂದ ಸಾಲಿಗ್ರಾಮಕ್ಕಾದರೂ ಹೋಗಿ ಬರೋಣವೆಂದುಕೊಂಡೆ. ಅಲ್ಲಿ ನನ್ನ ಸ್ನೇಹಿತೆಯೊಬ್ಬಳಿದ್ದಳು. ಅವಳೊಂದಿಗೆ ಹರಟೆ ಹೊಡೆದು ಏಳು ಗಂಟೆಯಷ್ಟು ಹೊತ್ತಿಗೆ ತಿರುಗಿ ಬಂದರಾಯಿತೆಂದು ಹೊರಟೆ. ಎರಡು ಮೂರು ಕಡೆ ಸಿಟಿ ಬಸ್ ಬದಲಾಯಿಸಿ ಅವಳ ಮನೆ ತಲುಪುವಷ್ಟರಲ್ಲಿ ಸಾಯಂಕಾಲ ಸರಿದು ಹೋಗತೊಡಗಿತ್ತು. ಆಕಾಶದಲ್ಲಿ ಮೋಡ ಕವಿದು ಕೊಂಡಿದ್ದರಿಂದ ಕತ್ತಲಾಗಿತ್ತು.

ಅಷ್ಟೆಲ್ಲ ಕಷ್ಟಪಟ್ಟು ಅಲ್ಲಿಗೆ ಹೋದರೆ ನನ್ನ ಸ್ನೇಹಿತೆ ಇರಲಿಲ್ಲ. ಸಿನಿಮಾಗೆ ಹೋಗಿದ್ದಾಳೆಂದು ಅವಳ ಮನೆಯಲ್ಲಿ ಹೇಳಿದರು. ಮಾಡುವುದೇನೂ ಇಲ್ಲವೆಂದು ತಿರುಗಿ ಮನೆಯತ್ತ ಹೊರಟೆ. ಬೀದಿಯೊಳಗೆ ಬರುವಷ್ಟರಲ್ಲಿ ಮಳೆ ಹನಿಯತೊಡಗಿತು.

ಸರಸರನೆ ಹೆಜ್ಜೆ ಹಾಕುತ್ತ ಸಿಟಿ ಬಸ್ ನಿಲ್ದಾಣದ ಬಳಿಗೆ ಬಂದೆ. ನಾನು ಕಾಲನಿಯತ್ತ ಹೋಗುವ ಬಸ್ಸಿಗೋಸ್ಕರ ಕಾಯುತ್ತ ನಿಂತೆ. ಅದೇ ನಿಲ್ದಾಣದಲ್ಲಿ ನನಗೆ ಸ್ವಲ್ಪ ದೂರದಲ್ಲಿ ಯುವಕನೊಬ್ಬ ನಿಂತುಕೊಂಡಿದ್ದ. ಅವನು ನಾನು ಬರುತ್ತಿದ್ದಂತೆಯೇ ನನ್ನತ್ತ ತಿರುಗಿಸಿದ ನೋಟವನ್ನು ಬೇರೆಡೆ ಹೊರಳಿಸಲಿಲ್ಲ. ನಗರದಲ್ಲಿ ಇಂತಹುದೆಲ್ಲ ಸಾಮಾನ್ಯವಾದುದರಿಂದ ನಾನು ಅಷ್ಟಾಗಿ ತಲೆ ಕೆಡಿಸಿಕೊಳ್ಳಲು ಹೋಗಲಿಲ್ಲ. ಅವನು ನೋಟದಲ್ಲೇ ನನ್ನನ್ನು ತಿಂದು ಬಿಡುವವನಂತೆ ನೋಡುತ್ತಿರುವುದು ಅವನ ನೋಟವು ನನ್ನ ಮೈಯನ್ನೆಲ್ಲ ಸವರುತ್ತಿರುವುದೂ ಗೊತ್ತಾಗುತ್ತಲೇ ಇತ್ತು.

ಮಳೆ ಜಾಸ್ತಿಯಾಯ್ತು. ತುಂತುರಿನಿಂದ ತಪ್ಪಿಸಿಕೊಳ್ಳಲು ನಾನು ಆ ಶೆಲ್ಟರಿನಲ್ಲಿ ಮತ್ತಷ್ಟು ಒಳಸರಿದೆ. ಮಳೆಯಿಂದ ರಕ್ಷಣೆ ಪಡೆಯಲು ಜನ ಅಲ್ಲಿ ಸೇರತೊಡಗಿದ್ದರಿಂದ 'ರಶ್' ಆಗತೊಡಗಿತು 'ಥೂ . ದರಿದ್ರ ಮಳೆ ಎಂದು ಮೆಲ್ಲಗೆ ನನ್ನಲ್ಲಿ ನಾನೇ ಗೊಣಗಿದೆ'. 'ನೀವು ಆಂಧ್ರದವರೆ ?' ಎನ್ನುವ ಧ್ವನಿ ಪಕ್ಕದಲ್ಲೇ ಕೇಳಿಬಂದುದರಿಂದ ಬೆಚ್ಚಿಬಿದ್ದು ನೋಡಿದೆ. ಅದೇ ಯುವಕ ದೂರದಲ್ಲಿ ನಿಂತಿದ್ದ ಅವನು ನನ್ನ ಪಕ್ಕಕ್ಕೆ ಯಾವಾಗ ಬಂದಿದ್ದನೆಂಬುದನ್ನು ನಾನು ಗಮನಿಸಿರಲಿಲ್ಲ. ಪಕ್ಕದಲ್ಲಿ ನಿಂತುದುದಷ್ಟೇ ಅಲ್ಲದೆ ತುಂಬಾ ಸಲಿಗೆಯಿಂದ ಆತ್ಮೀಯ ಮಗಳನ್ನು ಮಾತಾಡಿಸಿದಂತೆ ಮಾತಾಡುತ್ತಿದ್ದ ಅವನನ್ನು ನೋಡಿ ಒಂದು ಕ್ಷಣ ನಿಜವಾಗಿಯೂ ಭಯವಾಯ್ತು. ಜೊತೆಗೆ ಸಿಟ್ಟೂಬಂತು.

ನನ್ನ ಮನಸ್ಸಿನ ಭಾವನೆಯನ್ನು ಅವನು ಗಮನಿಸಿದಂತಿರಲಿಲ್ಲ. 'ಯಾವ ಊರು' ಎಂದು ಮತ್ತೆ ಕೇಳಿದ. ನಾನು ಆಗ ಅವನತ್ತ ಪರಿಶೀಲನೆಯಿಂದ ನೋಡಿದೆ. ಸುಮಾರು ಇಪ್ಪತ್ತೈದು ವರ್ಷಗಳ ವಯಸ್ಸಿರಬಹುದು. ಬಿಳಿ ಪ್ಯಾಂಟಿನ ಮೇಲೆ ಚೌಕುಳಿ ಅಂಗಿಯನ್ನು ಟಕ್ ಮಾಡಿಕೊಂಡಿದ್ದ. ಮುಖದಲ್ಲಿ ಇಂತಹುದೆಂದು ಹೇಳಲಾಗದ ಕ್ರೂರತೆಯೊಂದು ಅಸ್ಪಷ್ಟವಾಗಿ ಕಂಡುಬರುತ್ತಿತ್ತು.

ನಾನು ಅವನ ಮಾತಿಗೆ ಏನೂ ಉತ್ತರ ಹೇಳಲಿಲ್ಲ. ಅವನು ನಾನು ಕೈಯಲ್ಲಿ ಹಿಡಿದುಕೊಂಡಿದ್ದ ಪುಸ್ತಕವನ್ನು ನೋಡಿ, 'ಅಯ್ಯಯ್ಯೋ, ಪುಸ್ತಕ

ತೊಯ್ತಾ ಇದೆ. ಏನದು ಪುಸ್ತಕ–ಕಾದಂಬರಿಯೆ ?'' ಎನ್ನುತ್ತ ನನ್ನ ಮುಖದತ್ತ ಬಾಗಿದ. ವ್ಯವಹಾರ ಮಿತಿ ಮೀರುತ್ತಿದೆಯೆಂದು ನನಗೆ ಅರ್ಥವಾಯ್ತು. ಮತ್ತೆ ಅವನೇ ನುಡಿದ. 'ಕಾದಂಬರಿ ಹೆಸರು ಹೇಳದಿದ್ರೆ ಹೋಗ್ಲಿ–ಇಷ್ಟಕ್ಕೂ ರೇಟೆಷ್ಟು' ಎಂದ.

ಅವನಿಂದ ಹೇಗೆ ತಪ್ಪಿಸಿಕೊಳ್ಳಬೇಕೆಂದು ಯೋಚಿಸುತ್ತ, 'ಇಪ್ಪತ್ತೈದು' ಎಂದೆ.

'ಪುಸ್ತಕದ್ದಲ್ಲ– ನಿನ್ನರೇಟು ನಾನು ಕೇಳಿದ್ದು'.

ಅವನ ಮೇಲೆ ಬಿದ್ದು ಕತ್ತು ಹಿಸುಕಿ ಬಿಡಬೇಕೆನ್ನುವಷ್ಟು ಸಿಟ್ಟು ಉಕ್ಕಿಬಂತು. ಕಷ್ಟಪಟ್ಟು ತಡೆದುಕೊಂಡೆ. ಮತ್ತೆ ಅವನೇ ನುಡಿದ 'ಇಲ್ನೋಡು. ನೀನು ಎಷ್ಟೇ ಪತಿವ್ರತೆಯಂತೆ ನಟಿಸಿದರೂ ನನಗೆ ನೀನು 'ಮಾಲು' ಅನ್ನೋದು ಗೊತ್ತಾಗಿಹೋಗಿದೆ. ಹಾಗಂತ ನನ್ನ ಸಿಕ್ಸ್ತ್ ಸೆನ್ಸ್ ಹೇಳ್ತಿದೆ'.

ಕೋಪ ಕಟ್ಟೆಯೊಡೆದುಕೊಂಡು ಹೊರಬರುತ್ತದೇನೋ ಎನಿಸಿತು. ಅವನು ಮುಂದುವರಿಸಿದ 'ಎಷ್ಟು ರೇಟಾದರೂ ಪರವಾಗಿಲ್ಲ. ರಾತ್ರಿಗೆ ಐದು ನೂರಾದರೂ ಪರವಾಗಿಲ್ಲ' ಅವನ ಧ್ವನಿ ಸ್ವಲ್ಪ ತಗ್ಗಿತು. ಇನ್ನೆಂದು ಸ್ತ್ರೀಯನ್ನು ಕೀಳುದೃಷ್ಟಿಯಿಂದ ನೋಡದಂತೆ ಬುದ್ಧಿ ಕಲಿಸಬೇಕೆಂದು ಮನಸ್ಸಿನಲ್ಲೇ ನಿರ್ಧರಿಸಿಕೊಂಡು ಮುಖದ ಮೇಲೆ ನಗು ಮೂಡಿಸಿಕೊಂಡು ಕೇಳಿದೆ 'ನಾನು ಆ ರೀತಿ ಕಾಣಿಸ್ತಿದೀನಾ?'

'ತೀರಾ ಖಾತ್ರಿಯಾಗಿ ಅಲ್ಲವಾದ್ರೂ ಫ್ಯಾಮಿಲಿ ಟೈಪು ಅಂದ್ಕೊಂಡೆ'.

'ಅರೆ, ಎಷ್ಟು ಸರಿಯಾಗಿ ಹೇಳಿದ್ರಲ್ಲ !'

'ಅದೇ ಮತ್ತೆ ಈ ಚಿಟ್ಟೆ ಬಾಬುವಿನ ಸ್ಪೆಶಾಲಿಟಿ. ಅರ್ಧ ಕಿಲೋಮೀಟರ್ನ ದೂರದಿಂದ ನೋಡಿದ್ರೂ ಯಾವ ಹುಡುಗಿ ಎಂತಹವಳು ಅನ್ನೋದನ್ನ ಹೇಳಬಲ್ಲೆ' ಎಂದು ಕಾಲರ್ ಎಗರಿಸಿದ.

'ಅಬ್ಬಾ, ಅಷ್ಟು ಅನುಭವಿಗಳು ಅಂತಾಯ್ತು! ಸರಿ, ಐನೂರಕ್ಕೆ ಒಪ್ಕೊಳ್ತೀನಿ. ಆದರೆ ಒಂದು ರಿಕ್ವೆಸ್ಟ್. ಹೋಟಲ್ಲಿಗಾಗಲಿ, ಮತ್ತೆ ಬೇರೆಲ್ಲಿಗಾಗಲಿ ಬೇಡ. ನಮ್ಮ ಮನೆಯೇ ಸುರಕ್ಷಿತ ಸ್ಥಳ. ಸರಿತಾನೆ' ಎಂದೆ.

'ಆಗ್ಲಿ'.

'ಅದೋ– ನಮ್ಮ ಬಸ್ಸು ಬಂತು' ಎನ್ನುತ್ತ ಬಸ್ಸಿನತ್ತ ಧಾವಿಸಿದೆ. ಅವನು ನನ್ನ ಹಿಂದೆಯೇ ಜೊಲ್ಲು ಸುರಿಸುತ್ತ, ನಾಯಿಯಂತೆ ಹಿಂಬಾಲಿಸಿದ. ಬಸ್ಸಿನಲ್ಲಿ ಅವನು ನನ್ನ ಪಕ್ಕದಲ್ಲಿ ಕುಳಿತುಕೊಳ್ಳಲು ಬಂದಾಗ–'ಬೇಡ–

ಯಾರಾದರೂ ನೋಡಿದರೆ ಚೆನ್ನಾಗಿರೋದಿಲ್ಲ. ಬೇರೆಡೆ ಹೋಗಿ ಕುಳಿತ್ಕೋ' ಎಂದೆ. ಅವನು ಮನಸ್ಸಿರದಿದ್ದರೂ ಬೇರೆಡೆ ಹೋಗಿ ಕುಳಿತ. ನನ್ನ ಕಾಲನಿ ಬಂದೊಡನೆಯೇ ಬಸ್ಸಿನಿಂದಿಳಿದೆ. ನನ್ನ ಹಿಂದೆಯೇ ಅವನೂ ಇಳಿದ. ಜೊತೆ ಜೊತೆಯಲ್ಲಿ ನಡೆಯುತ್ತ ಅವನ ವಿವರಗಳನ್ನು ಕೇಳಿ ತಿಳಿದುಕೊಂಡೆ. ನನ್ನ ಬೀದಿ ಬಂತು. ಇನ್ನು ಹತ್ತು ಹೆಜ್ಜೆ ದೂರದಲ್ಲಿ ನನ್ನ ಮನೆ ಇದೆ ಎನ್ನುವಾಗ ಅವನನ್ನು ನಿಲ್ಲಿಸಿ– "ಅದೋ, ಅಲ್ಲಿ ಹಳದಿ ಪೇಂಟ್ ಮಾಡಿರುವ ಅಪಾರ್ಟ್‌ಮೆಂಟಿನಲ್ಲಿ ನನ್ನ ಮನೆ ಇರೋದು. ಐದನೇ ನಂಬರಿನ ಫ್ಲ್ಯಾಟ್. ಮೊದಲನೆ ಅಂತಸ್ತಿನಲ್ಲಿದೆ ನಾನು ಹೋದ ಕಾಲುಗಂಟೆಯ ನಂತರ ಬಂದು ಬಿಡು ನಿನಗೋಸ್ಕರ ಬಾಗಿಲು ತೆರೆದೇ ಇಟ್ಟಿರ್ತೀನಿ' ಎಂದು ಹೇಳಿದೆ.

ನಾನು ಮೊದಲು ಫ್ಲ್ಯಾಟಿನೊಳಗೆ ಹೋಗಿ, ಅವನು ಬರುವುದರೊಳಗೆ ಮಾಡಬೇಕಾದ ಕೆಲವು ಕೆಲಸಗಳನ್ನು ಪೂರ್ತಿ ಮಾಡಿ, ಸ್ನಾನ ಮುಗಿಸಿದೆ. ಬಟ್ಟೆ ಬದಲಾಯಿಸಿ, ಹಾಲ್‌ನಲ್ಲಿದ್ದ ಸೋಫಾದಲ್ಲಿ ಕುಳಿತು ಕಾಯತೊಡಗಿದೆ. ಸರಿಯಾಗಿ ಕಾಲುಗಂಟೆಯ ನಂತರ ಬಂದ.

ಒಳಗೆಲ್ಲ ಕತ್ತಲು ತುಂಬಿಕೊಂಡಿತ್ತಾದ್ದರಿಂದ ಅವನಿಗೇನೂ ಕಾಣಿಸಿಲ್ಲ. 'ಬಾಬು' ಎಂದು ಧ್ವನಿಯಲ್ಲಿ ಜೇನನ್ನು ತುಂಬಿಕೊಂಡು ಕರೆದೆ.

'ಇದೇನು, ಏನೂ ಕಾಣಿಸ್ತಿಲ್ಲ. ಕರೆಂಟ್ ಇಲ್ವಾ ?'

'ಇಲ್ಲ. ಎಲ್ಲೋ ನನ್ನ ಲೈನಿನ ಫ್ಯೂಜ್ ಸುಟ್ಟಿರೋ ಹಾಗಿದೆ. ಏನೂ ಪರವಾಗಿಲ್ಲ. ನಾನು ಹೇಳಿದಂತೆ ಹೆಜ್ಜೆ ಇಡು, ನೇರವಾಗಿ ಹಾಲ್‌ನೊಳಗೆ ಬರ್ತೀಯ'

ಅವನು ಬಾಗಿಲ ಬಳಿಯೇ ಚಲಿಸುತ್ತಿರುವಂತೆ ಮಸುಕಾಗಿ ಕಂಡು ಬರುತ್ತಿದ್ದ. 'ಹಾಗೇನೇ ಒಂದು ಹೆಜ್ಜೆ ಮುಂದಿಡು. ಬಾಗಿಲು ದಾಟ್ತೀಯ. ಆ . ಹಾಗೇ.. ನೈಸ್ ಬಾಯ್– ನಿಂತ್ಕೋ– ಬಲಕ್ಕೆ ತಿರುಗಿ ಎರಡು ಹೆಜ್ಜೆ ಹಾಕು. ಹಾಗೇ ಬರೋವಾಗ ಚಪ್ಪಲಿ ಕಳಚಿ ಒಳಗೆ ಬಾ'.

'ಅಲ್ಲಿ ಕೈಯಿಂದ ತಡಕಾಡು. ಕುರ್ಚಿ ಸಿಗುತ್ತೆ. ಸಿಕ್ಸ್ತ್ ಸೆನ್ಸ್ ಇದೆ ಅಂತಂದ್ಮೇಲ್ಲ– ನೀನು ಸಲೀಸಾಗೇ ಕುರ್ಚಿ ದೊರಕಿಸಿಕೊಳ್ಳಬಲ್ಲೆ-'

ಅವನು ಕುರುಡನಂತೆ ಕೈಗಳಿಂದ ತಡಕಾಡಿ ಕುರ್ಚಿಯಲ್ಲಿ ಕುಳಿತು ಕೊಂಡ. 'ಇಲ್ಯಾಕೆ ಕುಳಿತ್ಕೊಳ್ಳೋದು ? ನೀನು ಎಲ್ಲಿದೀಯ ಅನ್ನೋದನ್ನ ಹೇಳಿದ್ರೆ ಅಲ್ಲಿಗೇ ಬರ್ತೀನಿ' ಎಂದು ಅಸಹನೆಯಿಂದ ನುಡಿದ.

ಮತ್ತೆ ಮಳೆ ಜೋರಾಯಿತೆಂದು ಕಾಣುತ್ತದೆ, ಹೊರಗೆ ಸದ್ದು ಜೋರಾಯ್ತು. ನನ್ನ ಫ್ಲ್ಯಾಟಿನಲ್ಲಿ ಕತ್ತಲೆಂದರೆ ಕಗ್ಗತ್ತಲು.

'ಅಷ್ಟು ಅವಸರವಾದರೆ ಹೇಗೆ? ಶೃಂಗಾರದಲ್ಲಿ ಅವಸರ ಕೆಲಸಕ್ಕೆ ಬರೋದಿಲ್ಲ. ಅಷ್ಟಾಗಿ ಅನುಭವ ಇಲ್ಲದವನೇ ಅವಸರ ಮಾಡುವುದು. ನೀನು ತುಂಬಾ ಅನುಭವವಿರುವವನಲ್ವೆ– ಅದರಲ್ಲೂ ನೀನು ದೂರದಿಂದ ಹೆಣ್ಣನ್ನು ನೋಡಿಯೇ ಅವಳು ಸಂಸಾರಿಯೋ, ಸೂಳೆಯೋ ಅನ್ನೋದನ್ನ ಹೇಳಬಲ್ಲ ಪ್ರತಿಭಾವಂತ. ನೀನು ನನ್ನ ಮಾತು ಕೇಳದೆ ಮುಂದೆ ಬಂದರೆ ಇಕ್ಕಟ್ಟಿಗೆ ಸಿಕ್ಕಿಕೊಳ್ತೀಯ. ಕೆಳಗೆಲ್ಲ ಗಾಜಿನ ತುಣುಕುಗಳು ಹರಡಿಕೊಂಡಿವೆ. ಅವು ಚುಚ್ಚಿಕೊಂಡರೆ ಎಲ್ಲವೂ ರಸಾಭಾಸವಾಗಿಬಿಡುತ್ತದೆ.'

'ಗಾಜಿನ ತುಣುಕುಗಳ ?'

'ಊಂ. ಸ್ವಲ್ಪ ಹೊತ್ತಿನ ಮುಂಚೆ ಮೀನಿನ ತೊಟ್ಟಿಗೆ ಆಹಾರ ಹಾಕಲು ಹೋಗಿದ್ದಾಗ ಅದು ಕೆಳಗೆ ಬಿದ್ದು ಒಡೆದುಹೋಯ್ತು. ನೆಲದ ಮೇಲೆಲ್ಲ ಗಾಜಿನ ತುಣುಕುಗಳು ಹರಡಿಕೊಂಡಿವೆ ಅವು ಚುಚ್ಚಿಕೊಂಡರೆ ಎಲ್ಲ ರಸಾಭಾಸವಾಗಿ ಬಿಡುತ್ತೆ'

'ಅಯ್ಯಯ್ಯೋ . . ಇದೊಳ್ಳೇ ಇಕ್ಕಟ್ಟಾಯ್ತಲ್ಲ.'

'ಹೌದು. ಅದಕ್ಕೇ ನಾನು ಏಳು ಎಂದಾಗ ಎದ್ದು ಬಂದು ಬಿಡು '

ಅವನು ಏನೂ ಮಾತಾಡಲಿಲ್ಲ ಅದೊಂದು ರೀತಿಯ ಗಲಿಬಿಲಿ ಗೀಡಾಗಿದ್ದರಿಂದ ಬಾಯಿಯಿಂದ ಮಾತು ಹೊರಬರುತ್ತಿಲ್ಲವೆಂದು ನನಗೆ ಅರ್ಥವಾಯ್ತು.

'ಮತ್ತೆ ಶುರು ಮಾಡೋಣ್ವಾ ?' ಎಂದೆ. ಆ ಮಾತಿಗೆ ಅವನು ತಟಕ್ಕನೆ ಎದ್ದ ಅದನ್ನು ಸದ್ದಿನಿಂದ ಗ್ರಹಿಸಿದ ನಾನು, 'ಏಳ್ಬೇಡ– ನೀನು ಮುಂದೆ ಬಂದ್ರೆ ಗಾಜಿನ ತುಂಡುಗಳು ನಿನ್ನ ಅಂಗಾಲನ್ನು ಸೀಳುತ್ತವೆ' ಎಂದೆ. ಇಷ್ಟವಿರದಿದ್ದರೂ ಅವನು ಪುನಃ ಕುಳಿತುಕೊಂಡ. ನಾನು ಯಾಕೆ ಆ ರೀತಿ ವರ್ತಿಸುತ್ತಿರುವೆನೆಂಬ ಒಗಟು ಅವನ ಮನಸ್ಸನ್ನು ಕಾಡುತ್ತಿರುತ್ತದೆಂಬುದು ನನಗೆ ಗೊತ್ತಿತ್ತು.

'ನೀನಲ್ಲ–ನಾನಿಲ್ಲ– ನೀನು ನಾನು ಹೇಳಿದ್ದನ್ನು ಕೇಳಬೇಕೇ ಹೊರತು ಮತ್ತೇನೂ ಮಾಡಕೂಡದು. ಒಳ್ಳೇ ಹುಡುಗನಂತೆ ಸುಮ್ಮನೆ ಕುಳಿತಿರಬೇಕು. ಮತ್ತೆ ಶುರುಮಾಡಲೆ?'

ಅವನು ಉಸಿರು ಬಿಗಿ ಹಿಡಿದ. ನಾನು ಮುಂದುವರಿಸಿದೆ 'ಇದೆಲ್ಲ ಯಾಕೆಂಬುದು ನಿನಗೆ ಅರ್ಥವಾಗುತ್ತಿಲ್ಲ. ಅಲ್ವೇ.... ಬರಬರುತ್ತ ಅರ್ಥವಾಗುತ್ತೆ ಒಬ್ಬರಿಗೊಬ್ಬರು ಕಂಡು ಬರದ ಈ ಕತ್ತಲೆಯಲ್ಲಿ ಇಬ್ಬರೂ

ತುಂಬಾ ದೂರದಲ್ಲಿದ್ದ. ನಡೆಸುವ ಈ ಹೊಸ ರೀತಿಯ ಪ್ರಣಯ ಹೇಗಿರುತ್ತದೆನ್ನುವುದನ್ನು ನೀನೇ ಕೊನೆಯಲ್ಲಿ ಹೇಳಬೇಕು.

ಇದರಲ್ಲಿನ ಭಾಗವಾಗಿ ಮೊದಲು ತಲೆಗೂದಲಿನ ಗಂಟು ಬಿಚ್ಚುತ್ತಿದ್ದೇನೆ. ಈಗ ಮೇಲಿರೋ ಕ್ಲಿಪ್ ತೆಗೆದೆ– ನನ್ನ ಕೂದಲು ಅಲೆ ಅಲೆಯಾಗಿ ಜಾರಿ ನನ್ನ ಭುಜದ ಮೇಲೆಲ್ಲ ಹರಡಿಕೊಂಡಿತು. ಆದರೆ ಪಾಪ ನಿನಗೇನೂ ಕಾಣಿಸುತ್ತಿಲ್ಲ. ಹಾದುತಾನೇ''

ಅವನು ಕುರ್ಚಿಯಲ್ಲಿ ಅತ್ತಿತ್ತ ಮಿಸುಕಾಡಿದ ಸದ್ದು. ನಾನು ಕೇಳುತ್ತಲೆ 'ಇದ್ದ· ಇದೋ ನನ್ನ ಎರಡು ಕೈಗಳೂ ನನ್ನ ವಿಶಾಲವಾದ ಕಣ್ಣುಗಳನ್ನೂ ಮುಟ್ಟುತ್ತ ಕೆಳಗಿಳಿಯುತ್ತಿವೆ. ನನ್ನ ಕಣ್ಣುಗಳು ಎಷ್ಟು ಚೆನ್ನಾಗಿವೆ ಅನ್ನೋದನು ಗಮನಿಸಿದೆಯಾ? ಕಣ್ಣ ಪಾಪೆಗಳಲ್ಲಿ ಶೃಂಗಾರ ಹುದುಗಿಕೊಂಡಿರುವಂತೆ ನಕ್ಷತ್ರಯಾಗಿ ಇವೆ.

ಇನ್ನು ನನ್ನ ಮೂಗು– ನೀನು ಸರಿಯಾಗಿ ನೋಡಿದ್ದೀಯೋ ಇಲ್ವೋ– ಅದು ಮನ್ಮಥನ ಬಿಲ್ಲಿನಂತಿದೆ. ಇನ್ನು ನನ್ನ ತುಟಿಗಳನ್ನು ನೋಡಿ ತೊಂಡೆ ಹಣ್ಣುಗಳೂ ನಾಚುತ್ತವೇನೋ ಎನ್ನುವಂತಿವೆ. ಹಾಗೆಯೇ ಕೆಳಗಿಳಿದರೆ ನನ್ನ ಕತ್ತು– ನೀಳವಾಗಿ ನೀಲಿ ನರಗಳನ್ನು ನಗ್ನವಾಗಿ ಪ್ರದರ್ಶಿಸುತ್ತ ಮನೋಹರವಾಗಿ ಕಾಣಿಸುತ್ತಿರುತ್ತದೆ ಆದರೆ ನಿನಗೆ ಏನೂ ಕಾಣಿಸುತ್ತಿಲ್ಲ. ಪಾಪ!'

ತನ್ನನ್ನು ಕಾಡಿಸಲೆಂದೇ ಅಲ್ಲಿಗೆ ಕರೆದುಕೊಂಡುಬಂದಿನೆಂಬುದು ಅವನಿಗೆ ಅರ್ಥವಾಯ್ತು. ಸಿಟ್ಟಿನಿಂದ ಕುದಿಯುತ್ತಿದ್ದನೇನೋ ! ಎದ್ದು ಎತ್ತಲಾದರೂ ಹೆಜ್ಜೆ ಇಟ್ಟರ, ಗಾಜಿನ ತುಣುಕುಗಳು ಚುಚ್ಚಿಕೊಳ್ಳುತ್ತವೇನೋ ಎನ್ನುವ ಭಯ ಅವನನ್ನು ಬಲವಂತನಾಗಿ ಕುರ್ಚಿಯಲ್ಲಿ ಕೂತಿರುವಂತೆ ಮಾಡುತ್ತಿತ್ತು.

ನನ್ನ ಮಾತನ್ನು ನಿಲ್ಲಿಸಲಿಲ್ಲ. 'ಈಗ ನನ್ನ ಎದೆಯ ಮೇಲಿನ ಸೆರಗನ್ನು ತೆಗೆಯುತ್ತಿದ್ದೇನೆ. ಬೆಳಕೇನಾದರೂ ಇದ್ದಿದ್ದರೆ ಸೆರಗು ತೆಗೆಯುತ್ತಲೇ ಆ ಸೌಂದರ್ಯ ದರ್ಶನಕ್ಕೆ ನಿನ್ನ ಕಣ್ಣು ಕುಕ್ಕಿದಂತಾಗಿರುತ್ತಿತ್ತು. ಆದರೆ ನಿನಗೆ ಆ ಅವಕಾಶ ಇಲ್ಲ. ಕಣ್ಣಿದ್ದರೂ ಕುರುಡ ! ಪ್ಚ್ . ಸೆರಗು ತೆಗೆದುಬಿಟ್ಟೆ.

ನನ್ನ ಉಬ್ಬಿದೆದೆ, ತುಂಬು ಸ್ತನಗಳು– ಯಾಕೆ, ಮೊಲೆಗಳು ಅಂತಲೇ ಅನ್ನೀನಿ– ನೋಡುವವನ ಎದೆಯಲ್ಲಿ ಬಿರುಗಾಳಿಯನ್ನೆಬ್ಬಿಸುತ್ತವೆ. ಈ ಲೋನೆಕ್ ಜಾಕೆಟ್ಟಿನೊಳಗಿಂದ ಹೊರ ಧುಮುಕಲು ಅವು ಮಾಡುತ್ತಿರುವ ಪ್ರಯತ್ನ, ಕುಪ್ಪಸದ ತುದಿಯಲ್ಲಿ ಕಂಡುಬರುತ್ತಿದೆ. ಅವುಗಳ ನುಣುಪು

ಎಷ್ಟಿದೆಯೆಂದರೆ, ನಿನ್ನ ನೋಟ ಕೂಡ ಅವುಗಳ ಮೇಲಿಂದ ಜಾರುತ್ತದೆನಿಸು ತ್ತದೆ. ಆದರೆ ನಿನಗೆ ಮಾತ್ರ ಏನೂ ಕಾಣಿಸುತ್ತಿಲ್ಲ. ಅಲ್ವೆ ?

ಸಾಮಾನ್ಯವಾಗಿ ಕುಪ್ಪಸಕ್ಕೆ ನಾಲ್ಕು ಹುಕ್‌ಗಳು ಸಾಕು. ಆದರೆ ನನ್ನ ಕುಪ್ಪಸಕ್ಕೆ ಐದು ಹುಕ್‌ಗಳಿವೆ. ಕಾರಣ ಏನು ಗೊತ್ತೇ-ಮುದ್ದಾದ ಯನ್ನು ಒಂದಿಸಲು ಹೆಚ್ಚಿನ ಸರಪಳಿಗಳನ್ನು ಉಪಯೋಗಿಸುತ್ತಾರಲ್ಲ— ಹಾಗೆ, ನನ್ನ ಸ್ತನಗಳನ್ನು ನಿಯಂತ್ರಣದಲ್ಲಿಡಲು ಒಂದು ಹುಕ್ ಹೆಚ್ಚಿಗಿಡಿಸಿ ಕೊಂಡಿದ್ದೇನೆ. ಅಲ್ಲಿಗೂ ಒಮ್ಮೊಮ್ಮೆ ಹುಕ್‌ಗಳು ಕಿತ್ತುಹೋಗುತ್ತವೇನೋ ಎನ್ನುವಂತೆ ಯೌವನ ಉಕ್ಕುತ್ತಿರುತ್ತದೆ. ಆದರೆ ನಿನ್ನಂತಹ ನೀಚರನ್ನು ನೋಡಿದಾಗ ಆ ರೀತಿ ಆಗುವುದಿಲ್ಲವಾದ್ದರಿಂದ ಈಗ ಆ ಸಮಸ್ಯೆ ಇಲ್ಲ' ಎನ್ನುತ್ತ ಒಂದು ಕ್ಷಣ ಮಾತು ನಿಲ್ಲಿಸಿದೆ

ಅವನು ಕೋಪ, ಸಂಕಟಗಳನ್ನು ವ್ಯಕ್ತಪಡಿಸುತ್ತ ನಿಡುಸುಯ್ಯುತ್ತಿರು ವುದು ಗೊತ್ತಾಗುತ್ತಿತ್ತು.

'ಈಗ ಮೊದಲ ಹುಕ್ ಬಿಚ್ಚುತ್ತಿದ್ದೇನೆ ತಾನು ತಬ್ಬಿಕೊಂಡಿರುವ ಸೌಂದರ್ಯವನ್ನು ಬಿಟ್ಟು ಬರಲಿಷ್ಟವಿಲ್ಲವೆನ್ನುವಂತೆ ಹುಕ್ ಬರುತ್ತಿಲ್ಲ. ಆದರೂ ಒದ್ದಾಡ್ತಿದೀನಿ ಅಬ್ಬಾ-ಬಂತು' ಎಂದೆ. ಹುಕ್ ಕಳಚಿಕೊಂಡ ಸದ್ದು ಅವನ ಕಿವಿಗಳಲ್ಲಿ ಸ್ಫೋಟದಂತೆ ಕೇಳಿ ಬಂದಿರಬೇಕು.

'ಇನ್ನು ಎರಡನೇ ಹುಕ್-ಮೂರನೇ ಹುಕ್-ನಾಲ್ಕನೇ ಹುಕ್. ಈಗ ಕುಪ್ಪಸ ಚಿಟ್ಟೆಯ ರೆಕ್ಕೆಗಳಂತೆ ಬಿಚ್ಚಿಕೊಂಡಿದೆ. ಕೊನೇ ಹುಕ್ ಬಿಚ್ತಿದೀನಿ ಅಂ ಬಂತು. ಈಗ ನನ್ನ ಎದೆಗೆ ಬ್ರಾ ಬಿಟ್ಟರೆ ಬೇರೆ ಯಾವ ಆಚ್ಛಾದನೆಯೂ ಇಲ್ಲ.

'ಈ ಕಪ್ಪು ಬ್ರಾ- ಮೊನ್ನೆನೇ ಇದನ್ನ ಮಾರ್ಕೆಟ್‌ನಲ್ಲಿ ತಗೊಂಡೆ- ಎಪ್ಪತ್ತೈದು ರೂಪಾಯಿ ಚೆನ್ನಾಗಿದೆಯಾ ?. ಸಾರಿ, ನಿನಗೇನೂ ಕಾಣಿಸ್ತಿಲ್ಲ ಅಲ್ವೇ- ಚೆನ್ನಾಗಿದ್ಯೋ ಇಲ್ವೋ ಅಂತ ಹೇಗೆ ಹೇಳಬಲ್ಲೆ. ? ಇದರ ಅದೃಷ್ಟ ನೋಡಿದ್ಯಾ- ನನ್ನ ಸ್ತನಗಳನ್ನು ಹೇಗೆ ತವಕದಿಂದ ತಬ್ಬಿಕೊಂಡಿದ್ಯೋ ! ಇದಕ್ಕೆ ಹಿಂದಿರೋ ಹುಕ್- ಎಲಾಸ್ಟಿಕ್ ಎಳೆದು ಹುಕ್ ಬಿಚ್ತಿದೀನಿ'.

'ಫಟ್' ಅನ್ನೋ ಸದ್ದು.

'ಇದೋ- ಕುಪ್ಪಸ ಬಿಚ್ಚಿ ಮಡಿಲಲ್ಲಿಟ್ಟುಕೊಂಡಿದೀನಿ. ಜೊತೆಗೆ ಬ್ರಾ ಕೂಡ ಅಲ್ಲೇ ಇಟ್ಟುಕೊಂಡಿದೀನಿ. ಈಗ ನನ್ನ ಸೊಂಟದಿಂದ ಮೇಲಿನ ಭಾಗವೆಲ್ಲ ಬೆತ್ತಲಾಗಿದೆ. ನನ್ನ ಮೊಲೆಗಳು ಬಂಗಾರದ ಕಲಶಗಳಂತೆ- ಬೇಡ

ಬಿಡು, ಅವುಗಳ ಸೌಂದರ್ಯ, ಬಿಂಕವನ್ನೆಲ್ಲ ವರ್ಣಿಸಿದರೆ ನೀನು ಎದೆ ಒಡ್ಕೊಂಡು ಸಾಯ್ತೀಯ'.

'ಇದೆಲ್ಲ ಏನು? ನಾನು ಹೋಗ್ತಿದೀನಿ' ಎಂದ ಅವನು ತಟಕ್ಕನೆ ಮೇಲೇಳುತ್ತ. ಅದನ್ನು ಸದ್ದಿನಿಂದ ಗ್ರಹಿಸಿದ ನಾನು, 'ಸಾರಿ ಮಿಸ್ಟರ್ ಬಾಬು! ಕೂತ್ಕೋ. ನೀನೀಗ ಎದ್ದ ಅಂದ್ರೆ ನಾನು ಕಿರುಚಬಿಡ್ತೀನಿ. ಈ ಅಪಾರ್ಟ್‌ಮೆಂಟಿನಲ್ಲಿ ಒಟ್ಟು ಹನ್ನೆರಡು ಫ್ಲ್ಯಾಟ್‌ಗಳಿವೆ ಫ್ಲ್ಯಾಟಿಗೆ ಐದು ಜನರಂತೆ ಲೆಕ್ಕ ಹಾಕಿಕೊಂಡರೂ ಒಟ್ಟು ಅರವತ್ತು ಮಂದಿ ಬಂದು ಬಿಡುತ್ತಾರೆ. ನೀನು ನನ್ನನ್ನ ಮಾನಭಂಗ ಮಾಡಲೆಂದು ನುಗ್ಗಿದೀಯ ಅಂತ ಹೇಳ್ದೆ ಅಂತಿಟ್ಕೋ– ಅವರು ನಿನ್ನನ್ನ ಸುಮ್ಮನೇ ಬಿಡೋದಿಲ್ಲ. ಪೈಸುಗ್ಗ ಮಾಡಿಯೇ ಪೋಲೀಸರಿಗೆ ಒಪ್ಪಿಸ್ತಾರೆ. ಆದ್ದರಿಂದ ಸುಮ್ಮನೇ ಕುಳಿತು ಕೊಳ್ಳೋದೇ ವಾಸಿ'.

ಪೋಲೀಸರು ಅನ್ನೋ ಮಾತು ಕೇಳುತ್ತಿದ್ದಂತೆಯೇ ಅವನು ಸುಮ್ಮನೆ ಕುಸಿದು ಕುಳಿತುಕೊಂಡ.

'ನೀನು ಕುಳಿತೆಯಾದ್ದರಿಂದ ಮುಂದುವರಿಸ್ತಿದೀನಿ. ಇನ್ನು ಎದೆಯಿಂದ ಕೆಳಗಿಳಿದರೆ ನನ್ನ ಸೊಂಟ, ಅದು ಎಷ್ಟು ಚೆನ್ನಾಗಿದೆ ಅಂದ್ರೆ, ಸಿನಿಮಾ ಸ್ಟಾರ್ ಭಾನುಪ್ರಿಯಳನ್ನು ನೋಡಿರಬೇಕಲ್ಲ. ಅವಳ ಸೊಂಟ ಇದ್ದಹಾಗಿದೆ. ಕವಿಗಳು ವರ್ಣಿಸೋ ಹಾಗೆ, ಹಿಡಿದರೆ ಹಿಡಿಯಲ್ಲಿ ಸಿಕ್ಕುವಂತಿದೆ. ಹೊಕ್ಕಳು– ಮಾನಸ ಸರೋವರವೆನ್ನುವುದು ಒಂದಿದ್ದರೆ ಅದರಲ್ಲಿ ಅರಳಿದ ಒಂಟಿ ತಾವರೆ ಯಂತೆ ತೆಳುವಾದ ಹೊಟ್ಟೆಯ ನಡುವೆ ಕಂಗೊಳಿಸುತ್ತಿರುತ್ತದೆ. ಆ ಸೌಂದರ್ಯವನ್ನು ಕಾಣುವ ಭಾಗ್ಯ ನಿನಗಿಲ್ಲ. ಏಕೆಂದರೆ, ಕರಂಟ್ ಇಲ್ವಲ್ಲ!'

ಅವನು ಉಸಿರು ಬಿಗಿ ಹಿಡಿದದ್ದು ಗೊತ್ತಾಗುತ್ತಲೇ ಇತ್ತು. ಮತ್ತಷ್ಟು ಕೆಣಕಬೇಕೆಂದು– 'ಕೈ' ಚಾಚಿದರೆ ಎಟುಕುವಷ್ಟು ದೂರದಲ್ಲಿರುವ ಸುಂದರ ಹೆಣ್ಣೊಂದು ಅರೆಬೆತ್ತಲಾಗಿದ್ದರೂ ಏನೂ ಮಾಡಲಾಗದ ಅಸಹಾಯಕ ಸ್ಥಿತಿ ಯಲ್ಲಿದೀಯ.

ಅವನಿಂದ ಏನೂ ಉತ್ತರ ಬರಲಿಲ್ಲ.

'ಇನ್ನು ನಂತರದ ಸರದಿ ಸೀರೆಯದು– ಯೌವ್ವನ ಸಾಮ್ರಾಜ್ಯದ ಸುತ್ತಲೂ ಆವರಿಸಿಕೊಂಡಿರುವ ಗೋಡೆಯಂತೆ ಇರುವ ಸೀರೆ. ಒಟ್ಟು ಹದಿ ನಾರು ನೆರಿಗೆಗಳೊಂದಿಗೆ ಕೆಳಗಿಳಿದು ಸೌಂದರ್ಯದೊತ್ತಡಕ್ಕೆ ಅರಳಿಕೊಂಡ ಹೂವಿನಂತಿದೆ. ಸಾಮಾನ್ಯವಾಗಿ ಎಲ್ಲರೂ ಹನ್ನೆರಡು ನೆರಿಗೆ ಮಾಡಿ ಕೊಳ್ಳುತ್ತಾರೆ. ಆದರೆ ನಾನು ಚಿಕ್ಕ ಚಿಕ್ಕ ನೆರಿಗೆಗಳನ್ನು ಮಾಡಿಕೊಳ್ಳುತ್ತೇನೆ.

## ೧೩

ಅಮವಾಸ್ಯೆ!

ಸುತ್ತಲೂ ಕತ್ತಲು ಹೆಪ್ಪುಗಟ್ಟಿರುವಂತಿತ್ತು. ವಾತಾವರಣ ಒಂದಿಷ್ಟು ಚಳಿಯಿಂದ ಕೂಡಿತ್ತು. ಅಂತಹ ಹೊತ್ತಿನಲ್ಲಿ ಹುಲಿರಾಜ, ವೆಂಕಟರಾಮಯ್ಯ ಸ್ಮಶಾನದತ್ತಲಿಂದ ಬರುತ್ತಿದ್ದರು.

"ಇನ್ನು ತಡಮಾಡಬಾರದು. ಆದಷ್ಟುಬೇಗ ಗೋಪಾಲಕೃಷ್ಣನಿಗೊಂದು ಗತಿ ಕಾಣಿಸಬೇಕು" ಎಂದು ನುಡಿದ ಹುಲಿರಾಜ.

"ಆಗಲಿ ಅದಕ್ಕೇನಂತೆ... ಆದರೆ ಅದಕ್ಕೊಂದು ಸಮಯ ಸಂದರ್ಭ ಕೂಡಿ ಬರಬೇಕು. ನಾವು ಎಷ್ಟು ಹುಶಾರಾಗಿ ಪ್ಲಾನ್ ಹಾಕಬೇಕೆಂದರೆ ಗೋಪಾಲಕೃಷ್ಣನಿಗೆ ಈ ಊರಿನಲ್ಲಿ ನಿಲ್ಲಲು ನೆರಳು ಕೂಡ ಸಿಕ್ಕಬಾರದು. ನಾವು ಹಾಕಿರೋ ಉಪಾಯದಲ್ಲಿ ಎಂತಹುದೇ ಲೋಪ ಕಾಣಿಸುತ್ತಿಲ್ಲ. ಅದನ್ನು ಆಚರಣೆಗೆ ತರಲು ಇನ್ನೊಬ್ಬ ವ್ಯಕ್ತಿಯ ಸಹಾಯಬೇಕು" ಎಂದ ವೆಂಕಟರಾಮಯ್ಯ.

"ಅಂತಹ ವ್ಯಕ್ತಿ ಯಾರಾದರೂ ನಿನ್ನ ದೃಷ್ಟಿಯಲ್ಲಿರುವರೆ?"

"ಊಂ ಮೋಹನಳೇ ಇದಕ್ಕೆ ಸರಿಯಾದ ವ್ಯಕ್ತಿ ವಾಸ್ತವಕ್ಕೆ ಅವಳಿಗೆ ಗೋಪಾಲಕೃಷ್ಣನ ಮೇಲೆ ಎಂತಹುದೇ ದ್ವೇಷವಿಲ್ಲ. ಆದರೆ ನಮ್ಮನ್ನು ಕಂಡರೆ ಅಭಿಮಾನದ ಜೊತೆಗೆ ಭಯ ಭಕ್ತಿಯೂ ಇದೆ. ಜೊತೆಗೆ ನಾವು ಕೊಡಲಿರುವ ದುಡ್ಡಿನ ಆಸೆ ಅವಳನ್ನು ಈ ಕೆಲಸಕ್ಕೆ ಒಪ್ಪಿಸುತ್ತದೆ." ಅವಳಿಗೆ ಹೇಳಿ ಕಳಿಸಿದ್ದಾಗಿದೆ. ಈಗಾಗ್ಲೇ ಬಂದು ಕಾಯುತ್ತಿರಬಹುದು.

ಗೋಪಾಲಕೃಷ್ಣನ ಸರ್ವನಾಶಕ್ಕೆಂದು ಸ್ಮಶಾನದಲ್ಲಿ ಕ್ಷುದ್ರ ದೇವತೆಗಳನ್ನು ಪೂಜಿಸಲು ಹೋಗಿದ್ದು ಅವರು ಸರಸರನೆ ನಡೆಯುತ್ತ ಮನೆ ತಲುಪಿದರು. ಅವರು ಹೋಗುವಷ್ಟರಲ್ಲಿ ಮೋಹನ ಅವರಿಗೋಸ್ಕರ ಕಾಯುತ್ತಿದ್ದಳು. ವೆಂಕಟರಾಮಯ್ಯನನ್ನು ನೋಡುತ್ತಲೇ "ಯಾಕೋ ಬಾ ಅಂದ್ರಂತಲ್ಲ ಅಯ್ಯಾ" ಎಂದಳು

ವೆಂಕಟರಾಮಯ್ಯ ಹುಲಿರಾಜನನ್ನೂ, ಮೋಹನಳನ್ನೂ ಕರೆದುಕೊಂಡು ತಾರಸಿಯ ಮೇಲೆ ಹೋದ. ಹೋಗುವಾಗ ನೌಕರ ನಾರಾಯಣನಿಗೆ ಮೇಲೆ ಯಾರನ್ನೂ ಬಿಡಕೂಡದೆಂದು ತಾಕೀತು ಮಾಡಿ ಹೋದ. ಅಲ್ಲಿ ಅವನ ಪಾನ ಸೇವನೆಯ ಸರಂಜಾಮುಗಳನ್ನೆಲ್ಲ ಸಿದ್ಧಮಾಡಿಡಲಾಗಿತ್ತು. ವೆಂಕಟರಾಮಯ್ಯ ಹುಲಿರಾಜನೊಂದಿಗೆ ಕುಡಿಯುತ್ತ ತಾವು ಗೋಪಾಲಕೃಷ್ಣನ

ವಿರುದ್ಧ ಹೂಡಿರುವ ಸಂಚನ್ನು ವಿವರಿಸಿ ಹೇಳಿ, ಅದರಲ್ಲಿ ಅವಳ ಪಾತ್ರ ವೇನೆಂಬುದನ್ನು ತಿಳಿಸಿದ. ಅವಳು ಮೊದಲು ಅದಕ್ಕೆ ಒಪ್ಪದಿದ್ದರೂ ಒಂದೆಕರೆ ಹೊಲ ಕೊಡುವುದಾಗಿ ಆಸೆ ತೋರಿಸಿದ್ದರಿಂದ ಒಪ್ಪಿಕೊಂಡಳು. ಕ್ರಮೇಣ ಮತ್ತೇರುತ್ತಿದ್ದಂತೆ ಅವನು ತಾನು ಗೋಪಾಲಕೃಷ್ಣನ ತಂದೆತಾಯಿಗಳನ್ನು ಹೇಗೆ ಕೊಲ್ಲಿಸಿದನೆಂಬುದನ್ನೂ ಹೇಳಿಕೊಳ್ಳತೊಡಗಿದ. ಆ ಸಮಯದಲ್ಲಿ ಮಹಡಿ ಮೆಟ್ಟಿಲುಗಳ ಬಳಿ ಯಾರೋ ಬಂದು ಹೋದಂತೆ ಹೆಜ್ಜೆಗಳ ಸದ್ದು ಕೇಳಿ ಬಂದಂತಾಯ್ತು. ಅಂತಹ ಮತ್ತಿನಲ್ಲೂ ಅವನು ಮೈಮರೆತಿರಲಿಲ್ಲ. ಯಾರಾದರೂ ಹೊಂಚಿ ತಮ್ಮ ಮಾತು ಕೇಳಿಸಿಕೊಳ್ಳುತ್ತಿರುವರೇನೋ ಎನ್ನುವ ಅನುಮಾನದಿಂದ ಎದ್ದು ಹೋಗಿ ನೋಡಿ ಬರುವಂತೆ ಹುಲಿರಾಜನಿಗೆ ಸೂಚಿಸಿದ. ಹುಲಿರಾಜ ಸ್ಪ್ರಿಂಗಿನಂತೆ ಅಲ್ಲಿಂದೆದ್ದು ಹೋಗಿ ಮೆಟ್ಟಿಲುಗಳ ಬಳಿ, ಅತ್ತ ಇತ್ತ ಪರಿಶೀಲಿಸಿ ನೋಡಿ, ತಿರುಗಿ ಬಂದು "ಯಾರೂ ಇಲ್ಲ" ಎಂದ.

ವಾಸ್ತವಕ್ಕೆ ಅವನು ಎಡವಿದ್ದು ಅಲ್ಲೇ.

## ೧೪

ಆ ದಿನ ಹುಣ್ಣಿಮೆ ತುಂಬು ಚಂದ್ರ ಆಕಾಶದಲ್ಲಿ ನಿರ್ಮಲವಾಗಿ ಕಂಗೊಳಿಸುತ್ತಿದ್ದ ಆ ರಾತ್ರಿ ಗೋಪಾಲಕೃಷ್ಣನೊಂದಿಗೆ ಕಳೆಯಲು ಸುಜೀವನಳಿಗೆ ಅವಕಾಶ ಲಭಿಸಿತ್ತು. ಬೆಳಿಗ್ಗೆ ನರ ಆ ವಿಷಯ ಹೇಳುತ್ತಲೇ ಅವಳು ಹಿಗ್ಗಿಹೀರೇಕಾಯಾಗಿದ್ದಳು. ಅವಳು ಬಹುಕಾಲದಿಂದ ಆ ಅವಕಾಶಕ್ಕೋಸ್ಕರ ಕಾಯುತ್ತಿದ್ದಳು.

ಅವಳಿಗೆ ಮೂವತ್ತಕ್ಕೆ ಮೇಲ್ಪಟ್ಟು ಎಷ್ಟು ವರ್ಷಗಳಾದರೂ ಇರಬಹುದು. ಪ್ರೌಢ ಸೌಂದರ್ಯ ಅವಳ ಅವಯವಗಳಲ್ಲಿ ತುಂಬಿಕೊಂಡಿತ್ತು. ಇಡೀ ಶರೀರ ಅನುಭವದ ಮೂಸೆಯಲ್ಲಿ ಮಿಂದು ಬಂದಿರುವಂತೆ ಹೊಳಪಿನಿಂದ ಕೂಡಿತ್ತು. ಇರಬೇಕಾದುದಕ್ಕಿಂತಲೂ ಸ್ವಲ್ಪ ದಪ್ಪವಾಗಿಯೇ ಇದ್ದಳು. ಅವಳಲ್ಲಿದ್ದ ಮಹತ್ತರ ಆಕರ್ಷಣೆಯೆಂದರೆ ಸೊಂಟದ ಭಾಗ ಅಲ್ಲಿ ಬಿದ್ದಿದ್ದ ಮಡಿಕೆಗಳ ಶೃಂಗಾರವೆಲ್ಲ ಅವುಗಳಲ್ಲಿ ತುಂಬಿಕೊಂಡಿದೆಯೇನೋ ಎನಿಸುತ್ತಿತ್ತು. ಕುಪ್ಪಸದ ಕೆಳಗಿನ ಭಾಗದ ಸೀರೆಯ ಮೇಲ್ಭಾಗದ ನಡುವೆ ಇರುವ ಆ ಮಡಿಕೆಗಳು ಶೃಂಗಾರ ಕಾವ್ಯವೊಂದರ ಪುಟಗಳಂತಿದ್ದವು. ಆ ವಿಷಯ ಅವಳಿಗೂ ಗೊತ್ತಿತ್ತಾದ್ದರಿಂದ ಅವಳೆಂದೂ ಆ ಭಾಗವನ್ನು ಸೀರೆಯ ಸೆರಗಿನಿಂದ ಮರೆ ಮಾಡುತ್ತಿರಲಿಲ್ಲ.

ಅವತ್ತು ಅವಳು ಬಿಳಿ ಕಾಟನ್ ಸೀರೆ ಉಟ್ಟುಕೊಂಡು ಬಂದದ್ದರಿಂದ ಸೊಂಟದ ಭಾಗ ಸೊಂಟದ ಮಡಿಕೆ ಮತ್ತಷ್ಟು ಸ್ಪಷ್ಟವಾಗಿ ಕಂಡುಬರುತ್ತಿದ್ದವು. ಎಣ್ಣೆಗೆಂಪು ಬಣ್ಣದ ಅವಳು ತುಂಬಾ ಸೆಕ್ಸಿಯಾಗಿ ಕಂಡು ಬರುತ್ತಿದ್ದಳು. ಇಡಿಯಾಗಿ ಅವಳು ನೋಡಿದ ಪುರುಷರ ಮನಸ್ಸಿನಲ್ಲಿ ಉದ್ರೇಕ ಹುಟ್ಟುವಂತೆ ಇದ್ದಳು.

ಅವಳು ಬೆಟ್ಟದ ಬಳಿ ಬರುವಷ್ಟರಲ್ಲಿ ಒಂಭತ್ತು ಗಂಟೆಯಾಯ್ತು. ಗೋಪಾಲಕೃಷ್ಣನಿಗೋಸ್ಕರ ಅತ್ತಿತ್ತ ನೋಡುತ್ತ ನಿಂತಳು. ಎಲ್ಲಿಯೂ ಕಂಡು ಬರಲಿಲ್ಲ. ಮೆಲ್ಲಗೆ ಬೆಟ್ಟ ಹತ್ತತೊಡಗಿದಳು. ಸುತ್ತಮುತ್ತ ಯಾರೂ ಇದ್ದ ಸುಳಿವೇ ಇರಲಿಲ್ಲ. ಅವಳು ಅತ್ತಿತ್ತ ನೋಡುತ್ತ ನಡೆಯುತ್ತಿದ್ದಳು.

ಕಾಲಿಗೆ ಏನೋ ತಾಕಿ ಸದ್ದಾದುದರಿಂದ ತಟಕ್ಕನೆ ನಿಂತು ಕೆಳಗೆ ನೋಡಿದಳು. ಕವಡೆಗಳನ್ನು ಜೋಡಿಸಿ ಅವಳ ಹೆಸರನ್ನು ರಚಿಸಲಾಗಿತ್ತು. ಅದನ್ನು ಓದಿದ ಸುಜೀವನ ಇದು ಗೋಪಾಲಕೃಷ್ಣ ತನ್ನನ್ನು ಆಹ್ವಾನಿಸಲೆಂದು ಮಾಡಿರುವ ಕೆಲಸ ಎಂದುಕೊಂಡು ಅತ್ತಿತ್ತ ನೋಡಿ ಮತ್ತೆ ಕವಡೆಗಳತ್ತ ನೋಡಿದಳು. ನಡುವೆ ಕಪ್ಪುಗೆರೆಗಳೊಂದಿಗೆ ಬಿಳಿ ಕವಡೆಗಳು ಹೊಳೆಯುತ್ತಿದ್ದವು. ಆ ರೀತಿ ಕವಡೆಗಳಿಂದ ತನ್ನ ಹೆಸರು ಹೊಂದಿಸಿದ್ದನ್ನು ನೋಡಿದ ಅವಳಲ್ಲಿ ಅನಿರ್ವಚನೀಯವಾದ ಆನಂದ ಹರಡಿಕೊಂಡಿತು. ತನ್ನ ಮೇಲೆ ಅಭಿಮಾನ ತೋರಿಸುತ್ತಿದ್ದಾನೆನ್ನುವ ಸಂತೋಷ ಶರೀರವನ್ನು ಪುಳಕಕ್ಕೀಡು ಮಾಡುತ್ತಿತ್ತು.

ಕಾಲು ತಾಕಿದ್ದರಿಂದ 'ನ' ಎನ್ನುವ ಅಕ್ಷರದಲ್ಲಿ ಚೆಲ್ಲಾಪಿಲ್ಲಿಯಾಗಿ ಹೋಗಿದ್ದ ಕವಡೆಗಳನ್ನು ತಿರುಗಿ ಜೋಡಿಸತೊಡಗಿದಳು. ಅವಳು ಆ ರೀತಿ ಜೋಡಿಸಲು ಬಾಗಿದ್ದರಿಂದ ಸೊಂಟದ ಬಳಿ ಮಡಿಕೆಗಳು ಮತ್ತಷ್ಟು ಸ್ಪಷ್ಟವಾಗಿ ಆಕರ್ಷಣೀಯವಾಗಿ ಕಂಡು ಬರತೊಡಗಿದವು.

"ನಿನಗೆ ನಿನ್ನ ಹೆಸರೆಂದರೆ ಅಷ್ಟು ಇಷ್ಟವೇ? ಕವಡೆ ಚೆಲ್ಲಾಪಿಲ್ಲಿಯಾಗಿದ್ರೆ ಮತ್ತೆ ಜೋಡಿಸ್ತೀದಿಯಲ್ಲ." ಎಂದು ಹಿಂದಿನಿಂದ ಮಾತುಗಳು ಕೇಳಿ ಬಂದದ್ದರಿಂದ ಒಂದು ಕ್ಷಣ ಬೆಚ್ಚಿಬಿದ್ದರೂ ಸುಧಾರಿಸಿಕೊಂಡು ತಿರುಗಿ ನೋಡಿದಳು. ಬಿಳಿ ಪಂಚೆಯ ಮೇಲೆ ಜುಬ್ಬಾ ಧರಿಸಿ ನಗುತ್ತ ನಿಂತಿದ್ದ ಗೋಪಾಲಕೃಷ್ಣನನ್ನು ನೋಡುತ್ತಿದ್ದಂತೆಯೇ ಅವಳ ಬೆನ್ನ ಹುರಿಯ ಕೆಳಭಾಗದಲ್ಲಿ 'ಛಳ್' ಎಂದಿತ್ತು.

ಯಾರೂ ಇಲ್ಲದಿರುವ ಆ ವಾತಾವರಣ, ಎದುರಿಗೆ ಶೃಂಗಾರ ಪುರುಷನಂತೆ ಗೋಪಾಲಕೃಷ್ಣ, ಸುತ್ತಲೂ ಹರಡಿದ್ದ ಬೆಳ್ಳಿ ಬೆಳದಿಂಗಳು,

ಭೂಮಿಗಿಂತಲೂ ಎತ್ತರವಾಗಿ ಆಕಾಶದಲ್ಲಿ ಇರುವಂತೆ ಭಾವನೆಯುಂಟು ಮಾಡುವ ಬೆಟ್ಟ ಇವೆಲ್ಲ ಅವಳ ಮನಸ್ಸಿನಲ್ಲಿ ಬಯಕೆಯ ಬಿರುಗಾಳಿಯನ್ನೆಬ್ಬಿಸಿದವು. ಗೋಪಾಲಕೃಷ್ಣನನ್ನೇ ನೋಡುತ್ತ ಟಪಟಪ ರೆಪ್ಪೆ ಬಡಿದಳು.

"ಹೆಂಗಸರು ತಮ್ಮನ್ನು ತಾವು ಪ್ರೇಮಿಸಿಕೊಂಡಂತೆ ಇತರರನ್ನು ಪ್ರೇಮಿಸುವುದಿಲ್ಲವಂತೆ. ಇದನ್ನೇ ಮನಃಶಾಸ್ತ್ರದಲ್ಲಿ 'ನಾರ್ಸಿಜಂ'ಎನ್ನುತ್ತಾರೆ. ಸ್ತ್ರೀಯರು ಸ್ವಯಂಪ್ರೇಮಿಗಳು" ಎಂದು ನಗುತ್ತ ನುಡಿದ ಗೋಪಾಲಕೃಷ್ಣ.

"ತಮಾಷೆ ಏನೆಂದರೆ, ಗಂಡಸನ್ನು ಪ್ರೇಮಿಸುವದರಲ್ಲಿನ ಅಂಗವಾಗಿಯೇ ಸ್ತ್ರೀ ತನ್ನನ್ನು ತಾನು ಪ್ರೇಮಿಸಿಕೊಳ್ಳುತ್ತಾಳೆ. ಹೆಣ್ಣು ಅಲಂಕಾರದ ಬಗ್ಗೆ ಹೆಚ್ಚಿನ ಶ್ರದ್ಧೆ ವಹಿಸಲು ಕಾರಣ ಅವಳಿಗೆ ಅವಳ ಮೇಲಿರುವ ಪ್ರೇಮಕ್ಕಲ್ಲ ಪುರುಷನನ್ನು ಆಕರ್ಷಿಸಬೇಕೆಂಬುದಾಗಿಯೇ ಆದ್ದರಿಂದ ಸ್ತ್ರೀಯರು ಸ್ವಯಂ ಪ್ರೇಮಿಗಳಲ್ಲ" ಎನ್ನುತ್ತ ಅವನತ್ತ ಹೆಜ್ಜೆ ಹಾಕಿದಳು ಸಂಜೀವನ

ಅವಳೊಂದಿಗೆ ಮಲ್ಲಿಗೆ ಹೂಗಳ ಪರಿಮಳವೂ ನಡೆದು ಬರುತ್ತಿದೆಯೇನೋ ಎಂದು ಅವನಿಗನ್ನಿಸಿತು. ಅವಳನ್ನು ಪರಿಶೀಲಿಸಿ ನೋಡಿದ. ಪೂರ್ಣವಾಗಿ ಅರಳಿದ ಬಿಳಿ ತಾವರೆಯಂತೆ ನೆರಿಗೆಗಳು ಸ್ಪಷ್ಟವಾಗಿ ಕಂಡುಬರುತ್ತಿದ್ದ ಬಿಳಿ ಸೀರೆ, ಅದಕ್ಕೊಪ್ಪುವ ಬಿಳಿ ಜಾಕೆಟ್, ಕತ್ತಿನಲ್ಲಿ ಎರಡೆಳೆ ಮುತ್ತಿನ ಸರ, ತಲೆಯಲ್ಲಿ ಮಲ್ಲಿಗೆ ದಂಡೆ. ಕಾಲುಗಳಿಗೆ ಬೆಳ್ಳಿ ಗೆಜ್ಜೆಗಳು .

"ಎಲ್ಲವೂ ಬೆಳ್ಳಗಿನವೇ ಚಂದ್ರನೊಂದಿಗೆ ಸ್ಪರ್ಧೆಯೇ "ಎಂದು ನಗುತ್ತ ಕೇಳಿದ ಗೋಪಾಲಕೃಷ್ಣ.

ಅವಳು ನಸುನಾಚಿ, 'ಊಂ' ಎಂದಳು. ಅವನು ಅವಳ ಭುಜಗಳ ಮೇಲೆ ಕೈ ಹಾಕಿ ಹತ್ತಿರಕ್ಕೆಳೆದುಕೊಂಡ. ಅವಳು ಎತ್ತರದಲ್ಲಿ ಅವನಿಗಿಂತ ಕೇವಲ ಮೂರೇ ಇಂಚು ಕಮ್ಮಿಯಿದ್ದಳು. ಅದಕ್ಕೇ ಅವನ ನೋಟದೊಂದಿಗೆ ನೋಟ ಬೆರೆಸೋಣವೆಂದು ತಲೆ ಎತ್ತಿದಳು. ಆ ರೀತಿ ತಲೆ ಎತ್ತಿದ್ದರಿಂದ ಅವಳ ವಕ್ಷಸ್ಥಳ ಮತ್ತಷ್ಟು ಮುಂದೆ ಉಬ್ಬಿತು. ಆ ಸ್ಪರ್ಶವನ್ನು ಅನುಭವಿಸುತ್ತ ಆ ಅನುಭವ ಮತ್ತಷ್ಟು ಬೇಕೆನ್ನುವಂತೆ ಎದೆಯನ್ನು ಇನ್ನಷ್ಟು ಮುಂದೆ ಚಾಚಿದಳು. ಅವಳ ಮನಸ್ಸನ್ನರಿತ ಗೋಪಾಲಕೃಷ್ಣ ಅವಳನ್ನು ಗಟ್ಟಿಯಾಗಿ ತಬ್ಬಿಕೊಂಡ. ಅವನೊಂದಿಗೆ ಬೆರೆತು ಹೋಗಬೇಕೆಂಬ ಕೋರಿಕೆ ಜಾಸ್ತಿಯಾದ್ದರಿಂದ ಅವನ ಬೆನ್ನಿನ ಸುತ್ತ ಕೈಬಳಸಿ ಅದುಮಿಕೊಂಡಳು.

"ಸುಜೀವನ" ಎಂದ ಗೋಪಾಲಕೃಷ್ಣ, ಅವಳು ತನಗಿಂತಲೂ ದೊಡ್ಡವಳಾಗಿ ಕಂಡುಬರುತ್ತಿದ್ದುದರಿಂದ "ಸುಜೀ" ಎಂದು ಕರೆಯಲು ಅವನ ಮನಸ್ಸೊಪ್ಪಲಿಲ್ಲ.

"ನಮ್ಮಿಬ್ಬರ ಜೋಡಿ ರಾಧೆ-ಕೃಷ್ಣರ ಜೋಡಿಯಂತಿದೆ ಅಲ್ವೇ... ವಯಸ್ಸಿನಲ್ಲಿ ರಾಧೆ ಕೃಷ್ಣನಿಗಿಂತಲೂ ದೊಡ್ಡವಳು" ಎಂದಳು ಸುಜೀವನ. ಇಬ್ಬರೂ ಮಾತಾಡುತ್ತ ಬೆಟ್ಟದ ಮೇಲ್ಭಾಗ ತಲುಪಿದರು. ನರ ಎಂದಿನಂತೆ ಬಯಲಿನಲ್ಲಿ ಹಾಸಿಗೆ ಹಾಸಿಟ್ಟಿದ್ದ. ಇಬ್ಬರೂ ಅಲ್ಲಿಗೆ ಹೋಗಿ ಕುಳಿತು ಕೊಂಡರು.

ಗೋಪಾಲಕೃಷ್ಣ ಅವಳ ಮಡಿಲಲ್ಲಿ ತಲೆ ಇಟ್ಟು ಮಲಗಿಕೊಳ್ಳುತ್ತ, "ಇಷ್ಟಕ್ಕೂ ನಿನ್ನ ವಯಸ್ಸೆಷ್ಟು" ಎಂದು ಕೇಳಿದ.

"ನನ್ನ ವಯಸ್ಸು ಎಷ್ಟು ಅನ್ನೋದನ್ನ ಇಲ್ಲೀವರೆಗೆ ಯಾರಿಗೂ ಹೇಳಿಲ್ಲ ವಾದ್ದರಿಂದ ಅದನ್ನು ಹೇಳಿಬಿಡ್ತೀನಿ. ಆದರೆ ಆ ನಂತರ ನಾನು ಯಾರಿಗೂ ಹೇಳಿರದ ಘಟನೆಯ ಬಗ್ಗೆ ಮಾತ್ರ ಕೇಳಬಾರದು."

"ಅದಕ್ಕೆ ಶಾಸ್ತ್ರ ಒಪ್ಪೋದಿಲ್ವಲ್ಲ. ನಿನ್ನ ವಯಸ್ಸು ಹೇಳಿಬಿಟ್ಟು ತಪ್ಪಿಸಿ ಕೊಳ್ಳಬೇಕೆಂದು ನೋಡುತ್ತಿರೋ ಹಾಗಿದೆ. ಹಾಗೆ ಮಾಡಿದರೆ ಆಚಾರಕ್ಕೆ ಅಪಚಾರ ಮಾಡಿದಂತಾಗುತ್ತದೆ. ನೀನು ಯಾರಿಗೂ ಹೇಳಿರದ ಘಟನೆಯ ಬಗ್ಗೆ ಹೇಳಲೇಬೇಕು.

"ಹೇಳಲೇಬೇಕೆ?"

"ಹೌದು " ಎಂದ ಗೋಪಾಲಕೃಷ್ಣ.

"ಸರಿ " ಎನ್ನುತ್ತ ಹೇಳತೊಡಗಿದಳು ಸುಜೀವನ.

"ನನ್ನದು ಚಿತ್ತೂರಿಗೆ ಹತ್ತಿರದಲ್ಲಿರುವ ಚಿಕ್ಕಪಟ್ಟಣ ಅದನ್ನು ಪಟ್ಟಣ ವೆನ್ನುವುದಕ್ಕಿಂತಲೂ ದೊಡ್ಡ ಹಳ್ಳಿಯೆಂದರೆ ಸಮಂಜಸವಾಗುತ್ತದೇನೋ.... ಅಲ್ಲಿ ರೈಲು ನಿಲ್ದಾಣ ಇದೆ. ಬಹಳಷ್ಟು ರೈಲುಗಳು ಅಲ್ಲಿ ನಿಲ್ಲುತ್ತವೆ. ಚಿಕ್ಕ ದೊಂದು ಸಿನಿಮಾ ಥಿಯೇಟರ್, ಗ್ರಾಮೀಣ ಬ್ಯಾಂಕ್ ಇತ್ಯಾದಿ ಸೌಕರ್ಯ ಗಳೂ ಇವೆ. ಎರಡು ಮೂರು ಕಾನ್ವೆಂಟ್‌ಗಳೂ ಇವೆ. ಅವುಗಳಲ್ಲಿ ಒಂದು ಉಮಾ ಮಹೇಶ್ವರನ್‌ನದು. ಇವನೇ ನಾನು ಹೇಳಲಿರುವ ಘಟನೆಯ ಕೇಂದ್ರ ಬಿಂದು."

ಗೋಪಾಲಕೃಷ್ಣ ನಡುವೆ ಬಾಯಿ ಹಾಕುತ್ತ, "ಅವನು ತಮಿಳಿಯನ್ ಏ" ಎಂದು ಕೇಳಿದ.

"ಊಂ . ಅವನ ತಂದೆತಾಯಿಗಳದು ಸೇಲಂ ಬಳಿಯಲ್ಲಿನ ಯಾವುದೋ ಹಳ್ಳಿಯೂರು. ಅವನ ತಂದೆ ರೈಲ್ವೇ ಇಲಾಖೆಯಲ್ಲಿ ನೌಕರ, ಇಬ್ಬರು ಗಂಡು ಮಕ್ಕಳಿದ್ದರು. ಆತನ ಸರ್ವೀಸೆಲ್ಲ ಆಂಧ್ರದಲ್ಲಿಯೇ ಕಳೆದಿತ್ತು. ಅದಕ್ಕೆ ಮಕ್ಕಳನ್ನು ಆಂಧ್ರದಲ್ಲಿಯೇ ಓದಿಸಿದ್ದ. ಅವರಿಗೆಲ್ಲ ತೆಲುಗು ಚೆನ್ನಾಗಿಯೇ

ಬರುತ್ತಿತ್ತು. ಕೊನೆಯ ದಿನಗಳಲ್ಲಿ ಆತ ನಮ್ಮೂರಿಗೆ ಸ್ಟೇಶನ್ ಮಾಸ್ಟರ್ ಆಗಿ ಬಂದಿದ್ದ.

ಆಗ ಉಮಾ ಮಹೇಶ್ವರನ್‌ನಿಗೆ ಹದಿನಾರು ವರ್ಷಗಳಿದ್ದಿರಬಹುದು. ಅವನ ಅಣ್ಣನಿಗೆ ಹದಿನೆಂಟು ವರ್ಷಗಳಿದ್ದವು. ಇಬ್ಬರೂ ಕಾಲೇಜಿನಲ್ಲಿ ಓದುತ್ತಿದ್ದರು. ಹಿರಿಯವನಿಗೆ ವಿದ್ಯೆ ಒಲಿದು ಬಂದಿತ್ತು. ಎಂ. ಕಾಂ. ಮುಗಿಸಿದ. ಪಾಪ, ಉಮಾಮಹೇಶ್ವರನ್ ಸ್ವಭಾವತಃ ಮೆದು ಓದಿನಲ್ಲೂ ಅಷ್ಟೇ ಅದಕ್ಕೇ ಡಿಗ್ರಿ ತರಗತಿಯಲ್ಲೇ ಕೊಳೆಯುತ್ತಿದ್ದ. ಅವನ ತಂದೆ ಕೂಡಿಟ್ಟಿದ್ದ ದುಡ್ಡಿನಲ್ಲಿ ನಮ್ಮ ಊರಿನಲ್ಲೇ ಒಂದಿಷ್ಟು ಜಾಗ ಖರೀದಿ ಮಾಡಿ ಒಂದು ಮನೆ ಎರಡು ಮಳಿಗೆಗಳನ್ನು ಕಟ್ಟಿಸಿದ. ಎಂ. ಕಾಂ. ಮುಗಿಸಿದ ಹಿರಿಮಗನಿಗೆ ಅವರಿವರನ್ನು ಹಿಡಿದು ರೈಲ್ವೇ ಇಲಾಖೆಯಲ್ಲಿಯೇ ಗುಮಾಸ್ತನ ನೌಕರಿ ಕೊಡಿಸಿದ. ಬಲಾರ್ಷಾದಲ್ಲಿ ಅವನಿಗೆ ನೇಮಕಾತಿ ದೊರೆಯಿತು. ಕಿರಿ ಮಗನನ್ನು ಪ್ರಯೋಜಕನನ್ನಾಗಿ ಮಾಡಬೇಕೆಂದು ಆತನ ಮನಸ್ಸಿನಲ್ಲಿದ್ದರೂ ಓದು ಪೂರ್ತಿಗೊಂಡಿರಲಿಲ್ಲ.

ಅಷ್ಟರಲ್ಲಿ ಆತ ನಿವೃತ್ತನಾದ. ಸುಮಾರು ಒಂದೂವರೆ ಲಕ್ಷದಷ್ಟು ಪಿ ಎಫ್. ಗ್ರ್ಯಾಚುಯಿಟಿಫಂಡ್ ಬಂತು. ಆ ದುಡ್ಡನ್ನು ಹಿರಿಮಗನಿಗಿತ್ತು. ಉಮಾಮಹೇಶ್ವರನ್‌ನಿಗೆ ನಮ್ಮ ಊರಲ್ಲಿನ ಮನೆ, ಮಳಿಗೆಗಳನ್ನು ಬರೆದುಕೊಟ್ಟುಬಿಟ್ಟ. ಹಿರಿಮಗನಿಗೆ ಮದುವೆ ಮಾಡಿದ ನಂತರ ಮುದಿ ದಂಪತಿಗಳಿಬ್ಬರೂ ಅವನೊಂದಿಗೆ ಬಲಾರ್ಷಾಗೆ ಹೊರಟುಹೋದರು.

ಉಮಾಮಹೇಶ್ವರನ್ ನಮ್ಮ ಊರಿನಲ್ಲಿ ಒಂಟಿಯಾಗಿ ಉಳಿದ. ಮಳಿಗೆಗಳಿಂದ ಏಳು ನೂರು ರೂಪಾಯಿ ಬಾಡಿಗೆ ಬರುತ್ತಿತ್ತು. ಮನೆ ಸ್ವಂತದ್ದಾಗಿದ್ದರಿಂದ, ಏಳು ನೂರರಲ್ಲೇ ಜೀವನ ತಳ್ಳುವುದು ಕಷ್ಟವೇನಾಗಿರಲಿಲ್ಲ. ಮೂರನೇ ಸಲವೂ ಡಿಗ್ರಿ ಪರೀಕ್ಷೆಯ ಅಂತಿಮ ವರ್ಷದಲ್ಲಿ ಫೇಲಾದುದರಿಂದ ಓದಿನ ಮೇಲೆಯೇ ಕೋಪ ಬಂದು ನಿಲ್ಲಿಸಿಬಿಟ್ಟ. ಸುತ್ತಮುತ್ತಲಿನವರ ಸಲಹೆಯ ಮೇರೆಗೆ ತನ್ನ ಮನೆಯ ಪಕ್ಕದಲ್ಲಿದ್ದ ಸ್ಥಳವನ್ನು ಲೀಜಿಗೆ ಪಡೆದುಕೊಂಡು ಚಿಕ್ಕದೊಂದು ಶೆಡ್ ಹಾಕಿ ಕಾನ್ವೆಂಟ್ ತೆರೆದ. ಶಿಕ್ಷಕ, ಪ್ಯೂನು ಎಲ್ಲವೂ ಅವನೊಬ್ಬನೇ. ಐವತ್ತು ಮಕ್ಕಳು ಸೇರಿಕೊಂಡರು. ಅವರಿಗೆ ಓದು ಕಲಿಸುತ್ತ, ಸ್ವಯಂಪಾಕ ತಿನ್ನುತ್ತ ದಿನಗಳನ್ನು ತಳ್ಳುತ್ತಿರುವ ಸಮಯದಲ್ಲಿ ಅವನಿಗೆ ನಮ್ಮ ಕುಟುಂಬದೊಂದಿಗೆ ಪರಿಚಯ ಏರ್ಪಟ್ಟಿತು.

ಒಂದು ರೀತಿಯಲ್ಲಿ ನಮ್ಮ ಕುಟುಂಬ ದೊಡ್ಡದೇ. ನನ್ನ ತಂದೆ ದೊಡ್ಡ ಗುತ್ತಿಗೆದಾರನೊಬ್ಬನ ಬಳಿ ಮೇಸ್ತ್ರಿಯಾಗಿದ್ದ. ನಮ್ಮಮ್ಮ ಮನೆಯ ಬಳಿಯೇ

ಇರುತ್ತಿದ್ದಳು. ನಾವು ಮೂವರು ಅಕ್ಕ ತಂಗಿಯರಿದ್ದೆವು. ನಾನು ಎಲ್ಲರಿಗಿಂತಲು ಚಿಕ್ಕವಳು, ದೊಡ್ಡಕ್ಕನ ಹೆಸರು ಸುಗುಣ. ಎರಡನೇ ಅಕ್ಕನಹೆಸರು ಸುಮತಿ. ನಮ್ಮ ತಂದೆ ಯಾವಾಗಲೂ ಮಹಾರಾಷ್ಟ್ರದಲ್ಲಿ ಕಾಂಟ್ರಾಕ್ಟ್‌ಗಳನ್ನು ಮಾಡು ಸುತ್ತಿರುತ್ತಿದ್ದ ತಿಂಗಳಿಗೆ ಸಾವಿರ ರೂಪಾಯಿನಷ್ಟು ಕಳುಹಿಸುತ್ತಿದ್ದ. ಆಗಾಗ ನಡುವೆಯೊಮ್ಮೆ ಬಂದು ಒಂದು ತಿಂಗಳೋ, ಎರಡು ತಿಂಗಳೋ ಇದ್ದು ಹೋಗುತ್ತಿದ್ದ. ನಮಗೆ ಸ್ವಂತದ್ದಾದ ಚಿಕ್ಕ ಮನೆಯೊಂದು ಇದ್ದದ್ದರಿಂದ ಬಾಡಿಗೆಯ ಸಮಸ್ಯೆ ಇರಲಿಲ್ಲ. ಉಮಾಮಹೇಶ್ವರನ್ ನಮಗೆ ಪರಿಚಯ ವಾದಂದಿಗೆ ನಮ್ಮಕ್ಕ ಸುಗುಣಳಿಗೆ ಹದಿನೆಂಟು ವರ್ಷಗಳಿದ್ದವು. ಇಂಟರ್ ನಡುವೆಯೇ ನಿಲ್ಲಿಸಿಬಿಟ್ಟು, ಟೈಲರಿಂಗ್ ಕ್ಲಾಸಿಗೆ ಹೋಗುತ್ತ ಕಾಲ ತಳ್ಳುತ್ತಿದ್ದಳು. ಎರಡನೇ ಅಕ್ಕ ಸುಮತಿ ಎರಡನೇ ತರಗತಿಗೇ ಓದಿಗೆ ಶರಣು ಹೊಡೆದು ಅಮ್ಮನಿಗೆ ಮನೆಗೆಲಸ, ಅಡಿಗೆ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಳು ನಾನಾಗ ಹತ್ತನೇ ತರಗತಿ ಓದುತ್ತಿದ್ದೆ.

ಗಂಡು ದಿಕ್ಕಿಲ್ಲದಿದ್ದ ನಮಗೆ ಉಮಾಮಹೇಶ್ವರನ್‌ನ ಪರಿಚಯವಾದದ್ದು ಒಂದು ವರವೆಂದೇ ಹೇಳಬೇಕು ಮುಖ್ಯವಾಗಿ ನಮ್ಮಮ್ಮ ಅವನ ಬಳಿ ತನ್ನ ಕಷ್ಟ ಸುಖ ಹೇಳಿಕೊಳ್ಳುತ್ತಿದ್ದಳು. ನಮ್ಮಮ್ಮನಿಗಿದ್ದ ದಿಗಿಲೆಲ್ಲ ನಮ್ಮ ಮದುವೆಯ ಬಗ್ಗೆಯೇ. ಮನೆಯಲ್ಲಿ ಮೂವರು ಬೆಳೆದ ಹೆಣ್ಣುಮಕ್ಕಳನ್ನಿಟ್ಟು ಕೊಂಡ ಯಾವ ತಾಯಿ ತಾನೆ ನಿಶ್ಚಿಂತೆಯಿಂದ ಇರಬಲ್ಲಳು? ವರದಕ್ಷಿಣೆ, ವರೋಪಚಾರ ಕೊಟ್ಟು ಮದುವೆ ಮಾಡಿ ಕಳಿಸುವ ಆರ್ಥಿಕ ತಾಕತ್ತೂ ಇರಲಿಲ್ಲ.

ನಮ್ಮಮ್ಮ ಪ್ರತಿ ದಿನವೂ ಇದೇ ನೋವನ್ನು ನಮ್ಮ ಬಳಿ ತೋಡಿ ಕೊಳ್ಳುತ್ತಿದ್ದಳು. "ನಿಮ್ಮಪ್ಪ ದೇಶ ದೇಶ ಅಲೀತಿದಾನೆ. ಬರೋ ದುಡ್ಡು ಅಲ್ಲಿಂದಲ್ಲಿಗೆ ಹೊಟ್ಟೆಯ ಪಾಡಿಗೆ ಸರಿ ಹೋಗ್ತಿದೆ. ಒಡವೆ ಕವಡೇನೂ ಕೂಡಿ ಹಾಕೋಕಾಗಿಲ್ಲ. ನಿಮ್ಮ ಮದುವೆ ಹೇಗಾಗುತ್ತೋ ಏನೋ?! ಇವನ್ನೆಲ್ಲ ನೋಡ್ತಿದ್ರೆ ನಿಮ್ಮಮದುವೆ ನೀವೇ ಮಾಡ್ಕೊಳ್ಳೋದು ನಿಮ್ಮ ಹಣೆಯಲ್ಲಿ ಬರೆದಿರೋ ಹಾಗೆ ನನಗನ್ನಿಸ್ತಿದೆ."

ಆ ರೀತಿ ನಮ್ಮನ್ನು ಪರೋಕ್ಷವಾಗಿ "ನಿಮ್ಮ ಮದುವೆ ನೀವೇ ಮಾಡಿ ಕೊಳ್ಳಬೇಕಿರುವದರಿಂದ ನೀವೇ ನಿಮ್ಮ ಗಂಡಂದಿರನ್ನು ಹುಡುಕಿಕೊಳ್ಳಿ." ಎಂದು ಬೋಧಿಸುತ್ತಿದ್ದಳು. ಆ ಕಾರಣದಿಂದಲೋ ಏನೋ, ನಮ್ಮಮ್ಮ ನಮ್ಮ ಮನೆಗೆ ಬರಲು ಪ್ರಾರಂಭಿಸಿದ. ಉಮಾಮಹೇಶ್ವರನ್‌ಗೆ ಬಹಳಷ್ಟು ಮರ್ಯಾದೆ ತೋರಿಸುತ್ತಿದ್ದಳು. ಅವನು ದಿನಾಲೂ ಸಾಯಂಕಾಲ ನಮ್ಮ

ಮನೆಗೆ ಬಂದು ಸ್ವಲ್ಪ ಹೊತ್ತು ಹರಟೆ ಹೊಡೆದು ಹೋಗುತ್ತಿದ್ದ. ಒಂದು ದಿನ ನಾವೆಲ್ಲ ವರಾಂಡದಲ್ಲಿ ಕುಳಿತು ಮಾತಾಡುತ್ತಿರುವಾಗ ಅವನು ಬಂದ. ನಮ್ಮಮ್ಮ ಕುರ್ಚಿಬಿಟ್ಟೆದ್ದು 'ಬಾ ಉಮಾ, ಕೂತ್ಕೋ,' ಆಹ್ವಾನಿಸಿದಳು.

ಅವನು ನಮ್ಮಮ್ಮನನ್ನು ಒಂದು ಸಲ ಪೂರ್ತಿಯಾಗಿ ಪರಿಶೀಲಿಸಿ, "ನೀವೇ?! ದೂರದಿಂದ ನೀವು ಸುಗುಣಳಂತೆ ಕಂಡು ಬಂದ್ರಿ. ಒಟ್ಟಿನಲ್ಲಿ ನೀವು ಇವರಿಗೆ ತಾಯಿಯಂತೆ ಕಂಡು ಬರೋದಿಲ್ಲ. ಅಕ್ಕನಂತೆ ಕಾಣಿಸ್ತೀರಿ" ಎಂದ. ಅವನು ಹೇಳಿದ್ದರಲ್ಲಿ ಸತ್ಯವಿತ್ತು. ತೀರಾ ಚಿಕ್ಕಂದಿನಲ್ಲಿ ಮದುವೆಯಾಗಿದ್ದರಿಂದ, ಹದಿನೆಂಟು ವರ್ಷದ ಮಗಳಿದ್ದರೂ, ಇನ್ನೂ ಯುವತಿಯಂತೆ ಕಂಡು ಬರುತ್ತಿದ್ದಳು ನಮ್ಮಮ್ಮ.

'ಸುಗುಣ ಇಲ್ಲ ಉಮಾ! ಟೈಲರಿಂಗ್ ಕ್ಲಾಸಿಗೆ ಹೋಗಿದ್ದಾಳೆ'ಎನ್ನುತ್ತ ನಮ್ಮಮ್ಮ ಚಾಪೆ ಹಾಸಿಕೊಂಡು ಕುಳಿತಳು. ನಾಲ್ವರೂ ಹರಟೆ ಹೊಡೆಯ ತೊಡಗಿದೆವು. ನಮ್ಮ ಮಾತಿನಲ್ಲಿ ಹತ್ತು ಹಲವು ವಿಷಯಗಳು ಸುಳಿದು ಹೋದವು. ನಡುವೆ ಸುಗುಣಳೂ ನಮ್ಮನ್ನು ಕೂಡಿಕೊಂಡಳು.

ಎಂಟು ಗಂಟೆಯ ಹೊತ್ತಿನಲ್ಲಿ ಹೋಗಲೆಂದು ಅವನು ಎದ್ದ. "ನಿಮ್ಮ ಪರಿಚಯದಿಂದಾಗಿ ಈ ಊರಿನಲ್ಲಿ ನಾನು ಒಂಟಿ ಎನ್ನುವ ಭಾವನೆಯೇ ಇಲ್ಲವಾಯ್ತು. ನನಗೆ ಯಾರೂ ಮಿತ್ರರೂ ಇಲ್ಲ. ಬಂಧುಗಳಂತೂ ಈ ರಾಜ್ಯದಲ್ಲಿಯೇ ಇಲ್ಲ. ಅಪ್ಪ-ಅಮ್ಮ ಎಲ್ಲೋ ದೂರದಲ್ಲಿದ್ದಾರೆ" ಎಂದು ಮನದುಂಬಿ ಹೇಳಿದ.

"ಅದಕ್ಕೇನಿದೆಯಪ್ಪ, ನಮಗೂ ನಿನ್ನ ಪರಿಚಯವಾದಂದಿನಿಂದ ಜಗತ್ತಿನ ವಿಶೇಷಗಳೆಲ್ಲ ಗೊತ್ತಾಗುತ್ತಿವೆ. ಯಾವಾಗಲೂ, ಏನಾದರೊಂದು ರೀತಿಯಲ್ಲಿ ಸಹಾಯ ಮಾಡ್ತಾನೆ ಇದೀಯ" ಎಂದಳು ನಮ್ಮಮ್ಮ. ಅವನು ಹೊರಟುಹೋದ.

ಸರಿಯಾಗಿ ಮೂರು ತಿಂಗಳು ಕಳೆಯುವಷ್ಟರಲ್ಲಿ ಅವನುನಮ್ಮ ಮನೆಯವನಂತೆಯೇ ಆಗಿಬಿಟ್ಟ, ಕಾರಣ ಅವನು ನಮ್ಮ ಹಿರಿಯಕ್ಕ ಸುಗುಣಳನ್ನು ಪ್ರೇಮಿಸಿದ್ದ. ಅದನ್ನು ಅವಳಿಗೆ ಹೇಳಿರಲಿಲ್ಲವಾದರೂ ಕಳ್ಳನೋಟ ಬೀರುವುದು ಅವಳೊಂದಿಗೆ ಮೈಮರೆತು ಮಾತಾಡುವುದು, ಅವಳು ಎಲ್ಲಿಗಾದರೂ ಹೋಗಿದ್ದರೆ ಅವಳಿಗಾಗಿ ಕಾಯುವುದು, ಕಾಣಿಸದಿದ್ದರೆ ಒದ್ದಾಡಿಬಿಡುವುದು ಈ ವರ್ತನೆಯಿಂದಾಗಿ ಅವನು ಸುಗುಣಳನ್ನು ಪ್ರೇಮಿಸುತ್ತಿರುವನೆಂಬ ವಿಷಯ ನಮ್ಮಮ್ಮನೊಂದಿಗೆ ನನಗೂ, ಸುಮತಿಗೂ ಗೊತ್ತಾಗಿ ಹೋಗಿತ್ತು. ಮತ್ತೆ

ಆ ವಿಷಯ ಸುಗುಣಳಿಗೆ ಗೊತ್ತಾಗಿತ್ತೋ ಇಲ್ಲವೋ ಎನ್ನುವದು ನಮಗೆ ಅರ್ಥವಾಗಲಿಲ್ಲ.

ನಮ್ಮಮ್ಮ ಅವನ ವರ್ತನೆಯನ್ನು ಗಮನಿಸುತ್ತಲೇ ಇದ್ದಳು. ಒಂದು ದಿನ ಸುಗುಣ ಇಲ್ಲದಿದ್ದ ಸಮಯದಲ್ಲಿ ನಮ್ಮೊಂದಿಗೆ "ಉಮಾ ಒಳ್ಳೆಯವನು. ಸ್ವಲ್ಪ ಮುಗ್ಧ, ಆದರೆ ಅದೇನೂ ದೋಷವಲ್ಲವಲ್ಲ ಅದೂ ಅಲ್ದೆ ಅವನಿಗೇನು ಕಡಿಮೆಯಾಗಿದೆ. ಸ್ವಂತದ ಮನೆ ಇದೆ. ಟ್ಯೂಶನ್ ಹೇಳಿಯೋ, ಕಾನ್ವೆಂಟ್ ನಡೆಸಿಯೋ ತನ್ನ ಹೆಂಡತಿಯನ್ನು ಸಾಕಬಲ್ಲ. ರೂಪದಲ್ಲಿ ಕಡಿಮೆ ಇದ್ರೆ ಏನಂತೆ ಅಂದ-ಚಂದ ಸುರಿದುಕೊಳ್ತೀವಾ? ಬುದ್ಧಿ ಒಳ್ಳೇದಿದ್ರೆ ಸಾಕು ರೂಪ ಹೇಗಿದ್ದರೇನಂತೆ?" ಎಂದಿದ್ದಳು

ಉಮಾ ಮಹೇಶ್ವರನ್ ತೀರಾ ಸಣ್ಣಗಿದ್ದ. ನೋಡುತ್ತಲೇ ಆಕರ್ಷಿಸುವಂತಹ ರೂಪವೇನಾಗಿರಲಿಲ್ಲ. ಕಾಲಕ್ಕನುಗುಣವಾಗಿ ಸ್ಟೈಲಾಗಿ ಇರುತ್ತಿದ್ದಿಲ್ಲ ಏನೋ ಹಳೆಗಾಲದವನಂತೆ ಇರುತ್ತಿದ್ದ. ಚುರುಕಾದ ವ್ಯಕ್ತಿಯಲ್ಲ. ಮುಖದಲ್ಲಿ ಯಾವಾಗಲೂ ಏನನ್ನೋ ಕಳೆದುಕೊಂಡಿರುವವನಂತೆ ಮಂಕು ಕಳೆ. ಮಾತಾಡುವುದೂ ಅಷ್ಟೇ. ಆಕರ್ಷಣೆಯವಾಗಿ ಮಾತಾಡುವ ಕಲೆಯೂ ಗೊತ್ತಿರಲಿಲ್ಲ. ಆದರೆ ಅಮ್ಮ ಹೇಳಿದಂಗೆ ನಿಷ್ಕಲ್ಮಶ ಮನಸ್ಸಿನ ವ್ಯಕ್ತಿ. ಮನಸ್ಸಿನಲ್ಲಿ ಯಾವೊಂದು ಕೆಟ್ಟ ಭಾವನೆಯೂ ಇರಲಿಲ್ಲ. ಪಾಪ-ಪುಣ್ಯ ಲೌಕಿಕದ ಬಗ್ಗೆ ಗೊತ್ತಿರದ ಮುಗ್ಧ

ಅವನ ಮನಸ್ಸೇನೆಂಬುದು ನಮಗೇ ಅರ್ಥವಾಗಿರುವಾಗ ಇನ್ನು ಕಥಾನಾಯಕಿ ಸುಗುಣಳಿಗೆ ಗೊತ್ತಾಗದಿರುತ್ತದೆಯೆ? ಅವನಿಗೆ ತನ್ನನ್ನು ಇಷ್ಟಪಡುತ್ತಿರುವನೆಂದೂ ಗಾಢವಾಗಿ ಪ್ರೇಮಿಸುತ್ತಿರುವನೆಂದೂ ಅವಳಿಗೆ ಬೇಗದಲ್ಲೇ ಅರ್ಥವಾಯ್ತು. ಅವಳ ವರ್ತನೆಯಲ್ಲೂ ಮಾರ್ಪಾಡುಂಟಾಯ್ತು. ಅವನೊಂದಿಗೆ ತುಂಬಾ ಸಲಿಗೆಯಿಂದ ನಡೆದುಕೊಳ್ಳುತ್ತಿದ್ದಳು. ಅವನನ್ನು ನೋಡುತ್ತಿದ್ದಂತೆಯೇ ಕಣ್ಣುಗಳಲ್ಲೇ ನಗುತ್ತಿದ್ದಳು. ಅವನ ನೋಟ ತನ್ನ ಮೈಮೇಲೆಲ್ಲ ಹರಿದಾಡುತ್ತಿದ್ದರೂ ನೋಡಿಯೂನೋಡದವಳಂತೆ ನಟಿಸುತ್ತಿದ್ದಳು. ಮಾತು ಮಾತಿನಲ್ಲಿ ಅವನ ಕೈಗಳಿಗೆ ತನ್ನ ಕೈಗಳನ್ನು ತಾಕಿಸುತ್ತಿದ್ದಳು ಆಗಾಗ ತನ್ನ ಎದೆ ತಾಕುವಂತೆ ಅವನ ಹಿಂದೆಯೇ ನಿಲ್ಲುತ್ತಿದ್ದಳು. ಅಂತಹ ಸಮಯದಲ್ಲಿ ಅವನ ಅವಸ್ಥೆ ಹೇಳುವುದೇ ಬೇಡ. ನಮ್ಮಕ್ಕ ಆ ರೀತಿ ಕೆಣಕಿದಾಗ ಅವನ ಅಂಗಿ ಬೆವರಿನಿಂದ ತೊಯ್ದು ಒದ್ದೆ ಮುದ್ದೆಯಾಗಿರುತ್ತಿತ್ತು. ಕೈಕಾಲುಗಳು ನಡುಗುತ್ತಿದ್ದವು ಹೃದಯದ ಬಡಿತ ನಮಗೂ ಕೇಳಿಸುವಂತೆ ಜೋರಾಗಿಬಿಡುತ್ತಿತ್ತು. ನಮ್ಮಕ್ಕ ಅಷ್ಟು ಕೆಣಕಿದರೂ ನೇರವಾಗಿ

ವ ಎಂದುವರಿಯುವ ಧೈರ್ಯವಾಗಲಿ, ಸಲಿಗೆಯಾಗಲಿ ಅವನಲ್ಲಿರಲಿಲ್ಲ.

ಕೆಲವು ದಿನಗಳಿಗೆ ಅವನು ನಮ್ಮಕ ನ ಸಾಕು ನಾಯಿಯಂತಾಗಿ ಬಿಟ್ಟ. ಅವಳು ಕಾಲು ಬೆರಳಿನಿಂದ ತೋರಿಸಿದ್ದನ್ನು ತಲೆಯ ಮೇಲೆ ಹೊತ್ತು ಮಾಡುತ್ತಿದ್ದ. ಅವಳ ನೌಕರಿ ಅರ್ಜಿಗಳನ್ನು ಹಾಕಿ ಬರುವುದರಿಂದ ಹಿಡಿದು ಕೂಸಿಗೆ ಅವಳ ಲಂಗಗಳಿಗೆ ಫಾಲ್ಸ್ ಹಚ್ಚಿಸಿಕೊಂಡು ಬರುವ ತನಕ ಎಲ್ಲವನ್ನು ತುಂಬಾ ಆನಂದದಿಂದ ಮಾಡುತ್ತಿದ್ದ. ತನ್ನ ಪ್ರೇಯಸಿಯ ತಂಗಿಯರೆಂದು ನಮ್ಮ ಕೆಲಸಗಳನ್ನೂ ಮಾಡಿಕೊಡುತ್ತಿದ್ದ. ಕೊನೆಕೊನೆಗೆ ನಾವು ಹೇಗೆ ತಯಾರಾದೆವೆಂದರೆ ಅವನಿಲ್ಲದಿದ್ದರೆ ಏನೊಂದು ಕೆಲಸವನ್ನೂ ಮಾಡಿಕೊಳ್ಳ ಲಾಗದ ಸ್ಥಿತಿಗೆ ಬಂದೆವು.

ಬೆಳಗಾಗುತ್ತಿದ್ದಂತೆಯೇ ನೀಟಾಗಿ ತಯಾರಾಗಿ ಬರುತ್ತಿದ್ದ. ನಮ್ಮೊಂದಿಗೆ ಕಳೆಯಲು ಸಮಯ ಸಾಲುತ್ತಿಲ್ಲವೆಂದು ಕಾನ್ವೆಂಟ್ ನಡೆಸಲು ಒಬ್ಬನನ್ನು ಸಂಬಳಕ್ಕೆ ಗೊತ್ತುಮಾಡಿಕೊಂಡ. ಬೆಳಿಗ್ಗೆ ಬರುತ್ತಿದ್ದಂತೆಯೇ ನಮಗೇನಾ ದರೂ ಬೇಕೆ ಎಂದು ವಿಚಾರಿಸುತ್ತಿದ್ದ ನಮ್ಮಮ್ಮ ಕೊಟ್ಟ ಕೈ ಚೀಲ ತೆಗೆದು ಕೊಂಡು ಮಾರುಕಟ್ಟೆಗೆ ಹೋಗಿ ತರಕಾರಿ ತರುತ್ತಿದ್ದ ನಾವು ಹೇಳಿ ದವುಗಳನ್ನೆಲ್ಲ ತಂದುಕೊಟ್ಟು, ಹಾಲ್‌ನಲ್ಲಿ ಕುಳಿತುಕೊಂಡು ಹರಟೆಗೆ ತೊಡಗುತ್ತಿದ್ದ.

ಅವನು ಎದುರಿಗಿದ್ದರೂ ಸುಗುಣ ಸಂಕೋಚ, ಹಿಂಜರಿಕೆ ಇಲ್ಲದೆ ಬಟ್ಟೆ ಬಗಲಾಯಿಸಿಕೊಳ್ಳುತ್ತಿದ್ದಳು. ಅವಳು ಆ ರೀತಿ ತನ್ನ ಕೋಣೆಯಲ್ಲಿ ಬದಲಾ ಯಿಸಿಕೊಳ್ಳುತ್ತಿರುವಾಗ ಆಗಾಗ ಕಳ್ಳ ನೋಟ ಬೀರುತ್ತಿದ್ದ ಅವಳು ಬೇಕೆಂದೇ ಆ ರೀತಿ ತನ್ನ ಸೌಂದರ್ಯವನ್ನು ಅರೆಬರೆ ತೋರಿಸುತ್ತ ಅವನನ್ನು ಕೆಣಕುತ್ತಿದ್ದಳು. ನಮಗೆ ಬೇಕಾದ ಕೆಲಸಗಳನ್ನೆಲ್ಲಹೇಳಿದರೆ ಓಡೋಡಿ ಹೋಗಿ ಮಾಡಿಕೊಂಡು ಬರುತ್ತಿದ್ದ. ಮಧ್ಯಾಹ್ನ ಹನ್ನೆರಡರನಂತರ ಯಾವಾಗಲೋ ಮನೆಗೆ ಹೋಗಿ, ಸಾಯಂಕಾಲ ನಾಲ್ಕಕ್ಕೆಲ್ಲ ಹಾಜರಾಗುತ್ತಿದ್ದ. ಆಗಿನಿಂದ ಮತ್ತೆ ಹರಟೆ, ಅದೂ—ಇದೂ ಕೆಲಸ... ರಾತ್ರಿ ಹತ್ತಕ್ಕೋ, ಹನ್ನೆರಡಕ್ಕೋ ಮನೆ ಸೇರಿಕೊಳ್ಳುತ್ತಿದ್ದ.

ಈ ರೀತಿ ಸಲೀಸಾಗಿ ಸಾಗುತ್ತಿದ್ದರೆ ಅದು ಜೀವನವಾಗದಲ್ಲ. ಒಂದು ದಿನ ಬೆಳಿಗ್ಗೆ ಹತ್ತು ಗಂಟೆಯಾಗುತ್ತಿದ್ದರೂ ಉಮಾ ಮಹೇಶ್ವರನ್ ಪತ್ತೆ ಇರಲಿಲ್ಲ. ಏನಾಯ್ತೋ ಏನೋ ಎಂದುಕೊಳ್ಳುತ್ತ ಎಲ್ಲರೂ ಕಾಯುತ್ತಿದ್ದೆವು. ಹನ್ನೊಂದು ಗಂಟೆಯಾಯ್ತು. ಅವನು ಬರಲಿಲ್ಲ. ಹನ್ನೆರಡಾಯ್ತು. ಅವನ

ಸುಳಿವಿರಲಿಲ್ಲ. ರಾತ್ರಿ ಆಟಕ್ಕೆ ಸಿನಿಮಾ ನೋಡಲೇನಾದರೂ ಹೋಗಿದ್ದು, ಇನ್ನೂ ಮಲಗಿದ್ದಾನೇನೋ ಎಂದುಕೊಂಡೆವು.

ನನಗೋ ಅರ್ಜೆಂಟ್ ಕೆಲಸವಿತ್ತು. ಹಿಂದಿನ ದಿನ ತಗೆಸಿಕೊಂಡಿದ್ದ ಪಾಸ್‌ಪೋರ್ಟ್ ಅಳತೆಯ ಫೋಟೋಗಳನ್ನು ಸ್ಟೂಡಿಯೋದಿಂದತರಬೇಕಿತ್ತು. ಉಮಾಮಹೇಶ್ವರನ್ ಬಂದರೆ ಅವನಿಂದ ತರಿಸಬೇಕೆಂದು ಕಾಯುತ್ತಿದ್ದೆ. ಆದರೆ ಅವನು ಬಂದಿರಲಿಲ್ಲ. "ಛೇ . ಛೇ....ದರಿದ್ರ ಮನುಷ್ಯ ಬೆಳಿಗ್ಗೆಯಿಂದ ಎಲ್ಲಿ ಹಾಳಾಗಿ ಹೋಗಿದ್ದಾನೋ?! ಫೋಟೋತರದಿದ್ದರೆ ನಾಳೆ ಹೇಗೆ ಅಪ್ಲಿಕೇಶನ್ ಕಳಿಸೋದು?" ಎಂದು ಎಲ್ಲರಿಗೂ ಕೇಳಿಸುವಂತೆ ಗೊಣಗಿಕೊಂಡೆ.

"ನಿಂದು ಅಪ್ಲಿಕೇಶನ್ ಹಾಕೋ ಕೆಲಸ. ಇವತ್ತಲ್ಲದಿದ್ರೆ ನಾಳೆಯಾದ್ರು ಕಳಿಸಬಹುದು. ಸ್ವೆಟರ್ ದಾರ ಮುಗಿದ್ಹೋಗಿದೆ. ನಿನ್ನೆ ಹೇಳಿದಾಗ ಇವತ್ತು ತರ್ತೀನಿ ಅಂತ ಹೇಳಿದ್ದ. ಈಗ ನೋಡಿದ್ರೆ ಅವನೇ ಪತ್ತೆ ಇಲ್ಲ. ವುಲನ್ ಇದ್ದಿದ್ರೆ ಸ್ವೆಟರ್ ಇವತ್ತು ಮುಗಿದಿರುತ್ತಿತ್ತು" ಎಂದು ಅಳುಮುಖಮಾಡಿದಳು ಎರಡನೇ ಅಕ್ಕ ಸುಮತಿ.

"ಹೊಸ ಥಿಯೇಟರಿನಲ್ಲಿ ಚಿರಂಜೀವಿಯ ಸಿನಿಮಾ ಬಂದಿದೆ. ಈತ ಬಂದಿದ್ರೆ ಟಿಕೇಟ್ ತರಿಸಿ ಹೋಗೋಣ ಅಂದ್ಕೊಂಡಿದ್ದೆ" ಎಂದು ಸಿಟ್ಟು ತೋರಿಸಿಕೊಂಡಳು ಸುಗುಣ. ನಾವೆಲ್ಲ ಆ ರೀತಿ ತಲೆಗೊಂದು ಮಾತಾಡುತ್ತಿ ರುವಾಗ ಉಮಾಮಹೇಶ್ವರನ್ ಬಂದ. ಅವನು ಬಾಗಿಲು ದಾಟಿದ್ದನೋ ಇಲ್ಲವೋ ನಾವೆಲ್ಲ ಅವನನ್ನು ಮುತ್ತಿಕೊಂಡೆವು. ಸುಗುಣ ಅವನ ಕೈಯಲ್ಲಿ ದುಡ್ಡು ತುರುಕಿ, "ಹೊಸ ಥಿಯೇಟರ್‌ನಲ್ಲಿ ಮ್ಯಾಟ್ನಿಗೆ ಮೂರು ಟಿಕೆಟ್‌ಬೇಕು ಹೇಗಾದ್ರೂ ಮಾಡಿ ತರೋದು ನಿನ್ನ ಜವಾಬ್ದಾರಿ" ಎಂದಳು.

"ದುಡ್ಡು ಆಮೇಲೆ ಕೊಡ್ತೀನಿ. ತಕ್ಷಣ ಹೋಗಿ ಸ್ವೆಟರ್‌ಗೆ ವುಲನ್ ತಂದ್ಕೊಡು. ರಕ್ತಗೆಂಪು ಬಣ್ಣದ್ದು" ಎಂದು ವಿನಂತಿಸಿಕೊಳ್ಳುವ ಧ್ವನಿಯಲ್ಲಿ ಹೇಳಿದಳು ಸುಮತಿ.

"ಅವರ್ದ್ದೇನೂ ಅಷ್ಟು ಅವಸರದವುಗಳಲ್ಲ. ನನ್ನದು ಅಪ್ಲಿಕೇಶನ್ ವ್ಯವ ಹಾರ. ಫೋಟೋ ಅರ್ಜೆಂಟಾಗಿ ಬೇಕು" ನಾನು ಹೇಳಿದೆ.

ಅವನು ಏನೂ ಮಾತಾಡದೆ ಅಲ್ಲಿಂದ ಹೋಗಲುದ್ಯುಕ್ತನಾದ. ಆಗ ಹಿಂದಿದ್ದ ನಮ್ಮಮ್ಮ ಕರೆದಿದ್ದರಿಂದ ನಿಂತ! ನಮ್ಮಮ್ಮ ಅವನ ಬಳಿಗೆ ಬಂದು, "ಏನು, ಬೆಳಿಗ್ಗೆಯಿಂದ ಬಂದೇ ಇಲ್ಲ. ಏನಾಯ್ತು?" ಎಂದು ಅವನ ಮುಖ ನೋಡಿ ಕಾರಣ ಗ್ರಹಿಸಿದವಳಂತೆ "ಮುಖ ಏಕೆ ಹೀಗಾಗಿದೆ? ಜ್ವರವೆ?" ಎನ್ನುತ್ತ ಕೈಹಿಡಿದು ನೋಡಿದಳು. ತಟಕ್ಕನೆ ಕೈ ಹಿಂತೆಗೆದುಕೊಳ್ಳುತ್ತ,

"ಅಯ್ಯಯ್ಯೋ ಮೈ ಕೆಂಡದಂತೆ ಸುಡ್ತಿದೆ. ಬಾಪ್ಪಾ, ಒಳಗ ಕೂತ್ಕೋ" ಎಂದು ಕರೆದಳು.

"ಪರವಾಗಿಲ್ಲ ಬಿಡಿ, ಮಾಮೂಲಿ ಜ್ವರ, ಕಡಿಮೆಯಾಗಿ ಬಿಡುತ್ತೆ. ಪಾಪ ಸುಗುಣ ಸಿನಿಮಾಗೆ ಹೋಗಬೇಕೆಂದು ತುಂಬಾ ಆಸೆಪಡ್ತಿದಾಳೆ" ಎಂದು ಅವನು ಹೊರಟುಹೋದ.

ನಮ್ಮಕ್ಕನಿಗೆ ಹೇಗನ್ನಿಸಿತೋ, ಏನೋ, ನನಗೆ ಮಾತ್ರ ಅಳು ಬಂದು ಬಿಟ್ಟಿತು. ನಮ್ಮಕ್ಕ ಕೇಳಿದರೆ ತನ್ನ ರಕ್ತವನ್ನೆಲ್ಲ ಧಾರೆಯೆರೆಯಲೂ ಅವನು ಸಿದ್ಧನೆನ್ನುವಂತಿದ್ದ. ಒಂದು ಗಂಟೆಯ ನಂತರ ಅವನು ಬಂದ. ಸುಗುಣಳಿಗೆ ಸಿನಿಮಾ ಟಿಕೆಟ್‌ಗಳು, ಸುಮತಿಗೆ ವುಲನ್ ಉಂಡೆ, ಸನ್ನ ಫೋಟೋಗಳನ್ನೂ ತಂದಿದ್ದ.

ಸುಗುಣ ತಕ್ಷಣವೇ ತಯಾರಾಗಿ ಸಿನಿಮಾಗೆ ಹೊರಟುಹೋದಳು. ಹೋಗುತ್ತ ಅವನತ್ತ ನೋಡಿ, ಟಾಟಾ ಮಾಡಿದಳು. ಅಷ್ಟಕ್ಕೇ ಅವನು ಪುಳಕಗೊಂಡುಬಿಟ್ಟ... ... ಸುಮತಿ ಸ್ವೆಟರ್ ಹೆಣೆಯುವುದರಲ್ಲಿ ಮುಳುಗಿ ಬಿಟ್ಟಳು.

ನಮ್ಮಮ್ಮ ಅವನು ಬೇಡವೆನ್ನುತ್ತಿದ್ದರೂ ಗಂಜಿ ಮಾಡಿಕೊಟ್ಟಳು. ಅದನ್ನು ಕುಡಿದು, ಸ್ವಲ್ಪ ಹೊತ್ತು ಹರಟೆ ಹೊಡೆದು ಹೊರಟುಹೋದ. ಮರುದಿನ ಸಾಯಂಕಾಲ ನಾನೂ, ಸುಗುಣ, ಸುಮತಿ ಸೇರಿ ತಾರಸಿಯ ಮೇಲೆ ಕುಳಿತು ಹೂ ಪೋಣಿಸುತ್ತಿದ್ದಾಗ ಉಮಾ ಮಹೇಶ್ವರನ್‌ನ ವಿಷಯ ಬಂತು. ಸುಗುಣಳ ಮನಸ್ಸಿನಲ್ಲಿರೋ ಉದ್ದೇಶವಾದರೂ ಏನು ಎಂಬುದನ್ನು ತಿಳಿದುಕೊಳ್ಳಬೇಕೆನ್ನುವ ಉದ್ದೇಶದಿಂದ, "ನೀನೆಂದರೆ ಅವನಿಗೆ ತುಂಬಾ ಪ್ರೇಮ. ನೀನೂ ಸಲಿಗೆಯಿಂದಲೇ ಇದ್ದೀಯ. ಮದುವೆ ಯಾವಾಗ" ಎಂದು ಕೇಳಿದೆ.

ಆ ಮಾತಿಗೆ ಸುಗುಣ ಬಿದ್ದು ಬಿದ್ದು ನಕ್ಕಳು ಸ್ವಲ್ಪ ಹೊತ್ತಿಗೆ ನಗುವನ್ನು ತಡೆದುಕೊಂಡು: "ಅವನೊಂದಿಗೆ ನನ್ನ ಮದುವೆಯೆ? ಇನ್ನೊಂದ್ಸಲ ಹೀಗಂದೆ ಅಂದ್ರೆ ನಾಲಿಗೆ ಸೀಳಿ ಬಿಡ್ತೀನಿ. ಓಬೀರಾಯನ ಕಾಲದವನಂತೆ ಕಾಣುವ ಅವನೊಂದಿಗೆ ಪ್ರೇಮವೆ? ನಾನ್‌ಸೆನ್ಸ್. ನನ್ನ ಬಗ್ಗೆ ಏನಂತ ಅಂದ್ಕೊಳ್ತಿದೀಯ? ನಾನಷ್ಟು ಬೆಪ್ಪುತಕ್ಕಡಿಯಂತೆ ಕಂಡು ಬರ್‍ತಿದೀನಾ? ಏನು ನೋಡಿ ಅವನನ್ನು ಮದುವೆಯಾಗಬೇಕು? ಸುಂದರನೆಂದೆ? ವಿದ್ಯಾವಂತನೆಂದೆ? ಆಸ್ತಿ–ಪಾಸ್ತಿ ಸಾಕಷ್ಟಿದೆಯೆಂದೆ? ಅವನಿಗೆ ಏನಿದೆ? ಛೀ, ಛೀ, ಅವನನ್ನು ನೆನೆಸಿಕೊಳ್ಳುತ್ತಿದ್ದರೇ ಮೈಮೇಲೆಲ್ಲ ಮುಳ್ಳೆದ್ದಂತಾಗುತ್ತೆ" ಎಂದಳು.

"ಹಾಗಿದ್ಮೇಲೆ ಅವನ ಮುಂದೆ ಅಷ್ಟೆಲ್ಲ ಒಯ್ಯಾರ ಮಾಡೋದ್ಯಾಕೆ?" ಎಂದು ವ್ಯಂಗ್ಯವಾಗಿ ಕೇಳಿದಳು ಸುಮತಿ.

"ನೀವೆಂಥ ದಡ್ಡು ಹುಡುಗಿಗಳು......." ಎನ್ನುವಂತೆ ನಮ್ಮತ್ತ ನೋಡಿ "ಅದೆಲ್ಲ ಬರೀ ನಟನೆ. ಅವನು ನಮ್ಮ ಮನೆಗೆ ಬರುತ್ತಿರಬೇಕೆಂದರೆ ನಾನು ಅಷ್ಟಾದರೂ ನಟಿಸಬೇಕು. ನಾಯಿಯೂ ಸಹ ರೊಟ್ಟಿ ಹಾಕಿದರೇನೇ ನಮ್ಮ ಕಾಲ ಬಳಿ ಸುತ್ತಾಡೋದು. ನಾನು ಅಷ್ಟು ಸಲಿಗೆ ನಟಿಸದಿದ್ದರೆ ಅವನು ನಮ್ಮ ಮನೆಗೆ ಬರೋದಿಲ್ಲ. ಅವನು ಬರದಿದ್ದರೆ ನಮಗೆ ಎಷ್ಟೆಲ್ಲ ಅವಸ್ಥೆಯಾಗುತ್ತೆ ಅನ್ನೋದು ನಿನ್ಗೆ ಪ್ರತ್ಯಕ್ಷವಾಗಿ ಗೊತ್ತಾಯ್ತಲ್ಲ" ಎಂದಳು.

ಅವಳು ತನ್ನ ನೈಜ ಮನೋಭಾವನೆಯನ್ನು ಬಿಚ್ಚಿ ಹೇಳಿದುದನ್ನು ಕೇಳಿ ನಾವು ಬಾಯಿ ತೆರೆದು ಕುಳಿತೆವು. ತನ್ನನ್ನು ಪ್ರೇಮಿಸುತ್ತಿರುವಳೆಂದು ಕುರುಡಾಗಿ ನಂಬಿ, ಕನಸು ಕಾಣುತ್ತ ನಮ್ಮ ಮನೆಗೆ ಗುಲಾಮನಾಗಿ ಬಿಟ್ಟ ಉಮಾಮಹೇಶ್ವರ ನನ್ನನೆನೆಸಿಕೊಳ್ಳುತ್ತಿದ್ದಂತೆ ಮನಸ್ಸಿಗೆನೋವುಂಟಾಯ್ತು. ಅವನೂ ನಿಜ ಸ್ಥಿತಿಯನ್ನು ತಿಳಿಸಬೇಕೆಂದುಕೊಂಡೆನಾದರೂ ಹೇಳಲು ನನ್ನಿಂದಾಗಲಿಲ್ಲ. ಗಂಡು ದಿಕ್ಕಿಲ್ಲದ ನಮ್ಮ ಕುಟುಂಬಕ್ಕೆ ಅವನ ಅಗತ್ಯ ಬಹಳಷ್ಟಿತ್ತು.

ಆ ನಂತರ ಮೂರು ತಿಂಗಳಿಗಿರಬೇಕು. ಒಂದು ದಿನ ನಾನೂ, ಸುಮತಿ, ನಮ್ಮಮ್ಮ, ಉಮಾ ಮಹೇಶ್ವರನ್ ವರಾಂಡದಲ್ಲಿ ಕುಳಿತುಕೊಂಡು ಮಾತಾಡುತ್ತಿದೆವು. ಸುಗುಣ ಎಲ್ಲಿಗೋ ಹೋಗಿದ್ದಳು. ಆಗ ಸಮಯ ಹನ್ನೆರಡಾಗಿತ್ತು. ಚಳಿಗಾಲದ ಸೂರ್ಯನೆತ್ತಿಯ ಮೇಲೆ ಬಂದಿದ್ದ. ಗಾಳಿ ಜೋರಾಗಿ ಬೀಸುತ್ತಿದ್ದುದರಿಂದ ಬಿಸಿಲಿನ ಝಳ ತಾಕುತ್ತಿರಲಿಲ್ಲ.

ಅಷ್ಟರಲ್ಲಿ ನಮ್ಮ ಮನೆಯ ಮುಂದೆ ಕಾರೊಂದು ಬಂದು ನಿಂತಿತು. ಯಾರು ಬಂದಿರಬಹುದಪ್ಪಾ ಎಂದು ನಾವು ಉಸಿರು ಬಿಗಿಹಿಡಿದು ನೋಡತೊಡಗಿದೆವು. ಮೊದಲು ಸುಗುಣ ಇಳಿದಳು. ಬಿಳಿ ನೂಲಿನ ಸೀರೆ, ಅದೇ ಬಟ್ಟೆಯಲ್ಲಿ ಹೊಲಿಸಿದ ಕುಪ್ಪಸ ಧರಿಸಿದ್ದ ಸುಗುಣ ತುಂಬಾ ಸುಂದರವಾಗಿ ಕಾಣುತ್ತಿದ್ದಳು. ಕತ್ತಿನಲ್ಲಿದ್ದ ಹೂಮಾಲೆ ನೋಡುತ್ತಿದ್ದಂತೆಯೇ ಉಮಾನನ್ನು ಬಿಟ್ಟು ನಮಗೆಲ್ಲರಿಗೂ ಸೂಕ್ಷ್ಮವಾಗಿ ಅರ್ಥವಾಯ್ತು.

ನಮ್ಮಕ್ಕನನ್ನು ನೋಡುತ್ತಲೇ ಉಮಾಮಹೇಶ್ವರನ್ 'ಸುಗುಣ ತಿರುತ್ತಣಿ ಸುಬ್ರಹ್ಮಣ್ಯ ಸ್ವಾಮಿಗೆ ಹರಕೆ ಹೊತ್ತಿದ್ದಾಳಾ?! ಮತ್ತೆ ನನಗೆ ನೀವು ಹೇಳಲೇಇಲ್ಲವಲ್ಲ........'ಎಂದು ನಮ್ಮತ್ತ ತಿರುಗಿ ಅಮಾಯಕನಾಗಿ ಕೇಳಿದ.

ಹರಕೆ ಹೊರುವಾಗ ಹೂಮಾಲೆ ಹಾಕಿಕೊಳ್ಳುತ್ತಾರಾದ್ದರಿಂದ ಅವನು ಆ ರೀತಿ ಅರ್ಥಮಾಡಿಕೊಂಡಿದ್ದ.

ನಾವು ಉತ್ತರ ಹೇಳದೆ ಅತ್ತಲೇ ನೋಡುತ್ತಿದ್ದೆವು. ನಮ್ಮಕ್ಕನ ಹಿಂದೆಯೇ ಮತ್ತೊಬ್ಬ ಯುವಕ ಇಳಿದ. ಬಿಳಿ ಬಟ್ಟೆಗಳಲ್ಲಿ, ಕತ್ತಿನಲ್ಲಿ ಹೂಮಾಲೆಗಳನ್ನು ಹಾಕಿಕೊಂಡು, ನಗು ಮುಖದಿಂದ ನಮ್ಮಕ್ಕನ ಕಿರಿಬೆರಳು ಹಿಡಿದುಕೊಂಡು ಬರುತ್ತಿದ್ದ ಅವನನ್ನು ನೋಡಿ ಏನು ನಡೆದಿದೆ ಎನ್ನುವುದು ಉಮಾಮಹೇಶ್ವರನ್‌ನಿಗೆ ಅರ್ಥವಾಯ್ತು. ಅವರತ್ತ ಬಿಡುಗಂಗಳನ್ನು ಬಿಟ್ಟು, ಸೆಡೆತುಕೊಂಡು ನೋಡುತ್ತಿದ್ದ ಅವನು ದುಬ್ಬನೆ ಕೆಳಗೆ ಬಿದ್ದುಬಿಟ್ಟ. ನಮ್ಮಮ್ಮ ಗಾಬರಿಗೊಂಡಳು. ನಮಗೂ ಭಯವಾಯ್ತು, ಸುಗುಣ ಬೇರೊಬ್ಬನನ್ನ ಮದುವೆ ಮಾಡಿಕೊಂಡಳೆಂಬ ಆಘಾತದಿಂದ ಅವನು ಬಿದ್ದುಬಿಟ್ಟಿದ್ದ. 'ಸತ್ತುಗಿತ್ತು ಹೋದನೇನೋ . . ...' ಎಂದುಕೊಳ್ಳುತ್ತ ನಾನು ಅವನ ಬಳಿಗೆ ಹೋಗಿ ಮೂಗಿನ ಬಳಿ ಬೆರಳಿಟ್ಟು ನೋಡಿದೆ. ಶ್ವಾಸ ಆಡುತ್ತಿತ್ತು. 'ಅಬ್ಬಾ!' ಎಂದುಕೊಂಡೆ.

ನಮ್ಮಕ್ಕ, ಮದುಮಗ ಇಬ್ಬರೂ ಪರಸ್ಪರ ಮುಖ ನೋಡಿಕೊಂಡು ನಕ್ಕರು. ಉಮಾಮಹೇಶ್ವರನ್‌ನ ಹುಚ್ಚು ಪ್ರೇಮದ ಬಗ್ಗೆ ಅವಳು ಅವನಿಗೆ ಹೇಳಿದ್ದಂತಿತ್ತು. ಹೆಚ್ಚು ಗಾಬರಿಗೊಂಡವಳೆಂದರೆ ನಮ್ಮಮ್ಮ. ಅವನ ಮುಖದ ಮೇಲೆ ನೀರು ಚಿಮುಕಿಸಿ, ಬೀಸಣಿಗೆಯಿಂದ ಗಾಳಿಹಾಕತೊಡಗಿದಳು. ಅವನು ಮೆಲ್ಲಗೆ ಕಣ್ಣು ತೆರೆದ. ಏನು ನಡೆಯಿತೆಂಬುದು ನೆನಪಾಗಿ ತಟಕ್ಕನೆ ನಾಚಿಕೆಯಿಂದ, ಅವಮಾನದಿಂದ, ನೋವಿನಿಂದ ತಲೆ ತಗ್ಗಿಸಿಕೊಂಡ. ನಂತರ ಸುಗುಣಳತ್ತ ನೋಡಿ, ಕ್ಷೀಣ ನಗುವೊಂದನ್ನು ಬೀರಿ ಮೌನವಾಗಿ ಹೊರಟು ಹೋದ. ನನಗೇಕೋ ಬಹುಶಃ ಅವನು ಇನ್ನೆಂದೂ ನಮ್ಮ ಮನೆಗೆಬರುವುದಿಲ್ಲವೆನಿಸಿತು. ನಮ್ಮಕ್ಕ ಮನೆಯೊಳಗೆ ಬಂದು ಭಾವನನ್ನು ಪರಿಚಯ ಮಾಡಿಸಿದಳು. ಅವನ ಹೆಸರು ಪ್ರಕಾಶ್ ನಮ್ಮ ಊರಿನ ಬ್ಯಾಂಕಿನಲ್ಲಿ ಕ್ಲರ್ಕಾಗಿದ್ದ. ಕಳೆದ ಕೆಲವು ದಿನಗಳಿಂದ ಅವರಿಬ್ಬರ ನಡುವೆ ಪ್ರೇಮ ಸಾಗಿತ್ತು. ಆ ದಿನ ರಿಜಿಸ್ಟರ್ ಆಫೀಸಿನಲ್ಲಿ ಮದುವೆ ಮಾಡಿಕೊಂಡು ಮನೆಗೆ ಬಂದಿದ್ದರು. ಆ ಸುದ್ದಿಯಿಂದ ನಮ್ಮಮ್ಮನ ಸಂತೋಷಕ್ಕೆ ಪಾರವಿಲ್ಲದಂತಾಗಿತ್ತು. ಹೇಗೋ, ಹಿರಿ ಮಗಳ ಮದುವೆಯಾಯ್ತಲ್ಲ ಎನ್ನುವ ಸಂತೋಷವೇ ಅವಳಿಗೆ ಬೆಟ್ಟದಷ್ಟಾಗಿತ್ತು.

ನಂತರ ಮೂರು ದಿನಗಳ ಕಾಲ ನವದಂಪತಿಗಳು ಅಲ್ಲೇ ಉಳಿದುಕೊಂಡರು. ನಮ್ಮ ತಂದೆಯನ್ನೂ ಕರೆಸಲಾಯ್ತು. ಆತ ಬಂದು, ಹಿರಿ ಮಗಳ ಮದುವೆಯಾದುದಕ್ಕೆ ಸಂತೋಷಪಟ್ಟು, ಇಬ್ಬರಿಗೂ ಆಶೀರ್ವಾದ ನೀಡಿದ

ಮೂರು ದಿನಗಳ ನಂತರ ಪ್ರಕಾಶ್ ನಮ್ಮಕ್ಕನನ್ನು ಕರೆದುಕೊಂಡು ತನ್ನ ತಂದೆ ತಾಯಿಗಳ ಆಶೀರ್ವಾದ ಪಡೆದು ಬರುವುದಾಗಿ ಹೊರಟು ನಿಂತ. ನಮ ತಂದೆಯೂ ಅವರೊಂದಿಗೆ ಹೊರಟು ಅತ್ತಲಿಂದಲೇ ಮಹಾರಾಷ್ಟ್ರಕ್ಕೆ ಹೋಗು ವುದಾಗಿ ಹೇಳಿದ. ಅವರು ಹೊರಟು ಹೋದ ನಂತರ ನಾನು, ಸುಮತಿ, ನಮ್ಮಮ್ಮ ಉಳಿದುಕೊಂಡೆವು.

ನಾನು ಊಹಿಸಿದಂತೆ ಉಮಾಮಹೇಶ್ವರನ್ ನಮ್ಮ ಮನೆಗೆ ಬರಲಿಲ್ಲ. ನಮ್ಮಕ್ಕ ಹೇಳಿದ್ದಂತೆ ಗಂಡು ದಿಕ್ಕಿಲ್ಲದ ನಮ್ಮ ಮನೆಗೆ ಅವನ ಅಗತ್ಯ ಬಹಳಷ್ಟಿತ್ತು. ಆದರೇನು ಮಾಡುವುದು? ಅವನು ಬರುವುದನ್ನು ಬಿಟ್ಟು ಬಿಟ್ಟದ್ದ.

ಒಂದು ದಿನ ಸಾಯಂಕಾಲ ನಾನೂ, ಸುಮತಿ ಮಾರ್ಕೆಟ್ಟಿಗೆ ಹೋದೆವು ಮನೆಗೆ ಬೇಕಾದ ಸಾಮಾನುಗಳನ್ನು ಕೊಳ್ಳಲು ಅತ್ತಿತ್ತ ತಿರುಗಾಡುತ್ತಿರು ವಾಗ ಉಮಾಮಹೇಶ್ವರನ್ ಕಾಣಿಸಿದ. ನೋಡಿದರೂ ಗುರುತು ಹಿಡಿಯಲಾರ ದಷ್ಟು ಇಳಿದು ಹೋಗಿದ್ದ. ಮೊದಲೇ ತೆಳ್ಳಗಿದ್ದ ಅವನು ಈಗಂತೂ ಮತ್ತಷ್ಟು ಇಳಿದಿದ್ದ. ಅಳುತ್ತಿದ್ದುದರಿಂದಲೋ, ನಿದ್ದೆ ಇಲ್ಲದಿರುವುದರಿಂದಲೋ ಅವನ ಕಣ್ಣುಗಳು ಕೆಂಪಗೆ ಕೆಂಡದುಂಡೆಗಳಂತಾಗಿ ಬಿಟ್ಟದ್ದವು. ಬಹಳಷ್ಟು ಬೆಳೆದಿದ್ದ ಗಡ್ಡ ವಿಷಾದದಿಂದ ಇಳಿದು ಹೋಗಿದ್ದ ಮುಖವನ್ನು ಮರೆಸಲು ಸಹಾಯ ವಾಗುವಂತಿತ್ತು. ಜ್ವರ ಬಂದಿದ್ದಾಗಲೂ ಅವನು ಆ ರೀತಿಯಾಗಿರಲಿಲ್ಲ.

ನಾನು ಸುಮತಿ ಅವನನ್ನು ನೋಡುತ್ತಿದ್ದಂತೆಯೇ ಮತ್ತೊಂದು ಯೋಚನೆಗೆಡೆಕೊಡದೆ, ಮಾತಾಡಿಸಿದೆವು. ಅವನೂ ಮಾತಾಡಿದ. ಮೈಗೆ ಚೆನ್ನಾಗಿಲ್ಲವೆಂದು ಹೇಳಿದ. ಮನೆಗೆ ಬರಬೇಕೆಂದೂ, ಆ ಸಾಯಂಕಾಲ ನಾವಿ ಬ್ಬರೂ ಕಾಯುತ್ತಿರುತ್ತೇವೆಂದು ಒತ್ತಿ ಒತ್ತಿ ಹೇಳಿದೆವು.

ಅವನು ಹೊರಟು ಹೋದ.

ನಾವಿಬ್ಬರೂ ತಿರುಗಿ ಮನೆಗೆ ಬಂದ ನಂತರ. ಉಮಾಮಹೇಶ್ವರನ್ ಸಿಕ್ಕಿದ್ದನೆಂದೂ, ಸಾಯಂಕಾಲ ಮನೆಗೆಬರುತ್ತಾನೆಂದೂ ಹೇಳಿದೆವು. ಅಮ್ಮ ಸಂತೋಷಪಟ್ಟಳು. ಅವನು ಬರುವುದಿಲ್ಲವೇನೋ ಎನ್ನುವ ಸಂದೇಹನಮ್ಮನ್ನು ಕಾಡುತ್ತಿತ್ತು. ವರಾಂಡದಲ್ಲಿ ಕುಳಿತು ಬೀದಿಯತ್ತಲೇ ದೃಷ್ಟಿ ನೆಟ್ಟದ್ದವು! ಅಮ್ಮ ಒಳಗೆಲ್ಲೋ ಕೆಲಸ ಮಾಡಿಕೊಳ್ಳುತ್ತಿದ್ದಳು.

ಕತ್ತಲಾಗುತ್ತಿದೆಯೆನ್ನುವಾಗ ಉಮಾಮಹೇಶ್ವರನ್ ಬಂದ. ನೀಟಾಗಿ ಗಡ್ಡ ಹೆರೆದುಕೊಂಡು, ಪುನರ್ಜನ್ಮ ಎತ್ತಿ ಮತ್ತೊಂದು ಹೊಸ ಲೋಕಕ್ಕೆ ಬಂದಿರುವಂತೆ, ದಾಕ್ಷಿಣ್ಯದಿಂದ ಕುಳಿತುಕೊಂಡ ಅವನ ರೀತಿ, ಅವನ ಮಾತು

ಗಳನ್ನು ಕೇಳುತ್ತಿದ್ದರೆ ನನಗೆ ಮರುಕವಾಯ್ತು. ಅವನು ಅಷ್ಟು ದಿನವೂ ನಮ್ಮ ಕರೆಗೋಸ್ಕರವೇ ಕಾದುಕುಳಿತಿದ್ದಂತೆನಿಸಿತು. ಪಾಪ, ದೇಶವಲ್ಲದ ದೇಶ ದಲ್ಲಿದ್ದ ತಂದೆ-ತಾಯಿ, ಒಡಹುಟ್ಟಿದವರು ಎಲ್ಲೋ ದೂರದಲ್ಲಿದ್ದರು. ಇಲ್ಲಿ ಯಾರೂ ಸ್ನೇಹಿತರಿದ್ದಿಲ್ಲ! ಒಂಟಿಯಾಗಿ ಏನು ಮಾಡುವುದಿತ್ತು? ಅದರಲ್ಲೂ ಮನಸ್ಸು ವಯಸ್ಸು ಹೆಣ್ಣಿನ ಜೊತೆಗೋಸ್ಕರ ಮಿಡಿಯುತ್ತಿರಬೇಕಾದರೆ ಅಭಿಮಾನವನ್ನು ಕೊಂದುಕೊಂಡು ಮತ್ತೆ ನಮ್ಮ ಮನೆಗೆ ಬಂದಿರುವಂತೆ ಅರ್ಥವಾಯ್ತು.

ನಮ್ಮಮ್ಮ ಏನೂ ಆಗದಿರುವಂತೆಯೇ ಯಥಾಪ್ರಕಾರ ಮಾತಾಡಿ ಕಾಫಿ ತಂದುಕೊಟ್ಟಳು. ಆ ರೀತಿ ಅವನು ಮತ್ತೆ ನಮ್ಮ ಮನೆಗೆ ಬರ ತೊಡಗಿದ.

ಕಾಲ ಕಳೆದಂತೆಲ್ಲ ಅವನು ಸುಗುಣಳನ್ನು ಪೂರ್ತಿಯಾಗಿ ಮರೆತುಬಿಟ್ಟ. ಮನುಷ್ಯರು ದೂರವಾಗಿದ್ದರೆ ಮನಸ್ಸು ಹತ್ತಿರವಾಗುತ್ತವೆನ್ನುವುದು ಶುದ್ಧ ಸುಳ್ಳು. ಒಂದು ಸಲ ಸಂಪರ್ಕ ಕಡಿದುಹೋದರೆ ತಿರುಗಿ ಕೂಡಿಸಿಕೊಳ್ಳುವುದು ದುಸ್ತರವೇ ಪ್ರೇಮವಾಗಲಿ, ಅಭಿಮಾನವಾಗಲಿ, ಕೊನೆಗೆ ಸೆಕ್ಸ್ ಆದರೂ ಕೂಡ ಅಷ್ಟೇ. ಮನುಷ್ಯನ ಜೀವನದಲ್ಲಿ ಶಾಶ್ವತ ಮೌಲ್ಯಗಳೆನ್ನುವವು ಏನೂ ಇಲ್ಲ ಅದೇ ರೀತಿ ಶಾಶ್ವತ ಬಂಧನಗಳೂ ಇಲ್ಲ.

ಉಮಾಮಹೇಶ್ವರನ್ ಕಾಲಕ್ರಮೇಣ ಸುಮತಿಯನ್ನು ಇಷ್ಟಪಡತೊಡ ಗಿದ. ಎಲ್ಲೋ ಇದ್ದ ಸುಗುಣಳನ್ನು ನೆನೆಸಿಕೊಳ್ಳುತ್ತ, ಕೋಣೆಯಲ್ಲಿ ಕೊರ ಗುತ್ತ ಮಲಗನಾರನಲ್ಲ, ಅದರಲ್ಲೂ ಅವಳಿಗೆ ಮದುವೆ ಬೇರೆ ಆಗಿತ್ತು. ಕಣ್ಣೆದು ರಿಗೆ ಕಂಡು ಬರುತ್ತಿದ್ದ ಸುಮತಿಯ ಮೇಲೆ ಮಮಕಾರನ್ನು ಬೆಳೆಸಿಕೊಂಡ. ಅವಳ ಕಡೆಗಣ್ಣೋಟಕ್ಕೋಸ್ಕರ ಹಂಬಲಿಸತೊಡಗಿದ. ಅವಳ ಮಾತು ಕೇಳಲು ಹಾತೊರೆಯುತ್ತಿದ್ದ. ಅವಳ ಮೇಲಿನ ಬಯಕೆಯಿಂದ ಒಳಗೊಳಗೇ ಕುದಿಯು ತ್ತಿದ್ದ. ಆದರೆ ಅವನ್ನೆಲ್ಲ ಹೊರಹಾಕುವ ಧೈರ್ಯ ಅವನಿಗಿರಲಿಲ್ಲ. ಇತರ ರನ್ನು ಆಕರ್ಷಿಸಲು ಯಾವ ರೀತಿಯಲ್ಲೂ ಅವನು ಪ್ರಯತ್ನಿಸುತ್ತಿದ್ದಿಲ್ಲ. ಮೂಕನಾಗಿ ಆರಾಧಿಸುವುದರ ಹೊರತಾಗಿ ಅವನಲ್ಲಿ ಬೇರೊಂದು ಗುಣವಿರಲಿಲ್ಲ.

ಆದಕ್ಕೇ ಸುಮತಿಯಿಂದಲೂ ಅವನನ್ನು ಪ್ರೇಮಿಸಲಾಗಲಿಲ್ಲ, ನಮ್ಮ ಎದುರು ಮನೆಯಲ್ಲಿ ಬಾಡಿಗೆಗೆ ಬಂದಿಳಿದ ರಘು ಎನ್ನುವಸಿನಿಮಾ ಆಪರೇಟರ್ ನನ್ನು ಪ್ರೇಮಿಸಿದಳು. ಅತ್ತಲಿಂದ ಅನುಕೂಲಕರ ಪ್ರತಿಕ್ರಿಯೆ ಬಂದುದರಿಂದ. ಅವಳು ಉಮಾಮಹೇಶ್ವರನ್ ನನ್ನು ಪೂರ್ತಿಯಾಗಿ ಗಣನೆಗೇ ತಂದುಕೊಳ್ಳಲಿಲ್ಲ.

ಅದು ಸಾಲದೆನ್ನುವಂತೆ ತೀರಾ ನಾಚಿಕೆಗೇಡಿನ ಕೆಲಸಗಳನ್ನು ಮಾಡೆಂದು ಅವನನ್ನು ಪುಸಲಾಯಿಸುತ್ತಿದ್ದಳು. ತನ್ನ ಪ್ರಿಯಕರನಿಗೆ ಅವನ ಮೂಲಕ ಪತ್ರ ಕಳಿಸುವುದು, ಹೇಳಿ ಕಳಿಸುವುದು ಇತ್ಯಾದಿ ಮಾಡುತ್ತಿದ್ದಳು. ಅವನು ಸುಮತಿಯ ಮಾತಿಗೆ ಪ್ರತಿಯಾಡದೆ ಮೌನವಾಗಿ ಅವಳು ಹೇಳಿದ್ದನ್ನೆಲ್ಲ ಮಾಡುತ್ತಿದ್ದ. ಎರಡನೇ ಬಾರಿಯೂ ಪ್ರೇಮದಲ್ಲಿ ವಿಫಲನಾದ್ದರಿಂದ ಅವನು ಪೂರ್ತಿಯಾಗಿ ಬದಲಾಗಿಬಿಟ್ಟ. ತನ್ನನ್ನು ಯಾರೂ ಪ್ರೇಮಿಸರೆನ್ನುವ ನಂಬಿಕೆ ಏರ್ಪಡಿಸಿಕೊಂಡುಬಿಟ್ಟ. ತನ್ನ ಜೀವನ ಹೀಗೆ ನಿಸ್ಸಾರವಾಗಿ ಕಳೆದು ಹೋಗುತ್ತದೆನ್ನುವ ಭಯ ಶಾಶ್ವತವಾಗಿ ಅವನ ಎದೆಯಲ್ಲಿ ಗೂಡು ಕಟ್ಟಿಕೊಂಡು ಬಿಟ್ಟಿತು.

ಬದುಕಿನ ಬಗ್ಗೆ ನಿರ್ಲಿಪ್ತತೆ ಏರ್ಪಟ್ಟರೆ ಜೀವಚ್ಛವವೆಂದೇ ಲೆಕ್ಕ ಅವನೂ ಆ ರೀತಿ ತಯಾರಾದ. ಅದಕ್ಕೇ ಅವನಿಗೆ ಸ್ವಾಭಿಮಾನವಾಗಲಿ, ಅಭಿಜಾತ್ಯವಾಗಲಿ ಏನೂ ಇಲ್ಲದಂತಾದವು. ಈ ಕಾರಣದಿಂದಲೇ ಅವನು ತನ್ನ ಪ್ರೇಯಸಿಯ ಪ್ರೇಮ ಪತ್ರಗಳನ್ನು ಬೇರೊಬ್ಬ ವ್ಯಕ್ತಿಗೆ ಒಯ್ದು ಕೊಡಬಲ್ಲವನಾದ. ಅವರಿಬ್ಬರೂ ಸಿನಿಮಾ ಥಿಯೇಟರಿನಲ್ಲಿ ಅಕ್ಕ-ಪಕ್ಕದಲ್ಲಿ ಕುಳಿತಿದ್ದರೂ ಸಹಿಸಬಲ್ಲವನಾದ.

ಮನಸ್ಸೊಂದೇ, ಅವನ ಶರೀರವೂ ಘಾಸಿಗೊಂಡಿತು. ತೀರಾ ತೆಳ್ಳಗಾಗಿಬಿಟ್ಟ. ಕಣ್ಣುಗಳ ಕೆಳಗೆ ಕಪ್ಪು ವರ್ತುಲಗಳು ಎದ್ದು ಕಾಣತೊಡಗಿದವು. ಶಕ್ತಿಯೆಲ್ಲವೂ ಹ್ರಾಸಗೊಂಡಿದೆಯೆನ್ನುವಂತೆ ಕೆನ್ನೆಗಳು ಗುಳಿಬಿದ್ದವು. ತಲೆಗೂದಲೂ ಅಲ್ಲಲ್ಲಿ ನೆರೆತಿತು. ಆ ಸಮಯದಲ್ಲಿ ಸುಮತಿಗೂ ಮದುವೆಯಾಯ್ತು ರಘುವಿನೊಂದಿಗೆ ತಿರುಪತಿಯಲ್ಲಿ ಸಂಸಾರ ಹೂಡಿದಳು.

ಇನ್ನು ಉಳಿದವಳು ನಾನು.

ಉಮಾಮಹೇಶ್ವರನ್ ನಮ್ಮ ಮನೆಗೆ ಬರುವುದನ್ನು ನಿಲ್ಲಿಸಲಿಲ್ಲ. ಏಕೆಂದರೆ ಬೇರೆ ಗತ್ಯಂತರವಿರಲಿಲ್ಲವಲ್ಲ, ಮೆಲ್ಲಗೆ ನನ್ನನ್ನು ಅಭಿಮಾನಿಸತೊಡಗಿದ. ಸಾಯಂಕಾಲದ ಹೊತ್ತು ಚೆನ್ನಾಗಿ ಅಲಂಕರಿಸಿಕೊಂಡು ಕುರ್ಚಿಯಲ್ಲಿ ಕುಳಿತು ಮಾತಾಡುತ್ತಿರುವ ನನ್ನನ್ನು ರೆಪ್ಪೆ ಮಿಟುಕಿಸುವುದನ್ನೂ ಮರೆತು ನೋಡುತ್ತಿರುತ್ತಿದ್ದ. ಏನಾದರೂ ಮಾಡಲು ಅವಕಾಶ ಕೊಡದಿದ್ದರೂ, ಅಷ್ಟು ಹತ್ತಿರದಿಂದ ನೋಡುವ ಅವಕಾಶವನ್ನಾದರೂ ಕೊಟ್ಟದ್ದಕ್ಕೆ ನನ್ನ ಬಗ್ಗೆ ತುಂಬಾ ಕೃತಜ್ಞತೆ ತೋರಿಸುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ಹಿಂದಿನ ಅನುಭವಗಳು ಅಷ್ಟಕ್ಕೇ ಸಂತೃಪ್ತಿಗೊಳ್ಳುವುದನ್ನು ಅವನಿಗೆ ಕಲಿಸಿದ್ದವು.

ನನ್ನನ್ನೂ ಗಾಢವಾಗಿ ಪ್ರೀತಿಸುವ ಮಟ್ಟ ತಲುಪಿದ. ಆದರೆ ಯಶಸ್ವಿಯಾಗುವುದೆನ್ನುವ ನಂಬಿಕೆ ಪೂರ್ತಿಯಾಗಿ ಇದ್ದಿಲ್ಲವಾದ್ದರಿಂದ ಒಂದಿಷ್ಟೂ ಮುಂದುವರಿಯುತ್ತಿರಲಿಲ್ಲ. ನಾನೂ ಅವನಿಗೆ ಆ ಅವಕಾಶಕೊಡಲಿಲ್ಲ. ಅವನೆಂದರೆ ಮರುಕ ಉಂಟಾಗುತ್ತಿತ್ತೇ ಹೊರತು ಪ್ರೀತಿ ಉಂಟಾಗುತ್ತಿರಲಿಲ್ಲ. ಆದರೆ ಅವನ ಕನಸುಗಳನ್ನು ಭಗ್ನಗೊಳಿಸಲಿಷ್ಟವಿಲ್ಲದೆ ನಾನೆಂದೂ ನನ್ನ ಮನಸ್ಸಿನ ಭಾವನೆಯನ್ನು ಹೊರಗೆ ವ್ಯಕ್ತಪಡಿಸಲಿಲ್ಲ.

ತನ್ನ ಮೇಲೆ ತನಗೇ ನಂಬಿಕೆ ಕಳೆದುಹೋದ ವ್ಯಕ್ತಿ ಯಾವ ಕೆಲಸವನ್ನೂ ಮಾಡಲಾರ ಉಮಾಮಹೇಶ್ವರನ್‌ನ ಸದ್ಯದ ಪರಿಸ್ಥಿತಿಯೂ ಅದೇ ಆಗಿತ್ತು. ನಮ್ಮಮ್ಮ ಹೇಳಿದಾಗ ಸುಗುಣಳ ಕ್ಷೇಮ ಸಮಾಚಾರ ವಿಚಾರಿಸುವ ಪತ್ರಗಳನ್ನು ಬರೆಯುವುದರಿಂದಹಿಡಿದು, ಸುಮತಿ ಗರ್ಭವತಿಯಾಗಿರುವಳೆಂದು ಹೇಳಲು ಬಂದ ವ್ಯಕ್ತಿಯನ್ನು ಬಸ್ಸು ಹತ್ತಿಸಿ ಬರುವವರೆಗೆ ಎಲ್ಲವನ್ನೂ ಮಾಡುತ್ತಿದ್ದ. ನಾನೂ ಕೆಲವೊಂದು ಕೆಲಸಗಳನ್ನು ಹೇಳುತ್ತಿದ್ದೆ. ನಮ್ಮಕ್ಕ ಸುಗುಣಳಿಗೆ ಯಾವ ರೀತಿ ಪ್ರೈಮರಿತು ಕೆಲಸ ಮಾಡುತ್ತಿದ್ದನೋ ಅದೇ ರೀತಿ ನಾನು ಹೇಳುವ ಕೆಲಸಗಳನ್ನೂ ಮಾಡುತ್ತಿದ್ದ. ಪ್ರೇಮದಲ್ಲಿ ವಿಫಲಗೊಳ್ಳುವುದು ಅವನಿಗೆ ರೂಢಿಯಾಗಿ ಹೋಗಿತ್ತು.

ನನಗರಿವಿಲ್ಲದಂತೆಯೇ ನಾನೂ ಸುಗುಣ ಬಳಸಿದ ತಂತ್ರವನ್ನೇ ಅವನ ಮೇಲೆ ಉಪಯೋಗಿಸುತ್ತಿದ್ದೆ. ನಾನು ಅವನನ್ನು ಪ್ರೀತಿಸುತ್ತಿಲ್ಲವೆನ್ನುವ ವಿಷಯ ಅವನ ಗ್ರಹಿಕೆಗೆ ಬಾರದಂತೆ ಆಗಾಗ ಮುಗುಳ್ನಗುವುದು, ಎದೆ ತಾಕುವಂತೆ ನಿಲ್ಲುವುದು, ಕೈ ತಗುಲಿಸುವುದು, ಅವನ ಕಣ್ಣಿಗೆಬೀಳುವಂತೆಯೇ ಬಟ್ಟೆ ಬದಲಾಯಿಸುವುದು ಮಾಡುತ್ತಿದ್ದೆ. ಅಂತಹ ಸಂದರ್ಭದಲ್ಲಿ ಅವನು ತವಕದಿಂದ ನೋಡುವುದು, ನನ್ನ ಪ್ರೇಮ, ಅಭಿಮಾನಕ್ಕೋಸ್ಕರ ಹಾತೊರೆಯುವುದು ಇದೆಲ್ಲಾ ಗಮ್ಮತ್ತೆನಿಸುತ್ತಿತ್ತು. ನಮ್ಮ ಸೌಂದರ್ಯ ಇನ್ನೊಬ್ಬ ವ್ಯಕ್ತಿಯನ್ನು ಹುಚ್ಚನನ್ನಾಗಿ ಮಾಡುತ್ತಿದ್ದರೆ ಉಂಟಾಗುವ ರಾಕ್ಷಸಾನಂದ ತುಂಬಾ ಮತ್ತನ್ನುಂಟುಮಾಡುತ್ತಿತ್ತು.

ಮೊದಲು ನನ್ನ ದೊಡ್ಡಕ್ಕನ ಪ್ರೇಮಕ್ಕೋಸ್ಕರ, ಆ ನಂತರ ಎರಡನೇ ಅಕ್ಕನಿಗೋಸ್ಕರ, ಆಮೇಲೆ ನನಗೋಸ್ಕರ ಅವನು ನಮ್ಮ ಮನೆಯಲ್ಲಿ ಸಂಬಳ ತೆಗೆದುಕೊಳ್ಳದ ಕೆಲಸದಾಳಾಗಿಬಿಟ್ಟ. ಒಂದು ದಿನ ನಮ್ಮ ಮನೆಗೆ ಗಂಡಿನ ಕಡೆಯವರೊಬ್ಬರು ನೋಡಲು ಬಂದದ್ದರಿಂದ ನಾನೂ ತನಗೆ ದಕ್ಕುವುದಿಲ್ಲವೆಂಬುದು ಅವನಿಗೆ ಸ್ಪಷ್ಟವಾಗಿ ಅರ್ಥವಾಯ್ತು.

ಬಂದ ಗಂಡಿನ ಕಡೆಯವರು ನಮ್ಮ ಊರಿಗೆ ಪಕ್ಕದಲ್ಲಿರುವ ಹಳ್ಳಿಯೂರಿನವರೇ ಗಂಡು ಯೂನಿವರ್ಸಿಟಿಯಲ್ಲಿ ಓದುತ್ತಿದ್ದ. ನನ್ನನ್ನು ನೋಡಿ ಮೆಚ್ಚಿ, ನನ್ನನ್ನು ಬಿಟ್ಟು ಇನ್ನ್ಯಾರನ್ನೂ ಮದುವೆ ಮಾಡಿಕೊಳ್ಳುವುದಿಲ್ಲವೆಂದು ಹಠ ಹಿಡಿದದ್ದರಿಂದ ಗಂಡಿನ ತಂದೆ-ತಾಯಿ ನನ್ನನ್ನು ನೋಡಲು ಬಂದಿದ್ದರು ನೋಡಲು ಸಾಕಷ್ಟು ಚೆನ್ನಾಗೇ ಇದ್ದ ನಾನು ಅವರಿಗೆ ಒಪ್ಪಿಗೆಯಾದೆ. ವರ ದಕ್ಷಿಣೆಯ ಮಾತೆತ್ತದೆ ನನ್ನನ್ನು ತಮ್ಮ ಸೊಸೆಯನ್ನಾಗಿ ಮಾಡಿಕೊಳ್ಳಲು ಒಪ್ಪಿಕೊಂಡರು. ನಮ್ಮ ತಾಯಿಯ ಆನಂದಕ್ಕೆ ಪಾರವಿಲ್ಲದಂತಾಯ್ತು. ಈ ರೀತಿ ಗಂಡಿನ ಕಡೆಯವರು ಬಂದು ನೋಡಿಕೊಂಡು ಹೋಗಿದ್ದಾರೆಂದೂ ವರ ದಕ್ಷಿಣೆ ವರೋಪಚಾರ ಏನೂ ಇಲ್ಲದೆ ಮದುವೆ ಖರ್ಚನ್ನೂ ತಾವೇ ವಹಿಸಿಕೊಂಡು ನನ್ನನ್ನು ಮನೆ ತುಂಬಿಸಿಕೊಳ್ಳಲು ಗಂಡಿನ ಕಡೆಯವರು ಸಿದ್ಧರಿರುವರೆಂದೂ, ಒಂದು ಸಲ ಬಂದು ಹೋಗಬೇಕೆಂದೂ ಅಪ್ಪನಿಗೆ ಪತ್ರ ಹಾಕಿದಳು. ಉಮಾಮಹೇಶ್ವರನ್‌ನೇ ಆ ಪತ್ರವನ್ನು ಬರೆದು, ಅಂಚೆಗೆ ಹಾಕಿದ್ದು. ಆ ಸಂದರ್ಭದಲ್ಲಿ ಅವನು ನನ್ನತ್ತ ನೋಡಿದ ನೋಟ ಹೇಗಿತ್ತೆಂದರೆ ಮೈಯಿಲ್ಲ ಇರಿದ ಶತ್ರುಗಳು ಕೊನೆಗೆ ಕೊಲ್ಲುತ್ತೇವೆಂದು ಹೇಳಿದಾಗ ಸೈನಿಕನೊಬ್ಬ ಹೇಗೆ ನೋಡುತ್ತಾನೋ ಹಾಗೆ, ನಾನು ತಟ್ಟನೆ ತಲೆತಗ್ಗಿಸಿಕೊಂಡೆ.

ತಿರುಚಾನೂರಿನ ಛತ್ರದಲ್ಲಿ ನನ್ನ ಮದುವೆ ನಡೆದುಹೋಯ್ತು. ತಮಾಷೆ ಏನೆಂದರೆ ಹೆಣ್ಣಿನ ಕಡೆಯವರ ಎಲ್ಲ ಜವಾಬ್ದಾರಿಗಳನ್ನೂ ಉಮಾಮಹೇಶ್ವರನೇ ಹೊತ್ತುಕೊಂಡಿದ್ದ. ಲಗ್ನಪತ್ರಿಕೆ ಪ್ರಿಂಟಿಂಗಿಗೆ ಕೊಡುವುದು, ಅವುಗಳನ್ನು ತಂದು ವಿಳಾಸ ಬರೆದು ಪೋಸ್ಟ್ ಮಾಡುವುದು, ಮನೆಗೆ ಸುಣ್ಣಬಣ್ಣ ಮಾಡಿಸುವುದು ಒಂದೇನಾ ಎಲ್ಲವೂ ಅವನ ಉಸ್ತುವಾರಿಯಲ್ಲೇ ನಡೆದವು. ಮದುವೆ ಮುಗಿದ ಮರುದಿನವೇ ಅರ್ಜೆಂಟ್ ಕೆಲಸವಿದೆಯೆಂದು ನನ್ನ ತಂದೆ ಹೊರಟುಹೋದರು. ಮೂರನೇ ದಿನ ಸುಮತಿಸುಗುಣ ತಮ್ಮ ತಮ್ಮ ಗಂಡಂದಿರೊಂದಿಗೆ ಹೊರಟರು. ಅದೇ ದಿನ ನಾನೂ ಗಂಡನ ಮನೆಗೆ ಹೋದೆ. ಉಳಿದದ್ದು ನಮ್ಮಮ್ಮ ಒಬ್ಬಳೇ.

ವಾರದ ನಂತರ, ನಾನೂ, ನನ್ನ ಗಂಡ ನಮ್ಮ ಮನೆಗೆ ಹೊರಟೆವು. ಅವರು ತಿರುಪತಿಯಲ್ಲಿ ಏನೋ ಕೆಲಸವಿದೆಯೆಂದೂ, ಸಾಯಂಕಾಲ ತಿರುಗಿ ಬರುವುದಾಗಿ ಹೇಳಿ ಬಸ್ಸಿನಲ್ಲಿ ನೇರವಾಗಿ ಹೊರಟು ಹೋದರು. ನಾನು ನಮ್ಮೂರಿನಲ್ಲಿ ಇಳಿದೆ. ಅಲ್ಲಿಂದ ನಮ್ಮ ಮನೆ ಹತ್ತಿರವಾಗುತ್ತಿದ್ದುದರಿಂದ ನಡೆದೇ ಹೊರಟೆ.

ಒಂದೊಮ್ಮೆ ನಮ್ಮ ಗದ್ದಲದಿಂದ ಯಾವಾಗಲೂ ಕಳಕಳೆಯಾಗಿರುತ್ತಿದ್ದ ಮನೆ ಬೋಳು ಬೋಳಾಗಿ ಕಂಡುಬಂತು, ಆದ್ದರಿಂದಲೋಏನೋ ಪ್ರತಿಯೊಬ್ಬರೂ ಗಂಡು ಸಂತಾನ ಬೇಕೆಂದು ಬಯಸುವುದು. ವರಾಂಡದೊಳಗೆ ಬಂದೊಡನೆಯೇ ನನ್ನ ಕಣ್ಣುಗಳು ನಮ್ಮಮ್ಮನಿಗೋಸ್ಕರ ಹುಡುಕಾಡಿದವು. ಬಾಗಿಲನ್ನು ಒಳಗಿನಿಂದ ಅಗುಳಿ ಹಾಕಿತ್ತು. ಅಮ್ಮ ಒಳಗೆ ಯಾವುದೋ ಕೆಲಸದಲ್ಲಿರಬಹುದೆಂದುಕೊಂಡು ಸಂದಿನೊಳಗಿಂದ ಕೈತೂರಿಸಿ ಅಗುಳಿ ತೆಗೆದೆ. ಬಾಗಿಲನ್ನು ತಳ್ಳಿ ಒಳಕ್ಕೆ ಕಾಲಿಟ್ಟೆ.

ಅಮ್ಮನ ಸುಳಿವೇ ಕಂಡುಬರದ್ದರಿಂದ ಎಲ್ಲಿರಬಹುದು ಎಂದುಕೊಳ್ಳುತ್ತ ಹಾಲ್‌ನೊಳಗೆ ಬಂದೆ. ಬೆಡ್‌ರೂಮಿನೊಳಗಿಂದ ಮೆಲ್ಲಗೆ ಮಾತುಗಳು ಕೇಳಿಬಂದವು. ನಾನು ಮೆಲ್ಲಗೆ ಹೆಜ್ಜೆ ಇಡುತ್ತ ಬಾತ್‌ರೂಮಿನಬಳಿಗೆಹೋಗಿ, ಬಾಗಿಲಿಗಿದ್ದ ಪರದೆಯನ್ನು ಸ್ವಲ್ಪ ಸರಿಸಿ ಒಳಗಿಣಿಕಿ ನೋಡಿದೆ.

ಮೈ ಜುಮ್ಮೆಂದಿತು.

ಅಮ್ಮ ಮಂಚದ ಮೇಲೆ ಕುಳಿತಿದ್ದಳು ಎದುರಿಗೆ ಉಮಾಮಹೇಶ್ವರನ್ ತಲೆಯನ್ನು ತಗ್ಗಿಸಿಕೊಂಡು ನಿಂತಿದ್ದ. ನಮ್ಮಮ್ಮ ಹೇಳುತ್ತಿದ್ದಳು. "ಹೌದು ಉಮಾ ನೀನು ನಮ್ಮ ಕುಟುಂಬಕ್ಕೆ ಕಳದ ಆರು ವರ್ಷಗಳಿಂದ ತುಂಬಾ ಸೇವೆ ಮಾಡಿದೀಯ. ದೊಡ್ಡವಳ ಸೀರೆ ಒಗೆಸಿಕೊಂಡುಬರೋದರಿಂದ ಹಿಡಿದು, ಪ್ರೇಮ ಪತ್ರ ಒಯ್ದುಮುಟ್ಟಿಸೋದು,ಇನ್ನೊಬ್ಬಳಕುಪ್ಪಸಕ್ಕೆಹುಕ್ಸ್ ಹಾಕಿಸಿಕೊಂಡು ಬರೋದು ಇತ್ಯಾದಿಗಳನ್ನೆಲ್ಲ ಮಾಡಿದೆಯಾದರೂ ಕೊನೆಗೆ ನಿನಗೇನೂ ದಕ್ಕಲಿಲ್ಲ. ಅವರು ಮೂವರು ನಿನ್ನನ್ನು ಪ್ರೇಮಿಸಲಿಲ್ಲ! ನಿನ್ನನ್ನು ತಮ್ಮ ಅಗತ್ಯಗಳಿಗೆ ಬಳಸಿಕೊಂಡರು.

ಬಾಹ್ಯ ಸೌಂದರ್ಯಕ್ಕಿಂತಲೂ ಅಂತರಿಕ ಸೌಂದರ್ಯ ಮಿಗಿಲು ಎನ್ನುವುದು ಕೇವಲ ಕಥೆ, ಕಾದಂಬರಿ, ಸಿನಿಮಾಗಳಲ್ಲಷ್ಟೇ ಕಂಡುಬರುತ್ತದೆ. ನೀನು ಬೆಪ್ಪನಂತೆ ಕಂಡುಬರುತ್ತೀಯೆಂದೇ ನನ್ನ ಮಕ್ಕಳು ನಿನ್ನನ್ನು ಲೆಕ್ಕಿಸಲಿಲ್ಲ. ಆದರೆ ನೀನು ಅವರಿಗೆ ತುಂಬಾ ಸೇವೆ ಮಾಡಿದೆ. ಗಂಡು ದಿಕ್ಕಿಲ್ಲದ ನಮ್ಮ ಕುಟುಂಬಕ್ಕೆ ಆರು ವರ್ಷ ಧಾರೆ ಎರೆದ ನಿನಗೆ ಏನು ಕೊಟ್ಟರೆ ಋಣ ತೀರುತ್ತೆ ಹೇಳು?! ನಿನಗೆ ಕೃತಜ್ಞತೆ ಸಲ್ಲಿಸಬೇಕೆಂದು ನನ್ನ ಮನಸ್ಸು ತುಡಿಯುತ್ತಿದೆ. ಸ್ತ್ರೀ-ಪುರುಷರ ನಡುವೆ ಕೃತಜ್ಞತೆ ಹೇಳಿಕೊಳ್ಳಲು ಇದಕ್ಕಿಂತಲೂ ಮಿಗಿಲಾದುದು ಬೇರೊಂದಿಲ್ಲವೆನಿಸಿತು, ಅದಕ್ಕೇ ಹೀಗ್ಮಾಡ್ದೆ."

ಉಮಾಮಹೇಶ್ವರನ್ ಹೆದರಿಕೊಂಡವನಂತೆ ನೋಡುತ್ತಿದ್ದ. ಅವನ ಸ್ವಭಾವ ಗೊತ್ತಿದ್ದ ಅಮ್ಮ ತಾನೇ ಸಲಿಗೆವಹಿಸಬೇಕೆಂದು ನಿರ್ಧರಿಸಿಕೊಂಡವ

ಳಂತೆ ಸ್ವಲ್ಪ ಮೇಲೆದ್ದು ಕೈ ಹಿಡಿದು ಮೇಲೆಳೆದುಕೊಂಡಳು. ಕಟ್ಟೆಯೊಡೆದ ಪ್ರವಾಹ ದಡವನ್ನು ಮುಳುಗಿಸುತ್ತಿರುವಂತೆ ಅವನು ನಮ್ಮಮ್ಮನನ್ನು ಆಕ್ರಮಿಸಿಕೊಂಡ.

ನಾನು ಮನೆಯೊಳಗಿಂದ ಹೊರಬಿದ್ದು, ಪಕ್ಕದ ಬೀದಿಯಲ್ಲಿರುವ ಸ್ನೇಹಿತೆಯೊಬ್ಬಳ ಬಳಿಗೆ ಹೋದೆ. ಅಲ್ಲಿ ಸುಮಾರು ಒಂದು ಗಂಟೆ ಹೊತ್ತು ಕಾಲ ಕಳೆದು ತಿರುಗಿ ಮನೆ ಸೇರಿಕೊಂಡೆ. ಅಮ್ಮ ಒಬ್ಬಳೇ ಇದ್ದಳು. ನನ್ನನ್ನು ನೋಡುತ್ತಲೇ ಆದರದಿಂದ ಆಹ್ವಾನಿಸಿದಳು.

ಅಲ್ಲಿ ನಾಲ್ಕಾರು ದಿನ ಕಳೆದು, ಮತ್ತೆ ಗಂಡನ ಮನೆಗೆ ಹೋದೆ. ಆಮೇಲೆ ಸುಮಾರು ಮೂರು ತಿಂಗಳವರೆಗೆ ನಮ್ಮಮ್ಮನ ಮನೆಗೆ ಹೋಗಲಾಗ ಲಿಲ್ಲ. ಒಂದು ರವಿವಾರ ಪುರಸೊತ್ತು ಮಾಡಿಕೊಂಡು ಅಮ್ಮನನ್ನು ನೋಡಿ ಬರುವುದಾಗಿ ಹೇಳಿ ತವರು ಮನೆಗೆ ಹೊರಟೆ. ನಮ್ಮಮ್ಮನನ್ನು ನೋಡಬೇಕೆ ನ್ನುವ ಹಂಬಲಕ್ಕಿಂತಲೂ ಆ ಅನುಭವದ ನಂತರ ಉಮಾ ಹೇಗಿದ್ದಾನೋ ಎಂದು ನೋಡಬೇಕೆನ್ನುವ ಆಸಕ್ತಿಯೇ ಹೆಚ್ಚಿಗಿತ್ತು.

ನಾನು ಊಹಿಸಿದ್ದಂತೆಯೇ ಉಮಾ ನಮ್ಮ ಮನೆಯೊಳಗಿಂದ ಬರುತ್ತಿ ದ್ದವನು ವರಾಂಡದಲ್ಲಿ ಎದುರಾದ. ಅವನ ಶರೀರದಲ್ಲಿ ಏನೂ ಮಾರ್ಪಾ ಡುಂಟಾಗಿರಲಿಲ್ಲವಾದರೂ ಕಣ್ಣುಗಳಲ್ಲಿ ಮಾತ್ರ ಹೊಳಪು ಮೂಡಿತ್ತು. ನನ್ನನ್ನು ನೋಡಿ ತಡಬಡಿಸಿದ. ಅಂಗಿಯ ಮೇಲಿನ ಗುಂಡಿ ಹಾಕಿಕೊಳ್ಳುತ್ತ ಬಲವಂತವಾಗಿ ಹಲ್ಲುಕಿರಿದ.

ನಾನು ಅವನನ್ನು ನೋಡಿ ಕಣ್ಣುಮೀಟಿ, ಚೆನ್ನಾಗಿದೀಯಾ ಉಮಾ? ಎಂದು ಕೇಳಿದೆ, ಚೆನ್ನಾಗಿದೆ ಎನ್ನುವಂತೆ ತಲೆಯಾಡಿಸಿ— "ದಡ ತಗುಲದ ಕೆರೆಯಲ್ಲಿ ಮೀನು ಮರಿಯು ಈಜು" ಎಂದು ಹೇಳಿ ತಲೆತಗ್ಗಿಸಿಕೊಂಡು ಹೊರಟು ಹೋದ. ನನ್ನ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಇರುವ ಗೂಢಾರ್ಥ ಸೂಕ್ಷ್ಮವಾಗಿ ಅರ್ಥವಾಯ್ತು, ಅದಕ್ಕಿಂತಲೂ ಜಾಸ್ತಿ ಯೋಚಿಸಲಿಲ್ಲ.

ಇದೇ ನಾನು ಇಲ್ಲಿಯವರೆಗೂ ಯಾರಿಗೂ ಹೇಳಿರದಿದ್ದ ಘಟನೆ ಎಂದು ಹೇಳುವುದನ್ನು ಮುಗಿಸಿದಳು ಸುಜೀವನ.

ಇಬ್ಬರೂ ಸ್ವಲ್ಪ ಹೊತ್ತು ಮೌನವಾಗಿದ್ದುಬಿಟ್ಟರು. ಅವನು ಸ್ವಲ್ಪ ಮುಂದೆ ಸರಿದು ಅವಳನ್ನು ಹತ್ತಿರಕ್ಕೆಳೆದುಕೊಂಡು ಮುತ್ತಿಟ್ಟ. ಆ ಮುತ್ತು ಅವಳಲ್ಲಿಯುಲಕಾಂಕ್ಷೆಯನ್ನು ತಟ್ಟಿ ಎಬ್ಬಿಸಿತು,ಕುಳಿತಿದ್ದವಳು ಒಂದಿಂಚಿನಷ್ಟು ಹಾಗೆಯೇ ಮೇಲೆದ್ದು ಗಟ್ಟಿಯಾಗಿ ತಬ್ಬಿಕೊಂಡಳು. ಬೇಸಿಗೆಯಸಾಯಂಕಾಲ ಚೆನ್ನಾಗಿ ನೀರು ಚಿಮುಕಿಸಿದ ಬಯಲಿನಲ್ಲಿ ಕುಳಿತು ಆಕಾಶದತ್ತ ನೋಡು

ತ್ತಿರುವಂತೆ, ಹೊರಗೆ ಜೋರಾಗಿ ಮಳೆ ಸುರಿಯುತ್ತಿದ್ದರೆ, ಕೋಣೆಯಲ್ಲಿ ಮುಂದೆ ಕುಳಿತು ಬೆಚ್ಚನೆಯ ಊಹೆಗಳನ್ನು ಮನಸ್ಸಿನಲ್ಲಿ ಮನನ ಮಾಡಿಕೊಳ್ಳುತ್ತಿರುವಂತೆ ಚಳಿಗಾಲದ ರಾತ್ರಿ ಚೆನ್ನಾಗಿ ನಿದ್ದೆ ಮಾಡಿ ಬೆಳಿಗ್ಗೆ ಸೂರ್ಯನ ಎಳೆ ಬಿಸಿಲಿನಲ್ಲಿ ಮೈಕಾಸಿಕೊಳ್ಳುವಂತೆ ವಿಚಿತ್ರವಾದುದೊಂದು ಅನುಭೂತಿ ಅವಳನ್ನು ಆವರಿಸಿಕೊಂಡುಬಿಟ್ಟಿತು.

ಅವನು ಅವಳನ್ನು ಹಾಗೆಯೇ ಕೆಳಗೆ ಒರಗಿಸಿದ. ಕೋರಿಕೆಯ ಭಾರದಿಂದ ಒರಗಿದಂತೆ, ಅವಳು ಮಲಗಿಕೊಂಡು ಕಣ್ಣುಗಳಿಂದಲೇ ಆಹ್ವಾನಿಸಿದಳು ಅವನು ಅವಳ ಮೇಲೆ ಬಿಲ್ಲಿನಂತೆ ಬಾಗಿ ತುರುಬಿನ ಗಂಟು ಬಿಚ್ಚಿದ. ಅಲ್ಲಿಯವರೆಗೂ ನಿರ್ಮಲವಾಗಿದ್ದ ಆಕಾಶ ಕಪ್ಪು ಮೋಡಗಳಿಂದ ಆವೃತವಾದಂತೆ, ಕೂದಲುಗಳು ಅವಳ ಮುಖವನ್ನು ಮುಚ್ಚಿ ಹಾಕಿದವು. ಎರಡಾಗಿ ಸೀಳಿ, ಮುಖವಷ್ಟೇ ಕಂಡು ಬರುವಂತೆ ಕತ್ತಿನ ಸುತ್ತಲೂ ಸುತ್ತಿದ. ರಕ್ತನಾಳಗಳಲ್ಲಿ ರಕ್ತದ ಬದಲಾಗಿ ಬೆಳದಿಂಗಳು ಪ್ರವಹಿಸುತ್ತಿರುವುದೆನ್ನುವಂತೆ ಅವಳ ಮುಖದಲ್ಲಿನ ಅದೊಂದು ಅದ್ಭುತವಾದ ಆಕರ್ಷಣೆ ಅವನನ್ನು ಹುಚ್ಚನನ್ನಾಗಿ ಮಾಡಿತು. ಹಾಗೆಯೇ ಮುಖ ತಗ್ಗಿಸಿ ಅವಳ ಮೇಲೊತ್ತಿದ ಅವಳ ಅರೆ ನಿಮೀಲಿತ ಕಣ್ಣುಗಳ ಹಿಂದೆ ಯಾವುದೋ ಬಯಕೆಮೆಲ್ಲಗೆಸುಳಿದಾಡುತ್ತಿತ್ತು. ಅಮೃತವನ್ನು ಹೀರಲೆನ್ನುವಂತೆ ಅವಳ ತುಟಿಗಳು ಬಿಚ್ಚಿಕೊಂಡವು. ಅವನ ತುಟಿಗಳು ಅವಳ ತುಟಿಗಳೊಂದಿಗೆ ಬೆಸೆದುಕೊಂಡವು. ಅವಳು ನಾಲಿಗೆಯನ್ನು ಅವನ ಬಾಯಿಯೊಳಗೆ ತಳ್ಳಿದಳು. ಅವಳ ಎಂಜಲು ಸ್ಪರ್ಶ ಅವನಿಗೆ ಅಮೃತ ಧಾರೆಯಂತೆ ಭಾಸವಾಯ್ತು. ಅವಳು ತನ್ನ ಎದೆಯಲ್ಲಿ ಉಕ್ಕೇಳುತ್ತಿದ್ದ ಆವೇಶ ಕೋರಿಕೆಯ ಪ್ರವಾಹಕ್ಕೆ ಅಡ್ಡಗಟ್ಟೆ ಕಟ್ಟಲೆಂದು ಅವನ ಎದೆಯನ್ನು ಹತ್ತಿರಕ್ಕೆಳೆದುಕೊಂಡಳು. ಮೊಲೆತೊಟ್ಟುಗಳು ತನ್ನೆದೆಗೆ ತಾಕುತ್ತಿರುವುದು ಗೊತ್ತಾಗುತ್ತಲೇ ಇತ್ತು.

ಸುಜೀವನ ಇದ್ದಕ್ಕಿದ್ದಂತೆ, "ರಸಪೂರಿ ಮಾವಿನ ಹಣ್ಣುಗಳನ್ನು ಕುಯ್ದು ತಿನ್ನುವುದಿಲ್ಲ! ಚೆನ್ನಾಗಿ ಹಿಸುಕಿ ಹೀರುತ್ತಾರೆ" ಎಂದಳು.

ಗೋಪಾಲಕೃಷ್ಣಗೆ ಅವಳ ಭಾವನೆ ಅರ್ಥವಾಯ್ತು. "ಹೀರುವುದೇ ನನಗಿಷ್ಟ" ಎಂದ. ತಾನು ಹೇಳಿದ್ದು ಅವನಿಗೆ ಅರ್ಥವಾಯಿತೆನ್ನುವ ವಿಷಯ ಅವಳಿಗೂ ಗೊತ್ತಾಯ್ತು.

"ನಿನ್ನ ಸೊಂಟ ಎಷ್ಟು ಸಣ್ಣಗಿದೆಯೆಂದರೆ ಹಿಡಿಯಲ್ಲಿ ಸಿಗುವಂತಿದೆ" ಎಂದು ಅದು ನಿಜವೋ ಸುಳ್ಳೋ ಎಂಬುದನ್ನು ತಿಳಿದುಕೊಳ್ಳಲು ಒಂದು ಕೈಯನ್ನು ಕೆಳಗಿಳಿಸಿದ ಗೋಪಾಲಕೃಷ್ಣ. ಅವಳು ಮೊಣಕಾಲುಗಳ ತನಕ ಮೇಲೆ

ಸರಿದಿದ್ದ ಸೀರೆಯನ್ನು ತಟ್ಟನೆ ಪಾದಗಳವರೆಗೆಳೆದುಕೊಂಡಳು. ಅವನು ನಗುತ್ತ ಸೀರೆಯ ನೆರಿಗೆಗಳನ್ನು ಎಳೆದ ಅವಳು ಚಿತ್ತಲಾದಳು· ಬೆಳದಿಂಗಳಿನಲ್ಲಿ ಅವಳ ಶರೀರ ಮಿನುಗುತ್ತಿತ್ತು. ಅವನಿಂದ ತವಕ ತಡೆಯಲಾಗದೆ ಅವಳಮೇಲೆ ಬಾಗಿದ. ಅವಳು ತಲೆಯನ್ನು ಒಂದೆಡೆ ತಿರುಗಿಸಿಕೊಂಡು ಕಣ್ಣು ಮುಚ್ಚಿಕೊಂಡಳು.

ಅವನು ಆಕಾಂಕ್ಷೆಯಿಂದ ಕುದಿಯುತ್ತಿದ್ದ ತುಟಿಗಳನ್ನು ಅವಳ ಹಣೆಯ ಮೇಲೆ ಗಟ್ಟಿಯಾಗಿ ಒತ್ತಿದ. ಅಲ್ಲಿಂದ ಕೆಳಗಿಳಿಯುತ್ತ ಮುತ್ತಿನ ಮಳೆ ಸುರಿಸಿದ. ಮಳೆಗೆ ನೆಲ ಒದ್ದೆಗೊಂಡಂತೆ, ಮುತ್ತಿನ ಮಳೆಗೆ ಅವಳ ಶರೀರವೂ ಪುಳಕಗೊಳ್ಳುತ್ತಿತ್ತು. ಅವಳಿಂದ ಅಪ್ರಯತ್ನವಾಗಿ ಮೆಲುವಾದ ನರಳಿಕೆ ಪ್ರಾರಂಭವಾಯ್ತು... .. ಅದು ಅವನನ್ನು ಕೆಣಕುತ್ತಿತ್ತು........ಅವನು ಅವಳನ್ನು ಆಕ್ರಮಿಸಿಕೊಂಡ.

ಬಹಳಷ್ಟು ಬಳಲಿ, ಬೆವರಿನಿಂದ ಒದ್ದೆಯಾದ ಶರೀರವನ್ನು ಮೃದುವಾಗಿ ತಾಕಿದ ಗಾಳಿ ಅಲೆಯಂತೆ, ಎಷ್ಟೋ ಕ್ಷಣಗಳ ವಿರಹವನ್ನು ತಾಳಲಾಗದೆ ದಡಕ್ಕೆ ರೊಚ್ಚಿನಿಂದ ಅಪ್ಪಳಿಸುತ್ತಿರುವ ಅಲೆಯಂತೆ ಅವಳ ಚಲನೆಗಳು ಅವನ ಮಾಧುರ್ಯದ ಸುಳಿಯಲ್ಲಿ ಮುಳುಗಿಸುತ್ತಿದ್ದವು. ಅವಳು ಹಿಡಿತ ಸಡಲಿಸಿದಳು ಅವನ ಅನ್ವೇಷಣೆ ಪ್ರಾರಂಭವಾಯ್ತು. ಅವನಿಗೆ ಕತ್ತಲು ತುಂಬಿದ ಬಂಗಾರದ ಗಣಿಗಳಲ್ಲಿ ಪ್ರಯಾಣಿಸುತ್ತಿರುವಂತಿತ್ತು.ಲಯಬದ್ಧ ಚಲನೆ ಮಧುರ ಸಂಗೀತವನ್ನು ಸೃಷ್ಟಿಸುತ್ತಿರುವಂತಿತ್ತು.

ಸುಖಾನ್ವೇಷಣೆಗೋಸ್ಕರ ಹೊರಟ ಸ್ತ್ರೀ–ಪುರುಷರು ಪ್ರಪಂಚವನ್ನೆಲ್ಲ ಸುತ್ತಿ, ಕೊನೆಗೆ ತಾವು ಹುಡುಕುತ್ತಿರುವ ಸುಖ ತಮ್ಮ ಶರೀರಗಳಲ್ಲಿಯೇ ಇದೆಯೆನ್ನುವ ಸತ್ಯ ಗೊತ್ತಾದ ನಂತರ ಉಂಟಾಗುವ ಅನಿರ್ವಚನೀಯವಾದ ತೃಪ್ತಿಯಿಂದ ಸೋತು ಒರಗಿದಂತೆ, ಅವರಿಬ್ಬರೂ ತಂಪುಗೊಂಡರು.

## ೧೫

ವೆಂಕಟರಾಮಯ್ಯ ಹುಲಿರಾಜ ಸೇರಿ ಗೋಪಾಲಕೃಷ್ಣನ ಪತನಕ್ಕೆ ಹೂಡಿದ ಸಂಚಿನಲ್ಲಿ ತಾನೂ ಭಾಗಿಯಾದಂದಿನಿಂದ, ಮೋಹನಳು ಅದಕ್ಕೆ ಮಾನಸಿಕವಾಗಿ ಸಿದ್ಧಳಾಗಿದ್ದಳು. ಅವನು ಕೊಡುವುದಾಗಿ ಹೇಳಿದ್ದ ಒಂದೆಕರೆ ಹೊಲದ ಆಸೆ ಗೋಪಾಲಕೃಷ್ಣನ ಮೇಲೆ ಅವಳು ದ್ವೇಷ ಬೆಳೆಸಿಕೊಳ್ಳುವಂತೆ ಮಾಡಿತ್ತು. ವಿನಾಃಕಾರಣ ಅವಳು ಗೋಪಾಲಕೃಷ್ಣನನ್ನು ತನ್ನ ಶತ್ರುವೆಂಬದಾಗಿ ಪರಿಗಣಿಸತೊಡಗಿದ್ದಳು. ವಿನಾಕಾರಣವೆನ್ನಲಾಗದೇನೋ ಏಕೆಂದರೆ

ಮೋಹನಳೂ ಗೋಪಾಲಕೃಷ್ಣನ ಕರೆಯನ್ನು ನಿರೀಕ್ಷಿಸಿದ್ದವಳೇ ಆದರೆ ಅಲ್ಲಿಯ ವರೆಗೂ ಕರೆ ಬಂದಿರಲಿಲ್ಲ. ನಿರಾಸೆಗೊಂಡು ಸುಮ್ಮನಾಗಿದ್ದಳು. ಬಹುಶಃ ಆ ನಿರಾಸೆಯಿಂದಾಗಿ ಅಂತರಂಗದಲ್ಲಿ ಸುಪ್ತವಾಗಿ ಅಸ್ಪಷ್ಟವಾಗಿ ಗೋಪಾಲ ಕೃಷ್ಣನ ಮೇಲೆ ದ್ವೇಷ ತುಂಬಿಕೊಂಡಿರಬೇಕು. ವೆಂಕಟರಾಮಯ್ಯನ ಪ್ರೋದ್ಬಲದಿಂದಾಗಿ ಆ ದ್ವೇಷ ಒಂದು ಸ್ಪಷ್ಟರೂಪ ತಾಳಿ ಹೊರಬಂದಿತ್ತು. ಗೋಪಾಲಕೃಷ್ಣನ ಪತನಕ್ಕೆ ವೆಂಕಟರಾಮಯ್ಯ ಹಾಕಿದ್ದ ಯೋಜನೆಯಲ್ಲಿ ತನ್ನ ಪಾತ್ರವನ್ನು ಚೆನ್ನಾಗಿ ನಿರ್ವಹಿಸಲು ಅವಳು ಉತ್ಸುಕಳಾಗಿದ್ದಳು. ಆ ಯೋಜನೆ ಜಾರಿಗೆ ಬರಲಿರುವ ದಿನವನ್ನೇ ಅವಳು ಕಾಯುತ್ತಿದ್ದಳು.

*        *        *        *

ಗೋಪಾಲಕೃಷ್ಣ ಶಾಲೆಗೆ ಸ್ವಲ್ಪ ದೂರದಲ್ಲಿದ್ದ ಮರದ ಕೆಳಗೆ ನಿಂತಿದ್ದ. ಶಾಲೆ ಯಾವಾಗ ಬಿಡುತ್ತದೆ ಎಂದು ಅರ್ಧಗಂಟೆಯಿಂದ ಅಲ್ಲಿ ನಿಂತು ಕಾಯು ತ್ತಿದ್ದ ಆ ದಿನ ಅವನು ಹೇಗಾದರೂ ಮಾಡಿ ವರ್ಷಾಳೊಂದಿಗೆ ಮಾತಾಡಿ ಬಿಡಬೇಕೆಂದು ನಿರ್ಧರಿಸಿಕೊಂಡು ಅಲ್ಲಿಗೆ ಬಂದಿದ್ದ. ಆ ರೀತಿ ಕಾಯುವುದು ಅವನಿಗೆ ರೂಢಿಯಿಗಲಿಲ್ಲ. ಮನಸ್ಸಿನಲ್ಲಿ ಒಂದಿಷ್ಟು ಅಳುಕಿದ್ದೇ ಇತ್ತು. ಆದರೂ ಧೈರ್ಯವನ್ನು ಒಗ್ಗೂಡಿಸಿಕೊಂಡು ಕಾಯುತ್ತಿದ್ದ.

ವರ್ಷಾಳನ್ನು ಅವನು ಮೊದಲ ನೋಟದಲ್ಲೇ ಪ್ರೇಮಿಸಿದ್ದ. ಅದಕ್ಕೇ ಎಂದೂ ಇಲ್ಲದ್ದು, ಮೊದಲ ಬಾರಿಗೆ ಅವಳ ಮೇಲೆ ಓಕುಳಿ ಅಭಿಷೇಕ ಮಾಡಿದ್ದ ಅವಳ ಪ್ರೇಮಕ್ಕಾಗಿ ಒಳಗೊಳಗೇ ಹಂಬಲಿಸುತ್ತಿದ್ದ. ಅವಳ ಸಾಮೀಪ್ಯ ಕ್ಕೋಸ್ಕರ ಪರಿತಪಿಸುತ್ತಿದ್ದ. ತನ್ನ ಮನಸ್ಸು ಆ ರೀತಿ ಹೆಣ್ಣಿಗಾಗಿ ಹಂಬಲಿಸು ತ್ತಿರುವುದು ಅವನಿಗೇ ಆಶ್ಚರ್ಯವನ್ನುಂಟು ಮಾಡಿತ್ತು. ಹೆಣ್ಣು ಅವನಿ ಗೇನೂ ಹೊಸದಾಗಿರಲಿಲ್ಲ. ಅಷ್ಟೆಲ್ಲ ಹೆಣ್ಣುಗಳೊಂದಿಗೆ ಅನುಭವವಿದ್ದರೂ, ವರ್ಷಾಳನ್ನು ನೋಡಿದಾಗ ಉಂಟಾದ ಭಾವನೆ ಬೇರೆ ಯಾರನ್ನು ನೋಡಿ ದಾಗಲೂ ಉಂಟಾಗಿರಲಿಲ್ಲ. ಪ್ರೇಮ ತರ್ಕಕ್ಕೆ ಎಟುಕುವಂತಹುದಲ್ಲ....

ಅವನು ಆಲೋಚನೆಯಲ್ಲಿ ಮುಳುಗಿರುವಂತೆಯೇ ಶಾಲೆ ಬಿಟ್ಟಿನುದಕ್ಕೆ ಸೂಚನೆಯಾಗಿ ಗಂಟೆ ಗಣಗಣನೆ ಮೊಳಗಿತು. ಗೋಪಾಲಕೃಷ್ಣ ಆಲೋಚನೆ ಯಿಂದಎಚ್ಚತ್ತುನೋಡಿದ. ಮಕ್ಕಳು ದಬದಬನೆಶಾಲೆಯೊಳಗಿಂದಹೊರಗೋಡಿ ಬಂದರು. ಗೋಪಾಲಕೃಷ್ಣ ಮೆಲ್ಲಗೆ ಶಾಲೆಯತ್ತ ಹೆಜ್ಜೆ ಹಾಕಿದ.

ಮಕ್ಕಳೆಲ್ಲರೂ ಹೊರಬಿದ್ದ ನಂತರ ಕೊನೆಯಲ್ಲಿ ಹೊರಬಂದಳುವರ್ಷಾ. ಬಾಗಿಲ ಬಳಿ ಬಗುತ್ತಿದ್ದಂತೆಯೇ ಇದ್ದಕ್ಕಿದ್ದಂತೆ ಎದುರಿಗೆ ಕಂಡು ಬಂದ ಗೋಪಾಲಕೃಷ್ಣನನ್ನು ನೋಡಿ ಆಶ್ಚರ್ಯವಾದರೂ, ಅವನ ಪರಿವೆ ತನಗೇಕೆ

ಎನ್ನುವಂತೆ ಹೊರಡಲುದ್ಯುಕ್ತಳಾದಳು. ಅವನನ್ನು ನೋಡುತ್ತಿದ್ದಂತೆಯೇ ಅವಳಿಗೆ ಅದೊಂದು ರೀತಿಯ ಅಸಹ್ಯದ ಭಾವನೆಯುಂಟಾಗುತ್ತಿತ್ತು. ಆ ಅಸಹ್ಯದ ಭಾವನೆ ಅವನ ಮೇಲೋ, ಅವನಿಗಂಟಿಕೊಂಡಿರುವ ಆಚಾರದ ಮೇಲೋ ಎಂಬುದನ್ನು ತರ್ಕಿಸಿಕೊಂಡಿರಲಿಲ್ಲ.

ತನ್ನನ್ನು ನೋಡಿಯೂ, ನೋಡದಂತೆ ಹೋಗುತ್ತಿದ್ದ ಅವಳನ್ನುದ್ದೇಶಿಸಿ, "ಏನ್ರೀ...." ಎಂದ ಗೋಪಾಲಕೃಷ್ಣ ವರ್ಷಾ ಥಟಕ್ಕನೆ ನಿಂತು, ಮುಖ ಸಿಂಡರಿಸಿಕೊಂಡು ಅವನನ್ನು ನೋಡಿದಳು.

ಗೋಪಾಲಕೃಷ್ಣ ಉಗುಳು ನುಂಗುತ್ತ, ".. ನಿಮ್ಮ ಜೊತೆ ಸ್ವಲ್ಪ ಮಾತಾಡಬೇಕಿತ್ತು.. " ಎಂದ.

"ನನ್ಜೊತೆ ನಿಮ್ಮದೇನು ಮಾತು?" ಎಂದು ಗಡುಸಾಗಿಯೇ ಕೇಳಿದಳು.

"ನಾನು.. ನಾನು . " ಎಂದು ತಡವರಿಸಿದ ಗೋಪಾಲಕೃಷ್ಣ, ಒಂದೆರಡು ಕ್ಷಣ ತಡೆದು, ಸುಧಾರಿಸಿಕೊಂಡು, "....ನಿಮ್ಮನ್ನು ಕಂಡರೆ ನನಗಿಷ್ಟ" ಎಂದ.

ಆ ಮಾತು ಕೇಳುತ್ತಿದ್ದಂತೆಯೇ ವರ್ಷಾ ಬಿದ್ದು ಬಿದ್ದು ನಕ್ಕಳು. ನಗುತ್ತಲೇ "ನಂಗೊತ್ತಿತ್ತು, ನೀನು ಹೀಗೆ ಅಂತೀಯ ಅಂತ. ನರಮಾಂಸಕ್ಕೆ ರೂಢಿಗೊಂಡ ಹುಲಿ ಯಾವಾಗಲೂ ಅದನ್ನೇ ಬಯಸುತ್ತದೆ. ಆ ರೀತಿ ನೀನು ಹೆಣ್ಣಿನ ಮಾಂಸಕ್ಕೆ ದಾಸನಾಗಿದ್ದೀಯ. ಊರಲ್ಲಿರೋ ಹೆಣ್ಣುಗಳು ಸಾಲದೆ, ಈಗ ನನ್ನ ಮಾಂಸಕ್ಕೆ ಜೊಲ್ಲು ಸುರಿಸ್ತಾ ಬಂದಿದೀಯಲ್ವೆ ..."ಎನ್ನುತ್ತಿದ್ದಂತೆ ಅವಳ ಧ್ವನಿ ಗಡುಸಾಯ್ತು.

ಅವಳ ಕಟುವಾದ ಮಾತಿನಿಂದಾಗಿ ಗೋಪಾಲಕೃಷ್ಣನ ಕಣ್ಣುಗಳಲ್ಲಿ ಅಪ್ರಯತ್ನವಾಗಿ ನೀರು ಜಿನುಗಿತು. ಅವಳನ್ನು ಹೇಗೆ ನಂಬಿಸಬೇಕೆಂಬುದು ಅವನಿಗೆ ಅರ್ಥವಾಗಲಿಲ್ಲ. ಉಗುಳು ನುಂಗುತ್ತ, "ನೀವು ನನ್ನನ್ನು ಅಪಾರ್ಥ ಮಾಡಿಕೊಳ್ತಿದೀರಿ. ನಾನೇನೂ ಕಾಮುಕನಲ್ಲ. ಅದು ಈ ಊರಿನಲ್ಲಿರೋ ಆಚಾರ.. " ಎನ್ನುತ್ತಿದ್ದ ಅವನನ್ನು ಅಷ್ಟಕ್ಕೇ ತಡೆಯುತ್ತ,

"ಹಾಗಂತ ನೀನು ಆತ್ಮವಂಚನೆ ಮಾಡಿಕೊಳ್ತಿದೀಯ. ಈ ನೀಚ ಕಾರ್ಯದಲ್ಲಿ ನಿನ್ನ ಪಾಲೇನೂ ಇಲ್ಲವೆಂದರೆ ನಾನು ನಂಬಲಾರೆ. ಗ್ರಾಮದ ಜನರ ಮೂಢ ನಂಬಿಕೆಯನ್ನು ಆಸರೆಯಾಗಿಟ್ಟುಕೊಂಡು,ಬಯಸಿದ ಹೆಣ್ಣನ್ನು ಅನುಭವಿಸುತ್ತ ಸೋಮಾರಿಯಾಗಿ ಕಾಲ ಕಳೀತಿದೀಯ. ವಂಶಾಚಾರ ಅನ್ನೋದು ನಿನಗೊದಗಿ ಬಂದಿರುವ ಸೊಗಸಾದ ನೆಪ" ಎಂದು ಆವೇಶದಿಂದ ನುಡಿದಳು.

"ಇಲ್ನೋಡಿ ನೀವು ತಿಳಿದುಕೊಂಡಿರುವಂತೆ ನಾನೇನೂ ಕಾಮುಕನಲ್ಲ. ಇರಲಿ ಬಿಡಿ, ನಾನೀಗ ನಿಮಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಬರಲಿಲ್ಲ. ನಾನು ನಿಮ್ಮನ್ನು ಪ್ರೇಮಿಸ್ತಿದೀನಿ...." ಎಂದ ಗೋಪಾಲಕೃಷ್ಣ.

ವರ್ಷಾ ಮತ್ತಷ್ಟು ಆವೇಶಗೊಂಡಳು. "ಪ್ರೇಮಿಸ್ತಿದೀಯ?! ಪ್ರೇಮ ಅನ್ನೋ ಪದ ಉಚ್ಚರಿಸೋದಿಕ್ಕೂ ನೀನು ಅನರ್ಹ. ನೀನು ಕಾಮಿಯಾಗ ಬಲ್ಲಯೇ ಹೊರತು ಪ್ರೇಮಿಯಾಗಲಾರೆ! ಕಾಮುಕನಾದ ನಿನ್ನಂತಹವನನ್ನು ಹೆಣ್ಣಿರಲಿ, ಹೆಣ್ಣು ಹುಳುವೂ ಪ್ರೇಮಿಸದು.

"ಗಂಡಸಿಗೆ ಗಂಡಸುತನ ಇರೋದು ಸ್ತ್ರೀಯೊಂದಿಗೆ ಮಲಗುವುದರಲ್ಲಲ್ಲ ಅದು ವ್ಯಕ್ತಿತ್ವ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಜೀವನವಿರಬೇಕು. ಆ ಜೀವನದ ಬಗ್ಗೆ ಒಂದು ದೃಷ್ಟಿಕೋನವಿರಬೇಕು. ಮನುಷ್ಯನ ಕರ್ತವ್ಯ ಗಳಿಂದ ಸಮಾಜ ವಿಕಾಸಗೊಳ್ಳಬೇಕು. ಹತ್ತಾರು ಜನರಿಗೆ ಮನುಷ್ಯನಾದ ವನು ಉಪಯೋಗವಾಗಬೇಕು. ಅದು ಬಿಟ್ಟು ತಂದೆ-ತಾತಂದಿರ ಹೆಸರು ಹೇಳುತ್ತ ಬೇಳೆ ಬೇಯಿಸಿಕೊಳ್ಳುವುದು ವ್ಯಕ್ತಿತ್ವವಾಗುವುದಿಲ್ಲ. ನೀನು ವ್ಯಕ್ತಿತ್ವವಿಲ್ಲದವನು. ನಿಮ್ಮ ವಂಶದಿಂದ ನಿನ್ನನ್ನು ಬೇರ್ಪಡಿಸಿದರೆ ನೀನು ಒಡಕು ಕವಡೆಯ ಕಿಮ್ಮತ್ತೂ ಬಾಳುವುದಿಲ್ಲ, ಅದನ್ನ ನೆನಪಿಟ್ಕೋ."

ವರ್ಷಾಳ ಒಂದೊಂದು ಮಾತೂ ಕತ್ತಿಯಲುಗಿನಂತೆ ಗೋಪಾಲಕೃಷ್ಣನ ಹೃದಯವನ್ನು ಚುಚ್ಚಿ, ಚುಚ್ಚಿ ಘಾಸಿಗೊಳಿಸಿದವು. ಒಂದೊಂದು ಮಾತು ಮನಸ್ಸನ್ನಾವರಿಸಿಕೊಂಡಿದ್ದ ಪೊರೆಗಳನ್ನೆಲ್ಲ ಒಂದೊಂದಾಗಿ ಕಳಚಿ ಹಾಕಿದಂತೆ ಭಾಸವಾಯ್ತು. ವರ್ಷಾಳ ಮಾತುಗಳು ಕಟುವಾಗಿದ್ದರೂ ಅವುಗಳು ಪೂರ್ತಿ ಸತ್ಯವೆಂಬುದು ಮನವರಿಕೆಯಾಯ್ತು. ಪಶ್ಚಾತ್ತಾಪದಿಂದಲೋ,ಹೃದಯದಲ್ಲಿನ ಭ್ರಮೆಗಳೆಲ್ಲ ಕರಗಿದ್ದಕ್ಕೋ ಅವನ ಕಣ್ತುಂಬಿಬಂದವು. ಕಣ್ಣೀರು ಕೆನ್ನೆಗಳ ಮೇಲೆ ಜಾರಿತು.

ವರ್ಷಾ ಅವನ ಕಣ್ಣೀರು ನೋಡಿ ಕರಗಿ ಹೋಗಲಿಲ್ಲ. ಅಷ್ಟು ಬೇಗ ಕರಗಿ ಬಿಡುವ ಸ್ವಭಾವವೂ ಅವಳದಾಗಿರಲಿಲ್ಲ. ಇನ್ನು ಅವನ ಜೊತೆಗೇನು ಮಾತು ಎನ್ನುವಂತೆ ಅಲ್ಲಿಂದ ಹೊರಡಲುದ್ಯುಕ್ತಳಾದಳು.

ತನ್ನ ಕಣ್ಣು ತೆರೆಸಿದ ದೇವತೆ ಹೊರಟುಹೋಗುತ್ತಿರುವಳಲ್ಲ ಎಂದು ಅವನಿಗೆ ಸಂಕಟವೆನಿಸಿತು ತಾನೇನು ಮಾಡುತ್ತಿರುವೆನೆಂಬ ಅರಿವೂ ಇಲ್ಲದೆ ಅವಳ ಕೈ ಹಿಡಿದುಕೊಂಡ.

ಈ ಹಠಾತ್ ಚರ್ಯೆಗೆ ಅವಳ ಆವೇಶ ಮತ್ತಷ್ಟು ಮಿತಿಮೀರಿತು. ತನ್ನ ಕೈ ಕೊಸರಿಕೊಂಡು ಬಿರುಸಿನಿಂದ ಅವನ ಕೆನ್ನೆಗೆ ಬಾರಿಸಿದಳು. ಕೆನ್ನೆಯ

ಮೇಲೆ ಮುಳ್ಳಿನಿಂದ ಗೀರಿದಂತೆ ಚುರ್ರೆಂದಿತು. ಅವಳು ಅವನತ್ತ ಕಿಡಿನೋಟ ಬೀರಿ, "ನಾನೀಗ ನಿನಗೆ ಹೊಡೆದದ್ದು ನನ್ನ ಕೈ ಹಿಡ್ಕೊಂಡೆ ಅನ್ನೋದಕ್ಕಲ್ಲ. ನಿನ್ನ ಜೀವನ ವಿಧಾನ ಇಲ್ಲಿಯವರೆಗೂ ನಿನಗೆ ಸ್ತ್ರೀಯರ ಬಗ್ಗೆ ಕೀಳು ಭಾವನೆ ಉಂಟಾಗುವಂತೆ ಮಾಡಿದೆ. ಈ ಏಟಿನ ಅನುಭವ ಸ್ತ್ರೀಯರಮೇಲಿನ ಗೌರವ ವನ್ನು ಹೆಚ್ಚಿಸಬಹುದೆನ್ನುವ ಆಸೆಯಿಂದ ಹೊಡೆದೆ" ಎಂದು ನುಡಿದು ಅಲ್ಲಿಂದ ಹೊರಟುಹೋದಳು.

ಗೋಪಾಲಕೃಷ್ಣನ ಕಣ್ಣು ಕತ್ತಲಿಟ್ಟಂತಾಯಿತು ಆದರೆ ಅದು ಏಟಿ ನಿಂದಾಗಿಯಲ್ಲ ಅವಳ ಮಾತುಗಳಿಂದಾಗಿ!

*          *          *          *

ನಂತರ ಕೆಲ ದಿನಗಳವರೆಗೆ ಗೋಪಾಲಕೃಷ್ಣ ಎಂದಿನಂತಾಗಲಿಲ್ಲ. ಎಲ್ಲಿ ದ್ದರೂ, ಏನುಮಾಡುತ್ತಿದ್ದರೂ ವರ್ಷಾಳ ಮಾತುಗಳೇ ಕಿವಿಗಳಲ್ಲಿ 'ಗುಂಯ್' ಗುಟ್ಟುತ್ತ ಹೃದಯವನ್ನು ಚುಚ್ಚುತ್ತಿದ್ದವು. "ನಿನ್ನ ವಂಶದಿಂದ ನಿನ್ನನ್ನು ಬೇರ್ಪಡಿಸಿದರೆ ನೀನು ಒಡಕು ಕವಡೆಯ ಕಿಮ್ಮತ್ತೂ ಬಾಳುವುದಿಲ್ಲ" ಪದೇ ಪದೇ ನೆನಪಿಗೆ ಬಂದು ಯೋಚನೆಗೀಡುಮಾಡುತ್ತಿತ್ತು. ವಿಚಾರ ಮಾಡುತ್ತಿ ದ್ದಂತೆಲ್ಲ ತನ್ನ ವಂಶಾಚಾರದ ಬಗ್ಗೆ ಕೂಡ ಅವನಿಗೆ ನಂಬಿಕೆ ಹೋಗತೊಡ ಗಿತು. ಜೊತೆಗೇ ಅಷ್ಟಿಷ್ಟು ಅಸಹ್ಯವೂ ಮೂಡಿತು. ಇನ್ನು ಮುಂದೆ ವಂಶಾ ಚಾರವನ್ನು ಪರಿಸುವುದಿಲ್ಲವೆಂದು ಜನರಿಗೆ ಹೇಳಿಬಿಡಬೇಕೆಂದುಕೊಂಡು ಆ ರೀತಿ ಹೇಳಿದರೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಕೂಡ ಯೋಚನೆ ಮಾಡಿದ.

ಮುಖ್ಯವಾಗಿ ಎದುರಾದ ಸಮಸ್ಯೆಯೆಂದರೆ ಹೊಟ್ಟೆಪಾಡಿನದು. ತನಗೆ ಒಂದಂಗುಲ ಭೂಮಿ ಕೂಡ ಇಲ್ಲವೆನ್ನುವ ವಿಷಯ ಅವನಿಗೆ ಗೊತ್ತಿತ್ತು. ದಿವಾನ ವೆಂಕಟರಾಮಯ್ಯ ತಮಗೆ ಮೋಸ ಮಾಡಿ, ಆಸ್ತಿಯೆಲ್ಲವನ್ನೂ ಕಬ ಳಿಸಿ ಅನುಭವಿಸುತ್ತಿರುವನೆಂಬುದು ಗೊತ್ತಿತ್ತು. ಆದರೆ ಆ ಭೂಮಿಗಳನ್ನು ತಿರುಗಿ ಹೇಗೆ ಸ್ವಾಧೀನ ಮಾಡಿಕೊಳ್ಳಬೇಕೆಂಬುದು ಹೊಳೆಯುತ್ತಿರಲಿಲ್ಲ.ಅವೆಲ್ಲ ಸರಕಾರಿ ಕಾಗದ ಪತ್ರಗಳಲ್ಲಿ ವೆಂಕಟರಾಮಯ್ಯನ ಹೆಸರಿಗೆ ವರ್ಗಾವಣೆಯಾಗಿ ಬಿಟ್ಟಿದ್ದವು. ಹಾಗಿರುವಾಗ ಆ ಭೂಮಿಗಳನ್ನು ತಿರುಗಿ ಹೇಗೆ ಪಡೆಯುವುದು? ತನಗೆ, ನರನಿಗೂ ಹೊಟ್ಟೆಪಾಡು ಕಳೆಯುವಷ್ಟು ಭೂಮಿಯ ಸ್ವಲ್ಪ ಭಾಗ ವನ್ನು ತನಗೆ ತಿರುಗಿ ಕೊಡೆಂದೂ, ಅವುಗಳ ಬೆಲೆಯನ್ನು ತಾನುಕಾಲಕ್ರಮೇಣ ತೀರಿ ವುದಾಗಿ ವೆಂಕಟರಾಮಯ್ಯನನ್ನು ಕೇಳಬೇಕೆನಿಸಿತಾದರೂ ಸ್ವಾಭಿ ಮಾನ ಅಡ್ಡ ಬಂದುದರಿಂದ ಆ ಯೋಚನೆಯನ್ನು ಅಲ್ಲಿಗೇ ಕೈಬಿಟ್ಟ.

ಜೀವನದಲ್ಲಿ ಮೊದಲಬಾರಿಗೆ ಅವನು ಪರಾನ್ನಜೀವಿಯಾಗಿ ಬಾಳದೆ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಬೇಕೆಂದು ಯೋಚಿಸುತ್ತಿದ್ದ.

ಈ ರೀತಿ ಅವನು ಆಲೋಚನೆಗಳ ತಾಕಲಾಟದಲ್ಲಿರುವಾಗಲೇ ಹುಣ್ಣಿಮೆ ಬಂದೇ ಬಿಟ್ಟಿತು. ಆ ದಿನ ಹೇಗೂ ತಪ್ಪಿಸಿಕೊಳ್ಳಲಾಗದೆಂದು ಗೊತ್ತಿತ್ತು. ಆರೋಗ್ಯ ಸರಿಯಾಗಿಲ್ಲವೆಂದು ಹೇಳಬೇಕೆಂದುಕೊಂಡ. ಆದರೆ ಆ ರೀತಿ ಹೇಳಿದರೆ ಜನ ಮಾಡುವ ಗಲಭೆ, ಗಡಿಬಿಡಿ ನೆನೆಸಿಕೊಂಡು ಸುಮ್ಮನಾದ.

ಸಾಯಂಕಾಲದ ಹೊತ್ತು ನರ ಯಾರಿಗೆ ಹೇಳಿಬರಬೇಕೆಂದು ಕೇಳಿದಾಗ ಪರಧ್ಯಾನದಿಂದ ಏನೋ ಬಾಯಿಗೆ ಬಂದ ಹೆಸರು ಹೇಳಿದ. ಅವನು ಹೊರಟು ಹೋದ. ಗೋಪಾಲಕೃಷ್ಣ ಮನೆಗೆ ಸ್ವಲ್ಪ ದೂರದಲ್ಲಿದ್ದ ಬಂಡೆಯೊಂದರಮೇಲೆ ಸುಮ್ಮನೆ ಮಲಗಿ ಯೋಚಿಸತೊಡಗಿದ. ಯಾವು ಯಾವುದೋ ಯೋಚನೆಯಿಂದಾಗಿ ತಲೆಬಿಸಿಯೇರಿಬಿಟ್ಟಿತ್ತು.

## ೧೬

ಎಂದಿನಂತೆ ಚಂದ್ರ ಆಕಾಶದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದ. ಗಾಳಿ ಮೆಲ್ಲಗೆ ಬೀಸುತ್ತಿತ್ತು.

ಹಸಿವು, ದಾಹ, ನಿದ್ದೆ, ಇವಾವವೂ ಬಳಿ ಸುಳಿಯದಿದ್ದ ಅವನು ಹಾಗೆಯೇ ಕಣ್ಣು ಮುಚ್ಚಿಕೊಂಡು ಮಲಗಿದ್ದ. ಬಳೆಗಳ ಸದ್ದು ಕಿವಿಯ ಬಳಿ "ಕಿಣಿ ಕಿಣಿ" ಎಂದುದ್ದರಿಂದ ತಟಕ್ಕನೆ ಕಣ್ಣು ಬಿಟ್ಟ. ಎದುರಿಗೆ ಅನುಪಮ ನಿಂತಿದ್ದಳು. ತಾನು ಅವಳ ಹೆಸರು ಹೇಳಿದನೆ ಎಂದು ಆಶ್ಚರ್ಯಪಟ್ಟ. ತನಗೆ ಅಂತರಂಗದಲ್ಲಿ ಅವಳ ಮೇಲೆ ಬಯಕೆ ಇದ್ದು, ಮೈ ಮರೆವಿನಲ್ಲಿ ಅವಳ ಹೆಸರು ಹೇಳಿರುವಂತೆ ಗ್ರಹಿಸಿದ.

"ನಿದ್ದೇನಾ?" ಎಂದು ನಗುತ್ತ ಕೇಳಿದಳು ಅನುಪಮ. ಅಲ್ಲವೆನ್ನುವಂತೆ ತಲೆಯಾಡಿಸಿದ ಗೋಪಾಲಕೃಷ್ಣ. "ಮತ್ತೇನು? ಮಂಕಾಗಿದೀಯಲ್ಲ ತುಂಬಾ ಪ್ರೇಮಿಸಿರೋ ಪ್ರೇಯಸಿ ಛೀಮಾರಿ ಹಾಕಿ ಕೆನ್ನೆಗೆ ಹೊಡೆದಿರೋ ಹಾಗೆ ದಿಗಿಲಿನಿಂದಿದೀಯಲ್ಲ ..." ಎಂದು ಕೇಳಿದಳು ಮುಗುಳ್ನಗುತ್ತ.

ಗೋಪಾಲಕೃಷ್ಣನಿಗೆ ಮನಸ್ಸು ಚಿವುಕ್ಕೆಂದಿತು. ವರ್ಷಾ ಆಗಷ್ಟೇ ಕೆನ್ನೆಗೆ ಬಾರಿಸಿದಳೇನೋ ಎನ್ನುವಂತೆ ಬೆಚ್ಚಿಬಿದ್ದ. ತಮ್ಮಿಬ್ಬರ ನಡುವೆ ನಡೆದ ವಿಷಯವನ್ನು ಅವನ್ಯಾರಿಗೂ ಹೇಳಿರಲಿಲ್ಲ. ವರ್ಷಾಳೂ ಯಾರಿಗೂ ಹೇಳುವವಳಲ್ಲವೆಂಬುದು ಗೊತ್ತಿತ್ತು. ಅನುಪಮ ಕಾಕತಾಳೀಯವಾಗಿ ಆ ಹೋಲಿಕೆ ಹೇಳಿರುವಳೆಂಬುದು ಅರ್ಥವಾಯ್ತು. ಆದರೆ ಅವಳು ಆ ರೀತಿ ಅಂದದ್ದರಿಂದ

ಅವನ ಅಹಂಗೆ ಪೆಟ್ಟು ಬಿತ್ತು. ಇಂತಹುದೆಂದು ಹೇಳಲಾಗದ ರೊಚ್ಚು ಮೂಡಿತು. ಅವಳು ಹೇಳಿದುದ್ಯಾವುದನ್ನೂ ತಾನು ಲೆಕ್ಕಿಸಿಲ್ಲವೆಂಬುವಂತೆ ವರ್ಷಾಳಿಗೆ ತಿಳಿಯಪಡಿಸಬೇಕೆನಿಸಿತು. ಅದಕ್ಕೆ ಅನುಪಮಳೊಂದಿಗೆ ಮುನ್ನಿನ ಗೋಪಾಲಕೃಷ್ಣನಂತೆ ವರ್ತಿಸಬೇಕೆಂದುಕೊಂಡು, ಉತ್ಸಾಹ ಮೂಡಿಸಿಕೊಂಡ. ಮನಸ್ಸು ಹಗುರಗೊಂಡು ತೇಲತೊಡಗಿತು.

"ಇದು ದಿಗಿಲಲ್ಲ, ತಪಸ್ಸು. ಅನುಪಮ ಅನ್ನೋ ದೇವತೆಗೋಸ್ಕರ ಎಂದು ಎದ್ದು ಕುಳಿತು ಎರಡು ಕೈಗಳನ್ನು ಜೋಡಿಸುತ್ತ ನುಡಿದ.

"ದೇವತೆ ಕರುಣಿಸಿಯಾಯ್ತು ಭಕ್ತಾ! ಮತ್ತೆ ಫಲಪುಷ್ಪ ನೈವೇದ್ಯ ಗಳನ್ನು ಸಮರ್ಪಿಸಿಕೋ" ಎಂದು ನಾಟಕೀಯವಾಗಿ ನುಡಿಯುತ್ತ ಭಕ್ತನನ್ನು ಆಶೀರ್ವದಿಸುತ್ತಿರುವ ದೇವತೆಯಂತೆ ನಿಂತುಕೊಂಡಳು.

"ಫಲಪುಷ್ಪ ನೈವೇದ್ಯಗಳನ್ನು ಸಮರ್ಪಿಸಬೇಕೆಂದರೆ ದೇವತೆ ನನ್ನ ಮಡಿಲು ಸೇರಿ ಮೈಮರೆಸಬೇಕು."

"ಅದಕ್ಕೇನಭ್ಯಂತರವಿದೆ ಭಕ್ತಾ" ಎಂದು ಅವಳು ಅವನ ಮಡಿಲಲ್ಲಿ, ಕುಳಿತಳು. ಎಣ್ಣೆಗೆಂಪು ಬಣ್ಣದ ಮೈಮೇಲೆ ಬೆಳದಿಂಗಳು ವಿಚಿತ್ರವಾಗಿ ಕಂಗೊಳಿಸುತ್ತಿತ್ತು. ಅವಳಿಗೆ ಇಪ್ಪತ್ತೆಂಟು ವರ್ಷಗಳಿದ್ದಿರಬಹುದು. ಮದುವೆ ಯಾಗಿತ್ತು. ಇನ್ನೂ ಮಕ್ಕಳಾಗಿರಲಿಲ್ಲ. ಆದ್ದರಿಂದ ಮೈಯಿನ ಬಿಂಕ ಸಡಿಲಾಗಿರಲಿಲ್ಲ. ನೋಡಲು ಇನ್ನೂ ಹುಡುಗಿಯಂತೆಯೇ ಕಂಡುಬರುತ್ತಿದ್ದಳು.

ಮಾಟವಾದ ಮೂಗು, ಮೀನುಗಂಗಳು, ನೀಳ ಕತ್ತು, ಸೌಂದರ್ಯ ವನ್ನೆಲ್ಲ ತಮ್ಮಲ್ಲಿ ಕೇಂದ್ರೀಕರಿಸಿಕೊಂಡು ಬೆಳೆದಿವೆಯೇನೋ ಎನ್ನುವಂತೆ ಭಾಸವುಂಟು ಮಾಡುವ ಉನ್ನತ ಸ್ತನಗಳು, "ಬಡ ನಡುವಿನ ಬಾಲೆ" ಎನ್ನುವ ಹೊಗಳಿಕೆಗೆ ಅರ್ಹವಾದಂತಹ ಸೊಂಟ, ವಿಶಾಲವಾಗಿ ಹರಡಿಕೊಂಡ ನಿತಂಬಗಳು ಒಟ್ಟಿನಲ್ಲಿ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿದರೆ ಸಲೀಸಾಗಿ ಆರಿಸಿ ಬರುವ ಅರ್ಹತೆಗಳೆಲ್ಲವೂ ಅವಳಲ್ಲಿದ್ದವು ಅವಳು ನೋಡಲು ತುಂಬಾ ಸೆಕ್ಸಿಯಾಗಿ ಕಂಡು ಬರುತ್ತ, ಪುರುಷ ವರ್ಗಕ್ಕೆ ಸವಾಲನ್ನು ಎಸೆಯು ವಂತಿದ್ದಳು.

ಅವನು ಅವಳನ್ನು ಹತ್ತಿರಕ್ಕೆಳೆದುಕೊಂಡು ಮುತ್ತಿಟ್ಟ, ಅವಳು ಆ ಸ್ಪರ್ಶವನ್ನು ಪೂರ್ತಿಯಾಗಿ ಅನುಭವಿಸಿ "ಇನ್ನು ನಿಲ್ಲಿಸು ಗೋಪಾಲಕೃಷ್ಣ! ಯಾವುದನ್ನಾದರೂ ಶುರು ಮಾಡಿದರೆ ನನಗೆ ಪೂರ್ತಿಯಾಗಿ ಬೇಕು. ಮಧ್ಯದಲ್ಲಿ ಅಡ್ಡಿಯುಂಟಾದರೆ ನನ್ನಿಂದ ತಡ್ಕೊಳ್ಳೋದಿಕ್ಕಾಗೋದಿಲ್ಲ. ಅಸಲಿ ಆಚಾರಕ್ಕೊಂದು ಕೊಸರಿನಂತೆ ಇಲ್ಲಿಗೆ ಬರುವವಳು ಯಾರಿಗೂ ಹೇಳಿರದ

ಘಟನೆಯ ಬಗ್ಗೆ ಹೇಳಬೇಕೆಂತಲ್ಲ. ಅದನ್ನ ಮುಗಿಸಿಬಿಟ್ಟರೆ...." ಎಂದು ಅರ್ಧೋಕ್ತಿಯಲ್ಲಿ ನಿಲ್ಲಿಸಿದಳು.

"ಮತ್ತೆ ಹಾಗಿದ್ಮೇಲೆ ತಡ ಯಾಕೆ.... ಹೇಳು."

ಅನುಪಮ ತಾನು ಹೇಳಬೇಕಿರುವ ಘಟನೆಯನ್ನೆಲ್ಲ ಒಂದು ಸಲ ಮನನ ಮಾಡಿಕೊಳ್ಳುತ್ತಿರುವವಳಂತೆ ಸ್ವಲ್ಪ ಹೊತ್ತು ಮೌನವಾಗಿದ್ದು ನಂತರ ಹೇಳ ತೊಡಗಿದಳು. ಅವನು ಮನಸ್ಸು ಎತ್ತಲು ಹರಿದುಹೋಗದಂತೆ ನಿಗ್ರಹಿಸಿ ಕೊಂಡು ಕೇಳತೊಡಗಿದ.

"ನನಗಾಗ ಇಪ್ಪತ್ತು ವರ್ಷ.ಇಷ್ಟು ದಪ್ಪಗಿರಲಿಲ್ಲ. ತೆಳ್ಳಗೆ, ನಾಜೂಕಾಗಿ ಹೂಬಳ್ಳಿಯಂತೆ ಅಂತಾರಲ್ಲ ಹಾಗಿದ್ದೆ! ಪಟ್ಟಣದಲ್ಲಿ ಓದುತ್ತಿದ್ದವಳು ಬೇಸಿಗೆ ರಜೆಗೆ ಮನೆಗೆ ಬಂದಿದ್ದೆ. ದಿನವೆಲ್ಲ ಪುರಸೊತ್ತಿರುತ್ತಾದ್ದರಿಂದ ಏನೇನೋ ಯೋಚನೆಗಳು ನನ್ನನ್ನು ಮುತ್ತಿ ನಿಂತೆಡೆ ನಿಲ್ಲುವಂತೆಮಾಡುತ್ತಿರಲಿಲ್ಲ.... ವಯಸ್ಸಿನ ಪ್ರಭಾವ.. ಅದಕ್ಕೇ."

ಬೀದಿಯಲ್ಲಿ ಹೋಗುತ್ತಿರುವ ಯುವಕರು ನನ್ನತ್ತ ದಿಟ್ಟಿಸಿ ನೋಡಿದರೆ ಸಾಕು ಮೈ ಪುಳಕಗೊಳ್ಳುತ್ತಿತ್ತು. ಅವರ ನೋಟ ನನ್ನ ಮೈಮೇಲೆ ಹರಿದಾಡುತ್ತಿರುವಾಗ ಯಾವುದೋ ಮಧುರ ಕಂಪನ ಶರೀರವನ್ನು ಅಲುಗಾಡಿಸುತ್ತಿತ್ತು. ಗಂಡಿನ "ಖ್ಯಾಲ" ಹೆಚ್ಚಾಗತೊಡಗಿದೆಯೆಂದು ನನಗೆ ಅರ್ಥವಾಗ ತೊಡಗಿತ್ತು. ಆದರೆ ಅದಕ್ಕೋಸ್ಕರ ಏನು ಮಾಡಬೇಕೆಂಬುದು ಗೊತ್ತಾಗುತ್ತಿರಲಿಲ್ಲ ಸುಮ್ಮನೇನಮ್ಮಮನೆಯಗೇಟಿನಮುಂದೆನಿಂತು.ನನ್ನಶರೀರದ ಯಾವ ಯಾವ ಭಾಗಗಳು ಹುಡುಗರನ್ನು ಕೆಣಕುತ್ತವೋ ಅವುಗಳನ್ನು ತೋರಿಸಿಯೂ ತೋರಿಸದಂತೆ ಬಹಿರ್ಗತಗೊಳಿಸುತ್ತಿರುತ್ತಿದ್ದೆ.

ಈಗ ಆಲೋಚಿಸಿದರೆ ಅವೆಲ್ಲ ಬುದ್ಧಿಗೇಡಿತನವೆಂಬುದಾಗಿ ಅನಿಸುತ್ತದಾದರೂ ಆಗಿನ ಯೌವನದ ಪ್ರಾರಂಭದ ಹಂತದಲ್ಲಿ, ಬೇರೊಬ್ಬ ವ್ಯಕ್ತಿ ನೋಟದಿಂದ ಉಂಟು ಮಾಡುವ ಸಂಚಲನೆ, ಯಾವಾಗಲಾದರೊಮ್ಮೆ ಕದ್ದು ಮುಚ್ಚಿ ನೀಡುವ ಮುತ್ತು ಒದಗಿಸುವ ಪುಳಕ, ಬಸ್ಸಿನಲ್ಲಿ ಯಾವನಾದರೊಬ್ಬ ಚೆಂದದ ಹುಡುಗ ಗದ್ದಲದ ನೆಪದಲ್ಲಿ ಮೈಗೆ ಎಲ್ಲೆಲ್ಲೋ ಕೈ ತಾಕಿಸಿದಾಗ ಆಗುವ ಕಚಗುಳಿ ಇವೆಲ್ಲ ಎಂದೆಂದಿಗೂ ನೆನಪಿನಲ್ಲಿ ಉಳಿದುಕೊಳ್ಳುತ್ತವೆ.

ಆಗಿನ ನನ್ನ ಪರಿಸ್ಥಿತಿಯೂ ಅಷ್ಟೇ ಆಗಿತ್ತು.

ಮನೆಯಲ್ಲಿ ಒಬ್ಬಳೇ ಇದ್ದರೆ ಇಂತಹ ಆಲೋಚನೆಗಳಿಂದ ಹುಚ್ಚು ಹಿಡಿದು ಬಿಡುವಂತಿದೆಯೆಂದು ನಮ್ಮ ದೊಡ್ಡಪ್ಪನ ಊರಿಗಾದರೂ ಹೋಗಿ ಇದ್ದು ಬಂದರಾಯಿತೆಂದುಕೊಂಡು ಅಲ್ಲಿಗೆ ಹೊರಟೆ.ಆ ಊರು ಕದಿರಿಮಂಗಳಂ

ನಮ್ಮ ದೊಡ್ಡಪ್ಪನ ಮಗಳು ಧವಳ ನನ್ನ ವಯಸ್ಸಿನವಳೇ. ಒಳ್ಳೇ ಚುರುಕು ಹುಡುಗಿ, ಮಾತುಗಾರ್ತಿ. ದೊಡ್ಡಪ್ಪನ ಮನೆಗೆ ಹೋಗಲು ನಮ್ಮ ಮನೆಯಲ್ಲಿ ಅಭ್ಯಂತರ ಹೇಳಲಿಲ್ಲ. ಆಳನ್ನು ಜೊತೆ ಮಾಡಿ ಕಳುಹಿಸಿಕೊಟ್ಟರು.

ನನ್ನನ್ನು ನೋಡುತ್ತಲೇ ಧವಳಳಿಗೆ ಹಿಡಿಸಲಾರದಷ್ಟು ಸಂತೋಷ ಉಂಟಾಯ್ತು. ಕುಣಿದಾಡುವುದೊಂದೇ ಬಾಕಿ. ದೊಡ್ಡಪ್ಪ ದೊಡ್ಡಮ್ಮ ನನ್ನನ್ನು ಹಿಗ್ಗಿನಿಂದ ಆಹ್ವಾನಿಸಿದರು. ಆ ದಿನವೆಲ್ಲ ಪರಸ್ಪರ ಕುಶಲ ವಿಚಾರಣೆ ವಿಶೇಷಗಳನ್ನು ಕೇಳಿ ತಿಳಿದುಕೊಳ್ಳುವುದರಲ್ಲಿಯೇ ಕಳೆದುಹೋಯ್ತು.

ಧವಳ ಹತ್ತನೇ ತರಗತಿಗೆ ಓದು ನಿಲ್ಲಿಸಿದ್ದಳು. ಹೆಂಗಸರಿಗೇಕೆ ಕಾಲೇಜು ಓದೆಂದು ನಮ್ಮ ದೊಡ್ಡಪ್ಪ ನಿಲ್ಲಿಸಿ ಬಿಟ್ಟಿದ್ದ. ಆಗಿನಿಂದ ಅವಳು ಮನೆಯಲ್ಲೇ ಇರುತ್ತಿದ್ದಳು. ನಮ್ಮ ದೊಡ್ಡಪ್ಪನಿಗೆ ಭೂಮಿ-ಕಾಣಿ ಸಾಕಷ್ಟಿತ್ತು. ಗಂಡು ಮಕ್ಕಳಿರಲಿಲ್ಲ.

ನನ್ನೊಂದಿಗೆ ಎಷ್ಟು ಚೆನ್ನಾಗಿ ಮಾತಾಡಿದರೂ ಧವಳ-ಎರಡು ಮೂರು ವರ್ಷಗಳ ಹಿಂದಿನ ಧವಳಳಂತಿರಲಿಲ್ಲ. ಏನೋ ಹಿರಿತನ ಬಂದಂತಾಗಿತ್ತು. ಅದೇ ರೀತಿ ವರ್ತಿಸುತ್ತಿದ್ದಳು. ಸಾಯಂಕಾಲದ ಹೊತ್ತು 'ಹಾಗೆ ಅಲ್ಲಿ ಗೇಟಿನ ಬಳಿ ನಿಲ್ಲೋಣ್ವಾ' ಅಂದರೆ "ಬೇಡ ಅನೂ, ತಾರಸಿಯ ಮೇಲೆ ಹೋಗೋಣ ಗೇಟಿನ ಬಳಿ ನಿಂತುಕೊಂಡರೆ ಪೋಕರಿ ಹುಡುಗರೆಲ್ಲ ಪೋಜು ಕೊಡ್ತಾರೆ. ಹೆಣ್ಣನ್ನು ತಿಂದುಬಿಡುವಂತಹ ಅವರ ನೋಟ ತಾಳಿಕೊಳ್ಳೋದು ಕಷ್ಟ. ಅದೂ ಅಲ್ಲದೆ ನನಗದು ಅಸಹ್ಯ" ಎಂದಳು.

ಅವಳ ಮಾತುಗಳನ್ನು ಕೇಳಿದ ನಂತರ ನನ್ನನ್ನು ನಾನು ಬೈದುಕೊಂಡೆ ಗೇಟಿನ ಬಳಿ ನಿಂತು ಹುಡುಗರನ್ನು ನೋಡಬೇಕೆಂದುಕೊಂಡ ನನ್ನ ಮೇಲೆ ನನಗೇ ಅಸಹ್ಯ ಉಂಟಾಯ್ತು. ನನ್ನಲ್ಲಿಯೇ ಕೆಟ್ಟ ಭಾವನೆಗಳು ಮೊಳಕೆಯೊಡೆಯುತ್ತಿವೆ ಎನಿಸಿ, ಒಂದು ಕ್ಷಣ ಭಯವೂ ಉಂಟಾಯ್ತು. ಧವಳಂತೆ ನಾನು ಕೂಡ ಗಂಡಸರೆಂದರೆ ಇರುವ ಉತ್ಸುಕತೆಯನ್ನು ಕಡಿಮೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿಕೊಂಡೆ. ಆದರೆ ಬೀದಿಯಲ್ಲಿ ಯಾರಾದರೂ ಹುಡುಗನನ್ನು ನೋಡಿದಾಗ ಆ ನಿರ್ಧಾರ ಗಾಳಿಗೆ ಹಾರಿಹೋಗುತ್ತಿತ್ತು. ಸಹಜವಾಗಿಯೇ ನೋಟ ಅತ್ತ ಹೊರಳುತ್ತಿತ್ತು.

ಆ ಊರಿನಲ್ಲಿ ಒಂದು ಟೂರಿಂಗ್ ಟಾಕೀಜ್ ಇತ್ತು. ಮನರಂಜನೆಗೆ ಅದು ಒಳ್ಳೇ ಸಾಧನವಾಗಿತ್ತು. ಆ ಟಾಕೀಜ್ ಊರಿಗೆ ಎರಡು ಫರ್ಲಾಂಗುಗಳ ದೂರದಲ್ಲಿತ್ತು. ಸಾಯಂಕಾಲವಾಗುತ್ತಿದ್ದಂತೆಯೇ ಟಾಕೀಜಿನ ಲೌಡ್ ಸ್ಪೀಕರುಗಳಿಂದ "ಗಜಮುಖನೆ ಗಣಪತಿಯೇ ನಿನಗೆ ವಂದನೆ...." ಎನ್ನುವ ಹಾಡು

ಜೋರಾಗಿ ಕೇಳಿ ಬರತೊಡಗುತ್ತಿತ್ತು. ಅಲ್ಲಿಂದ ಸಿನಿಮಾ ಶುರುವಾಗುವವರೆಗೆ ಹಲವಾರು ಹಾಡುಗಳು ಕಿವಿಗಪ್ಪಳಿಸುತ್ತಿದ್ದವು.

ಸಾಯಂಕಾಲವಾಗುತ್ತಿದ್ದಂತೆ ಹುಡುಗರೆಲ್ಲ ಅಲ್ಲಿಗೆ ಸೇರುತ್ತಿದ್ದರು. ಸುತ್ತ ಮುತ್ತಲಿನ ಹಳ್ಳಿಗಳ ಜನವೂ ಬರುತ್ತಿದ್ದರು. ಸಾಯಂಕಾಲ ಏಳು ಗಂಟೆಗೆ ಶುರುವಾದ ಸಿನಿಮಾ ಹತ್ತು ಗಂಟೆಗೆ ಬಿಡುತ್ತಿತ್ತು. ಒಂದೇ ಆಟ ಎರಡು ಆಟ ತೋರಿಸಿದರೆ ಕಲೆಕ್ಷನ್ ಬರುವುದಿಲ್ಲವೆಂದು ಒಂದೇ ಆಟ ತೋರಿಸುತ್ತಿದ್ದರು.

ಊರಲ್ಲಿಯೇ ಟಾಕೀಸು ಇದ್ದದ್ದು ನಮಗನುಕೂಲವಾಗಿತ್ತು. ಬಯಸಿದಾಗಲೆಲ್ಲ ಸಿನಿಮಾಗೆ ಹೋಗುತ್ತಿದ್ದೆವು. ನಮ್ಮ ದೊಡ್ಡಪ್ಪನ ಮನೆ ಇದ್ದ ಬೀದಿಯಲ್ಲಿನವರೆಲ್ಲ ಒಂದಿಲ್ಲೊಂದು ರೀತಿಯಲ್ಲಿ ಬಂಧುಗಳಾಗುತ್ತಿದ್ದರು. ಆದ್ದರಿಂದಲೇ ನಮ್ಮ ಓರಗೆಯ ಹುಡುಗಿಯರೆಲ್ಲ ಸಲಿಗೆಯಿಂದ ಇರುತ್ತಿದ್ದೆವು. ಸಿನಿಮಾ ಬದಲಾದರೆ ಸಾಕು, ಟಾಕೀಸಿಗೆ ಹೊರಡುತ್ತಿದ್ದೆವು. ನಿಜಕ್ಕೂ ಆ ಅನುಭವ ತುಂಬಾ ಗಮ್ಮತ್ತಿನದಾಗಿರುತ್ತಿತ್ತು.ಸಿನಿಮಾ ಬದಲಾದ ದಿನ ಐದು ಗಂಟೆಯಿಂದಲೇ ಉತ್ಸಾಹ ಉಕ್ಕುತ್ತಿತ್ತು. ಒಬ್ಬರ ಮನೆಗೆ ಮತ್ತೊಬ್ಬರು ಹೋಗಿ ಸಿನಿಮಾಗೆ ಹೋಗುತ್ತಿರುವೆವೆಂದೂ, ಜೊತೆಗೆ ಬರಬೇಕೆಂದು ಕರೆಯುತ್ತಿದ್ದೆವು ಎಲ್ಲರೂ ಬೇಗ ಬೇಗ ಕೆಲಸ-ಬೊಗಸೆ ಮುಗಿಸಿ ತಯಾರಾಗಿ ಬಿಡುತ್ತಿದ್ದೆವು.

ನಾನು, ಧವಳ ಹಿತ್ತಲಿನಲ್ಲಿದ್ದ ಗಿಡಗಳ ಪಾತಿಗೆ ನೀರು ಹಾಕಿ, ಮಲ್ಲಿಗೆ ಹೂ ಕಿತ್ತು, ಪೋಣಿಸಿ, ಸ್ನಾನಮಾಡಿ, ಹೂ ಮುಡಿದು ತಯಾರಾಗುತ್ತಿದ್ದೆವು. ಆರುವರೆಯ ಹೊತ್ತಿನಲ್ಲಿ ಏನೋ ಒಂದಿಷ್ಟು ತಿಂದ ಶಾಸ್ತ್ರ ಮಾಡಿ ಸಿನಿಮಾಗೆ ಹೊರಟುಬಿಡುತ್ತಿದ್ದೆವು.

ಬೀದಿಯ ತುದಿಯಲ್ಲಿ ನಮಗೋಸ್ಕರವೇ ಹುಡುಗರು ಕಾಯುತ್ತಿರುತ್ತಿದ್ದರು. ಎಲ್ಲರೂ ಬಂಧುಗಳೇ ಆದ್ದರಿಂದ ಆ ರೀತಿ ಹುಡುಗ, ಹುಡುಗಿಯರು ಕೂಡಿ ಹೋಗುತ್ತಿದ್ದರೂ ಅಷ್ಟಾಗಿ ಲೆಕ್ಕಿಸುತ್ತಿರಲಿಲ್ಲ.

ನಾನು ಹೋದ ದಿನವೇ ಸಿನಿಮಾಗೆ ಹೋಗಿದ್ದೆವು....

ಆ ದಿನ ಹಳೆಯ ಜನಪ್ರಿಯ ಚಿತ್ರವೊಂದು ಬಂದಿತ್ತು. ನಾನೂ ಧವಳ ಸಿನಿಮಾಗೆ ಹೋಗುತ್ತಿದ್ದೆವೆಂದು ಗೊತ್ತಾಗಿ ನಮ್ಮತ್ತೆ ಮಕ್ಕಳು ಗಿರಿಜ, ವನಜ ಕೂಡ ನಮ್ಮೊಂದಿಗೆ ಹೊರಟರು ನಾವು ಬೀದಿ ತುದಿ ತಲುಪುವಷ್ಟರಲ್ಲಿ ನಮಗೆ ಅತ್ತಿಗೆಯ ದಾದೆಯಾಗಬೇಕಾದವರಿಬ್ಬರು ಕೂಡಿಕೊಂಡರು. ಊರಿನಲ್ಲಿನ ಇತರರು ಕೂಡ ಸಿನಿಮಾಗೆ ಗುಂಪುಗುಂಪಾಗಿ ಹೋಗುತ್ತಿದ್ದರು.

ಧವಳ ಚಿಗುರು ಮೀಸೆ ಹುಡುಗರನ್ನು ನೋಡುತ್ತಲೇ ನನ್ನ ಕಿವಿಯಲ್ಲಿ ಪಿಸುಗುಟ್ಟಿದಳು "ಛೀ, ಛೀ . ಸಿನಿಮಾಗೆ ಬರೋದಿಕ್ಕೆ ಇದೇ ಬೇಜಾರು. ಈ ಪೋಲಿ ಹುಡುಗರೆಲ್ಲ 'ಧಿಂರಂಗ' ಅಂತ ತಯಾರಾಗಿಬಿಟ್ಟಿರ್ತಾರೆ."

ನನಗೆ ಮಾತ್ರ ತುಂಬಾ ಉತ್ಸಾಹವಾಗಿತ್ತು. ಹುಡುಗರ ಗುಂಪಿನಲ್ಲಿ ನನಗೆ ಭಾವನ ಸಂಬಂಧಿಕರಿಬ್ಬರಿದ್ದರು.

"ಆ ಭಾಸ್ಕರನನ್ನು ನೋಡು ಹೇಗಿದ್ದಾನೋ... ಬಿ ಎಸ್ಸಿ ಓದಿದ್ದಾನೆ ಅನ್ನೋ ಮಾತೇ ಹೊರತು ಗಂಭೀರವಾಗಿ ಅನ್ನೋದು ಗೊತ್ತಿಲ್ಲ. ಸಾಯಂಕಾಲ ಆದ್ರೆ ಸಾಕು. ಸಿನಿಮಾಗೆ ತಯಾರು" ಎಂದಳು ಧವಳ. ಅವಳು ಹೇಳಿದ ಭಾಸ್ಕರನೂ ನಮಗೆ ಸಂಬಂಧಿಯೇ ವರಸೆಯಲ್ಲಿ ಮಾವನ ಮಗ. ಪಟ್ಟೆಲುಂಗಿಯ ಮೇಲೆ ಬಿಳಿ ಅಂಗಿ ಹಾಕಿಕೊಂಡಿದ್ದ.

ಅಷ್ಟು ಜನ ಹುಡುಗರ ಮುಂದೆ ನಡೆಯುತ್ತಿರಬೇಕಾದರೆ ನನಗರಿವಿಲ್ಲ ದಂತೆಯೇ ನನ್ನ ಕಾಲುಗಳು ತಡವರಿಸಿದವು. ಸೊಂಟ ತನ್ನಿಂತಾನೇ ಬಳುಕಿತು ಶರೀರದಲ್ಲಿನ ಯಾವುದೋ ಕೆಲವು ಅವಯವಗಳು ಭಾರಗೊಳ್ಳುತ್ತಿರುವುದು ಗೊತ್ತಾಗುತ್ತಲೇ ಇತ್ತು. ಉಳಿದವರ ಪರಿಸ್ಥಿತಿಯೂ ಹೆಚ್ಚು ಕಡಿಮೆ ಅಷ್ಟೇ ಆಗಿತ್ತು. ಆದರೆ ಧವಳಾ ಮಾತ್ರ ಅಲ್ಲಿ ಹುಡುಗರೇ ಇಲ್ಲವೆನ್ನುವಂತೆ ತೀರಾ ನಿರ್ಲಕ್ಷ್ಯದಿಂದ ಮುಂದೆ ಮುಂದೆ ನಡೆದಳು, ನನಗೂ ಅಷ್ಟು ಒಪ್ಪ ವಾಗಿ ಇರಬೇಕೆನಿಸುತ್ತಿತ್ತಾದರೂ ಸಾಧ್ಯವಾಗುತ್ತಿದ್ದಿಲ್ಲ.

ನಮ್ಮ ಹಿಂದೆಯೇ ಹುಡುಗರ ಗುಂಪು ಹೊರಟಿತು. ಊರು ದಾಟಿದೆವು. ಸೂರ್ಯ ಪಶ್ಚಿಮದ ಬೆಟ್ಟದ ಹಿಂದೆ ಕಣ್ಮರೆಯಾಗುತ್ತಲಿದ್ದ. ಸಂಧ್ಯೆಯ ಕಾಂತಿ ಲೋಕವನ್ನು ಕೆಂಪು ವರ್ಣಕ್ಕೆ ತಿರುಗಿಸಿತ್ತು. ದೂರದಲ್ಲಿ ಬರುತ್ತಿದ್ದ ಕಾಲ್ತುಳಿತದಿಂದ ಧೂಳು ಮೇಘದಂತೆ ಆವರಿಸಿಕೊಳ್ಳುತ್ತಿತ್ತು. ಊರಿನಲ್ಲಿನ ಮನೆಗಳಿಂದ ಹೊಗೆ ಚಿತ್ರ-ವಿಚಿತ್ರ ಆಕಾರ ತಾಳಿ-ತೇಲಿಹೋಗುತ್ತಿತ್ತು.

ಹಿಂದಿನಿಂದ ಬರುತ್ತಿದ್ದ ಹುಡುಗರು ನಮಗೆ ಕೇಳಿಬರುವಂತೆ ಏನೇನೋ ಜೋಕ್ಸ್ ಹೇಳುತ್ತಿದ್ದರು. ಭಾಸ್ಕರನಂತೂ ಮತ್ತೂ ಜಾಸ್ತಿ ನಮ್ಮ ಮುಂದೆ ಮೂರು ಗುಂಪು ಹೋಗುತ್ತಿದ್ದವು. ಅವುಗಳಲ್ಲಿ ಎಲ್ಲ ವಯಸ್ಸಿನವರೂ ಇದ್ದರು.

ಧವಳ ಮಾತ್ರ ಹುಡುಗರ ಜೋಕ್‌ನ್ನು ಲೆಕ್ಕಿಸದೆ ಏನೇನೋ ಮಾತಾಡುತ್ತಿದ್ದಳಾದರೂ ನನ್ನ ಗಮನ ಅತ್ತ ಇರಲಿಲ್ಲ. ನನ್ನ ಕಿವಿ ಮತ್ತೆ ಹುಡುಗರ ಜೋಕ್‌ಗಳನ್ನು ಕೇಳಲೆಂದೇ ಪ್ರಯತ್ನಿಸುತ್ತಿದ್ದವು. ಧವಳಳಂತೆ ಎಂತಹುದೇ ಆವೇಶ, ಉದ್ರೇಕವಿಲ್ಲದಂತಿರಲು ನನ್ನಿಂದಾಗುತ್ತಿದ್ದಿಲ್ಲ.

ಅಷ್ಟರಲ್ಲಿ ಟಾಕೀಸು ಸಮೀಪಿಸಿತು. ಜನರು ತಕ್ಕಮಟ್ಟಿಗಿದ್ದರು. ಸಿನಿಮಾ ಶುರುವಾಗಲು ಇನ್ನು ಸಮಯವಿತ್ತು. ಹೊರಗೆ ನಿಂತುಕೊಂಡೆವು. ಟಾಕೀಸಿನ ಆವರಣದಲ್ಲಿ ಮೂರು ಅಗಂಡಿಗಳಿದ್ದವು ಒಂದು ಚಹದಂಗಡಿ, ಇನ್ನೊಂದು ಸೋಡಾ ಅಂಗಡಿ, ಮತ್ತೊಂದು ಬೀಡಾ ಅಂಗಡಿ ಟಾಕೀಸಿನ ಮಾಲೀಕನೂ ನಮಗೆ ದೂರದ ಸಂಬಂಧಿಯೇ.ಆದಕ್ಕೇ ನಾವೆಲ್ಲ ಒಳಗೆ ಹೋಗಿ ನಿಂತುಕೊಂಡೆವು. ಒಳಗೆ ಅಂದರೆ ಟಾಕೀಸಿನ ಒಳಗೆಲ್ಲ ಬಿದಿರು ತಡಿಕೆ ಕಟ್ಟಿದ್ದ ಒಂದು ಪಾರ್ಟೀಶನ್‌ನ ಬಳಿ ಟಾಕೀಸಿನ ಮುಂದೆ ನಿಂತುಕೊಂಡೆವು.

ಅಷ್ಟರಲ್ಲಿ ವನಜಳ ಅಣ್ಣ ಅಲ್ಲಿಗೆ ಬಂದ. ನನ್ನನ್ನು ಯಾವಾಗ ಬಂದೆ ಎಂದು ಮಾತನಾಡಿಸಿದ. ಅಲ್ಲಿದ್ದ ಸೋಡಾ ಅಂಗಡಿಯಿಂದ ಎಲ್ಲರಿಗೂ ರೋಜಾ ಮಿಲ್ಕ್ ತರಿಸಿಕೊಟ್ಟ. ಧವಳಳೊಬ್ಬಳೇ ತೆಗೆದುಕೊಳ್ಳಲಿಲ್ಲ. ನಾನು ತಗೋ ಎಂದು ಬಲವಂತ ಮಾಡಿದಾಗ, ವನಜ, ಗಿರಿಜರಿಗೆ ಕೇಳಿಸದಂತೆ ನನ್ನೊಂದಿಗೆ ಹೇಳಿದಳು 'ಬೇಡ ಈ ದಿನ ರೋಜ್ ಮಿಲ್ಕ್ ತಗೊಂಡ್ರೆ ನಾಳೆ ಪ್ರೇಮ ಪತ್ರ ತಗೋ ಅಂತಾನೆ.'

ಧವಳ ಹೇಳಿದ್ದರಲ್ಲೂ ನಿಜವಿದೆ ಎನಿಸಿತು. ಗಂಡಸರಿಗೆ ಸ್ವಲ್ಪ ಸಲಿಗೆ ಕೊಟ್ಟರೂ ಸಾಕು ತಲೆ ಮೇಲೇರಿ ಕುಳಿತುಬಿಡುತ್ತಾರೆ. ಅವರನ್ನು ಪ್ರಾರಂಭ ದಲ್ಲೇ ದೂರವಿಟ್ಟರೆ ನಮ್ಮ ತಂಟೆಗೆ ಬರುವುದಿಲ್ಲ. ಆದರೆ ನನಗದು ಸಾಧ್ಯವಾಗು ತ್ತಿದ್ದಿಲ್ಲ. ಎದುರಿಗೆನಿಂತಿದ್ದ ಭಾಸ್ಕರನ ನೋಟದೊಂದಿಗೆ ನನ್ನ ನೋಟ ಆಗಾಗ ಢಿಕ್ಕಿ ಹೊಡೆದು ಹಿಂತಿರುಗುತ್ತಿತ್ತು. ಅವನು ತನ್ನ ಸ್ನೇಹಿತರೊಂದಿಗೆ ಮಾತಾ ಡುತ್ತಿದ್ದರೂ ಪದೇ ಪದೇ ನಮ್ಮತ್ತಲೇ ನೋಡುತ್ತಿದ್ದ.

ಕತ್ತಲು ಆವರಿಸಿಕೊಂಡಿದ್ದರಿಂದ ಟಾಕೀಸಿನಲ್ಲಿ ದೀಪಗಳು ಹೊತ್ತಿ ಕೊಂಡವು. ಜನರೂ ಸಾಕಷ್ಟು ಬಂದಿದ್ದರು. ನಾವು ಟಿಕೆಟ್ ತೆಗೆಸಿಕೊಂಡು ಒಳಗೆ ಹೋಗಿ ಕುಳಿತೆವು. ಸುತ್ತಲೂ ಗೋಡೆಯಂತಹವುಗಳೇನೂ ಇಲ್ಲದ್ದ ರಿಂದ ತಣ್ಣನೆಯ ಗಾಳಿ ಮೈಗೆ ತಗುಲುತ್ತ ಹಾಯೆನಿಸುತ್ತಿತ್ತು. ನಮ್ಮ ಹಿಂದೆಯೇ ಬಂದು ಭಾಸ್ಕರ್ ಮತ್ತವನ ಸ್ನೇಹಿತರ ಗುಂಪು ಸರಿಯಾಗಿ ನಮ್ಮ ಹಿಂದೆಯೇ ಕುಳಿತಕೊಂಡರು. ಕೊನೆಯಲ್ಲಿ ಕುಳಿತ ಧವಳಳ ಹಿಂದೆಯೇ ಭಾಸ್ಕರ್ ಕುಳಿತುಕೊಂಡ. ನನ್ನ ಹಿಂದೆ ವನಜಳ ಅಣ್ಣ ಕುಳಿತುಕೊಂಡ. ಎಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಸಂಬಂಧಿಗಳೇ ಆದುದರಿಂದ ಅವರು ಆಗಾಗ ಮಾತಾಡುತ್ತಿದ್ದರು.

ಆದರೆ ಧವಳ ಮಾತ್ರ ಯಾರಿಗೂ ತನ್ನೊಂದಿಗೆ ಮಾತಾಡುವ ಅವಕಾಶ ವನ್ನೇ ಕೊಡಲಿಲ್ಲ. ತನ್ನ ಸೀರೆಯ ಸೆರಗನ್ನು ಸಾಧ್ಯವಾದಷ್ಟು ಎಳೆದುಕೊಂಡು

ಸುತ್ತಲೂ ಹೊದ್ದುಕೊಂಡಳು. ಎಷ್ಟರ ಮಟ್ಟಿಗೆ ಹೊದ್ದುಕೊಂಡಳೆಂದರೆ, ಅವಳ ಮೇಲ್ಭಾಗವಾಗಲಿ, ಕೈಗಳನ್ನು ಇಟ್ಟುಕೊಳ್ಳಲು ಕುರ್ಚಿಗಿರುವ ಎರಡು ಆಸರೆಗಳಾಗಲಿ ಕಂಡು ಬರುತ್ತಿರಲಿಲ್ಲ.

ಆ ರೀತಿ ತುಂಬು ಸೆರಗು ಹೊದ್ದುಕೊಂಡ ಅವಳು ತುಂಬಾ ಗಂಭೀರ ವಾಗಿ ...... .. ಡಿಗ್ನಿಫೈಡಾಗಿ ಕಂಡುಬರುತ್ತಿದ್ದಳು. ನನಗೂ ಆ ರೀತಿ ಸೆರಗು ಹೊದೆದುಕೊಳ್ಳಬೇಕೆನಿಸಿತಾದರೂ, ಅಜ್ಜಮ್ಮನಂತೆಆ ರೀತಿ ಹೊದ್ದುಕೊಳ್ಳಲು ಮನಸ್ಸು ಒಡಂಬಡಲಿಲ್ಲ.

ಹಾಡುಗಳನ್ನು ನಿಲ್ಲಿಸಿ, ಗಂಟೆ ಮೊಳಗಿಸಿದರು. ನಂತರ ಥಿಯೇಟರಿನ ಒಳಗೆ ದೀಪಗಳು ಆರಿ ಹೋಗಿನ್ಯೂಜ್‌ರೀಲ್ ಶುರುವಾಯ್ತು. ಅದುಮುಗಿಯು ತ್ತಲೇ ಸಿನಿಮಾ ಶುರುವಾಯ್ತು. ಮೊದಲಿಗೇ ಕಥಾನಾಯಕಿ ಕಂಡುಬಂದದ್ದ ರಿಂದ ಭಾಸ್ಕರ ಮತ್ತವನ ಸ್ನೇಹಿತರ ಗುಂಪು ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿತು.

ನಾವು ಮಾತ್ರಯಾಕೆ ಸುಮ್ಮನಿರಬೇಕು? 'ಹೀರೋಬರೋತ್ಲೆ ಚಪ್ಪಾಳೆ ತಟ್ಟೋಣ. ಯಾರಿಗಾದರೂ ಸಿಳ್ಳೆ ಹಾಕೋಕೆ ಬರುತ್ತಾ' ಎಂದು ಕೇಳಿದಳು ಸರಳ, ನಮ್ಮೆಲ್ಲರಲ್ಲಿ ಅವಳೇ ಸ್ವಲ್ಪ ಎದೆಗಾತಿ.

'ಛಿ, ಛಿ ... ಅಂತಹವೆಲ್ಲ ಬೇಡ ನಾವೂ ಅವರಂತೆ ಚಿಲ್ಲರೆಯಾಗಿ ವರ್ತಿಸಿ ದರೆ ಹ್ಯಾಗೆ?' ಆದರೆ ಅವಳ ಹಾಗೆ ಗೌರಮ್ಮನಂತಿರಲು ಇಷ್ಟವಿರದ ಉಳಿ ದವರು ಅದಕ್ಕೆ ಒಪ್ಪಿಕೊಳ್ಳಲಿಲ್ಲ. ಹೀರೋ ಯಾವಾಗ ಬರುತ್ತಾನೆ ಎಂದು ಕಾಯತೊಡಗಿದೆವು. ಧವಳಳೊಬ್ಬಳನ್ನು ಬಿಟ್ಟು ನಾವೆಲ್ಲರೂ ಚಪ್ಪಾಳೆ ತಟ್ಟಿದೆವು. ಸರಳ ಸಿಳ್ಳೆ ಹಾಕಲು ಪ್ರಯತ್ನಿಸಿದಳಾದರೂ ಸಾಧ್ಯವಾಗಲಿಲ್ಲ. ಹುಡುಗರಿಗೆ ಸವಾಲಾಗಿ ಚಪ್ಪಾಳೆ ತಟ್ಟಿದ್ದಕ್ಕೆ ನಮ್ಮ ಹಿಂದಿರುವ ಹುಡುಗರ ಮುಖಗಳು ಹೇಗಿರುತ್ತವೋ ನೋಡಬೇಕೆನಿಸಿಹಿಂದಿರುಗಿ ನೋಡಿದೆ. ಆ ಮಬ್ಬು ಬೆಳಕಿನಲ್ಲಿ ಅವರು ಸರಿಯಾಗಿ ಕಂಡುಬರಲಿಲ್ಲ.

ಅಷ್ಟೆಲ್ಲ ನಡೆದರೂ ಧವಳ ಒಂದು ಮಾತು ಕೂಡ ಆಡಲಿಲ್ಲ. ಹೊದ್ದಿದ್ದ ಸೆರಗು ಒಂದಿಂಚಾದರೂ ಸರಿಯಲಿಲ್ಲ. ಅಷ್ಟು ಬಿಗಿಯಾಗಿ ಸೆರಗು ಹೊದ್ದು ಕೊಂಡರೆ ಗಾಳಿ ಕೂಡ ಆಡುವುದಿಲ್ಲವೆನಿಸಿತು. ಆದರೆ ವಯಸ್ಸಿನ ಕಾಟಕ್ಕೆ, ಯೌವನದ ಕೀಟಲೆಗೆ ಶರಣಾಗದೆ ಅಷ್ಟು ನಿಶ್ಚಲವಾಗಿ ಕುಳಿತು ಸಿನಿಮಾ ನೋಡುತ್ತಿರುವ ಅವಳನ್ನು ಪ್ರಶಂಸಿಸಬೇಕೆನಿಸಿತು. ಆ ರೀತಿ ಮಾಡಲು ನನ್ನಿಂದಾಗಲಿಲ್ಲ.

ಇಂಟರ್‌ವಲ್‌ನಲ್ಲಿ ವನಜಳ ಅಣ್ಣ ಚಹತರಿಸಿದ. ಧವಳಳೊಬ್ಬಳನ್ನು ಬಿಟ್ಟು ನಾವೆಲ್ಲರೂ ಚಹ ಕುಡಿದೆವು. ಹತ್ತೂವರೆಯ ಸಿನಿಮಾ ಬಿಟ್ಟಿತು. ಮನೆಯತ್ತ ಹೆಜ್ಜೆ ಹಾಕಿದೆವು. ಭಾಸ್ಕರ್ ಮತ್ತವನ ಸ್ನೇಹಿತರು ಕತ್ತಲಲ್ಲಿ ಕಾಡಿಸಬಹುದೆಂದು ಧವಳ ನನ್ನನ್ನು ತನ್ನ ಪಕ್ಕದಲ್ಲೇ ಕರೆದುಕೊಂಡು ಹೆಜ್ಜೆ ಹಾಕುತ್ತಿದ್ದಳು. ಊರು ಬಂದ ನಂತರ ಯಾರ ಮನೆಗವರು ಸೇರಿಕೊಂಡೆವು.

ನಾಲ್ಕು ದಿನಗಳು ಕಳೆದವು. ಆ ನಾಲ್ಕು ದಿನಗಳಲ್ಲಿ ನಾನು ಧವಳಳನ್ನು ಮತ್ತಷ್ಟು ಸೂಕ್ಷ್ಮವಾಗಿ ಪರಿಶೀಲಿಸಿದೆ. ಅವಳ ಒಪ್ಪ–ಓರಣ, ವಯಸ್ಸಿನ ಚೇಷ್ಟೆಗೆ ಸೋಲುದಿರುವುದು ನನ್ನನ್ನು ಆಶ್ಚರ್ಯಗೊಳಿಸಿದ್ದಷ್ಟೇ ಅಲ್ಲದೆ, ಅವಳ ಮೇಲೆ ಗೌರವವನ್ನೂ ಮೂಡಿಸಿತು. ನಮ್ಮ ದೊಡ್ಡಮ್ಮ ಕೂಡ ಒಂದು ದಿನ ಮಾತಿನ ನಡುವೆ ಮಗಳನ್ನು ಹೊಗಳಿದಳು. "ಅನೂ! ಧವಳ ನನ್ನ ಮಗಳು ಅನ್ನೋದ್ರಿಂದ ಹೇಳ್ತಿಲ್ಲ, ನಿಜ ಹೇಳಬೇಕೆಂದರೆ ಅವಳಂತಹ ಬುದ್ಧಿವಂತೆ, ಸನ್ನಡತೆಯು ಹುಡುಗಿ ಸುತ್ತ–ಮುತ್ತ ಹತ್ತಾರು ಹಳ್ಳಿಗಳಲ್ಲೇ ಇಲ್ಲ. ಸಲ್ಲದ ಹುಡುಗಾಟ ಇಲ್ಲ, ಗಂಡಸರನ್ನು ಕಣ್ಣೆತ್ತಿಯೂ ನೋಡೋದಿಲ್ಲ! ಅವಳಿಗಿರೋ ಒಂದೇ ಹುಚ್ಚು ಸಿನಿಮಾದ್ದು. ಎರಡು ದಿನಕ್ಕೊಂದು ಸಲ ನೋಡಿದ ಸಿನಿಮಾ ಬೇಕಾದ್ರೂ ನೋಡ್ತಾಳೆ. ಸಿನಿಮಾಗೆ ಹೋದಾಗಲೂ ಗಂಭೀರವಾಗೇ ಇರ್‍ತಾಳೆ.

ದೊಡ್ಡಮ್ಮ ಹೇಳಿದ್ದರಲ್ಲಿ ಸುಳ್ಳೇನೂ ಇರಲಿಲ್ಲ. ನಾನೇ ಕಣ್ಣಾರೆ ನೋಡಿದ್ದೆನ್ನೆ!

ಮತ್ತೆ ಸಿನಿಮಾ ಬದಲಾಯ್ತು. ಆ ದಿನ ಸಾಯಂಕಾಲ ಸಿನಿಮಾಗೆ ಹೋಗಬೇಕೆಂದು ನಿರ್ಧಾರವಾಯ್ತು. ನಾನೂ, ಧವಳ ನೀರು ತರಲು ಕೊಡ ಎತ್ತಿಕೊಂಡೆವು. ನಾನು ನೀರು ಸೇದಿಕೊಟ್ಟಂತೆಲ್ಲ ಧವಳಾ ಹೊತ್ತು ಹಾಕುತ್ತಿದ್ದಳು. ಕೊನೆಯಲ್ಲಿ "ಇದೇ ಕೊನೆಯ ಕೊಡ. ಅದನ್ನ ತುಂಬ್ಕೊಂಡು ಬಂದ್ಬಿಡು" ಎಂದು ತಾನೊಂದು ಕೊಡ ಎತ್ತಿಕೊಂಡು ಹೊರಟಳು. ನಾನೂ ಅವಳ ಹಿಂದೆಯೇ ಕೊಡ, ಹಗ್ಗ ಎತ್ತಿಕೊಂಡು ಹೊರಟೆ.

ಕೊಡ ಇಳಿಸಿದ ನಂತರ ಧವಳಾ ನನ್ನ ಬಳಿ ಬಂದು "ಇವತ್ತು ನಾನು ಸಿನಿಮಾ ನೋಡೋದು ಕ್ಯಾನ್ಸಲ್ ಮೂವಮೂಲಿ ತಿಂಗಳ ರಜೆ ಶುರುವಾಯ್ತು. ಮೂರು ದಿನ ನಮ್ಮಮ್ಮ ಎಲ್ಲಿಗೂ ಕಳಿಸಿಕೊಡೋದಿಲ್ಲ, ನೀನು ಹೋಗೋ ಹಾಗಿದ್ರೆ ವನಜ, ಗಿರಿಜಳೊಂದಿಗೆ ಹೋಗು" ಎಂದಳು.

"ದೊಡ್ಡಮ್ಮನನ್ನು ಕೇಳಿ ನೋಡಲೆ?"

"ಬೇಡ, ಉಪಯೋಗವಾಗೋದಿಲ್ಲ." ಸರಿ, ಇನ್ನೇನು ಮಾಡುವುದೆಂದು ನಾನೊಬ್ಬಳೇ ಹೊರಟೆ. ನನ್ನ ಸೀರೆಗಳು ಮಾಸಿದ್ದರಿಂದ ಧವಳಳ ಸೀರೆಯೊಂದನ್ನು ಉಟ್ಟುಕೊಂಡು ಹೊರಬಿದ್ದೆ. ಸಮಯ ಆಗಿಹೋಗಿತ್ತು. ಹಾಡು ಕೇಳಿಸುತ್ತಿರಲಿಲ್ಲ. ನಾನು, ವನಜ, ಗಿರಿಜ ಓಡು ನಡಿಗೆಯಲ್ಲಿ ಟಾಕೀಸ್ ತಲುಪಿದೆವು. ನ್ಯೂಸ್‌ರೀಲ್ ಮುಗಿದು ಟೈಟಲ್ಸ್ ಬೀಳತೊಡಗಿದ್ದವು. ನಾವು ಒಳಗೆ ಹೋಗುವಷ್ಟರಲ್ಲಿ ಭಾಸ್ಕರ ಮತ್ತವನ ಸ್ನೇಹಿತರ ಗುಂಪು ಅಲ್ಲಿ ಸಿದ್ಧವಾಗಿತ್ತು. "ನಿಮಗೋಸ್ಕರ ಮುಂದಿನ ಸಾಲಿನಲ್ಲಿ ಸೀಟನ್ನು ಹಿಡಿದಿದ್ದೇವೆ. ಕೂತ್ಕೊಳ್ಳಿ" ಎಂದು ಹೇಳಿದ ವನಜಳ ಅಣ್ಣ. ಕತ್ತಲಿದ್ದುದರಿಂದ ಮುಖಗಳು ಕಾಣಿಸುತ್ತಿರಲಿಲ್ಲ. ಧ್ವನಿಯ ಮೇಲಿಂದ ಯಾರು ಯಾರೆಂಬುದನ್ನು ಗುರುತು ಹಿಡಿದು, ಹೋಗಿ ಮುಂದಿನ ಸಾಲಿನಲ್ಲಿ ಕುಳಿತೆವು ಕುಳಿತುಕೊಳ್ಳುವಾಗ ಸರಿಯಾಗಿ ನನ್ನ ಹಿಂದಿನ ಸೀಟಿನಲ್ಲಿ ಭಾಸ್ಕರ್ ಕುಳಿತಿರುವನೆಂಬುದನ್ನು ಗಮನಿಸಿದೆ. ಅಷ್ಟರಲ್ಲಿ ಕಣ್ಣುಗಳು ಕತ್ತಲಿಗೆ ಸ್ವಲ್ಪ ರೂಢಿಗೊಂಡಿದ್ದವು.

ಟೈಟಲ್ಸ್ ಮುಗಿದು ಸಿನಿಮಾ ಶುರುವಾಯ್ತು. ಓಡು ನಡಿಗೆಯಲ್ಲಿ ಬಂದುದರಿಂದ ಏದುಸಿರು, ಹತ್ತಿಕೊಂಡಿತ್ತು. ಹೃದಯ ಸ್ವಲ್ಪ ಜೋರಾಗಿಯೇ ಹೊಡೆದುಕೊಳ್ಳುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಸುಧಾರಿಸಿಕೊಂಡೆ. ಧವಳ ಬರದಿರುವುದು ನನಗೆ ಅರೆಕೊರೆ ಎನಿಸತೊಡಗಿತು. ಅವಳ ನೆನಪಾದುದರಿಂದ ಕುರ್ಚಿಯತ್ತ ಕುಳಿತುಕೊಳ್ಳುತ್ತಿರುವಂತೆಯೇ ತುಂಬು ಸೆರಗು ಹೊದ್ದುಕೊಳ್ಳುವ ದೃಶ್ಯ ಕಣ್ಣ ಮುಂದೆ ಸುಳಿದಾಡಿತು. ಈ ವಯಸ್ಸಿನಲ್ಲೂ ಅಷ್ಟು ಕಟ್ಟುನಿಟ್ಟಾಗಿದ್ದ ಅವಳಂತೆ ನಾನೂ ಗಂಭೀರವಾಗಿ ಇರಬೇಕೆನಿಸಿತು. ಅವಳಂತೆಯೇ ಸೆರಗನ್ನು ಎಳೆದುಕೊಂಡು ಮೈತುಂಬ ಹೊದ್ದುಕೊಂಡೆ. ಉಳಿದ ಹುಡುಗಿಯರಿಗಿಂತಲೂ ನಾನು ಮಿಗಿಲೆಂಬ ಅಹಂ ಸಂತೃಪ್ತಿಯನ್ನು ನೀಡುತ್ತಿತ್ತು. ಆ ರೀತಿ ಸೆರಗು ಹೊದ್ದು ಕುಳಿತುಕೊಂಡ ಸ್ವಲ್ಪ ಹೊತ್ತಿಗೆ ಸಿನಿಮಾ ನೋಡುವುದರಲ್ಲಿ ಮಗ್ನಳಾಗಿಬಿಟ್ಟೆ.

ಸ್ವಲ್ಪ ಹೊತ್ತಾದ ನಂತರ ನನ್ನ ಸೊಂಟದ ಮೇಲೆ ಯಾವುದೋ ಹುಳು ಹರಿದಾಡುತ್ತಿರುವಂತೆನಿಸಿತು. ಒಂದು ಕ್ಷಣ ನನ್ನ ಎದೆ ಝಲ್ಲೆನಿಸಿತು. ಗಾಬರಿಯಿಂದ ಅದನ್ನು ಜಾಡಿಸಬೇಕೆಂದು ಕೈ ಎತ್ತಿದೆ. ಎತ್ತಿದ ಕೈ ಹಾಗೆಯೇ ನಿಂತಿತು! ಅದು ಹುಳುವಾಗಿರದೆ ಯಾರದೋ ಕೈ ಎಂಬುದನ್ನು ಗ್ರಹಿಸಿದೆ. ಬೆರಳುಗಳ ಚಲನೆ ಗೊತ್ತಾಗುತ್ತಿತ್ತು. ಸೆರಗನ್ನು ಪೂರ್ತಿಯಾಗಿ ಹೊದ್ದುಕೊಂಡಿರುವುದರಿಂದ ಮತ್ತ್ಯಾರೂ ಅದನ್ನು ಗ್ರಹಿಸುವಂತಿರಲಿಲ್ಲ.

ಸೊಂಟದ ನುಣುಪನ್ನು ಆಸ್ವಾದಿಸುತ್ತಿರುವಂತೆ ಬೆರಳುಗಳು ಅಲ್ಲಿ ನಿಂತವು. ನನ್ನಲ್ಲಿ ಇಂತಹುದೆಂದು ಮಾತುಗಳಲ್ಲಿ ವ್ಯಕ್ತಪಡಿಸಲಾಗದ ಭಾವನೆಯೊಂದು ಹರಿದಾಡಿತು. ಜೀವನದಲ್ಲಿ ಮೊದಲ ಬಾರಿಗೆ ಗಂಡಸಿನ ಸ್ಪರ್ಶ! ಆ ಸ್ಪರ್ಶಕ್ಕೆ ನನ್ನ ಶರೀರ ಅಷ್ಟು ಅದ್ಭುತವಾಗಿ ಶೃತಿಗೊಳ್ಳುವುದೆಂದು ನನಗಲ್ಲಿಯವರೆಗೂ ಗೊತ್ತಿರಲಿಲ್ಲ.

ಬೆರಳುಗಳು ಮತ್ತೆ ಚಲಿಸತೊಡಗಿದವು. ಹಿಂದಿರುಗಿ ನೋಡಿ, ಆ ಬೆರಳುಗಳ ಒಡೆಯ ಯಾರೆಂಬುದನ್ನು ತಿಳಿಯಬೇಕೆನಿಸಿದರೂ, ತಿರುಗಿದರೆ ಆ ಅನುಭವ ಅಷ್ಟಕ್ಕೇ ನಿಲ್ಲುತ್ತದೇನೋ ಎನ್ನುವ ಭಾವನೆಯಿಂದ ಕಡೆಗಣ್ಣೋಟದಲ್ಲಿ ನೋಡಲು ಪ್ರಯತಿಸಿದೆ. ನನ್ನ ಹಿಂದಿದ್ದ. ಭಾಸ್ಕರ ತನ್ನ ಸೀಟಿನಲ್ಲಿ ಸ್ವಲ್ಪ ಮುಂದೆ ಬಾಗಿ ಕುಳಿತಿದ್ದನ್ನು ಕಂಡು ಇದೆಲ್ಲ ಅವನ ಕೈಚಳಕವೇ ಎಂಬುದನ್ನು ಗ್ರಹಿಸಿದೆ. ನಾನು ಸೆರಗನ್ನು ಪೂರ್ತಿಯಾಗಿ ಹೊದ್ದುಕೊಂಡಿದ್ದರಿಂದ ಅವನ ಕೈಯಿಂದ ಚಲನೆ ಪಕ್ಕದಲ್ಲಿದ್ದವರಿಗೆ ಕಾಣಿಸುವಂತಿರಲಿಲ್ಲ. ಈ ವ್ಯವಹಾರ ನನಗೂ, ಭಾಸ್ಕರನಿಗೂ ಬಿಟ್ಟರೆ ಮತ್ತ್ಯಾರಿಗೂ ತಿಳಿಯುವ ಅವಕಾಶವಿರಲಿಲ್ಲ ಧವಳಳಂತೆ ಮೈ ತುಂಬ ಸೆರಗು ಹದೆಯುವುದರಿಂದ ಅಷ್ಟು ಅನುಕೂಲವಾಗುತ್ತದೆಂದು ನಾನು ಊಹಿಸಿರಲಿಲ್ಲ.

ಭಾಸ್ಕರನ ಕೈ ಚಲಿಸಿ ಹೊಕ್ಕುಳ ಬಳಿ ನಿಂತಿತು. ಒಂದು ಕ್ಷಣ ಕಾರಂಜಿಯಿಂದ ನೀರು ಚಿಮ್ಮಿದಂತೆ ನನ್ನ ರಕ್ತ ಚಿಲ್ಲೆಂದಿತು. ಯಾವುದೋ ಅಮಲು ಶರೀರವನ್ನು ಆವಹಿಸಿಕೊಳ್ಳತೊಡಗಿತು. ನನ್ನ ಮೇಲ್ಭಾಗ ಉಬ್ಬುತ್ತಿರುವುದು ನನಗೆ ಗೊತ್ತಾಗುತ್ತಲೇ ಇತ್ತು. ಅವನು ಹೊಕ್ಕುಳಲ್ಲಿ ಬೆರಳಿಟ್ಟ. ಅಜ್ಞಾತ ಶಕ್ತಿ ಇಡೀ ಶರೀರದಲ್ಲೆಲ್ಲ ಕಚಗುಳಿ ಎಬ್ಬಿಸಿದಂತಾಯ್ತು. ಹೊಕ್ಕುಳ ಬಳಿ ಇರುವ ನಾಡಿಗಳೆಲ್ಲವೂ ನನ್ನ ಮೇಲೆ ಸಂಚು ಹೂಡಿ ನನ್ನನ್ನು ಎತ್ತಲೋ ಎತ್ತಿ ಎಸೆದಂತೆನಿಸಿತು. ಇಡೀ ಮೈ ಬಿಸಿ ಆವಿಯನ್ನು ಹೊರದೂಡತೊಡಗಿತು. ಗಟ್ಟಿಯಾಗಿ ಅವನ ಕೈಯನ್ನು ಹಿಡಿದುಕೊಳ್ಳಬೇಕೆನ್ನುವ ಬಯಕೆಯನ್ನು ಬಲವಂತದಿಂದ ಅದುಮಿಹಿಡಿದೆ.

ಅವನ ಕೈ ಮತ್ತೆ ಚಲಿಸಿತು. ಅವನು ಹಾಗೆಯೇ ಕೆಳಗೆ ಕೈ ಸರಿಸುತ್ತಾನೇನೋ ಎನ್ನುವ ಭಯ ಮಾಮೂಲಿ ಭಯವಲ್ಲ. ಅಲ್ಲಿಯ ತನಕ ಹೇಗೋ ನಿಯಂತ್ರಿಸಿಕೊಂಡ ನಾನು ಆ ನಂತರ ನಿಯಂತ್ರಿಸಿಕೊಳ್ಳಬಲ್ಲೆನೆ ಎನ್ನುವ ಭಯ. ಕೈ ಕೆಳಗಿಳಿಯುತ್ತದೇನೋ ಎನ್ನುವ ಊಹೆಯೇ ಶರೀರವನ್ನು ಹಿಮಗಡ್ಡೆಯಂತೆ ತಣ್ಣಗೆ ಮಾಡುತ್ತಿತ್ತು. ನರಗಳನ್ನೆಲ್ಲ ಯಾರೋ ಮಿಟುತ್ತಿರುವವರೆನ್ನುವ ಭಾವನೆ ರಕ್ತದ ಚಲನೆ ನೂರ್ಮಡಿ ಹೆಚ್ಚಿದ ಅನುಭವ....

ಪುಣ್ಯಕ್ಕೆ ಅವನ ಕೈ ಕೆಳಗೆ ಸರಿಯಲಿಲ್ಲ. ಅಲ್ಲಿಂದ ಮೇಲೆಬರತೊಡಗಿತು ಅದರಿಂದಲೂ ಕಿರಿಕಿರಿಯೇ ಆದರೆ ಅದು ಇದ್ದುದರಲ್ಲಿ ಮೇಲು ಮೈಯಿನ ನುಣುಪಿಗೆ ಅವನ ಬೆರಳುಗಳು ಜಾರುತ್ತಿದ್ದ ಹಿಡಿತಕ್ಕೋಸ್ಕರ ಎನ್ನುವಂತೆ ಬೆರಳುಗಳನ್ನು ಅಲುಗಾಡಿಸಿದ ಆನಂದವೆಲ್ಲ ಅಲ್ಲಿ ಸಂಗ್ರಹಗೊಂಡಿದ್ದಂತೆ ಅವನ ಕೈ ತಾಕಿದೊಡನೆಯೇ ಅದೆಲ್ಲ ಮೇಲೆ ಚಿಮ್ಮಿ ಬಂದಂತೆ ನನ್ನ ಇಡೀ ಶರೀರ ಮೆಲ್ಲಗೆ ಕಂಪಿಸಿತು. ಪರವಶಳಾದ ನಾನು ತೇಲುಗಣ್ಣು ಹಾಕಿದೆ. ತೆರೆಯ ಮೇಲೆ ಏನಾಗುತ್ತಿದೆಯೆಂದು ಅರ್ಥವಾಗುತ್ತಿದ್ದಿಲ್ಲ. ಕಣ್ಣೆದುರಿಗೆ ಏನೇನೋ ಬೊಂಬೆಗಳು ಕುಣಿದಾಡುತ್ತಿರುವಂತಿತ್ತು ಅಷ್ಟೇ.

ಅವನ ಕೈ ಮತ್ತಷ್ಟು ಪಕ್ಕಕ್ಕೆ ಸರಿದು ಕುಪ್ಪಸವನ್ನು ಕಳಚಲು ಪ್ರಯತ್ನಿಸತೊಡಗಿತು. ಹುಕ್‌ಗಳನ್ನು ಹುಡುಕಾಡುತ್ತ ಬೆರಳುಗಳು ಚಲಿಸುತ್ತಿದ್ದವು. ನನಗೆ ಏನೇನೋ ಆಗತೊಡಗಿತ್ತು. ಶರೀರ ಸುಖದ ಒತ್ತಡಕ್ಕೆ ಅರಳುತ್ತಿರುವಂತೆ ಭಾಸವಾಗುತ್ತಿತ್ತು. ಮೈಯಲ್ಲಿನ ರಕ್ತ ನನ್ನ ಮೇಲೆ ದಾಳಿ ಮಾಡಲೆನ್ನುವಂತೆ ಬಿಸಿಯೇರುತ್ತ ಕೊತ ಕೊತ ಎನ್ನತೊಡಗಿತು.

ಅದೇ ಸಮಯಕ್ಕೆ ಅವನು ಕಿಟಾರನೆ ಕಿರುಚಿ, ತಟಕ್ಕನೆ ಕೈ ಹಿಂದಕ್ಕೆ ಎಳೆದುಕೊಂಡ.

"ಏನಾಯ್ತು" ಎಂದು ಕೇಳಿದ ವನಜಳ ಅಣ್ಣ.

"ಕುರ್ಚಿಗಿದ್ದ ಸಿಬುರು ನಾಟಿಕೊಂಡಿತು" ಎಂದು ನೋವಿನಿಂದ ನುಡಿದ ಭಾಸ್ಕರ್.

"ಅಯ್ಯಯ್ಯೋ, ರಕ್ತ ಬರ್‍ತಿರೋ ಹಾಗಿದೆಯಲ್ಲ...."

"ಊಂ...."

ನನ್ನ ಎದೆಯನ್ನು ತಡವುತ್ತಿದ್ದ ಕೈಗೆ ಕುರ್ಚಿಯ ಸಿಬುರು ಹೇಗೆ ನಾಟಿಕೊಂಡಿತೆಂಬುದು ನನಗೆ ಅರ್ಥವಾಗಲಿಲ್ಲ. ಮತ್ತೆ ಎಲ್ಲರೂ ಸಿನಿಮಾ ನೋಡುವುದರಲ್ಲಿ ಮಗ್ನರಾದೆವು ಭಾಸ್ಕರ್ ನನ್ನ ಮೇಲೆ ಬಾಗಿ, ಯಾರಿಗೂಕೇಳಿಸದಂತೆ ಕಿವಿಯಲ್ಲಿ ಪಿಸುಗುಟ್ಟಿದ "ಕುಪ್ಪಸಕ್ಕೆ ಪಿನ್ನಿದೆ ಅಂತ ಹೇಳಬಾರದೇನು? ನೀನು ಸೆರಗು ಹೊದ್ದುಕೊಳ್ಳುತ್ತಲೇ ಎಂದಿನಂತೆ ಗ್ರೀನ್ ಸಿಗ್ನಲ್ ಎಂದು ಭಾವಿಸಿ ನನ್ನ ಕೆಲಸ ನಾನು ಮಾಡಿಕೊಂಡು ಹೋದರಾಯಿತೆಂದುಕೊಂಡೆ. ಆದರೆ ಬಿಚ್ಚಿಕೊಂಡಿತ್ತೇನೋ ಕೈಗೆ ಕಚಕ್ಕನೆ ಪಿನ್ನು ಚುಚ್ಚಿಬಿಟ್ಟಿತು. ನಮ್ಮ ಮೇಲೆ ಯಾರಿಗೂ ಅನುಮಾನ ಬರಬಾರದೆಂದೇ ಸಿಬುರು ಚುಚ್ಚಿಕೊಂಡಿತೆಂದು ಹೇಳಿದೆ ಇನ್ಯಾವತ್ತೂ ಈ ರೀತಿ ಕುಪ್ಪಸಕ್ಕೆ ಪಿನ್ನು, ಕತ್ತಿ, ಕೊಡಲಿ ಹಾಕ್ಕೋಬೇಡ. ಅರ್ಥವಾಯ್ತಾ ಧವಳಾ?"

ಆಗ ನನಗೆ ನಡೆದಿರುವ ಎರಡು ತಪ್ಪುಗಳು ಅರ್ಥವಾದವು. ನನ್ನನ್ನು ಭಾಸ್ಕರ ಧವಳಾ ಎಂದುಕೊಂಡನೆಂದೂ, ಕುಪ್ಪಸಕ್ಕೆ ಹಾಕಿಕೊಂಡು ಬಂದಿದ್ದ ಪಿನ್ನು ಬಿಚ್ಚಿಕೊಂಡಿದೆಯೆಂದೂ.

ಹುಡುಗರ ಬಗ್ಗೆ ಧವಳಾ ಅಷ್ಟು ಕಟ್ಟುನಿಟ್ಟಾಗಿರುವಂತೆ ಯಾಕೆ ನಟಿಸುತ್ತಿದ್ದಳೋ, ಸಿನಿಮಾಗೆ ಬರುತ್ತಿದ್ದಂತೆಯೇ ಮೈ ತುಂಬಾ ಸೆರಗು ಯಾಕೆ ಹೊದ್ದುಕೊಳ್ಳುತ್ತಿದ್ದಳೋ ಎನ್ನುವುದು ಅರ್ಥವಾಯ್ತು. ಆಗಷ್ಟೇ ಮೊದಲ ರೀಲು ಮುಗಿದದ್ದರಿಂದ ಟಾಕೀಸಿನಲ್ಲಿ ದೀಪ ಹೊತ್ತಿಕೊಂಡಿತು. ನನ್ನನ್ನು ನೋಡಿದ ಭಾಸ್ಕರನ ಬಾಯಿಯಿಂದ ಮತ್ತೊಮ್ಮೆ ಕೂಗು ಹೊರಬಿತ್ತು.

ನಾನು ಇಲ್ಲೀವರೆಗೂ ಯಾರಿಗೂ ಹೇಳಿರದಿದ್ದ ಘಟನೆ ಇದೇ ಎಂದು ನುಡಿದಳು ಅನುಪಮ.

"ಪಾಪ ಧವಳ! ಅಷ್ಟು ದಿನ ಯಾರಿಗೂ ಅನುಮಾನ ಬರದಂತೆ ನಡೆಸಿಕೊಂಡು ಬಂದಿದ್ದ ನಾಟಕ ನಿನ್ನ ಪಿನ್ನಿನಿಂದಾಗಿ ಆಭಾಸಕ್ಕೀಡಾಯ್ತಲ್ಲ" ಎಂದು ನಕ್ಕ ಗೋಪಾಲಕೃಷ್ಣ.

"ಹೌದು. ಹುಡುಗರ ಬಗ್ಗೆ ಕಟ್ಟುನಿಟ್ಟನಿಂದಿರುತ್ತಿದುದೆಲ್ಲ ಬರೀ ನಟನೆ ಭಾಸ್ಕರನೊಂದಿಗೆ ಸಾಗುತ್ತಿದ್ದ ತನ್ನ ಪ್ರಕರಣ ಧಕ್ಕೆಗೀಡಾಗಕೂಡ ದೆಂದು, ಯಾರಿಗೂ ಗೊತ್ತಾಗಬಾರದೆಂದು ತನಗೇ ತಾನೇ ಆ ಬೇಲಿಯನ್ನು ನಿರ್ಮಿಸಿಕೊಂಡಿದ್ದಳು. ಕತ್ತಲಲ್ಲಿ ಧವಳ ಸೀರೆ ಉಟ್ಟುಕೊಂಡಿದ್ದ ನನ್ನನ್ನು ಅವಳೇ ಎಂದು ಭಾಸ್ಕರ್ ತಪ್ಪಾಗಿ ಭಾವಿಸಿದ್ದರಿಂದ ಆ ಎಡವಟ್ಟಾಯ್ತು. ಆದರೆ ಇದನ್ನು ಯಾರಿಗೂ ಹೇಳುವಂತಿಲ್ಲದೆ ನಾನೂ, ಭಾಸ್ಕರ್ ಚೇಳು ಕುಟುಕಿಸಿಕೊಂಡ ಕಳ್ಳರಂತೆ ಸುಮ್ಮನಿದ್ದುಬಿಟ್ಟೆವು."

ಚಂದಿರ ಮೋಡಗಳನ್ನು ಮಾತಾಡಿಸಿ ಮತ್ತೆ ನಿರ್ಮಲವಾದ ಆಕಾಶ ದತ್ತ ಓಡುತ್ತಿದ್ದ ಸಮಯ ಹತ್ತು ದಾಟಿರುವಂತೆ ಪರಿಸರವೆಲ್ಲ ನಿಶ್ಯಬ್ದದ ಮುಸುಗನ್ನು ಹೊದ್ದುಕೊಂಡಿತ್ತು. ಅಷ್ಟೊತ್ತಿಗೇ ಕಾಲಾತೀತ ಗೋಪಾಲ ಕೃಷ್ಣ ಮಲಗಿಕ್ಕೊಂಡು ಅನುಪಮಳನ್ನು ಪಕ್ಕಕ್ಕೆಳೆದುಕೊಂಡ. ನಂತರದ ಐದು ನಿಮಿಷಗಳಿಗೆ ಅವರಿಬ್ಬರೂ ತುಂಬಾ ರಸಮಯ ಘಟ್ಟದಲ್ಲಿದ್ದರು.

"ನಿನ್ನ ಗೆಜ್ಜೆಗಳ ಸದ್ದು ಹೇಗಿದೆ ಗೊತ್ತೇ? ಸೈನಿಕರು ಮುಂದೆ ಹೋಗಲು ಬೇಕಾದ ಉತ್ಸಾಹ ತುಂಬಲು ಕೇಳಿಸುವ ಮಾರ್ಚಿಂಗ್ ಬ್ಯಾಂಡ್ ನಂತಿದೆ! ಅದೂ ಅಲ್ದೆ, ಶೃಂಗಾರದಲ್ಲಿ ಗೆಜ್ಜೆಗಳು ಸ್ಪೀಡೋ ಮೀಟರ್

ಇದ್ದಂತೆ ಶೃಂಗಾರದಲ್ಲಿ ನಮ್ಮ ವೇಗ ಎಷ್ಟೆಂಬುದು ಗೊತ್ತಾಗುತ್ತದೆ" ಎಂದ ಗೋಪಾಲಕೃಷ್ಣ.

ಅನುಪಮ ಕೊಂಚ ನಾಚಿಕೊಂಡು, "ಹೌದು ಅದಕ್ಕೇ ಏನೋ ನಮ್ಮ ಪುರಾತನರು ಕಾಲುಗಳಿಗೆ ಗೆಜ್ಜೆಗಳನ್ನು ಧರಿಸಲು ಶುರುಮಾಡಿದ್ದು" ಎಂದಳು.

ಇರಬಹುದೇನೋ ಸ್ಪೀಡೋ ಮೀಟರ್ ತೋರಿಸುವ ವೇಗವ ಮೇಲಿಂದ ಕೆಲವು ಚಲನೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಇಷ್ಟಕ್ಕೂ ನಿನಗೆ ಸ್ಪೀಡೋ ಮೀಟರ್ ವೇಗವಾಗಿ ತಿರುಗಬೇಕೋ? ಮೆಲ್ಲಗೆ ತಿರುಗಬೇಕೋ" ಎಂದ ಗೋಪಾಲಕೃಷ್ಣ.

ಅವನು ಯಾವ ಉದ್ದೇಶದಿಂದ ಕೇಳುತ್ತಿರುವನೆಂಬುದು ಅನುಪಮಳಿಗೆ ಅರ್ಥವಾಯ್ತು. "ಸದ್ಯಕ್ಕೆ ಮೆಲ್ಲಗೆ" ಎಂದಳು ಅವಳ ಚಲನೆಯನ್ನನುಸರಿಸಿ ತೂಗುತ್ತಿದ್ದ ಗಜ್ಜೆಗಳು ತಮ್ಮ ವೇಗವನ್ನು ಕಡಿಮೆ ಮಾಡಿದವು. ಅವುಗಳನ್ನು ಅವನು ನಿಯಂತ್ರಿಸುತ್ತಿದ್ದ.

"ಈಗ ಸ್ವಲ್ಪ ಜೋರಾಗಿ . "

ಗೆಜ್ಜೆಗಳು ವೇಗವಾಗಿ ಸದ್ದು ಮಾಡತೊಡಗಿದವು.

"ಮೆಲ್ಲಗೆ."

ಗೆಜ್ಜೆಗಳ ವೇಗ ಮತ್ತೆ ಕಡಿಮೆಯಾಯ್ತು. ಬಹು ವರ್ಷಗಳ ತನ್ನ ವೈವಾಹಿಕ ಜೀವನದಲ್ಲಿ ಅನುಪಮಳಿಗೆ ನೆರವೇರದಿದ್ದ ಬಯಕೆಯೊಂದಿತ್ತು. ಅವಳ ಗಂಡ ಅವಳಿಗೆ ಆ ಕೋರಿಕೆಯನ್ನು ವ್ಯಕ್ತಪಡಿಸುವ ಅವಕಾಶ ವನ್ನೆಂದೂ ಕೊಟ್ಟಿರಲಿಲ್ಲ. ಅದನ್ನು ಈಗ ನೆರವೇರಿಸಿಕೊಳ್ಳಬೇಕೆನ್ನುವ ಹಂಬಲ ಉಂಟಾಯ್ತು. ಆದರೆ ಅದನ್ನು ಬಾಯಿ ಬಿಟ್ಟು ಹೇಳಲು ನಾಚಿಕೆ ಅಡ್ಡ ಬರತೊಡಗಿತು. ಆದರೆ ಈ ಅವಕಾಶ ಮತ್ತೆ ಬರುವುದಿಲ್ಲವೆಂದು ಗೊತ್ತಿತ್ತು. ಅದಕ್ಕೇ ಸುತ್ತಿ ಬಳಸಿಯಾದರೂ ತನ್ನ ಬಯಕೆಯನ್ನು ಹೇಳಬೇಕೆಂದು ಕೊಂಡಳು

"ತೆನಾಲಿ ರಾಮಕೃಷ್ಣ ಒಂದು ಕಾವ್ಯದಲ್ಲಿ ವೇಶ್ಯಾವಾಟಿಕೆಗಳನ್ನು ವರ್ಣಿಸಿದ್ದಾನೆ. ಆತ ವೇಶ್ಯೆಯರು ಬಹಳಷ್ಟು ಜನರಿದ್ದ ಬೀದಿಯಲ್ಲಿ ನಡೆಯು ತ್ತಿದ್ದನಂತೇ ಆಗ ಅಡಿಗೆ ಮಾಡುವ ಸಮಯ. ಸ್ತ್ರೀಯರು ಬಂಡೆಗಲ್ಲೊಂದರ ಮೇಲೆ ಅರಿಶಿಣ, ಮತ್ತಿತರ ಮಸಾಲೆ ಅರೆಯುತ್ತಿದ್ದರಂತೆ! ಮೊಣಕಾಲೂರಿ ಕುಳಿತು ಅರೆಯುವ ಕಲ್ಲನ್ನು ಹಿಂದೆ ಸರಿಸುತ್ತಿದ್ದ ಸ್ತ್ರೀಯರು ರಾತ್ರಿ ವಿಟ ಬಂದಾಗ ಅನುಸರಿಸಬೇಕಿರುವ ಒಂದು ಭಂಗಿಯನ್ನು ಆ ರೀತಿ ಅಭ್ಯಾಸಮಾಡು

ತ್ತಿರುವರೇನೋ ಎನ್ನುವಂತಿತ್ತೆಂದು ವರ್ಣಿಸಿದ್ದಾನೆ. ಆ ವೇಶ್ಯಾ ಸ್ತ್ರೀಯರು ಯಾವುದನ್ನು ಅಭ್ಯಾಸಮಾಡುತ್ತಿದ್ದರೆನ್ನುವುದನ್ನು ಹೇಳು ನೋಡೋಣ" ಎಂದಳು ಅವನು ಅವಳ ಕಿವಿಯಲ್ಲಿ ಮೆಲ್ಲಗೆ ಹೇಳಿದ. ಸರಿಯಾಗಿಯೇ ಹೇಳಿದ ಅವನನ್ನು ಮೆಚ್ಚುಗೆಯಿಂದ ನೋಡಿದಳು.

ಸ್ವಲ್ಪ ಹೊತ್ತು ಬಿಟ್ಟು, "ಹಿಂದೆ ಸ್ತ್ರೀಯರಷ್ಟೇ ಆಳುತ್ತಿದ್ದ ರಾಜ್ಯಗಳಿರುತ್ತಿದ್ದವಂತೆ, ಹೌದೇ" ಎಂದು ಕೇಳಿದಳು.

"ಹೌದಂತೆ."

"ಅಂದರೆ, ಆ ರಾಜ್ಯದಲ್ಲಿ ಸ್ತ್ರೀಯರೇ ಗಂಡಸರ ಕೆಲಸಗಳೆಲ್ಲವನ್ನೂ ಮಾಡುತ್ತಿದ್ದರಂತೆಲ್ಲ....ಮಕ್ಕಳು ಬೇಕೆಂದುಕೊಂಡಾಗ ಎಲ್ಲಿಂದಲೋ ಗುಲಾಮರನ್ನಾಗಿ ಹಿಡಿದು ತಂದು ಗಂಡಸರೊಂದಿಗೆ ರಾತ್ರಿ ಕಳೆಯುತ್ತಿದ್ದರಂತೆ ಮತ್ತೆ ಆ ಸಂದರ್ಭದಲ್ಲಿಯೂ ಅವರು ತಾವೇ ಗಂಡಸಿನ ಪಾತ್ರವನ್ನೂ ನಿರ್ವಹಿಸುತ್ತಿದ್ದರೇನು?"

ಅವಳ ಉದ್ದೇಶ ಗೋಪಾಲಕೃಷ್ಣನಿಗೆ ಅರ್ಥವಾದರೂ, ಏನೂ ಗೊತ್ತಿಲ್ಲದವನಂತೆ, "ಏನೋ... ನನಗೇನು ಗೊತ್ತು?" ಎಂದ.

"ಆಗ ಏನಿದ್ದರೂ, ಈಗ ನಾನು ಆ ರಾಜ್ಯದಲ್ಲಿನ ಸ್ತ್ರೀ ಆಗಬೇಕೆಂದುಕೊಂಡಿದ್ದೇನೆ. ಅಂದರೆ ಗಂಡಸಿನ ಪಾತ್ರವನ್ನು ನಾನು ಮುಂದೆ ಹೇಳಲು ಆವಳಿಂದಾಗಲಿಲ್ಲ."

"ನಿನ್ನಿಷ್ಟ. ನಾನೂ ಸ್ವಲ್ಪ ಹೊತ್ತು ಗಂಡು ಗುಲಾಮನಾಗ್ತೀನಿ" ಎಂದು ಹಸಿರು ನಿಶಾನೆ ತೋರಿಸಿದ ಗೋಪಾಲಕೃಷ್ಣ, ಇಂತಹುದೆಂದು ಗೊತ್ತಾಗದ ಉತ್ಸುಕತೆ, ರೋಮಾಂಚನ ಅವಳಲ್ಲಿ ಮೂಡಿತು. ಒಹು ವರ್ಷಗಳ ಬಯಕೆ ನೆರವೇರಲಿದೆಯೆನ್ನುವ ಆನಂದ ಅವಳನ್ನು ಮೇಲೆಬ್ಬಿಸಿತು. ಇಬ್ಬರೂ ತಮ್ಮ ತಮ್ಮ ಸ್ಥಾನ ಬದಲಿಸಿಕೊಂಡರು. ಮತ್ತೆ ಗೆಜ್ಜೆಗಳ ಸದ್ದು ಪ್ರಾರಂಭವಾಯ್ತು.

ಈಗ ಕಣ್ಣು ತೆರೆದರೆ ಗೋಪಾಲಕೃಷ್ಣನಿಗೆ ಆಕಾಶ ಕಂಡುಬರುತ್ತಿತ್ತು.

## ೧೭

ಆ ದಿನ ಗೋಪಾಲಕೃಷ್ಣನ ಕೆನ್ನೆಗೆ ಹೊಡೆದಾಗಿನಿಂದ, ವರ್ಷಾ ತನ್ನ ಹುಶಾರಿನಲ್ಲಿ ತಾನಿದ್ದಳ.. ತಾನು ಹೊಡೆದದ್ದರಿಂದ ಎರಡುರೀತಿಯ ಪರಿಣಾಮಗಳುಂಟಾಗುವ ಅವಕಾಶವಿದೆಯೆಂದು ಊಹಿಸಿದಳು. ಒಂದು ಗೋಪಾಲಕೃಷ್ಣ ತನ್ನ ಮೇಲೆ ಸೇಡಿಟ್ಟುಕೊಳ್ಳುವುದು. ಎರಡು ಅವನು ಪಶ್ಚಾತ್ತಾಪ

ಪ್ರಕಟಿಸುವುದು. ಆದರೆ ಎರಡೂ ನಡೆಯದ್ದರಿಂದ ಗೋಪಾಲಕೃಷ್ಣನ ಪ್ರತಿ ಕ್ರಿಯೆ ಏನೆಂಬುದು ಗೊತ್ತಾಗಲಿಲ್ಲ.

ಆ ಘಟನೆಯ ನಂತರ ಗೋಪಾಲಕೃಷ್ಣ ಎರಡು ಮೂರು ಸಲ ಅವಳಿಗೆ ಎದುರಾಗಿದ್ದ. ಅವಳನ್ನು ನೋಡುತ್ತಲೇ ತಲೆ ತಗ್ಗಿಸಿಕೊಳ್ಳುತ್ತಿದ್ದ. ಅವನಲ್ಲಿ ಸಾಕಷ್ಟು ಮಾರ್ಪಾಡುಂಟಾಗಿತ್ತು. ಒಂದಿಷ್ಟು ಇಳಿದು ಹೋಗಿದ್ದ. ಕಣ್ಣು ಗಳಲ್ಲಿ ಗಾಂಭೀರ್ಯ ಮೂಡಿತ್ತು. ಕೆನ್ನೆಗಳು ನುಣುಪನ್ನು ಕಳೆದುಕೊಂಡಿದ್ದವು ಯಾವಾಗಲೂ ತೀವದಿಂದ ಮಿನುಗುತ್ತಿದ್ದ ತುಟಿಗಳು ಒಣಗಿಹೋಗಿದ್ದವು.

ಆದಾದ ಮೇಲೂ ಅವನು ತಮ್ಮ ವಂಶಾಚಾರವನ್ನು ಮುಂದುವರಿಸುತ್ತಿ ರುವುದಾಗಿ ಗೊತ್ತಾಯ್ತು. ಅದಕ್ಕೆ ಅವಳೇನೂ ಆಶ್ಚರ್ಯಪಡಲಿಲ್ಲ. ಬೇಗ ಯಾವುದಾದರೂ ನಿರ್ಧಾರಕ್ಕೆ ಬಂದು ಆಚರಣೆಯಲ್ಲಿ ತರುವುದು ಕಷ್ಟ. ಕಾಲಕ್ರಮೇಣ ಅಂತಹವುಗಳಿಗೆ ಮಂಗಳ ಹಾಡಬಹುದು . ತಕ್ಷಣವೇ ಬದ ಲಾಗದಿದ್ದರೆ ಬಹುಶಃ ಅವನನ್ನು ನಂಬಿರುತ್ತಿರಲಿಲ್ಲ. ಅವನು ಏನೋ ಹುನ್ನಾರ ಹೂಡಿರುವನೆಂದೇ ಅಂದುಕೊಳ್ಳುತ್ತಿದ್ದಳು ಅವನಲ್ಲಿ ಚಿಂತನ ಶುರುವಾದರೆ ಸಾಕು . ಉಳಿದುದನ್ನು ಕಾಲವೇ ಪೂರ್ತಿ ಮಾಡಬಲ್ಲದು. ಅವನಲ್ಲಿ ಚಿಂತನ ಶುರುವಾಗಿದೆ ಎನ್ನುವುದನ್ನು ಗ್ರಹಿಸಿದಳು. ಅವಳಿಗೆ ಆದರಿಂದ ಸಂತೋಷ ಉಂಟಾಯ್ತು. ವಾಸ್ತವಕ್ಕೆ ಗೋಪಾಲಕೃಷ್ಣನ ಮೇಲೆ ಅವಳಿಗೆ ವೈಯಕ್ತಿಕ ವಾದ ದ್ವೇಷವೇನೂ ಇರಲಿಲ್ಲ. ಒಂದು ಮೂಢ ನಂಬಿಕೆಯಲ್ಲಿ ಅವನೂ ಪಾಲು ದಾರ ಎನ್ನುವ ಭಾವನೆಯಿಂದ ಅವನ ಮೇಲೆ ಅಸಹ್ಯವಿತ್ತು. ಒಂದು ವೇಳೆ ಆ ಆಚಾರವನ್ನು ಯಾವುದಾದರೂ ಕಾರಣದಿಂದ ಬಿಡಬೇಕಾಗಿ ಬಂದಲ್ಲಿ, ಹುಟ್ಟಿ ನಿಂದ ಏನೊಂದೂ ಕೆಲಸ ಮಾಡದೆ ಸೋಮಾರಿಯಾಗಿ ಬೆಳೆದ ಅವನು ಹೇಗೆ ಬದುಕಬಲ್ಲ? ಯೋಚಿಸಿದಂತೆಲ್ಲ ಅವಳಿಗೆ ಆಶ್ಚರ್ಯವಾಗುತ್ತಿತ್ತು. ಪುರೋ ಗಾಮಿ ಅಭಿಪ್ರಾಯಗಳನ್ನು ಹೊಂದಿದ್ದ ಆ ಗ್ರಾಮದ ಜನರ ಕುರುಡುನಂಬಿಕೆ ಸಂಕಟವನ್ನುಂಟು ಮಾಡುತ್ತಿತ್ತು. ತಲೆಮಾರುಗಳಿಂದ ಜನರ ಮನಸ್ಸಿನಲ್ಲಿ ಬೇರೂರಿ ಹೋಗಿದ್ದ ನಂಬಿಕೆಯನ್ನು ಕಿತ್ತೊಗೆಯುವುದು ಕಷ್ಟ ಎಂಬುದರ ಅರಿವೂ ಅವಳಿಗಿತ್ತು. ಇಡೀ ಗ್ರಾಮದ ಜನರನ್ನು ತಿದ್ದುವುದಕ್ಕಿಂತಲೂ, ಅವನೊಬ್ಬನಿಗೆ ಅರಿವುಂಟಾಗುವಂತೆ ಮಾಡಿದರೆ ಆ ಆಚಾರ ಮುಂದುವರಿ ಯಲು ಆಸ್ಪದವಿಲ್ಲದಂತಾಗುತ್ತದೆ ಎಂಬುದನ್ನು ಅರಿತಿದ್ದಳು. ಅದಕ್ಕೇ ಆವತ್ತು ತನ್ನ ಕೈ ಹಿಡಿದಾಗ ಎಲ್ಲವನ್ನೂ ಯೋಚಿಸಿಯೇ ಅವನ ಕೆನ್ನೆಗೆ ಬಾರಿಸಿದ್ದಳು.

ಅವಳು ಹೇಳಿದಂತೆ "ಅವನ ವಂಶದಿಂದ ಅವನನ್ನು ಬೇರ್ಪಡಿಸಿದರೆ ಒಡಕು ಕವಡೆಯ ಕಿಮ್ಮತ್ತೂ ಬಾಳುವುದಿಲ್ಲ. ವೆಂಕಟರಾಮಯ್ಯನೂ ಸರಿಯಾಗಿ ಇದೇ ಅಂಶವನ್ನು ಆಧಾರವಾಗಿಟ್ಟುಕೊಂಡು ಗೋಪಾಲಕೃಷ್ಣನ ಪತನಕ್ಕೆ ತೊಡಗಲಿದ್ದ ಗೋಪಾಲಕೃಷ್ಣನ ಬಗ್ಗೆ ವರ್ಷಾ ವೆಂಕಟರಾಮಯ್ಯ ಇಬ್ಬರೂ ಸರಿಯಾಗಿ ಅಂದಾಜು ಹಾಕಬಲ್ಲವರಾಗಿದ್ದರು. ಆದರೆ ವರ್ಷಾಳನ್ನು ಧನಾತ್ಮಕ ಧೋರಣೆಯಾಗಿದ್ದರೆ, ವೆಂಕಟರಾಮಯ್ಯನದು ನೇತ್ಯಾತ್ಮಕ ಧೋರಣೆಯಾಗಿತ್ತು. ವೆಂಕಟರಾಮಯ್ಯ ಗೋಪಾಲಕೃಷ್ಣನ ಪತನಕ್ಕ ಮುಹೂರ್ತವನ್ನು ನಿಶ್ಚಯಿಸಿದ್ದ. ಬರುವ ಅಮಾವಾಸ್ಯೆ ರವಿವಾರದಂದು ಬರಲಿತ್ತು. ಆ ದಿನ ಹುಲಿರಾಜ ಊರಿನಲ್ಲಿ ದೆವ್ವಗಳನ್ನು ಓಡಿಸುವ ಕಾರ್ಯಕ್ರಮ ಇಟ್ಟುಕೊಳ್ಳುತ್ತಾನೆ. ಊರಿನ ಹೊರಗೆ ದೊಡ್ಡ ಹಂದರ ಹಾಕಿ, ಕ್ಷುದ್ರ ದೇವತೆಗಳೆಲ್ಲವನ್ನೂ ಪ್ರತಿಷ್ಠಾಪನೆ ಮಾಡಿ, ದೆವ್ವಗಳನ್ನು ಓಡಿಸುತ್ತಾನೆ. ಮಾನಸಿಕ ರೋಗವಿದ್ದವರಿಗೆ ತಾಯಿತ ಕಟ್ಟುತ್ತಾನೆ.

ಆ ಊರಿನ ಆಚಾರದ ಪ್ರಕಾರ ಯಾವುದೇ ಕೆಲಸವನ್ನಾಗಲಿ ಕಾರ್ಯಕ್ರಮವನ್ನಾಗಲಿ, ಪ್ರತಿಯೊಂದನ್ನು ಮದನ ಕಾಮರಾಜ ವಂಶಕ್ಕೆ ಸೇರಿದ ಪುರುಷನೇ ಪ್ರಾರಂಭಿಸಬೇಕಿದ್ದುದರಿಂದ ಗೋಪಾಲಕೃಷ್ಣ ಅಲ್ಲಿಗೆ ಬರುತ್ತಾನೆ. ಅಲ್ಲಿಯೇ ಅವನ ಪತನ ಇದು ವೆಂಕಟರಾಮಯ್ಯನ ಯೋಜನೆ. ಅವನೊಂದಿಗೆ ಈ ಯೋಜನೆಯಲ್ಲಿ ಭಾಗಿಗಳಾದ ಹುಲಿರಾಜ, ಮೋಹನರು ತಮ್ಮ ತಮ್ಮ ಪಾತ್ರಗಳನ್ನು ನಿರ್ವಹಿಸಲು ಸಜ್ಜಾಗಿದ್ದರು. ಅವರ ಸಂಚನ್ನು ಅರಿತಿದ್ದ ಒಂದು ಜೀವಿ ಮಾತ್ರ ಅದನ್ನು ಹೊರಹಾಕಲಾಗದೆ ವಿಲಿವಿಲಿ ಒದ್ದಾಡುತ್ತಿತ್ತು.

## ೧೮

ವಿನೂತ್ನ ಮೆಲ್ಲಗೆ ಬೆಟ್ಟ ಹತ್ತುತ್ತಿದ್ದಳು. ಆ ಪೌರ್ಣಮಿಯಂದು ಅವಳ ಸರದಿ ಬಂದಿತ್ತು. ಅವಳು ಗೋಪಾಲಕೃಷ್ಣನಿಗೋಸ್ಕರ ಅತ್ತಿತ್ತ ನೋಡುತ್ತ ಮೆಲ್ಲಗೆ ಹೆಜ್ಜೆ ಹಾಕುತ್ತಿದ್ದಳು.

ಅವಳಿಗೆ ಮೂವತ್ತು ವರ್ಷಗಳಿರಬಹುದು. ಸಾಕಷ್ಟು ಎತ್ತರವೆಂದೇ ಹೇಳಬಹುದಾದ ನಿಲುವು, ಎತ್ತರಕ್ಕೆ ತಕ್ಕ ದಪ್ಪ ಅವಳನ್ನು ನೋಡುತ್ತಿದ್ದಂತೆ ಯಾರಿಗಾದರೂ ಮಂಚ ನೆನಪಾಗುತ್ತಿತ್ತು, ಅವಳ ಆಕಾರವೇ ಅಂತಹುದು. ಪುರುಷನನ್ನು ಕೆಣಕುವಂತಹುದು. ಅವಳೊಂದಿಗೆ ಸುಖಿಸುವ ಪುರುಷ ಅದೃಷ್ಟವಂತನೆಂದೇ ಎಲ್ಲರಿಗೂ ಅನಿಸುತ್ತಿತ್ತು.

ಅವಳಲ್ಲಿನ ಪ್ರತಿಯೊಂದು ಅವಯುವವೂ ಇರಬೇಕಾದ ಅಳತೆಗಿಂತ ಸ್ವಲ್ಪ ಹೆಚ್ಚಿನ ಅಳತೆಯಲ್ಲೇ ಇದ್ದವು. ಸೊಂಟವೊಂದೇ ಅದಕ್ಕೆ ಅಪವಾದ. ನೀಲಿ ಬಣ್ಣದ ಹೂಗಳ ಹಸಿರು ಶಿಫಾನ್ ಸೀರೆ ಧರಿಸಿದ್ದಳು. ಬೆನ್ನಿನ ಬಹುಭಾಗ ಕಂಡು ಬರುವಂತಿದ್ದ ಕುಪ್ಪಸ ಧರಿಸಿದ್ದಳು. ಅವಳಿಗೆ ಎರಡು ವರ್ಷಗಳ ಹಿಂದೆ ಯಷ್ಟೇ ಮದುವೆಯಾಗಿತ್ತು. ಇನ್ನೂ ಮಕ್ಕಳಾಗಿರಲಿಲ್ಲ. ಅವಳ ಗಂಡ ಪರಮೇಶ್ವರ ಶೃಂಗಾರಪುರದಲ್ಲಿ ದೊಡ್ಡ ರೈತ.

ಗೋಪಾಲಕೃಷ್ಣ ಎಲ್ಲಿಯೂ ಕಂಡು ಬರದ್ದರಿಂದ ಅವಳಿಗೆ ಸ್ವಲ್ಪ ನಿರು ತ್ಸಾಹವೆನಿಸಿತು. ಆದರೆ ಅವಳು ಹಿಂಜರಿಯದೆ ಬೆಟ್ಟ ಹತ್ತುತ್ತಲೇ ಇದ್ದಳು. ಅಲ್ಲಿಯವರೆಗೂ ಮೋಡಗಳ ಹಿಂದೆ ಮರೆಯಾಗಿದ್ದ ಚಂದ್ರ ತಟಕ್ಕನೆ ಹೊರ ಬಂದ. ಆ ಬೆಳದಿಂಗಳಿನಲ್ಲಿ ತಲೆ ಎತ್ತಿ ನೋಡಿದ ಅವಳಿಗೆ ಭವನದ ತಾರಸಿಯ ಮೇಲೆ ಮೋಟುಗೋಡೆಯನ್ನಾತುಕೊಂಡು ನಿಂತಿದ್ದ ಗೋಪಾಲಕೃಷ್ಣ ಕಂಡು ಬಂದ. ಅವಳು ಸಂತೋಷದಿಂದ ಕೈ ಬೀಸಿದಳು. ಅವಳ ಬರವನ್ನು ಗಮ ನಿಸಿದವನಂತೆ ಅವನೂ ಪ್ರತಿಯಾಗಿ ಕೈಬೀಸಿದ. ಅವಳು ನಡಿಗೆಯ ವೇಗ ವನ್ನು ಹೆಚ್ಚಿಸಿದಳು.

ತಾರಸಿಯ ಮೇಲೆ ಹಾಸಲಾಗಿದ್ದ ಹಾಸಿಗೆಯ ಮೇಲೆಕುಳಿತುಕೊಳ್ಳುತ್ತ "ಅಬ್ಬಾ ನೀನು ಕಾಣದಿದ್ದುದರಿಂದ ಎಲ್ಲಿ ಹೋದ್ಯೋ ಅಂತ ಅಂದ್ಕೊಂಡೆ" ಎಂದಳು–ಆಯಾಸವನ್ನು ಪರಿಹರಿಸಿಕೊಳ್ಳುತ್ತ. ಗೋಪಾಲಕೃಷ್ಣನ ಮನಸ್ಸಿ ನಲ್ಲಿ ದಿಗಿಲಿದ್ದರೂ ಅವನು ಅದನ್ನು ತೋರ್ಪಡಿಸಿಕೊಳ್ಳಲಿಲ್ಲ. ಕರ್ತವ್ಯವನ್ನು ನಿರ್ವಹಿಸಬೇಕೆಂದುಕೊಂಡುಮುಖದ ಮೇಲೆನಗು ಮೂಡಿಸಿಕೊಂಡು ನುಡಿದ." "ದೇವರು ಎಷ್ಟು ಎತ್ತರದಲ್ಲಿದ್ದರೆ ಅಷ್ಟು ಬೆಲೆ ಅದಕ್ಕೇ ಇಲ್ಲಿಗೆ ಬಂದು ನಿಂತೆ.

"ಕೊನೆಗೆ ದೇವರು ಕಂಡು ಬಂದ. ಆದರೆ ಈ ದೇವರ ಬಳಿ ಮೋಕ್ಷಬಯ ಸಿಯಲ್ಲ ರಕ್ತ ಬಯಸಿಯೇ ಬರುವುದು" ಎಂದಳು.

ಗೋಪಾಲಕೃಷ್ಣ ಅವಳ ಮುಂದೆ ಕುಳಿತುಕೊಳ್ಳುತ್ತ "ಮತ್ತೆ ನಿನ್ನ ಜೀವನದಲ್ಲಿ ಇಲ್ಲಿಯವರೆಗೂ ಯಾರಿಗೂ ಹೇಳಿರದ ಘಟನೆಯನ್ನು ಹೇಳು" ಎಂದು ಇಲ್ಲದ ಉತ್ಸಾಹ ತಂದುಕೊಳ್ಳುತ್ತ ಕೇಳಿದ ವಾಸ್ತವಕ್ಕೆ ಅವಳೊಂದಿಗೆ ರಾತ್ರಿ ಕಳೆಯುವ ಮನಸ್ಸಿರಲಿಲ್ಲ, ಅವಳನ್ನು ಹೊರಟುಹೋಗೆಂದು ಹೇಳಲು ದಾಕ್ಷಿಣ್ಯವಾಗುತ್ತಿತ್ತು. ಅದಕ್ಕೆ ಕಾಲ ತಳ್ಳಲೆಂದು ಆ ರೀತಿ ಕೇಳಿದ.

ಅವಳು ಹೇಳತೊಡಗಿದಳು:

"ನಮ್ಮದು ಪೆರಿಮಾಳ್ಳಪಲ್ಲಿ. ತೀರಾ ದೊಡ್ಡದೂ ಅಲ್ಲದ. ತೀರಾ ಸಣ್ಣದೂ ಅಲ್ಲದ ಊರು. ನಮ್ಮದು ತೀರಾ ಸಂಪ್ರದಾಯಸ್ಥ ಕುಟುಂಬ. ನನ್ನ ತಂದೆ

ಎಲಿಮೆಂಟರಿ ಶಾಲೆಯಲ್ಲಿ ಶಿಕ್ಷಕನಾಗಿದ್ದ. ತಂದೆ-ತಾಯಿಗಳಿಗೆ ನಾನೊಬ್ಬಳೇ ಮಗಳು. ನನ್ನ ತಂದೆ ಸಂಪ್ರದಾಯ ಆಚಾರಗಳನ್ನು ಕಡ್ಡಾಯವಾಗಿ ಪಾಲಿಸುವ ವ್ಯಕ್ತಿ. ಪೂಜೆ ಮುಗಿಯುವವರೆಗೆ ನೀರು ಕುಡಿಯುತ್ತಿರಲಿಲ್ಲ. ಪ್ರಯಾಣವೆಂದರೆ ರಾಹುಕಾಲ ವರ್ಜ್ಯ, ಮದುವೆಯೆಂದರೆ ಜಾತಕ ಮನೆ-ವಾಸ್ತು ಇತ್ಯಾದಿ ಆತನಿಗೆ ಮೊದಲು ನೆನಪಾಗುತ್ತಿದ್ದ ವಿಷಯಗಳು.

ಅದಕ್ಕೇ ಹತ್ತನೇ ತರಗತಿ ಪಾಸಾದ ನನ್ನನ್ನು ಪಟ್ಟಣಕ್ಕೆ ಕಳುಹಿಸಿ ಮುಂದೆ ಓದಿಸಲು ನನ್ನ ತಂದೆ ಒಪ್ಪಲೇ ಇಲ್ಲ. ಓದುವುದನ್ನು ಬಿಡಿಸುತ್ತಲೇ ನನಗೆ ಗಂಡು ಹುಡುಕ ತೊಡಗಿದರು. ಆದರೆ ಯಾವ ಸಂಬಂಧವೂ ಹೊಂದಿ ಬರಲಿಲ್ಲ. ಜಾತಕ ಸರಿಯಾಗಿಲ್ಲವೆಂದೋ ಹೇಳಿ ನನ್ನ ತಂದೆ ಯಾವ ಸಂಬಂಧಕ್ಕೂ ಒಪ್ಪಿಕೊಳ್ಳಲಿಲ್ಲ ಆತನ ಮೂರ್ಖತನದಿಂದಾಗಿ ನನಗಿನ್ನೂ ಜೀವನದಲ್ಲಿ ಮದುವೆಯಾಗುವುದಿಲ್ಲವೆನ್ನುವ ಭಾವನೆ ನನ್ನಲ್ಲಿ ಕೊರಗನ್ನು ಮೂಡಿಸಿತು. ಚಿಂತೆಯಿಂದಾಗಿ ಸೊರಗಿದೆ. ಮುಖದಲ್ಲಿ ಜೀವಕಳೆ ಇಲ್ಲದಂತಾಗ ತೊಡಗಿತು.

ದಿನವಿಡೀ ಮನೆಯಲ್ಲಿ ಖಾಲಿಯಾಗಿರುತ್ತಿದ್ದುದರಿಂದ ಹೊತ್ತೇ ಹೋಗುತ್ತಿರಲಿಲ್ಲ. ನಾನುಆಗಾಗ ಸ್ವಲ್ಪ ಗೆಲುವಾಗಿರುತ್ತಿದ್ದುದೆಂದರೆಸುಮತಿ ಬಂದಾಗ ಮಾತ್ರ. ಅವಳು ನನ್ನ ಓರಗೆಯವಳೇ ಹತ್ತನೆ ತರಗತಿಯವರೆಗೆ ಜೊತೆಯಲ್ಲೇ ಓದಿದ್ದೆವು. ಅವಳು ಮುಂದೆ ಕಾಲೇಜು ಸೇರಿದಳು. ಬಿ. ಎಸ್ಸಿ ಫೈನಲ್ ಮದುವೆ ನಿಶ್ಚಯವಾಯ್ತು. ನೋಡಲು ಬಂದ ಮೊದಲು ಸಂಬಂಧವೇ ನಿಶ್ಚಯವಾಗಿದ್ದು ನನಗೆ ಆಶ್ಚರ್ಯವಾಗಿತ್ತು. ಆ ಸಾಯಂಕಾಲ ಸುಮತಿ ಮನೆಗೆ ಬಂದಾಗ ಅದೇ ಮಾತು ಕೇಳಿದೆ.

'ನಮ್ಮ ಮನೆಯಲ್ಲಿ ಜಾತಕ ಗೀತಕ ಇತ್ಯಾದಿಯೆಲ್ಲ ನೋಡೋದಿಲ್ಲ. ಮದುವೆಯಲ್ಲಿ ನಾಮಬಲ ಇತ್ಯಾದಿ ನೋಡೋಣ ಅಂತ ನೋಡುತ್ತಾರೆ.ಅಷ್ಟೇ ಅವನ್ನೇ ಹಿಡಿದು ನೇತಾಡೋದಿಲ್ಲ. ಅದಕ್ಕಷ್ಟು ಬೆಲೆಯೂ ಕೊಡೋದಿಲ್ಲ' ಎಂದಳು.

ಅವಳಿಗೆ ಮದುವೆಯಾಯ್ತು. ಗಂಡನ ಮನೆಗೆ ಹೋಗುವ ಮುನ್ನ ನನಗೆ ಹೇಳಿ ಹೋಗಲು ಬಂದಳು. ಅದೂ ಇದೂ ಮಾತಾಡಿದ ನಂತರ ಹಿತ್ತಲಿಗೆ ಕರೆದೊಯ್ದು, 'ವಿನೂತ್ನ! ನಿನ್ನನ್ನು ನೋಡ್ತಿದ್ರೆ ಅಳು ಬರ್ತಿದೆ ಕಣೇ. ಹೇಗಿದ್ದವಳು ಹೇಗಾಗೀಯಲ್ಲ! ನಾನು ಪಿ. ಯು. ಸಿ ಓದುತ್ತಿದ್ದಾಗಿನಿಂದ ನಿನ್ನನ್ನು ನೋಡಲು ಗಂಡುಗಳುಬರುತ್ತಿದ್ದರೂ ಇಲ್ಲೀವರೆಗೆ ನಿನ್ನನ್ನು ಮದುವೆಯಾಗಿಲ್ಲ. ನಿನ್ನ ತಂದೆಯಂತಹವರಿಗೆ ಬುದ್ಧಿ ಬರಬೇಕೆಂದೂ, ಜಾತಕ

ಇತ್ಯಾದಿಗಳ ಹುಚ್ಚು ಬಿಟ್ಟು ಹೋಗಬೇಕೆಂದರೂ ನಿನ್ನ ಜೀವನದಲ್ಲಿ ಹೊಸ ಚಿಗುರು ಮೂಡಬೇಕೆಂದರೂ ನಾನು ಹೇಳಿದಂತೆ ಮಾಡು. 'ಒಂದು ಉಪಾಯ ಹೇಳಿಕೊಡ್ತೀನಿ. ಮಾಡ್ತೀಯಾ' ಎಂದು ಕೇಳಿದಳು. ಮಾಡುವುದಾಗಿ ಹೇಳಿದೆ. ನಾನೇನು ಮಾಡಬೇಕೆಂಬುದನ್ನು ಹೇಳಿದಳು ನಂತರ.

'ಈಗಾಗ್ಲೇ ನಿನಗೆ ಇಪ್ಪತ್ತಾ.. ... ದಾಟುತ್ತಿದೆ. ನಿಮ್ಮಪ್ಪ ಇನ್ನೂ ಜಾತಕ ಮಣ್ಣು-ಮಸಿ ಅಂತ ಹಠ ಹಿಡಿದ್ರೆ ಮದುವೆಯೇ ಆಗೋದಿಲ್ಲ. ಹೀಗೇ ಒಣಗಿ, ಮಣ್ಣು ಸೇರ್ತೀಯ, ಅಷ್ಟೇ ಆದ್ದರಿಂದ ನಾನು ಹೇಳಿದ ಉಪಾಯ ಪ್ರಯೋಗಿಸಿ ನೋಡು' ಎಂದು ಸಲಹೆ ನೀಡಿದಳು.

ನಾನು ಆಲೋಚನೆಗೆ ತೊಡಗಿದೆ. ಯೋಚಿಸಿದಂತೆಲ್ಲ ಸುಮತಿ ಹೇಳಿದ್ದು ಸತ್ಯ ಎಂದು ಮನವರಿಕೆಯಾಗತೊಡಗಿತು. ದಿನಗಳುರುಳಿದಂತೆಲ್ಲ ಸುಮತಿಯ ಉಪಾಯವನ್ನು ಆಚರಣೆಗೆ ತರುವುದು ಹೇಗೆಂದು ಯೋಚಿಸತೊಡಗಿದೆ.

ಅದೇ ಸಮಯದಲ್ಲಿ ಎದುರು ಮನೆಗೆ ಮನೋಹರ್ ಎನ್ನುವ ಹುಡುಗ ಬಂದ. ಅವನಿಗೆ ಹದಿನೆಂಟು ವರ್ಷಗಳಿದ್ದಿರಬಹುದು. ಅಂದರೆ ನನಗಿಂತಲೂ ಆರೇಳು ವರ್ಷ ಚಿಕ್ಕವನು. ನಮ್ಮ ಮನೆಯ ಎದುರು ಮನೆಯಲ್ಲಿರುತ್ತಿದ್ದ ಚಿನ್ನಸ್ವಾಮಿಯ ಬಳಿ ನಾದಸ್ವರ ಕಲಿಯಲು ಅವನು ಬಂದಿರುವನೆಂಬುದು ಗೊತ್ತಾಯ್ತು. 'ಅಂದರೆ ಆ ಸಂಗೀತ ವಿದ್ಯೆ ಕಲಿಯುವವರೆಗೆ ಅಲ್ಲೇ ಇರುತ್ತಾನೆಂದಾಯ್ತು ಪರವಾಗಿಲ್ಲ....' ಎಂದಕೊಂಡೆ.

ಮನೋಹರ್ ದಿನಾ ಬೆಳಿಗ್ಗೆಯೇ ಎದ್ದು ಮನೆಯ ಮುಂದಿದ್ದ ಜಗಲಿಯ ಮೇಲೆ ಕುಳಿತುಕೊಂಡು ಸಾಧನೆ ಮಾಡುತ್ತಿದ್ದ. ನಮ್ಮ ಮನೆಯ ವರಾಂಡದಿಂದ ಅಸ್ಪಷ್ಟವಾಗಿ ಕಂಡುಬರುತ್ತಿದ್ದ. ಸಾಧನೆ ಪ್ರಾರಂಭವಾದ ಎರಡನೇ ದಿನ 'ಧ್ವನಿ ಚೆನ್ನಾಗಿದೆ' ಎನ್ನುವ ಅರ್ಥಬರುವಂತೆ ಸನ್ನೆ ಮಾಡಿದೆ. ಅವನು ಪೆಚ್ಚಾದರೂ ನಂತರ ಸುಧಾರಿಸಿಕೊಂಡ.

ಆ ರೀತಿ ನಮ್ಮ ಪರಿಚಯ ಪ್ರಾರಂಭವಾಯ್ತು.

ಒಂದು ದಿನ ಮನೋಹರನನ್ನು ಊಟಕ್ಕೆ ಕರೆದೆ. ಅಂದು ನಮ್ಮ ತಾತನ ತಿಥಿಯಿತ್ತು. ಬಂದು ಊಟಮಾಡಿಕೊಂಡು ಹೋದ. ಆಗಿನಿಂದ ದಿನಾಲೂ ಸಾಯಂಕಾಲದ ಹೊತ್ತು ನಮ್ಮ ಮನೆಯ ತಾರಸಿಯ ಮೇಲೆ ಕರೆದು, ಅವನೊಂದಿಗೆ ಹರಟೆಕೊಚ್ಚುತ್ತಿದ್ದೆ. ನಮ್ಮಿಬ್ಬರ ನಡುವೆ ಇದ್ದ ವಯಸ್ಸಿನ ವ್ಯತ್ಯಾಸದಿಂದಲೋ ಏನೋ. ನಮ್ಮಮ್ಮ ನಮ್ಮ ಸ್ನೇಹಕ್ಕೆ ಅಭ್ಯಂತರ ಹೇಳಲಿಲ್ಲ.

ಒಂದು ದಿನ ರಾತ್ರಿ ಎಂಟು ಗಂಟೆಯ ಸಮಯದಲ್ಲಿ ನಾವಿಬ್ಬರೂ ತಾರಸಿಯ ಮೇಲಿರುವಾಗ ಕರೆಂಟ್ ಹೋಯ್ತು.

"ಅರೆ ಕರೆಂಟ್ ಹೋಯ್ತಲ್ಲ!" ಎಂದ ಮನೋಹರ್.

"ಎಲ್ಲಿದೀಯ?" ಎನ್ನುತ್ತ ನಾನು ಅವನ ಬಳಿಗೆ ಹೋಗಿ ಭುಜಗಳನ್ನು ಹಿಡಿದುಕೊಂಡೆ. ಸ್ವಲ್ಪ ಹೊತ್ತು ಬಿಟ್ಟು ಮತ್ತಷ್ಟು ಹತ್ತಿರ ಸರಿದು ಹಣೆಯಿಂದ ಹಿಡಿದು ಪಾದಗಳವರೆಗೆ-ಇಡೀ ಶರೀರವನ್ನು ಅವನ ಶರೀರಕ್ಕೇ ಅನಿಸಿ, ಗಟ್ಟಿಯಾಗಿ ಅದುಮಿ ಹಿಡಿದುಕೊಂಡು ಮುತ್ತಿಟ್ಟೆ. ಆ ಕ್ಷಣಕ್ಕೋಸ್ಕರವೇ ತಡೆದಿದ್ದಂತೆ ಹೋಗಿದ್ದ ಕರೆಂಟ್ ಬಂತು. ಅವನಲ್ಲಿ ಎಂತಹುದೋ ಮಾರ್ಪಾಡುಂಟಾಗಿತ್ತು.

"ಜೀವನದಲ್ಲಿ ಯಾವಾಗ ಕರೆಂಟ್ ಹೋದರೂ ನಿನಗೆ ಈ ಕ್ಷಣ ನೆನಪು ಬರಲೆಂದೇ ಮುತ್ತಿಟ್ಟೆ." ಎಂದೆ.ಅವನು ಅತ್ತಿತ್ತ ಮಿಸುಕಾಡಿದನಾದರೂ, ಏನೂ ಮಾತಾಡಲಿಲ್ಲ.

"ನಮ್ಮೂರಿನಲ್ಲಿ ಬೀದಿ ಲೈಟುಗಳು ಯಾಕಿಲ್ಲ ಗೊತ್ತೇ? ಈ ರೀತಿ ನಮ್ಮ ಪ್ರೇಯಸಿಯರಿಗೆ, ಮುತ್ತಿಡಬೇಕೆಂದುಕೊಳ್ಳುವ ಹುಡುಗರು ದೀಪಗಳನ್ನು ಒಡೆದು ಹಾಕುತ್ತಿದ್ದರು. ಪಾಪ, ಸರಪಂಚ ಬಲ್ಬು ಹಾಕಿಸಿ, ಹಾಕಿಸಿ ಬೇಸತ್ತು ಹಾಕಿಸುವುದನ್ನೇ ಬಿಟ್ಟ." ಅವನು ನಗಲಿಲ್ಲ. ನನ್ನನ್ನೇ ನೋಡುತ್ತಿದ್ದ. ನಾನು ಮುಗುಳ್ನಕ್ಕು ಅವನ ಕೈ ಹಿಡಿದು ಕೆಳಗೆ ಕರೆತಂದು "ಗುಡ್ ನೈಟ್" ಹೇಳಿ ಕಳುಹಿಸಿದೆ.

ಆ ದಿನದಿಂದ ನಾವು ಯಾವಾಗ ಭೇಟಿಯಾಗಿ ಮಾತಾಡಿದರೂ, ಹೋಗುವಾಗಮಾತ್ರ ಸ್ವಲ್ಪ ಹೊತ್ತು ತಟಪಟಾಯಿಸುತ್ತಿದ್ದ ಮುತ್ತಿಗೋಸ್ಕರವೇ ಅವನು ಆ ರೀತಿ ತಟಪಟಾಯಿಸುತ್ತಿದ್ದನೆಂಬುದು ನನಗೆ ಗೊತ್ತಾಗುತ್ತಿತ್ತು. ಅದಕ್ಕೇ ಗುಡ್‌ಬೈ ಹೇಳುವ ಮುನ್ನ ಅವನನ್ನು ಬಲವಾಗಿ ತಬ್ಬಿಕೊಂಡು ಮುತ್ತಿಡುತ್ತಿದ್ದೆ.

ಹೆಂಡತಿಯ ವ್ಯಭಿಚಾರವನ್ನು ಕೊನೆಯಲ್ಲಿ ತಿಳಿದುಕೊಳ್ಳುವ ವ್ಯಕ್ತಿ ಅವಳ ಗಂಡ-ಎನ್ನುವಂತೆ ನಮ್ಮಿಬ್ಬರ ಸ್ನೇಹದ ಸುದ್ದಿ ಊರೆಲ್ಲಾ ತಿರುಗಾಡಿ ನನ್ನ ತಂದೆಯ ಕಿವಿಯ ಬಳಿ ಬಂದು ನಿಂತಿತು. ಅದರಿಂದಾಗಿ ಆತ "ಹಯ್, ಹುಯ್" ಎಂದು ಗದ್ದಲ ಮಾಡಿ ಇನ್ನೊಮ್ಮೆ ಅವನನ್ನು ಭೇಟಿಯಾದರೆ ಪರಿಣಾಮ ನೆಟ್ಟಗಿರುವುದಿಲ್ಲವೆಂದು ಎಚ್ಚರಿಸಿದ.

ನಾನು ಪ್ರತಿಯಾಡದೆ ಮರುದಿನ ನಡೆದುದನ್ನೆಲ್ಲ ಚಿಕ್ಕದೊಂದು ಚೀಟಿಯಲ್ಲಿ ಬರೆದು ಮನೂನ ಹತ್ತಿರ ಬೀಳುವಂತೆ ಎಸೆದೆ. ಆ ಚೀಟಿ ಓದಿದ

ಮನೋಹರ್ ತುಂಬಾ ದಿಗಿಲು ಹಚ್ಚಿಕೊಂಡನೆಂಬುದನ್ನು ಅವನ ವರ್ತನೆಯೇ ಹೇಳುತ್ತಿತ್ತು. ಆಗಿನಿಂದ ಅವನನ್ನು ಭೇಟಿಯಾಗಲು ಅಡ್ಡ ದಾರಿಗಳನ್ನು ಹುಡುಕತೊಡಗಿದೆ.

ಅಂತಹ ಅವಕಾಶ ನಂತರದ ಹತ್ತು ದಿನಗಳಿಗೆ ಸಿಕ್ಕಿತು.

ನಮ್ಮ ಪಕ್ಕದ ಊರಿನಲ್ಲಿ ಜಾತ್ರೆಯ ಅಂಗವಾಗಿ ರೆಕಾರ್ಡಿಂಗ್ ಡ್ಯಾನ್ಸ್ ಇದೆಯೆಂದು ನೋಡಲು ನಮ್ಮ ಬೀದಿಯಲ್ಲಿ ಗಂಡು-ಹೆಣ್ಣು ಸೇರಿ ಒಂದಿಪ್ಪತ್ತು ಜನ ಹೊರಡಲು ಸಿದ್ಧರಾದರು. ನಮ್ಮ ಪಕ್ಕದ ಮನೆಯ ವನಜಾಕ್ಷಿ ನನ್ನನ್ನು ಕರೆದಳು. ಮನೋಹರನನ್ನು ಭೇಟಿಯಾಗಲು ಇದು ಒಳ್ಳೇ ಅವಕಾಶವೆನಿಸಿ, ಜಾತ್ರೆಗೆ ಹೋಗುತ್ತೇನೆಂದು ಅಮ್ಮನನ್ನು ಕೇಳಿದೆ. ಆಕೆ ಅಪ್ಪನನ್ನು ಕೇಳಿ ಒಪ್ಪಿಗೆ ಪಡೆದಳು. ವನಜಾಕ್ಷಿಯೊಂದಿಗೆ ಕೂಡಿ ಹೊರಟೆ.

ನಾವು ಹೋಗಲು ಎರಡು ಎತ್ತಿನ ಬಂಡಿಗಳನ್ನು ಕಟ್ಟಿದರು. ಈ ರೀತಿ ಪಕ್ಕದೂರಿಗೆ ರೆಕಾರ್ಡಿಂಗ್ ಡ್ಯಾನ್ಸ್ ನೋಡಲು ಹೋಗುತ್ತಿರುವುದಾಗಿಯೂ, ಬೀದಿಯ ತುದಿಯಲ್ಲಿ ಕಾಯುತ್ತಿರಬೇಕೆಂದು ಮನೋಹರನಿಗೆ ಕೇಳಿ ಕಳುಹಿಸಿದೆ.

ಬಂಡಿಗಳು ಹೊರಟವು. ನಾನು ಎರಡನೇ ಬಂಡಿಯ ಕೊನೆಯಲ್ಲಿ ಕುಳಿತುಕೊಂಡೆ. ಬೀದಿಯ ತಿರುವಿನಲ್ಲಿ ಹೊರಳುತ್ತಿರುವಾಗ ನನ್ನ ಕಣ್ಣುಗಳು ಮನೋಹರನಿಗೋಸ್ಕರ ಹುಡುಕಾಡಿದವು. ಒಂದು ಗಿಡದ ಕೆಳಗೆ ನಿಂತಿದ್ದ ಅವನನ್ನು ನೋಡಿ ಬಾ ಎನ್ನುವಂತೆ ಕೈಬೀಸಿದೆ. ಅಲ್ಲಿಯವರೆಗೂ ಅಡ್ಡಲಾಗಿ ಕುಳಿತಿದ್ದ ನಾನು ಉದ್ದಕ್ಕೆ ತಿರುಗಿ ಕಾಲುಗಳೆರಡನ್ನೂ ಇಳಿಬಿಟ್ಟೆ ಈಗ ಮತ್ತೊಬ್ಬರು ನನ್ನ ಪಕ್ಕದಲ್ಲಿ ಕುಳಿತುಕೊಳ್ಳಲು ಅವಕಾಶವಾಯ್ತು. ಬಂಡಿಯ ಹಿಂದೆ ಬಂದ ಮನೋಹರನಿಗೆ ಕೈನೀಡಿ ಹತ್ತಿಸಿದೆ. ಮತ್ತಷ್ಟು ಸರಿದು ಕುಳಿತು ಅವನನ್ನು ನನ್ನ ಪಕ್ಕದಲ್ಲಿಯೇ ಕುಳಿತುಕೊಳ್ಳೆಂದು ಸೂಚಿಸಿದೆ. ಅವನು ನನ್ನ ಪಕ್ಕದಲ್ಲಿಯೇ ನನ್ನಂತೆ ಕಾಲು ಇಳಿಬಿಟ್ಟು ಕುಳಿತುಕೊಂಡ.

ಬಿದ್ದು ಹೋಗದಂತೆ ಸಾರೋಟನ್ನು ಹಿಡಿದುಕೊಳ್ಳುವ ನೆಪದಿಂದ ನನ್ನ ಬಲಗೈಯನ್ನು ಅವನ ಭುಜದ ಮೇಲೆ ಚಾಚಿದೆ. ಈಗ ನನ್ನ ಬಲ ಭಾಗವೆಲ್ಲ ಅವನ ಬೆನ್ನಿಗೆ ಒತ್ತಿಕೊಳ್ಳುತ್ತಿತ್ತು. ಆ ಹತ್ತು ದಿನಗಳ ವಿಯೋಗವನ್ನು ತುಂಬಿಕೊಡಲೆನ್ನುವಂತೆ ಮತ್ತಷ್ಟು ಅದುಮಿಡಿದೆ. ನನ್ನ ಸ್ತನದ ತಾಕುವಿಕೆ ಅವನ ಕಷ್ಟವನ್ನೆಲ್ಲ ಕ್ಷಣಾರ್ಧದಲ್ಲಿ ತೊಡೆದು ಹಾಕುತ್ತದೆಂದು ನನಗೆ ಗೊತ್ತಿತ್ತು. ನಾನು ಆ ರೀತಿ ಅವನನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡದ್ದನ್ನು ನೋಡಿ ಎರಡೂ ಬಂಡಿಗಳಲ್ಲಿನವರು ಗುಸುಗುಸು ಮಾತಾಡಿಕೊಂಡರು. ನಾನು

ಅದೇನನ್ನೂ ಲೆಕ್ಕಿಸದೆ ಮನೋಹರನೊಂದಿಗೆ ಮಾತಾಡತೊಡಗಿದೆ.

ಬಂಡಿಗಳು ನಮ್ಮೂರನ್ನು ದಾಟಿ ತಾರುರಸ್ತೆಯ ಮೇಲೆ ಹತ್ತಿದವು. ಆಗಾಗ ಬರುವ ವಾಹನಗಳ ದೀಪ ಕಾಂತಿ ನಮ್ಮ ಮೇಲೆ ಬೀಳುತ್ತಿತ್ತು.

'ಈ ಡ್ರೈವರುಗಳಿಗೆ ಮತ್ತೇನೂ ಕೆಲಸವಿಲ್ಲ. ದೀಪಗಳನ್ನು ನಮ್ಮತ್ತ ಬೀರಿ ನಾವು ಏನು ಮಾಡುತ್ತೇವೆನ್ನುವುದನ್ನು ಆಸಕ್ತಿಯಿಂದ ನೋಡುತ್ತಾರೆ' ಎಂದು ಮೆಲ್ಲಗೆ ನುಡಿದೆ.

ಹೌದೆನ್ನುವಂತೆ ತಲೆಯಾಡಿಸಿದೆ. ನನ್ನ ಬಲ ಸ್ತನ ಅವನ ಭುಜವನ್ನು ತಾಕುತ್ತಿರುವತನಕ ಅವನು ಮಾತಾಡಲಾರನೆನ್ನುವುದು ನನಗೆ ಗೊತ್ತಿತ್ತು. ಅದಕ್ಕೇ ನಾನೇ ಮಾತಾಡುತ್ತಿದ್ದೆ. ಬಂಡಿಗಳು ಜಾತ್ರೆಯ ಬಳಿ ತಲುಪಿದವು. ಬಂಡಿ ದೂರದಲ್ಲಿ ನಿಲ್ಲಿಸಿ ನಾವೆಲ್ಲರೂ ಉಳಿದೆವು.

'ಡ್ಯಾನ್ಸ್ ಮುಗಿದ ನಂತರ ಎಲ್ಲರೂ ಬಂಡಿಗಳ ಬಳಿಗೆ ಬಂದುಬಿಡಿ' ಎಂದು ಹೇಳಿದ ವನಜಾಕ್ಷಿಯ ಗಂಡ. ಸರಿ ಎನ್ನುವಂತೆ ತಲೆಯಾಡಿಸಿದೆವು. ಗದ್ದಲದಿಂದ ಜಾತ್ರೆ ಕೂಡಿತ್ತು. ಗುಡಿಯ ಮುಂದಿನ ಭಾಗದಲ್ಲಿ ವೇದಿಕೆಯನ್ನು ಹಾಕಿದ್ದರು, ನಾವು ಹೋಗಿ ಕುಳಿತುಕೊಂಡೆವು. ಮನೋಹರನನ್ನು ನನ್ನ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡೆ.

ಡ್ಯಾನ್ಸ್ ಶುರುವಾಯ್ತು. ನಾನು ಮೆಲ್ಲಗೆ ಮನೋಹರನ ಎಡಗೈಯನ್ನು ನನ್ನ ಕೈಯಲ್ಲಿ ಹಿಡಿದುಕೊಂಡೆ. ನನ್ನ ತೊಡೆಯ ಮೇಲಿದ್ದ ಅವನ ಕೈ ನಡುಗುವುದು ಗೊತ್ತಾಗುತ್ತಿತ್ತು.

ಸುಮಾರು ಹತ್ತು ಹಾಡುಗಳಿಗೆ ಡ್ಯಾನ್ಸ್ ಮಾಡಿದರು. ಕೊನೆಯ ಹಾಡು ನಡೆಯುತ್ತಿರುವಾಗ ಜನ ಅಲ್ಲಲ್ಲಿ ಎದ್ದು ನಿಂತರು. ನನಗೇನೂ ಕಾಣದ್ದರಿಂದ ನಾನೂ ಎದ್ದು, ಮನೋಹರನನ್ನು ಎಬ್ಬಿಸಲು ಕೈ ನೀಡಿದೆ. ಪಕ್ಕದಲ್ಲಿದ್ದವರೂ ತಳ್ಳಿದ್ದರಿಂದ ನಾನು ನಿಯಂತ್ರಣ ತಪ್ಪಿ ಪೂರ್ತಿಯಾಗಿ ಅವನ ಮೇಲೆ ಒರಗಿಬಿಟ್ಟೆ. ನನ್ನ ಉಬ್ಬಿದೆದೆ ಅವನೆದೆಯೊಳಗೆ ನಾಟಿಕೊಂಡಿತು ಜನರಿಂದ ತಪ್ಪಿಸಿಕೊಳ್ಳುತ್ತ ಅಲ್ಲಿಂದ ಹೊರಬಂದೆವು. ನಾವು ಹೋಗುವಷ್ಟರಲ್ಲಿ ಬಂಡಿಗಳ ಬಳಿ ನಮ್ಮ ಊರಿನವರು ಬಹಳ ಜನರಿದ್ದರು. ಅದಕ್ಕೆ ಮುನ್ನ ನಡೆದು ಬಂದವರಲ್ಲಿ ಕೆಲವರು ಬಂಡಿಯಲ್ಲಿ ಹೋಗಲು ಅಲ್ಲಿ ಸೇರಿದ್ದರು.

ಮೊದಲು ಮುದುಕರನ್ನು, ಮಕ್ಕಳನ್ನು ಹತ್ತಿಸಿದರು. ಆತರಂನ ಮಧ್ಯವಯಸ್ಸಿನ ಸ್ತ್ರೀಯರು ಹತ್ತಿದರು. ನಾವೊಂದು ಹತ್ತು ಜನ ಬಂಡಿಯಲ್ಲಿ

ಸ್ಥಳ ಸಾಲದೆ ನಿಲ್ಲಬೇಕಾಗಿ ಬಂತು. ನಾವು ಅಡ್ಡದಾರಿಯ ಮೂಲಕ ಬರುವುದಾಗಿ ಹೇಳಿದ್ದರಿಂದ ಬಂಡಿಗಳು ಹೊರಟವು.

ನಾವು ಅಡ್ಡದಾರಿ ಹಿಡಿದೆವು. ನಮ್ಮೂರಿಗೂ ಆ ಊರಿಗೂ ನಡುವೆ ಕೇವಲ ನಾಲ್ಕು ಫರ್ಲಾಂಗು ದೂರವಿತ್ತು. ಹೊತ್ತು ಬಹಳವಾದುದರಿಂದ ನಮ್ಮ ಗುಂಪಿನ ಜನ ಬಡಬಡನೆ ಹೆಜ್ಜೆ ಹಾಕುತ್ತಿದ್ದರು. ನಾನೂ, ಮನೋಹರ್ ಹಿಂದುಳಿಯುತ್ತಿದ್ದೆವು. ವನಜಾಕ್ಷಿ ಬೇಗ ಬರುವಂತೆ ಅವಸರ ಪಡಿಸಿದಳು.

'ನನಗೇನೂ ಪರವಾಗಿಲ್ಲ.' ಜೊತೆಗೆ ಮನೂ ಇದ್ದಾನಲ್ಲ.

'ಇಲ್ಲಿ ಕುಳಿತುಕೊಳ್ಳೋಣವಾ?' ಎನ್ನುತ್ತ ಅವನ ಪ್ರತಿಕ್ರಿಯೆಗೆ ಕಾಯದೆ ಕುಳಿತುಕೊಂಡೆ. ಮನೋಹರನೂ ನನ್ನೆದುರಿಗೆ ಪದ್ಮಾಸನ ಹಾಕಿಕೊಂಡು ಕುಳಿತು. ಸುತ್ತ-ಮುತ್ತ ಎಲ್ಲೂ ಸದ್ದಿರಲಿಲ್ಲ. ಆಗಾಗ ಅತ್ತಿತ್ತ ಮಿಣುಕು ಹುಳುಗಳು ಹಾರುವುದು ಕಂಡು ಬರುತ್ತಿತ್ತು. ಅಲ್ಲಲ್ಲಿ ಇದ್ದ ಮರಗಳೂ ಗಾಢ ನಿದ್ದೆಯಲ್ಲಿವೆ ಎನ್ನುವಂತೆ ಚಲನರಹಿತವಾಗಿದ್ದವು.

ನಾನು ಅವನ ಮುಖವನ್ನು ದಿಟ್ಟಿಸಿ ನೋಡುತ್ತ, 'ಮನೂ, ಏನಾದರೂ ಮಾತಾಡು' ಎಂದೆ. ಅವನು ತುಟಿ ಬಿಚ್ಚದ್ದರಿಂದ ತಿರುಗಿ ನಾನೇ 'ಈ ಹತ್ತು ದಿನ ಹೇಗೆ ಕಳೆದೆ? ನಾನು ಕರೆಯಲಿಲ್ಲವೆಂದು ಕೋಪ ಬಂತೆ?' ಎಂದು ಕೇಳಿದೆ.

'ಇಲ್ಲ'

'ಮತ್ತೆ!?'

'ಮೊದಲನೆಯ ದಿನ ನೀನು ಕರೆಯದಿದ್ದಾಗ ಅಳು ಬಂತು. ಆ ದಿಗಿಲಿನಿಂದ ಜ್ವರ ಕೂಡ ಬಂತು. ಎರಡನೇ ದಿನವೂ ನೀನು ಕರೆಯದ್ದರಿಂದ ಮತ್ತೆ ಅಳು ಬಂತು. ಅದರಿಂದಾಗಿ ತಿರುಗಿ ಜ್ವರ ಬಂತು. ಈ ಹತ್ತು ದಿನವೆಲ್ಲ ಅಷ್ಟೇ ಈ ದಿನ ನೀನು ಕರೆದಾಗ ಆನಂದ ತಡೆಯಲಾಗದೆ ಅಳುಬಂತು ಚೆನ್ನಾಗಿ ಅತ್ತೆ ಮತ್ತೆ ಜ್ವರ ಬಂತು.'

ನಾನು ತಟಕ್ಕನೆ ಅವನ ಕೈ ಹಿಡಿದು ನೋಡಿದೆ. ಅಲ್ಲಿಯವರೆಗೆ ನಾನು ಗಮನಿಸಿರಲಿಲ್ಲವಾದರೂ ಕೈ ಸುಡುತ್ತಿತ್ತು. ಏನು ಮಾಡಬೇಕೆಂದು ನನಗೆ ತಟ್ಟನೆ ಹೊಳೆಯಲಿಲ್ಲ. ಏನಾದರೂ ಮಂತ್ರ ಹಾಕಿ ಜ್ವರವನ್ನು ತೊಲಗಿಸಿಬಿಡಬೇಕೆನ್ನುವ ಆತುರ. ಅವನನ್ನು ಹಾಗೆಯೇ ಮುಂದಕ್ಕೆಳೆದುಕೊಂಡೆ. ನನ್ನ ಮಡಿಲಲ್ಲಿ ತಲೆಯಿಟ್ಟು ಬಿಕ್ಕತೊಡಗಿದ. ಆ ರೀತಿ ಬಿಕ್ಕುತ್ತಿರುವಾಗಲೆಲ್ಲ ನನ್ನ ವಕ್ಷಸ್ಥಳ ಅವನ ತಲೆಗೆ ತಾಕುತ್ತಿತ್ತು. ಅಲ್ಲಿಯವರೆಗೆ ಎಂದೂ ನನ್ನನ್ನು

ಮುಟ್ಟಲು ಪ್ರಯತ್ನಿಸದಿದ್ದ ಅವನು, ಸಿಕ್ಕಿರುವ ನಿಧಿಯನ್ನು ಬಿಟ್ಟರೆ ಮಾಯವಾಗಿಬಿಡುತ್ತದೆನ್ನುವಂತೆ ಗಟ್ಟಿಯಾಗಿ ಎರಡು ಕೈಗಳಿಂದ ತಬ್ಬಿ ಹಿಡಿದುಕೊಂಡ. ನಾನು ಹಾಗೆಯೇ ತಲೆಯನ್ನು ಬಾಗಿಸಿ ಅವನ ಕತ್ತಿನ ಮೇಲೆ ತುಟಿಗಳ ಮೇಲೆ ಮುದ್ರೆ ಒತ್ತಿದೆ. ಹಾಗೆಯೇ ನನ್ನ ಮೇಲೆ ತೆವಳಿ ಬಾಯಿಯಿಂದ ನನ್ನ ತುಟಿಗಳನ್ನು ಎಟುಕಿಸಿಕೊಂಡ, ಬೆಚ್ಚನೆಯ ತುಟಿಗಳು ನನ್ನಲ್ಲಿ ಮತ್ತಷ್ಟು ಬಿಸಿಯನ್ನು ಹುಟ್ಟಿಸುತ್ತಿದ್ದವು. ಸುಮಾರು ಹತ್ತು ವರ್ಷಗಳಿಂದ ಅನುಭವಕ್ಕಾಗಿ ಹಂಬಲಿಸಿದ ನನ್ನ ಶರೀರ ಅವನೊಂದಿಗೆ ಹೆಣೆದುಕೊಳ್ಳುತ್ತಿತ್ತು. ಮುಖವನ್ನೆಲ್ಲ ಮುತ್ತಿನ ಮಳೆಯಿಂದ ತುಂಬಿಸಿದ ಅವನು ಕೆಳಗಿಳಿದು ನನ್ನ ಎದೆಯ ನಡುವೆ ತಲೆ ಇಟ್ಟು ಅದುಮಿದ. ಅಲ್ಲಿಗೂ ಅವನು ಅಳು ನಿಲ್ಲಿಸಿಲ್ಲವೆಂಬುದು ನನ್ನ ಎದೆಗೆ ತಾಕುತ್ತಿದ್ದ ಒದ್ದೆಯಿಂದ ಅರ್ಥವಾಯ್ತು.

ಮನೋಹರ್ ಮೈಯಲ್ಲಿ ಏನೋ ಹೊಕ್ಕವನಂತೆ ಕುಪ್ಪಸದ ಮೇಲ್ಭಾಗವನ್ನು ಹಿಡಿದುಕೊಂಡು ಜೋರಾಗಿ ಕೆಳಗೆಳೆದ ಹುಕ್‌ಗಳು ಕಿತ್ತುಹೋದವು. ಕೇವಲ ಬ್ರಾವನ್ನಷ್ಟೇ ಅಡ್ಡವಾಗಿಟ್ಟುಕೊಂಡಿದ್ದ ಸ್ತನಗಳು ಹೊರಬಿದ್ದವು, ಅಷ್ಟುದಿನ ನಾಚಿಕೆಯ ಮುದ್ದೆಯಾಗಿ, ಚಿಪ್ಪಿನಲ್ಲಿ ಹುದುಗಿಕೊಳ್ಳುತ್ತಿದ್ದ ಅವನು ಆ ರೀತಿ ವಿಜೃಂಭಿಸುತ್ತಿರುವನೆಂದರೆ ನನ್ನ ಮೇಲಿನ ಕೋರಿಕೆಅವನನ್ನು ಎಷ್ಟರ ಮಟ್ಟಿಗೆ ಕಾಡುತ್ತಿರಬೇಕೆಂಬುದು ಅರ್ಥವಾಯ್ತು.

ಬ್ರಾದ ಹುಕ್‌ಗೋಸ್ಕರ ತಡಕಾಡುತ್ತಿದ್ದ ಅವನ ಕೈಗಳನ್ನು ತಡೆದು ನಾನೇ ಹುಕ್ ಕಳಚಿದೆ. ಎದೆಗೆ ಇದ್ದೊಂದು ಆಚ್ಛಾದನೆ ತೊಲಗಿಹೋಯ್ತು. ನುಣುಪಾದ ನನ್ನ ತುಂಬು ಸ್ತನಗಳಿಗೆ ಮುಖವನ್ನು ಬಲವಾಗಿ ಅದುಮಿದ ಮನೋಹರ್. ಅವನ ಭಾರವನ್ನು ತಾಳಲಾಗದೆ ಹಿಂದಕ್ಕೊರಗಿದೆ. ಮರಳು ಮೈಗೆ ತಿಕ್ಕಿಕೊಳ್ಳುತ್ತಿದ್ದರೂ ನೋವು ಗೊತ್ತಾಗುತ್ತಿರಲಿಲ್ಲ. ಅವನು ನನ್ನ ಮೇಲಿಂದ ಕೆಳಗೆ ಸರಿದು ಸೊಂಟದ ಬಳಿ ನಿಂತ. ಆಳವಾದ ನನ್ನ ಹೊಕ್ಕಳೂ ಅವನ ಕಣ್ಣೀರಿನಿಂದ ತುಂಬಿಹೋಯ್ತು.

ಅವನ ಅಳು ನಿಲ್ಲಿಸಬೇಕೆಂದರೆ ಮಾಡಬೇಕಾದುದು ಇನ್ನೂ ಬಹಳಷ್ಟಿದೆಯೆಂದು ನನಗನ್ನಿಸಿತು. ಅದಕ್ಕೇ ಅವನಿಗೆ ಅನುವಾಗುವಂತೆ ಸರಿದು ಮಲಗಿಕೊಂಡೆ. ಅವನು ಹುಚ್ಚು ಹಿಡಿದವನಂತೆ ಅತ್ತಿತ್ತ ಮಿಸುಕಾಡುತ್ತ ಸೀರೆಗೆ ಕೈಹಾಕಿ ನೆರಿಗಳನ್ನು ಎಳೆದ.

ಬೆಳಗಿನ ಹೊತ್ತು ಇಬ್ಬನಿ ಹನಿಗಳ ಒತ್ತಡಕ್ಕೆ ಅರಳಿದ ಹಳದಿ ದಾಸವಾಳದಂತೆ ನಾನು ಉಟ್ಟಿದ್ದ ಹಳದಿ ಸೀರೆ ಬಿಚ್ಚಿಕೊಂಡಿತು. ಲಂಗಾದ ಲಾಡಿ ಎಳೆದ. ಆದರೆ ಅದು ಬಿಚ್ಚಿಕೊಳ್ಳುವ ಬದಲಾಗಿ ಮತ್ತಷ್ಟು ಬಿಗಿಯಾಯ್ತು.

ಮನೋಹರನ ಮುಖ ಮತ್ತೂ ಪೆಚ್ಚಾಯ್ತು. ನಾನು ಕೈಗಳಿಂದ ತಡವಿ ಲಂಗಾದ ಗಂಟು ಹಿಡಿದುಕೊಂಡು, ಅತ್ತಿತ್ತ ಸರಿದಾಡಿಸಿ ಗಂಟು ಬಿಚ್ಚಿದೆ.

ನನ್ನ ಬೆತ್ತಲೆ ಶರೀರವನ್ನು ನೋಡುತ್ತಾ ಮನೋಹರ್ ಬಿಕ್ಕುತ್ತಿದ್ದ. ನನ್ನಿಂದ ಅವನನ್ನು ಆ ರೀತಿ ನೋಡಲಾಗದೆ ಬೆನ್ನಿನ ಸುತ್ತ ಎರಡೂ ಕೈ ಬಳಸಿ ಹತ್ತಿರಕ್ಕೆಳೆದುಕೊಂಡೆ.

ಆಕಾಶದಲ್ಲಿನ ಚಂದ್ರ ಮೋಡಗಳೊಳಗೆ ಮರೆಯಾದ. ಗಾಳಿ ಮುಖ ಮರೆಸಿಕೊಂಡಿತು. ತೊರೆಯಲ್ಲಿನ ನೀರು ಮತ್ತಷ್ಟು ಮೌನ ಮುದ್ರೆ ತಾಳಿತು. ತೊರೆಯ ದಂಡೆಯ ಮೇಲಿದ್ದ ಮರಗಳು, ಮೆಲ್ಲನೆ ಅಲುಗಾಡಿದವು.

ಅಷ್ಟು ದಿನ ತನ್ನೊಳಗೆ ತಾನೇ ಅಡಗಿಸಿಕೊಂಡಿದ್ದ ಬಯಕೆಯನ್ನು ನನ್ನಲ್ಲಿ ನೆರವೇರಿಸಿಕೊಂಡು ಅವನು ಎದ್ದ. ಆಗ ಅವನು ಸಮಾಧಾನಗೊಂಡ. ವಿಚಿತ್ರವೆನ್ನುವಂತೆ ಅವನ ಕಣ್ಣುಗಳಲ್ಲಿ ನೀರು ಮಾಯವಾಗಿ ನಗು ಮೂಡಿ ಕೊಂಡಿತ್ತು.

ಅಷ್ಟು ದಿನ ಅವನ ಪುಟ್ಟ ಹೃದಯ ಹೆಬ್ಬಾವಿನಂತೆ ಸುತ್ತಿಕೊಳ್ಳು ತ್ತಿದ್ದ ಕೋರಿಕೆಯನ್ನು ತಡೆದುಕೊಳ್ಳದೇ ಹೋಗಿತ್ತು. ಆ ಎಳೇ ಶರೀರ ನನ್ನ ಅನುರಾಗದ ಒತ್ತಡವನ್ನು ತಡೆದುಕೊಳ್ಳದಾಗಿತ್ತು. ಇನ್ನೂ ಕನಸು ಕೂಡ ಕಾಣಲು ಕೈಲಾಗದಿರುವ ಆ ಕಣ್ಣುಗಳು ನನ್ನ ಭಾರೀ ಸೌಂದರ್ಯವನ್ನು ತಮ್ಮಲ್ಲಿ ತುಂಬಿಕೊಳ್ಳದಾಗಿದ್ದವು. ಇನ್ನೂ ಗಟ್ಟಿಗೊಳ್ಳದಿದ್ದ ನರಗಳು ಸುಳಿಯುವಂತಹ ನನ್ನ ಸೌಂದರ್ಯವನ್ನು ಸಹಿಸದಾಗಿದ್ದವು.

ಈಗ ನನ್ನೊಂದಿಗೆ ಸಮಾಗಮಗೊಂಡ ನಂತರ ಅವನು ಎಲ್ಲ ಒತ್ತಡ ಗಳಿಂದಲೂ ವಿಮುಕ್ತನಾಗಿ ಶಾಂತನಾಗಿದ್ದ.

"ಹೋಗೋಣ್ವಾ?" ಎಂದೆ.

"ಊಂ" ಎಂದ ಮನೋಹರ್. ಇಬ್ಬರೂ ಹೋಗಲೆಂದು ಎದ್ದೆವು. ದೂರದಲ್ಲಿ ಎರಡು ಬೆಳಕಿನುಂಡೆಗಳಂತಹವು ನಮ್ಮತ್ತ ಬರುತ್ತಿದ್ದವು. ಯಾರೋ ಲಾಂದ್ರಗಳನ್ನು ಹಿಡಿದುಕೊಂಡು ಬರುತ್ತಿರುವರೆಂಬುದನ್ನು ಗ್ರಹಿಸಿದೆ. ಬಹುಶಃ ನನ್ನ ತಂದೆ ಇರಬೇಕು ಎಂದುಕೊಂಡೆ, ನನ್ನ ಊಹೆ ನಿಜವಾಗಿತ್ತು. ಜೊತೆಗೆ ಒಂದಿಬ್ಬರನ್ನು ಕರೆದುಕೊಂಡು ನನ್ನನ್ನು ಹುಡುಕುತ್ತ ಬಂದಿದ್ದ. ನನ್ನನ್ನು ಮನೋಹರನೊಂದಿಗೆ ನೋಡಿದ ಆತ ಜೊತೆಗೆ ಬಂದಿದ್ದವರು ಶಿಲಾ ಪ್ರತಿಮೆಗಳಂತೆ ನಿಂತುಬಿಟ್ಟರು. ನನ್ನ ತಂದೆಯ ಮನಸ್ಸಿನಲ್ಲಿ ಎಂತಹ ಕೋಲಾಹಲ ಎದ್ದಿತ್ತೆಂಬುದನ್ನು ಹೇಳುವುದು ಕಷ್ಟ. ಕೆಲ ಕ್ಷಣಗಳಲ್ಲಿ ಚೇತರಿಸಿಕೊಂಡ ನನ್ನ ತಂದೆ ಬಾ ಎಂದ ಗಡುಸಾಗಿ ನುಡಿದು ಮುಂದೆ ಚಲಿಸಿದ.

ನಾನು ಹೋಗಿ ಬರುತ್ತೇನೆನ್ನುವಂತೆಮನೂನ ಕೈ ಅದುಮಿ ನನ್ನ ತಂದೆಯನ್ನು ಹಿಂಬಾಲಿಸಿದೆ–ಮನೂ ಅಲ್ಲಿಯೇ ನಿಂತ.

ಮನೆಗೆ ಬಂದ ನಂತರ ಅಪ್ಪ ದೊಡ್ಡ ರಾದ್ಧಾಂತ ಮಾಡುತ್ತಾನೆಂದುಕೊಂಡೆ, ಆದರೆ ಅಂತಹುದೇನೂ ನಡೆಯಲಿಲ್ಲ. ನಾನು ಆಶ್ಚರ್ಯಪಡುತ್ತಲೇ ಕೋಣೆಯೊಳಗೆ ಹೋಗಿ ಮಲಗಿಕೊಂಡೆ. ಮರು ದಿನ ಬೆಳಗ್ಗೆ ಎದ್ದು ನೋಡಿದಾಗ ನನ್ನ ತಂದೆ ಇರಲಿಲ್ಲ. ಅಷ್ಟು ಬೆಳ್ಳಂ ಬೆಳಗ್ಗೆ ಎಲ್ಲಿಗೆ ಹೋದನೆಂಬುದು ಅರ್ಥವಾಗಲಿಲ್ಲ. ಅಮ್ಮನ ಮುಖನೋಡುತ್ತಿದ್ದರೆ ಕೇಳುವ ಧೈರ್ಯವಾಗಲಿಲ್ಲ.

ಸಾಯಂಕಾಲ ಹೊತ್ತು ಕಂತುವಾಗ ಕಾರೊಂದು ಬಂದು ನಮ್ಮ ಮನೆಯ ಮುಂದೆ ನಿಂತಿತು. ನನ್ನ ತಂದೆ ಮೊದಲು ಅದರೊಳಗಿಂದ ಇಳಿದು, ಉಳಿದವರನ್ನು ಆದರದಿಂದ ಆಹ್ವಾನಿಸಿದ, ಬಂದವರು. ಹೆಣ್ಣು ನೋಡಲು ಬಂದಿರುವವರೆಂದು ಅರ್ಥವಾಯ್ತು. ಒಳಗೆ ಹೋದೆ. ಅಮ್ಮ ನನ್ನ ಹಿಂದೆಯೇ ಕೋಣೆಯೊಳಗೆ ಬಂದು 'ಗಂಡಿನ ಕಡೆಯವರುಬಂದಿದ್ದಾರೆ.ಬೇಗ ತಯಾರಾಗು' ಎಂದಳು.

ನಾನು ಮರು ಮಾತಾಡದೆ ಸೀರೆಬದಲಾಯಿಸಿಕೊಂಡು ಬಂದು ಕುಳಿತೆ. ಅವೇ ಪ್ರಶ್ನೆಗಳು–ಅವೇ ಉತ್ತರಗಳು. ಅರ್ಧಗಂಟೆಯಲ್ಲಿ ಆ ಕಾರ್ಯಕ್ರಮ ಮುಗಿದುಹೋಯ್ತು. ವಿಚಿತ್ರವೆನ್ನುವಂತೆ ನನ್ನ ತಂದೆ ಕೂಡ ಆ ಗಂಡಿನವರೊಂದಿಗೆ ಕಾರು ಹತ್ತಿ ಹೊರಟು ಹೋದ ನಾಲ್ಕು ದಿನಗಳವರೆಗೂ ಬರಲಿಲ್ಲ.

ಐದನೇ ದಿನ ಸಾಯಂಕಾಲ ಬಂದ ಕೈಯಲ್ಲಿದ್ದ ದೊಡ್ಡದೊಂದು ಪ್ಯಾಕೆಟ್‌ನ್ನು ಮೇಜಿನ ಮೇಲಿಟ್ಟು ಸ್ನಾನದ ಕೋಣೆಯೊಳಗೆ ಹೋದ. ಅಮ್ಮ ನನ್ನ ಬಳಿ ಬಂದು. 'ಅವು ನಿನ್ನ ಮದುವೆಯ ಲಗ್ನ ಪತ್ರಿಕೆಗಳು. ಹೋಗಿ ನೋಡು. ಮದುವೆಗೆ ಬಹಳ ದಿನ ಇಲ್ಲ. ನಿನ್ನ ಗೆಳತಿಯರ್ಯಾರಾದರೂ ಇದ್ದರೆ ನಾಳೆಯೇ ಲಗ್ನಪತ್ರ ಬಿಡು' ಎಂದಷ್ಟೇ ಹೇಳಿ ತನ್ನ ಕೆಲಸದಲ್ಲಿ ಮಗ್ನಳಾಗಿಬಿಟ್ಟಳು.

ನಾನು ಆ ಪ್ಯಾಕೆಟ್ ಬಿಚ್ಚಿದೆ. ನನ್ನ ನಿರೀಕ್ಷಣೆಯ ಫಲಶ್ರುತಿಯಾಗಿ ಲಗ್ನಪತ್ರಿಕೆಗಳು ಮಿರಿಮಿರಿ ಮಿಂಚುತ್ತಿದ್ದವು, ಮೊದಲ ಲಗ್ನಪತ್ರಿಕೆ ಸುಮತಿಗೆ ಕಳುಹಿಸಬೇಕಿದ್ದುದರಿಂದ ವಿಳಾಸ ಬರೆಯಲೆಂದು ಪೆನ್ನು ಹುಡುಕಿದೆ ಎಲ್ಲಿಯೂ ಕಂಡು ಬರಲಿಲ್ಲ. ಹಾಲ್‌ನಲ್ಲಿನ ಮೇಜಿನ ಮೇಲಿದೆಯೇನೋ ಎಂದು ಅತ್ತ ಹೋದೆ. ನನ್ನ ತಂದೆಯ ಕೋಣೆಯೊಳಗಿಂದ ಏನೋ ಮಾತುಗಳು ಕೇಳಿ ಬಂದವು. ಮತ್ತಷ್ಟು ಹತ್ತಿರ ಸರಿದು ಕಿವಿಯನ್ನು ಅತ್ತ ಹರಿಬಿಟ್ಟೆ.

ಅಪ್ಪ ಹೇಳುತ್ತಿದ್ದ–'ನನ್ನ ಶಕ್ತಿ ಮೀರಿ ಪ್ರಯತ್ನಿಸಿ, ಈ ಸಂಬಂಧ ಕುದುರಿಸಿದ್ದೇನೆ. ಮೊದಲೇ ಹುಡುಗನ ಜಾತಕ ತಿಳಿದುಕೊಂಡು ಅದಕ್ಕೆ ಸರಿ

ಹೊಂದುವ ರೀತಿಯಲ್ಲಿ ಇವಳ ಜಾತಕವನ್ನು ಬದಲಾಯಿಸಿ ಬರೆದೆ. ದೇವರ ದಯೆಯಿಂದಾಗಿ ಅದು ಅವರಿಗೆ ಗೊತ್ತಾಗಲಿಲ್ಲ ಎಲ್ಲ ಸರಿಯಾಗಿ ನಡೆಯಿತು.

'ಆದರೆ ಈ ರೀತಿ ತಪ್ಪು ಜಾತಕ ಸೃಷ್ಟಿಸಿ ಅವಳ ಮದುವೆ ಮಾಡಿದರೆ ಏನಾದರೂ ಅರಿಷ್ಟ ಸಂಭವಿಸುತ್ತೇನೋ' ಎಂದು ಗದ್ಗದ ಸ್ವರದಿಂದ ಹೇಳು ತ್ತಿದ್ದಳು ಅಮ್ಮ.

"ಮತ್ತಿನ್ನೇನು ಮಾಡೋದು? ಇನ್ನೂ ತಡಮಾಡಿದರೆ ಇವಳು ಯಾವ ನೊಂದಿಗೇ ಓಡಿಹೋಗ್ತಾಳೆ. ಆ ರೀತಿ ಆಗದಿರೋಕ್ಕೆ ಸಂತೋಷಪಡು."

"ಹಾಗಂತೀರಾ?!"

"ಊಂ....ಮೊನ್ನೆ ರಾತ್ರಿ ಇವಳು ಮಾಡಿದ ಘನಕಾರ್ಯದ ಬಗ್ಗೆ ಊರಲ್ಲೆಲ್ಲ ಗುಸುಗುಸು ಎದ್ದಿದೆ. ಇಷ್ಟು ದಿವಸ ನಾವು ಜಾತಕ,ಹೊಂದಾಣಿಕೆ ಅಂದ್ಕೊಳ್ತಾ ಹಾಳು ಮಾಡಿದ್ದಾಯ್ತು. ಈಗಲಾದರೂ ನಾವು ಕಣ್ಣು ತೆರೆಯದಿದ್ದರೆ ಕೊಂಪೆ ಮುಳುಗಿಹೋಗುತ್ತೆ. ಅದೇ ನನ್ನ ಭಯ. ಅದಕ್ಕೇ ಹತ್ತು ದಿನದ ನಂತರ ಇರೋ ಮುಹೂರ್ತಕ್ಕೇ ಮದುವೆ ನಿಶ್ಚಯ ಮಾಡಿದ್ದಾಯ್ತು."

ನನಗೆ ನನ್ನ ತಂದೆಯ ಭಯದ ಬಗ್ಗೆ ಕೇಳಿ ನಗು ಬಂತು. ಇದೇ ಬುದ್ಧಿ ಮೊದಲು ಇದ್ದಿದ್ದರೆ ಮೊಮ್ಮಕ್ಕಳನ್ನು ಆಡಿಸಬಹುದಿತ್ತಲ್ಲ ಎಂದುಕೊಂಡೆ. ಅಲ್ಲೇ ಮೇಜಿನ ಮೇಲಿದ್ದ ಪೆನ್ ಎತ್ತಿಕೊಂಡು ಸುಮತಿಗೆ ಪತ್ರ ಬರೆಯತೊಡಗಿದೆ.

"ಪ್ರಿಯ ಸುಮತಿ!

ನೀನು ಹೇಳಿದ ಉಪಾಯ ಅದ್ಭುತವಾಗಿ ಕೆಲಸ ಮಾಡಿತ್ತು. ಅದನ್ನು ಜಾರಿಗೆ ತಂದೆ. ನಮ್ಮ ತಂದೆಯ ಜಾತಕಗಳ ಹುಚ್ಚು ಬಿಟ್ಟು ತೊಲಗಲಿಲ್ಲ. ಈಗ ನನಗೆ ಗಂಡು ಗೊತ್ತುಮಾಡಿಕೊಂಡು, ಮದುವೆ ನಿಶ್ಚಯ ಮಾಡಿ ಕೊಂಡೇ ಬಂದಿದ್ದಾರೆ. ನೀನು ಹೇಳಿದ ಉಪಾಯಕ್ಕೋಸ್ಕರ ನಮ್ಮ ಎದುರು ಮನೆಗೆ ಬಂದ ಮನೋಹರ್ ಎನ್ನುವ ಹುಡುಗನನ್ನು ಬಳಸಿಕೊಂಡೆ. ಆ ರೀತಿ ಬಳಸಿಕೊಂಡದ್ದಕ್ಕೆ ಅವನಿಗೆ ತುಂಬಾ ಅಮೂಲ್ಯವಾದ ಬಹುಮಾನವನ್ನೇ ಕೊಟ್ಟಿದ್ದೇನೆ. ಆದರೆ ಅದೇನೆಂಬುದನ್ನು ಮಾತ್ರ ಎಂದಿಗೂ ಕೇಳಬೇಡ.

ಮೊದಲ ಲಗ್ನಪತ್ರ ನಿನಗೇ ಕಳುಹಿಸುತ್ತಿದ್ದೇನೆ. ಒಳ್ಳೆಯ ಸಲಹೆ ನೀಡಿದ ನಿನಗೆ ಈ ರೀತಿ ಮೊದಲ ಲಗ್ನಪತ್ರ ಕಳುಹಿಸುವುದರ ಮೂಲಕ ಕೃತಜ್ಞತೆ ತಿಳಿಸುತ್ತಿದ್ದೇನೆ."

ಕೆಳಗೆ ಸಹಿ ಮಾಡಿ, ಜೊತೆಗೆ ಲಗ್ನ ಪತ್ರ ಇಟ್ಟು ಆ ಪತ್ರವನ್ನು ಪೋಸ್ಟ್ ಮಾಡಿದೆ.

ನನಗೆ ಅಂದು ಬಹುದಿನಗಳ ನಂತರ ಒಳ್ಳೆಯ ನಿದ್ದೆ ಬಂತು.

“ಇದು ನಾನಿಲ್ಲಿಯವರೆಗೆ ಯಾರಿಗೂ ಹೇಳಿರದಿದ್ದ ಘಟನೆ” ಎಂದಳು ವಿನೂತ್ನ.

ವಿನೂತ್ನಳ ಘಟನೆ ಕೇಳಿದ ನಂತರ ಗೋಪಾಲಕೃಷ್ಣ ಏನೂ ಮಾತಾಡಲಿಲ್ಲ. ತನ್ನಲ್ಲೇ ಮೌನವಾಗಿ ಏನನ್ನೋ ಯೋಚಿಸುತ್ತ ಕುಳಿತಕೊಂಡ. ಘಟನೆ ಕೆಲದಿನಗಳಿಂದ ಅವನ ಮನಸ್ಸಿನಲ್ಲಿ ಗಜಿಬಿಜಿಯಾಗಿ ಸುಳಿದಾಡುತ್ತಿದ್ದ ಭಾವನೆಗಳಿಗೆ ಒಂದು ಸ್ಪಷ್ಟರೂಪ ನೀಡಿತು. ಅವನು ಅನುಭವಿಸುತ್ತಿದ್ದ ಮಾನಸಿಕ ಸಂಘರ್ಷಕ್ಕೆ ತೆರೆ ಬಿದ್ದಂತಾಯ್ತು. ಅವನನ್ನು ಕವಿದುಕೊಂಡಿದ್ದ ದಿಗಿಲು ಸರಿದು ಹೋಗಿ ಪ್ರಫುಲ್ಲಗೊಂಡ. ತನ್ನ ಮನಸ್ಸಿನಲ್ಲಿ ಮೂಡಿದ ನಿರ್ಧಾರವನ್ನು ಕ್ಷಣದಿಂದಲೇ ಜಾರಿಗೆ ತರಬೇಕೆಂಬುದನ್ನು ದೃಢವಾಗಿ ನಿಶ್ಚಯಿಸಿಕೊಂಡ. ವಿನೂತ್ನ ಅವಳ ಮುಖದಲ್ಲಿ ಬದಲಾಗುತ್ತಿದ್ದ ಭಾವನೆಗಳನ್ನೇ ಗಮನಿಸುತ್ತಿದ್ದಳು. ಗೋಪಾಲಕೃಷ್ಣ ಅವಳನ್ನು ನೋಡಿ ಮುಗುಳ್ನಕ್ಕ. ವಿನೂತ್ನ ಕೂಡ ಪ್ರತಿಯಾಗಿ ನಗು ಬೀರಿ. “ಮುಂದಿನ ಕಾರ್ಯಕ್ರಮಕ್ಕೆ... ” ಎನ್ನುತ್ತಿದ್ದಂತೆಯೇ ಗೋಪಾಲಕೃಷ್ಣನಮುಖ ಗಂಭೀರವಾಯ್ತು ಅವಳ ಮಾತನ್ನು ಅರ್ಧಕ್ಕೇ ತಡೆಯುತ್ತ.

“ವಿನೂತ್ನ, ನಿನ್ನ ಘಟನೆ ಕೇಳಿದ ನಂತರ ನನಗೊಂದು ಮಹತ್ತರ ಸತ್ಯದ ಅರಿವಾಯ್ತು. ಅದೇನೆಂದರೆ, ಈ ಜಾತಕ, ರಾಹುಕಾಲ, ವರ್ಜ್ಯ, ಇತ್ಯಾದಿಗಳೆಲ್ಲ ಹೇಗೆ ಮೂಢನಂಬಿಕೆಗಳೋ ಅದೇ ರೀತಿ ನಮ್ಮ ವಂಶಾಚಾರವೂ ಅರ್ಥಹೀನವಾದುದು. ನಮ್ಮ ವಂಶದ ಪುರುಷನೊಂದಿಗೆ ಒಂದು ರಾತ್ರಿ ಮಲಗುವುದರಿಂದ ಸಿರಿ-ಸಂಪತ್ತು ಲಭಿಸುತ್ತದೆಂಬುದು ಶುದ್ಧ ಸುಳ್ಳೆಂಬುದು ನನಗೆ ಅರಿವಾಯ್ತು. ಇಷ್ಟುಕಾಲ ನನ್ನ ಕಣ್ಣೆದುರು ಕವಿದುಕೊಂಡಿದ್ದ ಪೊರೆ ತೊಲಗಿಹೋಯ್ತು. ಇಷ್ಟುದಿನ ಗೊತ್ತಿದ್ದೋ, ಗೊತ್ತಿಲ್ಲದೆಯೇ ಈ ಅಸಹ್ಯ ಆಚಾರದ ಹೆಸರಿನಲ್ಲಿ ಹಲವಾರು ಹೆಣ್ಣುಗಳನ್ನು ಅನುಭವಿಸಿ ವಂಚನೆ ಮಾಡಿರುವೆನಲ್ಲ ಎನ್ನುವುದನ್ನು ನೆನೆಸಿಕೊಳ್ಳುವುದಕ್ಕೇ ನಾಚಿಕೆಯಾಗ್ತಿದೆ. ಅದಕ್ಕೇ....ಅದಕ್ಕೇ ಇವತ್ತಿನಿಂದ, ಈ ಕ್ಷಣದಿಂದ ನಾನು ಈ ವಂಶಾಚಾರವನ್ನು ಮುಂದುವರಿಸವುದಿಲ್ಲವೆಂದು ನಿರ್ಧರಿಸಿದ್ದೇನೆ....” ಎಂದು ದೃಢವಾಗಿ ನುಡಿದ.

ವಿನೂತ್ನ ಆಶ್ಚರ್ಯಗೊಂಡಳು “ಅದೇನು ಗೋಪಾಲಕೃಷ್ಣ ತಲೆತಲಾಂತರದಿಂದ ಸಾಗ ಬಂದ ಈ ಆಚಾರವನ್ನು ಕೈ ಬಿಡುತ್ತೀಯಾ?! ಊರಿನ ಜನ ಇದನ್ನು ಒಪ್ಪುತ್ತಾರೆಯೆ?! ನಿನ್ನಿಂದ ಸಿರಿ-ಸಂಪತ್ತು ಲಭಿಸುತ್ತ

ದೆಂದು ಆಸೆಯಿಂದ ನಿರೀಕ್ಷಿಸುವ ಜನರಿಗೆ ನಿರಾಸೆಯಾಗುವುದಿಲ್ಲವೆ" ಎಂದು ಕೇಳಿದಳು.

"ವಿನೂತ್ನ ನೀನು ಬಲ್ಲಂತೆ ಕಂದಾಚಾರದಿಂದ ಏನಾದರೂ ಪ್ರಯೋಜನ ವಿದೆಯೆ? ಅವುಗಳಲ್ಲಿ ವಾಸ್ತವವಿದೆಯೆ? ನಿನ್ನ ತಂದೆ ಜಾತಕದ ಹುಚ್ಚಿನಲ್ಲೇ ನಿನಗೆ ಮದುವೆ ಮಾಡಲು ಅಡ್ಡಿ ತರುತ್ತಿದ್ದುದರಿಂದ ತಾನೇ ನೀನು ನಿನ್ನದೇ ದಾರಿ ಹುಡುಕಿದ್ದು, ಹಾಗಿರುವಲ್ಲಿ ಮುಗ್ಧ ಜನರಿಗೆ ಇನ್ನೂ ಮೋಸ ಮಾಡುವುದು ನ್ಯಾಯವೆ?" ಎಂದು ಕಳಕಳಿಯಿಂದ ನುಡಿದ ಗೋಪಾಲಕೃಷ್ಣ.

ಸಮಂಜಸವಾದ ಅವನ ಮಾತಿಗೆ ಮೌನವಹಿಸಿದಳು ವಿನೂತ್ನ. ಸ್ವಲ್ಪ ಹೊತ್ತಿನ ನಂತರ "ನಿನ್ನ ಈ ನಿರ್ಧಾರಕ್ಕೆ ನಿನ್ನಲ್ಲುಂಟಾದ ಮಾರ್ಪಾಡಿಗೆ ಏನು ಕಾರಣ ಅಂತ ತಿಳ್ಕೋಬಹುದೆ" ಎಂದು ಕೇಳಿದಳು.

ಗೋಪಾಲಕೃಷ್ಣ ಅರೆಕ್ಷಣಮೌನದ ನಂತರ, "ಅದಕ್ಕೇನಿದೆ, ಹೇಳ್ತೀನಿ. ನನ್ನಲ್ಲಿನ ಈ ಮಾರ್ಪಾಡಿಗೆ ಕಾರಣಳಾದವಳೂ ಒಂದು ಹೆಣ್ಣೇ.. ನಮ್ಮೂರಿಗೆ ಹೊಸದಾಗಿ ಬಂದಿರುವ ಶಿಕ್ಷಕಿ-ವರ್ಷಾ... ಅವಳೇ ಕಾರಣ. ನಾನು ಅವಳನ್ನು ಮೊದಲ ನೋಟದಲ್ಲೇ ಪ್ರೇಮಿಸಿದೆ ಎಷ್ಟೆಲ್ಲ ಹೆಣ್ಣುಗಳ ಅನುಭವ ನನಗಿದ್ದರೂ ಯಾರನ್ನುನೋಡಿದಾಗಲೂ ಉಂಟಾಗದಿದ್ದ ಸ್ಪಂದನ-ಅವಳನ್ನು ನೋಡಿದಾಗ ನನ್ನಲ್ಲುಂಟಾಯ್ತು. ಈ ಊರಿನಲ್ಲಿ ನಾನು ಕರೆದ ಯಾವ ಹೆಣ್ಣೂ ತಿರಸ್ಕರಿಸಿರ ಲಿಲ್ಲ. ಆದ್ದರಿಂದಲೋ ಏನೋವರ್ಷಾಳೂ ನನ್ನ ಪ್ರೇಮನನ್ನು ತಿರಸ್ಕರಿಸಲಾರ ಳೆನ್ನುವ ಭಾವನೆ ನನ್ನಲ್ಲಿತ್ತು. ಆದರೆ ಒಂದು ದಿನ ಶಾಲೆಯ ಬಳಿ ಅವಳು ನನ್ನ ಕೆನ್ನೆಗೆ ಬಾರಿಸಿದ ಏಟು-ನನ್ನ ಭಾವನೆಯನ್ನು ತೊಡೆದು ಹಾಕುವುದ ರೊಂದಿಗೆ ಅಂತರ್ಮಥನಕ್ಕೆ ತೊಡಗುವಂತೆ ಮಾಡಿತು. ಇಂದು ನೀನು ಹೇಳಿದ ನನ್ನ ಕಥೆ ಆ ಅಂತರ್ಮಥನಕ್ಕೊಂದುಸ್ಪಷ್ಟರೂಪ ನೀಡಿತು ಅದಕ್ಕೇ ನಿನಗೆ ಕೃತಜ್ಞತೆ ಹೇಳ್ತಿದೀನಿ" ಎಂದ.

ವಿನೂತ್ನ ಮೆಲ್ಲಗೆ ನಿಡುಸುಯ್ದು, ನಂತರ ಅವನನ್ನು ನೋಡಿ ಮುಗು ಳ್ನಕ್ಕಳು. ಕುಳಿತಿದ್ದವಳು ಮೇಲೇಳುತ್ತ, "ನಾನಿನ್ನು ಬರಲೆ?" ಎಂದಳು.

"ನನ್ನನ್ನು ಅರ್ಥ ಮಾಡಿಕೊಂಡದ್ದಕ್ಕೆ ಥ್ಯಾಂಕ್ಸ್ ವಿನೂತ್ನ ಎಂದ ಗೋಪಾಲಕೃಷ್ಣ. ವಿನೂತ್ನ ಬೆಟ್ಟದಿಂದ ಕೆಳಗಿಳಿಯತೊಡಗಿದಳು. ಬೆಟ್ಟದ ಬುಡದಲ್ಲಿ ಅವಳಿಗೋಸ್ಕರ ಕಾಯುತ್ತಿದ್ದ ಯುವತಿಯೊಬ್ಬಳು ಅವಳನ್ನು ಕೂಡಿಕೊಂಡಳು. ಅವಳನ್ನು ವಿನೂತ್ನ ಮುಗುಳ್ನಕ್ಕು ಹೆಬ್ಬೆರಳು ಮೇಲೆತ್ತಿ ಯಶಸ್ವಿಯಾಯಿತೆಂದು ಸೂಚಿಸುತ್ತ, ನಡೆದುದನ್ನೆಲ್ಲ ಹೇಳಿದಳು.

ಆ ಯುವತಿ ವರ್ಷಾ!

ಅವರಿಬ್ಬರನ್ನೂ ದೂರದಿಂದ ಗಮನಿಸಿದ ವ್ಯಕ್ತಿ ಗೊಂದಲಕ್ಕೀಡಾದ. ಮೇಲೆ ಹೋದ ವಿನೂತ್ನ ಸ್ವಲ್ಪ ಹೊತ್ತಿನಲ್ಲೇ ಕೆಳಗೆ ಬಂದದ್ದೂ, ಅವಳಿಗೋಸ್ಕರ ಬೆಟ್ಟದ ಬುಡದಲ್ಲಿ ವರ್ಷಾ ಕಾಯುತ್ತ ನಿಂತದ್ದು ಇವೆಲ್ಲ ಅವನಿಗೆ ಆಶ್ಚರ್ಯವನ್ನುಂಟು ಮಾಡಿದವು.

ಅವನು ನರ! ಗೋಪಾಲಕೃಷ್ಣನ ಶಿಷ್ಯ.

* * * *

ಮರುದಿನ ನರ ಪ್ರಯತ್ನಪಟ್ಟು ವರ್ಷಾಳನ್ನು ಭೇಟಿಯಾದ. ಹಿಂದಿನ ದಿನ ರಾತ್ರಿ ತಾನು ಬೆಟ್ಟದ ಬುಡದಲ್ಲಿ ಅವಳನ್ನು ಕಂಡುದುದಾಗಿ ಹೇಳಿ, ತನ್ನ ಗುರು ಗೋಪಾಲಕೃಷ್ಣನ ಮೇಲೆ ಅವಳ ಅಭಿಪ್ರಾಯವೇನೆಂಬುದಾಗಿ ಕೇಳಿದ.

"ನಿನ್ನ ಗುರುವಿನ ಮೇಲೆ ನನಗೆ ವೈಯಕ್ತಿಕವಾಗಿ ಎಂತಹುದೇ ದ್ವೇಷವಿಲ್ಲ. ಆದರೆ ಆತ ನಂಬಿರುವ ವಂಶಾಚಾರದ ಮೇಲೆಯೇ ನನಗೆ ಅಸಹ್ಯ ಪೂರ್ತಿ ದೋಷ ನಿನ್ನ ಗುರುವಿನದೂ ಅಲ್ಲ. ಆ ಆಚಾರದ ನೆಪದಲ್ಲಿ ಊರಜನರ ಮೇಲೆ ಪರಾನ್ನ ಜೀವಿಯಾಗಿ ಬದುಕುತ್ತಿರುವುದು ಮನುಷ್ಯನಾದವನಿಗೆ ಶೋಭಿಸುವಂತಹುದಲ್ಲ, ಈ ಭೂಮಿಯ ಮೇಲೆ ಜನಿಸಿದ ಪ್ರತಿಯೊಂದು ಜೀವಿಯೂ ತನ್ನ ಆಹಾರವನ್ನು ತಾನುಸಂಪಾದಿಸಿಕೊಳ್ಳಬೇಕೆನ್ನುವುದು ನನ್ನಅಭಿಪ್ರಾಯ ಇಷ್ಟುದ್ದದ ಗಂಡಸಾಗಿ, ಅತ್ತಲಿನ ಕಡ್ಡಿ ಇತ್ತ ಹಾಕದೆ ಕುಡಿದ ನೀರು ಅಲುಗದಂತೆ, ಊರ ಜನ ಕಳುಹಿಸುವ ಭಿಕ್ಷಾನ್ನ ತಿನ್ನುವ ನಿನ್ನ ಗುರುವನ್ನು ನೋಡಿ ನನಗೆ ಖೇದದೊಂದಿಗೆ ಅಸಹ್ಯವೂ ಉಂಟಾಯ್ತು. ನಾಳೆ ಏನಾದರೊಂದು ನಡೆಯಬಾರದ್ದು ನಡೆದು ನಿನ್ನ ಗುರುವಿಗೆ ಈ ಊರಿನ ಜನರವಂತಿಗೆ ಅನ್ನ ತಪ್ಪಿದರೆ ಹೇಗೆ ಬದುಕಬಲ್ಲ?! ನೀನೇ ಯೋಚಿಸಿ ನೋಡು. ಇನ್ನು ಮುಂದಾದರೂ ನಿನ್ನ ಗುರು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವಂತಾದರೆ ಸಂತೋಷ" ಎಂದಳು. ವರ್ಷಾ, ಅದನ್ನೆಲ್ಲ ಯಾವುದೇ ಕಹಿ ಭಾವನೆ ಇಲ್ಲದೆ ಹೇಳಿದ್ದಳು. ಹಿಂದಿನ ದಿನ ವಿನೂತ್ನ ಗೋಪಾಲಕೃಷ್ಣ ಹೇಳಿದುದನ್ನೆಲ್ಲ ಚಾಚೂ ತಪ್ಪದೆ, ತನಗೋಸ್ಕರ ವಿಲಾಸಿ ಜೀವನವನ್ನು, ಕಷ್ಟಪಡದೆ ಬಂದೊದಗುತ್ತಿದ್ದ ಜೀವನೋಪಾದಿಯನ್ನೂ ತೊರೆಯಲು ಸಿದ್ಧನಾದ. ಗೋಪಾಲಕೃಷ್ಣನ ಬಗ್ಗೆ ಅವಳ ಮನಸ್ಸು ಮೃದುವಾಯ್ತು. ಹೃದಯ ಹದಗೊಂಡಿತು. ಆ ಹದಗೊಂಡ ಹೃದಯದಲ್ಲಿ ಅವಳಿಗರಿವಿಲ್ಲದಂತೆಯೇ ಪ್ರೇಮದ ಬೀಜ ನಾಟಿಕೊಂಡಿತು. ಆ ಬೀಜದ ಮೇಲೆ ಗೋಪಾಲಕೃಷ್ಣನ ಹೆಸರಿತ್ತು. ಆ ಬೀಜ ಮೊಳಕೆಯೊಡೆಯುವ ಸಮಯವೇನೂ ದೂರವಿರಲಿಲ್ಲ.

ಗೋಪಾಲಕೃಷ್ಣನ ಬಗ್ಗೆ ವರ್ಷಾಳಿಗೇನೂ ಅಸಹ್ಯವಿಲ್ಲವೆಂಬ ವಿಷಯು ವನ್ನು ಕೇಳಿ ನರನಿಗೆ ಅತೀವ ಸಂತೋಷವಾಯ್ತು. ಅವಳ ವ್ಯಕ್ತಿತ್ವದ ಒಗ್ಗೆ ಅವನಿಗೆ ಗೌರವ ಉಂಟಾಯ್ತು. ಅವಳಿಗೆ ವಂದಿಸಿ, ಅಲ್ಲಿಂದ ಹೊರಟು ಹೋದ.

*       *       *       *

ವರ್ಷಾ ಶೃಂಗಾರಪುರಕ್ಕೆ ಬರುವ ಮುನ್ನ ಅಲ್ಲಿನ ಆಚಾರದ ಬಗ್ಗೆ ಅವಳಿಗೇನೂ ತಿಳಿದಿರಲಿಲ್ಲ. ಬಂದನಂತರ ಅದು ಗೊತ್ತಾಗಿ ವಿಪರೀತ ಆಶ್ಚರ್ಯ ಪಟ್ಟಿದ್ದಳು. ಇಂಥ ಆಚಾರವೂ ಉಂಟೇ?! ಎಂದು ನಿಬ್ಬೆರಗಾಗಿದ್ದಳು. ಇಂಥಾ ಆಚಾರವನ್ನು ಹುಟ್ಟು ಹಾಕಿರುವವರ ಕುತ್ಸಿತ ಬುದ್ಧಿ ಎಂಥಹುದಿರ ಬಹುದೆಂದು ಹೇಸಿಗೆಪಟ್ಟಿದ್ದಳು. ತಿಂದು ಕೊಬ್ಬಿಸಿಂದ ಮೈಯಲ್ಲಿ ಮದವೇರಿ ಆ ಮದ ತಣಿಸಿಕೊಳ್ಳಲು ಇಂತಹುದೊಂದು ಆಚಾರದ ಬಗ್ಗೆ ಯೋಚಿಸಿ, ಅದು ಜನರಲ್ಲಿ ಹರಡಿ ಪ್ರಚಾರಕ್ಕೆ ತಂದ ಮೂಲ ಪುರುಷನಿಗೆ ಮನಸಾರೆ ಬೈದುಕೊಂಡಿದ್ದಳು. ಜನರ ಮೂಢತನಕ್ಕೆ ಮರುಕಗೊಂಡಿದ್ದಳು. ಅವಳನ್ನು ಮತ್ತಷ್ಟು ಕೆರಳಿಸಿದ್ದ ಆ ಆಚಾರದಲ್ಲಿನ ಭಾಗವೆಂದರೆ, ಹೆಣ್ಣು ಅಲ್ಲಿಯವರೆಗೂ ಯಾರೊಂದಿಗೂ ಹೇಳಿರದ ಘಟನೆಯನ್ನು ಆ ಪುರುಷನೊಂದಿಗೆ ಹೇಳಿಕೊಳ್ಳ ಬೇಕೆನ್ನುವುದು. ಹೆಣ್ಣು ಯಾರಿಗೂ ಹೇಳಿರದ ಘಟನೆ ಎಂದರೆ ಬೇರೆ ಇನ್ನೇ ನಿರಲು ಸಾಧ್ಯ?! ಲೈಂಗಿಕತೆಗೆ ಸಂಬಂಧಪಟ್ಟ ಘಟನೆಗಳನ್ನು ಇಲ್ಲಿನ ಹೆಣ್ಣು ನಾಚಿಕೆಯಿಂದಲೋ, ಅಜ್ಞಾನದಿಂದಲೋ ಇನ್ನಾವ ಕಾರಣದಿಂದಲೋ ಬೇರೆ ಯಾರಿಗೂ ಹೇಳಿರುವುದಿಲ್ಲ. ಅವಳಿಗೆ ಸಂಬಂಧಿಸಿರುವ ಆ ಘಟನೆ ಅವಳು ಇನ್ನೊಂದು ಗಂಡಿನೊಂದಿಗೆ ಮಲಗಿದ್ದುದೋ ಬಲಾತ್ಕಾರಕ್ಕೊಳಗಾಗಿದ್ದುದೋ ಲೈಂಗಿಕವಾಗಿ ಅತೃಪ್ತಿಯಿಂದಿರುವುದೋ ಇತ್ಯಾದಿಗಳನ್ನು ಅವಳ ಬಾಯಿ ಯಿಂದಲೇ ಕೇಳಿ ಉದ್ರೇಕ ಹೊಂದುವ ಮನಸ್ತತ್ವದವರು ಏರ್ಪಡಿಸಿದ ಆಚಾ ರದ ಎರಡನೇ ಭಾಗ ಅದು! ಅವಳನ್ನು ಮತ್ತಷ್ಟು ಕೆರಳಿಸಿತ್ತು. ಆದರೆ ಸಮೂಹ ಸಮ್ಮೋಹಿನಿಗೀಡಾದವರಂತೆ ಕುರುಡಾಗಿ ಆ ಆಚಾರವನ್ನು ಒಪ್ಪಿದ ಊರ ಜನತೆಯ ಮುಂದೆ ಅವಳಾದರೂ ಏನು ಮಾಡಬಲ್ಲವಳಾಗಿದ್ದಳು?

ಆದರೆ ಈಗ ಆ ವಂಶಕ್ಕೆ ಸೇರಿದವನಾದಗೋಪಾಲಕೃಷ್ಣನೇ ಆ ಆಚಾರ ವನ್ನು ತೊರೆಯಲು ನಿರ್ಧರಿಸಿದ್ದು ಅವಳಿಗೆ ಅತೀವ ಸಂತಸವನ್ನುಂಟು ಮಾಡಿತ್ತು. ಒಂದು ಮೂಢ ಆಚಾರದ ಅಂತ್ಯಕ್ಕೆ ತಾನು ಪರೋಕ್ಷವಾಗಿ ಯಾದರೂ ಕಾರಣಳಾದೆನಲ್ಲ ಎಂದು ಸಂತೋಷಪಟ್ಟಿದ್ದಳು.

## ೧೯

ರವಿವಾರ! ಅಮವಾಸ್ಯೆ ಪೂರ್ವದಿಕ್ಕಿನ ಆಕಾಶದಲ್ಲಿ ಬೆಳಕಿನ ರೇಖೆ ಬಿಚ್ಚಿಕೊಳ್ಳುತ್ತಿದ್ದಂತೆಯೇ ಶೃಂಗಾರಪುರದಲ್ಲಿ ಗಡಿಬಿಡಿ ಶುರುವಾಯ್ತು.

ತಮ್ಮ ಸಂಚನ್ನು ಜಾರಿಗೊಳಿಸುವ ದಿನ ಬಂತೆಂದು ವೆಂಕಟರಾಮಯ್ಯ, ಹುಲಿರಾಜ ಆನಂದದಿಂದಿದ್ದರು.ಇದ್ದುದರಲ್ಲಿ ಸ್ವಲ್ಪ ಉದ್ವಿಗ್ನತೆಯಿಂದ ಇದ್ದವ ಳೆಂದರೆ ಮೋಹನನೇ!

ಅಂದು ಹುಲಿರಾಜ ದೆವ್ವ ಹಿಡಿದವರಿಗೆ ದೆವ್ವ ಬಿಡಿಸುವುದು, ಹೆದರಿ ಕೊಂಡಿರುವವರಿಗೆ ಮಂತ್ರಿಸಿ ತಾಯಿತ ಕಟ್ಟುವುದು ದೆವ್ವ ಹಿಡಿದುಕೊಂಡಿವೆ ಎನ್ನುವರು, ತಾಯಿತ ಕಟ್ಟಿಸಿಕೊಳ್ಳುವವರು ಎಲ್ಲರೂ ಅಲ್ಲಿ ನೆರೆಯುತ್ತಿದ್ದರು.

ವರ್ಷಾ ಅದನ್ನೆಲ್ಲ ಗಮನಿಸುತ್ತಿದ್ದಳು. ದೇವರನ್ನೂ, ದೆವ್ವವನ್ನೂ ಸಮಾನವಾಗಿ ಪೂಜಿಸುವ ಜನರ ಮೂಢತನಕ್ಕೆ ನಗಬೇಕೋ ಎನ್ನುವುದು ಅವಳಿಗೆ ಗೊತ್ತಾಗುತ್ತಿರಲಿಲ್ಲ. ದೆವ್ವ ಬಿಡಿಸುವುದನ್ನು ನೋಡಲು ಧಾನ್ಯ ಜೊತೆಗೆ ಕರೆದದ್ದರಿಂದ ತಾನೊಬ್ಬಳೇ ಅಲ್ಲಿದ್ದಾದರೂ ಮಾಡುವುದೇನೆಂದು ಹುಲಿರಾಜ ದೆವ್ವ ಬಿಡಿಸುವಲ್ಲಿಗೆ ಹೊರಟಳು. ಊರ ಹೊರಗಿನ ಆಲದ ಮರದ ಕೆಳಗೆ ಹಾಕಿದ್ದ ಹಂದರದಲ್ಲಿ ಸಾಯಂಕಾಲದಿಂದ ದೆವ್ವ ಬಿಡಿಸುವ ಕಾರ್ಯ ಕ್ರಮ ಶುರುವಾಗುತ್ತಿತ್ತು. ಧಾನ್ಯ, ವರ್ಷಾ ಅಲ್ಲಿಗೆ ತಲುಪುವಷ್ಟರಲ್ಲಿ ನಾಲ್ಕು ಗಂಟೆಯಾಗಿತ್ತು.

ಹಂದರದಲ್ಲಿ ಏರ್ಪಡಿಸಿದ್ದ ಅಗ್ನಿಕುಂಡ, ಅದಕ್ಕೆ ಸ್ವಲ್ಪ ದೂರದಲ್ಲಿ ಮಣ್ಣಿನ ಕಾಳಿದೇವಿಯ ಬೊಂಬೆ, ಅದಕ್ಕೆ ತಿದ್ದಿದ್ದ ರಕ್ತತಿಲಕ. ಅರಿಶಿಣದ ಬೊಟ್ಟುಗಳಿಂದ ಭಯಂಕರವಾಗಿ ಕಾಣುತ್ತಿತ್ತು. ಆ ಬೊಂಬೆಯ ಮುಂದೆ ಹಾವಿನಾಕಾರದ ರಂಗೋಲಿ, ಮಂಡಲ ಬರೆಯಲಾಗಿತ್ತು. ಹುಲಿರಾಜ ಪೂಜೆಗೆ ಸರಸರನೆ ಸಾಮಗ್ರಿಗಳನ್ನೆಲ್ಲ ಸಿದ್ಧಗೊಳಿಸುತ್ತಿದ್ದ ವೆಂಕಟರಾಮಯ್ಯ ಮತ್ತು ಮೋಹನ ಜನರ ಗುಂಪಿನಲ್ಲಿದ್ದರು. ಅಗ್ನಿಕುಂಡದ ಮುಂಭಾಗದಲ್ಲಿ ದೆವ್ವ ಬಡಿದಿರುವವರು ಕುಳಿತಿದ್ದರು. ಅವರೆಲ್ಲ ಆಗಷ್ಟೇ ನೀರು ಸುರಿದುಕೊಂಡು ಒದ್ದೆ ಬಟ್ಟೆಯಲ್ಲಿದ್ದರು. ಅವರಲ್ಲಿ ಸ್ತ್ರೀಯರೇ ಜಾಸ್ತಿ ಇದ್ದರು.

ಗೋಪಾಲಕೃಷ್ಣ ಬಂದು ಸಾಂಕೇತಿಕ ಪೂಜೆ ಮಾಡಿ ಸಾಗಲಿ ಎಂದು ಅಪ್ಪಣೆಕೊಡುವವರೆಗೆ ಹುಲಿರಾಜ ಪೂಜೆ ಪ್ರಾರಂಭಿಸುವಂತಿಲ್ಲ. ಅದು ಅಲ್ಲಿನ ಆಚಾರ. ಗೋಪಾಲಕೃಷ್ಣನಿಗೆ ಹೇಳಿಕಳುಹಿಸಿದ್ದುದರಿಂದ ಅವನಿಗೋಸ್ಕರವೇ ಕಾಯುತ್ತಿದ್ದರು. ಹೆಚ್ಚು ಹೊತ್ತು ಕಾಯಿಸದ್ದೆ ನರನೊಂದಿಗೆ ಬಂದ. ಅವ

ನನ್ನ ಆದರದಿಂದ ಆಹ್ವಾನಿಸಲಾಯಿತು. ಸಾಂಕೇತಿಕ ಪೂಜೆಮಾಡಿದ ಸಾಗಲಿ ಎನ್ನುವಂತೆ ಅಪ್ಪಣೆಮಾಡಿದ.

ಹುಲಿರಾಜ ದೆವ್ವ ಬಿಡಿಸುವ ಕಾರ್ಯವನ್ನು ಪ್ರಾರಂಭಿಸಿದ. ದೆವ್ವ ಬಡಿದಿದೆ ಎನ್ನುವವರನ್ನು ಹಿಡಿದುತಂದು ಮಂಡಲದ ನಡುವೆ ಕೂಡಿಸಲಾಗುತ್ತಿತ್ತು ಹುಲಿರಾಜ ಕಾಳಿಕಾದೇವಿಗೆ ಪೂಜೆ ಮಾಡಿ, ನಿಂಬೆಹಣ್ಣು ಕೊಯ್ದು, ಮಂತ್ರಗಳನ್ನು ,ಪಠಿಸುತ್ತ ಬೇವಿನ ಸೊಪ್ಪನ್ನು ಕೈಗೆತ್ತಿಕೊಂಡು ಝಳಪಿಸುತ್ತಾ ದೆವ್ವದ ಉಚ್ಚಾಟನೆಗೆ ತೊಡಗುತ್ತಿದ್ದ. ಮೊದಮೊದಲಲ್ಲಿ ತಿರುಗಿ ಬೀಳುತ್ತಿದ್ದ ದೆವ್ವ(?!) ಕೊನೆಗೆ ಸೋತು ಶರಣಾಗಿಬಿಡುತ್ತಿತ್ತು.

ಹುಲಿರಾಜ ಮೂವರು-ನಾಲ್ವರಿಗೆ ದೆವ್ವ ಬಿಡಿಸಿರಬಹುದು. ಆಗ ಜನರ ಗುಂಪಿನಲ್ಲಿದ್ದ ಮೋಹನ ಇದ್ದಕ್ಕಿದ್ದಂತೆ "ಹು... .. .ಹು... ಹು....." ಎಂದು ಮೈನಡುಗಿಸತೊಡಗಿದಳು, ಸುತ್ತಲಿದ್ದ ಜನಬೆಚ್ಚಿಬಿದ್ದರು. ಅಲ್ಲಿಯವರೆಗೂ ಚೆನ್ನಾಗಿದ್ದ ಮೋಹನಳಿಗೇನಾಯ್ತು ಎಂದುಕೊಳ್ಳುತ್ತಿರುವಂತೆ ಮೋಹನ ತೂರಾಡುವುದನ್ನು ಜಾಸ್ತಿಮಾಡಿದಳು ಎಲ್ಲರ ದೃಷ್ಟಿ ಅತ್ತ ತಿರುಗಿತು. ಮೋಹನಳ ಮೈಮೇಲೆ ಏನೋ ಆವಾಹನೆಯಾಗಿದೆಂದು ಗುಜುಗುಜು ಮಾತಾಡತೊಡಗಿದರು. ವರ್ಷಾಳಿಗೆ ಅವರ ಅಜ್ಞಾನಕ್ಕೆ ಏನು ಹೇಳಬೇಕೊ ಹೊಳೆಯಲಿಲ್ಲ. ಸುಮ್ಮನೇ ಮೌನಪ್ರೇಕ್ಷಕಳಾಗಿ ನೋಡುತ್ತಿದ್ದಳು.

ಹುಲಿರಾಜ ತಟಕ್ಕನೆದ್ದು ಮುಂದೆ ಬಂದು, ಏನೇನೋ ಮಂತ್ರಗಳನ್ನು ಪಿಟಿಗುಟ್ಟಿ, ಒಂದಿಷ್ಟು ಬೂದಿಯನ್ನು ಮೋಹನಳ ಮುಖಕ್ಕೆರಚಿ "ಹೊಂ.... ಯಾರು ನೀನು? ಇಲ್ಲಿಗೇಕೆ ಬಂದೆ.. ? ಹೇಳು..." ಎಂದು ಹೂಂಕರಿಸಿದ. ಮೋಹನ ಪಕಪಕನೆ ನಕ್ಕಳು. ಹುಲಿರಾಜ ಮತ್ತಷ್ಟು ಕೆರಳಿ, ಮೋಹನಳಿಗೆ ಬೇವಿನ ಸೊಪ್ಪಿನಿಂದ ಬಾರಿಸಿದ. ಮೋಹನಳು ನಗು ನಿಲ್ಲಿಸಿ, "ಲೋ ಮೂರ್ಖ ನೀನೇನು ಮಾಡಿದರೂ ನನ್ನನ್ನು ಇಲ್ಲಿಂದ ಓಡಿಸಲಾಗನು.ನಾನಾರು ಗೊತ್ತೇ? ಕಾಮಿನೀ ಪಿಶಾಚಿಗಣದ ಅಧಿದೇವತೆ. ನಮ್ಮ ಪಿಶಾಚಿಗಣವೆಲ್ಲ ಇನ್ನು ಮುಂದೆ ಇಲ್ಲಿಯೇ ನೆಲೆಸುತ್ತದೆ ಕಣೋ. ಈ ಊರಿನಲ್ಲಿನ ಪ್ರತಿಯೊಂದು ಹೆಣ್ಣನ್ನೂ ಹಿಡಿದು ಕಾಡುತ್ತೇವೆ. ಈ ಊರನ್ನು ಸ್ಮಶಾನ ಮಾಡಿಬಿಡುತ್ತೇವೆ" ಎನ್ನುತ್ತ ಮತ್ತೆ ಗಹಗಹಿಸಿದಳು.

ಆ ಮಾತುಕೇಳಿಅಲ್ಲಿ ನೆರೆದಿದ್ದ ಶೃಂಗಾರಪುರದ ಜನ ದಿಗ್ಭ್ರಾಂತರಾದರು. ವರ್ಷಾಳಿಗೆ ಅದೆಲ್ಲ ಬೂಟಾಟಿಕೆಯೆಂಬುದು ಗೊತ್ತಾಗುತ್ತಿತ್ತು. ಆದರೆ ಜನ ಮರುಳಿನೆದುರು ಅವಳು ಅಸಹಾಯಕಳಾಗಿದ್ದಳು. ಜನರಲ್ಲಿ ಗುಜುಗುಜು ಪ್ರಾರಂಭವಾಯ್ತು.

ಹುಲಿರಾಜ ಜೋರಾಗಿ ಹೂಂಕರಿಸಿದ, "ಹೂಂ, ನಮ್ಮೂರಿನ ದೈವ ಮನ್ಮಥ ದೇವ ಹಾಗೂ ನನ್ನೆದುರು ನಿಮ್ಮಾಟವೆಲ್ಲ ಸಾಗದು. ನಿಮ್ಮ ಪಿಶಾಚ ಗಣವನ್ನೆಲ್ಲ ಪಾತಾಳ ಲೋಕಕ್ಕೆ ತುಳಿದು ಬಿಡುತ್ತೇವೆ" ಎಂದ.

ಮೋಹನಳ ಗಹಗಹ ಮತ್ತೂ ದೊಡ್ಡದಾಯ್ತು. "ಅಯ್ಯೋ ಪೆದ್ದೇ, ಇಲ್ಲಿ ಮನ್ಮಥದೇವ ಇಲ್ಲ. ಊರು ಬಿಟ್ಟು ಹೋಗಿಯಾಯ್ತು. ಇನ್ನು ನೀನೊಬ್ಬ ಬಡ ಮಂತ್ರವಾದಿ ನಮ್ಮನ್ನೇನು ಮಾಡಬಲ್ಲೆ?"

ಜನರಲ್ಲಿ ಗುಜುಗುಜು ಜಾಸ್ತಿಯಾಯ್ತು. ಜೊತೆಗೆ ಕಳವಳವೂ ಹರಡಿಕೊಂಡಿತು. ಅಲ್ಲಿದ್ದವರೆಲ್ಲ ಮುಖದಲ್ಲಿ—ವರ್ಷಾಳನ್ನು ಹೊರತುಪಡಿಸಿ ದಿಗಿಲು ಮೂಡಿತು. ಗೋಪಾಲಕೃಷ್ಣನ ಮುಖದಲ್ಲಿ ದಿಗಿಲಿನೊಂದಿಗೆ ಸೋಜಿಗ 'ದೇವರು ಊರು ಬಿಟ್ಟು ಹೋಗಿರುವನೆಂದರೇನು? ಯಾಕೆ ಬಿಟ್ಟುಹೋದ? ಎಲ್ಲಿಗೆ ಹೋದ?' ಎನ್ನುವ ಪ್ರಶ್ನೆಗಳು ಸುಳಿದಾಡತೊಡಗಿದವು.

ಜನರ ಮನಸ್ಸಿನ ಭಾವನೆಯನ್ನರಿತವನಂತೆ "ದೇವರು ಈ ಊರು ಬಿಟ್ಟು ಹೋದದ್ದ್ಯಾಕೆ" ಎಂದು ಕೇಳಿದ, ಹುಲಿರಾಜ.

"ಸಿಟ್ಟಾಗಿ ಹೊರಟುಹೋಗಿದ್ದಾನೆ" ಎಂದುತ್ತರವಿತ್ತ ಕಾಮಿನಿ ಪಿಶಾಚಿ?

"ಯಾಕೆ?"

ಆ ಪಿಶಾಚಿ(?!) ಮಾತಾಡಲಿಲ್ಲ. ಹುಲಿರಾಜ ಮತ್ತೆ ಬೇವಿನ ಸೊಪ್ಪನ್ನು ಝಳಪಿಸಿದ ಹೇಳು."

"ನೀವೆಲ್ಲ ಸೇರಿ ಅಪಚಾರವೆಸಗಿದ್ದರಿಂದ ಸಹಿಸಲಾಗದೆ ಹೊರಟು ಹೋಗಿದ್ದಾನೆ.

"ಅಪಚಾರವೆ?! ನಾವೇನು ಅಂತಹ ಅಪಚಾರ ಮಾಡಿದ್ದು?" ಎನ್ನುತ್ತ ಕೈ ಎತ್ತಿದ ಹುಲಿರಾಜ.

"ಲೋ ಮುಠ್ಠಾಳ........ ನೀವೆಲ್ಲ ಸೇರಿ, ತನ್ನ ಅಂಶವಲ್ಲದವನನ್ನು ಶೃಂಗಾರ ದೇವನೆಂದು ಭಾವಿಸಿದ್ದರಿಂದ ಸಿಟ್ಟಾಗಿದ್ದಾನೆ."

"ಯಾರವನು?"

"ಗೋಪಾಲಕೃಷ್ಣ."

ಗೋಪಾಲಕೃಷ್ಣನೊಂದಿಗೆ, ಅಲ್ಲಿ ನೆರೆದಿದ್ದ ಜನರೆಲ್ಲ ತಮ್ಮ ಪಕ್ಕದಲ್ಲಿ ಬಾಂಬ್ ಸಿಡಿಯಿತೇನೋ ಎನ್ನುವಂತೆ ಬೆಚ್ಚಿಬಿದ್ದರು. ಮತ್ತೆ ಜನರಲ್ಲಿ ಗುಸು ಗುಸು ಪ್ರಾರಂಭವಾಯ್ತು.

"ಏನು ನೀನುಹೇಳ್ತಿರೋದು"ದಿಗ್ಭ್ರಾಂತನಾದವನಂತೆಕೇಳಿದಹುಲಿರಾಜ.

"ನೀವೆಲ್ಲ ಭಾವಿಸುತ್ತಿರುವಂತೆ ಗೋಪಾಲಕೃಷ್ಣ ಮದನ ಕಾಮರಾಜ

ವಂಶಕ್ಕೆ ಸೇರಿದವನಲ್ಲವ್ರೋ ಮುರ್‍ಖಾಳ!"

ಮತ್ತೊಂದು ಬಾಂಬ್ ಸಿಡಿಯಿತು. ಜನರು ಹಾಹಾಕಾರ ಮಾಡತೊಡ ಗಿದರು. ಗೋಪಾಲಕೃಷ್ಣನಿಗೆ ಒಂದುಕ್ಷಣ ತಾನೇನು ಕೇಳಿದನೆಂಬುದೇ ಗೊತ್ತಾ ಗಲಿಲ್ಲ. ನಾನು ಜಮೀಂದಾರನ ವಂಶದವನಲ್ಲವೆ? ಹಾಗಾದರೇನು?....ತಾನು ಯಾರು........?

"ಏನು ನೀನುಬೊಗಳ್ತಿರೋದು? ಬಾಯಿಗೆ ಬಂದಂತೆಬೊಗಳಿದರೆನಿನ್ನನ್ನು ಶಾಶ್ವತವಾಗಿ ಹುಣಿಸೇಮರದಲ್ಲಿ ಬಂಧಿಸಿಟ್ಟು ಬಿಡ್ತೀನಿ ಹುಶಾರ್" ಎಂದು ಗರ್ಜಿಸಿದ ಹುಲಿರಾಜ.

"ಲೋ ಮೂರ್ಖ, ಇದ್ದ ಸತ್ಯ ಹೇಳಿದರೆ ಹಾರಿ ಬೀಳ್ತೀಯಾ .. ಸತ್ಯಕ್ಕೆ ಸಾವಿಲ್ಲವ್ರೋ, ಗೋಪಾಲಕೃಷ್ಣ ನಿಕೃಷ್ಟ ವಂಶದವನು. ಆಸ್ಪತ್ರೆಯಲ್ಲಿ ಅನಾಥನಾದ ಅವನನ್ನು ಜಮೀನ್ದಾರ ತಂದು ತನ್ನ ಮಗನೆಂದು ಲೋಕಕ್ಕೆ ಸಾರಿದ ಆದರ ಗುಟ್ಟೆಲ್ಲ ವೆಂಕಟರಾಮಯ್ಯನಿಗೆ ಗೊತ್ತು.ಬೇಕಾದರೆ ಅವನನ್ನೇ ಕೇಳಿರಿ."

ಎಲ್ಲರ ದೃಷ್ಟಿ ವೆಂಕಟರಾಮಯ್ಯನತ್ತ ತಿರುಗಿತು. ಅವನು ತಪ್ಪು ಮಾಡಿರುವವನಂತೆ ತಲೆ ತಗ್ಗಿಸಿದ. ಮೋಹನಳ ಮೈಮೇಲೆ ಆವಾಹನೆ ಯಾಗಿದ್ದ ದೆವ್ವ(?!) ಹೂಂಕರಿಸಿತು.

"ಎಲವ್ರೋ ವೆಂಕಟರಾಮಯ್ಯ ಬೊಗಳೋ .. ನಿಜ ಏನೆಂಬುದನ್ನು ಬೊಗಳು "

ವೆಂಕಟರಾಮಯ್ಯ ತಲೆತಗ್ಗಿಸಿಕೊಂಡೇ ಹೌದು. ದೆವ್ವ ಹೇಳಿದ್ದು ಸತ್ಯ ಎಂದ. ಜನರಲ್ಲಿ ಗುಸುಗುಸು ಎದ್ದಿತು. ವೆಂಕಟರಾಮಯ್ಯ ಮುಂದುವರಿಸಿದ: "ನಾನು ಆಗ ಜಮೀಂದಾರ ಬಳಿ ದಿವಾನನಾಗಿದ್ದ ವಿಷಯ ನಿಮಗೆಲ್ಲ ಗೊತ್ತಿ ದ್ದುದೇ. ಜಮೀಂದಾರರ ಹೆಂಡತಿಯನ್ನು ಹೆರಿಗೆಗೆ ಆಸ್ಪತ್ರೆಗೆ ಸೇರಿಸಲಾಗಿತ್ತು ಹೆರಿಗೆ ಕಷ್ಟವಾಗಿತ್ತು. ಆಪರೇಷನ್ ಮಾಡಬೇಕಾಯ್ತು. ಆ ಆಪರೇಶನ್ನಿ ನಿಂದಾಗಿ ಮುಂದೆ ಜಮೀನ್ದಾರರ ಹೆಂಡತಿಗೆ ಮಕ್ಕಳಾಗುವುದಿಲ್ಲವೆಂದು ಹೇಳ ಲಾಯ್ತು. ಆದರೆ ಹುಟ್ಟಿದ ಮಗುವೂ ಬದುಕಲಿಲ್ಲ, ಜಮೀನ್ದಾರರ ಹೆಂಡತಿ ಪ್ರಜ್ಞೆಯಲ್ಲಿರಲಿಲ್ಲ. ಪ್ರಜ್ಞೆ ಬಂದ ನಂತರ ತನ್ನ ಹೆಂಡತಿಗೆ ಮಗು ಸತ್ತು ಹೋದ ವಿಷಯ ಗೊತ್ತಾದರೆ ಉಳಿಯುವುದಿಲ್ಲವೆಂದು ಜಮೀನ್ದಾರರು ಚಿಂತಿಸಿ ದರು. ಅದೇ ಸಂದರ್ಭದಲ್ಲಿ ಆ ಆಸ್ಪತ್ರೆಯಲ್ಲಿ ಯಾರೋ ಭಿಕ್ಷುಕಿಯೊಬ್ಬಳು ಗಂಡು ಮಗುವೊಂದನ್ನು ಹೆತ್ತು ಸತ್ತು ಹೋಗಿದ್ದಳು. ಜಮೀನ್ದಾರರು ಆಸ್ಪತ್ರೆಯವರೊಂದಿಗೆ ಮಾತಾಡಿ ಆ ಮಗುವನ್ನು ಎತ್ತಿ ತಂದು ಹೆಂಡತಿಯ

ಬಳಿಯಲ್ಲಿ ಮಲಗಿಸಿದರು. ಇದು ಹೊರಗೆ ಬೀಳಕೂಡದೆಂದು ನನಗೆ ಆಸ್ಪತ್ರೆಯವರಿಗೆ ತಾಕೀತು ಮಾಡಿದರು. ಅವರ ಉಪ್ಪು ತಿನ್ನುತ್ತಿದ್ದ ನಾನು ಬಾಯಿ ಬಿಡುವ ಧಾರ್ಷ್ಟ್ಯ ತೋರಿಸುವಂತಿತ್ತೇ?!

ಆಸ್ಪತ್ರೆಯಲ್ಲಿ ಮೂರು ದಿನ ಕಳೆದು ಜಮೀನ್ದಾರರು ಹೆಂಡತಿ–ಮಗುವಿನೊಡನೆ ಕಾರಿನಲ್ಲಿ ಊರಿಗೆ ಹೊರಟರು. ಆಸ್ಪತ್ರೆಯ ಲೆಕ್ಕ ಚುಕ್ತಾ ಮಾಡಿ ಅರ್ಧಗಂಟೆಯ ನಂತರ ನಾನೂ ಹೊರಟೆ.

ನಂತರ ನಡೆದದ್ದು ನಿಮಗೆ ಗೊತ್ತೇ ಇದೆ. ಅಪಘಾತದಲ್ಲಿ ದಂಪತಿಗಳಿಬ್ಬರೂ ಸತ್ತುಹೋದರು. ಆದರೆ ಮಗು ಬದುಕಿಕೊಂಡಿತು. ಊರಿನ ಜನ ಅವನನ್ನು ಸಾಕಿ ಸಲಹಿದಿರಿ. ನಾನು ಸತ್ಯವನ್ನು ಹೇಳಬಹುದಿತ್ತು. ಆದರೆ ಆಸ್ತಿಯ ಆಸೆಗೆ ಸುಳ್ಳಾಡುತ್ತಿರುವೆನೆಂಬ ಅಪವಾದಕ್ಕೀಡಾಗಬಹುದೆಂಬ ಅಂಜಿಕೆಯಿಂದ ಬಾಯಿ ಬಿಡಲಿಲ್ಲ. ಈಗ ಅನಿವಾರ್ಯವಾದುದರಿಂದ ಹೇಳಬೇಕಾಯ್ತು."

ಜನರಲ್ಲಿ ಎದ್ದಿದ್ದ ಗುಜುಗುಜು ಮತ್ತಷ್ಟು ಜಾಸ್ತಿಯಾಯ್ತು. ಗೋಪಾಲಕೃಷ್ಣ ಮದನಕಾಮರಾಜ ವಂಶದವನಲ್ಲ, ಯಾವಳೋ ಭಿಕ್ಷುಕಿಯ ಮಗ ವೆಂಕಟರಾಮಯ್ಯನ ಮಾತು ಅನೂಹ್ಯ ಪರಿಣಾಮವನ್ನು ಬೀರಿತ್ತು. ಯಾವಳೋ ಭಿಕ್ಷುಕಿಯ ಮಗನನ್ನು ತಾವು ಇಷ್ಟುಕಾಲ ರಾಜನಂತೆ ಸಾಕಿ, ಅವನಿಗೆ ತಮ್ಮ ಊರಿನ ಸ್ತ್ರೀಯರನ್ನು ಒಪ್ಪಿಸಿದೆವಲ್ಲ ಎನ್ನುವ ಭಾವನೆ ಆ ಜನರ ಮನಸ್ಸಿನಲ್ಲಿ ಕುದಿಯತೊಡಗಿತು. ಆದರೆ ಆ ಜನರಿಗೆ ಯಾರಿಗೂ ತಾವು ತಮ್ಮ ಮೂಢನಂಬಿಕೆಯಿಂದಲೇ ಅವನನ್ನು ಸಾಕಿ ಬೆಳೆಸಿ ಬಯಸಿದ ಸ್ತ್ರೀಯನ್ನು ಕಳುಹಿಸಿದ್ದು ಎನ್ನುವುದು ಅರಿವಾಗಲೇ ಇಲ್ಲ. ವರ್ಷಾಳೊಬ್ಬಳೇ ಅದನ್ನು ಅರಿತಿದ್ದಳು.

ಜನರಕ್ರೋಧತಪ್ತ ನೋಟವು ಗೋಪಾಲಕೃಷ್ಣನತ್ತ ಹರಿಯಿತು. ಅವನು ಸುಮ್ಮನೇ ಕುಳಿತಿದ್ದ. ಇನ್ನೂ ಸ್ವಲ್ಪ ಹೊತ್ತು ಹಾಗೆಯೇ ಇದ್ದಿದ್ದರೆ ಜನರು ಗೋಪಾಲಕೃಷ್ಣನ ಮೇಲೆದಾಳಿ ಮಾಡಿರುತ್ತಿದ್ದರೇನೋ ಆದರೆ ಆ ಊರಿನ ಸರಪಂಚ ಶಿವರಾಮಯ್ಯ ಕೈ ಎತ್ತಿ ಜನರನ್ನು ಸುಮ್ಮನಾಗುವಂತೆ ಸೂಚಿಸಿದ.

"ಗೊತ್ತಿದ್ದೋ, ಗೊತ್ತಿಲ್ಲದೆಯೋ ಅನಾಹುತವು ನಡೆದು ಹೋಗಿದೆ. ಇದರಲ್ಲಿ ದಿವಾನನ ತಪ್ಪಾಗಲಿ, ಗೋಪಾಲಕೃಷ್ಣನ ತಪ್ಪಾಗಲೀಇಲ್ಲ. ಅವರನ್ನು ಶಿಕ್ಷಿಸುವುದರಿಂದ ಪ್ರಯೋಜನವೂ ಇಲ್ಲ. ಹಿಂದೆ ಆಗಿ ಹೋದುದರ ಬಗ್ಗೆ ಚಿಂತಿಸಿ ಫಲವಿಲ್ಲ. ಈಗ ಮುಂದೆ ಆಗಬೇಕಿರುವ ಕಾರ್ಯಕ್ರಮದ ಬಗ್ಗೆ

ಯೋಚಿಸೋಣ. ಅಪಚಾರದಿಂದ ಸಿಟ್ಟುಗೊಂಡಿರುವ ಗ್ರಾಮದ ದೈವವನ್ನು ಶಾಂತಿಗೊಳಿಸುವ ದಾರಿ ಹುಡುಕೋಣ ಮತ್ತೆ ಮನ್ಮಥದೇವ ಈ ಗ್ರಾಮದಲ್ಲಿ ಸಾಕು, ಏನಂತೀರಾ? ಎಂದ

ಜನ ಆತನ ಮಾತಿಗೆ ಸಮ್ಮತಿ ಸೂಚಿಸಿದರು. ಮತ್ತಷ್ಟು ಚರ್ಚೆ ಮಾಡಿದ ನಂತರ ಅಂದಿನಿಂದ ಗೋಪಾಲಕೃಷ್ಣನಿಗೆ ಒದಗುವ ಸೌಲಭ್ಯಗಳೆಲ್ಲವನ್ನೂ ರದ್ದು ಮಾಡಬೇಕೆಂದು ತೀರ್ಮಾನಿಸಲಾಯ್ತು. ಅವನ ಪಾಡು ಅವನದೆಂದು ಬಿಟ್ಟುಬಿಡಲು ನಿರ್ಧರಿಸಲಾಯ್ತು.

ಗೋಪಾಲಕೃಷ್ಣನ ಪತನದ ಯೋಜನೆಯನ್ನು ಹಾಕಿ ಅದನ್ನು ಯಶಸ್ವಿಯಾಗಿ ಜಾರಿಗೆ ತಂದ ವೆಂಕಟರಾಮಯ್ಯ,ಹುಲಿರಾಜ, ಮೋಹನ ಒಳಗೊಳಗೇ ಸಂತೋಷಗೊಂಡರು.

ಚರ್ಚೆಯ ನಂತರ ಜನ ಅದರ ಬಗ್ಗೆಯೇ ಮಾತಾಡಿಕೊಳ್ಳುತ್ತ ಅಲ್ಲಿಂದ ಚದುರಿದರು. ಗೋಪಾಲಕೃಷ್ಣನ ಮನಃಸ್ಥಿತಿ ಈಗ ಹೇಗಿರಬಹುದೆನ್ನುವುದನ್ನು ತಿಳಿದುಕೊಳ್ಳಲು ವರ್ಷಾ ಅವನಿದ್ದತ್ತ ನೋಡಿದಳು ಗೋಪಾಲಕೃಷ್ಣ ಅಲ್ಲಿರಲಿಲ್ಲ.

## ೨೦

ಗೋಪಾಲಕೃಷ್ಣ ಮದನಕಾಮರಾಜ ವಂಶದವನಲ್ಲವೆಂದು ಹೇಳಿದಂದಿನಿಂದ ಅವನು ಗ್ರಾಮದ ಜನರ ಕಣ್ಣಲ್ಲಿ ಏತಕ್ಕೂಬೇಡದಂಥವನಾದ. ಅಲ್ಲಿಯವರೆಗೆ ರಾಜನಂತೆ ಮೆರೆಸಿದ ಜನರೇ ಅವನತ್ತ ತಿರುಗಿಯೂ ನೋಡಲಿಲ್ಲ. ಕಷ್ಟಪಡದೆ ಷಡ್ರಸೋಪೇತ ಭೋಜನ ಇದ್ದಲ್ಲಿಗೆ ಬರುತ್ತಿದ್ದುದರಿಂದ ಹಸಿವೆಂದರೇನೆಂಬುದು ಗೊತ್ತಿರಲಿಲ್ಲ. ಅಂದು ಮೊದಲ ಬಾರಿಗೆ ಅವನಿಗೆ ಹಸಿವಿನ ಸಂಕಟ ಅನುಭವಕ್ಕೆ ಬಂತು. ತುತ್ತಿನ ಚೀಲ ತುಂಬಬೇಕೆಂದರೆ ಮೈ ಬಗ್ಗಿಸಬೇಕೆಂದುಕೊಂಡ. ಆದರೆ ಅಲ್ಲಿಯವರೆಗೆ ಏನೊಂದನ್ನೂ ಮಾಡಿ ಅನುಭವವಿರದಿದ್ದ ತಾನು ಏನು ಮಾಡಬೇಕು? ಎಂಬ ಸಮಸ್ಯೆಯನ್ನು ಎದುರಿಸಿದ ಗೋಪಾಲಕೃಷ್ಣ.

ನರ ಹಿಂದಿನ ದಿನವೇ ವರ್ಷಾಳನ್ನು ಭೇಟಿಯಾಗಿದ್ದ. ಆದುದೆಲ್ಲ ಒಳಿತಿಗೆಂದೇ ವರ್ಷಾ ಹೇಳಿದ್ದಳು. "ಇನ್ನು ಮುಂದಾದರೂ ಕಷ್ಟಪಟ್ಟು ಕೆಲಸ ಮಾಡದ ಹೊರತು ಹೊಟ್ಟೆ ತುಂಬುವುದಿಲ್ಲವೆಂಬುದು ಮನುಷ್ಯನಾಧವನು ತನ್ನ ಅನ್ನ ತಾನೇ ಸಂಪಾದಿಸಿಕೊಳ್ಳಬೇಕೆಂಬುದು ಗೊತ್ತು ಮಾಡಿಕೊಳ್ಳುತ್ತಾನೆ. ಇದು ಆತನಿಗೇ ಒಳ್ಳೆಯದು ನೀನು ಸುಮ್ಮನಿದ್ದು ಬಿಡು. ಮುಂದಿನ

ಹೊಣೆ ನನಗಿರಲಿ...... " ಎಂದಿದ್ದಳು, ಆದಕ್ಕೀ ನರ ಯಾವ ರೀತಿಯಿಂದಲೂ ಕಳವಳಗೊಂಡಿರಲಿಲ್ಲ.

ಬೆಳಿಗ್ಗೆಯಿಂದ ಗೋಪಾಲಕೃಷ್ಣ ಮುಂದೇನು ಮಾಡಬೇಕೆಂದು ಯೋಚಿಸುತ್ತಿದ್ದ. ಎಷ್ಟಕ್ಕೂ ಸಮಸ್ಯೆ ಬಗೆಹರಿದಿರಲಿಲ್ಲ, ಇದ್ದುದರಲ್ಲಿ ಒಂದು ಸಮಾಧಾನವೆಂದರೆ ಅನಿಷ್ಟವಾದ ಆ ವಂಶಾಚಾರವನ್ನು ತಾನಿನ್ನು ಮುಂದುವರಿಸಬೇಕಾದ ಅಗತ್ಯವಿಲ್ಲ ಎನ್ನುವುದು.

ಹೊತ್ತೇರಿದಂತೆ ಹಸಿವಿನ ಸಂಕಟವೂ ಏರಿತು. ಚಡಪಡಿಸಿದನಾದರೂ ಅದಕ್ಕೇನು ಮಾಡುವುದೆನ್ನುವುದು ಹೊಳೆಯಲಿಲ್ಲ. ಊರೊಳಗೆ ಹೋಗಲು ಮನಸ್ಸಾಗಲಿಲ್ಲ.ಅವನೊಂದಿಗೆ ನರನೂ ಬರಿ ಹೊಟ್ಟೆಯಲ್ಲಿದ್ದ, ಸಾಯಂಕಾಲವು ಸರಿದು ಹೋಗಿ ಮೆಲ್ಲನೆ ರಾತ್ರಿ ಆವರಿಸಿಕೊಳ್ಳತೊಡಗಿತು. ಮೂರು ಹೊತ್ತಿನ ಹಸಿವು ಅವನನ್ನು ನಿತ್ರಾಣಗೊಳಿಸಿತ್ತು.

ಸುಮ್ಮನೇ ಮಲಗಿ ಛಾವಣಿ ನೋಡುತ್ತ ಯೋಚಿಸುತ್ತಿದ್ದ. ಗೋಪಾಲ ಕೃಷ್ಣ ಯಾರೋ ಬಂದಂತಾದ್ದರಿಂದ ತಲೆ ತಿರುಗಿಸಿ ನೋಡಿದ ಬಾಗಿಲಲ್ಲಿ ಕ್ಯಾರಿಯರ್ ಹಿಡಿದು ವರ್ಷಾ ನಿಂತಿದ್ದಳು. ಜೊತೆಯಲ್ಲಿ ನರ.

ಗೋಪಾಲಕೃಷ್ಣನನ್ನು ನೋಡಿದ ವರ್ಷಾ ಮುಗುಳ್ನಕ್ಕಳು. ಗೋಪಾಲ ಕೃಷ್ಣ ಎದ್ದು ಮೆಲ್ಲಗೆ ಅವಳ ಬಳಿ ಬಂದ. ಏನೋ ಹೇಳಲೆಂದು ಬಾಯಿ ತೆರೆದ ಅವನನ್ನು ಅಷ್ಟಕ್ಕೇ ತಡೆಯುತ್ತ "ಮೊದಲು ಊಟ" ಎಂದು ಹೇಳುತ್ತ ಕ್ಯಾರಿಯರ್ ಬಿಚ್ಚಿದಳು.

* * * *

ವರ್ಷಾಳೊಂದಿಗೆ ಚರ್ಚಿಸಿದ ಗೋಪಾಲಕೃಷ್ಣ ತನ್ನ ಮುಂದಿನ ಬದುಕಿಗೆ ಏನು ಮಾಡಬೇಕೆಂದು ಸಲಹೆ ಕೇಳಿದ. ದೀರ್ಘವಾಗಿ ಯೋಚಿಸಿದ ವರ್ಷಾ ನರನ ಸಹಾಯದಿಂದ ಕೋಳಿ ಸಾಕಾಣಿಕೆ ಪ್ರಾರಂಭಿಸುವಂತೆ ಸಲಹೆ ನೀಡಿದಳು ಆ ಸಲಹೆ ಗೋಪಾಲಕೃಷ್ಣನಿಗೂ ಒಪ್ಪಿಗೆಯಾಯ್ತು.

ಹತ್ತಿರದ ಮಲ್ಲಾಪುರದಲ್ಲಿದ್ದ ಬ್ಯಾಂಕಿಗೆ ಸಾಲಕ್ಕೆ ಅರ್ಜಿ ಹಾಕಿದ ವರ್ಷಾಳೇ ಜಾಮೀನಾಗಿ ನಿಂತು ಸಾಲಕೊಡಿಸಿದಳು. ಗೋಪಾಲಕೃಷ್ಣನ ಸ್ವಯಂ ಉದ್ಯೋಗವು ಜೀವನದಲ್ಲಿ ಮೊತ್ತಮೊದಲ ಬಾರಿಗೆ ಕಷ್ಟಪಡುವುದು ಪ್ರಾರಂಭವಾಯ್ತು, ನರ ಅವನ ಸಹಾಯಕ್ಕಿದ್ದ.

ಮೂರು ತಿಂಗಳು ಕಳೆದವು. ಆ ಮೂರು ತಿಂಗಳೂ ಗೋಪಾಲಕೃಷ್ಣ, ನರರಿಗೆ ಪುರಸೊತ್ತಿರಲಿಲ್ಲ. ಬ್ಯಾಂಕಿನಿಂದ ದುಡ್ಡು ಪಡೆದು ಶೆಡ್ ಹಾಕಿಸಿದ್ದು, ಕೋಳಿ ಮರಿ ತರಿಸುವುದು, ಅವುಗಳ, ಲಾಲನೆ-ಪಾಲನೆ ಇವುಗಳಲ್ಲಿ ಹೊತ್ತು

ಪುರಸೊತ್ತಿಲ್ಲದೆ ಓಡುತ್ತಿತ್ತು. ಕ್ರಮೇಣ ಗೋಪಾಲಕೃಷ್ಣ ಶ್ರಮ ಜೀವನಕ್ಕೆ ರೂಢಿಗೊಂಡ. ಕೋಳಿ ಫಾರ್ಮ್ ಚೆನ್ನಾಗಿಯೇ ಇತ್ತು. ಮೊದಲ ಬ್ಯಾಚ್ ಕೋಳಿಗಳನ್ನು ಮಾರಿದ. ಒಂದಷ್ಟು ದುಡ್ಡು ಬಂತು. ಅದರಲ್ಲಿ ಬ್ಯಾಂಕಿಗೆ ಮೊದಲ ಕಂತುಕಟ್ಟಿ, ಎರಡನೇ ಬ್ಯಾಚ್ ಕೋಳಿ ಮರಿಗಳನ್ನು ತಂದ. ತನ್ನ ಮೊದಲ ಸಂಪಾದನೆಯಲ್ಲಿ ವರ್ಷಾಳಿಗೊಂದು ರೇಷ್ಮೆ ಸೀರೆಯನ್ನು ಕಾಣಿಕೆ ಯಾಗಿ ತಂದುಕೊಟ್ಟ.

ಆ ಮೂರು ತಿಂಗಳ ಅವಧಿಯಲ್ಲಿ ಗೋಪಾಲಕೃಷ್ಣ ವರ್ಷಾರ ಪ್ರೇಮ ವಿಕಸಿಸಿತ್ತು. ವರ್ಷಾಳೂ ಗೋಪಾಲಕೃಷ್ಣನನ್ನು ಪ್ರೇಮಿಸತೊಡಗಿದ್ದಳು.

ಊರಿನ ಜನತೆಯೂ ಗೋಪಾಲಕೃಷ್ಣನನ್ನು ಮೊದಲಿನಂತೆ ತಿರಸ್ಕಾರ ದಿಂದ ಕಾಣುತ್ತಿರಲಿಲ್ಲ. ಹಾಗೆಂದು ಅಭಿಮಾನದಿಂದಲೂ ನೋಡುತ್ತಿರಲಿಲ್ಲ. ಅವನ ಪಾಡಿಗೆ ಅವನನ್ನು ಬಿಟ್ಟಿದ್ದರು. ಅವನೊಂದಿಗೆ ಪ್ರತಿ ಹುಣ್ಣಿಮೆ ರಾತ್ರಿ ಕಳದ ಹಲವಾರು ಸ್ತ್ರೀಯರಿಗೆ ಅವನು ಎದುರಾದಾಗಲೆಲ್ಲ ಆ ಅನುಭವ ಮತ್ತೆ ನೆನಪಿಗೆ ಬರುತ್ತಿತ್ತು. ಅಷ್ಟೇ ಅದಕ್ಕಿಂತಲೂ ಹೆಚ್ಚಿಗೆ ಇನ್ನೇನೂ ಇರಲಿಲ್ಲ.

ಈ ರೀತಿ ವೆಂಕಟರಾಮಯ್ಯ ಹುಲಿರಾಜ ಗೋಪಾಲಕೃಷ್ಣನ ಪತನ ಕ್ಕೆಂದು ಮಾಡಿದ ಉಪಾಯ ಗೋಪಾಲಕೃಷ್ಣನಿಗೆ ಒಳಿತನ್ನೇ ಮಾಡಿತು. ಗೋಪಾಲಕೃಷ್ಣ ಒಬ್ಬ ಮನುಷ್ಯನಾಗಿ ರೂಪುಗೊಳ್ಳಲು ಅದು ಸಹಾಯ ಮಾಡಿತು.

* * * *

ವೆಂಕಟರಾಮಯ್ಯ, ಹುಲಿರಾಜ ಹೂಡಿದ ಉಪಾಯ ಅಕಸ್ಮಾತ್ತಾಗಿ ಬೆಳಕಿಗೆ ಬಂತು. ಅದು ಹೇಗೆಂದರೆ–

ಶೃಂಗಾರಪುರದಲ್ಲಿ ಶಿವರಾಮಯ್ಯನದು ಒಂದುಮಾವಿನ ತೋಪು ಇತ್ತು. ಬೇಸಿಗೆಯಲ್ಲಿ ಚಳಿಗಾಲದಲ್ಲಿ ಹುಡುಗರು ಸಾಯಂಕಾಲ ಆ ತೋಟದಲ್ಲಿ ಗಿಡ ಮಂಗನಾಟ ಇತ್ಯಾದಿ ಆಡಲು ಹೋಗುತ್ತಿದ್ದರು. ಅದೇ ರೀತಿ ಅದೊಂದು ದಿನ ಆಡಲು ಹೋಗಿದ್ದರು. ಶಿವರಾಮಯ್ಯ ಗುಡಿಸಿಲಿನಲ್ಲಿ ಮಲಗಿದ್ದ ಹುಡುಗರ ಗದ್ದಲ ಕೇಳಿಬರುತ್ತಿತ್ತಾದರೂ ಸುಮ್ಮನೇ ಮಲಗಿದ್ದ.

ಹುಡುಗರು ಮರಕೋತಿಯಾಡಿದ ನಂತರ, ಅವರಲ್ಲೊಬ್ಬ ನಾಟಕ ಆಡೋಣವೆಂದು ಸೂಚಿಸಿದ. ಹುಡುಗರೆಲ್ಲ ಉತ್ಸಾಹದಿಂದ ಒಪ್ಪಿಕೊಂಡರು. ಯಾವ ನಾಟಕ ಎಂದರೆ, ಹುಲಿರಾಜ ದೆವ್ವ ಓಡಿಸುವುದನ್ನು ಅಭಿನಯಿಸೋಣ ವೆಂದು ರರಾವಾಯ್ತು.

ಒಬ್ಬ ಹುಲಿರಾಜನ ಪಾತ್ರ, ಮತ್ತೊಬ್ಬ ವೆಂಕಟರಾಮಯ್ಯನ ಪಾತ್ರ ಇನ್ನೊಬ್ಬ ಮೋಹನಳ ಪಾತ್ರವಹಿಸಿದಉಳಿದವರುಪ್ರೇಕ್ಷಕರಾದರು.ಮೋಹನಳ ಪಾತ್ರವಹಿಸಿದವನು 'ಹು .......ಹು... ಹು'ಎನ್ನುತ್ತ ಮೈ ತೂಗಿಸತೊಡಗಿದ ಹುಲಿರಾಜನ ಪಾತ್ರಧಾರಿ ಮಂತ್ರ ಪಿಟುಗುಟ್ಟಿದಂತೆ ನಟಿಸಿ, ಬೂದಿಯನ್ನು ಎರಚಿದವನಂತೆ ಕೈ ಬೀಸಿ "ಹೂಂ . ಯಾರು ನೀನು ...?ಇಲ್ಲಿಗೇಕೆ ಬಂದೆ.. ? ಹೇಳು" ಎಂದು ಹೂಂಕರಿಸಿದ.

ಮೋಹನಳ ಪಾತ್ರಧಾರಿ ಪಕಪಕನೆ ನಕ್ಕು: "ನಾನು ಕಾಮಿನೀ ಪಿಶಾಚಿ ನಿಮ್ಮನ್ನು ಹುರಿದು ಮುಕ್ಕಲೆಂದು ಬಂದಿದ್ದೇನೆ" ಎಂದ—ಥೇಟ್ ಮೋಹನಳ ಧ್ವನಿ ಅನುಕರಿಸಿ.

ಶಿವರಾಮಯ್ಯ ಆ ಹುಡುಗರ ಮಾತುಗಳನ್ನು ಕೇಳುತ್ತ ತನ್ನಲ್ಲೇ ನಗುತ್ತಿದ್ದ.

ನಾಟಕ ಹೀಗೆಯೇ ಸಾಗಿತು. 'ದೇವರು ಸಿಟ್ಟಾಗಿ ಹೋಗಿರುವನೆಂದೂ ಗೋಪಾಲಕೃಷ್ಣನ ಜನ್ಮ ರಹಸ್ಯ ವೆಂಕಟರಾಮಯ್ಯನಿಗೆಗೊತ್ತಿದೆಯೆಂದೂ . '

ವೆಂಕಟರಾಮಯ್ಯನ ಪಾತ್ರಧಾರಿ ಎದ್ದು "ನಾನು ಇಲ್ಲಿಯವರೆಗೆ ಸತ್ಯ ಹೇಳದೆ ಮುಚ್ಚಿಟ್ಟಿದ್ದೆ. ಆಸ್ಪತ್ರೆಯಲ್ಲಿ ಭೂಪತಿರಾಜನ ಹೆಂಡತಿ ಹೆತ್ತ ಮಗು ಸತ್ತು ಹೋಯ್ತು. ಆಗ ಅದೇ ಆಸ್ಪತ್ರೆಯಲ್ಲಿ ಗಂಡು ಮಗುವನ್ನು ಹೆತ್ತು ಒಬ್ಬಳು ಭಿಕ್ಷುಕಿ ಸತ್ತುಹೋಗಿದ್ದಳು. ಆ ಮಗುವನ್ನು ತಂದು ಹೆಂಡತಿಯ ಮಗ್ಗುಲಿಲ್ಲ ಭೂಪತಿರಾಜರು ಮಲಗಿಸಿದರು. ಯಾರಿಗೂ ಹೇಳಬೇಡವೆಂದು ಅಪ್ಪಣೆ ಮಾಡಿದರು. ಗೋಪಾಲಕೃಷ್ಣ ಮದನ ಕಾಮರಾಜನ ವಂಶದವನಲ್ಲ. ಭಿಕ್ಷುಕಿಯ ಮಗ... "

ಎನ್ನುತ್ತಿದ್ದಂತೆ ನೆರೆದಿದ್ದ ಹುಡುಗರ ಗುಂಪಿನಿಂದ ಒಬ್ಬ "ಇದೆಲ್ಲ ಸುಳ್ಳು ನಿಲ್ಲಿಸಿ.. " ಎಂದು ಜೋರಾಗಿ ಕೂಗಿದನು ಹುಡುಗರೆಲ್ಲ ಪೆಚ್ಚಾಗಿ ಅವನತ್ತ ನೋಡಿದರು. ಶಿವರಾಮಯ್ಯನಿಗೂ ಆಶ್ಚರ್ಯವಾಗಿ ಕಿವಿಗಳನ್ನು ಅತ್ತ ಕಡೆ ಹರಿಬಿಟ್ಟ.

ಆ ರೀತಿ ಕೂಗಿದವನು ವೆಂಕಟರಾಮಯ್ಯನ ಮೊಮ್ಮಗ.

ಹುಲಿರಾಜನ ಪಾತ್ರಧಾರಿ ಒಂದು ಹೆಜ್ಜೆ ಮುಂದಿಟ್ಟು, "ಏನು ಸುಳ್ಳು" ಎಂದು ಕೇಳಿದ.

"ನೀವು ಆಡ್ತಿರೋ ನಾಟಕ....ಗೋಪಾಲಕೃಷ್ಣ ಭಿಕ್ಷುಕಿಯ ಮಗ ಅಲ್ಲ. ಅದೆಲ್ಲ ನಮ್ಮ ತಾತ ಮಾಡಿದ ಪ್ಲಾನು... "

ಇದೆಲ್ಲ ಕೇಳುತ್ತಿದ್ದ ಶಿವರಾಮಯ್ಯ ಬೆಚ್ಚಿಬಿದ್ದ. "ಹೌದು ಕಣ್ರೋ" ಆ

ಹುಡುಗ ಹೇಳುತ್ತಿದ್ದ. "ಗೋಪಾಲಕೃಷ್ಣನನ್ನು ತುಳಿಯಬೇಕೆಂದು ನಮ್ಮ ತಾತ, ಹುಲಿರಾಜ ಮೋಹನ ಒಂದಿನ ಮಹಡಿ ಮೇಲೆ ಮಾತಾಡ್ತಿರೋವಾಗ ನಾನು ಕೇಳಿಸ್ಕೊಂಡೆ. ಈ ರೀತಿ ಮಾಡಬೇಕು ಅಂತ ನಮ್ಮ ತಾತ ಹುಲಿರಾಜ ಮೋಹನಳಿಗೆ ಕೊಟ್ಟ...."

ಶಿವರಾಮಯ್ಯನಿಗೆ ಆ ಮಾತುಗಳನ್ನೆಲ್ಲ ಕೇಳಿ ಮತಿಭ್ರಮಣೆಯಾ ದಂತಾಯ್ತು. ತಟಕ್ಕನೆದ್ದು ಹೊರಗೆ ಬಂದ. ಶಿವರಾಮಯ್ಯನನ್ನು ನೋಡಿದ ಹುಡುಗರು ತಟಕ್ಕನೆ ಸುಮ್ಮನಾದರು. ಆತ ವೆಂಕಟರಾಮಯ್ಯನ ಮೊಮ್ಮಗನ ಬಳಿಗೆ ಹೋಗಿ "ನೀನು ಹೇಳಿದ್ದು ನಿಜವೇ?" ಎಂದು ಕೇಳಿದ.

ಆ ಹುಡುಗ ಹೆದರಿ "ಹೂಂ" ಎಂದ.

"ಮತ್ತೆ ಇಷ್ಟು ದಿವಸ ಯಾರಿಗೂ ಯಾಕೆ ಹೇಳಲಿಲ್ಲ?"

"ನಮ್ಮ ತಾತ ಹೊಡೀತಾನೆ ಅಂತ ಹೆದರಿಕೆ-ಅದಕ್ಕೆ. "

ಶಿವರಾಮಯ್ಯ ಆ ಹುಡುಗನನ್ನು ರಮಿಸಿ ಅವನು ಆವತ್ತು ಏನೇನುಕೇಳಿ ದನೆಂಬುದನ್ನು ಹೇಳೆಂದು ಪುಸಲಾಯಿಸಿದ. ಆ ಹುಡುಗ ಎಲ್ಲವನ್ನೂ ಹೇಳಿ ಬಿಟ್ಟ. ವೆಂಕಟರಾಮಯ್ಯ ಭೂಪತಿರಾಜ ಮತ್ತು ಆತನ ಹೆಂಡತಿ ಬರುತ್ತಿದ್ದ ಕಾರಿಗೆ ಲಾರಿ ಗುದ್ದಿಸಿದ್ದು, ಗೋಪಾಲಕೃಷ್ಣನ ಆಸ್ತಿಯನ್ನೆಲ್ಲ ಕಬಳಿಸಿದ್ದು. ಕೊನೆಗೆ ಗೋಪಾಲಕೃಷ್ಣನ ಪತನಕ್ಕೆಂದು ಮಾಡಿದ ಉಪಾಯ ಎಲ್ಲವನ್ನೂ ಹೇಳಿದ. ಕೇಳುತ್ತ ಕೇಳುತ್ತ ಶಿವರಾಮಯ್ಯನಿಗೆ ತಲೆ ತಿರುಗಿದಂತಾಯ್ತು. ವೆಂಕಟರಾಮಯ್ಯನ ಕುಟಿಲೋಪಾಯಕ್ಕೆ ಬಲಿಯಾಗಿ ಗೋಪಾಲಕೃಷ್ಣನನ್ನು ತಿರಸ್ಕರಿಸಿದ್ದಕ್ಕೆ ಎಲ್ಲಿ ಮನ್ಮಥ ದೇವನಿಗೆ ಕೋಪ ಬರುತ್ತದೋ ಎಂದು ಹೆದರಿ ಹೇಗಾದರೂ ಮಾಡಿ ತಾವು ಮಾಡಿದ ಪಾಪಕ್ಕೆ ಪರಿಹಾರ ಕಂಡುಕೊಳ್ಳ ಬೇಕೆಂದು ಯೋಚಿಸಿ. ಆ ಹುಡುಗನನ್ನು ಹಿಂದಿಟ್ಟುಕೊಂಡು ಊರಿನೊಳಗೆ ಧಾವಿಸಿದ.

* * * *

ಊರೊಳಗೆ ಬಂದ ಶಿವರಾಮಯ್ಯ ನಾಲ್ಕಾರು ಪ್ರಮುಖರನ್ನು ಸೇರಿಸಿ ವೆಂಕಟರಾಮಯ್ಯನ ಬಾಯಿಯಿಂದ ತಾನು ಕೇಳಿದುದನ್ನು ತಿಳಿಸಿದ. ಎಲ್ಲರೂ ದಿಗ್ಭ್ರಾಂತರಾದರು. ಇನ್ನೂ ಹತ್ತಾರು ಜನ ಸೇರಿಕೊಂಡರು.ಎಲ್ಲರಿಗೆ ವಿಷಯ ಗೊತ್ತಾಗತೊಡಗಿತು. ಎಲ್ಲರ ಮನಸ್ಸಿನಲ್ಲೂಒಂದೇ ಪ್ರಶ್ನೆ 'ಅಯ್ಯೋ ದೇವರಿಗೆ ಅಪಚಾರ ಮಾಡಿಬಿಟ್ಟೆವೆ?'

ಶಿವರಾಮಯ್ಯ ಹುಲಿರಾಜ ಮೋಹನರನ್ನು ಹಿಡಿದುತರಿಸಿದ. ಅವರನ್ನು ಹೆದರಿಸಿ ಕೇಳಿದಾಗ ಸತ್ಯವನ್ನು ಒಪ್ಪಿಕೊಂಡರು. ಜನ ಸಮೂಹದೆದುರು

ಬೊಂಕಲು ಅವರಿಗೆ ಧೈರ್ಯ ಸಾಲಲಿಲ್ಲ. ಹುಲಿರಾಜನ ಬಾಯಿಯಿಂದಲೇ ಗೋಪಾಲಕೃಷ್ಣನ ವಿರುದ್ಧ ಹೂಡಲಾಗಿದ್ದ ಸಂಚನ್ನು ಕೇಳಿ ಜನ ಕ್ರೋಧ ತಪ್ತರಾದರು ಕೆಲವು ಜನ ಯುವಕರು ವೆಂಕಟರಾಮಯ್ಯ ತಡೆಯದಿದ್ದರೆ ಕೊಂದಿರುತ್ತಿದ್ದರೋ ಏನೋ?! ಶಿವರಾಮಯ್ಯ ತಡೆದು ವೆಂಕಟರಾಮಯ್ಯನನ್ನು ತರಾಟೆಗೆ ತೆಗೆದುಕೊಂಡ. ಹಣ್ಣಾಗಿ ಹೋಗಿದ್ದ ವೆಂಕಟರಾಮಯ್ಯ ತನ್ನ ತಪ್ಪನ್ನು ಒಪ್ಪಿಕೊಂಡ.

ಶಿವರಾಮಯ್ಯ ಮುಂದಾಳ್ತನವಹಿಸಿಕೊಂಡು ವೆಂಕಟರಾಮಯ್ಯ ಗೋಪಾಲ ಕೃಷ್ಣನಿಂದ ಕಿತ್ತುಕೊಂಡ ಭೂಮಿ, ಆಸ್ತಿ—ಪಾಸ್ತಿಯನ್ನು ತಿರುಗಿ ಒಪ್ಪಿಸ ಬೇಕೆಂಬುದಾಗಿ ತಾಕೀತು ಮಾಡಿ ಅಲ್ಲಿಂದಲೇ ಸ್ಟ್ಯಾಂಪ್ ಪೇಪರ್ ತರಿಸಿ ಖರೀದಿ ಪತ್ರ ಬರೆಸಿಬಿಟ್ಟ. ನಂತರ ಪೋಲೀಸರನ್ನು ಕರೆಸಿ ವೆಂಕಟರಾಮಯ್ಯ ನನ್ನು ಪೋಲೀಸರಿಗೊಪ್ಪಿಸಿದ. ಹುಲಿರಾಜ ಮೋಹನಗೆ ಎಚ್ಚರಿಕೆಯನ್ನು ನೀಡಿಬಿಡಲಾಯ್ತು.

* * * *

ಮುಂದೆ ನಡೆಯಬೇಕಾದ ಕಾರ್ಯಕ್ರಮದ ಜವಾಬ್ದಾರಿಯನ್ನೂ ಶಿವ ರಾಮಯ್ಯನೇ ವಹಿಸಿಕೊಂಡ. ನರನನ್ನು ಕರೆಯಿಸಿ ನಡೆದುದನ್ನೆಲ್ಲ ಹೇಳಿದನು.

"ಆಗಿದ್ದು ಆಗಿ ಹೋಯ್ತು. ಆ ತುಚ್ಛ ವೆಂಕಟರಾಮಯ್ಯನ ಮೋಸವನ್ನು ನಂಬಿ ಗೋಪಾಲಕೃಷ್ಣನನ್ನು ಅವಮಾನಿಸಲಾಯ್ತು. ನಿಮ್ಮಿಂದ ತಪ್ಪಾಯ್ತು ತಪ್ಪೊಪ್ಪಿಕೊಳ್ಳುತ್ತಿದ್ದೇವೆ. ಗೋಪಾಲಕೃಷ್ಣನು ಮದನ ಕಾಮರಾಜ ವಂಶಾ ಚಾರಗಳೆಲ್ಲವನ್ನೂ ಮುಂದುವರಿಸಬೇಕೆಂಬುದು ನಮ್ಮ ಮನವಿ ಯಥಾಪ್ರಕಾರ ಊಟ ಕಳುಹಿಸುವುದನ್ನು ಶುರು ಮಾಡುತ್ತೇವೆ ಇವತ್ತು ಪೌರ್ಣಮಿ ಆ ಆಚಾರವನ್ನೂ ಶುರುಮಾಡಬೇಕೆಂಬುದಾಗಿ ನಾವು ಬೇಡಿಕೊಳ್ಳುತ್ತಿದ್ದೇವೆ. ನೀನು ಬಂದು ಹೇಳುವ ಸುದ್ದಿಗೋಸ್ಕರ ನಾವೆಲ್ಲ ಕಾಯುತ್ತಿರುತ್ತೇವೆ" ಎಂದು ಗ್ರಾಮದ ಜನರ ಸಮಕ್ಷಮದಲ್ಲಿ ಹೇಳಿದ.

ನರ ಆತನ ಸಂದೇಶವನ್ನು ಗೋಪಾಲಕೃಷ್ಣನಿಗೆ ಒಯ್ದು ಮುಟ್ಟಿಸಿದ. ಅದನ್ನು ಕೇಳಿದ ಗೋಪಾಲಕೃಷ್ಣ ಸ್ವಲ್ಪ ಹೊತ್ತು ಯೋಚಿಸಿ. ಕೊನೆಗೊಂದು ನಿರ್ಧಾರಕ್ಕೆ ಬಂದವನಂತೆ, "ಸಾಯಂಕಾಲ ಊರಿನ ಬಯಲಿನಲ್ಲಿ ಸಭೆ ಸೇರಿಸು ವಂತೆ ಶಿವರಾಮಯ್ಯನಿಗೆ ತಿಳಿಸು. ಊರಿನ ಜನ ವಯಸ್ಕ ಸ್ತ್ರೀ—ಪುರುಷರೆಲ್ಲ ಅಲ್ಲಿ ನೆರೆಯಬೇಕೆಂಬುದಾಗಿ ಹೇಳು. ಅಲ್ಲಿ ನನ್ನ ನಿರ್ಧಾರವನ್ನೂ ತಿಳಿಸುತ್ತೇನೆ," ಎಂದ.

ನರ ಆ ಸಂದೇಶವನ್ನು ಊರಿನ ಜನರಿಗೆ ತಲುಪಿಸಿದ. ಗೋಪಾಲಕೃಷ್ಣನ ಬಯಕೆಯಂತೆ ಸಭೆಗೆ ಏರ್ಪಾಟಾಯ್ತು.

## ೨೧

ಗೋಪಾಲಕೃಷ್ಣ ಮಾತಾಡಲೆಂದು ಎದ್ದು ನಿಂತು, ನೆರೆದಿದ್ದ ಜನರತ್ತ ದೃಷ್ಟಿ ಹರಿಸಿದ. ಎಲ್ಲರ ಮುಖಗಳಲ್ಲಿ ಕಾತುರ ತುಂಬಿತ್ತು, ಗೋಪಾಲಕೃಷ್ಣ ಏನು ಹೇಳುತ್ತಾನೆನ್ನುವ ಕುತೂಹಲ ...

ಗೋಪಾಲಕೃಷ್ಣ ಹೇಳತೊಡಗಿದ:

“ಮೊದಲನೆಯದಾಗಿ ನಾನು ನಿಮ್ಮೆಲ್ಲರ ಕ್ಷಮೆ ಕೇಳುತ್ತೇನೆ. ಇಷ್ಟು ವರ್ಷಕಾಲ ನಿಮ್ಮೆಲ್ಲರ ಕಷ್ಟವನ್ನು, ನಾನು ಸುಖವಾಗಿ ಕುಳಿತು ತಿಂದು ಕಾಲಹರಣ ಮಾಡಿದುದಕ್ಕೆ ..”

ಜನರಲ್ಲಿ ಗುಜುಗುಜು ಎದ್ದಿತು. ಗೋಪಾಲಕೃಷ್ಣ ಕೈ ಎತ್ತಿ ಅವರನ್ನು ಶಾಂತರಾಗುವಂತೆ ಸೂಚಿಸಿ, ಮುಂದುವರೆಸಿದ.

“ನಾನೇನೂ ಈ ಮಾತನ್ನು ನೀವು ನನ್ನನ್ನು ಕೆಲ ದಿನಗಳ ಹಿಂದೆ ತಿರಸ್ಕರಿಸಿದಿರಿ ಎನ್ನುವ ಕೋಪಕ್ಕೆ ಹೇಳುತ್ತಿಲ್ಲ. ವಾಸ್ತವವನ್ನು ಅರಿತು ಕೊಂಡು. ಇರುವುದನ್ನು ಹೇಳಿ ಮನಸ್ಸು ಹಗುರಮಾಡಿಕೊಳ್ಳಬೇಕೆಂದಿದೆ. ಹಿಂದೆಂದೋ ನಮ್ಮ ವಂಶದವರು ಶುರು ಮಾಡಿರುವ ಈ ಮೂಢನಂಬಿಕೆಯನ್ನು ಇಂದಿನಿಂದ ಮುಂದುವರಿಸಕೂಡದೆಂದು ನಿಶ್ಚಯಿಸಿಕೊಂಡಿದ್ದೇನೆ. ನಮ್ಮ ವಂಶಾಚಾರ ಮೂಢತನದ್ದು ಎನ್ನುವುದು ನನಗೆ ಅರಿವಾಗಿದೆ. ನನ್ನೊಂದಿಗೆ ಒಂದು ರಾತ್ರಿ ಕಳೆಯುವುದರಿಂದ ಯಾರಿಗೂ ಸಿರಿ-ಸಂಪತ್ತು ಲಭಿಸುವುದಿಲ್ಲ. ಅದೆಲ್ಲ ಭ್ರಮೆ, ಎಷ್ಟೆಲ್ಲ ಜನ ನನ್ನೊಂದಿಗೆ ಕಳೆದವರು ಇಲ್ಲಿದ್ದಾರೆ. ಅವರಲ್ಲಿ ಯಾರಿಗೆ ಲಾಭವಾಗಿದೆ? ಎಂದಾದರೂ ವಿಚಾರಿಸಿದ್ದೀರಾ? ಅಕಸ್ಮಾತ್ ಯಾರಿಗಾದರೂ ಏನಾದರೂ ಲಾಭವಾಗಿದ್ದರೆ ಅದು ಕಾಕತಾಳೀಯವಿರಬಹುದು. ಉದಾ: ಗೆ ನನ್ನೊಂದಿಗೆ ಮೊದಲ ಸಾರಿ ಕಳೆದ ಕಸ್ತೂರಿಯನ್ನೇ ನೋಡಿ.ಆಕೆಗೆ ಏನಾದರೂ ಸಿರಿ-ಸಂಪತ್ತು ಲಭಿಸಿದೆಯೆ? ಅದೂ ಬಟ್ಟೆ ಒಗೆದು,ಹೊಟ್ಟೆ ಹೊರೆಯಬೇಕಿತ್ತು.ಇಂದೂ ಅದೇ ಸ್ಥಿತಿಯಿದೆ. ಹೀಗಿರುವಾಗ ನನ್ನೊಂದಿಗೆ ಪೌರ್ಣಮಿ ರಾತ್ರಿ ಕಳೆದರೆ ಅದೃಷ್ಟವೆನ್ನುವುದು ಮೂಢ ನಂಬಿಕೆಯಲ್ಲದೆ ಮತ್ತೇನು? ವೆಂಕಟರಾಮಯ್ಯ ನನ್ನ ವಿರುದ್ಧ ಏನೇ ಸಂಚು ಹೂಡಿರಲಿ ಅದರಿಂದಾಗಿನಾನು ಸ್ವತಃ ಕಾಯಕಷ್ಟದಿಂದ ಒದುಕುವುದನ್ನು ಕಲಿತೆ. ಅದರಲ್ಲಿರುವ ಆನಂದವನ್ನು ಅರಿತೆ. ಗಂಡಸುತನವೆಂದರೆ ಕೇವಲ ಹೆಣ್ಣಿನೊಂದಿಗೆ ಮಲಗುವುದರಲ್ಲಿಲ್ಲ. ಅದು

ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರಲ್ಲಿದೆ ಎಂಬುದನ್ನು ಗ್ರಹಿಸಿದೆ. ಇದಕ್ಕಾಗಿಯಾದರೂ ನಾನು ಆತನಿಗೆ ಋಣಿಯಾಗಿರಬೇಕು.

ದಯವಿಟ್ಟು ನನ್ನನ್ನು ಕ್ಷಮಿಸಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ ಎಂದು ಜನರಿಗೆ ವಂದಿಸಿ ಕುಳಿತುಕೊಂಡ.

ಜನರೆಲ್ಲ ಅವನು ಹೇಳುವುದನ್ನು ಸ್ತಬ್ಧರಾಗಿ ಕೇಳುತ್ತಿದ್ದರು. ಅವನು ಹೇಳುವುದನ್ನು ಮುಗಿಸಿದ ಮೇಲೂ ಜನ ಮಾತಾಡಲಿಲ್ಲ. ಯಾವುದೋ ಯೋಚನೆಯಲ್ಲಿ ಮುಳುಗಿಹೋದವರಂತಿದ್ದರು.

ಅಲ್ಲಿಯೇ ಇದ್ದ ವರ್ಷಾ ಗೋಪಾಲಕೃಷ್ಣನು ಮಾತಾಡುವುದನ್ನು ಮುಗಿಸುತ್ತಲೇ ಮೆಲ್ಲಗೆ ನಕ್ಕಳು. ಅವಳಿಗೆ ಹಿಡಿಸಲಾರದಷ್ಟು ಆನಂದವಾಗಿತ್ತು. ದುರಾಚಾರವೊಂದು ಕೊನೆಗೊಳ್ಳುವಲ್ಲಿ ತಾನೂ ಪರೋಕ್ಷವಾಗಿ ಕಾರಣಳು ಎಂಬುದು ಅವಳ ಸಂತೋಷಕ್ಕೆ ಕಾರಣ.

ಎಲ್ಲರಿಗಿಂತ ಮೊದಲು ಚಪ್ಪಾಳೆ ತಟ್ಟಿದ್ದು ವರ್ಷಾಳೇ. ಎಚ್ಚೆತ್ತ ಜನ ಅವಳೊಂದಿಗೆ ತಾವೂ ಕೈತಟ್ಟಿದರು.

●

DEPARTMENT OF PUBLIC LIBRARIES
COPY RIGHT
STATE CENTRAL

ವಿಚಿತ್ರ, ಹೆಸರಿನ ಊರು! ಊರಿನ ಅಧಿದೇವತೆ ಮನ್ಮಥ! ವಿಚಿತ್ರ, ಹೆಸರಿನ ಊರಿನಲ್ಲಿ ವಿಚಿತ್ರ, ಆಚಾರ! ಪ್ರತಿ ಪೌರ್ಣಮಿಯಂದು ಆ ಊರಿನ ಮದನ ಕಾಮರಾಜ ವಂಶಕ್ಕೆ ಸೇರಿದ ಪುರುಷ ಯಾವ ಹೆಣ್ಣನ್ನು ಬಯಸುತ್ತಾನೋ ಅವಳು ಅವನೊಂದಿಗೆ ಆ ರಾತ್ರಿ ಕಳೆಯಬೇಕು! ಆ ರೀತಿ ಮಾಡುವುದರಿಂದ ಸೌಭಾಗ್ಯ, ಐಶ್ವರ್ಯ ಪ್ರಾಪ್ತಿಯಾಗುವುದೆನ್ನುವ ನಂಬಿಕೆ ಆ ಊರಿನವರಿಗೆ!

ಗಂಡು - ಹೆಣ್ಣಿನ ಸಂಬಂಧದ ಬಗ್ಗೆ ಮಾನಸಿಕ ವಿಶ್ಲೇಷಣೆಯ ಪರೋಕ್ಷ ಹಿನ್ನಲೆಯಲ್ಲಿ ರಂಜನೀಯ, ರಸ - ರಮ್ಯ ಶೈಲಿಯಲ್ಲಿ ಮೂಡಿ ಬಂದ ಕಾದಂಬರಿ:

ಬನ್ನಿ,
ಶೃಂಗಾರಪುರಕ್ಕೆ ಒಂದೇ
ಕಿಲೋ ಮೀಟರಿನ ಹಾದಿ!

ಸ್ನೇಹಸುಮ ಪ್ರಕಾಶನ
ಕವಿತಾಳ: ೫೮೪ ೧೨೦